# ಹಾಲುಮತ ವ್ಯಾಸಂಗ-೨

## ಶಬ್ದಪಾರಮಾರ್ಗಮಶಕ್ಯಂ

ಕರ್ನಾಟಕದ ಆಧುನಿಕ ಚರಿತ್ರೆಯಲ್ಲಿ ಕರ್ನಾಟಕದಲ್ಲಿ ಏಕೀಕರಣ ಒಂದು ಮಹತ್ವಪೂರ್ಣ ಐತಿಹಾಸಿಕ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಯೂ ಮತ್ತೊಂದು ಮಹತ್ವದ ಘಟನೆ. ಕನ್ನಡ-ಕನ್ನಡಿಗ-ಕರ್ನಾಟಕ ಸಂಸ್ಕೃತಿಯ ಕಲ್ಪನೆಯಡಿಯಲ್ಲಿ ಅಸ್ತಿತ್ವಕ್ಕೆ ಬಂದ ಕನ್ನಡ ವಿಶ್ವವಿದ್ಯಾಲಯದ ಹರವು ವಿಸ್ತಾರವಾದದ್ದು. ಈ ಕಾರಣದಿಂದ ಕನ್ನಡ ವಿಶ್ವವಿದ್ಯಾಲಯದ ಆಶಯ ಮತ್ತು ಗುರಿ ಇತರ ವಿಶ್ವವಿದ್ಯಾಲಯಗಳಿಗಿಂತ ಭಿನ್ನ ಹಾಗೂ ಪ್ರಗತಿಪರ. ಕನ್ನಡದ ಸಾಮರ್ಥ್ಯವನ್ನು ಎಚ್ಚರಿಸುವ ಕಾಯಕವನ್ನು ಉದ್ದಕ್ಕೂ ಅದು ನೋಂಪಿಯಿಂದ ಮಾಡಿಕೊಂಡು ಬಂದಿದೆ. ಕರ್ನಾಟಕತ್ವದ 'ವಿಕಾಸ' ಈ ವಿಶ್ವವಿದ್ಯಾಲಯದ ಮಹತ್ತರ ಆಶಯವಾಗಿದೆ.

ಕನ್ನಡ ಅಧ್ಯಯನ ಮೂಲತಃ ಶುದ್ಧ ಜ್ಞಾನದ, ದೇಶ, ಜೀವನ ತತ್ವದ ಪರವಾಗಿರುವುದರ ಜೊತೆಗೆ ಅಧ್ಯಯನವನ್ನು ಒಂದು ವಾಗ್ವಾದದ ಭೂಮಿಕೆ ಎಂದು ನಾವು ಭಾವಿಸಬೇಕಾಗಿದೆ. ಕನ್ನಡ ಬದುಕಿನ ಚಿಂತನೆಯ ಭಾಗವೆಂದೇ ಅದನ್ನು ರೂಪಿಸಿ ವಿವರಿಸಬೇಕಾಗಿದೆ. ಅಂದರೆ: ದೇಸಿ ಬೇರುಗಳ ಗುರುತಿಸುವಿಕೆ ಕನ್ನಡ ಅಧ್ಯಯನದ ಮುಖ್ಯ ಭಿತ್ತಿಯಾಗಬೇಕಾಗಿದೆ. ಕನ್ನಡ ಸಂಸ್ಕೃತಿಯು ಬಹುತ್ವದ ನೆಲೆಗಳನ್ನು ಆಧರಿಸಿ ರೂಪುಗೊಂಡಿದೆ. ಸಮಾಜಮುಖಿ ಚಿಂತನೆಗಳ ವ್ಯಾಪಕ ಅಧ್ಯಯನ ಬದುಕಿನ ಸಂಕೀರ್ಣ ಲಕ್ಷಣಗಳ ಸ್ವರೂಪವನ್ನು ಇದು ಪರಿಚಯಿಸುತ್ತದೆ. ನಾವು ಇದನ್ನು ಎಲ್ಲ ವಲಯಗಳಲ್ಲಿ ಕನ್ನಡದ ಅನುಷ್ಠಾನದ ಮೂಲಕ ಉಳಿಸಿ, ಬೆಳೆಸಬೇಕಾಗಿದೆ. ಆಗ ಕನ್ನಡ ಸಂಸ್ಕೃತಿಯು ವಿಶ್ವಪ್ರಜ್ಞೆಯಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ. 'ಕನ್ನಡದ್ದೇ ಮಾದರಿ'ಯ ಶೋಧ ಇಂದಿನ ಮತ್ತು ಬರುವ ದಿನಗಳ ತೀವ್ರ ಅಗತ್ಯವಾಗಿದೆ.

ಕನ್ನಡ ಸಂಸ್ಕೃತಿಯ ಭಾಗವಾಗಿರುವ ಕನ್ನಡ ಅಧ್ಯಯನವು ಕಾಲದಿಂದ ಕಾಲಕ್ಕೆ ಹೊಸ ತಿಳಿವಳಿಕೆಯನ್ನು ತನ್ನ ತೆಕ್ಕೆಗೆ ಜೋಡಿಸಿಕೊಳ್ಳುತ್ತ ಬಂದಿದೆ. ಹೀಗಾಗಿ ವಿದೇಶಿ ಮತ್ತು ದೇಶಿ ವಿದ್ವಾಂಸರು ತೊಡಗಿಸಿಕೊಂಡ ಈ ವಿದ್ವತ್‌ಕ್ಷೇತ್ರದಲ್ಲಿ ಮುಂದಿನ ವಿದ್ವಾಂಸರು ಕಾಲದಿಂದ ಕಾಲಕ್ಕೆ ಹೊಸಬೆಳೆಯನ್ನು ತೆಗೆಯುತ್ತ ಬಂದಿದ್ದಾರೆ. ಕನ್ನಡ ಅಧ್ಯಯನ ಪಳೆಯುಳಿಕೆಯ ಶಾಸ್ತ್ರವಾಗದೆ, ಬದಲಾಗುತ್ತಿರುವ ಕಾಲಮಾನದಲ್ಲಿ ಎದುರಾಗುತ್ತಿರುವ ಆಹ್ವಾನಕ್ಕೆ ತಕ್ಕಂತೆ ತನ್ನ ಗತಿಯನ್ನು ಬದಲಾಯಿಸಿಕೊಳ್ಳುತ್ತ ಬಂದಿರುವುದು ಗಮನಿಸತಕ್ಕ ಅಂಶ. ಸಾಂಪ್ರದಾಯಿಕ ಚಿಂತನೆಗಳು ಆಧುನಿಕರಣದ ಈ ಕಾಲಘಟ್ಟದಲ್ಲಿ ಸಕಾಲಿಕಗೊಳ್ಳುವುದು ಅನಿವಾರ್ಯವಾಗಿದೆ. ಮಾಹಿತಿ ತಂತ್ರಜ್ಞಾನದ ಮೂಲಕ ಜಗತ್ತಿನ ಜ್ಞಾನಪ್ರವಾಹವೇ ನಮ್ಮ ಅಂಗೈಯೊಳಗೆ ಚುಳುಕಾಗುವ ಈ ಸಂದರ್ಭದಲ್ಲಿ ಕನ್ನಡದ ಚಹರೆ ಮತ್ತು ಕನ್ನಡ ಭಾಷೆಯ ಚಲನಶೀಲತೆಯನ್ನು ಶೋಧಿಸಲು ಭಾಷಾ ಆಧುನೀಕರಣ ಮತ್ತು ಪ್ರಮಾಣೀಕರಣದ ಪ್ರಕ್ರಿಯೆಗಳ ನೆಲೆಯಲ್ಲಿ ಅಧ್ಯಯನದ ಹೊಸ ಸಾಧ್ಯತೆಗಳು ಅನುಲಕ್ಷಿಸಿ, ಭಾಷಾ ನೀತಿ, ಭಾಷಾ ಯೋಜನೆ ರೂಪಿಸುವುದು ಅನಿವಾರ್ಯ ಹಾಗೂ ಅವಶ್ಯವಾಗಿದೆ. ಆಗ ಅಧ್ಯಯನದ ಸ್ವರೂಪ ಹಾಗೂ ಬಳಕೆ ವಿಧಾನದಲ್ಲಿ ಪರಿವರ್ತನೆ ಸಾಧ್ಯವಾಗುತ್ತದೆ.

ನಮ್ಮೆದುರು ನುಗ್ಗಿ ಬರುತ್ತಿರುವ ಜಾಗತೀಕರಣಕ್ಕೆ ಪ್ರತಿರೋಧವಾಗಿ ನಮ್ಮ ದೇಶೀಯ ಜ್ಞಾನಪರಂಪರೆಯನ್ನು ಮರುಶೋಧಿಸಿ ಆ ಮೂಲಕ ಕುಸಿಯುತ್ತಿರುವ ನಮ್ಮ ಬೇರುಗಳನ್ನು ಬಲಗೊಳಿಸಿಕೊಳ್ಳಬೇಕಾಗಿದೆ. ಭಾಷೆ, ಸಾಹಿತ್ಯ, ವ್ಯಾಕರಣ, ಛಂದಸ್ಸು, ಚರಿತ್ರೆ, ಕೃಷಿ, ವೈದ್ಯ, ಪರಿಸರ ಮುಂತಾದ ಅಧ್ಯಯನ ವಿಷಯಗಳನ್ನು ಹೊಸ ಆಲೋಚನೆಯ ನೆಲೆಯಲ್ಲಿ ವಿಶ್ಲೇಷಿಸಬೇಕಾಗಿದೆ. ಆಧುನಿಕ ವಿಜ್ಞಾನ, ತಂತ್ರಜ್ಞಾನವೇ 'ಜ್ಞಾನ' ಎಂದು ರೂಪಿಸಿರುವ ಇಂದಿನ ಆಲೋಚನೆಗೆ ಪ್ರತಿಯಾಗಿ ಈ ಜ್ಞಾನಶಾಖೆಗಳಲ್ಲಿ ಹುದುಗಿರುವ ದೇಶಿ ಪರಂಪರೆಯ ಜ್ಞಾನದ ಹುಡುಕಾಟ ನಡೆಯಬೇಕಾಗಿದೆ. ಅಂತಹ ಪ್ರಯತ್ನಗಳಿಗೆ ಬೇಕಾದ ಮಾರ್ಗದರ್ಶಕ ಸೂತ್ರಗಳ ಹಾಗೂ ಆಕರ ಪರಿಕರಗಳ ನಿರ್ಮಾಣದ ನೆಲೆ ತುಂಬ ಮುಖ್ಯವಾಗಿದೆ. ಕನ್ನಡ ವಿಶ್ವವಿದ್ಯಾಲಯವು ಕಳೆದ ಹದಿನಾರು ವರ್ಷಗಳಿಂದ ಈ ಕೆಲಸಗಳನ್ನು ಹಲವು ಯೋಜನೆಗಳ ಮೂಲಕ ರೂಪಿಸಿಕೊಂಡಿದೆ, ರೂಪಿಸಿಕೊಳ್ಳುತ್ತಿದೆ. ಇದೊಂದು ಚಲನಶೀಲ ಪ್ರಕ್ರಿಯೆಯಾಗಿದೆ. ಸಮಕಾಲೀನ ಭಾಷಿಕ, ಸಾಂಸ್ಕೃತಿಕ ಸಮಸ್ಯೆಗಳಿಗೆ ಮುಖಾಮುಖಿಯಾಗುತ್ತ ಕನ್ನಡ ನಾಡು ನುಡಿಯನ್ನು ಹೊಸದಾಗಿ ಶೋಧಿಸುತ್ತ, ವಿವರಿಸುತ್ತ

ಬಂದಿದೆ. ಅಂದರೆ: ಕನ್ನಡ ಅರಿವಿನ ವಿಕೇಂದ್ರೀಕರಣವೇ ವರ್ತಮಾನದ ಹೊಸ ಬೆಳವಣಿಗೆ. ಇದು ಕನ್ನಡ ವಿಶ್ವವಿದ್ಯಾಲಯದ ಜೀವಧಾತುವಾಗಿದೆ.

ಕನ್ನಡ ವಿಶ್ವವಿದ್ಯಾಲಯದ ಹಾಲುಮತ ಅಧ್ಯಯನ ಪೀಠವು ೧೫, ೧೬ ಜುಲೈ ೨೦೦೯ ರಂದು ಶ್ರೀ ಕನಕ ನೌಕರರ ಕ್ಷೇಮಾಭಿವೃದ್ಧಿ ಸಂಘದ ಸಹಯೋಗದಲ್ಲಿ ಏರ್ಪಡಿಸಿದ ಎರಡನೆಯ ಹಾಲುಮತ ಸಾಂಸ್ಕೃತಿಕ ಸಮ್ಮೇಳನದಲ್ಲಿ ಮಂಡಿತವಾದ ಸಂಪ್ರಬಂಧಗಳ ಸಂಕಲನ **ಹಾಲುಮತ ವ್ಯಾಸಂಗ-೨**.

ಪ್ರಸ್ತುತ ಹದಿನೇಳು ಒಳಪಂಗಡಗಳಲ್ಲಿ ಹಂಚಿಹೋದ ಕುರುಬ ಸಮುದಾಯಗಳ ತೌಲನಿಕ ಅಧ್ಯಯನದ ಮೂಲಕ ಮೂಲ ಕುರುಬ ಸಮುದಾಯದ ಸಾಂಸ್ಕೃತಿಕ ಬದುಕಿನ ನೆಲೆಗಳನ್ನು ಕಟ್ಟಿಕೊಡುವುದು ಇಂದಿನ ಅವಶ್ಯಕತೆಯಾಗಿದೆ. ಪ್ರತ್ಯೇಕವಾಗಿ ಒಳಪಂಗಡಗಳ ಸಾಂಸ್ಕೃತಿಕ ವಿವರಗಳನ್ನು ನೀಡುವುದರ ಮೂಲಕ ಪ್ರಸ್ತುತ ಸ್ಥಿತಿಗತಿಗಳನ್ನು ಗುರುತಿಸಲಾಗಿದೆ. ಜೊತೆಜೊತೆಗೆ ಅವುಗಳ ಸಾಂಸ್ಕೃತಿಕ ಬದುಕಿನ ತೌಲನಿಕ ಅಧ್ಯಯನದ ಮುಖಾಂತರ ಮೂಲ ಸಮುದಾಯದಿಂದ ಟಿಸಿಲೊಡೆದ ಇಂದಿನ ಒಳಪಂಗಡಗಳು ಬೇರೆಯಾದ ಕಾಲ, ಸಂದರ್ಭ, ವ್ಯತ್ಯಯ ಇತ್ಯಾದಿಗಳ ಮುಖಾಂತರ ಐತಿಹಾಸಿಕ ವಿವರಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಸಾಧ್ಯತೆಗಳನ್ನು ಕಂಡುಕೊಳ್ಳುವ ಅಗತ್ಯತೆಯನ್ನು ಮನಗಂಡು ಈ ಸಮ್ಮೇಳನವನ್ನು ಒಳ ಪಂಗಡಗಳ ಅಧ್ಯಯನಕ್ಕೆ ಮೀಸಲಿರಿಸಿದೆ. ಅನೇಕ ವಿದ್ವಾಂಸರು ಒಳಪಂಗಡಗಳ ವೃತ್ತಿ, ಆಚರಣೆ, ಸಾಹಿತ್ಯ, ಕೃಷಿ, ಕಲೆ ಇತ್ಯಾದಿಗಳನ್ನು ಕುರಿತಂತೆ ಬೆಳಕು ಚೆಲ್ಲುವ ಪ್ರಯತ್ನ ಮಾಡಿದ್ದಾರೆ. ಇದೇ ಅಂತಿಮ ಎಂದೇನೂ ಅಲ್ಲ. ಈ ದಿಸೆಯಲ್ಲಿ ಇದೊಂದು ತೋರುಗಲ್ಲು ಎಂದು ಭಾವಿಸಿ ಮುಂದಿನ ಅಧ್ಯಯನಗಳ ದಿಕ್ಕನ್ನು ಕಂಡುಕೊಳ್ಳಬಹುದಾಗಿದೆ.

ಸಮ್ಮೇಳನಾಧ್ಯಕ್ಷರಾದ ಶ್ರೀ ಬ.ಪ. ನಾಯ್ಕರ ಅವರ ಸಮಗ್ರ ಸಾಹಿತ್ಯವನ್ನು ಲೇಖನವೊಂದರಲ್ಲಿ ಪರಿಚಯಿಸಲಾಗಿದೆ. ಕೊನೆಯಲ್ಲಿ ಜಾನಪದ ತಜ್ಞರಾದ ಡಾ. ತೀ.ನಂ. ಶಂಕರನಾರಾಯಣ ಅವರ ಸಮಾರೋಪ ಭಾಷಣದಲ್ಲಿ ಮಂಡಿಸಿದ ವಿವರಗಳು ಸಂಶೋಧಕರಿಗೆ ಕುತೂಹಲವನ್ನು ಮೂಡಿಸುತ್ತವೆ. ಹೀಗೆ ಹಾಲುಮತ ಸಂಸ್ಕೃತಿ ಸಮುದಾಯ ಉಪಪಂಗಡಗಳ ಕುರಿತು ಮೊದಲ ಬಾರಿಗೆ ಒಂದೆಡೆ ಚರ್ಚಿಸಿರುವುದು ಈ ಸಂಪುಟದ ವಿಶೇಷತೆಯಾಗಿದೆ.

ಹಾಲುಮತ ಸಂಸ್ಕೃತಿ ಸಮ್ಮೇಳನವನ್ನು ಅತ್ಯಂತ ವ್ಯವಸ್ಥಿತವಾಗಿ ಆಯೋಜಿಸುವುದರ ಜೊತೆಗೆ ಅಲ್ಲಿ ಮಂಡಿತವಾದ ಸಂಪ್ರಬಂಧಗಳನ್ನು ಕ್ರಮಬದ್ಧವಾಗಿ ಜೋಡಿಸಿ, ಸಂಯೋಜಿಸಿ ಹಾಲುಮತ ವ್ಯಾಸಂಗದ ಎರಡನೆಯ ಸಂಪುಟವನ್ನು ಸಿದ್ಧಪಡಿಸಿದ ಹಾಲುಮತ ಅಧ್ಯಯನ ಪೀಠದ ಸಂಚಾಲಕರಾದ ಡಾ. ಎಫ್. ಟಿ. ಹಳ್ಳಿಕೇರಿ ಅವರಿಗೆ ಅಭಿನಂದನೆಗಳು.

ಸಮಾಜಮುಖಿ ಲೇಖನಗಳನ್ನೊಳಗೊಂಡ ಈ ಸಂಪುಟವನ್ನು ಪ್ರಕಟಿಸಲು ಶ್ರಮಿಸಿದ ಪ್ರಸಾರಾಂಗದ ನಿರ್ದೇಶಕರಾದ ಡಾ. ಎ. ಮೋಹನ ಕುಂಟಾರ್ ಮತ್ತು ಸಹಾಯಕ ನಿರ್ದೇಶಕರಾದ ಶ್ರೀ ಬಿ. ಸುಜ್ಞಾನಮೂರ್ತಿ ಅವರಿಗೆ ಅಭಾರಿಯಾಗಿದ್ದೇನೆ.

**ಡಾ. ಎ. ಮುರಿಗೆಪ್ಪ**

ಕುಲಪತಿ

# ನಮ್ಮ ಲೇಖಕರು

**ಶ್ರೀ ಬ.ಪ.ನಾಯ್ಕರ,**

ನಿವೃತ್ತ ಶಿಕ್ಷಕರು, ನಂ. ೮, ಶಕ್ತಿನಗರ, ಧಾರವಾಡ-೫೮೦ ೦೦೪.

**ಡಾ. ಕೇಶವನ್ ಪ್ರಸಾದ್,**

ಪ್ರಾಧ್ಯಾಪಕರು, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ ೫೮೩ ೨೭೬ ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

**ಡಾ. ಯರಿಯಪ್ಪ ಡಿ.**

ಅಧ್ಯಾಪಕರು, ಸರಕಾರಿ ಪದವಿಪೂರ್ವ ಕಾಲೇಜು, ಸಿರಗುಪ್ಪ ೫೮೩ ೧೨೧ ಬಳ್ಳಾರಿ ಜಿಲ್ಲೆ.

**ಶ್ರೀ ಎ. ಬಿ. ಬಾಳಪ್ಪ,**

ಅಧ್ಯಾಪಕರು, ಕನ್ನಡ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು ಶಿರಾ, ತುಮಕೂರು ಜಿಲ್ಲೆ.

**ಡಾ. ಸೊಬಟಿ ಚಂದ್ರಪ್ಪ,**

ಸಂಶೋಧನ ಸಹಾಯಕರು, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ ೫೮೩ ೨೭೬ ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

**ಡಾ. ಕೆ. ರವೀಂದ್ರನಾಥ,**

ಸಹಪ್ರಾಧ್ಯಾಪಕರು, ಹಸ್ತಪ್ರತಿಶಾಸ್ತ್ರ ವಿಬಾಗ, ಕನ್ನಡ ವಿಶ್ವವಿದ್ಯಾಲಯ ವಿದ್ಯಾರಣ್ಯ ೫೮೩ ೨೭೬ ಹೊಸಪೇಟೆ, ಬಳ್ಳಾರಿ ಜಿಲ್ಲೆ.

**ಡಾ. ರಾಜಶೇಖರಪ್ಪ,**

ನಿವೃತ್ತ ಪ್ರಾಚಾರ್ಯರು, ೨ನೆಯ ಅಡ್ಡರಸ್ತೆ, ಜೆ.ಸಿ.ಆರ್. ಬಡಾವಣೆ, ಚಿತ್ರದುರ್ಗ ೫೭೭ ೫೦೧.

**ಡಾ. ಎಫ್. ಟಿ. ಹಳ್ಳಿಕೇರಿ,**

ಪ್ರಾಧ್ಯಾಪಕರು, ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ ವಿದ್ಯಾರಣ್ಯ ೫೮೩ ೨೭೬ ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

**ಡಾ. ಒಡೆಯರ ಡಿ. ಹೆಗ್ಗಡೆ,**

ಅರ್ಥಶಾಸ್ತ್ರ ಪ್ರಾಧ್ಯಾಪಕರು, ನಂ. ೧೦೨೩, ಶ್ರೀ ಅನ್ನಪೂರ್ಣೇಶ್ವರಿ ನಿಲಯ, ೫ನೆಯ ಮೇನ್, ರಾಮಕೃಷ್ಣ ನಗರ, ಮೈಸೂರು-೫೭೦ ೦೨೨.

**ಡಾ. ಕೆ. ಎಂ. ಮೇತ್ರಿ,**

ಪ್ರಾಧ್ಯಾಪಕರು, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ವಿದ್ಯಾರಣ್ಯ ೫೮೩ ೨೭೬ ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

**ಡಾ. ಶ್ರೀರಾಮ ಇಟ್ಟಣ್ಣವರ,**

ನಿವೃತ್ತ ಪ್ರಾಧ್ಯಾಪಕರು, ಪಾರಿಜಾತ, ಗಾಂಧಿನಗರ, ಬೀಳಗಿ, ಬಾಗಲಕೋಟ ಜಿಲ್ಲೆ.

**ಡಾ. ವೀರಾಸಾಬಿಹಳ್ಳಿ ಶಿವಣ್ಣ,**

ನಂ. ೨೭, ಮೊದಲನೆಯ ಮಹಡಿ, ೫ನೆಯ ಕ್ರಾಸ್, ಶಾಂತಿವನ, ಸಹಕಾರ ನವಗರ ಅಂಚೆ ಬೆಂಗಳುರು-೫೬೦ ೦೯೨.

**ಡಾ. ಸಿ. ಶಿವಲಿಂಗಪ್ಪ,**

ಕನ್ನಡ ಸಹಪ್ರಾಧ್ಯಾಪಕರು, ಎಚ್. ಪಿ.ಸಿ.ಸಿ. ಸರಕಾರಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ.

**ಶ್ರೀ ಕುಂಬಾ ಸದಾಶಿವಪ್ಪ,**

ಲೋಕೋಪಯೋಗಿ ಕಛೇರಿ ಹಿಂಭಾಗ, ಗೋಸಾಯಿಗುಡ್ಡ, ಹೊಸಪೇಟೆ ರಸ್ತೆ, ಪರಪನಹಳ್ಳಿ - ೫೮೩ ೧೩೧, ದಾವಣಗೆರೆ ಜಿಲ್ಲೆ.

**ಡಾ. ಎನ್. ಎಂ. ಅಂಬಲಿಯವರ,**

ಕನ್ನಡ ಸಹಪ್ರಾಧ್ಯಾಪಕರು, ಕನಕದಾಸ ಶಿಕ್ಷಣ ಸಮಿತಿಯ ಪದವಿ ಕಾಲೇಜು, ಗದಗ ೫೮೨ ೧೦೧.

**ಪ್ರೊ. ಬಿ. ಬಿ. ಪಾಟೀಲ,**
ನಿವೃತ್ತ ಪ್ರಾಚಾರ್ಯರು, ೧೯೨೮/೧೧, ೧೧ನೆಯ ಕ್ರಾಸ್, ಸಿದ್ಧವೀರಪ್ಪ ಬಡಾವಣೆ, ಶಾಮನೂರು ರಸ್ತೆ, ದಾವಣಗೆರೆ - ೪.
**ಪ್ರೊ. ಚನ್ನಪ್ಪ ಕಟ್ಟಿ,**
ಪ್ರಾಧ್ಯಾಪಕರು, ಸಂಚೇತಕ, ಕಲ್ಯಾಣ ನಗರ, ಸಿಂಧಗಿ, ವಿಜಾಪುರ ಜಿಲ್ಲೆ.
**ಡಾ. ಎಸ್. ಎಫ್. ಜಕಬಾಳ,**
ಕನ್ನಡ ಪ್ರಾಧ್ಯಾಪಕರು, ಕನಕದಾಸ ಶಿಕ್ಷಣ ಸಮಿತಿಯ ಪದವಿ ಕಾಲೇಜು, ಗದಗ ೫೮೨ ೧೦೧.
**ಪ್ರೊ. ಎಂ. ಶಿವಲಿಂಗಪ್ಪ,**
ಇತಿಹಾಸ ಪ್ರಾಧ್ಯಾಪಕರು, ಎಚ್.ಪಿ.ಸಿ.ಸಿ. ಸರಕಾರಿ ಕನ್ನಡ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ.
**ಡಾ. ಕರಿಯಪ್ಪ ಮಾಳಗಿ,**
ಕನ್ನಡ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಲಾ ಕಾಲೇಜು, ಸ್ನಾತಕೋತ್ತರ ಕೇಂದ್ರ ಚಿತ್ರದುರ್ಗ ೫೭೭. ೫೦೧.
**ಶ್ರೀ ಎಲ್. ರುದ್ರಮುನಿ,**
ಶಿಕ್ಷಕರು, ಬನಶಂಕರಿ ನಿಲಯ, ಕೆ. ಹೆಚ್.ಬಿ. ಕಾಲೋನಿ, ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ.
**ಪ್ರೊ. ಚನ್ನಕೇಶವ,**
ಅರ್ಥಶಾಸ್ತ್ರ ಪ್ರಾಧ್ಯಾಪಕರು, ಎಚ್.ಪಿ.ಸಿ.ಸಿ. ಸರಕಾರಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ.
**ಡಾ.ಬಿ. ಜಿ. ಬಿರಾದಾರ,**
ಕನ್ನಡ ಪ್ರಾಧ್ಯಾಪಕ, ಗುಡ್‌ನ್ಯೂಸ್ ಪದವಿ ಕಾಲೇಜು, ಕಲಘಟಗಿ, ಧಾರವಾಡ ಜಿಲ್ಲೆ.
**ಡಾ. ತೀ. ನಂ. ಶಂಕರನಾರಾಯಣ,**
ನಿವೃತ್ತ ಪ್ರಾಧ್ಯಾಪಕರು, ಪ್ರತಿಭಾ, ೧ನೆಯ ಕ್ರಾಸ್, ಎ.ಆರ್.ಬಿ. ಕಾಲೋನಿ, ಅಶೋಕ ನಗರ, ಶಿವಮೊಗ್ಗ ೫೭೭ ೨೦೧.

## ಸಂಚಾಲಕರ ಮಾತು

ಭಾರತದ ಪ್ರಮುಖ ಜನಸಮುದಾಯಗಳಲ್ಲಿ ಹಾಲುಮತ ಸಮುದಾಯವೂ ಒಂದು. ಚಾರಿತ್ರಿಕ ಮತ್ತು ಸಾಂಸ್ಕೃತಿಕವಾಗಿ ಬಹುದೊಡ್ಡ ಪರಂಪರೆಯನ್ನು ಹೊಂದಿದ ಇವರನ್ನು ಸಾಮಾನ್ಯವಾಗಿ ಕುರುಬರು ಎಂದು ಕರೆಯಲಾಗುತ್ತದೆ. ದೇಶದ ವಿವಿಧ ರಾಜ್ಯಗಳಲ್ಲಿ ಇವರನ್ನು ದನಗಾರರು, ಪಾಲರು, ಗಡಾರಿಯಾ, ಚಂದೇಲರು, ಗೊಲ್ಲರು, ಕುರುಮನ್, ಕುರುಂಬರು, ಯಾದವರು, ಗಡೇರಿ, ರೇವಡಿ, ಬಘೇಲರು ಎಂಬ ಹೆಸರಿನಿಂದ ಗುರುತಿಸಲಾಗುತ್ತಿದೆ. ಮೂಲ ಬುಡಕಟ್ಟು ಸಂಸ್ಕೃತಿಯವರಾದ ಕುರುಬರು ಪ್ರಾಚೀನ ಕಾಲದಿಂದಲೂ ಪಶುಪಾಲನೆ, ಕುರಿ ಸಾಕಣೆ, ಕಂಬಳಿ ತಯಾರಿಕೆ ಹಾಗೂ ಕೃಷಿಯನ್ನು ಪ್ರಧಾನ ಉದ್ಯೋಗವನ್ನಾಗಿ ಮಾಡಿಕೊಂಡು ಬಂದಿದ್ದಾರೆ. ಜಾಗತೀಕರಣ ಉದಾರೀಕರಣಗಳಂಥ ಇಂದಿನ ಸಂದರ್ಭಗಳಲ್ಲಿಯೂ ತಮ್ಮ ಸಂಸ್ಕೃತಿಯ ಮೂಲ ಸೊಗಡನ್ನು, ಪರಂಪರಾಗತ ಜೀವನ ಪದ್ಧತಿಯನ್ನು ಯಥಾವತ್ತಾಗಿ ಉಳಿಸಿಕೊಂಡು ಬಂದವರಲ್ಲಿ ಕುರುಬರು ಪ್ರಮುಖರೆನಿಸುತ್ತಾರೆ. ಇಂದಿಗೂ ನಡೆಯುವ ಹಬ್ಬಹರಿದಿನ ಆಚರಣೆ ಉತ್ಸವ ನಂಬಿಕೆ ಸಂಪ್ರದಾಯಗಳು ಇದಕ್ಕೆ ಸಾಕ್ಷಿಯಾಗಿವೆ. ಕುರುಬರೇ ಈ ನೆಲದ ಮೂಲನಿವಾಸಿಗಳೆಂದು ಓಪರ್ಟ, ಥರ್ಸ್ಟನ್, ಎಂಥೋವನ್, ಸೊಂಥೈಮರ್, ಶಂಬಾ ಜೋಶಿ, ಚಿಂತಾಮಣಿ ಢೇರೆಮ ವಿ.ಆರ್. ಹನುಮಂತಯ್ಯ, ಶಾಮಸಿಂಗ್ ಶಶಿ, ಎಂ.ಎಂ. ಕಲಬುರ್ಗಿ ಅವರಂಥ ಅನೇಕ ವಿದ್ವಾಂಸರ ಅಭಿಪ್ರಾಯವಾಗಿದೆ.

ಕೊಲ್ಲಿಪಾಕಿಯ ರೇವಣಸಿದ್ಧೇಶ್ವರ, ಸೊನ್ನಲಾಪುರದ ಸಿದ್ಧರಾಮೇಶ್ವರ, ಅರಕೇರಿಯ ಅಮೋಘಸಿದ್ಧೇಶ್ವರ, ಸರೂರಿನ ಶಾಂತಮುತ್ತಯ್ಯ, ತೂಗುಡ್ಡದ ಸಿದ್ಧಮಂಕರು ಹಾಲುಮತ ಸಮುದಾಯದ ಪರಮ ಗುರುಗಳಾದರೆ, ಬೀರಪ್ಪ, ಮಾಳಪ್ಪ, ಮೈಲಾಪುರ, ಇಟ್ಟಪ್ಪ, ಬುಳ್ಳಪ್ಪ,

ಹುಲ್ಲಪ್ಪ, ಚಂದಪ್ಪ ಮುಂತಾದವರು ಸಾಂಸ್ಕೃತಿಕ ವೀರರಾಗಿ ಜನಮಾನಸದಲ್ಲಿ ನೆಲೆ ನಿಂತಿದ್ದಾರೆ. ವಿಜಯನಗರ ಸ್ಥಾಪಕರಾದ ಹಕ್ಕಬುಕ್ಕರು, ಇಂದೋರ ಅರಸುಮನೆತನದ ಅಹಲ್ಯಾಬಾಯಿ ಹೋಳ್ಕರ್, ಹಂಡೆ ಅರಸುಮನೆತನದ ಬಾಲದ ಹನುಮಪ್ಪನಾಯಕ, ಸ್ವಾತಂತ್ರ ಹೋರಾಟದಲ್ಲಿ ಪ್ರಾಣವನ್ನೇ ಪಣಕ್ಕಿಟ್ಟ ವೀರ ಸಂಗೊಳ್ಳಿ ರಾಯಣ್ಣನವರಂಥ ಮಹಾನ್ ಧೀರರು ಶೂರರು ಈ ಸಮುದಾಯಕ್ಕೆ ಸೇರಿದವರು. ಭಾರತದಾದ್ಯಂಥ ಇಂಥ ಅನೇಕ ಮಹಾನುಭಾವರ ಹೆಸರಿನಲ್ಲಿ ಮಠಮಂದಿರಗಳಿವೆ. ನಿರ್ದಿಷ್ಠ ಅವಧಿಯಲ್ಲಿ ಜಾತ್ರೆ ಉತ್ಸವ ಆಚರಣೆಗಳು ಇಲ್ಲಿ ನೆರವೇರುತ್ತದೆ. ಸರೂರು, ಅರಕೇರಿ, ಅಲಕನೂರು, ಕೋಣಗನೂರು, ಮೈಲಾರ, ಬಂಕಾಪುರ, ಹುಲಜಂತಿ, ಪಟ್ಟಣ ಕಡೋಲಿ, ಶಿರಡೋಣ, ಗುಡೂರು, ದೇವರಗುಡ್ಡ ಮುಂತಾದ ಸ್ಥಳಗಳು ಕುರುಬರ ಧಾರ್ಮಿಕ ಮತ್ತು ಸಾಂಸ್ಕೃತಿಕ ಬಹುಮುಖ್ಯ ನೆಲೆಗಳಾಗಿವೆ. ಇಂಥ ವಿಶಿಷ್ಠ ಪರಂಪರೆಯನ್ನು ಹೊಂದಿದ್ದ ಈ ಸಮುದಾಯದ ಸಾಹಿತ್ಯ ಸಮಾಜ ಸಂಸ್ಕೃತಿ ಇತಿಹಾಸ ಕಲೆ ಜನಪದ ಪುರಾತತ್ವ ಮೊದಲಾದವುಗಳ ಸಮಗ್ರ ಸರ್ವೇಕ್ಷಣೆ, ಸಂಗ್ರಹ, ಸಂಶೋಧನೆ, ಅಧ್ಯಯನ ಮತ್ತು ಪ್ರಕಟಣೆಯ ಉದ್ದೇಶದಿಂದ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಹಾಲುಮತ ಅಧ್ಯಯನ ಪೀಠವು ೨೦೦೭ ರಲ್ಲಿ ಸ್ಥಾಪನೆಗೊಂಡಿದೆ.

**ಪೀಠದ ಉದ್ದೇಶಗಳು**

ಹಾಲುಮತ ಅಧ್ಯಯನ ಪೀಠವು ಪ್ರಧಾನವಾಗಿ ಸಂಶೋಧನೆ ದಾಖಲೀಕರಣ ವಿಶ್ಲೇಷಣೆ ಹಾಗೂ ಪ್ರಕಟಣೆ ಈ ನಾಲ್ಕು ಹಂತದಲ್ಲಿ ಕಾಲಬದ್ಧ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತದೆ.

**೧. ಸಂಶೋಧನೆ**

೧. ಹಾಲುಮತ ಸಾಹಿತ್ಯ ಸಂಸ್ಕೃತಿಗೆ ಸಂಬಂಧಿಸಿದಂತೆ ಶಾಸನ, ಕೈಫಿಯತ್ತು, ನಿರೂಪ, ಸನ್ನದುಗಳಂಥ ದಾಖಲು ಸಾಹಿತ್ಯ, ಕಾವ್ಯ ಪುರಾಣಗಳಂಥ ಶಿಷ್ಠ ಸಾಹಿತ್ಯ ಹಾಗೂ ಕಥೆ ಹಾಡು ನಂಬಿಕೆಗಳಂಥ ಮೌಖಿಕ ಸಾಹಿತ್ಯಗಳಲ್ಲಿ ಅಧಿಕ ಪ್ರಮಾಣದ ಆಕರ ಸಾಮಗ್ರಿಗಳಿವೆ. ಉದಾಹರಣೆಗೆ ತಗರ ಪವಾಡ, ಸಿದ್ಧಮಂಕ ಚರಿತೆ, ರೇವಣಸಿದ್ದೇಶ್ವರ ಕಾವ್ಯ, ಹಾಲುಮತ ಪುರಾಣ, ಹಾಲುಮತೊತ್ತೇಜಕ ಪುರಾಣ, ಗೊಲ್ಲಾಳಯ್ಯನ ಪುರಾಣ, ಅಮೋಘಸಿದ್ದೇಶ್ವರ ಪುರಾಣ ಹೀಗೆ ಲಿಖಿತ ಪರಂಪರೆಯಲ್ಲಿ ಹತ್ತು ಹಲವು ಕಾವ್ಯ ಪುರಾಣಗಳು ಲಭ್ಯವಿವೆ. ಅವೆಲ್ಲವುಗಳನ್ನು ತುಲನಾತ್ಮಕವಾಗಿ ಅಧ್ಯಯನಕ್ಕೊಳಪಡಿಸುವುದು. ಕುರುಬರ ಉದ್ಯೋಗ, ಗುರುಪರಂಪರೆ ಇತ್ಯಾದಿ ವಿವರಗಳನ್ನು ಶಾಸನ ಸನ್ನದು ಬಖೈರುಗಳು ದಾಖಲಿಸಿವೆ. ಅಂಥ ಎಲ್ಲ ಶಾಸನಗಳಾದಿಯಾಗಿ ಹಾಲುಮತ ದಾಖಲು ಸಾಹಿತ್ಯವನ್ನು ಒಂದೆಡೆ ಸಂಗ್ರಹಿಸಿ ವಿಶ್ಲೇಷಣೆಗೊಳಪಡಿಸುವುದು.

೨. ಮೌಖಿಕ ಪರಂಪರೆಯಲ್ಲಿ ಈ ಸಮುದಾಯದ ಸಂಸ್ಕೃತಿ ಕಲೆ ಕುರಿತು ಹಾಡು ಕಥೆಗಳಿವೆ. ಅವುಗಳನ್ನು ಆಡಿಯೊ ವಿಡಿಯೊ ಮೂಲಕ ದಾಖಲಿಸಿ ಪ್ರಕಟಿಸುವುದು. ಕುರುಬರ ವಿಶಿಷ್ಠ ಕಲೆ ಡೊಳ್ಳು. ಈ ಕಲೆಯ ಪ್ರದರ್ಶನ ಸಂದರ್ಭದಲ್ಲಿ ಹಾಡುವ ಹಾಡುಗಳಿಗೆ ಡೊಳ್ಳಿನ ಹಾಡುಗಳೆಂದು ಕರೆಯುವರು. ಹೀಗೆಯೇ ವಾರ್ಣಗಳು, ಚೌಡಿಕೆ ಪದಗಳು, ಹರಕೆಯ ಪದಗಳು, ಕರಡಿ ಮಜಲಿನ ಹಾಡುಗಳು ಮೌಖಿಕ ರೂಪದಲ್ಲಿವೆ. ಡೊಳ್ಳಿನ ಹಾಡುಗಳನ್ನೇ ಗಮನಿಸಿ ಹೇಳುವುದಾದರೆ ಕರ್ನಾಟಕದಾದ್ಯಂತ ಸರ್ವೇಕ್ಷಣೆ ನಡೆಸಿದರೆ ಅಂದಾಜು ಹತ್ತು ಸಾವಿರ ಪುಟಗಳಷ್ಟು ಹಾಡುಗಳು ಲಭ್ಯವಾಗಬಹುದು. ಅವೆಲ್ಲವುಗಳನ್ನು ಸಂಗ್ರಹಿಸಿ ಸಂಪುಟರೂಪದಲ್ಲಿ ಪ್ರಕಟಿಸಿ ಪ್ರಸಾರಗೊಳಿಸುವುದು.

೩. ಕುರುಬರ ಆರಾಧ್ಯ ದೈವಗಳಾದ ರೇವಣಸಿದ್ದ, ಶಾಂತಮುತ್ತಯ್ಯ, ಸಿದ್ಧರಾಮ, ಮರುಳಸಿದ್ಧ, ಅಮೋಘಸಿದ್ದ, ಬೀರಲಿಂಗ, ಮೈಲಾರಲಿಂಗ, ಮಾಳಿಂಗರಾಯ, ಇಟ್ಟಪ್ಪ ಮುಂತಾದವರ ಹೆಸರಿನಲ್ಲಿ ನಾಡಿನ ಅನೇಕ ಗ್ರಾಮಗಳಲ್ಲಿ ದೇವಾಲಯ, ಮಠ ಮಂಡಿರ, ಗದ್ದುಗೆ ಹಾಗೂ ಶಿಲ್ಪಗಳಿವೆ. ಕರ್ನಾಟಕದಲ್ಲಿಯೇ ಅಂದಾಜು ಒಂದು ಸಾವಿರದಷ್ಟು ಮಠ ಮಂದಿರಗಳಿವೆ. ವ್ಯಾಪಕ ಕ್ಷೇತ್ರಕಾರ್ಯದ ಮೂಲಕ ಸರ್ವೇಕ್ಷಣೆ ಕೈಕೊಂಡು ಅವುಗಳ ಸ್ವರೂಪದ ಬಗ್ಗೆ ಸಂಶೋಧನೆ ನಡೆಸುವುದು.

೪. ಹಬ್ಬ-ಹರಿದಿನ-ಉತ್ಸವ-ಜಾತ್ರೆಗಳಲ್ಲಿ ಕೆಲವು ವಿಶಿಷ್ಠ ಆಚರಣೆ ಮತ್ತು ಸಂಪ್ರದಾಯಗಳು ಜರುಗುತ್ತವೆ. ಅರಕೇರಿ ಅಮೋಘಸಿದ್ಧನ ಜಾತ್ರೆಗೆ ನೂರಾರು ಪಲ್ಲಕ್ಕಿಗಳು ಆಗಮಿಸುತ್ತವೆ. ಈ ಪಲ್ಲಕ್ಕಿಗಳನ್ನು ನೋಡಿಯೇ ಆನಂದಿಸಬೇಕು. ರೇವಣಸಿದ್ದೇಶ್ವರ ಮಠಗಳಲ್ಲಿ

ಕಂಥಾಧಾರಣ ಉತ್ಸವ, ಬೀರದೇವರ ತೋಪು ಜಾತ್ರಗಳು ೧೨ ವರ್ಷಕ್ಕೊಮ್ಮೆ ನಡೆಸಲಾಗುತ್ತದೆ. ಈ ಎಲ್ಲ ಉತ್ಸವ ಜಾತ್ರೆಯ ಆಚರಣೆಗಳನ್ನು ದಾಖಲಿಸುವುದು.

೫. ನಾಡು-ನುಡಿ ಸಮಾಜಕ್ಕಾಗಿ ಕುರುಬ ಸಮುದಾಯದ ಅನೇಕ ಗಣ್ಯ ಮಾನ್ಯರು ಮಹನೀಯರು ಧಾರ್ಮಿಕ ಪುಣ್ಯ ಪುರುಷರು ದುಡಿದಿದ್ದಾರೆ. ಕಣಗಿನಹಾಳದ ಸಿದ್ದನಗೌಡ ಸಣ್ಣ ರಾಮನಗೌಡ ಪಾಟೀಲ ಅವರು ಇಡೀ ಏಶಿಯಾ ಖಂಡದಲ್ಲಿಯೇ ಪ್ರಪ್ರಥಮ ಸಹಕಾರ ಸಂಘವನ್ನು ಸ್ಥಾಪನೆ ಮಾಡುವುದರ ಮೂಲಕ ಸಹಕಾರ ಚಳುವಳಿಯ ಹರಿಕಾರರಾಗಿದ್ದಾರೆ. ಕೃಷಿ ತಜ್ಞ ಹೊಸಪೇಟೆಯ ಡಾ.ಆರ್. ನಾಗನಗೌಡ ಕನ್ನಡ ನಾಡುನುಡಿಗಾಗಿ ಅವಿರತ ಶ್ರಮಿಸಿದವರು. ಈ ಸಮುದಾಯದ ಸಂಗೊಳ್ಳಿ ರಾಯಣ್ಣ, ಕರಿಯಪ್ಪ ಸಂಗೂರ, ಕರಿಯಪ್ಪ ಹುಚ್ಚಣ್ಣವರ, ನಿಂಗಪ್ಪ ಕೂರಗುಂದ, ಗೋಣೆಪ್ಪ ಕಮತ ಇನ್ನೂ ಅನೇಕ ಮಹನೀಯರು ಭಾರತ ಸ್ವಾತಂತ್ರಕ್ಕಾಗಿ ನಡೆದ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ತಮ್ಮದೇ ಆದ ಸೇವೆಯನ್ನು ಸಲ್ಲಿಸಿದ್ದಾರೆ. ಹೀಗೆ ಸಮಾಜ ಸಂಸ್ಕೃತಿ ಸಾಹಿತ್ಯ ರಾಜಕೀಯ ಮುಂತಾದ ಕ್ಷೇತ್ರದಲ್ಲಿ ಸಾಧನೆಗೈದವರ ಜೀವನ ಚರಿತ್ರೆಯನ್ನು ಬರೆಸುವುದು.

೬. ಹಾಲುಮತ ಸಂಸ್ಕೃತಿಗೆ ಸಂಬಂಧಿಸಿದಂತೆ ವಿಶ್ವಕೋಶ, ಸಾಂಸ್ಕೃತಿಕ ಪದಕೋಶಗಳನ್ನು ಸಿದ್ದಪಡಿಸಿ ಪ್ರಕಟಿಸುವುದು. ಪ್ರಾಚೀನ ಕಾಲದಿಂದಲೂ ಕುರುಬರಿಗೆ ಸಂಬಂಧಿಸಿದ ಕೆಲವು ಪಾರಿಭಾಷಿಕ ಪದಗಳು ಜನರ ಬಾಯಿಂದ ಬಾಯಿಗೆ ಇಂದಿಗೂ ಬಳಕೆಗೊಳ್ಳುತ್ತ ಬಂದಿವೆ. ಉದಾಹರಣೆಗೆ ಕರಿಯ ಕಂತೆ, ಕಟ್ಟೆಮನೆ, ಕೋಲ್ಕಾರ, ಭಂಡಾರಿ, ಹರಿವಾಣದವರು, ಕಾಲಿಲ್ಲದ ಐನೋರು, ಒಡೆಯರು. ಇಂಥ ನೂರಾರು ಪದಗಳನ್ನು ಸಂಗ್ರಹಿಸ ಪದಕೋಶಗಳನ್ನು ಪ್ರಕಟಿಸುವುದು.

೭. ಸಾಹಿತ್ಯ ಇತಿಹಾಸ ಕಲೆ ಧರ್ಮ ಸಮಾಜ ಶಿಲ್ಪ ಇತ್ಯಾದಿ ವಿಷಯಾನುಸಾರ ವರ್ಗೀಕರಿಸಿ ಹಾಲುಮತ ವಿಶ್ವಕೋಶಗಳನ್ನು ಸಂಪುಟಗಳ ರೂಪದಲ್ಲಿ ಪ್ರಕಟಿಸುವುದು.

೮. ಹಾಲುಮತ ಸಂಸ್ಕೃತಿ ಸಾಹಿತ್ಯ ಕಲೆ ಸಮುದಾಯ ಕುರಿತು ನಾಡಿನ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಸಮ್ಮೇಳನ, ವಿಚಾರ ಸಂಕಿರಣ, ತರಬೇತಿ ಶಿಬಿರ ಹಾಗೂ ವಿಶೇಷ ಉಪನ್ಯಾಸಗಳನ್ನು ಏರ್ಪಡಿಸುವುದು.

೯. ಹಾಲುಮತ ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯ ಕುರಿತು ಅಧ್ಯಯನ ಕೈಕೊಳ್ಳುವುದು. ಆ ಮೂಲಕ ಸಮಾಜದ ಸಮಗ್ರ ಅಭಿವೃದ್ಧಿಗೆ ಸಹಾಯಕಾರಿಯಾಗುವುದು.

**೨. ದಾಖಲೀಕರಣ**

೧. ಹಾಲುಮತ ಸಾಹಿತ್ಯ ಸಂಸ್ಕೃತಿ ಕಲೆ ಜನಪದ ಆಚರಣೆ ಸಂಪ್ರದಾಯ ಜಾತ್ರೆ ಉತ್ಸವಗಳನ್ನು ಆಡಿಯೊ ವಿಡಿಯೊ ಮೂಲಕ ದಾಖಲೀಕರಣ ಮಾಡಿಕೊಂಡು ಅಧ್ಯಯನಕ್ಕೆ ಅನುಕೂಲ ಮಾಡಿಕೊಡುವುದು.

**೩. ವಿಶ್ಲೇಷಣೆ**

೧. ಸಂಗ್ರಹಿಸಿದ ಲಿಖಿತ ಮತ್ತು ಮೌಖಿಕ ಆಕರಗಳನ್ನು ವಿಶ್ಲೇಷಣೆಗೊಳಪಡಿಸಿ ಅವುಗಳಲ್ಲಿರುವ ಸಾಮ್ಯತೆ ಭಿನ್ನತೆಗಳನ್ನು ಗುರುತಿಸುವುದು. ಈಗಾಗಲೇ ಪ್ರಕಟಗೊಂಡಿರುವ ಹಾಲುಮತ ಕಾವ್ಯ ಪುರಾಣಗಳ ವಸ್ತು ವಿಶಿಷ್ಟತೆಗಳನ್ನು ಗುರುತಿಸುವುದು.

**೪. ಪ್ರಕಟಣೆ**

ಹಾಲುಮತ ಸಾಹಿತ್ಯ ಸಂಸ್ಕೃತಿ ಚರಿತ್ರೆ ಆಚರಣೆ ಸಂಪ್ರದಾಯಗಳನ್ನು ಅಧ್ಯಯನ ಮಾಡಿ ಅವುಗಳ ಫಲಿತಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವುದು. ಹಾಗೆಯೇ ವಿಚಾರ ಸಂಕಿರಣ ಸಮ್ಮೇಳನ ವಿಶೇಷ ಉಪನ್ಯಾಸ ತರಬೇತಿ ಶಿಬಿರಗಳಲ್ಲಿ ಮಂಡಿತವಾದ ಸಂಪ್ರಬಂಧಗಳನ್ನು ಸಂಪುಟಗಳಲ್ಲಿ ಪ್ರಕಟಿಸಿ ಪ್ರಸಾರಗೊಳಿಸುವುದು. ಇದಿಷ್ಟು ಹಾಲುಮತ ಅಧ್ಯಯನ ಪೀಠದ ಪ್ರಮುಖ ಉದ್ದೇಶಗಳು.

ಈ ಹಿನ್ನೆಲೆಯಲ್ಲಿ ಹಾಲುಮತ ಸಂಸ್ಕೃತಿಯ ಸಂಶೋಧನೆ ದಾಖಲೀಕರಣ ವಿಶ್ಲೇಷಣೆ ಹಾಗೂ ಪ್ರಕಟಣೆಯನ್ನು ಉದ್ದೇಶವಾಗಿಟ್ಟುಕೊಂಡು ಹಾಲುಮತ ಅಧ್ಯಯನ ಪೀಠ ತನ್ನ ಕಾರ್ಯಚಟುವಟಿಕೆಗಳನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಲಿದೆ.

೧೦೦೯-೧೦ನೆಯ ಶೈಕ್ಷಣಕ ವರ್ಷದಲ್ಲಿ ಹಾಲುಮತಕ್ಕೆ ಸಂಬಂಧಿಸಿದ ಹಸ್ತಪ್ರತಿ ಶಾಸನ ಶಿಲ್ಪಕಲೆ ಜಾನಪದಗಳಿಗೆ ಸಂಬಂಧಿಸಿದಂತೆ ಹಾಲುಮತ ಭಂಡಾರ ಹೆಸರಿನ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಲಾಗಿದೆ. ಆ ಮೂಲಕ ಅವುಗಳನ್ನು ಸಂರಕ್ಷಿಸುವುದು. ಜೊತೆಗೆ ಈ ಸಮುದಾಯಕ್ಕೆ ಸಂಬಂಧಿಸಿದ ಪುಸ್ತಕಗಳು ನಿಯತಕಾಲಿಕಗಳು ಒಂದೇ ಕಡೆ ಲಭ್ಯವಾಗುವ ಹಾಗೆ ಹಾಲುಮತ ಮೇಲುದೀಪ ಹೆಸರಿನ ಗ್ರಂಥಾಲಯವನ್ನು ಸ್ಥಾಪಿಸಿ ಅಧ್ಯಯನಕ್ಕೆ ಅನುಕೂಲತೆಯನ್ನು ಮಾಡಿಕೊಡಲಾಗಿದೆ.

ಚಳ್ಳಕೆರೆಯ ಶ್ರೀ ಕನಕ ನೌಕರರ ಕ್ಷೇಮಾಭಿವೃದ್ಧಿ ಸಂಘದ ಸಹಯೋಗದಲ್ಲಿ ೨೫, ೨೬ ಜುಲೈ ೨೦೦೯ರಂದು ಎರಡು ದಿನಗಳ ಕಾಲ ಧಾರವಾಡದ ನಿವೃತ್ತ ಶಿಕ್ಷಕರೂ ಸೃಜನಶೀಲ ಲೇಖಕರಾದ ಶ್ರೀ ಬ.ಪ. ನಾಯ್ಕರ ಅವರ ಸರ್ವಾಧ್ಯಕ್ಷತೆಯಲ್ಲಿ ಎರಡನೆಯ ಹಾಲುಮತ ಸಂಸ್ಕೃತಿ ಸಮ್ಮೇಳನವನ್ನು ಚಳ್ಳಕೆರೆಯ ದಲ್ಲಾಲರ ಸಮುದಾಯ ಭವನದಲ್ಲಿ ಆಯೋಜಿಸಲಾಗಿತ್ತು. ಅದೇ ಸಂದರ್ಭದಲ್ಲಿ ಹಾಲುಮತ ವ್ಯಾಸಂಗ ಸಂಪುಟ-೧ ನ್ನು ಪ್ರಕಟಿಸಿ ಲೋಕಾರ್ಪಣೆ ಮಾಡಲಾಯಿತು. ಈ ಸಮ್ಮೇಳನದಲ್ಲಿ ಮುಖ್ಯವಾಗಿ ಕುರುಬರ ಒಳಪಂಗಡಗಳ ಬಗೆಗೆ ನಾಲ್ಕು ಗೋಷ್ಠಿಗಳಲ್ಲಿ ವಿದ್ವಾಂಸರಿಂದ ಸಂಪ್ರಬಂಧಗಳು ಮಂಡಿಸಲ್ಪಟ್ಟವು. ಹೀಗೆ ಮಂಡಿಸಲ್ಪಟ್ಟ ಸಂಪ್ರಬಂಧಗಳ ಸಂಪುಟವಾಗಿದೆ. ಹಾಲುಮತ ವ್ಯಾಸಂಗ-೨. ಇದು ಹಾಲುಮತ ಅಧ್ಯಯನ ಮಾಲೆಯ ಮೂರನೆಯ ಪ್ರಕಟಣೆ.

* * *

ಕರ್ನಾಟಕದ ವಿವಿಧ ಸಮಾಜಗಳ ಒಳಪಂಗಡಗಳ ದಾಖಲೀಕರಣಕ್ಕೆ ನಾಂದಿ ಹಾಡಿದವರು ಪಾಶ್ಚಾತ್ಯ ವಿದ್ವಾಂಸರು. ಅದರಲ್ಲಿಯೂ ವಿಶೇಷವಾಗಿ ಬುಕನನ್, ಎಂಥೋವನ್, ಥರ್ಸ್ಟನ್ ಅವರಂಥ ವಿದ್ವಾಂಸರು ತಮ್ಮ ಪ್ರವಾಸ ಕಥನ, ದಿನಚರಿ, ಕೋಶ ಹಾಗೂ ಗೆಝೆಟಿಯರ್‌ಗಳಲ್ಲಿ ಒಳಪಂಗಡಗಳು ಕುರಿತು ಅನೇಕ ವಿವರಗಳನ್ನು ದಾಖಲಿಸಿದ್ದಾರೆ. ಇತ್ತೀಚೆಗೆ ಡಾ.ಎಂ.ಎಂ. ಕಲಬುರ್ಗಿಯವರ "ಲಿಂಗಾಯತ" ಸಂಪುಟದ ಮೂಲಕ ಲಿಂಗಾಯತ ಸಮಾಜದ ಒಳಪಂಗಡಗಳ ದಾಖಲೀಕರಣ ಕಾರ್ಯವನ್ನು ಹಲವು ವಿದ್ವಾಂಸರ ನೆರವಿನಿಂದ ಪೂರೈಸಿದ್ದಾರೆ. ಇಲಕಲ್ಲನ ಚಿತ್ತರಗಿ ಸಂಸ್ಥಾನಮಠದ ಪೂಜ್ಯಶ್ರೀ ಮ.ನಿ.ಪ್ರ.ಮಹಾಂತಸ್ವಾಮಿಗಳವರ ವಜ್ರಮಹೋತ್ಸವದ ಅಭಿನಂದನ ಸಂಪುಟವಿದು. ಲಿಂಗಾಯತ ಸಮಾಜದ ಮೂವತ್ತೈದು ಒಳಪಂಗಡಗಳ ಇತಿಹಾಸ, ವಿನ್ಯಾಸ, ಸಾಮಾಜಿಕ ಧಾರ್ಮಿಕ ಆರ್ಥಿಕ ಕೌಟುಂಬಿಕ ಸಾಂಸ್ಕೃತಿಕ ಸಂಗತಿಗಳನ್ನು ತಿಳಿಸುವ ಸಂಶೋಧನಾತ್ಮಕ ಸಂಪ್ರಬಂಧಗಳು ಇಲ್ಲಿವೆ. ಬಹುಶಃ ಸಮಾಜವೊಂದರ ಒಳಪಂಗಡಗಳ ಸಮಗ್ರ ದಾಖಲೀಕರಣ ಕಾರ್ಯ ಒಂದೆಡೆ ಪ್ರಥಮ ಬಾರಿಗೆ ನಡೆದುದು ಈ ಸಂಪುಟದ ಮೂಲಕ ಎಂದು ಹೇಳಬಹುದು.

ಈ ಮಾದರಿಯಲ್ಲಿ ಕುರುಬ ಸಮಾಜದ ಒಳಪಂಗಡಗಳ ದಾಖಲೀಕರಣ ಮಾಡಬೇಕೆಂಬ ಆಶಯದಿಂದ ಈ ಸಂಪುಟವನ್ನು ಸಿದ್ಧಪಡಿಸಲಾಗಿದೆ. ಎಂಥೋವನ್, ಎಡ್ಗರ್‌ಥರ್ಸ್ಟನ್, ಸೊಂಥೈಮರ್, ವೆಂಕಟರಂಗೋ ಕಟ್ಟಿ, ಹಯವದನರಾವ್, ಎಚ್.ವಿ. ನಂಜುಂಡಯ್ಯ, ಎಲ್.ಕೆ. ಅನಂತಕೃಷ್ಣ ಅಯ್ಯರ್, ವಿ. ಹನುಮಂತಯ್ಯ, ಶಾಮಸಿಂಗ್ ಶಶಿ, ಶಿವಾನಂದ ಗುಬ್ಬಣ್ಣವರ ಮುಂತಾದ ವಿದ್ವಾಂಸರು ಅನುಷಂಗಿಕವಾಗಿ ಕುರುಬ ಸಮಾಜದ ಒಳಪಂಗಡಗಳ ದಾಖಲೀಕರಣ ಕಾರ್ಯಕ್ಕೆ ಪ್ರಯತ್ನಿಸಿದ್ದಾರೆ. ಇಷ್ಟಾಗಿಯೂ ಕುರುಬರ ಒಳಪಂಗಡಗಳ ಸಂಖ್ಯೆ ಎಷ್ಟು ಎಂಬುದನ್ನು ಖಚಿತವಾಗಿ ನಾವಿನ್ನು ಗುರುತಿಸಬೇಕಾಗಿದೆ. ಹೀಗಿದ್ದೂ ಈ ಸಂಪುಟದಲ್ಲಿ ಕಾಡುಕುರುಬರು, ಅಲೆಮಾರಿ ಕುರುಬರು, ಹತ್ತಿಕಂಕಣ ಉಣ್ಣೆ ಕಂಕಣ ಕುರುಬರು, ಒಡೆಯರು, ದನಗರ ಗವಳಿಗರು ಇತ್ಯಾದಿ ಕುರುಬ ಸಮಾಜದ ಹದಿನೇಳು ಒಳಪಂಗಡಗಳನ್ನು ಗುರುತಿಸಿ, ಅವುಗಳ ಮೂಲ, ವ್ಯಾಪ್ತಿ, ಆಚರಣೆ ಸಂಪ್ರದಾಯ, ಸಾಮಾಜಿಕ ಧಾರ್ಮಿಕ ಕೌಟುಂಬಿಕ ಆರ್ಥಿಕ ಹೀಗೆ ಅನೇಕ ವಿಚಾರಗಳನ್ನು ದಾಖಲಿಸಲು ಪ್ರಯತ್ನಿಸಲಾಗಿದೆ. ಹೀಗಾಗಿ ಕುರುಬ ಸಮಾಜದ ಒಳಪಂಗಡಗಳ ಸಮಗ್ರ ದಾಖಲೀಕರಣ ಕಾರ್ಯ ಒಂದೆಡೆ ಸಮಗ್ರವಾಗಿ ಮೊದಲಬಾರಿಗೆ ಈ ಸಂಪುಟದ ಮೂಲಕ ಕೈಗೂಡಿದಂತಾಗಿದೆ. ಇಲ್ಲಿನ

ಸಂಪ್ರಬಂಧಗಳು ಒಂದೊಂದು ಒಳಪಂಗಡದ ಬಗೆಗೆ ಪ್ರತ್ಯೇಕ ಅಧ್ಯಯನವನ್ನು ಕೈಕೊಳ್ಳಬಹುದಾದ ಸಾಧ್ಯತೆಯತ್ತ ಸಂಶೋಧಕರ ಗಮನವನ್ನು ಸೆಳೆಯುತ್ತವೆ.

ಒಳಪಂಗಡಗಳ ಕುರಿತು ಬರೆಯುವುದು ತುಂಬ ಸೂಕ್ಷ್ಮ ವಿಷಯ. ಹೀಗಿದ್ದೂ ತುಂಬ ಶ್ರಮವಹಿಸಿ ಅನೇಕ ಆಕರಗಳನ್ನು ಸಂಗ್ರಹಿಸಿ ಸಂಪ್ರಬಂಧಗಳನ್ನು ಸಿದ್ಧಪಡಿಸಿದ ಎಲ್ಲ ವಿದ್ವಾಂಸರಿಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಅಲ್ಲದೇ ಆಯಾ ಲೇಖನಗಳಲ್ಲಿನ ಅಭಿಪ್ರಾಯಗಳಿಗೆ ಅವರೇ ಜವಾಬ್ದಾರರೆಂದು ಬೇರೆ ಹೇಳಬೇಕಿಲ್ಲ.

ಚಿತ್ರದುರ್ಗ ಪರಿಸರದ ಕುರುಬ ಸಮುದಾಯದ ಧಾರ್ಮಿಕ ಸಾಮಾಜಿಕ ಜಾನಪದ ಹಾಗೂ ಆರ್ಥಿಕ ಸಂಗತಿಗಳನ್ನು ಅವಲೋಕನ ಮಾಡಿದ ಸಂಪ್ರಬಂಧಗಳು ಮೂರನೆಯ ಭಾಗದಲ್ಲಿವೆ. ಸಮ್ಮೇಳನದ ಸರ್ವಾಧ್ಯಕ್ಷರಾದ ಬ.ಪ. ನಾಯ್ಕರ ಅವರ ಜೀವನ ಸಾಧನೆ ಮತ್ತು ಸಾಹಿತ್ಯ ಕುರಿತು ವಿಶ್ಲೇಷಣಾತ್ಮಕವಾದ ಸಂಪ್ರಬಂಧವು ನಾಲ್ಕನೆಯ ಭಾಗದಲ್ಲಿದೆ. ಹಿರಿಯ ಜಾನಪದ ವಿದ್ವಾಂಸರಾದ ಡಾ.ತೀ.ನಂ. ಶಂಕರನಾರಾಯಣ ಅವರು ತಮ್ಮ ಸಮಾರೋಪ ಭಾಷಣದಲ್ಲಿ ಕರ್ನಾಟಕದ ವಿವಿಧ ಜಾತಿ ಉಪಜಾತಿ, ಬುಡಕಟ್ಟು ಹಾಗೂ ಬೆಡಗುಗಳ ಅಧ್ಯಯನಗಳ ಉದ್ದೇಶ, ಉಪಯುಕ್ತತೆಯನ್ನು ಸ್ಥೂಲವಾಗಿ ವಿವರಿಸಿದ್ದಾರೆ. ಜೊತೆಗೆ ಇಲ್ಲಿರುವ ಸಂಪ್ರಬಂಧಗಳ ವಿಶೇಷತೆಯನ್ನು ಗುರುತಿಸುತ್ತ "...ಇವುಗಳನ್ನು ಅಧ್ಯಯನ ಮಾಡಿದರೆ ಕುರುಬರ ಉಪಜಾತಿಗಳ ಒಂದು ಸ್ಥೂಲವಾದ ಚಿತ್ರ ದೊರಕುತ್ತದೆ. ಇವುಗಳು ಒಂದು ರೀತಿಯಲ್ಲಿ ಆರಂಭದ ಸಮೀಕ್ಷೆ ರೂಪದಲ್ಲಿದ್ದು ಮುಂದಿನ ಅಧ್ಯಯನಗಳಿಗೆ ಒಳ್ಳೆಯ ತಳಹದಿ ಹಾಕಿತು ಎಂದು ಹೇಳಬಹುದು. ಈ ಪ್ರಬಂಧಗಳು ಕುರುಬರ ಸಾಂಪ್ರದಾಯಕ ಜೀವನ ಕ್ರಮಗಳನ್ನು ದಾಖಲಿ ಮಾಡಿವೆ. ....ಜಾಗತೀಕರಣದ ಇಂದಿನ ದನಗಳಲ್ಲಿ ಕುರುಬ ಸಮುದಾಯ, ಅದರಲ್ಲಿನ ಉಪಜಾತಿಗಳು ಮತ್ತು ಬೆಡಗುಗಳು ಯಾವ ರೀತಿ ಮುಂದುವರಿಯಬೇಕು ಎಂಬುದರ ಬಗ್ಗೆಯೂ ಅಧ್ಯಯನಗಳು ನಡೆಯಬೇಕಾಗಿದೆ. ಇದಕ್ಕೆ ಈ ವಿಚಾರ ಸಂಕಿರಣದ ಸಂಪ್ರಬಂಧಗಳು ನಾಂದಿಯಾಗಲಿವೆ" ಎಂದು ಆಶಿಸಿದ್ದಾರೆ. ಹೀಗೆ ಈ ಸಂಪುಟವು ಕುರುಬ ಸಮುದಾಯದ ಒಳಪಂಗಡಗಳ ಅಧ್ಯಯನಕ್ಕೆ ಒಂದು ಆಕರ ಗ್ರಂಥವಾಗುತ್ತದೆಂಬ ನಂಬಿಕೆ ನಮ್ಮದಾಗಿದೆ.

ಈ ಸಂಪುಟದ ಪ್ರಕಟಣೆಗೆ ಆಡಳಿತಾತ್ಮಕ ಅನುಮತಿ ನೀಡಿ ಸೂಕ್ತ ಮಾರ್ಗದರ್ಶನ ನೀಡಿದ ಮಾನ್ಯ ಕುಲಪತಿಗಳಾದ ಡಾ. ಎ. ಮುರಿಗೆಪ್ಪ, ಮಾನ್ಯ ಕುಲಸಚಿವರಾದ ಡಾ. ಮಂಜುನಾಥ ಬೇವಿಕಟ್ಟಿ ಅವರಿಗೆ ಗೌರಪೂರ್ವಕ ನಮನಗಳು. ಸಮ್ಮೇಳನದ ರೂಪುರೇಷಯನ್ನು ಸಿದ್ಧಪಡಿಸುವಲ್ಲಿ ಸಲಹೆ ಸಹಕಾರ ನೀಡಿದ ಹಿಂದಿನ ಕುಲಸಚಿವರಾದ ಕೆ.ಎ.ಎಸ್. ಅಧಿಕಾರಿ ಶ್ರೀ ಎಸ್.ಎಸ್. ಪೂಜಾರ್, ಹಾಲುಮತ ಅಧ್ಯಯನ ಪೀಠದ ಸಲಹಾ ಸಮಿತಿ ಸದಸ್ಯರಾದ ಡಾ. ಶ್ರೀರಾಮ ಇಟ್ಟಣ್ಣವರ, ಶ್ರೀ ಈರಪ್ಪ ಕಂಬಳಿ ಅವರಿಗೆ ನಮಸ್ಕಾರಗಳು. ಚಳ್ಳಕೆರೆಯಲ್ಲಿ ಎರಡನೆಯ ಹಾಲುಮತ ಸಂಸ್ಕೃತಿ ಸಮ್ಮೇಳನವನ್ನು ನಡೆಸಲು ಮುಂದೆ ಬಂದವರು ಶ್ರೀ ಕನಕ ನೌಕರರ ಸಂಘದ ಪದಾಧಿಕಾರಿಗಳು. ವಿಶೇಷವಾಗಿ ಗೌರವಾಧ್ಯಕರಾದ ಪ್ರೊ. ಎಂ. ಶಿವಲಿಂಗಪ್ಪ ಅವರು ಹಗಲಿರುಳು ದುಡಿದು ಸಮ್ಮೇಳನದ ಯಶಸ್ಸಿಗೆ ಕಾರಣರಾಗಿದ್ದಾರೆ. ಅವರೊಂದಿಗೆ ಸಂಘದ ಅಧ್ಯಕ್ಷರಾದ ಪಿ. ಕೃಷ್ಣಮೂರ್ತಿ, ಕಾರ್ಯದರ್ಶಿಗಳಾದ ರಾಜು, ಶ್ರೀ ರೇವಣಸಿದ್ಧೇಶ್ವರ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿಗಳಾದ ಎಲ್. ಲೋಕೇಶ್ ಮೊದಲಾದವರು ಹೆಗಲಿಗೆ ಹೆಗಲುಕೊಟ್ಟು ದುಡಿದಿದ್ದಾರೆ. ಈ ಎಲ್ಲ ಮಹನೀಯರಿಗೆ ಹಾರ್ದಿಕವಾದ ಕೃತಜ್ಞತೆಗಳು.

ಪುಸ್ತಕದ ಪ್ರಕಟಣೆಯಲ್ಲಿ ವಿಶೇಷ ಮುತುವರ್ಜಿ ವಹಿಸಿದ ಪ್ರಸಾರಾಂಗದ ನಿರ್ದೇಶಕರಾದ ಡಾ. ಎ.ಮೋಹನ ಕುಂಟಾರ್, ಸಹಾಯಕ ನಿರ್ದೇಶಕ ಶ್ರೀ ಬಿ. ಸುಜ್ಞಾನಮೂರ್ತಿ, ಮುಖಪುಟ ಚಿತ್ರಿಸಿದ ಕಲಾವಿದ ಕೆ.ಕೆ.ಮಕಾಳಿ ಅವರಿಗೆ ವಂದನೆಗಳು. ಅಚ್ಚುಕಟ್ಟಾಗಿ ಅಕ್ಷರಗಳನ್ನು ಸಂಯೋಜನೆಗೊಳಿಸಿದ ಯಾಜಿ ಗ್ರಾಫಿಕ್ಸನ ಶ್ರೀಮತಿ ಸವಿತಾ ಗಣೇಶ ಅವರ ಸಹಕಾರವನ್ನು ಪ್ರೀತಿಯಿಂದ ನೆನೆಯುತ್ತೇನೆ.

**ಡಾ. ಎಫ್.ಟಿ. ಹಳ್ಳಿಕೇರಿ**

# ಭಾಗ ಒಂದು - ಉದ್ಘಾಟನೆ :

## ೧. ಪ್ರಾಸ್ತಾವಿಕ ನುಡಿ

ಹಾಲುಮತ ಸಂಸ್ಕೃತಿ ಸಮ್ಮೇಳನದ ಉದ್ಘಾಟನೆ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ ನೆಚ್ಚಿನ ಕುಲಪತಿಗಳಾದ ಡಾ. ಎ. ಮುರಿಗೆಪ್ಪನವರೇ, ಸಮ್ಮೇಳನದ ಸರ್ವಾಧ್ಯಕ್ಷರಾದ ಹಿರಿಯ ಚೇತನ ಶ್ರೀ ಬ.ಪ. ನಾಯ್ಕರ ಅವರೇ, ಹಾಲುಮತ ವ್ಯಾಸಂಗ ಸಂಪುಟವನ್ನು ಲೋಕಾರ್ಪಣೆ ಮಾಡಲು ಆಗಮಿಸಿರುವ ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯರಾದ ಡಾ. ಎಂ. ನಾಗರಾಜ ಅವರೇ, ಸಮ್ಮೇಳನವನ್ನು ಉದ್ಘಾಟನೆ ಮಾಡಲು ಆಗಮಿಸಿರುವ ಕನ್ನಡ ವಿಶ್ವವಿದ್ಯಾಲಯದ ಕುಲಸಚಿವರಾದ ಶ್ರೀ ಎಸ್.ಎಸ್. ಪೂಜಾರ ಅವರೇ, ಸಮ್ಮೇಳನದ ಸ್ಥಳೀಯ ಸಂಚಾಲಕರಾದ ಪ್ರೊ. ಎಮ್. ಶಿವಲಿಂಗಪ್ಪನವರೇ, ಶ್ರೀ ಕನಕ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಶ್ರೀ ಕೃಷ್ಣಮೂರ್ತಿಯವರೇ, ವೇದಿಕೆ ಮೇಲೆ ಉಪಸ್ಥಿತರಿರುವ ಗಣ್ಯ ಮಾನ್ಯರೇ, ಇಲ್ಲಿ ಸಮಾವೇಶಗೊಂಡಿರುವ ವಿದ್ವಾಂಸರೇ, ಪತ್ರಿಕಾ ಪ್ರತಿನಿಧಿಗಳೇ ಹಾಗೂ ಸಭಿಕರೇ- ಎಲ್ಲರಿಗೂ ನನ್ನ ನಮಸ್ಕಾರಗಳು.

ಹಾಲುಮತ ಸಂಸ್ಕೃತಿಯ ಸಮಗ್ರ ಅಧ್ಯಯನಕ್ಕಾಗಿ ಸ್ಥಾಪನೆಗೊಂಡಿರುವ ಹಾಲುಮತ ಅಧ್ಯಯನ ಪೀಠವು ಪ್ರಾರಂಭವಾಗಿ ಎರಡು ವರ್ಷವಾಗುತ್ತಲಿದೆ. ಈ ಅವಧಿಯಲ್ಲಿ ಪೀಠವು ಅನೇಕ ರಚನಾತ್ಮಕ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಿದೆ. ಹಾಲುಮತ ಸಂಸ್ಕೃತಿ ಸಮ್ಮೇಳನ, ಡೊಳ್ಳಿನ ಹಾಡುಗಳ ತರಬೇತಿ ಶಿಬಿರ, ರಸ್ತಾಪುರ ಭೀಮಕವಿಯ ಹಾಲುಮತೋತ್ತೇಜಕ ಪುರಾಣ ಗ್ರಂಥ ಪ್ರಕಟಣೆ, ಹಾಲುಮತ ಭವನ ಕಟ್ಟಡ ನಿರ್ಮಾಣ ಇತ್ಯಾದಿ ಕಾರ್ಯಗಳನ್ನು ಕಾಲಬದ್ಧವಾಗಿ ಹಾಕಿಕೊಂಡು ಮುಕ್ತಾಯಗೊಳಿಸಿದೆ. ಕರ್ನಾಟಕ ಪ್ರದೇಶ ಕುರುಬರ ಸಂಘದ ಜಿಲ್ಲಾ ಘಟಕದ ಸಹಯೋಗದಲ್ಲಿ ೩, ೪ ಮಾರ್ಚ್೨೦೦೮ರಲ್ಲಿ ಗದುಗಿನ ಶ್ರೀ ಕನಕ ಭವನದಲ್ಲಿ ಮೊದಲನೆಯ ಹಾಲುಮತ ಸಂಸ್ಕೃತಿ ಸಮ್ಮೇಳನವನ್ನು ಏರ್ಪಡಿಸಲಾಗಿತ್ತು. ಹಿರಿಯ ಜಾನಪದ ವಿದ್ವಾಂಸರಾದ ಪ್ರೊ. ಜ್ಯೋತಿ ಹೊಸೂರ ಅವರು ಈ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು. ಈ ಸಮ್ಮೇಳನದಲ್ಲಿ ಹಾಲುಮತ ಆಕರಗಳು, ದೈವಗಳು, ಸಾಂಸ್ಕೃತಿಕ ವೀರರು ಹಾಗೂ ಸಾಧಕರು ಎಂಬ ನಾಲ್ಕು ಗೋಷ್ಠಿಗಳಲ್ಲಿ ಪ್ರಬಂಧ ಮಂಡನೆ ಚರ್ಚೆ ಸಂವಾದಗಳಲ್ಲಿ ಅನೇಕ ವಿದ್ವಾಂಸರು ಪಾಲ್ಗೊಂಡು ಸಮ್ಮೇಳನವನ್ನು ಯಶಸ್ವಿಗೊಳಿಸಿದರು. ಹಾಗೆಯೇ ೨೦೦೮, ಸೆಪ್ಟೆಂಬರ್ ೨೮ರಿಂದ ಅಕ್ಟೋಬರ್ ೧ರ ವರೆಗೆ ನಾಲ್ಕು ದಿನಗಳ ಕಾಲ ಅಥಣಿ ತಾಲ್ಲೂಕು ಮುರಗುಂಡಿಯ ಶ್ರೀ ಮುರಸಿದ್ಧೇಶ್ವರ ದೇವಸ್ಥಾನ ಟ್ರಸ್ಟ್ ಸಹಯೋಗದಲ್ಲಿ ಡೊಳ್ಳಿನ ಹಾಡುಗಳ ತರಬೇತಿ ಶಿಬಿರವನ್ನು ಆಯೋಜಿಸಲಾಗಿತ್ತು. ಈ ಶಿಬಿರದಲ್ಲಿ ೬೦ ಡೊಳ್ಳಿನ ತಂಡಗಳು ಭಾಗವಹಿಸಿದ್ದವು. ಅಂದಾಜು ೨೦೦ ಡೊಳ್ಳಿನ ಕಲಾವಿದರು ಈ ಶಿಬಿರದ ಪ್ರಯೋಜನವನ್ನು ಪಡೆದುಕೊಂಡರು. ಕೊಪ್ಪಳ ಲೋಕಸಭಾ ಸದಸ್ಯರಾದ ಸನ್ಮಾನ್ಯ ಶ್ರೀ ಕೆ.ವಿರೂಪಾಕ್ಷಪ್ಪನವರ ಅನುದಾನದಿಂದ ವಿಶ್ವವಿದ್ಯಾಲಯದ ಆವರಣದಲ್ಲಿ ಹಾಲುಮತ ಭವನ ನಿರ್ಮಾಣಗೊಂಡಿದೆ. ಹಾಲುಮತ ಸಂಸ್ಕೃತಿಗೆ ಸಂಬಂಧಿಸಿದ ಗ್ರಂಥಾಲಯ, ವಸ್ತುಸಂಗ್ರಹಾಲಯ, ಆಡಿಯೋ-ವಿಡಿಯೋ ವ್ಯವಸ್ಥೆ, ಸಭಾ ಭವನ, ಕಂಪ್ಯೂಟರ್ ವಿಭಾಗವನ್ನು ಈ ಭವನ ಒಳಗೊಂಡಿದೆ.

ಹಾಲುಮತ ಅಧ್ಯಯನದ ಕಾರ್ಯಯೋಜನೆಗಳನ್ನು ರೂಪಿಸಿ ಕರ್ನಾಟಕ ಸರ್ಕಾರಕ್ಕೆ ೨೦೦೮ ರಲ್ಲಿ ಅನುದಾನ ಕೋರಿ ನಾವು ಪ್ರಸ್ತಾವನೆಯನ್ನು ಸಲ್ಲಿಸಿದ್ದೆವು. ನಮ್ಮ ಪ್ರಸ್ತಾವನೆಯನ್ನು ಪರಿಶೀಲಿಸಿದ ಕರ್ನಾಟಕ ಸರ್ಕಾರವು ಪೀಠದ ಕಾರ್ಯಯೋಜನೆಗಳಿಗೆ ೨೦೦೮-೦೯ರ ಸಾಲಿನಲ್ಲಿ ರೂ.೨೦ ಲಕ್ಷಗಳ ಅನುದಾನವನ್ನು ಮಂಜೂರು ಮಾಡಿ, ಅದರಲ್ಲಿ ಮೊದಲ ಕಂತಾಗಿ ೫ ಲಕ್ಷಗಳನ್ನು ಈಗಾಗಲೇ ಬಿಡುಗಡೆ ಮಾಡಿದೆ. ಸರ್ಕಾರದ ನಿರ್ದೇಶನದಂತೆ ೫ ಲಕ್ಷ ರೂ. ಗಳನ್ನು ಬ್ಯಾಂಕಿನಲ್ಲಿ ಠೇವಣಿಯಾಗಿಡಲಾಗಿದೆ. ಇನ್ನೂ ೧೫ ಲಕ್ಷಗಳ ಅನುದಾನ ಇಷ್ಟರಲ್ಲಿಯೇ ಬಿಡುಗಡೆಯಾಗುವ ನಿರೀಕ್ಷೆ ನಮ್ಮದಾಗಿದೆ.

ಪೀಠದ ಯೋಜನೆ, ಸಿಬ್ಬಂದಿ ವೇತನ ಹಾಗೂ ಪ್ರಕಟನೆಗಾಗಿ ವರ್ಷಕ್ಕೆ ಅಂದಾಜು ೧೦ ಲಕ್ಷ ರೂ.ಗಳ ಅವಶ್ಯಕತೆ ಇದೆ. ಇದಕ್ಕಾಗಿ ಮತ್ತೆ ಒಂದು ಕೋಟಿ ರೂ.ಗಳ ಪ್ರಸ್ತಾವನೆಯೊಂದನ್ನು ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರಿಗೆ ಸಲ್ಲಿಸಲಾಗಿದೆ.

**ಹಾಲುಮತ ಅಧ್ಯಯನ ಪೀಠದ ಯೋಜನೆಗಳು**

ಈ ವರ್ಷ ದಾನಿಗಳ ನೆರವಿನಿಂದ ಪುಸ್ತಕ ಪ್ರಕಟಣ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಬೀರಪ್ಪ, ಮಾಳಪ್ಪ, ಗೊಲ್ಲಾಳೇಶ್ವರ, ಅಮೋಘಸಿದ್ದೇಶ್ವರ, ಇಟ್ಟಪ್ಪ ಹಾಗೂ ಕುರುಬರ ಹೇಳಿಕೆಗಳು ಹೆಸರಿನ ಪುಸ್ತಕಗಳನ್ನು ಸಿದ್ಧಪಡಿಸಿಕೊಡಲು ವಿದ್ವಾಂಸರಿಗೆ ಕೇಳಿಕೊಳ್ಳಲಾಗಿದೆ.

೨೦೦೯-೧೦ರ ಶೈಕ್ಷಣಿಕ ವರ್ಷದಲ್ಲಿ ಪೀಠವು ಎರಡು ವಿಶೇಷವಾದ ವಿಚಾರ ಸಂಕಿರಣಗಳನ್ನು ಏರ್ಪಡಿಸಲು ತೀರ್ಮಾನಿಸಿದೆ. ಬೆಳಗಾವಿ ಮತ್ತು ಮಹಾರಾಷ್ಟ್ರದ ಗಡಿ ಪ್ರದೇಶದಲ್ಲಿ ಕುರುಬರ ಸಂಸ್ಕೃತಿ ಅತ್ಯಂತ ಶ್ರೀಮಂತವಾಗಿದೆ. ಈ ಸಂಸ್ಕೃತಿ ಕುರಿತು ಎರಡು ದಿನಗಳ ವಿಚಾರ ಸಂಕಿರಣವನ್ನು ಬೆಳಗಾವಿ ಜಿಲ್ಲೆಯ ರಾಯಭಾಗದಲ್ಲಿ ಬರುವ ಜುಲೈ ತಿಂಗಳಲ್ಲಿ ನಡೆಸಲಾಗುವುದು. ಬೆಳಗಾವಿ ಜಿಲ್ಲೆಯ ಕುರುಬರ ಧಾರ್ಮಿಕ, ಸಾಮಾಜಿಕ, ಆರ್ಥಿಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಸಂಗತಿಗಳನ್ನು ಇಲ್ಲಿ ಚರ್ಚಿಸಲಾಗುವುದು. ಹಾಗೆಯೇ ಹಾಲುಮತ ಸಂಸ್ಕೃತಿ ಕುರಿತು ಅಧ್ಯಯನ ನಡೆಸಿದ ದೇಶಿಯ ಹಾಗೂ ಪ್ರಾಶ್ಚಾತ್ಯ ವಿದ್ವಾಂಸರ ಸಿಂಚನೆಗಳನ್ನು ಚರ್ಚಿಸುವ ಎರಡು ದಿನದ ವಿಚಾರ ಸಂಕಿರಣವನ್ನು ಬೆಂಗಳೂರಿನಲ್ಲಿ ಆಯೋಜಿಸಲಾಗುವುದು. ವ್ಹಿ.ಆರ್. ಹನುಮಂತಯ್ಯ, ಶಂಬಾ ಜೋಶಿ, ಎಂ.ಎಂ. ಕಲಬುರ್ಗಿ, ಎಂ. ಚಿದಾನಂದ ಮೂರ್ತಿ, ಶಿವಾನಂದ ಗುಬ್ಬಣ್ಣವರ, ಚಿಂತಾಮಣಿ ಢೇರೆ, ಶಶಿ ಶಾಮ್‌ಸಿಂಗ್, ಸೊಂಥೈಮರ್, ಥರ್ಸ್ಟನ್, ಎಂಥೋವನ್ ಮೊದಲಾದವರು ಈ ಸಮುದಾಯದ ಬಗ್ಗೆ ನಡೆಸಿದ ಅಧ್ಯಯನದ ಫಲಿತಗಳನ್ನು ಅವಲೋಕಿಸುವುದು ಈ ವಿಚಾರ ಸಂಕಿರಣದ ಮುಖ್ಯ ಉದ್ದೇಶವಾಗಿದೆ. ಈ ಎಲ್ಲ ಯೋಜನೆ-ಯೋಚನೆಗಳಿಗೆ ಸೂಕ್ತ ಮಾರ್ಗದರ್ಶನ ನೀಡುತ್ತಿರುವ ಹಾಲುಮತ ಅಧ್ಯಯನ ಪೀಠದ ಸಲಹಾಸಮಿತಿ ಅಧ್ಯಕ್ಷರಾದ ಮಾನ್ಯ ಕುಲಪತಿ ಡಾ.ಎ. ಮುರಿಗೆಪ್ಪನವರಿಗೆ, ಕುಲಸಚಿವರಾದ ಎಸ್.ಎಸ್. ಪೂಜಾರ ಅವರಿಗೆ, ಸಲಹಾ ಸಮಿತಿ ಸದಸ್ಯರಾದ ಡಾ. ಶ್ರೀರಾಮ ಇಟ್ಟಣ್ಣವರ ಹಾಗೂ ಈರಪ್ಪ ಕಂಬಳಿ ಅವರಿಗೆ ವಂದನೆಗಳು.

**ಹಾಲುಮತ ಸಂಸ್ಕೃತಿ ಸಮ್ಮೇಳನ ೨**

ಹಾಲುಮತ ಅಧ್ಯಯನ ಪೀಠದ ಬಹುಮುಖ್ಯವಾದ ಯೋಜನೆ ಹಾಲುಮತ ಸಂಸ್ಕೃತಿ ಸಮ್ಮೇಳನವನ್ನು ಆಯೋಜಿಸುವುದು. ಹಿರಿಯ ಸಾಹಿತಿಗಳಾದ ಬ.ಪ. ನಾಯ್ಕರ ಅವರ ಸರ್ವಾಧ್ಯಕ್ಷತೆಯಲ್ಲಿ ಇಂದು ಮತ್ತು ನಾಳೆ ನಡೆಯುವ ಈ ಸಮ್ಮೇಳನದಲ್ಲಿ ಕುರುಬರ ಉಪಪಂಗಡಗಳ ಬಗ್ಗೆ ವಿಚಾರ ವಿನಿಮಯ ನಡೆಯಲಿದೆ. ನಮ್ಮ ತಿಳುವಳಿಕೆಗೆ ಬಂದಂತೆ ಸಧ್ಯಕ್ಕೆ ಕುರುಬರಲ್ಲಿ ೧೮ ಉಪಪಂಗಡಗಳನ್ನು ಗುರುತಿಸಲಾಗಿದೆ. ಈ ಒಳಪಂಗಡಗಳ ಪ್ರಾಚೀನತೆ, ಆಚಾರ-ವಿಚಾರ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅನನ್ಯತೆಗಳ ಕುರಿತು ಇಲ್ಲಿ ಚರ್ಚಿಸಲಾಗುವುದು.

ಸಮ್ಮೇಳನದ ಸರ್ವಾಧ್ಯಕ್ಷರಾದ ಬ.ಪ. ನಾಯ್ಕರ ಅವರ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಮೂರು ದಶಕಗಳ ಕಾಲ ನಿಷ್ಠೆ, ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸಿದವರು. ೮೦ ವರ್ಷಗಳ ಈ ತುಂಬು ವಯಸ್ಸಿನಲ್ಲಿಯೂ ಬರವಣಿಗೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಪಾಠ, ಪ್ರವಚನದ ಜೊತೆಗೆ ಕಾವ್ಯ, ಕಥೆ, ಕಾದಂಬರಿ, ನಾಟಕ, ಜೀವನ ಚರಿತ್ರೆಗಳಂತಹ ಆಧುನಿಕ ಪ್ರಕಾರಗಳಲ್ಲಿ ಸಾಹಿತ್ಯಿಕ ಕೃಷಿಯನ್ನು ಮಾಡಿದವರು. ಚಂದ್ರೋದಯ, ಶಾಂತಿ ದೀಪ, ವಿಜಯಶ್ರೀ, ಜೀವನಗಂಗಾ, ಅಕ್ಷತಾ ಯೋಗ, ಸಕಲ ಗುಣಸಂಪನ್ನ, ಸೌಜನ್ಯ ಇತ್ಯಾದಿ ೩೦ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. ಎಲೆಮರೆಯ ಕಾಯಿಯಂತೆ, ಸದ್ದುಗದ್ದಲವಿಲ್ಲದೆ ಸಾಹಿತ್ಯ ಸೇವೆಯನ್ನು ಮಾಡುತ್ತಿರುವ ನಾಯ್ಕರ್ ಅವರು ಈ ಸಮ್ಮೇಳನದ ಸರ್ವಾಧ್ಯಕ್ಷತೆಯನ್ನು ವಹಿಸಿಕೊಂಡಿರುವುದು ನಮಗೆ ಸಂತಸವನ್ನುಂಟುಮಾಡಿದೆ. ಈ ಸಮ್ಮೇಳನದ ಪರವಾಗಿ ಮತ್ತೊಮ್ಮೆ ಅವರನ್ನು ನಾನು ಗೌರವಪೂರ್ವಕವಾಗಿ ಸ್ವಾಗತಿಸುತ್ತೇನೆ.

ಈ ಸಮ್ಮೇಳನ ಚಳ್ಳಕೆರೆಯಲ್ಲಿ ನಡೆಯುತ್ತಿರುವುದರಿಂದ ಚಿತ್ರದುರ್ಗ ಪರಿಸರದ ಕುರುಬರ ಸಂಸ್ಕೃತಿ ಎಂಬ ಒಂದು ಗೋಷ್ಠಿಯನ್ನು ಇಲ್ಲಿ ನಡೆಸಲಾಗುತ್ತಿದೆ. ಚಿತ್ರದುರ್ಗ ಪರಿಸರದ ಕುರುಬರ ಧಾರ್ಮಿಕ, ಆರ್ಥಿಕ, ಸಾಮಾಜಿಕ ಹಾಗೂ ಜನಪದ ವಿಷಯಗಳನ್ನು ಒಂದೆಡೆ ಗುರುತಿಸಿ ಅವಲೋಕಿಸುವುದು ಈ ಗೋಷ್ಠಿಯ ವಿಶೇಷವಾಗಿದೆ. ಈ ಭಾಗದಲ್ಲಿ ಧಾರ್ಮಿಕವಾಗಿ ರೇವಣಸಿದ್ದೇಶ್ವರ, ಸಿದ್ಧರಾಮೇಶ್ವರ, ಬೀರಪ್ಪ, ಓರಗಲಮ್ಮರಂತಹ ಕುರುಬರ ಆರಾಧ್ಯ ದೈವಗಳ ಮಠ ಮಂದಿರಗಳು ಅಧಿಕ ಸಂಖ್ಯೆಯಲ್ಲಿವೆ. ಚಳ್ಳಕೆರೆ ಪರಿಸರದ

ಹರ್ತಿಕೋಟೆ, ದೊಡ್ಡೇರಿ, ರಂಗವ್ವನಹಳ್ಳಿ, ಹಿರಿಯೂರು, ಕಣಜನಹಳ್ಳಿ, ಹುಲ್ಲೂರು ಹೀಗೆ ಅನೇಕ ಗ್ರಾಮಗಳಲ್ಲಿ ರೇವಣಸಿದ್ಧೇಶ್ವರ ಮಠಗಳಿರುವುದನ್ನು ನಾವು ನೋಡಬಹುದು. ಹಲ್ಲೂರಿನಲ್ಲಿರುವ ರೇವಣಸಿದ್ಧೇಶ್ವರ ಮೂರ್ತಿಯು ಈ ಭಾಗದಲ್ಲಿಯೇ ವಿಶೇಷವಾದುದು. ಪ್ರಸಿದ್ಧ ಚಿತ್ರ ಕಲಾವಿದರಾದ ಪಿ.ಆರ್. ತಿಪ್ಪೇಸ್ವಾಮಿಯವರು ಹರ್ತಿಕೋಟೆ ಗ್ರಾಮದವರು. ಕುರುಬರ ಗುರುಗಳಾದ ಮೇ.ಮೂ.ಶ್ರೀ ಚನ್ನಯ್ಯ ಒಡೆಯರ ಅವರು ಈ ಭಾಗದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಿದವರು. ಈ ಭಾಗದ ಅನೇಕ ಕುರುಬರು ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡಿರುವರು. ಜಾನಪದ ಕಥೆಗಾರ ಶ್ರೀ ಈರಬಡಪ್ಪ ರಾಜೋತ್ಸವ ಪ್ರಶಸ್ತಿ ಪುರಸ್ಕೃತರು. ಇಂತಹ ಮಹನೀಯರ ಸಾಧನೆಗೆ ಕಾರ್ಯಕ್ಷೇತ್ರವಾದ ಈ ಪರಿಸರದಲ್ಲಿ ಸಮ್ಮೇಳನ ನಡೆಯುತ್ತಿದೆ.

ಎರಡನೆಯ ಹಾಲುಮತ ಸಂಸ್ಕೃತಿ ಸಮ್ಮೇಳನವನ್ನು ಚಳ್ಳಕೆರೆಯಲ್ಲಿ ನಡೆಸುವಂತೆ ಕೋರಿ ನಾಲ್ಕು ತಿಂಗಳ ಹಿಂದೆ ಸ್ನೇಹಿತರಾದ ಪ್ರೊ. ಎಂ. ಶಿವಲಿಂಗಪ್ಪನವರಿಗೆ ಪತ್ರವನ್ನು ಬರೆದಿದ್ದೆ. ಆ ಪತ್ರಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿ ಕನಕ ನೌಕರರ ಕ್ಷೇಮಾಭಿವೃದ್ಧಿ ಸಂಘದ ಸಹಯೋಗದೊಂದಿಗೆ ಚಳ್ಳಕೆರೆಯಲ್ಲಿ ಸಮ್ಮೇಳನವನ್ನು ನಡೆಸಲು ಒಪ್ಪಿಕೊಂಡರು. ಕಳೆದ ಒಂದು ತಿಂಗಳಿನಿಂದ ಈ ಸಮ್ಮೇಳನದ ಪೂರ್ವಸಿದ್ಧತೆಯಲ್ಲಿ ಕನಕ ನೌಕರ ಸಂಘದ ಗೌರವಾಧ್ಯಕ್ಷರು ಹಾಗೂ ಸ್ಥಳೀಯ ಸಂಚಾಲಕರಾದ ಪ್ರೊ. ಎಂ. ಶಿವಲಿಂಗಪ್ಪ, ಅಧ್ಯಕ್ಷರಾದ ಪಿ.ಕೃಷ್ಣಮೂರ್ತಿ ಮತ್ತು ಅವರ ಎಲ್ಲ ಪದಾಧಿಕಾರಿಗಳು ಶ್ರಮಿಸಿದ್ದಾರೆ. ಈ ಎಲ್ಲ ಮಹನೀಯರ ಸಹಕಾರವನ್ನು ಹಾಲುಮತ ಅಧ್ಯಯನ ಪೀಠವು ಸ್ಮರಿಸುತ್ತದೆ.

ಈ ವರ್ಷದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಪುರಸ್ಕೃತರಾದವರಲ್ಲಿ ಚಳ್ಳಕೆರೆ ತಾಲ್ಲೂಕಿನ ಕಲಮರಹಳ್ಳಿಯ ಜನಪದ ಕಥೆಗಾರ ಈರಬಡಪ್ಪನವರು ಒಬ್ಬರು. ಇವರೊಂದಿಗೆ ಹಿರಿಯ ವೈದ್ಯರಾದ ಡಾ. ಆರ್. ಕಾಂತರಾಜು, ಚಳ್ಳಕೆರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎನ್.ಎಸ್.ಎಸ್. ಅಧಿಕಾರಿ ಪ್ರೊ. ಎಂ. ಶಿವಲಿಂಗಪ್ಪ ಹಾಗೂ ಯುವ ಪ್ರಶಸ್ತಿ ಪುರಸ್ಕೃತ ಪಿ. ಕುಮಾರ ಅವರನ್ನು ಈ ದರ್ಭದಲ್ಲಿ ಸನ್ಮಾನಿಸಲಾಗುತ್ತಿದೆ.

ನಮ್ಮ ಆಹ್ವಾನವನ್ನು ಸ್ವೀಕರಿಸಿ ಸಮ್ಮೇಳನಕ್ಕೆ ಆಗಮಿಸಿದ ಎಲ್ಲ ವಿದ್ವಾಂಸರಿಗೆ, ಮಾಧ್ಯಮದ ಮಿತ್ರರಿಗೆ, ವಿಶೇಷ ಆಹ್ವಾನಿತರಿಗೆ ಹಾಗೂ ಇಲ್ಲಿ ಸಮಾವೇಶಗೊಂಡಿರುವ ಸಮಸ್ತರಿಗೆ ಮತ್ತೊಮ್ಮೆ ಸ್ವಾಗತವನ್ನು ಬಯಸಿ ನನ್ನ ಪ್ರಾಸ್ತಾವಿಕ ಮಾತುಗಳನ್ನು ಮುಗಿಸುತ್ತೇನೆ.

## ೧. ಸಮಾಜದ ಬಗ್ಗೆ ಅಭಿಮಾನ ಮತ್ತು ಗೌರವ

ರಾಜ್ಯಮಟ್ಟದ ಎರಡನೆಯ ಹಾಲುಮತ ಸಂಸ್ಕೃತಿ ಸಮ್ಮೇಳನದಲ್ಲಿ ಭಾಗವಹಿಸಿರುವ ಗಣ್ಯ ಮಾನ್ಯರೇ, ವಿದ್ವಾಂಸ ಮಿತ್ರರೇ, ಬಂಧುಗಳೇ ತಮಗೆ ನನ್ನ ಹೃದಯಪೂರ್ವಕ ನಮಸ್ಕಾರಗಳು.

ಹಾಲುಮತ ಸಂಸ್ಕೃತಿ ಸಮ್ಮೇಳನದ ಸರ್ವಾಧ್ಯಕ್ಷರಾಗಬೇಕೆಂದು ಕಳೆದ ಒಂದು ತಿಂಗಳ ಹಿಂದೆ ಕನ್ನಡ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಿಂದ ನನಗೆ ಪತ್ರ ಬಂದಿತು. ನನಗೆ ಆಶ್ಚರ್ಯವೂ ಆಯಿತು. ನಾನು ಒಬ್ಬ ಸಾಮಾನ್ಯ ಪ್ರಾಥಮಿಕ ಶಾಲಾ ಶಿಕ್ಷಕನಾಗಿ ಸೇವೆಯನ್ನು ಸಲ್ಲಿಸಿ ನಿವೃತ್ತನಾದವನು. ಬಿಡುವಿದ್ದಾಗ ಕೆಲವು ಕಥೆ, ಕಾದಂಬರಿ, ನಾಟಕ, ಕವನಗಳನ್ನು ಬರೆದು ಪ್ರಕಟಿಸಿದವನು. ಜೊತೆಗೆ ಸಮಾಜ ಸಂಸ್ಕೃತಿಯ ಬಗ್ಗೆ ಅಷ್ಟಿಷ್ಟು ಓದಿಕೊಂಡವನು. ವಿಶ್ವವಿದ್ಯಾಲಯದಂಥ ಉನ್ನತ ಶಿಕ್ಷಣ ಸಂಸ್ಥೆಯು ನಾನು ಮಾಡಿದ ಸೇವೆಯನ್ನು ಪರಿಗಣಿಸಿ ಸಮ್ಮೇಳನ ಅಧ್ಯಕ್ಷತೆಯ ಉನ್ನತ ಜವಾಬ್ದಾರಿಯನ್ನು ವಹಿಸಿರುವುದು ನನ್ನ ಭಾಗ್ಯವೆಂದು ಭಾವಿಸಿದ್ದೇನೆ. ಸಮ್ಮೇಳನದಲ್ಲಿ ಪಾಲ್ಗೊಳ್ಳಲು ಅವಕಾಶವನ್ನು ನೀಡಿದ ಕನ್ನಡ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಡಾ.ಎ. ಮುರಿಗೆಪ್ಪ ಅವರಿಗೆ, ಕುಲಸಚಿವರಾದ ಶ್ರೀ ಎಸ್.ಎಸ್. ಪೂಜಾರ್ ಅವರಿಗೆ ಹಾಗೂ ಹಾಲುಮತ ಅಧ್ಯಯನ ಪೀಠದ ಸಂಚಾಲಕರಾದ ಡಾ. ಎಫ್.ಟಿ. ಹಳ್ಳಿಕೇರಿ ಅವರಿಗೆ ನಾನು ಕೃತಜ್ಞನಾಗಿದ್ದೇನೆ.

ಕರ್ನಾಟಕ ಜನಪದದಲ್ಲಿ ಬದುಕು ಸಾಗಿಸುತ್ತಿರುವ ಜನರಲ್ಲಿ ಮೂರನೆಯ ಒಂದು ಭಾಗದಷ್ಟು ಕುರುಬ ಜನಸಮುದಾಯವಿರುವುದು ಒಂದು ವಿಶೇಷ. ಇಷ್ಟು ದೊಡ್ಡ ಜನಸಂಖ್ಯೆ ಹೊಂದಿದ್ದರೂ ಪ್ರಗತಿಪಥದತ್ತ ಹೆಜ್ಜೆ ಹಾಕದೇ, ತನ್ನದೇ ಆದ ನೀತಿ, ಸಂಸ್ಕೃತಿ, ಆಚಾರ ವಿಚಾರದ ಚೌಕಟ್ಟಿನಲ್ಲಿ ಸುಸಂಪನ್ನರೆಂದು ಬಾಳಿಕೊಂಡದ್ದು ಏಕೆ? ಹೇಗೆ? ಎನ್ನುವ ವಿಚಾರ ವಿಮರ್ಶಿಸಿ ಮೂಲವನ್ನು ಕಾಣುವ ಉದ್ದೇಶವನ್ನಿಟ್ಟುಕೊಂಡು ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಹಾಲುಮತ ಅಧ್ಯಯನ ಪೀಠ ೨೦೦೭ ರಲ್ಲಿ ಸ್ಥಾಪನೆಗೊಂಡು ತನ್ನ ಕರ್ತವ್ಯದ ಕಾರ್ಯಕ್ಷೇತ್ರವನ್ನು ನಾಡಿನ ತುಂಬ ಪ್ರಸಾರ ಮಾಡುವ ಕಾಯಕದಲ್ಲಿ ಪ್ರಯತ್ನಿಸುತ್ತಿರುವುದು ತಮಗೆಲ್ಲ ತಿಳಿದ ಸಂಗತಿಯಾಗಿದೆ. ಈ ದೊಡ್ಡ ಸಮುದಾಯಕ್ಕೆ ದಿವ್ಯ ಇತಿಹಾಸವಿದೆ. ಸಾಹಿತ್ಯವಿದೆ. ತನ್ನದೇ ಆದ ಸಂಪ್ರದಾಯ, ಆಚಾರ, ವಿಚಾರ, ಧಾರ್ಮಿಕ ಕಟ್ಟಳೆಗಳನ್ನು ಉಳಿಸಿಕೊಂಡು ಬಂದಿದೆ. ನಾಡು ಅಷ್ಟೇ ಅಲ್ಲ, ದೇಶದ ತುಂಬ ಪಸರಿಸಿಕೊಂಡು ಆಯಾ ಭಾಷೆಗಳಲ್ಲಿ ಸಮೀಕರಿಸಿಕೊಂಡು ಸುಸಂಪನ್ನತೆಯನ್ನು ಉಳಿಸಿಕೊಂಡು ಬಂದ ಈ ಸಮಾಜದ ಬಗ್ಗೆ ನಮಗೆಲ್ಲ ಅಭಿಮಾನ ಮತ್ತು ಗೌರವವಿರಬೇಕು. ಹಿಂದೂ ಧರ್ಮವನ್ನು ಸಂಸ್ಕೃತಿಯನ್ನು ದಕ್ಷಿಣ ಭಾರತದಲ್ಲಿ ಉಳಿಸಿ ಬೆಳೆಸಿಕೊಂಡು ಬಂದ ಕೀರ್ತಿ ಕುರುಬ ಸಮಾಜಕ್ಕೆ ಸಲ್ಲುತ್ತದೆ. ಏಕೆಂದರೆ ೧೪ನೆಯ ಶತಮಾನದಲ್ಲಿ ಹಂಪೆಯನ್ನು ತನ್ನ ಕಾರ್ಯಕ್ಷೇತ್ರವನ್ನು ಮಾಡಿಕೊಂಡು ತಲೆಯೆತ್ತಿ ನಿಂದ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದವರು ಸಂಗಮವಂಶದ ಹಕ್ಕ, ಬುಕ್ಕ, ಮಾರಪ್ಪ, ಮುದ್ದಪ್ಪ ಸಹೋದರರು. ಇಂಥ ಐತಿಹಾಸಿಕ ಕೇಂದ್ರದಲ್ಲಿಯೇ ಕನ್ನಡ ವಿಶ್ವವಿದ್ಯಾಲಯ ಸ್ಥಾಪಿತಗೊಂಡಿರುವುದು, ಹಾಲುಮತ ಅಧ್ಯಯನ ಪೀಠ ಆರಂಭವಾಗಿರುವುದು ಔಚಿತ್ಯಪೂರ್ಣವೆಂದೇ ಹೇಳಬೇಕು.

ಈ ಸಂದರ್ಭದಲ್ಲಿ ಕುರುಬ ಸಮುದಾಯದ ವ್ಯಾಪ್ತಿಯ ಬಗೆಗೆ ಹೇಳಿಕೊಂಡರೆ ತಪ್ಪೇನಿಲ್ಲ. ಅಲ್ಲಲ್ಲಿ ಚದುರಿ ಹೋಗಿರುವ ನಮ್ಮವರ ಬಗೆಗೆ ನಮಗೆ ತಿಳುವಳಿಕೆ ಇರುವುದು ಅವಶ್ಯವಿದೆ. ರಸ್ಲೆ, ಹಟ್ಟನ್ ಮೊದಲಾದ ವಿದ್ವಾಂಸರು ಭಾರತದ ಬೇರೆ ಬೇರೆ ಪ್ರಾಂತಗಳಲ್ಲಿರುವ ಕುರುಬರನ್ನು ಭಾರತೀಯ ಆರ್ಯ ಹಾಗೂ ಆಗ್ನೇಯ ಏಷಿಯಾ ಮೂಲದವರೆಂದು ಎರಡು ವಿಧವಾಗಿ ವಿಂಗಡಿಸುತ್ತಾರೆ. ಅವರಿಬ್ಬರ ವಿಚಾರಗಳ ಪ್ರಕಾರ ಮೊದಲ ವರ್ಗದ ಕುರುಬರು ದಕ್ಷಿಣದಲ್ಲಿ ನೆಲೆಸಿದರೂ ಅವರ ಮೂಲ ಉದ್ದೇಶ ಪಶುಪಾಲನೆ, ಆರ್ಥಿಕ ಸ್ಥಿತಿಗತಿ, ದೇಹರಚನೆ ಭಾರತೀಯರನ್ನೇ ಹೋಲುತ್ತವೆ ಎಂದಿದ್ದಾರೆ. ಅಂಥ ಸಂಸ್ಕೃತಿಯನ್ನು ರೂಢಿಸಿಕೊಂಡು ಈ ಸಮುದಾಯ ಭಾರತ ದೇಶದ ಸಮಸ್ತ ರಾಜ್ಯಗಳಲ್ಲಿ ವ್ಯಾಪಿಸಿಕೊಂಡಿದೆ. ಅವುಗಳ ವಿವರಗಳು ಹೀಗಿವೆ:

| | |
|---|---|
| ಕರ್ನಾಟಕ | ಕುರುಬ, ಹಾಲುಮತ, ರಾಜಗೊಂಡ |
| ಆಂಧ್ರಪ್ರದೇಶ | ಗೊಲ್ಲವಾಡು, ಕುರುಮವಾರು, ಕುರುವನ್ |
| ಅಸ್ಸಾಂ | ಗೊಂಡ, ಧನವಾಡ |
| ಗುಜರಾತ | ಗಡಾರಿ, ಧನಗರ್ |
| ಬಿಹಾರ್ | ಗಡೇರಿಯಾ, ಧನಗರ್ |
| ಹರಿಯಾಣ | ಬಘೇಲರು, ಬಿಲ್ತಾ, ಹರನ್ವಾಲ್, ಕನಾಲಿಯಾ, ಪೊಡ್ನುವಾಲ್ |
| ಹಿಮಾಚಲಪ್ರದೇಶ | ಗಡೇರಿಯಾ |
| ಜಮ್ಮು ಕಾಶ್ಮೀರ | ಗಡೇರಿಯಾ |
| ಕೇರಳ | ರಾಜಗೊಂಡ, ಗೋದಾರಿ, ಹೆಗ್ಡೆ, ಮಧ್ಯಗೊಂಡ, ಗೊಂಡಿ |
| ಮಧ್ಯಪ್ರದೇಶ | ಧನಗರ್, ಬಾಂಗ್ಲಾ, ಗಾಂಡ್ರಿ, ಹಟಗಾರ, ಪಾಲ್, ಕುರಿಯರ್ |
| ಮಹಾರಾಷ್ಟ್ರ | ಧನಗರ್, ಕುರುಬರ್, ಗಡಾರಿಯಾ |
| ಮೇಘಾಲಯ | ಕುಮಾರ್, ರುದ್ರಪಾಲ್, ಗೊಂಡ |
| ಓಡಿಸ್ಸಾ | ಕುರುವನ್, ಕುರುಂಬ, ಮಧ್ಯಗೊಂಡ |
| ಪಂಜಾಬ | ಗಡಾರಿಯ, ಗದಾರಿಯ |

| | |
|---|---|
| ರಾಜಸ್ಥಾನ | ಗಡಾರಿಯಾ, ಚಾಂಡಾಲಿಯ, ಗಾವಳ, ಕಬೀರಿಯ, ಕುಮರ್ |
| ತಮಿಳುನಾಡು | ಕುರುಂಬನ್, ಗೊಂಡ ಹೆಗ್ಡೆ |
| ತ್ರಿಪುರಾ | ಗೊಂಡ, ಕುರಾರಿಯರ್ |
| ಉತ್ತರಪ್ರದೇಶ | ಗಡ್ಡಿ, ಗಡಾರಿಯಾ, ಪಾಲ್ |
| ಪಶ್ಚಿಮ ಬಂಗಾಳ | ಗೊಂಡ, ಗುಡೇರಿಯಾ, ಪಾಲ್ |
| ಚಂಧೀಗಡ | ಗಡಾಡಿ, ಗಡ್ಡಿ |
| ದೆಹಲಿ | ಗಡ್ಡಿ, ಗಾರಿ, ಕುಮಾರ್ |
| ಗೋವಾ, ದಮನ್ | ದನಗರ್ |
| ಪಾಂಡಿಚೇರಿ | ಕುರುವ, ರಾಜಗೊಂಡ |

ಅಲ್ಲದೇ ಛೋಟಾನಾಗ್ಪುರ, ಶೋಣೀನದಿ ತೀರದಲ್ಲಿ ಹಾಗೂ ರಾಜಮಹಲ್ ಗುಡ್ಡದಲ್ಲಿ ಕುರು ಎಂಬ ಹೆಸರಿದೆ. ಮಣಿಪುರ, ನಾಗಲ್ಯಾಂಡ, ಸಿಕ್ಕಿಂ, ಅಂಡಮಾನ್, ದಾದರ, ನಗರವೇಲಿ, ಲಕ್ಷದ್ವೀಪ, ಮಿಜೋರಾಂಗಳಲ್ಲೂ ಕೂಡಾ ಇದ್ದುದರಿಂದ ಇವರು ಭಾರತದ ಮೂಲ ನಿವಾಸಿಗಳು ಎಂಬುದು ಸ್ಪಷ್ಟವಾಗುತ್ತದೆ. ಅಂದರೆ ಇಷ್ಟು ವಿಸ್ತೃತವಾಗಿ ಹರಡಿಕೊಂಡಿರುವ ಈ ಜನಾಂಗ ಮಾನವ ಬದುಕಿನ ವಿಕಾಸ ಕಾಲದಿಂದಲೂ ಬದುಕು ಸಾಗಿಸಿದ ದೊಡ್ಡ ಸಮುದಾಯ ಇದಾಗಿದೆ.

ಕುರುಬ ಈ ಹೆಸರಿನ ನಿಷ್ಪತ್ತಿ ಉದ್ಯೋಗವಾಚಕಕ್ಕಿಂತಲೂ ಬೇರೆಯಾಗಿಯೇ ಬಳಕೆಯಾದುದು ತಿಳಿದುಬರುತ್ತದೆ. ಕು ಎಂದರೆ ಬೆಟ್ಟ, ಎತ್ತರ ಪ್ರದೇಶ ಎಂದು ತಮಿಳು, ತೆಲುಗು, ಕನ್ನಡ ದ್ರಾವಿಡ ಭಾಷೆಗಳಲ್ಲಿ ಬಳಕೆಯಲ್ಲಿದೆ. ಈ ಜನ ತನ್ನ ಕುರಿ ಹಿಂಡುಗಳನ್ನು ಮೇಯಿಸಲು ಹುಲ್ಲುಗಾವಲಿಗಾಗಿಯೋ ಅಥವಾ ಮಳೆ ಗಾಳಿಗಳಿಂದ ತಪ್ಪಿಸಿಕೊಳ್ಳಲು ಗುಡ್ಡ ಬೆಟ್ಟಗಳಲ್ಲಿ ವಾಸವಾಗಹತ್ತಿದರು. ಅದಕ್ಕಾಗಿ ಈ ಪಂಗಡಕ್ಕೆ ಆ ಹೆಸರು ಬಂದಿರಬೇಕು. ಆದರೆ ಇಲ್ಲಿ ಒಂದು ವಿಚಾರ ತಿಳಿದು ಬರುವುದೇನೆಂದರೆ, ಕುರುಬರು ಆ ಪ್ರಾಣಿಗಳ ಪೋಷಕರೇ ವಿನಹ ಅವುಗಳನ್ನು ಕೊಂದು ತಿಂದು ಬದುಕಿದವರಲ್ಲ ಎಂಬುದು ಇತಿಹಾಸದಿಂದ ತಿಳಿದು ಬರುತ್ತದೆ. ಕಾವ್ಯ ಪುರಾಣ ಕಥೆ ಹಾಗೂ ಇತರೆ ದಾಖಲೆಗಳಲ್ಲಿಯೂ ಕುರುಬರ ಆಹಾರ ಮಾಂಸಹಾರಿಗಳೆಂದು ಹೇಳಿಲ್ಲ. ಗೋರಕ್ಷಕ ಆರ್ಯರು ಗೋಸಂರಕ್ಷಣೆಗೆ ಪ್ರಾಧಾನ್ಯತೆ ಕೊಟ್ಟಂತೆ ಕುರುಬರು ಕುರಿಯನ್ನು ಲಕ್ಷ್ಮಿಯೆಂದು ತಿಳಿದುಕೊಂಡಿರುವರು. ಹಾಲು ಶುಭ್ರತೆಯ ಸಂಕೇತ, ಕುರಿ ಮುಗ್ಧತೆಯ ಸಂಕೇತ ಹಾಗೂ ಹಾಲು ಮಾರಿ ಜೀವನ ಸಾಗಿಸುವ ವೃತ್ತಿಯಾಗಿದ್ದರಿಂದ ಹಾಲುಮತ ಎಂಬ ಅಭಿದಾನ ಇವರಿಗೆ ಬಂದಿರಲಿಕ್ಕೆ ಸಾಕು. ಹಾಲು ಕೆಟ್ಟರೂ ಕೆಟಬಹುದು, ಆದರೆ ಹಾಲುಮತ ಕೆಟ್ಟಿಲ್ಲ ಎನ್ನುವ ಮಾತು ಜನಜನಿತವಾಗಿದೆ. ಆ ಸಂಸ್ಕಾರ ಬಲವಿದ್ದುದರಿಂದ ವ್ಯಾಪಾರ, ಉದ್ಯೋಗ, ಉದ್ಯಮಗಳನ್ನು ಆರಂಭ ಮಾಡುವಾಗ ಕುರುಬರಿಂದಲೇ ಬೋಣಿಗೆ ಮಾಡಿಸುವ ಪರಂಪರೆ ಇಂದಿಗೂ ಚಾಲ್ತಿಯಲ್ಲಿರುವುದನ್ನು ಪ್ರಸ್ತುತ ಸಮಾಜದಲ್ಲಿಯೂ ಕಾಣುತ್ತೇವೆ. ಸೂಫಿ ಸಂತ ಶರಣರ ಹೆಸರಿನಲ್ಲಿ ಇತರ ಸಮುದಾಯದವರು ಮಠ-ಮಂದಿರಗಳನ್ನು ನಿರ್ಮಿಸಿಕೊಂಡು ಸಮಾಜದ ಸ್ವಾಸ್ಥ್ಯವನ್ನು ಭದ್ರಪಡಿಸಿದಂತೆ ಕುರುಬರು ಸಹ ಸಮಾಜದ ನೀತಿ-ನಿಯಮ ಸಂಸ್ಕೃತಿ ರಕ್ಷಣೆಗಾಗಿ ಗುರುಸ್ವಾಮಿಗಳನ್ನು ನಿಯಮಿಸಿದ್ದನ್ನು ಕಾಣುತ್ತೇವೆ. ಕುರುಬರ ಗುರುಪರಂಪರೆ ವಿಶಿಷ್ಟವಾದುದು. ಈ ಗುರುಸ್ವಾಮಿಗಳಿಗೆ ಒಡೆಯರು, ಅಯ್ನೋರು, ಸ್ವಾಮಿಗಳು ಎಂದು ಇತ್ಯಾದಿಯಾಗಿ ಕರೆಯುತ್ತಾರೆ. ಇಂಥ ವ್ಯವಸ್ಥೆಯನ್ನು ಮಾಡಿಕೊಂಡು ಭೇದ-ಭಾವವಿಲ್ಲದೇ ನಡೆದು ಬಂದ ಸಮಾಜ ಇದಾಗಿದೆ.

ಇಂದು ಮತ್ತು ನಾಳೆ ನಡೆಯುವ ಸಮ್ಮೇಳನದಲ್ಲಿ ಕುರುಬರ ಉಪಪಂಗಡಗಳ ಕುರಿತು ಇಲ್ಲಿ ಚರ್ಚೆ-ಸಂವಾದಗಳು ನಡೆಯುತ್ತಿರುವುದು ಅತ್ಯಂತ ಸ್ತುತ್ಯಾರ್ಹವಾದ ಕೆಲಸ. ಕುರುಬರ ಒಳಪಂಗಡಗಳೆಷ್ಟು? ಅವುಗಳ ವಿಶಿಷ್ಟತೆಗಳೇನು? ಎಂಬುದರ ಬಗೆಗೆ ನಮಗೆ ಸ್ಪಷ್ಟವಾದ ಮಾಹಿತಿಗಳಿಲ್ಲ. ಅಲ್ಲಲ್ಲಿ ಕೆಲವು ವಿದ್ವಾಂಸರು ಚರ್ಚೆ ಮಾಡಿದ್ದರೂ ಪೂರ್ಣಪ್ರಮಾಣದಲ್ಲಿ ಅಧ್ಯಯನ ನಡೆದಿಲ್ಲ. ಈ ಹಿನ್ನೆಲೆಯಲ್ಲಿ ಇಂಥ ವಿಚಾರಗೋಷ್ಠಿಗಳಿಗೆ ಐತಿಹಾಸಿಕ ಮಹತ್ವ ಬರುತ್ತದೆ. ಬದುಕಿನ ಅಗತ್ಯತೆಗೆ ಅನುಗುಣವಾಗಿ ಕುರುಬರಲ್ಲಿ ಕೆಲವು ಉಪಪಂಗಡಗಳು ಹುಟ್ಟಿರಲಿಕ್ಕೂ ಸಾಕು. ಇನ್ನು ಕೆಲವು ವೃತ್ತಿ ಆಧರಿಸಿ ಬಂದಂಥವುಗಳಾಗಿವೆ. ಜೇನುಕುರುಬರ, ಕಾಡುಕುರುಬ, ಸುಡುಗಾಡು ಸಿದ್ಧರಂಥ

ಉಪಪಂಗಡಗಳು ಪರಿಸ್ಥಿತಿ ಪರಿಸರದಿಂದ ಹುಟ್ಟಿಕೊಂಡಂಥವುಗಳು. ಈ ಎಲ್ಲ ಸಮುದಾಯಕ್ಕೆ ಶಿಕ್ಷಣ, ಉದ್ಯೋಗವನ್ನು ಕೊಡಬೇಕು ಅಂದಾಗ ಮಾತ್ರ ಇವರ ಅಭಿವೃದ್ಧಿಯನ್ನು ಕಾಣಲು ಸಾಧ್ಯವಾಗುತ್ತದೆ. ಅಂಥ ಸಲಹೆ ಸೂಚನೆಗಳನ್ನು ವಿದ್ವಾಂಸರು ನೀಡಬೇಕು.

ಸಾಮಾನ್ಯವಾಗಿ ಕುರುಬರಲ್ಲಿ ಉಣ್ಣೆಕಂಕಣ ಮತ್ತು ಹತ್ತಿಕಂಕಣ ಕುರುಬರು ಎಂದು ಪ್ರಮುಖವಾಗಿ ಎರಡು ಪಂಗಡಗಳು ಇರುವುದನ್ನು ನಾವು ಕಾಣುತ್ತೇವೆ. ಈ ಪಂಗಡಗಳ ಕುರಿತು ಹಾಲುಮತ ಪುರಣಾಗಳು ಸ್ವಾರಸ್ಯಕರವಾದ ವಿಷಯಗಳನ್ನು ಹೇಳುತ್ತೇವೆ. ಈ ವಿಷಯಗಳು ಇಲ್ಲಿ ನೆರೆದಿರುವ ತಮಗೆಲ್ಲ ತಿಳಿದಿರುವ ಸಂಗತಿಗಳೆಂದೇ ಭಾವಿಸಿದ್ದೇನೆ. ಕುರುಬರ ಮೂಲ ಪುರುಷ ಮುದ್ದಪ್ಪ-ಮುದ್ದವ್ವ. ಇವರಿಗೆ ಆದಿಗೊಂಡ ಅನಂತಗೊಂಡ, ಸಿದ್ಧಗೊಂಡ ಪದ್ಮಗೊಂಡ ಎಂಬ ಮಕ್ಕಳಿದ್ದರು. ಇವರಲ್ಲಿ ಕೊನೆಯವನಾದ ಪದ್ಮಗೊಂಡ ಮನೆಗೆಲಸ ಮಾಡದೇ ಉಂಡಾಡಿಯಂತಿದ್ದನು. ಹೀಗಾಗಿ ಆತನಿಗೆ ಉಂಡಾಡಿ ಪದ್ಮಣ್ಣ ಎಂದೇ ಕರೆಯಲಾಗಿದೆ. ಒಂದು ದಿನ ಹೊಲದಲ್ಲಿ ಕುರಿ ಕಾಯಕದಲ್ಲಿ ನಿರತನಾಗಿದ್ದನು. ಕಾಡಿನ ಸಂಚಾರಿಯಾಗಿರುವಾಗ ಯೋಗಯೋಗದಿಂದ ಜಿಂಕಾದೇವಿ ಎಂಬ ಯುವತಿಯೊಂದಿಗೆ ಮದುವೆಯಾದನ. ಶಿವಪಾರ್ವತಿಯರ ಸಮ್ಮುಖದಲ್ಲಿಯೇ ಈ ಮದುವೆ ನಡೆಯುವಾಗ ಕೈಗೆ ಕಂಕಣ ಕಟ್ಟಲು ಕುರಿಯ ಮೇಲಿನ ಉಣ್ಣೆಯನ್ನು ಬಳಸಿಕೊಂಡರು. ಅಂದಿನಿಂದ ಉಣ್ಣೆಯ ಕಂಕಣದವರೆಂದೂ, ಮೊದಲಿನ ಹೆಂಡತಿಯಿಂದ ಜನಿಸಿದ ಮಕ್ಕಳು ಹತ್ತಿ ಕಂಕಣದವರೆಂದು ಕರೆಯಲಾಯಿತು. ಅಂದಿನಿಂದ ಕುರುಬರಲ್ಲಿ ಈ ಎರಡು ಪಂಗಡಗಳು ಹುಟ್ಟಿಕೊಂಡು ಬಂದವು.

ಇನ್ನು ಉಳಿದ ಜನಾಂಗದವರು ತಮ್ಮ ಮೂಲಗಳನ್ನು ಗೋತ್ರ ಬಗೆ ಪಂಗಡಗಳ ಮೂಲಕ ವಿಂಗಡಿಸಿ ಹೇಳಿಕೊಳ್ಳುವಂತೆ ಕುರುಬರು ಅನೇಕ ಬೆಡಗುಗಳನ್ನು ಅನುಸರಿಸುತ್ತ ಬಂದಿದ್ದಾರೆ. ಅಂದಾಜು ೫೨೫ ಬೆಡಗುಗಳನ್ನು ರೂಪಿಸಿಕೊಂಡು ನಡೆಯುತ್ತಿರುವುದು ರೂಢಿಯಲ್ಲಿದೆ. ಈ ರೀತಿಯ ಕಟ್ಟಳೆಯನ್ನು ಅನುಸರಿಸುವುದು ಸೂಕ್ತ.

ಇಂದಿನ ಆಧುನಿಕ ಯುಗದಲ್ಲಿ ಸಮಾಜದ ರೀತಿನೀತಿಗಳಲ್ಲಿ ಬಹಳಷ್ಟು ಮಾರ್ಪಾಟಾಗಿವೆ. ವಿಶ್ವವೇ ಸಮೀಪದ ಮನೆಯಂಗಳವಾಗಿದೆ. ಬದಲಾವಣೆ ಸಹಜ ಕ್ರಿಯೆಯಾಗಿದೆ. ಅದನ್ನು ತಡೆಯುವುದು ಅಸಾಧ್ಯವಾಗಿದೆ. ಆದ್ದರಿಂದ ಕುರುಬ ಸಮಾಜವು ಅಂಥ ಬದಲಾವಣೆಗಳಿಗೆ ಸ್ಪಂಧಿಸುವುದು ಅನಿವಾರ್ಯವಾಗಿದೆ.

ಈ ಸಮಾಜದಲ್ಲಿ ಅನೇಕ ಸಾಧಕರು ಪುಣ್ಯಪುರುಷರು, ಸಮಾಜ ಧುರೀಣರು, ಹೋರಾಟಗಾರರು, ಸಂಘಟಕರು, ರಾಜಕೀಯ ಪ್ರತಿನಿಧಿಗಳು ಆಧುನಿಕ ಕರ್ನಾಟಕದ ಸಂದರ್ಭದಲ್ಲಿ ಆಗಿಹೋಗಿದ್ದಾರೆ. ಅಂಥವರಲ್ಲಿ ಕೋಲಾರದ ಗಟ್ಟಿಹಳ್ಳಿ ಅಂಜನಪ್ಪ ಸ್ವಾಮಿಗಳು, ಮುಗುಳಖೋಡದ ಯಲ್ಲಾಲಿಂಗ ಮಹಾರಾಜರು, ಇಟಗಿ ಭೀಮಾಂಬಿಕೆ, ಕಣಗಿನಹಾಳದ ಸಿದ್ಧನಗೌಡ ಪಾಟೀಲ, ಹೊಸಪೇಟೆಯ ಡಾ. ಆರ್. ನಾಗನಗೌಡ, ಕೊಲ್ಲೂರು ಮಲ್ಲಪ್ಪ, ಕೂರಗುಂದ ನಿಂಗಪ್ಪ, ಕರಿಯಪ್ಪ ಸಂಗೂರ, ಕರಿಯಪ್ಪ ಹುಚ್ಚಣ್ಣವರ ಮೊದಲಾದವರನ್ನು ಇಲ್ಲಿ ಸೇರಿಸಬಹುದು. ಅಂಥ ಮಹನೀಯರ ಜೀವನ ಸಾಧನೆಗಳನ್ನು ಪರಿಚಯಿಸುವ ಕಿರುಹೊತ್ತಿಗೆಗಳನ್ನು ಪ್ರಕಟಿಸಿ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಈಗಲಾದರೂ ಆರಂಭಿಸಬೇಕಾಗಿದೆ. ಅಂಥ ಕೆಲಸವನ್ನು ಹಾಲುಮತ ಅಧ್ಯಯನ ಪೀಠ ಮಾಡಲಿ ಎಂಬುದು ಎಲ್ಲರ ಆಶಯವಾಗಿದೆ.

ಹಾಲುಮತ ಸಾಹಿತ್ಯ ಸಂಸ್ಕೃತಿ ಚರಿತ್ರೆ ಕುರಿತು ಇಲ್ಲಿಯವರೆಗೆ ನಡೆದ ಅಧ್ಯಯನಗಳನ್ನು ಅವಲೋಕಿಸಿದಾಗ ಮಾಡಬೇಕಾದ ಕಾರ್ಯ ಸಾಕಷ್ಟಿದೆ ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತದೆ. ವಿ.ಆರ್. ಹನುಮಂತಯ್ಯ ಅವರು ಭಾರತ ಕುರುಬರ ಚರಿತ್ರೆ, ಶಂಬಾ ಜೋಶಿ ಅವರ ಹಾಲುಮತ ದರ್ಶನ, ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ, ಶಿವಾನಂದ ಗುಬ್ಬಣ್ಣವರ ಕರ್ನಾಟಕದ ಕುರುಬರು ಮೊದಲಾದ ಗ್ರಂಥಗಳು ಕರುಬರ ಸಮಗ್ರ ಚರಿತ್ರೆಯನ್ನು ಪರಿಚಯಿಸಿಕೊಡುವಲ್ಲಿ ಯಶಸ್ವಿಯಾಗಿವೆ. ಆದರೂ ಈ ಕ್ಷೇತ್ರದಲ್ಲಿ ಮಾಡಬೇಕಾದ ಸಂಶೋಧನೆ ಸಾಕಷ್ಟಿದೆ. ಇಂಗ್ಲಿಷಿನಲ್ಲಿ ಈ ಬಗ್ಗೆ ಅಧ್ಯಯನಗಳು ನಡೆದಿವೆ ಎಂಬುದನ್ನು ಕೇಳಿದ್ದೇನೆ. ಆ ಎಲ್ಲ ಗ್ರಂಥಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಬೇಕು, ಜಾನಪದದಲ್ಲಿರುವ ಡೊಳ್ಳಿನ ಹಾಡುಗಳನ್ನು ಸಂಗ್ರಹಿಸಿ ಅಧ್ಯಯನ ಮಾಡಿದಾಗ ಕುರುಬರಿಗೆ ಸಂಬಂಧಿಸಿದ ಅನೇಕ ಹೊಸ ವಿಷಯಗಳು ತಿಳಿದು ಬರಬಹುದು. ಕರ್ನಾಟಕದಾದ್ಯಂತ ಕುರುಬರ ಸಂಸ್ಕೃತಿಯನ್ನು ಬಿಂಬಿಸುವ ಮಠ-ಮಂದಿರಗಳಿವೆ. ಆ ಮಠ-ಮಂದಿರಗಳ ಸಾಂಸ್ಕೃತಿಕ ಚರಿತ್ರೆಯನ್ನು ರಚಿಸುವುದು, ದೇವಣಸಿದ್ದೇಶ್ವರ, ಸಿದ್ಧರಾಮೇಶ್ವರ, ಅಮೋಘಸಿದ್ದೇಶ್ವರ,

ಶಾಂತಮುತ್ತಯ್ಯ, ಬೀರಪ್ಪ, ಮೈಲಾರ, ಓರಗಲ್ಲಮ್ಮ, ಮರುಳಸಿದ್ದೇಶ್ವರ ಮೊದಲಾದವರ ಕುರಿತು ಸಮಗ್ರ ಮಾಹಿತಿಯನ್ನು ಸಂಗ್ರಹಿಸಿ ಜನರಿಗೆ ತಲುಪಿಸುವ ಕೆಲಸವಾಗಬೇಕು. ಕುರುಬರ ಸಂಸ್ಕೃತಿಯನ್ನು ಪರಿಚಯಿಸುವಂಥ ತರಬೇತಿ ಶಿಬಿರಗಳನ್ನು ನಾಡಿನ ತುಂಬ ಆಯೋಜಿಸಬೇಕು. ಮೌಖಿಕ ಪರಂಪರೆಯಲ್ಲಿರುವ ಕಾವ್ಯಪುರಾಣ, ಕಥೆ ಹಾಡು, ಗಾದೆಮಾತುಗಳು, ನಂಬಿಕೆ ಇತ್ಯಾದಿಗಳನ್ನು ದೃಶ್ಯ ಮತ್ತು ಶ್ರವ್ಯ ಮಾಧ್ಯಮದ ಮೂಲಕ ಸಂಗ್ರಹಿಸಿ ಮುಂದಿನ ಪೀಳಿಗೆಗೆ ತಲುಪಿಸುವ ಕಾರ್ಯವೂ ಆಗಬೇಕಾಗಿದೆ. ಇವು ನನಗೆ ತಿಳಿದ ಕೆಲವು ವಿಷಯಗಳು. ಇಲ್ಲಿ ಸಮಾವೇಶಗೊಂಡಿರುವ ವಿದ್ವಾಂಸರು, ಚಿಂತಕರು ಅನೇಕ ಉಪಯುಕ್ತವಾದ ಸಲಹೆ ಸೂಚನೆಗಳನ್ನು ನೀಡಲಿದ್ದಾರೆ.

ಕೊನೆಯದಾಗಿ ಒಂದು ಮಾತು, ಕುರುಬರ ಸಂಸ್ಕೃತಿಯ ಶೋಧ ಹಾಗೂ ಪ್ರಸಾರಕ್ಕಾಗಿ ಈಗಲಾದರೂ ಅಧ್ಯಯನ ಪೀಠವು ಆರಂಭಗೊಂಡಿರುವುದು ಸಂತಸದ ವಿಷಯ. ಆ ಪೀಠಕ್ಕೆ ಬೇಕಾದ ಸಂಪನ್ಮೂಲವನ್ನು ಕ್ರೋಢೀಕರಿಸುವಲ್ಲಿ ಸಮಾಜದ ದಾನಿಗಳು ನೆರವಾಗಬೇಕು. ಅಂದಾಗ ಮಾತ್ರ ಪೀಠವು ಅನೇಕ ರಚನಾತ್ಮಕ ಯೋಜನೆಗಳನ್ನು ರೂಪಿಸಲು ಅನುಕೂಲವಾಗುತ್ತದೆ. ಇಂಥ ಕೆಲವು ಯೋಜನೆಗಳನ್ನು ತಮ್ಮೊಂದಿಗೆ ಹಂಚಿಕೊಳ್ಳಲು ಅವಕಾಶ ಮಾಡಿಕೊಟ್ಟ ಕನ್ನಡ ವಿಶ್ವವಿದ್ಯಾಲಯದ ಹಾಲುಮತ ಅಧ್ಯಯನ ಪೀಠ ಹಾಗೂ ಚಳ್ಳಕೇರಿಯ ಶ್ರೀ ಕನಕ ನೌಕರರ ಕ್ಷೇಮಾಭಿವೃದ್ಧಿ ಸಂಘದ ಎಲ್ಲ ಪದಾಧಿಕಾರಿಗಳಿಗೆ ಮತ್ತೊಮ್ಮೆ ಧನ್ಯವಾದಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

ನಮಸ್ಕಾರ.

## ಭಾಗ ಎರಡು - ಕುರುಬರ ಒಳಪಂಗಡಗಳು:

## ೩. ಕಾಡು ಕುರುಬರು

**ಪೀಠಿಕೆ:** ಇಂದು ಏನೆಲ್ಲಾ ಆಧುನಿಕ ಜ್ಞಾನವನ್ನು ಮಾನವ ಅರಿತವನಾಗಿದ್ದಾನೆ. ತಾನಿರುವ ಭೂಮಿಯನ್ನು ಮಾತ್ರವಲ್ಲದೆ, ಸೌರವ್ಯೂಹದಲ್ಲಿ ಇರುವ ಭೂಮಿಯ ಉಗ್ರಹವಾದ ಚಂದ್ರನಲ್ಲಿಗೆ ಹೋಗಿ ಬಂದಿದ್ದಾನೆ. ಹಾಗೆಯೇ ಮಂಗಳ ಗ್ರಹವನ್ನು ಅಧ್ಯಯನ ಮಾಡುವ ಸಲುವಾಗಿ ವಿಶ್ವದ ವಿಜ್ಞಾನಿಗಳೇ ಒಂದಾಗಿ ಕಾರ್ಯನಿರತರಾಗಿದ್ದಾರೆ. ಈ ಕೆಲವು ಸಂಗತಿಗಳು ಮಾನವದಲ್ಲಿ ಇರುವ ಅಗಾದ ಪ್ರತಿಭೆಯ ವಿರಾಟರೂಪವನ್ನು ಮನವರಿಕೆ ಮಾಡಿಕೊಡುತ್ತವೆ. ಆದರೆ ವಿಶ್ವದ ಸೃಷ್ಟಿಯನ್ನು ಕುರಿತು ಒಂದು ಊಹಾತ್ಮಕ ಸಿದ್ಧಾಂತವನ್ನು ನಂಬಿರುವುದು ಸರಿಯಾದರೂ ಅದೇ ಅಂತಿಮ ಸತ್ಯ ಎಂಬ ವಾದವೆಂದು ಹೇಳಲು ಬರುವುದಿಲ್ಲ. ಆ ಸತ್ಯವನ್ನು ಸಾಬೀತು ಪಡಿಸಿಕೊಳ್ಳುವ ಸಲುವಾಗಿ ೨೦೦೮ ರಲ್ಲಿ Big Bang Theory ಎಂಬ ಹೆಸರಿನಲ್ಲಿ ಈ ಸೌರ್ಯಮಂಡಲದ ಸೃಷ್ಟಿಯನ್ನು ಅರಿಯುವ ಸಲುವಾಗಿ ಭೂಮಿಯ ಆಳದಲ್ಲಿ ಒಂದು ಪ್ರಯೋಗಾಲಯವನ್ನು ಸೃಷ್ಟಿಸಿ ಅಂತಹ ಪ್ರಯತ್ನವೊಂದನ್ನು ಮಾಡಲಾಗಿತ್ತು. ಈ ಸಂಬಂಧ ಜಗತ್ತಿನಾದ್ಯಂತ ಕಾರ್ಯನಿರತರಾಗಿ ಶ್ರಮಿಸಿದ್ದಾರೆ. ಅದರ ಫಲಿತಾಂಶ ಮಾತ್ರ ಇನ್ನು ತಿಳಿಯಬೇಕಾಗಿದೆ. ಇದಕ್ಕಾಗಿ ಖರ್ಚಾದ ಮೊತ್ತವು ದುಬಾರಿಯಾಗಿತ್ತು.

ಮೇಲಿನ ಸಂಗತಿಯನ್ನು ವಿವರಿಸುವ ಮೂಲಕ ಮಾನವನ ಮಿತಿ ಏನು ಎಂಬುದನ್ನು ಅರಿತುಕೊಳ್ಳುವುದೇ ಆಗಿದೆ. ಹಲವಾರು ಸಂದರ್ಭಗಳಲ್ಲಿ ಊಹೆಯ ಮೂಲಕವಷ್ಟೆ ತನ್ನ ಅನುಮಾನ ಅಥವಾ ಸಮಸ್ಯೆಗಳಿಗೆ ಪರಿಹಾರ ಇಲ್ಲವೇ ಸಮಾಧಾನವನ್ನು

ತಂದುಕೊಳ್ಳಬೇಕಾಗುತ್ತದೆ. ಪ್ರಸ್ತುತ ಸಮುದಾಯಗಳ ಅಧ್ಯಯನಗಳಿಗೆ ಸಂಬಂಧಿಸಿದಂತೆ ಬೇರೆ ಬೇರೆ ಶಿಸ್ತುಗಳ ಹಿನ್ನೆಲೆಯಲ್ಲಿ ಮಾನವನನ್ನು ಈಗಿನ ಅಧ್ಯಯನಗಳ ವೈಜ್ಞಾನಿಕ ತಳಹದಿಯ ಮೂಲಕ ಹೆಚ್ಚು ಹೆಚ್ಚು ನಿಖರವಾದ ಫಲಿತಾಂಶವನ್ನು ಪಡೆಯುವುದು ಸಾಧ್ಯವೆಂಬುದನ್ನು ಸಾಬೀತುಪಡಿಸಿವೆ. ಉದಾಹರಣೆಗೆ ವಿವಿಧ ಬುಡಕಟ್ಟುಗಳು ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಟ್ಟರೂ ಪ್ರಾದೇಶಿಕ ಭಿನ್ನತೆಯನ್ನು ಹೊಂದಿದ್ದರೂ ಅವರ ಮೂಲ ಒಂದೇ ಆಗಿರುವ ಸಾಧ್ಯತೆ ಇದೆ. ಆದರೆ ಅವರಲ್ಲಿ ಉಂಟಾಗಿರಬಹುದಾದ ಸ್ಥಳೀಯ ಸಂಸ್ಕೃತಿಯ ಪ್ರಭಾವದ ಕಾರಣ ಆ ಗುಂಪುಗಳು ತಾವು ಪ್ರತ್ಯೇಕವೆಂದೇ ಗುರುತಿಸಿಕೊಳ್ಳಬಯಸುತ್ತವೆ. ದಕ್ಷಿಣ ಕರ್ನಾಟಕದಲ್ಲಿ ಇದೇ ಮಾದರಿಯ ಒಂದು ಸಾಧ್ಯತೆ ಏರ್ಪಟ್ಟಿರುವುದನ್ನು ಕಾಡುಕುರುಬ, ಜೇನುಕುರುಬ ಮತ್ತು ಒಕ್ಕೈಕುರುಬ ಎಂಬ ಈ ಲೇಖನದಲ್ಲಿ ಚರ್ಚೆಗೆ ಒಳಪಡಿಸಲಾಗಿದೆ.

ಕರ್ನಾಟಕದ ಅನುಸೂಚಿತ (Denotified Tribes) ಬುಡಕಟ್ಟುಗಳು ಐವತ್ತು ಎಂದು ಗುರುತಿಸಲಾಗಿದೆ. ಅವುಗಳಲ್ಲಿ ಜೇನುಕುರುಬ ಮತ್ತು ಕೊರಗ ಎಂಬ ಎರಡು ಬುಡಕಟ್ಟುಗಳನ್ನು 'ಆದಿಮ ಬುಡಕಟ್ಟು'ಗಳು (Premitive Tribes) ಎಂದು ವಿಶೇಷವಾಗಿ ಗುರುತಿಸಿದ್ದಾರೆ. ಕಾಡುಕುರುಬ ಅಥವಾ ಬೆಟ್ಟ ಕುರುಬ ಸಮುದಾಯವು ಒಂದು ಸಾಮಾನ್ಯ ಬುಡಕಟ್ಟು ಮಾತ್ರ. ಆದರೆ, ಪ್ರಸ್ತುತ ಅಧ್ಯಯನದಲ್ಲಿ ಸೇರ್ಪಡೆಯಾಗಿರುವ ಒಕ್ಕೈಕುರುಬ ಎಂಬುದು ಯಾವುದೇ ಜಾತಿಗೂ ಸೇರದೆ ಅಥವಾ ಬುಡಕಟ್ಟು ಅಲ್ಲದ ಒಂದು ಸಮುದಾಯವಾಗಿದೆ. ಚಾಮರಾಜನಗರ ಜಿಲ್ಲೆಯ ಕೊಳ್ಳೆಗಾಲ ತಾಲೂಕಿನ ರಾಮಾಪುರ ಹೋಬಳಿಯಲ್ಲಿ ತಮಿಳುನಾಡಿಗೆ ಹೊಂದಿಕೊಂಡಂತೆ, ಪಶ್ಚಿಮಘಟ್ಟದ ಮುಂದುವರಿಕೆಯಾಗಿ ಹಬ್ಬಿರುವ ಬೆಟ್ಟಸಾಲುಗಳಲ್ಲಿ ವಾಸ್ತವ್ಯವನ್ನು ಕಂಡುಕೊಂಡಿರುವ ಹಲವಾರು ಸಮುದಾಯಗಳಲ್ಲಿ ಒಕ್ಕೈಕುರುಬ ಸಮುದಾಯವು ಒಂದು.

ಅಧ್ಯಯನ ದೃಷ್ಟಿಯಿಂದ ಈ ಸಮುದಾಯವನ್ನು ಒಕ್ಕೈಕುರುಬ ಎಂದು ಕರೆಯಲಾಗಿದೆ. ಸ್ಥಳೀಯವಾಗಿ ಇವರನ್ನು ಕೊಂಗನಾಡು ಕುಡುಬ ಎಂಬುದಾಗಿ ಕರೆಯವುದು ತಿಳಿದುಬರುತ್ತದೆ. ಇದಲ್ಲದೆ ಕಚ್ಚೆ ಕುರುಬರು ಎಂಬುದಾಗಿಯೂ ಕರೆಯುವುದು ವಾಡಿಕೆಯಲ್ಲಿದೆ. ಈ ಲೇಖನದಲ್ಲಿ ವಿಶಿಷ್ಟವಾದ ಹೆಸರನ್ನು ಹೊಂದಿರುವ ಒಕ್ಕೈಕುರುಬ, ಕೊಂಗಡನಾಡು ಕುರುಬ ಅಥವಾ ಕಚ್ಚೆಕುರುಬ ಸಮುದಾಯವನ್ನು ಸಾಹಿತ್ಯಲೋಕಕ್ಕೆ ಪರಿಚಯಿಸುವ ಪ್ರಯತ್ನವನ್ನು ಮಾಡಲಾಗಿದೆ. ಈ ಸಮುದಾಯವನ್ನು ಸ್ಥಳೀಯರು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರಾದರೂ ತಾವುಗಳು ಮಾತ್ರ ತಮ್ಮನ್ನು ಹುಲ್ಲುಮನೆ ಕುರುಬರು ಹಾಗೂ ಹತ್ತಿ ಕಂಕಣದವರು ಎಂಬುದಾಗಿ ಕರೆದುಕೊಳ್ಳುವುದುಂಟು.

**ಪದನಿಷ್ಪತ್ತಿ:** ಹಲವಾರು ಹೆಸರುಗಳಿಂದ ಕರೆಯಿಸಿಕೊಳ್ಳುವುದರ ಹಿಂದೆ ಅದರದೇ ಆದ ಅರ್ಥವಿದೆ. ಆಯಾ ಪದಗಳ ನಿಷ್ಪತ್ತಿಯನ್ನು ಇಲ್ಲಿ ನೀಡಲಾಗಿದೆ.

ಒಕ್ಕೈಕುರುಬ ಎಂಬ ಪದವನ್ನು ಒಂದು+ಕೈ+ಕುರುಬ= ಒಕ್ಕೈಕುರುಬ ಎಂದು ಅರ್ಥೈಸಿಕೊಳ್ಳಬಹುದಾದರೂ ಅದು ಕೇವಲ ವ್ಯಾಪಕರಣದ ಅರ್ಥವಷ್ಟೆ. ಆದರೆ ಅದರ ಹಿಂದಿರಬಹುದಾದ ವಾಸ್ತವ ಇಲ್ಲವೇ ಪ್ರಾಯೋಗಿಕ ಸನ್ನಿವೇಶವೇನಿರಬಹುದು ಎಂಬುದನ್ನು ತಿಳಿಯುವುದು ಬಹು ಮುಖ್ಯವಾದ ಅಂಶವಾಗಿದೆ. ನೂರಾರು ವರ್ಷಗಳ ಹಿಂದೆ ಐದಾರು ತಲೆಮಾರಿನ ಜನರಲ್ಲಿ ಘಟಿಸಿರುವ ಒಂದು ಆಕಸ್ಮಿಕ ಪರಿಸ್ಥಿತಿಯ ಕಾರಣ ಒಂದು ಪ್ರದೇಶದ ಜನರಿಕೆ ಒಕ್ಕೈಕುರುಬ ಎಂಬ ಹೆಸರು ಬಂದಿದ್ದಾದರು ಇದು ಜನರಲ್ಲಿ ಚಾಲ್ತಿಯಲ್ಲಿ ಇದ್ದಿರಲಿಲ್ಲ. ಬದಲಾಗಿ ಭಾಷೆಯನ್ನು ಆಧರಿಸಿ ಕೊಂಗನಾಡು ಕುರುಬ ಎಂಬ ಹೆಸರು ರೂಢಿಯಲ್ಲಿದ್ದರೇ ಅವರ ಉಡುಗೆಯನ್ನು ಪರಿಗಣಿಸಿ ಕಚ್ಚೆಕುರುಬ ಎಂಬ ಮತ್ತೊಂದು ಹೆಸರಿನಿಂದಲೂ ಸಂಬೋಧಿಸುತ್ತಿದ್ದುದುಂಟು.

ಬಹಳ ವಿಶಿಷ್ಟವಾಗಿ ಒಗಟಿನ ರೂಪದಲ್ಲಿರುವ ಒಕ್ಕೈಕುರುಬ ಎಂಬ ಹೆಸರು ಹೇಗೆ ಬಂತು ಎಂಬುದನ್ನು ಕುರಿತು ಇದೇ ಸಮುದಾಯದ ಹಲವಾರು ಹಿರಿಯರಿಂದ ತಿಳಿದುಕೊಳ್ಳುವ ಪ್ರಯತ್ನ ಮಾಡಿದಾಗ್ಯೂ ಯಾವುದೇ ಫಲ ಸಿಗಲಿಲ್ಲ. ಏಕೆಂದರೆ, ಯಾವುದೇ ಸಂದರ್ಭದಲ್ಲಿ ಅವರ ಹಿರಿಯರು ಈ ಹೆಸರಿನಿಂದ ಕರೆಸಿಕೊಂಡಿರುವುದು. ಈಗಿನ ತಲೆಮಾರಿನ ಜನರಿಗೆ ತಿಳಿಯುವುದಾದರೂ ಹೇಗೆ ಸಾಧ್ಯ ಎಂಬ ಸತ್ಯ ತಿಳಿಯಿತು. ಆದರೆ ಈ ಹೆಸರು ಬಂದಿರಲು ಒಂದು ಕಾರಣ ಇದ್ದಿರಲೇಬೇಕು ಎಂಬ ಅನುಮಾನ ಜೀವಂತವಾಗೇ ಉಳಿಯಿತು.

ಈ ನಿಟ್ಟಿನಲ್ಲಿ ನನ್ನ ಪ್ರಯತ್ನವನ್ನು ಮುಂದುವರಿಸಿದಾಗ ಮಿಣ್ಯಂ ಗ್ರಾಮದ ಹಿರಿಯ ಯಜಮಾನರೊಬ್ಬರು ತಾವು ಬಹಳ ಹಿಂದೆ ಕೇಳಿಸಿಕೊಂಡಿದ್ದ ಒಂದು ಸ್ವಾರಸ್ಯಕರವಾದ ಕಥೆಯನ್ನು ಹೇಳಿದರು. ಕಾರಣಾಂತರಗಳಿಂದ ಬೇರೆ ಕಾಡಿನಿಂದ ವಲಸೆ ಬಂದ ಒಂದು ಗುಂಪಿನ ಜನರು, ಮಿಣ್ಯಂ, ಗಾಜನೂರು, ಲಕ್ಕುಂಡಿ ಮತ್ತು ಹೂಗ್ಯಂ ಪ್ರದೇಶದಲ್ಲಿ ತಮ್ಮ ವಾಸ್ತವ್ಯವನ್ನು ಕಂಡುಕೊಂಡ ಕಾಡಿನಲ್ಲಿ ಆಹಾರ ಉತ್ಪನ್ನಗಳನ್ನು ಸಂಗ್ರಹಿಸುವ ಮೂಲಕ ತಮ್ಮ ನಿತ್ಯದ ಬದುಕನ್ನು ಸಾಗಿಸುತ್ತಿದ್ದರು. ಮನೆಯಲ್ಲೇ ಉಳಿಯುತ್ತಿದ್ದ ಹೆಣ್ಣುಮಕ್ಕಳು ಮಳೆಗಾಲದಲ್ಲಿ ತಾವು ವಾಸವಿದ್ದ ಗುಡಿಸಲ ಸುತ್ತಲಿನ ನೆಲವನ್ನು ಹಸನುಮಾಡಿ ಅಲ್ಲಿ ತಮ್ಮ ಆಹಾರಕ್ಕೆ ಪೂರಕವಾದ ಕೆಲವು ಧಾನ್ಯದ ಬೀಜಗಳನ್ನು ನೆಟ್ಟು ಕೆತ್ತಲು ಬೇಸಾಯವನ್ನು ಆರಂಭಿಸಿದರು. ಹೀಗೆ ಕಡಿಮೆ ಪ್ರಮಾಣದಲ್ಲಿ ಆರಂಭವಾದ ಬೇಸಾಯವು ವರ್ಷಗಳು ಕಳೆದಂತೆ ವಿಸ್ತಾರವಾಗತೊಡಗಿತು. ಆಗ ಮನೆಯ ಹೆಣ್ಣುಮಕ್ಕಳೇ ಅಲ್ಲದೆ ಗಂಡಸರು ಸೇರ್ಪಡೆಯಾದರು. ಆದರೆ ಇದರಲ್ಲಿ ಹೆಣ್ಣು ಮಕ್ಕಳ ಪಾಲು ಅಧಿಕವಾಗಿತ್ತು. ಅದಕ್ಕಾಗಿ ಹೆಚ್ಚು ಸಮಯ ಬೇಸಾಯದ ಕೆಲಸದಲ್ಲಿ ನಿರತರಾಗುತ್ತಿದ್ದರು.

ಹೀಗೆ ಬೇರೆಡೆಯಿಂದ ಅನಿವಾರ್ಯ ಕಾರಣಗಳಿಂದ ವಲಸೆ ಬಂದ ಸಮಯದಾಯ ಭೌಗೋಳಿಕ ಪರಿಸರ ಹಾಗೂ ಪರಿಸ್ಥಿತಿಯ ಅನಿವಾರ್ಯತೆಗಳಿಂದ ಕೆತ್ತಲು ಬೇಸಾಯದಲ್ಲಿ ತೊಡಗಿಸಿಕೊಂಡರು. ಆಗ ಹೆಣ್ಣುಮಕ್ಕಳು ತಮ್ಮ ಎರಡು ಕೈಗಳಿಗೆ ಗಾಜಿನ ಬಳೆಗಳನ್ನು ತೊಡುವುದು ಕಡ್ಡಾಯ ಹಾಗೂ ಸಂಪ್ರದಾಯವೂ ಆಗಿತ್ತು. ಹೆಣ್ಣಿನ ಐದು ಭಾಗ್ಯಗಳಲ್ಲಿ ಬಳೆಯು ಒಂದು ಮುತ್ತೈದೆ ಭಾಗ್ಯ. ಆದರೆ ತಾವು ರೂಢಿಸಿಕೊಂಡಿದ್ದ ಕೆತ್ತಲು ಭೇಸಾಯ ಪದ್ಧತಿಗೆ ಆ ಬಳೆಗಳು ತೊಡಕಾಗುತ್ತಿದ್ದವು. ಅಂದರೆ ಬಿದಿರು ಅಥವಾ ಕಾರೆ ದಸಿಯಿಂದ ನೆಲವನ್ನು ಹಸನು ಮಾಡುವಾಗ ಇಲ್ಲವೇ ಕಳೆ ಕೀಳುವ ಸಂದರ್ಭದಲ್ಲಿ ವಿಶೇಷವಾಗಿ ಬಳೆಯಾಗುತ್ತಿದ್ದ ಬಲಗೈನ ಬಳೆಗಳಿಂದ ಕೆಲಸ ನಿಧಾನವಾಗುತ್ತಿದ್ದು. ಈ ತೊಂದರೆಯನ್ನು ತಾತ್ಕಾಲಿಕವಾಗಿ ಬಗೆಹರಿಸಿಕೊಳ್ಳುವ ನಿಟ್ಟಿನಲ್ಲಿ ಒಂದು ಉಪಾಯವನ್ನು ಕಂಡುಕೊಂಡರು. ಅಂಥರೆ ಕೆತ್ತನೆ ಕೆಲಸದಲ್ಲಿ ತೊಡಗಿಕೊಳ್ಳುವ ಮುಂಚೆ ಬಲಗೈಗೆ ತೊಟ್ಟಿರುವ ಬಳೆಗಳನ್ನು ಕಳಚಿ ಮನೆಯಲ್ಲಿ ಇರಿಸುವುದು. ಕೆಲಸವು ಮುಗಿದ ಬಳಿಕ ಆ ಬಳೆಗಳನ್ನು ಬಲಗೈಗೆ ತೊಟ್ಟುಕೊಳ್ಳುತ್ತಿದ್ದರು. ಇದು ಅವರಿಗೆ ಹೆಚ್ಚು ಅನುಕೂಲಕರವಾಗಿತ್ತು. ಕೆಲವು ಕಾಲ ಈ ಅಭ್ಯಾಸ ಮುಂದುವರಿಸಿದ ಅನಂತರ ಅವರಿಗೆ ಪ್ರತಿನಿತ್ಯ ಕೆಲಸ ಆರಂಭಿಸುವ ಮೊದಲು ಬಳೆಗಳನ್ನು ತೆಗೆದಿರಿಸಬೇಕು ಹಾಗೂ ಕೆಲಸ ಮುಗಿದ ಬಳಿಕ ಪುನಃ ಬಳೆಗಳನ್ನು ಕೈಗೆ ತೊಟ್ಟುಕೊಳ್ಳಬೇಕು. ಇದು ಒಂದು ರೀತಿ ಅನಗತ್ಯ ಶ್ರಮ ಹಾಗೂ ಬಳೆಗಳು ಈ ಸಂದರ್ಭದಲ್ಲಿ ಒಡೆದು ಹೋಗುತ್ತಿದ್ದವು. ಇದಲ್ಲಿ ತಪ್ಪಿಸುವ ಸಲುವಾಗಿ ಉತ್ತಮವಾದ ನಿರ್ಧಾರವನ್ನು ತೆಗೆದುಕೊಂಡು ಶಾಶ್ವತವಾಗಿ ಬಲಗೈಗೆ ಬಳೆಗಳನ್ನು ತೊಡುವುದನ್ನು ನಿಲ್ಲಿಸಿದರು. ಅಂದರೆ ಸಂಪ್ರದಾಯಕ್ಕೂ ಮಿಗಿಲಾಗಿ ಅನುಕೂಲ ಮತ್ತು ಸೂಕ್ತವೆಂದು ಕಂಡುಕೊಂಡ ಒಂದು ಹೊಸ ವ್ಯವಸ್ಥೆಯನ್ನು ರೂಢಿಸಿಕೊಳ್ಳುವುದಕ್ಕೆ ಅಂದಿನ ಪರಿಸ್ಥಿತಿಯಲ್ಲಿ ಸಮಸ್ಯೆಯೇ  ಆಗಿರಲಿಲ್ಲ. ಅಂತಹ ಒಂದು ಕ್ರಾಂತಿಕಾರಿ ಬದಲಾವಣೆಯನ್ನು ಒಕ್ಕೈಕುರುಬ ಎಂದು ಕರೆಯಲ್ಪಡುವ ಸಮುದಾಯ ನೂರಾರು ವರ್ಷಗಳ ಹಿಂದೆಯೇ ಮಾಡಿಕೊಂಡಿತ್ತು.

ಕಾಲಾನಂತರದಲ್ಲಿ ಇದೇ ಸಮುದಾಯಕ್ಕೆ ಸೇರಿದ್ದ, ಮೂಲನೆಲೆಯ ಜನರು ಇವರ ಬಳಿ ಬಂದು ಸಂಬಂಧ ಬೆಳೆಸುವ ಉದ್ದೇಶದೊಂದಿಗೆ ಮಾತುಕತೆ ನಡೆಸಲು ಪ್ರತ್ನಿಸಿದರು. ಆದರೆ ಅವರಿಗೆ ಇಲ್ಲಿನ ಹೆಣ್ಣುಮಕ್ಕಳು ಒಂದೇ ಕೈಗೆ (ಎಡಗೈಗೆ) ಮಾತ್ರ ಬಳೆಯನ್ನು ತೊಟ್ಟಿರುವುದು ಗಮನಕ್ಕೆ ಬಂದಿತು. ಆಶ್ಚರ್ಯ ಮತ್ತು ಆತಂಕದಿಂದ ಏನಿದು ಒಂದೇ ಕೈಗೆ ಬಳೆ ಎಂದು ಉದ್ಗರಿಸಿದ್ದಾರೆ. ಹಾಗೂ ಇವರು ನಮ್ಮ ಕಟ್ಟು ಕಟ್ಟಳೆಯಂತೆ ಇಲ್ಲ ಆದ್ದರಿಂದ ಇವರ ಜೊತೆ ಯಾವುದೇ ಸಂಬಂಧ ಬೆಳೆಸುವುದು ಸೂಕ್ತವಲ್ಲವೆಂದು ತಿಳಿದು ಶಾಶ್ವತವಾಗಿ ಬೇರ್ಪಡುತ್ತಾರೆ. ಅಂದಿನಿಂದ ಒಂದೇ ಮೂಲಕ ಸಮುದಾಯವು ಎರಡಾಗುತ್ತವೆ. ಹಾಗೂ ಪ್ರತ್ಯೇಕ ಹೆಸರಿನಿಂದಲೇ ಗುರುತಿಸಿಕೊಳ್ಳುತ್ತವೆ.

ಹಾಗಾದರೆ ಈ ಸಮುದಾಯದ ಮೂಲ ಹೆಸರು ಯಾವುದು ಎಂಬ ಪ್ರಶ್ನೆ ಎದುರಾಗುತ್ತದೆ. ಇದಕ್ಕೆ ಉತ್ತರ ಈ ಜನರನ್ನು ಸ್ಥಳೀಯರು ಕರೆಯುತ್ತಿದ್ದ ಹೆಸರುಗಳಿಂದ ಗುರುತಿಸುವುದು ಸಾಧ್ಯವಿದೆ. ಕೊಂಗನಾಡು ಕುರುಬ, ಕಚ್ಚೆಕುರುಬ, ಮತ್ತು ಹಲ್ಲುಮನೆ ಕುರುಬ ಈ ಮೂರು ಹೆಸರಿನಲ್ಲಿ ಕುರುಬ ಎಂಬ ಪದವು ಸಾಮಾನ್ಯವಾಗಿದೆ. ಆದ್ದರಿಂದ ಇದೇ ಬೆಟ್ಟಸಾಲಿನಲ್ಲಿ ವಾಸವಿದ್ದ ಬೆಟ್ಟಕುರುಬ ಕಾಡುಕುರುಬ ಅಥವಾ ಜೇನುಕುರುಬ ಸಮುದಾಯಕ್ಕೆ ಸೇರಿದವರಾಗಿದ್ದರು. ಕಾರಣಾಂತರಗಳಿಂದ ಈ ಸಮುದಾಯದ ಒಂದೆರಡು ಕುರುಂಬಗಳು ಪರ್ಯಾಯ ಬದುಕನ್ನು ಹುಡುಕಿಕೊಂಡು ಹೆಗ್ಗಡದೇವನಕೋಟೆಯ ಕಾಡಿನಿಂದ ಈಗಿನ ಪ್ರದೇಶಕ್ಕೆ ವಲಸೆ ಹೋಗಿರುವ

ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಆದರೆ ಇವರ ಹೆಸರುಗಳ ಹಿಂದೆ ಇದ್ದ ಕೊಂಗನಾಡು, ಕಚ್ಚೆ ಮತ್ತು ಹುಲ್ಲುಮನೆ ಎಂಬುದು ಏನನ್ನು ಸೂಚಿಸುತ್ತವೆ. ಈ ಪ್ರಶ್ನೆಗೂ ಉತ್ತರವನ್ನು ಕಂಡುಕೊಂಡಾಗ ಒಕ್ಕೈಕುರುಬರ ಕುರಿತು ಒಂದಿಷ್ಟು ವಾಸ್ತವಾಂಶಗಳನ್ನು ತಿಳಿದುಕೊಳ್ಳುವುದು ಸಾಧ್ಯವಿದೆ.

ಕೊಂಗನಾಡು ಕುರುಬ ಕನ್ನಡ ಪ್ರಾಂತ್ಯವಾದ ಮೈಸೂರು ಪ್ರದೇಶದಲ್ಲಿ ಎಚ್.ಡಿ.ಕೋಟೆ ಕಾಡಿನಲ್ಲಿ ನೆಲೆಯನ್ನು ಹೊಂದಿದ್ದ ಒಕ್ಕೈಕುರುಬರು ಈಗಾಗಲೇ ಕೇಳಿರುವಂತೆ, ಅಂದಿನ ತಮಿಳುನಾಡನ ಪ್ರಾಂತ್ಯವಾಗಿದ್ದ ಕೊಳ್ಳೆಗಾಲ ತಾಲೂಕಿನ ರಾಮಾಪುರ ಹೋಬಳಿಯ ದಕ್ಷಿಣ ದಿಕ್ಕಿನಲ್ಲಿ ಹಬ್ಬಿರುವ ಇಂದಿನ ಕರ್ನಾಟಕ ಮತ್ತು ತಮಿಳುನಾಡಿನ ಗಡಿಯಾಗರುವ ಬೆಟ್ಟ ಸಾಲಿನಲ್ಲಿ ಒಂದು ವಾಸ್ತವ್ಯ ಕಂಡುಕೊಂಡರು. ಸಹಜವಾಗಿ ಇಲ್ಲಿನ ಭಾಗದ ಜನರ ಮಾತೃಭಾಷೆಯಾಗಿದ್ದ ತಮಿಳನ್ನು ಇವರು ಕಲಿತುಕೊಂಡರು. ಇದಲ್ಲದೆ ತಮಿಳಿನ ಜನರ ಜೊತೆಯಲ್ಲಿ ವ್ಯಾಪಾರ ಹಾಗೂ ವೈವಾಹಿಕ ಸಂಬಂಧವನ್ನು ಮಾಡಿಕೊಂಡಿರುವ ಕಾರಣಕ್ಕೆ ಇವರನ್ನು ಸ್ಥಳೀಯರು ಅಂದರೆ ಕನ್ನಡ ಮಾತೃಭಾಷಿಕರು ಕೊಂಗನಾಡ ಕುರುಬರು ಎಂದು ಕರೆದಿರುವುದು ಸಾಮಾನ್ಯ ಸಂಗತಿಯೇ ಸರಿ. ಆದರೆ ಈ ಹೆಸರನ್ನು ಸದರಿ ಸಮುದಾಯದವೂ ವಿರೋಧಿಸದೆ ಹಾಗೂ ಪ್ರತಿಕ್ರಿಯಿಸದೆ ಇದ್ದಾಗ ಹಲವಾರು ಹೆಸರಲ್ಲಿ ಆ ಹೆಸರು ಸಹ ಒಂದಾಗಿರುತ್ತದೆ.

**ಕಚ್ಚೆ ಕುರುಬ:** ಸ್ವಾತಂತ್ರಪೂರ್ವ ಹಾಗೂ ಅನಂತರದಲ್ಲಿಯೂ ಕಾಡಿನ ಹಲವು ಸಮುದಾಯಗಳೂ, ಕೃಷಿಕರು ಮತ್ತು ಕಾಡು ಉತ್ಪನ್ನಗಳ ಸಂಗ್ರಹಕಾರರು ಆಗಿದ್ದ ಬುಡಕಟ್ಟು ಸಮುದಾಯಗಳ ಗಂಡಸರು ಎರಡು ಮೊಳ ಉದ್ದ ಮತ್ತು ಒಂದು ಮೊಳ ಅಗಲದ ಒಂದು ತುಂಡು ಬಟ್ಟೆಯಲ್ಲಿ ಕಚ್ಚೆ ಕಟ್ಟಿಕೊಳ್ಳುವುದು ರೂಢಿಯಲ್ಲಿತ್ತು. ದುಡಿಮೆ ಮಾಡುವಾಗ, ಕಾಡಲ್ಲಿರುವಾಗ ಈ ಉಡುಗೆ ಸಾಮಾನ್ಯವಾಗಿತ್ತು. ಆದ್ದರಿಂದ ಗಂಡಸರು ಉಡುವ ಕಚ್ಚೆಯನ್ನು ಸಮುದಾಯವನ್ನು ಗುರುತಿಸುವ ಹೆಸರಾಗಿಸಿಕೊಂಡಿರುವುದು ಸ್ಪಷ್ಟವಾಗುತ್ತದೆ.

**ಹುಲ್ಲುಮನೆ ಕುರುಬ:** ಹೆಸರಿನ ಪೂರ್ವಪದವೇ ಹೇಳುವಂತೆ ಕಾಡಿನ ಸೊಪ್ಪು, ಬಿದಿರು ಮತ್ತು ಹುಲ್ಲನ್ನು ಬಳಸಿ ಕಟ್ಟಿರುವ ಗುಡಿಸಲಿನಲ್ಲಿ ವಾಸಿಸುತ್ತಿದ್ದ ಸಮುದಾಯವನ್ನು ಹುಲ್ಲುಮನೆ ಕುರುಬ ಎಂದು ಕರೆದಿರುವುದು ಬೇರೆ ಬೇರೆ ಕಾಲಘಟ್ಟದಲ್ಲಿ ಅಂದಿನ ಸಮುದಾಯವು ಮಾತನಾಡುತ್ತಿದ್ದ ಭಾಷೆ, ಉಡುತ್ತಿದ್ದ ಬಟ್ಟೆ ಮತ್ತು ವಾಸಿಸುತ್ತಿದ್ದ ಗುಡಿಸಲು ಮಾದರಿಯನ್ನು ಪರಿಗಣಿಸಿ ಕರೆಯುತ್ತಿದ್ದ ಹೆಸರುಗಳು ಎಂಬುದು ಸ್ಪಷ್ಟವಾಗುತ್ತದೆ. ಅದಕ್ಕೆ ಒಕ್ಕೈಕುರುಬ ಎಂಬುದು ಬಹಳ ವಿಶಿಷ್ಟವಾದ ಹಿನ್ನೆಲೆಯನ್ನು ಹೊಂದಿರುವ ಹೆಸರು ಎಂಬುದರಲ್ಲಿ ಸಂದೇಹವೇ ಇಲ್ಲ.

ಈ ಲೇಖನದಲ್ಲಿ ಒಂದು ಸಮುದಾಯದ ಹೆಸರಿನ ಹಿಂದಿರಬಹುದಾದ ಹಲವಾರು ಅಂಶಗಳನ್ನು ಕಂಡುಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ. ಒಕ್ಕೈಕುರುಬರ ಮೂಲವೆನ್ನಬಹುದಾದ ಕಾಡುಕುರುಬ ಬೆಟ್ಟಕುರುಬ ಅಥವಾ ಜೇನುಕುರುಬ ಸಮುದಾಯವನ್ನು ತೌಲನಿಕವಾಗಿ ಅವರಲ್ಲಿ ರೂಢಿಯಲ್ಲಿರಬಹುದಾದ ಹಲವಾರು ಆಚರಣೆಗಳ ಹಿನ್ನೆಲೆಯಲ್ಲಿ ನೋಡುವ ಪ್ರಯತ್ನವನ್ನು ಮಾಡಬಹುದಾಗಿದೆ. ಆದರೆ ಈ ಸಮುದಾಯವು ಬೇರ್ಪಟ್ಟ ನೂರಾರು ವರ್ಷಗಳೇ ಸಂದಿರುವುದು ಹಾಗೂ ನಾಡಿನ ಹತ್ತು ಹಲವಾರು ಸಮುದಾಯಗಳೊಂದಿಗೆ ಒಡನಾಟವನ್ನು ಇಟ್ಟುಕೊಂಡಿರುವ ಪ್ರಯುಕ್ತ ಈ ಅಂಶಗಳು ಕಣ್ಮರೆಯಾಗಿರುವ ಸಾಧ್ಯತೆಯಿದೆ. ಇದಲ್ಲದೆ ಪಾರಂಪರಿಕ ಕಸುಬನ್ನು ಬಿಟ್ಟು ಕೃಷಿಯನ್ನು ಜೀವನ ಮೂಲ ಕಸುಬಾಗಿ ಆಯ್ಕೆ ಮಾಡಿಕೊಂಡಿರುವುದು ಸಹಾ ಮತ್ತೊಂದು ಕಾರಣವಾಗಿದೆ. ಇಂದು ಸದರಿ ಸಮುದಾಯದ ಯಾವುದೇ ಹೆಸರು ಅಧಿಕೃತವಾಗಿ ದಾಖಲೆಯಲ್ಲಿರುವುದಿಲ್ಲ. ಬರಹದ ಆರಂಭದಲ್ಲೇ ಪ್ರಸ್ತಾಪಿಸಿರುವಂತೆ ಕರ್ನಾಟಕ ರಾಜ್ಯದಲ್ಲಿರುವ ೫೦ ಅನುಸೂಚಿತ (denotified Tribes) ಪಂಗಡಗಳಲ್ಲಿ ಕೇವಲ ಎರಡು ಬುಡಕಟ್ಟು ಸಮುದಾಯಗಳನ್ನು ಆದಿಮ ಬುಡಕಟ್ಟು ಎಂದು ಗುರುತಿಸಲಾಗಿದೆ. ಅವುಗಳಲ್ಲಿ ಒಂದು ಜೇನುಕುರುಬ ಮತ್ತೊಂದು ಕೊರಗ. ಈ ಆದಿಮ ಬುಡಕಟ್ಟುಗಳೆರಡರಲ್ಲಿ ಇರುವ ವ್ಯತ್ಯಾಸ ಮತ್ತು ವಿಶೇಷವೆಂದರೆ ಮೂಲತಃ ಇವರು ಅರಣ್ಯವಾಸಿಗಳು ಹೌದು. ಆದರೆ ಕೊರಗ ಅಸ್ಪೃಶ್ಯರಲ್ಲಿ ಅಸ್ಪೃಶ್ಯರಾಗಿ ಅತ್ಯಂತ ಕೆಳಗಿನ ಸ್ಥಾನಮಾನವನ್ನು ಹೊಂದಿದ್ದಾರೆ. ಕ್ರಮೇಣ ಕಾಡನ್ನು ತೊರೆದು ನಾಡಿಗೆ

ಬಂದು ಪೌರಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಜೇನು ಕುರುಬರು ಮಾತ್ರ ಇಂದಿಗೂ ಕಾಡಲ್ಲೇ ಇದ್ದು ನಿಧಾನವಾಗಿ ಆಧುನಿಕತೆಗೆ ಅಂಜುತ್ತಾ, ಅಳುಕುತ್ತಾ ಅನಿವಾರ್ಯವಾಗಿ ಒಗ್ಗಿಕೊಳ್ಳುತ್ತಿದ್ದಾರೆ.

**ಜನಸಂಖ್ಯೆ ಮತ್ತು ವಾಸ್ತವ್ಯ:** ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ಹುಣಸೂರು ತಾಲೂಕುಗಳಲ್ಲಿ ಕೊಡಗು ಜಿಲ್ಲೆಯ ಕುಶಾಲನಗರ, ಸೋಮವಾರಪೇಟೆ ಮತ್ತು ಮಡಿಕೇರಿ ತಾಲೂಕುಗಳಲ್ಲಿ ವಾಸ್ತವ್ಯ ಹೊಂದಿದ್ದಾರೆ. ಅಲ್ಲದೆ ತಮಿಳುನಾಡಿನ ನೀಲಗಿರಿಯ ನಡುಮಲೆ, ಮಸಣಿಗುಡಿಗಲ್ಲೂ ಕೇರಳದ ಮಾನಂದವಾಡಿಯಲ್ಲೂ ಇದ್ದಾರೆ. ೨೦೦೧ ರ ಜನಗಣತಿಯ ಪ್ರಕಾರ ಇವರ ಸಂಖ್ಯೆ ೨೧೨೭ ಮಾತ್ರ, ಕರ್ನಾಟಕ, ತಮಿಳುನಾಡು ಮತ್ತು ಕೇರಳ ಈ ಮೂರು ರಾಜ್ಯಗಳ ಸುಮಾರು ೨೦೦೦ ಚದರ ಕಿಲೋಮೀಟರ್ ವ್ಯಾಪ್ತಿಯಲ್ಲಿ ಇತರೆ ಬುಡಕಟ್ಟು ಸಮುದಾಯಗಳಾದ ಬೆಟ್ಟಕುರುಬ, ಯರವ, ಪಣಿಯನ್, ಪಳಿಯನ್ ಅಡಿಯನ್ ಸೋಲಿಗರು ಮುಂತಾದವರ ಜೊತೆ ಸಹಬಾಳ್ವೆಯನ್ನು ನಡೆಸುತ್ತಾ ಬಂದಿದ್ದಾರೆ. ಇವರ ಮೂಲದ ಬಗ್ಗೆ ಖಚಿತ ಮಾಹಿತಿ ದೊರೆಯುವುದಿಲ್ಲ. ಆದರೆ ಆನೆಗಳನ್ನು ಹಿಡಿದು ಪಳಗಿಸುವುದರಲ್ಲಿ ನಿಪುಣರೆಂಬುದು ತಿಳಿದುಬರುತ್ತದೆ. ರಾಜ-ಮಹಾರಾಜರ ಕಾಲದಲ್ಲಿ ಬೇರೆ ಬೇರೆ ರಾಜರಿಗೆ ಆನೆಗಳನ್ನು ಖೆಡ್ಡದ ಮೂಲಕ ಹಿಡಿದು ಪಳಗಿಸಿಕೊಡುತ್ತಿದ್ದರೆಂಬುದಕ್ಕೆ ಪುರಾವೆಗಳಿವೆ. ಇಂದಿಗೂ ಮೈಸೂರಿನಲ್ಲಿ ಜರುಗುವ ವಿಶ್ವವಿಖ್ಯಾತ ದಸರೆಗೆ ವಿಜಯದಶಮಿಯಂದು ಆನೆ ಅಂಬಾರಿ ನಡೆಸುವುದು ಇವರೇ ಆಗಿದ್ದಾರೆ. ಮೈಸೂರು ರಾಜರು ಆನೆಯನ್ನು ಹೆಗ್ಗಡದೇವನ ಕೋಟೆ ಕಾಡಿನಿಂದಲೇ ಪಡೆಯುತ್ತಿದ್ದರು ಎಂಬುದು ಖಚಿತವಾದರೆ ಅಂದಿನಿಂದಲೂ ಜೇನುಕುರುಬರಿಗೆ ಮಹಾರಾಜರಿಂದ ಮಾನ್ಯತೆ ಇತ್ತು ಎಂದು ತಿಳಿಯುತ್ತದೆ.

೧೯೯೧ರ ಜನಗಣತಿಯ ಜೇನು ಕುರುಬರ ಜನಸಂಖ್ಯೆ ೨೬೫೭೬ ರಷ್ಟಿತ್ತು. ಈಗ ಈ ಸಂಖ್ಯೆ ಹೆಚ್ಚಾಗಿರುವ ಸಾಧ್ಯತೆಯಿದೆ. ಜೇನನ್ನು ಸಂಗ್ರಹಿಸುವುದು ಇವರ ಪ್ರಧಾನ ಕಸುಬಾಗಿದ್ದ ಕಾರಣದಿಂದ ಇವರಿಗೆ ಈ ಹೆಸರು ಬಂದಿದೆಯಲ್ಲದೆ ಕ್ರಮೇಣ ಕುಮರಿ ಬೇಸಾಯವನ್ನು ರೂಢಿಸಿಕೊಂಡು ರಾಗಿ, ಅವರೆ, ಅಲಸಂದಿ ಇತರೆ ಬೆಳೆಯನ್ನು ತೆಗೆದು ಆಹಾರವಾಗಿ ಬಳಸುತ್ತಿದ್ದರು. ಆರಂಭದಲ್ಲಿ ಕಾಡಿನ ಮಧ್ಯದಲ್ಲಿಯೇ ಹತ್ತು-ಹದಿನೈದು ಗುಡಿಸಲುಗಳನ್ನು ಕಟ್ಟಿಕೊಂಡು ವಾಸಿಸುತ್ತಿದ್ದರು. ಇವರು ವಾಸಿಸುವ ತಾಣವನ್ನು ಹಾಡಿ ಎಂದು ಕರೆಯುವರು. ಈ ಹಾಡಿಯ ವಿಶೇಷವೆಂದರೆ ಆ ಹತ್ತು ಅಥವಾ ಹದಿನೈದು ಗುಡಿಸಲುಗಳು ಅಂಡಾಕಾರದಲ್ಲಿ ರಚಿತವಾಗಿದ್ದು ಮಧ್ಯೆದಲ್ಲಿ ಅಗ್ನಿಕುಂಡವಿರುತ್ತದೆ. ಈ ಅಗ್ನಿಕುಂಡವು ಜೇನು ಕುರುಬ ಸಮುದಾಯಕ್ಕೆ ಮಹತ್ವದ್ದಾಗಿದೆ. ಅವರ ಎಲ್ಲಾ ಆಗು-ಹೋಗುಗಳೆಲ್ಲಾ ಅಲ್ಲೆ ನಡೆಯುತ್ತವೆ.

ಇವರು ಗುಡಿಸಲುಗಳಿಗೆ ಬಿದಿರನ್ನು ಬಳಸಿ ನಿರ್ಮಿಸುವರು. ಆಯಾತಾಕಾರದ ಈ ಗುಡಿಸಲುಗಳ ಹೊರಭಾಗದಲ್ಲಿ ನೆಲದಿಂದ ಮೂರು ಅಡಿಯವರೆಗೆ ಮಣ್ಣನ್ನು ಮೆತ್ತಿ ನಿರ್ಮಿಸುವರು. ಮೇಲ್ಛಾವಣಿಗೆ ಆನೆ ಹುಲ್ಲನ್ನು ಬಳಸುವರು. ಗುಡಿಸಲಿನ ಬಾಗಿಲು ಅತ್ಯಂತ ಚಿಕ್ಕದಿದ್ದು, ಒಳಹೋಗಲು ಮೆಲ್ಲನೆ ನುಸುಳಿ ಹೋಗಬೇಕಾಗುತ್ತದೆ. ಸಾಮಾನ್ಯವಾಗಿ ಬೆಳೆದ ಮಕ್ಕಳು ಗುಡಿಸಲಿನ ಹೊರಭಾಗದಲ್ಲಿ ಬೆಂಕಿ ಕುಂಡದ ಹತ್ತಿರ ಮಲಗುತ್ತಾರೆ. ಹಾಡಿಯ ಮಧ್ಯದಲ್ಲಿರುವ ಅಗ್ನಿಕುಂಡದ ಬಗ್ಗೆ ಪ್ರತಿಯೊಬ್ಬನಿಗೂ ಗೌರವ ಇರುತ್ತದೆ. ಅಗ್ನಿಕುಂಡದ ಬೆಂಕಿ ನಂದದಂತೆ ನೋಡಿಕೊಳ್ಳುತ್ತಾರೆ. ಸಂಜೆಯ ವೇಳೆಯಲ್ಲಿ ಹಾಡಿಯ ಜನರು ಬೆಂಕಿಯ ಸುತ್ತ ಕುಳಿತು ಲೋಕಾಭಿರಾಮವಾಗಿ ಮಾತನಾಡುತ್ತಾರೆ. ಸಾಮಾನ್ಯವಾಗಿ ಹಿರಿಯರಿಗೆ ಈ ಅಗ್ನಕುಂಡವು ಮಾತುಕತೆಗಳ ತಾಣವಾಗುತ್ತದೆ. ಹೊಸದಾಗಿ ಗುಡಿಸಲು ನಿರ್ಮಿಸಿಕೊಂಡಿರುವ ಬೆಳದ ಮಕ್ಕಳು ಆಹಾರವನ್ನು ಬೇಯಿಸಿಕೊಳ್ಳುವುದು ಈ ಅಗ್ನಿಕುಂಡದಲ್ಲಿಯೇ.

ಇದೇ ಅಗ್ನಿಕುಂಡದ ಸುತ್ತಲಿನ ಪ್ರದೇಶವನ್ನು ನ್ಯಾಯ ನಿರ್ಣಯಕ್ಕಾಗಿ ಬಳಸಿಕೊಳ್ಳುವುದರಿಂದ ಇದು ನ್ಯಾಯ ನೀಡುವ ನ್ಯಾಯ ಸ್ಥಾನವೂ ಹೌದು. ಹಾಡಿಯ ಅಥವಾ ಸಮುದಾಯದ ಮುಖ್ಯಸ್ಥನ ಪತ್ರ ನ್ಯಾಯ ನಿರ್ಣಯಕ್ಕೆ ಬಹಳ ಮಹತ್ವದ್ದಾಗಿರುತ್ತದೆ. ನ್ಯಾಯ ನಿರ್ಣಯದ ಸಂದರ್ಭದಲ್ಲಿ ಅಪಾದಿತ ಕೇಳುಗರಾಗಲಿ ನೇರವಾಗಿ ಮುಖ್ಯಸ್ಥನೊಡನೆ ಮಾತನಾಡಬಹುದಾಗಿದೆ. ಹಾಗೆಯೇ ನ್ಯಾಯ ನಿರ್ಣಯ ಇಬ್ಬರು ಹೆಂಗಸರ ನಡುವೆ ಆಗುತ್ತಿದ್ದರೆ ಮಾತ್ರ ಹೆಣ್ಣು ಮಕ್ಕಳು ತಮ್ಮ ಅಭಿಪ್ರಾಯಗಳನ್ನು ಹೇಳಲು ಅವಕಾಶವಿದೆ.

ಜೇನುಕುರುಬದಲ್ಲಿ ದೇವರುಗುಡ್ಡನಾಗುವವನಿಗೆ ಕನಸಿನಲ್ಲಿ ಆತನ ಶಕ್ತ ಗೋಚರವಾಗುವುದು. ಆಗ ಅದ ಅಯ್ಯನಚೇತನ ಅಂಥರೆ ಮೂಲ ಪುರುಷನ ಆತ್ಮ ಅವನ ಮನದುಂಬಿ ಕೆಲವು ವಿಷಯಗಳನ್ನು ಬೋಧಿಸುತ್ತದೆ. ಉದಾಹರಣೆಗೆ ದೈಹಿಕ, ಮಾನಸಿಕ, ಖಾಯಿಲೆಯನ್ನು ಗುಣಪಡಿಸುವುದಾಗಲಿ, ಸಾಮಾಜಿಕ ಕಟ್ಟಳೆಗಳ ಬಗ್ಗೆಯಾಗಲೀ, ಸಾಂಸ್ಕೃತಿಕ ರೀತಿ ನೀತಿ ನಡೆವಳಿಗಳ ಬಗ್ಗೆಯಾಗಲಿ, ಗುಡ್ಡನು ನ್ಯಾಯ ತೀರ್ಮಾನ ತೆಗೆದುಕೊಳ್ಳುವ ಶಕ್ತಿಯನ್ನು ಆದಿಶಕ್ತಿ ಚೇತನವು ಕರುಣಿಸುತ್ತದೆ. ಅನಂತರ ಅವನ ದೇಹಕ್ಕೆ ಹಿರಿಯನ ಆತ್ಮ ಸೇರುತ್ತದೆ. ಇದನ್ನು ಸೂಕ್ಷ್ಮವಾಗಿ ಹಾಡಿಯ ಜನರು ಗಮನಿಸುತ್ತಾರೆ. ಮೈದುಂಬಿ ಬರುತ್ತದೆ ಎಂದು ಖಚಿತಪಡಿಸಿಕೊಂಡು ಹಿರಿಯ ಗುಡ್ಡನ ಸಹಾಯಕನನ್ನಾಗಿಬಿಡುತ್ತಾರೆ. ಮುಂದೆ ಅವರವರ ಶಕ್ತಾನುಸಾರ ಯಾವ ರೀತಿಯ ಶಕ್ತಿಯನ್ನು ಪಡೆದಿರುತ್ತಾರೆ ಎಂಬುದನ್ನು ಅವಲಂಬಿಸಿ ಅವರು ಬೇರೆ ಬೇರೆ ಉದ್ದೇಶಕ್ಕೆ ಗುಡ್ಡರಾಗುತ್ತಾರೆ. ಒಟ್ಟಾರೆ ಈ ಗುಡ್ಡದಿಂದ ಸಮುದಾಯಕ್ಕೆ ಬಂದೊದಗುವ ಯಾವುದೇ ಕಷ್ಟಕಾರ್ಪಣ್ಯಗಳನ್ನು ಪರಿಹರಿಸುವುದೇ ಆಗಿರುತ್ತದೆ.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಅನಂತರವೂ ಇವರ ಜೀವನ ಕ್ರಮದಲ್ಲಿ ಯಾವುದೇ ವ್ಯತ್ಯಾಸ ಕಂಡು ಬರುತ್ತಿದ್ದಿಲ್ಲ. ೧೯೭೩ ರಲ್ಲಿ ಕಬಿನಿ ನದಿಗೆ ಅಡ್ಡಲಾಗಿ ಅಣೆಕಟ್ಟು ಕಟ್ಟಿದ್ದರಿಂದ ಸಾವಿರಾರು ಎಕರೆ ಕಾಡು ಹಿನ್ನೀರಿನಲ್ಲಿ ಮುಳುಗಡೆಯಾಗುವುದರ ಜೊತೆಗೆ ನಿರಾಶ್ರಿತರಾದ ಜನರಿಗೆ ವಸತಿಯನ್ನು ನಿರ್ಮಿಸಿಕೊಡಲು ಪುನಃ ಕಾಡನ್ನು ಕಡಿಯಬೇಕಾಯಿತು. ಆಗ ಕಾಡುವಾಸಿಗಳಾದ ಜೇನುಕುರುಬರಿಗೆ ಸಹಾ ನಾಡಿನ ಜನರ ಹತ್ತಿರವೇ ಮನೆಗಳನ್ನು ಕಟ್ಟಿಕೊಡಲಾಯಿತು. ಅಂದಿನಿಂದ ಜೇನು ಕುರುಬರ ಪಾರಂಪರಿಕ ಬದುಕು ನಿಧಾನವಾಗಿ ಬದಲಾವಣೆಗೆ ಒಳಗಾಗಬೇಕಾಯಿತು. ಕಾಡಲ್ಲಿ ಕಾಲಕಾಲಕ್ಕೆ ಬದಲಾಯಿಸುತ್ತಿದ್ದ ವಾಸ್ತವ್ಯ ಈಗ ಖಾಯಂ ಆಯಿತು. ತಮ್ಮ ಹೆತ್ತಯ್ಯ ಮುತ್ತಯ್ಯರು ಇದ್ದ ಜಾಗವೆಂದು ಬಲವಾಗಿ ನಂಬಿದ್ದವರಿಗೆ ಪೆಟ್ಟು ಬಿತ್ತು.

ಅರಣ್ಯವನ್ನು ಸಂಪೂರ್ಣವಾಗಿ ಅವಲಂಬಿಸಿ ಬದುಕುತ್ತಿದ್ದ ಜೇನು ಕುರುಬರಿಗೆ ಆಕಸ್ಮಿಕವಾಗಿ ಎದುರಾದ ಸ್ಥಳಾಂತರದ ಸಮಸ್ಯೆ ತುಂಬಾ ಆಘಾತವನ್ನು ಉಂಟುಮಾಡಿತು. ಪರ್ಯಾಯ ಕಸುಬನ್ನೇ ಅರಿಯದ ಅವರ ಬದುಕು ಅತಂತ್ರವಾಯಿತು. ಆಗ ಕುಡುಂಬದ ಗಂಡಸರು ಕೇರಳರಾಜ್ಯ ಮತ್ತು ಕೊಡಗಿನ ಚಹಾ ತೋಟ, ಕಾಫಿ ತೋಟಗಳಿಗೆ ಕೂಲಿಗಳಾಗಿ ದುಡಿಯಲು ವಲಸೆ ಹೋಗಬೇಕಾಯಿತು. ಒಟ್ಟಾರೆ ಬದಲಾದ ವ್ಯವಸ್ಥೆಗೆ ಒಗ್ಗಿಕೊಳ್ಳುವುದು ಜೇನು ಕುರುಬರಿಗೆ ಅನಿವಾರ್ಯವಾಯಿತು.

ಜೇನು ಕುರುಬರು ಆದಿಮ ಬುಡಕಟ್ಟು ಎಂದು ಗುರುತಿಸಲ್ಪಟ್ಟಿರುವುದರಿಂದ ಇವರಿಗೆ 'PTG' (Primitive Tribal Group) ಎಂಬ ಹೆಸರಿನ ಅಡಿಯಲ್ಲಿ ವಿಶೇಷವಾದ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದರಾದರೂ ಅವುಗಳು ಪೂರ್ಣ ಪ್ರಮಾಣದಲ್ಲಿ ಸಂಬಂಧಿಸಿದ ಸಮುದಾಯಗಳಿಗೆ ತಲುಪುವುದಿಲ್ಲ. ತಲುಪುವ ಸಹಾಯವು ಸಕಾಲಿಕವಾಗಿರುವುದಿಲ್ಲ. ಆದ್ದರಿಂದ ಇವರ ಅಭಿವೃದ್ಧಿ ಯಾವುದೇ ಕ್ಷೇತ್ರದಲ್ಲಿಯೂ ಸಮಗ್ರವಾಗಿ ಆಗಿರುವುದಿಲ್ಲ ಎಂದು ಹೇಳಿದರೆ ಸೂಕ್ತವೆನಿಸುತ್ತದೆ. ಅದೇನೇ ಇರಲಿ, ಇಂದು ಜೇನುಕುರುಬರು ಹಿಂದಿಗಿಂತ ಅತ್ಯಂತ ಹೀನಾಯ ಬದುಕನ್ನು ಸಾಗಿಸುತ್ತಿರುವುದು ಕಂಡುಬರುತ್ತದೆ. ಅನಕ್ಷರತೆ  ಅವರನ್ನು ಈ ಸ್ಥಿತಿಯಲ್ಲಿ ಇರಲು ಕಾರಣವಾಗಿ. ಶೇಕಡ ಮೂರರಷ್ಟು ಮೀಸಲಾತಿಯಲ್ಲಿ ಇವರು ಸಹ ಸವತ್ತುಗಳನ್ನು ಪಡೆದುಕೊಳ್ಳಲು ಅರ್ಹರಾಗಿದ್ದರೂ, ಅದಕ್ಕೆ ಬೇಕಾದ ಶೈಕ್ಷಣಿಕ ಅರ್ಹತೆಯ ಕೊರತೆಯಿಂದ ಅದು ಸಾಧ್ಯವಾಗುತ್ತಿಲ್ಲ.

ಜೇನು ಕುರುಬರಂತೆಯೇ ಬೆಟ್ಟ ಕುರುಬ ಅಥವಾ ಕಾಡುಕುರುಬರು ಸಹ ಅರಣ್ಯವಾಸಿಗರೇ ಆಗಿದ್ದರು. ಒಂದು ಕಾಲಘಟ್ಟದಲ್ಲಿ ಈ ಎರಡು ಸಮುದಾಯಗಳು ಒಂದೆ ಆಗಿದ್ದು ಕಸುಬು ಅಥವಾ ಯಾವುದೋ ಒಂದು ಬಲವಾದ ಕಾರಣದಿಂದ ಬೇರೆ ಬೇರೆಯಾಗಿ ಗುರ್ತಿಸಿಕೊಂಡಿರುವ ಸಾಧ್ಯತೆ ಇದೆ. ಜೇನು ಕುರುಬರು ಕೇವಲ ಅರಣ್ಯದಲ್ಲಿ ಲಭ್ಯವಿದ್ದ ಆಹಾರ ಉತ್ಪನ್ನಗಳನ್ನು ಸಂಗ್ರಹಿಸಿ ಅದನ್ನು ಆಹಾರವಾಗಿ ಬಳಸುತ್ತಾ ಬದಲಿ ಕಸುಬನ್ನು ರೂಢಿಸಿಕೊಳ್ಳುವ ಕಾರಣ ಸಮಾಜಮುಖಿಯಾಗದೇ ದೂರ ಉಳಿದಿರುವ ಕಾರಣ ಜೇನು ಕುರುಬರೆಂಬ ಹೆಸರಿನಿಂದ ಕರೆಯಲಾಗಿದೆ. ಬೆಟ್ಟ ಕುರುಬರು ಬಿದಿರನ್ನು ಬಳಸಿಕೊಂಡು ಅದರಿಂದ ಸಾರ್ವಜನಿಕರ ನಿತ್ಯದ ಬಳಕೆಗೆ ಬೇಕಾದ ಸಾಧನ ಸಾಮಗ್ರಿಗಳನ್ನು ಸಿದ್ಧಪಡಿಸಿ ಹತ್ತಿರದ ಗ್ರಾಮೀಣ ವಾರದ ಸಂತೆಗಳಲ್ಲಿ ಮಾರಾಟಮಾಡಿ ಅದರಿಂದ ಬಂದ ಹಣದಿಂದ ಬದುಕು ಸಾಗಿಸುವುದು ಕಂಡು ಬಂದಿದೆ. ಹೆಸರೇ ಸೂಚಿಸುವಂತೆ ಇವರು ಅರಣ್ಯವಾಸಿಗಳು. ಕೊಡಗು ಹಾಗೂ ಮೈಸೂರು ಜಿಲ್ಲೆಗಳಲ್ಲಿ ಮಾತ್ರ ಕಂಡು ಬರುತ್ತಾರೆ. ಮುಖ್ಯವಾಗಿ ಕೊಡಗು ಜಿಲ್ಲೆಯ ವಿರಾಜಪೇಟೆ ಹಾಗೂ ಸೋಮವಾರ ಪೇಟೆ

ತಾಲ್ಲೂಕುಗಳಲ್ಲಿ ಮತ್ತು ಮೈಸೂರು ಜಿಲ್ಲೆಯ ಗುಂಡ್ಲುಪೇಟೆ, ನಂಜನಗೂಡು, ಹೆಗ್ಗಡದೇವನಕೋಟೆ, ಹುಣಸೂರು ಹಾಗೂ ಪಿರಿಯಾಪಟ್ಟಣ ತಾಲೂಕುಗಳಲ್ಲಿ ಕಾಡುಕುರುಬರ ನೆಲೆಗಳನ್ನು ಕಾಣಬಹುದಾಗಿದೆ. ಕುರುಬರಲ್ಲೇ ಇರುವ ಮುಳ್ಳುಕುರುಬ ಬುಡಕಟ್ಟು ಕರ್ನಾಟಕದಲ್ಲಿ ಕಾಣಬರುವುದೇ ವಿರಳ. ಅವರ ಸಂಖ್ಯೆ ಅತ್ಯಲ್ಪವಾಗಿದೆ.

ಕಾಡು ಕುರುಬರ ವಾಸದ ನೆಲೆಗಳನ್ನು ಹಾಡಿ ಎಂಬುದಾಗಿ ಕರೆಯುವರು ಇದರ ಅರ್ಥ ಗ್ರಾಮ ಎಂಬ ಅರ್ಥವನ್ನೇ ನೀಡುತ್ತದೆ. ಇವರ ಗುಡಿಸಲುಗಳು ಬಹಳ ಚಿಕ್ಕದಾಗಿರುತ್ತಿದ್ದವು. ಸಾಮಾನ್ಯವಾಗಿ ಹಳ್ಳಕೊಳ್ಳಗಳ ಸಮೀಪ ಅಥವಾ ನೀರು ಸಿಗುವ ಪ್ರದೇಶದಲ್ಲಿ ಹಾಡಿ ನಿರ್ಮಿಸುತ್ತಿದ್ದರು. ಅದರ ನಿರ್ಮಾಣವು ಬಹಳ ಸರಳವಾಗಿರುತ್ತಿತ್ತು. ಬಿದಿರು ಹುಲ್ಲು ನಾರು ಮತ್ತು ಗರಿಗಳನ್ನು ಹಾಗೂ ಮಣ್ಣು ನೀರು ಬಳಸಿ ಗುಡಿಸಲನ್ನು ನಿರ್ಮಿಸುತ್ತಿದ್ದರು. ಹಾಡಿ ನಿರ್ಮಾಣಕ್ಕೆ ಮೊದಲು ಒಂದು ವಿಶೇಷ ಪೂಜೆ ಸಲ್ಲಿಸುವುದು ರೂಢಿಯಲ್ಲಿತ್ತು. ಅವರು ಆಯ್ದುಕೊಂಡ ಸ್ಥಳದಲ್ಲಿ ಕಲ್ಲುಗಳನ್ನು ಒಂದರ ಮೇಲೊಂದನ್ನು ಇಟ್ಟು ಪೂಜೆ ಮಾಡಿ ಹಿಂತಿರುಗಿ ಹೋಗುತ್ತಾರೆ. ಮರುದಿನ ಬಂದು ನೋಡಿದಾಗ ಒಂದರ ಮೇಲೊಂದು ಇಟ್ಟಿದ್ದ ಕಲ್ಲುಗಳು ಉರುಳದೆ ಇಟ್ಟಿದ್ದಂತೆಯೇ ಇದ್ದರೆ ಆ ಸ್ಥಳ ವಾಸಕ್ಕೆ ಯೋಗ್ಯವೆಂದು ತಿಳಿಯುತ್ತಾರೆ. ಹಾಡಿ ನಿರ್ಮಾಣ ಸುಗಮವಾಗಿ ಸಾಗುತ್ತದೆ. ಒಂದು ವೇಳೆ ಕಲ್ಲುಗಳು ಉರುಳಿ ಬಿದ್ದಿದ್ದರೆ ಆ ಸ್ಥಳದಲ್ಲಿ ಹಾಡಿ ನಿರ್ಮಾಣಕ್ಕೆ ಅಪಾಯ ಎಂದು ನಂಬುತ್ತಾರೆ.

ನಿರ್ಮಿಸಿದ ಗುಡಿಸಲು ಕೇವಲ ೮ x ೧೦ ಅಡಿ ಅಗಲವಿದ್ದರೆ ಒಂದು ಬಿದಿರ ತಡಿಕೆಯಿಂದ ಎರಡು ಭಾಗಗಳಾಗಿ ಮಾಡಿ ಒಂದನ್ನು ಅಡುಗೆಮನೆಗೆ ಬಳಸಿದರೆ ಉಳಿದ ಭಾಗ ವಿಶ್ರಾಂತಿಗೆ, ಒಟ್ಟಾಗಿ ಕುಳಿತು ಮಾತನಾಡಲು ಉಪಯೋಗುತ್ತವೆ. ಈ ಗುಡಿಸಲಿನ ಬಾಗಿಲು ಬಹಳ ಚಿಕ್ಕದ್ದು, ಅಂದರೆ ಮನುಷ್ಯರು ನುಸುಳಿಕೊಂಡು ಹೋಗುವಂತಿರುತ್ತದೆ. ಕಿಟಕಿಗಳಿಲ್ಲ. ಇತ್ತೀಚೆಗೆ ಈ ಮಾದರಿ ಗುಡಿಸಲು ಕಡಿಮೆಯಾಗಿದ್ದು ವಿಶಾಲವಾಗಿರುತ್ತದೆ. ಸರ್ಕಾರದ ಬೇರೆ ಬೇರೆ ಯೋಜನೆ ಅಡಿಯಲ್ಲಿ ಮನೆಕಟ್ಟಿಸಿಕೊಟ್ಟಿರುವುದು ಸಾಮಾನ್ಯವಾಗಿ ಕಂಡುಬರುತ್ತದೆ. ಕೆಲವು ಕಡೆ ಬಿದಿರಿನ ಚಾಪೆಗಳನ್ನು ಅಥವಾ ದಬ್ಬೆಗಳನ್ನು ಚಾಪೆಯಂತೆ ಹೆಣೆದು ಚೌಕಾಕಾರದ ತಡಿಕೆ, ತೊಪ್ಪು, ಜೊಂಡು ಹುಲ್ಲನ್ನು ಬಳಸಿ ಕಟ್ಟಿರುತ್ತಾರೆ. ಕೋಳಿ ಗೂಡನ್ನು ಪ್ರತ್ಯೇಕವಾಗಿ ನಿರ್ಮಿಸುವವರು ಮನೆ ಮುಂಭಾಗದಲ್ಲಿ ಜಗಲಿ ಅಥವಾ ಪಡಸಾಲೆಯನ್ನು ಕಟ್ಟಿ ಅದನ್ನು ಸಗಣಿಯಿಂದ ಸಾರಿಸುತ್ತಾರೆ. ಗುಡಿಸಲಿನಲ್ಲಿ ತಾವೇ ಸಿದ್ಧ ಪಡಿಸಿರುವ ಚಾಪೆಗಳನ್ನು ಹೊರತು ಪಡಿಸಿ ಬೇರಾವುದೇ ಪೀಠೋಪಕರಣಗಳಿರುವುದಿಲ್ಲ. ಅಗತ್ಯವಾದ ಮಣ್ಣಿನ ಮಡಕೆ ಕೆಲವು ಕಂದು, ಅಲ್ಯೂಮಿನಿಯಂತ ಹಾಗೂ ಸ್ಟೇನ್‌ಲೆಸ್ ಸ್ಟೀಲ್ ಪಾತ್ರೆಗಳು ಇತ್ತೀಚೆಗೆ ಮಿತವಾಗಿ ಬಳಸುತ್ತಿರುವುದು ಕಾಣಬರುತ್ತದೆ.

ಹಾಡಿನ ಮಧ್ಯದಲ್ಲಿನ ಬಯಲಿನಲ್ಲಿ ನಾಲ್ಕು ಕಂಬಗಳ ಆಧಾರದ ಮೇಲೆ ಒಂದು ತೆರೆದ ಗುಡಿಸಲು ನಿರ್ಮಿಸುವರು. ಇದನ್ನು ಅಂಬಾಲ ಎಂದು ಕರೆಯುವರು. ಈ ತೆರೆದ ಗುಡಿಸಲನ್ನು ವಿಶೇಷ ಸಾಮಾಜಿಕ ಮತ್ತು ಸಾಂಪ್ರದಾಯಿಕ ಸಂದರ್ಭಗಳಲ್ಲಿ ಹಾಗೂ ಹಾಡಿಯ ಸಮಸ್ಯೆ ಇತ್ಯಾದಿಗಳನ್ನು ಚರ್ಚಿಸಲು ಬಳಕೆಯಾಗುತ್ತದೆ. ಸಾಮಾನ್ಯ ದಿನಗಳಲ್ಲಾದರೆ ವಿವಾಹಿತ ಪುರುಷರು ಒಟ್ಟಾಗಿ ಕಲೆತು ಹರಟೆ ಮಾತುಗಳನ್ನಾಗಲು ಅಥವಾ ಮಲಗುವುದಕ್ಕೆ ಅಂಬಾಲವನ್ನು ಬಳಸಿಕೊಳ್ಳುವುದುಂಟು. ಈ ಪ್ರದೇಶಕ್ಕೆ ಚಪ್ಪಲಿ ನಿಷೇಧ. ರಾತ್ರಿಯ ವೇಳೆಯಲ್ಲಿ ಅವಿವಾಹಿತ ಗಂಡುಮಕ್ಕಳೂ ಈ ಅಂಬಾಲದಲ್ಲಿ ಮಲಗುವುದುಂಟು. ಬೇಸಿಗೆಯಲ್ಲಿ ಜೇನುಕುರುಬರು ತಮ್ಮ ತಮ್ಮ ಗುಡಿಸಲ ಮುಂದೆ ಮಲಗುವರು. ಚಳಿಗಾಲದಲ್ಲಿ ಮಾತ್ರ ಗುಡಿಸಲ ಮುಂದೆ ಬೆಂಕಿಯನ್ನು ಹಾಕಿಕೊಂಡು ಅದರ ಸುತ್ತ ಮಲಗುವರು.

ಕಾಡುಕುರುಬರ ಉಡುಪು ಮತ್ತು ಆಹಾರವನ್ನು ಕುರಿತು ಒಂದಿಷ್ಟು ಮಾಹಿತಿಯನ್ನು ಹೇಳುವುದಾದರೆ, ಸಾಮಾನ್ಯವಾಗಿ ಅವರ ಉಡುಪನ್ನು ನೋಡಿದ ತಕ್ಷಣವೇ ಇವರು ಅರಣ್ಯವಾಸಿಗಳು ಹಾಗೂ ಒಂದು ಬುಡಕಟ್ಟಿಗೆ ಸೇರಿದವರು ಎಂಬುದನ್ನು ಗುರುತಿಸಿ ಬಿಡಬಹುದು. ಪುರುಷರಿಗೆ ಲಂಗೋಟಿ ಅಥವಾ ಪಂಚೆತುಂಡು ಮತ್ತು ಅರೆತೋಳಿನ ಅಂಗಿ ಹಾಕಿಕೊಳ್ಳುತ್ತಿದ್ದರು. ತಲೆಯಲ್ಲಿ ಉದ್ದವಾಗಿ ಬೆಳೆದ ಕೂದಲನ್ನು ಹಿಂದಕ್ಕೆ ಎತ್ತಿ ತುರುಬು ಕಟ್ಟಿಕೊಳ್ಳುತ್ತಿದ್ದರು. ಓಲೆ, ಕೈಬಂದಿ ಧರಿಸುತ್ತಿದ್ದರು. ಸ್ತ್ರೀಯರು ನಾಲ್ಕು ಗಜದ ಸೀರೆಯನ್ನು ಸರಳವಾಗಿ ಉಡುತ್ತಿದ್ದರು. ಭುಜದಿಂದ ಕೆಳಗೆ ಎರಡು ಕಂಕುಳಗಳಿಂದ ಮಂಡಿಯವರೆಗೆ ಬರುವ ರೀತಿಯಲ್ಲಿ ಸೀರೆಯನ್ನು ಸುತ್ತಿ ಬೆನ್ನಿನ ಹಿಂದಕ್ಕೆ ತಂದು ಗಂಟುಹಾಕಿ ಬಿಗಿದುಕಟ್ಟಿಕೊಳ್ಳುತ್ತಿದ್ದರು. ಕಿವಿಗೆ ಓಲೆ, ಗಾಜಿನ ಬಳೆಗಳು, ಕರಿಮಣಿ ಸರ ಧರಿಸುವುದು ರೂಢಿಯಲ್ಲಿತ್ತು. ಅವಿವಾಹಿತ ಸ್ತ್ರೀಯರು ತಾಳಿಯ ಜೊತೆಗೆ ಕರಿಮಣಿ ಸರ ಕಾಲುಂಗುರ, ಕೈಬೆರಳಿನಲ್ಲಿ ಉಂಗುರ, ಕಿವಿಓಲ ಇವೆ

ಆಭರಣ ಹಾಕಿಕೊಳ್ಳುತ್ತಿದ್ದರು. ಬಗೆಬಗೆಯ ಮಣಿಯ ಸರಗಳನ್ನು ಅಲಂಕಾರಕ್ಕಾಗಿ ಧರಿಸುತ್ತಿದ್ದರು. ಗಂಡು ಮಕ್ಕಳು ಚಡ್ಡಿ, ಅಂಗಿ, ಹೆಣ್ಣು ಮಕ್ಕಳು ಲಂಗ ಮತ್ತು ಕುಪ್ಪಸ ಧರಿಸುತ್ತಿದ್ದರು. ಆದರೆ ಇಂದು ನಾಗರಿಕರ ನಡುವೆ ಸಂಪರ್ಕ ಹೊಂದಿದ ಅನಂತರ ಅವರ ಉಡುಗೆತೊಡುಗೆಯಲ್ಲಿ ಮಹತ್ತರವಾದ ಬದಲಾವಣೆಗಳಾಗಿವೆ.

ಕಾಡುಕುರುಬರ ಆಹಾರ ಕ್ರಮ ಹಾಗೂ ಸರಳವಾದುದು. ರಾಗಿ ಇವರ ಪ್ರಧಾನ ಆಹಾರ. ರಾಗಿ ಮುದ್ದೆ ಸೊಪ್ಪಿನಸಾರು ನಿತ್ಯದ ಆಹಾರ, ವಿಶೇಷ ಸಂದರ್ಭದಲ್ಲಿ ಮಾತ್ರ ಅಕ್ಕಿ ಬಳಸುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ನ್ಯಾಯಬೆಲೆ ಅಂಗಡಿಗಳ ಮೂಲಕ ಅಕ್ಕಿ ಮತ್ತು ಇತರೆ ಧಾನ್ಯಗಳನ್ನು ಸುಲಭ ಬೆಲೆಗೆ ನೀಡುತ್ತಿರುವುದರಿಂದ ಅವರ ಆಹಾರ ಕ್ರಮದಲ್ಲಿ ಅಪಾರ ಬದಲಾವಣೆಯನ್ನು ಕಾಣುತ್ತೇವೆ. ಗೋದಿಯಿಂದ ಚಪಾತಿ, ಜೋಳದ ಮುದ್ದೆ ಮತ್ತು ರೊಡ್ಡಿ ತಯಾರಿಸಿ ತಿನ್ನುವುದುಂಟು. ಜೊತೆಗೆ ಕಾಡಿನಲ್ಲಿ ಸಿಗುವ ಗೆಡ್ಡೆ, ಗೆಣಸು, ಅಣಬೆ ನಾರುಬೇರು, ಸೊಪ್ಪುಸೊದೆ ಇತ್ಯಾದಿಗಳು ಆಹಾರವಾಗಿ ಬಳಕೆಯಾಗುತ್ತವೆ.

ಇವರು ಮಾಂಸಾಹಾರಿಗಳು ಹೌದು. ಹಿಂದೆ ಕಾಡಿನಲ್ಲಿದ್ದ ಕಡವೆ, ಹಂದಿ, ಜಿಂಕೆ, ಹಕ್ಕಿ ಮೊದಲಾದವುಗಳನ್ನು ಹಿಡಿದು ಅವುಗಳ ಮಾಂಸವನ್ನು ತಿನ್ನುತ್ತಿದ್ದರು. ಇತ್ತೀಚೆಗೆ ಅರಣ್ಯ ಕಾಯಿದೆಯನ್ವಯ ಪ್ರಾಣಿಗಳನ್ನು ಬೇಟೆಯಾಡುವುದನ್ನು ನಿಷೇಧಿಸಲಾಗಿದ್ದು, ಮಾಂಸಕ್ಕಾಗಿ ಕೋಳಿಸಾಕುವ ಪರ್ಯಾಯ ಮಾರ್ಗ ಕಂಡುಕೊಂಡಿದ್ದಾರೆ. ಇಂದಿಗೆ ಕೋಣ ಮತ್ತು ದನದ ಮಾಂಸ ನಿಷಿದ್ಧ. ಬೆಲ್ಲದ ಬಳಕೆಯಿದೆ. ಪುರುಷರು ಹೆಂಡ, ಸರಾಯಿ ಕುಡಿಯುವುದು, ಹೊಗೆಸೊಪ್ಪು ಮತ್ತು ಬೀಡಿ ಸೇದುವುದು ಸಾಮಾನ್ಯ. ಸ್ತ್ರೀಯರು ವಿಶೇಷ ಸಂದರ್ಭಗಳಲ್ಲಿ ಮಧ್ಯಪಾನ ಮಾಡುವರು. ಎಲೆ, ಅಡಿಕೆ ಮಾತ್ರ ಸಾಮಾನ್ಯ. ಇತ್ತೀಚೆಗೆ ನಾಗರಿಕ ಸಂಪರ್ಕ ಎಲ್ಲಾ ರೀತಿಯಲ್ಲಿಯೂ ಬದಲಾವಣೆಯನ್ನು ಉಂಟುಮಾಡಿದೆ.

ಕಾಡಿನ ವಾಸಿಗಳಾದ ಇವರು ತಾವು ಸ್ವಯಂ ವೈದ್ಯನನ್ನು ರೂಢಿಸಿಕೊಂಡರುವುದನ್ನು ಕಾಣಬಹುದಾಗಿದೆ. ಬೇರೆ ಬೇರೆ ಗಿಡಗಳ ಬೇರು, ನಾರು, ಹಣ್ಣುಕಾಯಿ ಎಲೆ ಇತ್ಯಾದಿಗಳಿಂದ ಸಿದ್ಧಪಡಿಸಿದ ಔಷಧಿ ನೀಡುವುದನ್ನು ಸಮುದಾಯದ ಕೆಲವರು ಪರಿಣತಿ ಹೊಂದಿರುತ್ತಾರೆ.

ಕಸುಬನ್ನು ಕುರಿತು ಹೇಳುವುದಾದರೆ, ಎಲ್ಲಾ ಅರಣ್ಯವಾಸಿ ಬುಡಕಟ್ಟುಗಳಂತೆ ಕಾಡುಕುರುಬರಲ್ಲಿಯೂ ಮೂಲ ಕಸುಬಿನೊಂದಿಗೆ ಉಪಕಸುಬನ್ನು ಅವಲಂಬಿಸಬೇಕಾಗಿದೆ. ಬಿದಿರು ಇವರ ಕುಸುಬಿಗೆ ಮೂಲ ಕಚ್ಚಾವಸ್ತು. ಇತ್ತೀಚೆಗೆ ಅದರ ಕೊರತೆ ಮತ್ತು ನಿಯಂತ್ರಣವಿರುವುದರಿಂದ ಅದು ಲಾಭದಾಯಕವಾಗಿಲ್ಲ. ಆದ್ದರಿಂದ ಕೊಡುಗು ಮತ್ತು ಕೇರಳದ ಗಡಿಭಾಗದ ಚಹಾತೋಟಾ, ಕಾಫಿ ತೋಟಗಳಿಗೆ ವಲಸೆ ಹೋಗಿ ಕೂಲಿಗಳಾಗಿ ಕೆಲವರು ಜೀತದಾಳುಗಳಾಗಿ ದುಡಿಯುತ್ತಿದ್ದಾರೆ. ವಯಸ್ಸಾದ ಮತ್ತು ಮಕ್ಕಳು ಅವರ ನೆಲೆಗಳಲ್ಲೇ ಉಳಿಯುತ್ತಾರೆ. ಒಟ್ಟಾರೆ ಬದಲಾದ ಬದುಕಿಗೆ ಭವಿಷ್ಯವನ್ನು ಬರೆಯುವ ನಿಟ್ಟಿನಲ್ಲಿ ಬುಡಕಟ್ಟುಗಳು ಪರ್ಯಾಯ ಕಸುಬು ಕೂಲಿ ಅನಿವಾರ್ಯವಾಗಿದೆ. ಕೂಲಿ ಸ್ಥಳೀಯವಾಗಿ ಸಿಗುವುದು ದುಸ್ತರ. ಆದ್ದರಿಂದ ಮೇಲೆ ಹೇಳಿದಂತೆ ಬೇರೆಡೆಗೆ ವಲಸೆ ಹೋಗುತ್ತಿದ್ದಾರೆ.

ಮೂಲತಃ ಕಾಡುಕುರುಬ ಕುಟುಂಬದಲ್ಲಿ ಗಂಡಹೆಂಡತಿ, ಮಕ್ಕಳು ಎಲ್ಲರೂ ಒಂದಲ್ಲ ಒಂದು ಕೆಲಸದಲ್ಲಿ ನಿರತರಾಗುತ್ತಾರೆ. ಅದರಲ್ಲಿಯೂ ಮಹಿಳೆ ಮನೆಕೆಲಸದ ಜೊತೆಗೆ ಕೃಷಿ ಕೆಲಸದಲ್ಲಿ ಗಂಡನಿಗೆ ಸಹಾಯ ಮಾಡುವಳು. ಹಾಗೂ ಆಹಾರ ಸಿದ್ಧತೆಗೆ ಬೇಕಾದ ಉರುವಲು ಮತ್ತು ಕುಟುಂಬ ನಿರ್ವಹಣೆಗೆ ಬೇಕಾದ ಇತರೆ ಸಾಮಗ್ರಿಗಳನ್ನು ತನ್ನ ಸ್ವಂತ ಪ್ರಯತ್ನದಿಂದ ಹೊಂದಿಸಿಕೊಳ್ಳುವಳು. ಆದ್ದರಿಂದ ಕಾಡುಕುರುಬ ಮಹಿಳೆಯು ಕುಟುಂಬದಲ್ಲೇ ಅತಿ ಹೆಚ್ಚು ಜವಾಬ್ದಾರಿ ಹೊಂದಿದವರು. ಈಚಿನ ದಿನಗಳಲ್ಲಿ ಬೀಡಿ ಕಟ್ಟುವ ಕೆಲಸದಲ್ಲಿ ಮಹಿಳೆಯರು ನಿರತರಾಗಿದ್ದಾರೆ. ಈ ಸಂಬಂಧ ಅವರು ಸಂತೆ ಅಥವಾ ಮಾರುಕಟ್ಟೆಗೆ ಹೋಗುವುದು ಮತ್ತು ಪದಾರ್ಥಗಳನ್ನು ಮಾರುವ ಕೆಲಸವನ್ನು ಮಾಡುತ್ತಾರೆ. ಈ ನಿಟ್ಟಿನಲ್ಲಿ ಹೇಳುವುದಾದರೆ ಸ್ತ್ರೀ ಮನೆಯ ಅಮೂಲ್ಯ ಆಸ್ತಿಯೂ ಆಗಿರುತ್ತಾಳೆ.

ವಿವಾಹ ಪದ್ಧತಿಯು ಸೋಲಿಗ ಬುಡಕಟ್ಟುಗಳಲ್ಲಿದ್ದಂತೆ ಪಲಾಯನ ವಿವಾಹ ಪದ್ಧತಿ ರೂಢಿಯಲ್ಲಿತ್ತು. ಅಂದರೆ ಪ್ರಾಯಕ್ಕೆ ಬಂದ ಹುಡುಗ ಒಬ್ಬ ಹುಡುಗಿಯನ್ನು ಹೇಳದೆ ಕೇಳದೆ ಕರೆದೊಯ್ಯುವುದು. ಸ್ವಲ್ಪದಿನಗಳು ಇಬ್ಬರು ಮರೆಯಾಗಿದ್ದು ಅನಂತರ ಹಾಡಿಗೆ ಬರುವುದು. ಆಗ ಹಾಡಿಯ ಯಜಮಾನ ವಿಧಿಸುವ ದಂಡ ಶುಲ್ಕವನ್ನು ಸಲ್ಲಿಸಿ ವಿವಾಹವಾಗುತ್ತಿದ್ದು. ಇತ್ತೀಚೆಗೆ ನಾಡಿನ ಜನರ ವಿವಾಹ ಕ್ರಮವನ್ನು ಗಮನಿಸಿ ಸ್ವಲ್ಪ ಬದಲಾವಣೆಯನ್ನು ತಂದುಕೊಂಡಿದ್ದಾರೆ. ಅಂದರೆ ತಂದೆ-ತಾಯಿಗಳೇ ತಮ್ಮ ಮಕ್ಕಳ ವಿವಾಹವನ್ನು ಏರ್ಪಾಡು ಮಾಡುವ ಕ್ರಮ ಹೆಚ್ಚಾಗಿ ರೂಢಿಗೆ ಬಂದಿದೆ. ಎಲ್ಲರಲ್ಲೂ ಇರುವಂತೆ ಇವರಲ್ಲಿಯೂ ಒಂದೇ ಕುಲಕ್ಕೆ ಸೇರಿರುವ ಹುಡುಗ ಹುಡುಗಿಯ ಮದುವೆ ನಿಷಿದ್ಧ. ಕಾರಣ ಅವರು ಸೋದರಸೋದರಿ ಸಂಬಂಧ ಎಂದು ಹೇಳುತ್ತಾರೆ. ಒಂದು ಪಕ್ಷ ಅಂತಹ ಸಂಬಂಧಗಳು ಏರ್ಪಟ್ಟರೆ ಅವರನ್ನು ಕುಲದಿಂದ ಬಹಿಷ್ಕರಿಸಿ ಹೊರಗಟ್ಟುವರು. ವಿಶೇಷವೆಂದರೆ ಇವರಲ್ಲಿ ವರದಕ್ಷಿಣೆ ಬದಲಿಗೆ ವಧುದಕ್ಷಿಣೆ ಇದೆ. ಅಂದರೆ ವರನ ಕಡೆಯವರು ವಧುವಿನ ಮನೆಯವರಿಗೆ ಮದುವೆಯ ಖರ್ಚಿನಲ್ಲಿ ಅರ್ಧ ಖರ್ಚು ಕೊಡಬೇಕು. ಒಟ್ಟಾರೆ ಯಾರಿಗೂ ಹೊರೆಯಾಗದಂತೆ ಪ್ರತಿಯೊಂದು ಸಂದರ್ಭದಲ್ಲೂ ಪರಸ್ಪರ ಸಹಕಾರದ ಬದುಕು ಬುಡಕಟ್ಟುಗಳಲ್ಲಿ ಕಂಡುಬರುತ್ತದೆ. ಅದಕ್ಕೆ ಈ ಬುಡಕಟ್ಟು ಹೊರತಾಗಿಲ್ಲ.

ಪ್ರಕೃತಿಯನ್ನು ಆರಾಧಿಸುವ ಅರಣ್ಯವಾಸಿ ಬುಡಕಟ್ಟುಗಳಿಗೆ ಗಿಡಮರ, ನಾರುಬೇರು, ಕಲ್ಲುಮಣ್ಣು ಎಲ್ಲವೂ ಮಹತ್ವವಾದುವು. ಆದರೆ ಒಂದೊಂದು ಬುಡಕಟ್ಟಿನ ದೃಷ್ಟಿಯಲ್ಲಿ ಅವರವರ ಭಾಷೆಗೆ ಅನುಗುಣವಾಗಿ ಬೇರೆ ಬೇರೆ ಹೆಸರುಗಳಿಂದ ಕರೆಯುವುದುಂಟು. ಅಲ್ಲದೇ ಹಿರಿಯರ ಆತ್ಮ ಅಥವಾ ಪೂರ್ವಜರು ಇವರಿಗೆ ಎಲ್ಲಾ ಸಂದರ್ಭದಲ್ಲಿ ಸ್ಮರಣೀಯರು. ಅವರ ಆತ್ಮಗಳು ನಮ್ಮನ್ನು ಕಾದು ಕಾಪಾಡಿ ಮುನ್ನಡೆಸುತ್ತಿವೆ ಎಂಬ ನಂಬಿಕೆ ಇದೆ.

**ಉಪಸಂಹಾರ:** ಒಕ್ಕೈಕುರುಬ, ಜೇನುಕುರುಬ ಮತ್ತು ಕಾಡುಕುರುಬ (ಬೆಟ್ಟಕುರುಬ) ಈ ಮೂರು ಬುಡಕಟ್ಟುಗಳನ್ನು ಕುರಿತ ಕೆಲವು ವಿಚಾರಗಳನ್ನು ಚರ್ಚೆಗೆ ಒಳಪಡಿಸುವುದರೊಂದಿಗೆ ಒಕ್ಕೈ ಕುರುಬ ಎಂಬ ಹೆಸರಿನ ಒಂದು ಸಮುದಾಯವನ್ನು ಸಾಹಿತ್ಯಲೋಕಕ್ಕೆ ಮೊದಲಬಾರಿಗೆ ಪರಿಚಯಿಸುವ ಪ್ರಯತ್ನ ಮಾಡಲಾಗಿದೆ. ಈಗಾಗಲೇ ಈ ಸಮುದಾಯವನ್ನು ಕುರಿತು ಕರ್ನಾಟಕ ಇತಿಹಾಸ ಕಾಡೆಮಿ ಬೆಂಗಳೂರು, ಇವರು ನಡೆಸುವ ವಾರ್ಷಿಕ ವಿಚಾರ ಸಂಕಿರಣ (ಬದಾಮಿ)ದಲ್ಲಿ "ಇತಿಹಾಸವಿಲ್ಲದವರ ಇತಿಹಾಸ" ಎಂಬ ಶೀರ್ಷಿಕೆಯಲ್ಲಿ ಪ್ರಬಂಧವನ್ನು ಮಂಡಿಸಲಾಗಿತ್ತು. ಆದರೆ ಹೆಚ್ಚಿನ ವಿಚಾರ ತಿಳಿದು ಬಂದಿರಲಿಲ್ಲ. ತದನಂತರದಲ್ಲಿ ಈ ಸಮುದಾಯವನ್ನು ಕುರಿತು ಹೆಚ್ಚಿನ ಆಸಕ್ತಿಯನ್ನು ಹೊಂದಿ ಅಧ್ಯಯನ ಕೈಗೊಂಡಾಗ ಮೌಖಿಕ ಹೇಳಿಕೆಯಲ್ಲಿ ಕೆಲವು ವಿಷಯಗಳು ತಿಳಿದು ಬಂದುದನ್ನು ಇಲ್ಲಿ ಪರಿಚಯಿಸಿದ್ದೇನೆ.

ಸಾಮಾನ್ಯವಾಗಿ ನಮಗೆಲ್ಲರಿಗೂ ತಿಳಿದಿರುವಂತೆ ಒಂದೇ ಗುಂಪಿಗೆ ಸೇರಿದ ಸಮುದಾಯವೊಂದು ಬದಲಾದ ಪರಿಸ್ಥಿತಿ ಹಾಗೂ ಅಸ್ತಿತ್ವಕ್ಕಾಗಿ ಭಿನ್ನ ಗುಂಪುಗಳಾಗಿ ಪ್ರತ್ಯೇಕವಾಗುವ ಸಾಧ್ಯತೆಗಳು ಇತ್ತು. ಹಾಗೆಯೇ ಅವರು ಅನುಸರಿಸುವ ಕಸುಬು, ಧರಿಸುವ ಉಡುಗೆ, ತೊಡುಗೆ, ಮಾತನಾಡುವ ಭಾಷೆಯನ್ನು ಆಧರಿಸಿ ಅವರನ್ನು ಭಿನ್ನ ಹೆಸರುಗಳಿಂದ ಕರೆಯುವುದು ರೂಢಿಯಲ್ಲಿ ಬಂದಾಗ ಹತ್ತಾರು ವರ್ಷಗಳಲ್ಲಿ ಆ ಗುಂಪುಗಳು ಸಂಪೂರ್ಣ ಬೇರೆಯೇ ಆಗಿ ಗುರ್ತಿಸಿಕೊಂಡಿರುವುದು ಕರ್ನಾಟಕದಲ್ಲಿ ಕಾಣಸಿಗುವ ಹತ್ತು ಹಲವಾರು ಕುರುಬ ಸಮುದಾಯಗಳನ್ನು ಗಮನಿಸಬಹುದು. ಉದಾಹರಣೆಗೆ ಕಾಡುಕುರುಬ / ಬೆಟ್ಟಕುರುಬ, ಜೇನುಕುರುಬ, ಮುಳ್ಳುಕುರುಬ, ಕೊಂಗನಾಡಕುರುಬ, ಕಚ್ಚೆಕುರುಬ, ಒಕ್ಕೈಕುರುಬ, ಹಂಡೆಕುರುಬ, ಕಲ್ಲುಮನೆಕುರುಬ, ಹುಲ್ಲುಮನೆಕುರುಬ, ಊರುಕುರುಬ, ಗೊಂಡಕುರುಬ, ಬುಂಡೇ ಕುರುಬ, ಅಲೆಮಾರಿ ಕುರುಬ, ಹತ್ತಿಕಂಕಣ ಕುರುಬ, ಉಣ್ಣೆಕಂಕಣ ಕುರುಬ, ಕುರಿಕುರುಬ ಇವೇ ಮುಂತಾದ ಹೆಸರುಗಳು ಇರುವುದು ಸಾಧ್ಯವಿದೆ. ಕುರುಬ ಪದವನ್ನು ಹೊರತು ಪಡಿಸಿ ಅದರ ಪೂರ್ವಪದ ಮಾತ್ರ ಬದಲಾಗಿದೆ. ಅವುಗಳೆಲ್ಲವು ಆ ಕುರುಬ ಸಮುದಾಯದ ವಿಶೇಷತೆಯನ್ನು ಐಡೆಂಟಿಟಿ (ಚಹರೆ)ಯನ್ನು ತಿಳಿಸುತ್ತದೆ. ಸಾವಿರಾರು ವರ್ಷಗಳ ಹಾದಿಯಲ್ಲಿ ಅವರು ಒಬ್ಬೊಬ್ಬರು ಭಿನ್ನ ಎಂಬುದು ಗೋಚರವಾದರೂ ಆಶ್ಚರ್ಯಪಡಬೇಕಿಲ್ಲ. ಅದಕ್ಕೆ ಮೊತ್ತ ಮೊದಲ ಅಂಶ ಭಾಷೆ. ಭಾಷೆಯೊಂದು ಬದಲಾದರೆ ಸಂಸ್ಕೃತಿ ಮತ್ತು ಇತರೆ ಅಂಶಗಳೆಲ್ಲವೂ ಬದಲಾಗುವ ಸಾಧ್ಯತೆಯಿದೆ. ಬದಲಾವಣೆ ಅಂದ ಮಾತ್ರಕ್ಕೆ ಅವರು ಮನುಷ್ಯತ್ವ ಕಳೆದುಕೊಂಡು ಬೇರೊಂದು ಜೀವಿಯಾಗುವುದಿಲ್ಲ. ಆದರೆ ಆಚಾರ ವಿಚಾರ, ಉಡುಗೆ ತೊಡುಗೆ

ಕಸುಬು ಮತ್ತು ಆಹಾರ ಪದ್ಧತಿಯಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸವಾದರೂ ಅದು ಆಯಾ ಸಮುದಾಯಗಳಿಗೆ ಅನನ್ಯ ಎಂದು ಗುರ್ತಿಸಲಾಗುವುದು.

ಅರಣ್ಯವಾಸಿಗಳಾದ ಬುಡಕಟ್ಟು ಜನರನ್ನು ಗಮನಿಸಿದಾಗ ಅವರ ಎತ್ತರವೂ ಒಂದೇ ಆಗಿರುವುದನ್ನು ಕಾಣಬಹುದಾಗಿದೆ. ಸಾಮಾನ್ಯವಾಗ ಎಲ್ಲಾ ಬುಡಕಟ್ಟುಗಳು ಅರಣ್ಯವಾಸಿ ಅತಿ ಚಿಕ್ಕದಾದ ಗುಡಿಸಲನ್ನು ನಿರ್ಮಿಸುವರು. ಒಳಗೆ ಹೋಗಲು ನಿರ್ಮಿಸುವ ಬಾಗಿಲು ಸಹ ಅತಿ ಚಿಕ್ಕದು ಅಂದರೆ ಮನುಷ್ಯರು ನುಸುಳಿಕೊಂಡು ಹೋಗಬೇಕು. ಒಟ್ಟಾರೆ ಕ್ರೂರಮೃಗಗಳ ಪ್ರದೇಶವಾದ ಅರಣ್ಯದಲ್ಲಿ ತಮ್ಮನ್ನು ತಾವು ಕುಗ್ಗಿಸಿಕೊಂಡು ಕಂಡು ಕಾಣದಂತೆ ಬಚ್ಚಿಟ್ಟುಕೊಂಡು ಬರುಕುವ, ಅವರೆಂದು ಎದೆಚಾಚಿ ನೆಟ್ಟಗೆ ನಡೆದಾಡುವುದು ಸಾಧ್ಯವಿಲ್ಲ. ಒಟ್ಟಾರೆ  ಈ ಅನಿವಾರ್ಯದ ಹುಚ್ಚತನದ ಬದುಕು ಅವರ ಕನಿಷ್ಟ ಎತ್ತರಕ್ಕೆ ಕಾರಣವಾಗಿದೆ. ಒಂದು ವ್ಯವಸ್ಥೆಗೆ ಒಗ್ಗಿಕೊಂಡು ಬದುಕಿನ ಶೈಲಿಯೂ ಸಹ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೆ ಕಾರಣವಾಗಬಲ್ಲದು ಎಂಬುದು ವೈಜ್ಞಾನಿಕವಾಗಿ ಸಾಬೀತಾದ ವಿಷಯವೇ ಆಗಿದೆ.

ಇತ್ತೀಚೆಗೆ ಬುಡಕಟ್ಟು ಸಮುದಾಯಗಳು ನಾಡಿನ ಜನರ ಜೊತೆ ಸಂಪರ್ಕವನ್ನು ಪಡೆದ ಕಾರಣ ತಿಳಿದೋ ತಿಳಿಯದೆಯೋ ವರ್ಣಸಂಕರಗಳು ನಡೆದು ಹೋಗಿವೆ. ಆದರೆ ಇದನ್ನು ಬುಡಕಟ್ಟುಗಳು ಒಪ್ಪಿಕೊಂಡಿವೆಯೇ ವಿನಃ ಅದನ್ನು ಯಾವುದೇ ರೀತಿಯಲ್ಲಿ ತಿರಸ್ಕರಿಸುತ್ತಿಲ್ಲ ಎಂಬುದು ಬುಡಕಟ್ಟು ಸಮುದಾಯಗಳ ವಿಶಾಲ ಮನೋಭಾವನೆಯನ್ನು ಸೂಚಿಸುತ್ತದೆ. ಏಕೆಂದರೆ ಅರಣ್ಯದಲ್ಲಿ ಹತ್ತು ಹಲವಾರು ಕ್ರೂರ ಪ್ರಾಣಿಗಳು ಹಾಗೂ ವಿಷಜಂತುಗಳೊಂದಿಗೆ ಯಾವುದೇ ಅಪಾಯವಿಲ್ಲದೆ ಯಶಸ್ವಿಯಾಗಿ ಪ್ರತಿಯೊಬ್ಬರು ಪೂರ್ಣಾಯುಷಿಗಳಾಗಿ ಬಾಳಿ ಬದುಕುವುದನ್ನು ಕಾಣಬಹುದಾಗಿದೆ. ಇದರಲ್ಲಿ ಆಕಸ್ಮಿಕ ಒಂದೆರಡು ಸಾವುನೋವುಗಳು ಸಾಮಾನ್ಯ ಅಂದರೆ ಅಂತಹ ಪರಿಸ್ಥಿತಿಯನ್ನು ಬಹಳ ನಾಜೂಕಾಗಿ ನಿಭಾಯಿಸುವ ರೀತಿ, ಯಾರೊಂದಿಗೂ, ಯಾವುದೋ ಕಾರಣಕ್ಕೂ ಸಂಘರ್ಷವನ್ನು ಬಯಸದ ಅವರ ಮನಸ್ಸು ಆರೋಗ್ಯಪೂರ್ಣವಾಗಿರುವುದು. ಅಲ್ಲದೆ ವಿಶ್ವಕ್ಕೆ ಮಾದರಿಯೂ ಹೌದು ಎಂಬುದನ್ನು ನಾವು ಅರ್ಥೈಸಿಕೊಳ್ಳಬೇಕಾಗಿದೆ.

ಮೇಲೆ ಹೇಳಿದ ಬುಡಕಟ್ಟುಗಳು ದೈಹಿಕ ರಚನೆಯಲ್ಲಿ ಅಷ್ಟೇನು ವ್ಯತ್ಯಾಸವನ್ನು ಹೊಂದಿಲ್ಲ. ಹೆಸರು, ಭಾಷೆ, ಪ್ರವೇಶ, ಸ್ವಲ್ಪ ಆಹಾರದ ವ್ಯತ್ಯಾಸ ಇದೆ. ಆದರೆ ವೈಜ್ಞಾನಿಕವಾಗಿ ಡಿ.ಎನ್.ಎ. ಪರೀಕ್ಷೆಯೊಂದಿಗೆ ಇವರ ಮೂಲ ಹಾಗೂ ಇತರೆ ಮಹತ್ವದ ಸಂಗತಿಗಳನ್ನು ಕಂಡುಕೊಳ್ಳುವುದು ಸಾಧ್ಯವಿದೆ. ಆದ್ದರಿಂದ ಅಧ್ಯಯನಕಾರರು ಹಲವಾರು ಸಂಗತಿಗಳ ಸಾಮ್ಯತೆಯನ್ನು ಒದಗಿಸುವ ಮೂಲಕ ಅವರ ಮೂಲವನ್ನು ಕುರಿತು ವಕಾಲತ್ತುವಹಿಸುವುದು ಈ ಸಂದರ್ಭದಲ್ಲಿ ಸೂಕ್ತವಲ್ಲ ಎಂಬ ವಿಚಾರವನ್ನು ಹೇಳಬೇಕಾಗುತ್ತದೆ. ಇದು ಕೇವಲ ಸಾಧ್ಯತೆಯೇ ಹೊರತು ಇದೇ ಅಂತಿಮ ಸತ್ಯ ಎಂದೇನೂ ಅಲ್ಲ. ಒಟ್ಟಾರೆ ನಮಗೆ ತಿಳಿದಿರುವ ಬೇರೆ ಬೇರೆ ಕುರುಬರಂತೆ ನಿಗೂಢವಾಗಿ ಅಪರಿಚಿತವಾಗಿ ಉಳಿದಿರುವ ಒಕ್ಕೈಕುರುಬ ಸಮುದಾಯವನ್ನುಪರಿಚಯಿಸುವುದಕ್ಕೆ ಸಂತಸವಾಗುತ್ತದೆ.

## ಗ್ರಂಥಋಣ

### ಕನ್ನಡ


೧. ಲಕ್ಕಪ್ಪಗೌಡ (ಪ್ರ.ಸಂ). ಕರ್ನಾಟಕ ಬುಡಕಟ್ಟುಗಳು ಸಂಪುಟ-೧, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ೧೯೯೮.

೨. ಲಲಿತ ಎ.ಸಿ. ಕಾಡುಕುರುಬರ ಮತ್ತು ಜೇನು ಕುರುಬರ ಸಂಸ್ಕೃತಿ. ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ೧೯೯೮.

೩. ಕೃಷ್ಣ ಅಯ್ಯಂಗಾರ್ ಡಿ., ಕನ್ನಡನಾಡಿನ ಆದಿವಾಸಿಗಳು, ೧೯೫೭.

೪. ಜೇನುನುಡಿ, ಭಾರತೀಯ ಭಾಷಾ ಸಂಸ್ಥಾನ, ಮೈಸೂರು, ೧೯೮೨.

೫. ಕೇಶವನು ಪ್ರಸಾದ ಕೆ. ಬುಡಕಟ್ಟು ವಿಸ್ಮಯ ಅಭಿರುಚಿ ಪ್ರಕಾಶನ, ಮೈಸೂರು ೨೦೦೫.

English

1. Aiyappa-A Report on the Socio Economic Condition of the Aboriginal Tribes of the Province of Madras, Madras 1948.

2. Bose-Nirmal Kumar, Tribal Life of India, Newdelhi-1971.

3. Nanjudiah, H.V. & Ananthakrishna Iyer K. The Mysore Tribes & Castes Vol. IV, Mysore-1931.

4. Nanjunda Rao- Tribals in Heggadadevanakote Taluk. Bangalore-1988.

5. Oppert- Gustava- On the original Inhabitans of Bharatavarsha, De;hi- 1988.

6. Rice B. Lewis, Mysore Gazetter- Vol I, 1897.

7. Singh K.S. The scheduled Tribes, Descriptive Data, People of India, National Series 1992.

8. Thurston E-Castes & Tribes of Sauthern India Vol IV, 1909.

# ೪. ಅಲೆಮಾರಿ ಕುರುಬರು

## ಪ್ರವೇಶ

ಭೂಮಿಯ ಮೇಲೆ ಅವತರಿಸಿದ ಮಾನವ ತನ್ನ ಮೊದಲ ಕಾಲಘಟ್ಟದಲ್ಲಿ ಕಾಡು ಸ್ಥಿತಿಯಲ್ಲಿದ್ದು ಅಲೆಮಾರಿ ಬದುಕು ನಡೆಸುತ್ತಿದ್ದನೆಂಬುದು ಸರ್ವವೇದ್ಯವಾದ ಸಂಗತಿ. ಕಾಡು ಸ್ಥಿತಿಯಲ್ಲಿದ್ದಾಗ ಮಾನವನು ಆಹಾರಕ್ಕಾಗಿ ನಿಸರ್ಗದ ಮಡಿಲಲ್ಲಿ ದೊರೆಯುವ ಪ್ರಾಣಿ, ಪಕ್ಷಿ, ಗೆಡ್ಡೆ-ಗೆಣಸು, ಹಣ್ಣು-ಹಂಪಲುಗಳನ್ನು ತಿಂದು ಜೀವಿಸುತ್ತಿದ್ದ. ಇವನ್ನು ಹುಡುಕಿಕೊಂಡು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಅಲೆದಾಡುತ್ತಿದ್ದ. ಈ ಸಂದರ್ಭದಲ್ಲಿ ಬೆಟ್ಟ-ಗುಡ್ಡ, ಗವಿಗಳು, ಕಾಡಿನಲ್ಲಿರುವ ಮರಗಳ ಪೊಟರೆಗಳು ಆತನ ವಾಸಸ್ಥಳಗಳಾಗಿದ್ದವು. ಅಂದರೆ ಆಹಾರ ಮತ್ತು ಆಶ್ರಯಗಳೆರಡಕ್ಕೂ ನಿಸರ್ಗವನ್ನೇ ಅವಲಂಬಿಸಿದ್ದ, ಜೊತೆಗೆ ಕಾಲದ ಬದಲಾವಣೆಗಳಿಂದಾಗುವ ಏರು-ಪೇರುಗಳನ್ನು ಚೆನ್ನಾಗಿ ಅರಿತಿದ್ದ.

ಬೇಟೆ ಸಂಸ್ಕೃತಿಯ ಕಾಲಘಟ್ಟದಲ್ಲಿ ಮುಂದುವರೆದಾಗ ಪ್ರಾಣಿಗಳ ಮಾಂಸವೇ ಆತನ ಆಹಾರವಾಯಿತು. ಪ್ರಾಣಿಗಳ ಚರ್ಮವು ಅವನ ಹೊದಿಕೆಯಾಯಿತು. ಅಲೆಮಾರಿ ಜೀವನದಿಂದ ಸ್ಥಾನಿಕ ಜೀವನಕ್ಕೆ ಮುಂದುವರಿದಾಗ ಕಾಡಿನಲ್ಲಿ ಕಂಡ ಪ್ರಾಣಿಗಳನ್ನು ಬೇಡೆಯಾಡಿ ತರುವ ಬದಲು ತನ್ನ ಬುದ್ಧಿವಂತಿಕೆಯಿಂದ ಅವನ್ನು ಹಿಡಿದು ಪಳಗಿಸಿ ಸಾಕಿ ತಳಿ ಬೆಳೆಸುವ ವಿದ್ಯೆಯನ್ನು ಕಂಡುಕೊಂಡನು.

ಭೌತಿಕವಾಗಿ ವಿಕಾಸವಾದಂತೆ ಭೌದ್ಧಿಕ ಮಟ್ಟದಲ್ಲಿ ಕೆಲವೊಂದು ಪರಿವರ್ತನೆಗಳು ಕಂಡುಬಂದವು. ಪರಿಣಾಮವಾಗಿ ಕಾಡಿನಲ್ಲಿರುವ ಕಾಡುಪ್ರಾಣಿಗಳನ್ನು ಪಳಗಿಸಿ ಅಲೆದಾಡಿ ಸಾಕಿ ಸಲುಹುದರ ಜೊತೆಗೆ ಬದುಕಿನ ನೆಲೆ-ಬೆಲೆಯನ್ನು ಕಂಡುಕೊಂಡನು. ಕಾಲಾಂತರದಲ್ಲಿ ಭೌದ್ಧಿಕ ವಿಕಾಸವಾದಂತೆ ಕೃಷಿ ಸಂಸ್ಕೃತಿಗೆ ಬಂದನು. ಅಲೆಮಾರಿ ಜೀವನದ ಬದಲಾಗಿ ಒಂದು ನಿರ್ದಿಷ್ಟ ಪ್ರದೇಶದಲ್ಲಿ ನೆಲೆಗೊಳ್ಳಲು

ಆರಂಭಿಸಿದನು. ತನ್ನ ವಾಸಕ್ಕೆ ಹಾಗೂ ಆಹಾರ ಬೆಳೆಯಲು ಯೋಗ್ಯವಾದ ಸ್ಥಳಗಳನ್ನು ಆಯ್ಕೆ ಮಾಡಿಕೊಂಡು ಹಟ್ಟಿಗಳನ್ನು ನಿರ್ಮಿಸಿಕೊಂಡನು. ಹಟ್ಟಿಗಳು ಗ್ರಾಮಗಳ ರೂಪಂತರಕ್ಕೆ ನಾಂದಿಯಾಯಿತು. ಹಾಗೂ ವೈವಿದ್ಯಮಯ ಸಂಸ್ಕೃತಿಯ ಬೆಳವಣಿಗೆಗೆ ಹಾಗೂ ಹಲವು ಶೋಧನೆಗಳಿಗೆ ಪ್ರೇರಣೆಯಾಯಿತು.

ಕೃಷಿ ಮತ್ತು ಪಶುಪಾಲನೆಯು ಮಾನವನ ಮೂಲ ವೃತ್ತಿಗಳಾಗಿದ್ದು, ನಿಸರ್ಗದೊಡನೆ ನೇರ ಸಂಬಂಧ ಹೊಂದಿವೆ. ಈ ಮೂಲ ವೃತ್ತಿಗಳನ್ನು ಅವಲಂಬಿಸಿಕೊಂಡು ಇತರ ವೃತ್ತಿಗಳು ಬೆಳೆಯುತ್ತವೆ. ಮೂಲವೃತ್ತಿಯ ನಾಗರಿಕ ಮಾನವನು ಪ್ರಥಮವಾಗಿ ಕೈಗೊಂಡಂತಹ ಕೆಲಸವಾಗಿರುತ್ತದೆ. ಸಾಮಾನ್ಯವಾಗಿ ಮೂಲ ವೃತ್ತಿ ಅಥವಾ ಪ್ರಥಮ ವೃತ್ತಿಯ ಮಾನವನಿಗೂ ಮತ್ತು ನಿಸರ್ಗಕ್ಕೂ ನೇರವಾದ ಸಂಬಂಧವನ್ನು ಕಲ್ಪಿಸುತ್ತದೆ. ಹಾಗೆಯೇ ಮೂಲ ವೃತ್ತಿಗಳಾದ ಕೃಷಿ ಮತ್ತು ಪಶುಪಾಲನೆಯು ಅವಿನಾಭಾವ ಸಂಬಂಧ ಹೊಂದಿದೆ. ಅಂದರೆ ಕೃಷಿಯು ಪಶುಪಾಲನೆಯನ್ನು ಒಳಗೊಂಡಿರುವುದರಿಂದ ಪಶುಪಾಲನೆಯನ್ನು ಬಿಟ್ಟು ಕೃಷಿ ಉಳಿಯಲಾರದು. ಅದೇ ರೀತಿ ಕೃಷಿಯನ್ನು ಬಿಟ್ಟು ಪಶುಪಾಲನೆ ಇರಲಾರದು. ಈ ಅವಿನಾಭಾವ ಸಂಬಂಧಕ್ಕೆ ನೈಸರ್ಗಿಕ ಸಂಪನ್ಮೂಲಗಳೇ ಕಾರಣವಾಗಿವೆ. ಆದಿಕಾಲದ ಮಾನವ ಸಾದು ಪ್ರಾಣಿಗಳಾದ ಕುರಿ ಮೇಕೆಗಳನ್ನು ಸಂಗೋಪನೆ ಮಾಡುತ್ತಾ ತನ್ನ ಹೊಟ್ಟೆಯನ್ನು ತುಂಬಿಸಿಕೊಳ್ಳುತ್ತಿದ್ದ. ಪ್ರಸ್ತುತ ದಿನಗಳಲ್ಲಿ ಜಾಗತೀಕರಣದ ಪರಿಣಾಮವಾಗಿ ಇಡೀ ಜಗತ್ತು ವಿಶ್ವಗ್ರಾಮದ ಸ್ವರೂಪ ಮತ್ತು ಮಾನವ ಸಂಸ್ಕೃತಿ ಏಕೀಕರಣಗೊಳ್ಳುತ್ತಿದೆ. ಇಂತಹ ಸಂದರ್ಭದಲ್ಲಿಯೂ ಸಹ ಈ ಭೂಮಂಡಲದ ಮೂಲಿಗರಾದ ಕುರುಬ (ಹಾಲುಮತ) ಸಮುದಾಯದ ಬಹಳಷ್ಟು ಕುಟುಂಬಗಳು ಅಲೆಮಾರಿ, ಅರೆಅಲೆಮಾರಿ ಮತ್ತು ಸ್ಥಾನಿಕ ವಿಧಾನಗಳನ್ನು ಅನುಸರಿಸಿ ಕುರಿಸಂಗೋಪನೆ ಮಾಡುತ್ತಿದ್ದಾನೆ. ಜೊತೆಗೆ ನಿಸರ್ಗದ ಸಂಪನ್ಮೂಲಗಳನ್ನು ಅಭಿವೃದ್ಧಿ ಪಡಿಸುತ್ತಾ ತಾನು ಬದುಕುತ್ತಿದ್ದಾನೆ.

ಜೀವನ ನಿರ್ವಹಣೆಗೋಸ್ಕರ ಮೂಲವೃತ್ತಿಯನ್ನು ತೊರೆಯದೆ, ಕುಟುಂಬ ಸಮೇತ ವಲಸೆ ಬಂದು ಕುರಿ ಮೇಕೆಗಳಿಗೆ ಮೇವು-ನೀರು ಹುಡುಕಿಕೊಂಡು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವರ್ಷವಿಡೀ ಅಲೆದಾಡುತ್ತಾ ಕುರಿಸಂಗೋಪನೆ ಮಾಡುವವರೇ ಅಲೆಮಾರಿ ಕುರುಬರು. ಹೀಗೆ ಕುರಿಸಂಗೋಪನೆ ಮಾಡುವವರನ್ನು ಅಲೆಮಾರಿ ಕುರುಬರು, ಸಂಚಾರಿ ಕುರುಬರು, ಬೆಳಗಾಂ ಕುರೇರು, ಕೊಲ್ಲಾಪುರ ಕುರೇರು ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ.

ಇವರು ಬೆಳಗಾಂ ಜಿಲ್ಲೆಯವಾಗಿದ್ದು ಹೆಚ್ಚಾಗಿ ಚಿಕ್ಕೋಡಿ ತಾಲ್ಲೂಕಿನ ವಿವಿಧ ಗ್ರಾಮಗಳಿಂದ ವಲಸೆ ಬಂದಿರುವವರು. ಹಾಗೆಯೇ ಕೆಲವೊಂದು ಕುಟುಂಬಗಳು, ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯಿಂದಲೂ ವಲಸೆ ಬಂದವರಿದ್ದಾರೆ. ವಲಸೆ ಬಂದಿರುವ ಇವರು ಯಾವುದೇ ಒಂದು ನಿರ್ದಿಷ್ಟ ಭೂ ಪ್ರದೇಶದಲ್ಲಿ ನೆಲೆನಿಂತು ಕುರಿಸಂಗೋಪನೆ ಮಾಡದೆ ತಮ್ಮ ಬದುಕುಗಳಿಗೆ ಕುರಿ-ಮೇಕೆ ಮೇವು ನೀರು ಸಮಗ್ರವಾಗಿ ಎಲ್ಲಿ ದೊರೆಯುತ್ತದೆಯೋ ಮತ್ತು ಅವುಗಳ ಜೀವನ ಎಲ್ಲಿ ಚೆನ್ನಾಗಿರುತ್ತದೆಯೋ ಆ ಭೂ ಪ್ರದೇಶಗಳಲ್ಲಿ ಅಲೆದಾಡುತ್ತಿದ್ದಾರೆ. ಕುರಿ ಮತ್ತು ಕುಟುಂಬದೊಂದಿಗೆ ವಲಸೆ ಬಂದಿರುವ ಅಲೆಮಾರಿ ಕುರುಬರು ಕರ್ನಾಟಕ ರಾಜ್ಯದ ಬಳ್ಳಾರಿ, ರಾಯಚೂರು, ಕೊಪ್ಪಳ, ದಾವಣಗೆರೆ, ಚಿಕ್ಕಮಗಳೂರು, ಶಿವಮೊಗ್ಗ, ಹಾವೇರಿ, ಧಾರವಾಡ ಹಾಗೂ ಆಂಧ್ರಪ್ರದೇಶದ ಅನಂತಪುರ ಮತ್ತು ಕರ್ನೂಲ ಜಿಲ್ಲೆಗಳ ಭೂ ಪ್ರದೇಶಗಳಲ್ಲಿ ಅಲೆದಾಡುತ್ತಿದ್ದಾರೆ. ಅಲೆದಾಡುವಿಕೆಯು ಋತುಮಾನಕ್ಕನುಗುಣವಾಗಿರುತ್ತದೆ. ಅಂದರೆ ಮಳೆಗಾಲದಲ್ಲಿ ಬೆಟ್ಟ-ಗುಡ್ಡ ಅಥವಾ ಗಟ್ಟಿ ಪ್ರದೇಶಗಳಲ್ಲಿ ಗುಡಾರ ಹೂಡಿ ಕುರಿ ಸಂಗೋಪನೆ ಮಾಡಿದರೆ, ಮಳೆಗಾಲದ ನಂತರ ನೀರಾವರಿ ಮತ್ತು ಮೇವು-ನೀರು ದೊರೆಯುವ ಪ್ರದೇಶಗಳಲ್ಲಿ ಅಲೆದಾಡುತ್ತಿದ್ದಾರೆ. ಪ್ರಾದೇಶಿಕವಾಗಿ ಭಿನ್ನ ಹೆಸರುಗಳಿಂದ ಕರೆಯುವ ಹಿಮಾಚಲ ಪ್ರದೇಶದ ಗಡ್ಡಿ ಸಮುದಾಯವು ಕುಲು ಮತ್ತು ಕಾಂಗ್ರ ನದಿಗಳ ಸುತ್ತಮುತ್ತಲಿನ ಭೂ ಪ್ರದೇಶಗಳಲ್ಲಿ ಹಾಗೂ ಚಾಂಬಾ ಮತ್ತು ಮಂಡಿ ಜಿಲ್ಲೆಗಳಲ್ಲಿ ಹಾಗೆಯೇ ರಾಜಸ್ಥಾನದ ರೈಕ (ರೇಬಾರಿ) ಸಮುದಾಯವು ಅಲೆಮಾರಿ ಕುರುಬ ಸಮುದಾಯದಂತೆಯೇ ಕುರಿಸಂಗೋಪನೆಗಾಗಿ ಕುಟುಂಬ ಸಮೇತ ಅಲೆದಾಡುತ್ತಿದ್ದಾರೆ.

ವಲಸೆ ಬರುವ ಮೊದಲು ಬೆಳಗಾವಿ ಕುರೇರು ಅರೆಅಲೆಮಾರಿಗಳಾಗಿದ್ದರು. ಅಂದರೆ ಮಳೆಗಾಲದಲ್ಲಿ ಕಾರಹುಣ್ಣಿಮೆಯಿಂದ ದೀಪಾವಳಿವರೆಗೆ ನಾಲ್ಕು-ಐದು ತಿಂಗಳುಗಳ ಕಾಲ ಕೆಲವೊಂದು ಕುಟುಂಬಗಳು ಮಹಾರಾಷ್ಟ್ರದ ಸಾಂಗ್ಲಿ, ಕೊಲ್ಹಾಪುರ ಭೂ ಪ್ರದೇಶದ ಕಡೆ ಇನ್ನೂ ಕೆಲವು ಕುಟುಂಬಗಳು ಬಾಗಲಕೋಟೆ, ಬಿಜಾಪುರ ಮತ್ತು ಧಾರವಾಡ ಜಿಲ್ಲೆಯ ಭೂಪ್ರದೇಶದ ಕಡೆ ವಲಸೆ ಹೋಗಿ

ಹಿಂದಿರುಗುತ್ತಿದ್ದರು. ಈ ಅವಧಿಯಲ್ಲಿ ವಲಸೆ ಹೋಗಲು ಕಾರಣ ಕುರಿ ಸಂಗೋಪನೆಗೆ ಯೋಗ್ಯ ಎನ್ನುವುದಕ್ಕಿಂತ (ಯೋಗ್ಯ ಮಳೆ ೫೪೫ ರಿಂದ ೭೦೦ ಮಿ.ಮೀ.) ಹೆಚ್ಚು ಮಳೆ ಬೀಳುತ್ತದೆ. ಬೆಳಗಾವಿ ಜಿಲ್ಲೆಯ ವಾರ್ಷಿಕ ಮಳೆ ೮೦೮ ಮಿ.ಮೀ. ಆದರೆ ಕೆಲವೊಂದು ವರ್ಷಗಳಲ್ಲಿ ಇದಕ್ಕಿಂತ ಹೆಚ್ಚು ಮಳೆ ಬೀಳುತ್ತದೆ. ಉದಾ ೨೦೦೫-೦೬ನೆಯ ಸಾಲಿನಲ್ಲಿ ೧೨೨೬ ಮಿ.ಮೀ. ಮಳೆ ಬಂದಿರುವುದು ತಿಳಿದುಬಂದಿದೆ.

ಅರೆಅಲೆಮಾರಿತನಕ್ಕೆ ಸೀಮಿತವಾಗಿದ್ದ ಇವರ ಬದುಕು ಕ್ರಿ.ಶ. ೧೯೬೦ರ ನಂತರದ ದಿನಗಳಲ್ಲಿ ಅಲೆಮಾರಿತನವಾಗಿ ಪರಿವರ್ತನೆಗೊಂಡಿತ್ತು. ಕಾರಣ ತುಂಗಭದ್ರ ಅಣೆಕಟ್ಟಿನಿಂದ ಬಳ್ಳಾರಿ, ರಾಯಚೂರು, ಕೊಪ್ಪಳ ಜಿಲ್ಲೆಯ ಕೆಲವು ತಾಲ್ಲೂಕುಗಳು ನೀರಾವರಿ ಸೌಲಭ್ಯ ಪಡೆದವು. ಹಾಗೆಯೇ ತುಂಬ ಮತ್ತು ಭದ್ರ ಜಲಾಶಯಗಳಿಂದ ದಾವಣಗೆರೆ, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳೂ ಸಹ ನೀರಾವರಿ ಸೌಲಭ್ಯ ಪಡೆದಿವೆ. ಪರಿಣಾಮವಾಗಿ ಈ ಜಿಲ್ಲೆಗಳ ಭೂ ಪ್ರದೇಶದಲ್ಲಿ ಅಲೆದಾಡುತ್ತಾ ಕುರಿ ಸಂಗೋಪನೆ ಮಾಡುತ್ತಿದ್ದಾರೆ. ಹೀಗೆ ಅಲೆದಾಡುತ್ತಾ ಕುರಿಸಂಗೋಪನೆ ಮಾಡುವ ಅಲೆಮಾರಿ ಕುರುಬರು ತಾವು ಹೂಡಿದ ಗುಡಾರವನ್ನು ಹೊಲಗದ್ದೆಗಳಿಂದ ಹೊಲಗದ್ದೆಗಳಿಗೆ ವರ್ಗಾಯಿಸುತ್ತಾರೆಯೇ ವಿನಃ ಕುರಿ-ಕುದರೆ ಮತ್ತು ಗುಡಾರವನ್ನು ಸ್ವಗ್ರಾಮಗಳಿಗೆ ವರ್ಗಾಯಿಸುವುದಿಲ್ಲ.

**ವಲಸೆ ಕಾರಣಗಳು**

ಬೆಳಗಾವಿ ಜಿಲ್ಲೆ ಅರೆಮಲೆನಾಡು ಭೂ ಪ್ರದೇಶವಾಗಿದೆ. ಮಳೆಗಾಲದಲ್ಲಿ ಅತಿ ಹೆಚ್ಚು ಅಂದರೆ ಕುರಿಸಂಗೋಪನೆಗೆ ಯೋಗ್ಯ ಎನ್ನುವುದಕ್ಕಿಂತ ಹೆಚ್ಚು (೨೦೦೫ ರಲ್ಲಿ ೧೩೬೬ ಮಿ.ಮೀ. ಮಳೆ ಬಿದ್ದಿದೆ) ಮಳೆ ಬೀಳುತ್ತದೆ. ಆ ಪ್ರದೇಶದಲ್ಲಿ ಮಳೆ ಬೀಳಲು ಪ್ರಾರಂಭಿಸಿದರೆ ವಾರ, ಹದಿನೈದು ಅಥವಾ ತಿಂಗಳು ಗಟ್ಟಲೆ ನಿರಂತರವಾಗಿ ಮಳೆ ಬೀಳುತ್ತಿರುತ್ತದೆ. ಇಂಥ ಸಂದರ್ಭದಲ್ಲಿ ಕುರಿಗಳನ್ನು ಮೇಯಿಸುವುದು ಹಾಗೂ ಆರೈಕೆ ಮಾಡುವುದು ತುಂಬಾ ಕಷ್ಟವಾಗುತ್ತದೆ.

ಬೆಳಗಾವಿ ಜಿಲ್ಲೆಯು ೩,೭೨,೪೯೨ ಹೆಕ್ಟೇರ್ ಭೂಪ್ರದೇಶ ನೀರಾವರಿ ಸೌಲಭ್ಯ ಹೊಂದಿದೆ. ಆ ಪ್ರದೇಶದಲ್ಲಿ ನೀರಾವರಿ ಹಾಗೂ ಇತರೆ ಬೆಳೆಗಳನ್ನು ಬೆಳೆದರೂ ಕಬ್ಬು ಮತ್ತು ಹೊಗೆಸೊಪ್ಪನ್ನು ಹೆಚ್ಚಾಗಿ ಬೆಳೆಯಲಾಗುತ್ತದೆ. ಕಬ್ಬು ವಾರ್ಷಿಕ ಬೆಳೆಯಾದ ಕಾರಣ ವರ್ಷದಲ್ಲಿ ಕೆಲವೇ ದಿನಗಳು ಮಾತ್ರ ಕುರಿಗಳಿಗೆ ಮೇವು ದೊರೆಯುತ್ತದೆ. ಹೊಗೆಸೊಪ್ಪು ಬೆಳೆಯುವ ಹೊಲ-ಗದ್ದೆಗಳಲ್ಲಿ ಹುಲ್ಲು ಅಥವಾ ಕಳೆ ಬೆಳೆಯುವುದಿಲ್ಲ, ಪರಿಣಾಮವಾಗಿ ಮೇವಿನ ಕೊರತೆ ಉಂಟಾಗಿದೆ.

ವಲಸೆ ಬಂದು ಅಲೆದಾಡುವ ಭೂಪ್ರದೇಶಗಳಲ್ಲಿ ಅಂದರೆ ಬಳ್ಳಾರಿ (೬೩೫ ಮಿ.ಮೀ), ರಾಯಚೂರು (೬೩೧ ಮಿ.ಮೀ), ಕೊಪ್ಪಳ (೫೭೨ ಮಿ.ಮೀ), ದಾವಣಗೆರೆ (೬೪೯ ಮಿ.ಮೀ), ಗದಗ (೬೧೨ ಮಿ.ಮೀ), ಹಾವೇರಿ (೭೫೩ ಮಿ.ಮೀ) ಜಿಲ್ಲೆಗಳಲ್ಲಿ ಮಳೆ ಪ್ರಮಾಣ ಕಡಿಮೆ ಇದೆ. ಹವಾಮಾನ ಉಷ್ಣತೆಯಿಂದ ಕೂಡಿರುವುದರಿಂದ ಕುರಿ ಸಂಗೋಪನೆಗೆ ಯೋಗ್ಯವಾಗಿದೆ. ಈ ಪ್ರದೇಶದಲ್ಲಿ ವಾರ್ಷಿಕ ಬೆಳೆಗಳನ್ನು ಬೆಳೆಯದೆ ಅಲ್ಪಕಾಲಿಕ ಬೆಳೆಗಳನ್ನು ಬೆಳೆಯಲಾಗುತ್ತದೆ. ಈ ಬೆಳೆಗಳು ನಾಟಿ ಮಾಡಿದ ೩ ರಿಂದ ೬ ತಿಂಗಳೊಳಗೆ ಕಟಾವು ಆಗುತ್ತವೆ. ಇವು ಹಿಂಗಾರು ಮತ್ತು ಮುಂಗಾರು ಬೆಳೆಗಳಾದ್ದರಿಂದ ಮೇಯಿಸಲು ವಿಶಾಲ ಭೂಪ್ರದೇಶ ದೊರೆಯುತ್ತದೆ. ಬೇಡರು ಅಲೆಮಾರಿ ಕುರುಬರ ಕುರಿಮೇಕೆಗಳ ಕದ್ದು ತಿನ್ನುತ್ತಿದ್ದರು.

**ಗುರುತಿಸುವಿಕೆ**

ಪರಂಪರಾಗತವಾಗಿ ಬಂದ ಕುಲವೃತ್ತಿ ಮತ್ತು ಉಡುಪುಗಳಿಂದ ಗುರುತಿಸಲಾಗುವುದು. ಋತುಮಾನಕ್ಕನುಗುಣವಾಗಿ ಬೆಟ್ಟ-ಗುಡ್ಡ, ಹೊಲ-ಗದ್ದೆಗಳಲ್ಲಿ ೩-೪ ಕುಟುಂಬಗಳು ಗುಡಾರ ಹೂಡಿ ಕುರಿಸಂಗೋಪನೆ ಮಾಡುತ್ತಾ ಜೀವನ ಸಾಗಿಸುತ್ತಿರುತ್ತಾರೆ. ಸ್ತ್ರೀ-ಪುರುಷರು ಶಾರೀರಿಕವಾಗಿ ಗಟ್ಟಿಮುಟ್ಟಾಗಿದ್ದು ಮರಾಠಿ ಮಿಶ್ರಿತ ಕನ್ನಡ ಅಥವಾ ಮರಾಠಿ ಭಾಷೆಯನ್ನು ಮಾತನಾಡುತ್ತಾರೆ.

ಪುರುಷರನ್ನು ತಲೆಗೆ ಸುತ್ತಿರುವ ಪೇಟಾ ಅಥವಾ ಗಾಂಧಿ ಟೋಪಿ, ಹೆಗಲ ಮೇಲಿರುವ ಕರಿಕಂಬಳಿ ಅಥವಾ ಶಾಲು, ನಡುವಿಗೆ ಮೇಲೆಳೆದು ಕಟ್ಟಿರುವ ಕಚ್ಚೆ ಪಂಜೆ, ಕಾಲಲ್ಲಿ ದಪ್ಪನೆಯ ದೇಶಿ ಮಾದರಿ ಮೆಟ್ಟು ಚಪ್ಪಲಿ, ಕಿವಿಯಲ್ಲಿ ಮುರುವು, ಕೊರಳಲ್ಲಿ ತಾಯಿತ, ನಡುವಿನಲ್ಲಿ ಎಲೆ ಅಡಿಕೆ ಚೀಲ, ಮುಖದ ಮೇಲೆ ಕೋರೆ ಮೀಸೆ, ಹಣೆಯ ತುಂಬಾ ಹಚ್ಚಿರುವ ಭಂಡಾರ ಮೊದಲಾದ ಕುರುಹುಗಳಿಂದ ಗುರುತಿಸಲಾಗುವುದು.

**ಗುಡಾರ (ವಸತಿ)**

ಗಾಳಿ, ಮಳೆ, ಚಳಿ ಮತ್ತು ಬಿಸಿಲುಗಳಿಂದ ರಕ್ಷಿಸಲು ಹಾಗೂ ದಿನನಿತ್ಯದ ಆಹಾರ ಸಾಮಗ್ರಿಗಳನ್ನು ಸಂರಕ್ಷಿಸಿಕೊಳ್ಳಲು ಎಂಟು ಅಡಿ ಅಗಲದ ಹಾಗೂ ಹನ್ನೆರಡು ಅಡಿ ಉದ್ದದ ಗುಡಾರವೇ ಇವರ ವಸತಿ. ಆ ಗುಡಾರದಲ್ಲಿ ಇಡೀ ಕುಟುಂಬದ ಸದಸ್ಯರು ಮತ್ತು ಆಗ ತಾನೆ ಜನಿಸಿದ ಕುರಿಮರಿಗಳು ಜೊತೆ ಕಾಲದೂರಬೇಕು. ಹೆಸರಿಗೆ ಮಾತ್ರ ಗುಡಾರವಾಗಿದ್ದು ಜೀವನ ಪೂರ್ತಿ ನಿಸರ್ಗದ ಮಡಿಲಲ್ಲಿಯೇ ಬದುಕಬೇಕಾದ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿದೆ. ಸ್ಥಳದಿಂದ ಸ್ಥಳಕ್ಕೆ ವಲಸೆ ಹೋಗುವಾಗ ಕುದುರೆಯ ಮೇಲೆ ತಮ್ಮ ದೈನಂದಿನ ಸರಕು, ಸರಂಜಾಮುಗಳನ್ನು ಹೇರಿಕೊಂಡು ಹೋಗುತ್ತಾರೆ. ಹೀಗೆ ಹೇರಿಕೊಂಡು ಹೋಗುವಾಗ ಕುದುರೆಯ ಮೇಲೆ ತಮ್ಮ ಮಗುವನ್ನು ಆಗ ತಾನೆ ಜನಿಸಿದ ಕುರಿಮರಿಗಳನ್ನು ಹಾಗೂ ನಡೆಯುವ ಅಸಾಧ್ಯವಾದ ನಾಯಿಮರಿಗಳನ್ನು ಒಂದೇ ಕಡೆ ಕೂಡಿಸಿ ವಲಸೆ ಹೋಗುವುದನ್ನು ಕಾಣುತ್ತೇವೆ. ಇಲ್ಲಿ ಗಮನಿಸುವ ಪ್ರಮುಖ ಅಂಶವೆಂದರೆ ಮಗು, ನಾಯಿಮರಿ ಮತ್ತು ಕುರಿಮರಿಗಳಿಗೆ ಸಮಾನ ಪ್ರಾಮುಖ್ಯತೆ ನೀಡುತ್ತಾರೆ. ಕಾರಣ ಈ ಮೂರು ಮರಿಗಳು ಅವನ ಬದುಕಿಗೆ ಆಧಾರ ಸ್ಥಂಭಗಳಾಗಿವೆ. ವಲಸೆ ಹೋಗುವಾಗ ಸ್ತ್ರೀಯರು ೧೫ ರಿಂದ ೩೦ ಕೆ.ಜಿ. ಭಾರವಿರುವ ಪುಟ್ಟಿಯನ್ನು ತಲೆಯ ಮೇಲೆ ಹೊತ್ತುಕೊಂಡು ಕುದುರೆಯ ಲಗಾಮನ್ನು ಎಡಗೈಯಲ್ಲಿ ಹಿಡಿದುಕೊಂಡು ಸಾಗುತ್ತಿರುವ ದೃಶ್ಯ ನೋಡಿದಾಗ ಕಠೋರ ವ್ಯಕ್ತಿಯ ಕರುಳು ಸಹ ಚುರ್ ಎನ್ನದೆ ಇರಲಾರದು. ಏಕೆಂದರೆ ವಲಸೆ ಹೋಗುವಾಗ ಬೆಟ್ಟ-ಗುಡ್ಡಗಳನ್ನು ಹತ್ತಿ ತಗ್ಗು-ದಿಣ್ಣೆ, ನದಿ-ಕಾಲುವೆಗಳನ್ನು ದಾಟುವಾಗ ಪಡುವ ಕಷ್ಟ ಅಕ್ಷರಗಳಲ್ಲಿ ಹೇಳಲು ಅಸಾಧ್ಯ. ಈ ರೀತಿಯ ಬದುಕನ್ನು ಭೂಮಂಡಲದ ಮೂಲಿಗರು ಅಥವಾ ಬುಡಕಟ್ಟು ಸಮುದಾಯಗಳು ಮಾತ್ರ ಮುಂದುವರಿಸಿಕೊಂಡು ಬರಲು ಸಾಧ್ಯ. ಆದರೆ ಇವರಿಗೆ ಸಂವಿಧಾನ ಬದ್ಧವಾದ ಸ್ಥಾನಮಾನ ನೀಡದಿರುವುದು ಮನುಕುಲಕ್ಕೆ ಮಾಡಿದ ದ್ರೋಹವೆನಿಸುತ್ತದೆ.

**ಆದಾಯ**

ಅಲೆಮಾರಿ ಕುರುಬರು ತಮ್ಮ ಜೀವನಾವಶ್ಯಕ ಬಯಕೆಯಗಳನ್ನು ತೃಪ್ತಿಪಡಿಸಿಕೊಳ್ಳಲು ಅಂದರೆ ಆಹಾರ, ಬಟ್ಟೆ ವಸತಿ, ಗುಡಾರ ಪಡೆಯಲು ಮತ್ತು ಕುರಿಗಳ ಔಷಧ, ಹಬ್ಬ ಹರಿದಿನಗಳು, ಜಾತ್ರೆ, ಮದುವೆ ಇತ್ಯಾದಿಗಳಿಗೆ ಖರ್ಚು ಮಾಡುವ ಹಣವನ್ನು ಮರಿಗಳು ಹಾಗೂ ಕುರಿ-ಮೇಕೆಗಳ ಮಾರಾಟದಿಂದಲೇ ನಿರ್ವಹಿಸಬೇಕಿದೆ. ಕುರಿ-ಮೇಕೆ ಹಾಗೂ ಮರಿಗಳ ಮಾರಾಟದಿಂದ ಬರುವ ಆದಾಯದ ಪ್ರಮಾಣವು ಹಲವಾರು ಅಂಶಗಳನ್ನು ಅವಲಂಬಿಸಿದೆ. ಉದಾಹರಣೆಗೆ ಕುರಿ-ಮೇಕೆಗಳಿಗೆ ಬರುವ ರೋಗ-ರುಜಿನಗಳು, ಮೇವು-ನೀರು ದೊರೆಯುವಿಕೆ, ಕುರಿಗಳ ಮಾರುಕಟ್ಟೆ ಮೌಲ್ಯ, ಉಣ್ಣೆ ಬೆಲೆ ಇತ್ಯಾದಿಯಾಗಿವೆ.

ಆದಾಯದ ಪ್ರಮುಖ ಮೂಲವೆಂದರೆ ಮರಿಗಳ ಮಾರಾಟ. ಮಾರಾಟ ಮಾಡುವಾಗ ಜನಿಸಿದ ಎಲ್ಲಾ ಮರಿಗಳನ್ನು ಮಾರದೆ ಕೇವಲ ಗಂಡು ಮರಿಗಳನ್ನು ಮಾತ್ರ ಮಾರುತ್ತಾರೆ. ಇವುಗಳಲ್ಲಿಯೇ ಕೆಲವು ಮೂರ್ನಾಕು ದೃಡಕಾಯವಾದ ನಲುವಾದ ಚಟುವಟಿಕೆಯಿಂದ ಕೂಡಿದ ಗಂಡುಮರಿಗಳನ್ನು ಬೀಜದ ಟಗರನ್ನಾಗಿ ಹಿಂಡಿನಲ್ಲಿಯೇ ಉಳಿಸಿಕೊಳ್ಳುತ್ತಾರೆ. ಸಾಮಾನ್ಯವಾಗಿ ಹೆಣ್ಣುಮರಿಗಳನ್ನು ಮಾರುವುದಿಲ್ಲ. ಕಾರಣ ಅವು ಸಂಗೋಪನೆಗೊಳಗಾಗಿ ಮುಂದೆ ದೊಡ್ಡವಾಗಿ ಬೆಳೆದು ಮರಿಹಾಕಿ ಅಲೆಮಾರಿ ಕುರುಬರ ಜೀವನ ನಿರ್ವಹಣೆಗೆ ನೆರವಾಗುತ್ತವೆ. ಮರಿಗಳನ್ನು ಮಾರಾಟ ಮಾಡುವಾಗ ಒಂದೆರಡು ಮರಿಗಳನ್ನು ಮಾರಾಟ ಮಾಡದೆ ಒಂದು ಋತುವಿನಲ್ಲಿ ಜನಿಸಿದ ಮರಿಗಳನ್ನು ಗುಂಪಾಗಿ ಅಥವಾ ಹಿಂಡಾಗಿ ಮೂರು ತಿಂಗಳೊಳಗೆ ಮಾರಾಟ ಮಾಡಲಾಗುತ್ತದೆ. ಸಾಮಾನ್ಯವಾಗಿ ಆಗಸ್ಟ್-ಸೆಪ್ಟೆಂಬರ್ ತಿಂಗಳ ಗಣೇಶನ ಹಬ್ಬ ಅವಧಿಯಲ್ಲಿ ಜನಿಸಿದ ಮರಿಗಳನ್ನು ಡಿಸೆಂಬರ್-ಜನವರಿ (ಎಳ್ಳು ಅಮವಾಸ್ಯೆ) ತಿಂಗಳಲ್ಲಿ ಹಾಗೂ ಡಿಸೆಂಬರ್ -ಜನವರಿ ತಿಂಗಗಳಲ್ಲಿ ಜನಿಸಿದ ಮರಿಗಳನ್ನು ಮಾಚ್-ಏಪ್ರಿಲ್(ಯುಗಾದಿ) ತಿಂಗಳಲ್ಲಿ ಮಾರುತ್ತಾರೆ.

ಆದಾಯದ ಎರಡನೆಯ ಮೂಲವೆಂದರೆ ವಯಸ್ಸಾದ ಕುರಿ ಮೇಕೆಗಳ ಮಾರಾಟ. ಇದನ್ನು ಅಲೆಮಾರಿ ಕುರುಬರು ಹಳೆಕುರಿ ಮಾರಾಟ ಎನ್ನುವರು. ಸಾಮಾನ್ಯವಾಗಿ ಕುರಿಯ ಜೀವಿತಾವಧಿ ೧೦ ರಿಂದ ೧೨ ವರ್ಷಗಳಾಗಿವೆ. ಈ ಅವಧಿಯವರೆಗೆ ಕುರಿಗಳನ್ನು ಉಳಿಸಿಕೊಳ್ಳುವುದಿಲ್ಲ. ಸಾಮಾನ್ಯವಾಗಿ ೭-೮ ವರ್ಷಗಳಲ್ಲಿ ಮಾರಾಟ ಮಾಡಲಾಗುವುದು. ನಂತರದ ದಿನಗಳಲ್ಲಿ ಅವುಗಳ ಉತ್ಪಾದಕತೆ ಕಡಿಮೆಯಾಗುತ್ತದೆ. ವಯಸ್ಸಾದ ಕುರಿಗಳ ಮಾರಾಟದಲ್ಲಿ ಹಲ್ಲುಗಳು ಗಣನೆಗೆ ಒಳಗಾಗುತ್ತವೆ. "The health of a sheep has considerable influence on the growth, strength and wearability of teeth, if well maintained, a sheep from blocks kept under hard conditions of life may lose teeth when they are 7-8 years old" ಮುಂದಿನ ಅಥವಾ ಬಾಚಿ ಹಲ್ಲುಗಳು ಕಳವಲು ಆರಂಭವಾದಾಗ ವಯಸ್ಸಾಯಿತೆಂದು ಅರಿತು ಮಾರಾಟ ಮಾಡಲಾಗುತ್ತದೆ. ಇವನ್ನು ಕಾರಹುಣ್ಣಿಮೆ (ಜೂನ್) ತಿಂಗಳು ಅವಧಿಯಲ್ಲಿ ಮಾರಾಟ ಮಾಡುವರು. ಏಕೆಂದರೆ ಹೊಲ-ಗದ್ದೆಗಳಲ್ಲಿ ಜನವರಿಯಿಂದ ಮೇ ತಿಂಗಳವರೆಗೆ ಸಾಕಷ್ಟು ಮೇವು ದೊರೆಯುವುದರಿಂದ ಕುರಿ ದುಂಡಾಗಿರುತ್ತದೆ. ಕಾರಹುಣ್ಣಿಮೆ ನಂತರ ಮಳೆಗಾಲ ಆರಂಭವಾಗುವುದರಿಂದ ವಯಸ್ಸಾದ ಕುರಿ-ಮೇಕೆಗಳು ಬೆಟ್ಟ-ಗುಡ್ಡ ಏರಲು, ಮಳೆ ಹಾಗೂ ಶೀತ ಗಾಳಿಯನ್ನು ಸಹಿಸಿಕೊಳ್ಳಲು ಆಗುವುದಿಲ್ಲ. ಆದ್ದರಿಂದ ಜೂನ್ ತಿಂಗಳಲ್ಲಿ ವಯಸ್ಸಾದ ಎಲ್ಲಾ ಕುರಿಗಳನ್ನು ಗುಂಪಾಗಿ ಮಾರಾಟ ಮಾಡಲಾಗುವುದು.

**ಕುರಿ ತುಬ್ಬುವಿಕೆ (ಗೊಬ್ಬರ) ಭತ್ಯೆ**

ಕುರಿ-ಮೇಕೆಗಳಿಗೆ ಮೇವು-ನೀರು ಅರಸಿಕೊಂಡು ವಲಸೆ ಹೋಗುವುದು ಇವರ ಕಾಯಕವಾಗಿದೆ. ವಲಸೆ ಹೋದ ಪ್ರದೇಶದ ರೈತರ ಹೊಲ-ಗದ್ದೆಗಳಲ್ಲಿ ರಾತ್ರಿಯ ಸಮಯದಲ್ಲಿ ಕುರಿಗಳನ್ನು ತಬ್ಬಲಾಗುತ್ತದೆ. ಕುರಿ ತಬ್ಬಿದ್ದಕ್ಕೆ ಪ್ರತಿಫಲವಾಗಿ ಇಂತಿಷ್ಟು ಹಣವನ್ನಾಗಲಿ ಅಥವಾ ದವಸ-ಧಾನ್ಯಗಳನ್ನಾಗಲಿ ಪಡೆಯಲಾಗುತ್ತದೆ. ಅದಕ್ಕೆ ಭತ್ಯೆ ಎನ್ನುವರು. ಇತ್ತೀಚಿನ ದಿನಗಳಲ್ಲಿ ಜಮೀನಿನ ರೈತರು ಹಣವನ್ನೇ ನೋಡುತ್ತಾರೆ. ಕುರಿ ತಬ್ಬಿದ್ದಕ್ಕಾಗಿ ಪಡೆಯುವ ಪ್ರತಿಫಲ ಕುರಿಗಳ ಸಂಖ್ಯೆ ಮತ್ತು ಕಾಲವನ್ನು ಅವಲಂಬಿಸಿರುತ್ತದೆ. ಉದಾಹರಣೆಗೆ ಸಂಖ್ಯೆ ೫೦೦ ರಿಂದ ೮೦೦ ಇದ್ದರೆ ೧೦೦ ರಿಂದ ೧೫೦ ರೂ. ಗಳವರೆಗೆ ಭತ್ಯೆ ನೀಡಲಾಗುತ್ತದೆ. ಕೆಲವೊಂದು ರೈತರು ದೌರ್ಜನ್ಯ ಮಾಡಿ ಕುರಿತುಬ್ಬಿದ್ದಕ್ಕೆ ಹಣವನ್ನು ನೀಡದಿರುವ ಪ್ರಸಂಗಗಳುಂಟು. ತಬ್ಬುವಿಕೆಯು ಭತ್ಯೆವನ್ನು ಅವಲಂಬಿಸಿರುತ್ತದೆ ಈ ರೀತಿ ಬರುವ ಆದಾಯವು ಕುಟುಂಬದ ದೈನಂದಿನ ಸಣ್ಣಪುಟ್ಟ ಖರ್ಚು ವೆಚ್ಚಗಳನ್ನು ನಿರ್ವಹಿಸಲು ಬಳಕೆಯಾಗುತ್ತದೆ.

**ಗೊಬ್ಬರದ ಹಿಕ್ಕೆ (ಮೂತ್ರ) ಮಹತ್ವ**

ಕುರಿ-ಮೇಕೆಗಳ ಹಿನ್ನೆ ಮತ್ತು ಮೂತ್ರವು ಕೃಷಿ ಉತ್ಪಾದನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇದರ ಮಹತ್ವ ಅರಿತ ರೈತರು ತಪ್ಪದೇ ತಮ್ಮ ಜಮೀನಿನಲ್ಲಿ ಕುರಿತುತುಬ್ಬಿಸುತ್ತಾರೆ. ಕುರಿ-ಮೇಕೆಗಳ ಹಿಕ್ಕೆ ಹಾಗೂ ದನಗಳ ಸಗಣಿಯ ಮಹತ್ವವನ್ನು ಹೋಲಿಕೆ ಮಾಡಿ ನೋಡಿದಾಗ ಕುರಿ-ಮೇಕೆಗಳ ಹಿಕ್ಕೆಗಳಲ್ಲಿ ಹೆಚ್ಚಿನ ಪ್ರಮಾಣ ನೈಟ್ರೋಜನ್ ಮತ್ತು ಪಾಸ್ಪರಸ್ ಆಸಿಡ್ ಇರುವುದು ದೃಡಪಟ್ಟಿದೆ. ಮೂತ್ರದಲ್ಲಿ ನೂಟ್ರೋಜನ್ ಮತ್ತು ಪೋಟ್ಯಾಸಿಯಂ ಶ್ರೀಮಂತವಾಗಿದೆ. ಆಧುನಿಕ ಕೃಷಿ ಬೇಸಾಯ ಪದ್ಧತಿಯಲ್ಲಿ ಬಹಳಷ್ಟು ರೈತರು ತಮ್ಮ ಜಮೀನಿಗೆ ನೈಟ್ರೋಜನ್, ಪಾಸ್ಪರಸ್ ಮತ್ತು ಪೋಟ್ಯಾಸಿಯಂ ಎನ್.ಪಿ.ಕೆ. ಪಡೆಯಲು ರಾಸಾಯನಿಕ ಗೊಬ್ಬರ ಉತ್ಪನ್ನ ಮಾಡುವ ಕಾರ್ಖಾನೆಗಳಿಗೆ, ಅವುಗಳನ್ನು ಮಾರಾಟ ಮಾಡುವ ಸಗಟು ಅಥವಾ ಚಿಲ್ಲರೆ ವ್ಯಾಪಾರಸ್ಥರಿಗೆ ಬಹಳಷ್ಟು ಹಣ ಸುರಿಯುತ್ತಾರೆ. ಒಂದು ವೇಳೆ ಮಳೆ ಕೈ ಕೊಟ್ಟಾಗ, ಅಥವಾ ಹವಾಮಾನದಲ್ಲಿ ವೈಪರಿತ್ಯದಿಂದಾಗಿ ಬೆಳೆ ಬರದೆ ರೈತನು ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಾನೆ. ಕೆಲವೊಂದು ರೈತರು ಆರ್ಥಿಕ ಸಂಕಷ್ಟದಿಂದ ಹೊರಬರದೆ ಆತ್ಮಹತ್ಯೆಗೆ ಶರಣು ಹೋಗಿರುವ ಎಷ್ಟೋ ಉದಾಹರಣೆಗಳಿವೆ. ರೈತರ ಆತ್ಮಹತ್ಯೆ ತಡೆಯಲು ಸರ್ಕಾರ ಕೆಲವೊಂದು ವಿಶೇಷ ಯೋಜನೆಗಳನ್ನು ಹಾಕಿಕೊಂಡರೂ ಫಲ ನೀಡುತ್ತಿಲ್ಲ. ಉದಾಹರಣೆಗೆ ಕರ್ನಾಟಕ ಸರ್ಕಾರವು ೨೦೦೬-೦೭ನೆಯ ಸಾಲಿನಲ್ಲಿ ಸಹಕಾರಿ ಪತ್ತಿನ ಕೃಷಿ ಬ್ಯಾಂಕುಗಳಿಂದ ೨೫,೦೦೦ ರೂ.ಗಳವರೆಗೆ ಸಾಲ ತೆಗೆದುಕೊಂಡ ರೈತರ ಸಾಲ ಮನ್ನಾ ಮಾಡಿದೆ. ಈ ತರಹದ ಸಾಲ ಮನ್ನಾವು ಒಂದು ವರ್ಷದವರೆಗೆ ರೈತರ ಆತ್ಮಹತ್ಯೆ ತಡೆಯಬಹುದು. ಮುಂದಿನ ವರ್ಷ ರೈತ ತನ್ನ ಜಮೀನಿನಲ್ಲಿ ಬೆಳೆ ಬೆಳೆಯಬೇಕಾದರೆ ಆಧುನಿಕ ಮಿಶ್ರತಳಿಯ ಬೀಜ ಮತ್ತು ರಸಗೊಬ್ಬರಗಳ ಮೊರೆ ಹೋಗಲೇಬೇಕಾಗುತ್ತದೆ. ಆ ವರ್ಷವು ಕೂಡ ಬೆಳೆ ಕೈಕೊಟ್ಟರೆ ಅಥವಾ ಕೃಷಿ ಉತ್ಪನ್ನಗಳ ಬೆಲೆ

ಕಡಿಮೆಯಾದರೆ ರೈತರ ಆತ್ಮಹತ್ಯೆಗಳನ್ನು ತಡೆಯಲು ಸಾಧ್ಯವಾಗುವುದಿಲ್ಲ. ಈ ತರಹದ ಆತ್ಮಹತ್ಯೆಗಳು ಪ್ರತಿವರ್ಷ ಮುಂದುವರಿಯುತ್ತ ಹೋಗುತ್ತವೆ. ರೈತರು ಹೆಚ್ಚಿನ ಇಳುವರಿ ಪಡೆಯುವ ದಿಶೆಯಲ್ಲಿ ಗರಿಷ್ಠ ಪ್ರಮಾಣದಲ್ಲಿ ರಾಸಾಯನಿಕ ಗೊಬ್ಬರ ಹಾಗೂ ಕ್ರಿಮಿನಾಶಕಗಳನ್ನು ಬಳಕೆ ಮಾಡುತ್ತಿದ್ದಾರೆ. ಇವುಗಳ ಬಳಕೆಯಿಂದ ಕೃಷಿ ಭೂಮಿ ಕಲ್ಮಶಗೊಂಡು ವಿಷಮಿಶ್ರಿತವಾಗಿ ಭೂ ಫಲವತ್ತತೆ ನಿಷ್ಕ್ರಿಯವಾಗಿದೆ. ಇನ್ನೊಂದೆಡೆ ನಾವು ಸೇವಿಸುವ ಪ್ರತಿಯೊಂದು ಆಹಾರದಲ್ಲಿ ವಿಷಯುಕ್ತ ರಾಸಾಯನಿಕಗಳಿವೆ. ಪರಿಣಾಮವಾಗಿ ನಾವು ಬಳಸುವ ಆಹಾರ ಧಾನ್ಯಗಳು ವಿಷಮಿಶ್ರಿತವಾಗಿವೆ. ಮಾನವನ ರಕ್ತದಲ್ಲಿ ತಾಯಿಯ ಎದೆಹಾಲಿನಲ್ಲಿ ಜಾನುವಾರುಗಳ ಹಾಲಿನಲ್ಲಿ, ತಾಯಿಯ ಗರ್ಭದಲ್ಲಿ ಬೆಳೆಯುವ ಭ್ರೂಣದಲ್ಲಿಯೂ ಸಹ ಕೃಷಿ ಭೂಮಿಯಲ್ಲಿ ಉಪಯೋಗಿಸುವ ವಿಷಯುಕ್ತ ರಾಸಾಯನಿಕಗಳ ಬಗ್ಗೆ ತಜ್ಞರು ವರದಿ ಮಾಡಿದ್ದಾರೆ. ಮನುಕುಲದ ರೋಗಗಳನ್ನು ಕಡಿಮೆ ಮಾಡಲು ರೈತರ ಆತ್ಮಹತ್ಯೆಗಳನ್ನು ತಡೆಯಲು ಮತ್ತು ಭೂಫಲವತ್ತತೆಯನ್ನು ಹೆಚ್ಚಿಸಲು ಸರ್ಕಾರ ಹಾಗೂ ಸಂಘ-ಸಂಸ್ಥೆಗಳು ಕುರಿ ಹಿಕ್ಕೆ ಹಾಗೂ ಮೂತ್ರದ ಮಹತ್ವವನ್ನು ಅರಿತು ಕುರಿಸಂಗೋಪನೆ ಅಭಿವೃದ್ಧಿಗೆ ಸಹಕಾರಿಯಾಗುವಂತೆ ನೀತಿ-ನಿಯಮಗಳನ್ನು ರೂಪಿಸಬೇಕಾಗಿರುವುದು, ಜರೂರಾಗಿದೆ.

**ಹಬ್ಬ-ಆಚರಣೆಗಳು**

ಪ್ರಕೃತಿಯ ಮಡಿಲಲ್ಲಿ ಬದುಕುವ ಅಲೆಮಾರಿ ಕುರುಬರು ಮರ, ಬಳ್ಳಿ, ಜಲ, ಕಲ್ಲು, ಮಣ್ಣು ಇತ್ಯಾದಿಗಳಲ್ಲಿ ಒಂದಲ್ಲ ಒಂದು ಶಕ್ತಿ ಅಡಗಿದೆಯೆಂದು ನಂಬಿದ್ದಾರೆ. ಈ ನಂಬಿಕೆಗಳಿಂದಲೇ ಕೆಲವೊಂದು ವಾರ್ಷಿಕ ಮತ್ತು ವಿಶೇಷ ಆಚರಣೆಗಳನ್ನು ಆಚರಿಸುತ್ತಾರೆ.

**೧. ಯುಗಾದಿ**

ಪ್ರತಿವರ್ಷ ಚೈತ್ರಮಾಸದ ಆರಂಭದ ಅಮವಾಸ್ಯೆಯ ಮರುದಿನದಂದು ಬರುವ ಯುಗಾದಿಯನ್ನು ಹೊಸವರ್ಷವೆಂದು ಕರೆಯುತ್ತಾರೆ. ಬಹುತೇಕವಾಗಿ ಹಿಂದೂಗಳೆಲ್ಲರೂ ಸಂತೋಷ ಸಂಭ್ರಮದಿಂದ ಆಚರಿಸುವ ಹಬ್ಬ ಇದಾಗಿದೆ. ಅಂದು ಅಲೆಮಾರಿ ಕುರುಬರ ವಿಶೇಷತೆಯೆಂದರೆ ಕುರಿ-ಮೇಕೆಗಳ ಮರಿಗಳಿಗೆ ಗುರುತು ಅಥವಾ ಲಾಕು ಹಾಕುವುದಾಗಿದೆ. ಲಾಕು ಹಾಕುವುದರಿಂದ ತಮ್ಮ ಕುರಿಗಳನ್ನು ಗುರುತಿಸಲು ಸುಲಭವಾಗುತ್ತದೆ. ಆದ್ದರಿಂದ ಯುಗಾದಿ ಹಬ್ಬದ ದಿನದಂದು ಶುಭ್ರಗೊಂಡ ಮುಂಜಾನೆಯೇ ತಮ್ಮ ಬದುಕುಗಳಿಗೆ ಪೂಜೆ ಸಲ್ಲಿಸುತ್ತಾರೆ. ಪೂಜೆ ಸಲ್ಲಿಸಲು ನಂತರ ಒಂದು ವರ್ಷದೊಳಗಿನ ಗಂಡು ಮರಿಗಳಿಗೆ ಬಾಲದ ತುದಿಯನ್ನು, ಹೆಣ್ಣು ಮರಿಗಳಿಗೆ ಬಾಲದ ತುದಿ ಮತ್ತು ಕಿವಿಯ ಮೇಲೆ ಚರ್ಮದ ಸ್ವಲ್ಪ ಭಾಗವನ್ನು ಕತ್ತರಿಸುವರು. ಈ ರೀತಿ ಕತ್ತರಿಸುವಾಗ ಅಥವಾ ಬರೆಹಾಕುವಾಗ ತಮ್ಮ ಹಿರಿಯರು ಹಾಕಿಕೊಟ್ಟ ಅಥವಾ ಮುಂದುವರಿಸಿಕೊಂಡು ಬಂದ ಗುರುತನ್ನೇ ಹಾಕುತ್ತಾರೆ. ಇದಕ್ಕೆ ಲಾಖು ಹಾಕುವುದು ಎಂದು ಕರೆಯುತ್ತಾರೆ. ಅಂತಹ ಲಾಖು ಅಥವಾ ಗುರುಗಳೆಂದರೆ ಬುಗುಡೆ ಸೀಳ್‌ಗಿವಿ, ಅರೆಗಿವಿ, ಉಂಗುರ, ಮುಂಗವಿ, ಹಿಂಗಿವಿ ಇತ್ಯಾದಿ ರೀತಿಯ ಗುರುತುಗಳನ್ನು ಹಿಕ್ಕಳ ಅಥವಾ ಚಿಮುಟಿಗೆಯಿಂದ ಹಾಕುತ್ತಾರೆ. ಇನ್ನೂ ಕೆಲವರು ಕಬ್ಬಿಣದ ಸಲಾಕೆಯನ್ನು ಬೆಂಕಿಯಲ್ಲಿ ಖಾಯಿಸಿ ಹಣೆ ಅಥವಾ ಬೆನ್ನಿನ ಮೇಲೆ ಕತ್ರಿ ಬರೆ (X), ಜೋಡುಬರೆ (||), ಒಂಟಿ ಬರೆ (|) ಅಡ್ಡಬರೆ (-) ಅಂದರೆ =, +, X, | T, V ಇತ್ಯಾದಿ ಚಿಹ್ನೆಗಳನ್ನು ಹೊಂದಿರುವ ಗುರುತು ಅಥವಾ ಬರೆ ಹಾಕುತ್ತಾರೆ. ಈ ತರಹದ ಚಿಹ್ನೆಗಳ ಆಧಾರದ ಮೇಲೆ ತಮ್ಮ ಕುರಿಗಳನ್ನು ಗುರುತಿಸುತ್ತಾರೆ. ಗಂಡು ಮರಿಗಳಿಗೆ ಕಿವಿ, ಹಣೆ ಅಥವಾ ಬೆನ್ನಿನ ಮೇಲೆ ಗುರುತು ಅಥವಾ ಬರೆ ಹಾಕುವುದಿಲ್ಲ. ಏಕೆಂದರೆ ೧೨ ಬೀಜಕ್ಕೆ ಬಿಟ್ಟು ಉಳಿದೆಲ್ಲವನ್ನು ಮಾರಾಟ ಮಾಡುತ್ತಾರೆ. ಆದ್ದರಿಂದ ಬಹಳ ಕುಟುಂಬಗಳು ಗುಂಪಾಗಿ ಕುರಿ ತಬ್ಬಿದಾಗ ಸಾವಿರಾರು ಕುರಿಗಳಲ್ಲಿ ತಮ್ಮ ಕುರಿ ತಪ್ಪಿಸಿಕೊಂಡಾಗ, ಬೇಗನೆ ಗುರುತು ಹಚ್ಚಲು ಚಿಹ್ನೆ ಅಥವಾ ಲಾಖು ಸಹಾಯಕವಾಗುತ್ತದೆ. ಒಂದೇ ಗುರುತನ್ನು ಎರಡು ಅಥವಾ ಮೂರು ಕುಟುಂಬದವರು ಹಾಕಿದಾಗ ಹೇಗೆ ಗುರುತು ಹಿಡಿಯುತ್ತೀರಿ ಎಂದು ಪ್ರಶ್ನಿಸಿದಾಗ ನನ್ನ ಪ್ರಶ್ನೆಗೆ ಉತ್ತರಿಸುತ್ತಾ "ಸಾಹೇಬ್ರ ಸಾಲಿ ಕಲಿತ ನೀವು ಒಂದೇ ರೀತಿಯ ಅಕ್ಷರ ಬರೆಯುತ್ತೀರಿ. ಸಾವಿರ ಪೇಪರ ತಂದು ನಿಮ್ಮ ಮುಂದಿಟ್ಟರೆ ಇದೇ ನನ್ನ ಪೇಪರ್, ಇದೇ ನನ್ನ ಬರವಣಿಗೆ ಎಂದು ಹೇಗೆ ನಿಮ್ಮದೇ ಎಂದು ಗುರುತು ಹಿಡಿಯುತ್ತೀರೋ ಹಾಗೆಯೇ ನಾವು ಎದ್ದರೂ, ಬಿದ್ದರೂ ಕುರಿಯಲ್ಲಿರುವುದರಿಂದ ನಮ್ಮ ಕುರಿಯನ್ನು ಗುರುತಿಸುವುದು ಕಷ್ಟವಾಗುವುದಿಲ್ಲ" ಎನ್ನುತ್ತಾರೆ. ಹೌದು, ಈ ಮಾತು ಸತ್ಯವೆನಿಸುತ್ತದೆ. ಜೀವನವಿಡಿ ಕುರಿ ಸಂಗೋಪನೆಯಲ್ಲಿ ತೊಡಗಿರುವುದರಿಂದ ಸುಲಭವಾಗಿ ಗುರುತಿಸಬಹುದಾಗಿದೆ. ಲಾಕು ಹಾಕಿದ ನಂತರ ಬಾಲದ ತುದಿ ಕಿವಿಯ ಚರ್ಮದ ತುಂಡುಗಳನ್ನು ವಿಭಾಗಿಸಿ ಎಣಿಸುವರು. ಇದರಿಂದ ಹೆಣ್ಣು ಮರಿಗಳು ಹಾಗೂ ಗಂಡುಮರಿಗಳು ಎಷ್ಟಿವೆ

ಎಂಬುದು ತಿಳಿಯುತ್ತದೆ. ಹೆಣ್ಣು ಮರಿಗಳು ಮುಂದಿನ ಅಭಿವೃದ್ಧಿಯನ್ನು ಸೂಚಿಸಿದರೆ, ಗಂಡುಮರಿಗಳು ಕುಟುಂಬದ ವಾರ್ಷಿಕ ಖರ್ಚು-ವೆಚ್ಚಗಳನ್ನು ಹೇಗೆ ಸರಿದೂರಿಸಬೇಕೆಂಬುದನ್ನು ಸ್ಪಷ್ಟಪಡಿಸುತ್ತವೆ . ಹಿಂದಿನ ವರ್ಷ ಎಷ್ಟು ಗಂಡು ಮತ್ತು ಹೆಣ್ಣು ಮರಿಗಳಿದ್ದವು, ಈ ವರ್ಷ ಎಷ್ಟಿವೆ ಎಂಬುದನ್ನು ಹೋಲಿಕೆ ಮಾಡಿ ನೋಡುತ್ತಾರೆ. ಇವರ ದೃಷ್ಟಿಯಲ್ಲಿ ಈ ಹಬ್ಬ ಹೀಗೆ ಸಮೃದ್ಧಿಯ ಸಂಕೇತವೆನಿಸುತ್ತದೆ. ಏಕೆಂದರೆ ಇಡೀ ವರ್ಷ ಯುಗಾದಿಯಿಂದ ಯುಗಾದಿಯವರೆಗೆ ತಮ್ಮ ಬದುಕುಗಳನ್ನು ಸಾಕಿ ಸಲುಹಿ, ಸಂಗೋಪನೆ, ಮಾಡಿ ದುಡಿಮೆಯ ಪ್ರತಿಫಲವಾಗಿ ಲೆಕ್ಕ ಹಾಕುವರು. ಮರಿಗಳ ಸಂಖ್ಯೆಯಲ್ಲಿ ಹೆಚ್ಚಳವಾದರೆ ಅಭಿವೃದ್ಧಿ ಎಂದು ತೀರ್ಮಾನಿಸುವರು. ಕಡಿಮೆಯಾದರೆ ಅನಭಿವೃದ್ಧಿ ಎಂದು ತಿಳಿದುಕೊಳ್ಳಬೇಕು. ಅಭಿವೃದ್ಧಿ ಅಥವಾ ಅನಭಿವೃದ್ಧಿ ನಿರ್ಧಾರವಾಗುವುದು ಇವರ ಶ್ರಮದ ಜೊತೆಗೆ ತಾವು ಅಲೆದಾಡುವ ಪ್ರದೇಶದಲ್ಲಿ ಕುರಿ-ಮೇಕೆಗಳಿಗೆ ದೊರೆಯುವ ಮೇವು-ನೀರು ಹಾಗೂ ಅವುಗಳಿಗೆ ಬರುವ ರೋಗರುಜಿನಗಳನ್ನು ಅವಲಂಬಿಸಿರುತ್ತದೆ.

**೧. ದೀಪಾವಳಿ**

ದೀಪಾವಳಿ ಹಬ್ಬವು ಇವರ ಪಾಲಿಗೆ ಅಂಧಕಾರವನ್ನು ಹೋಗಲಾಡಿಸಿ ಬೆಳಕನ್ನು ತಂದುಕೊಡುವ ಹಬ್ಬವಾಗಿದೆ. ಕುರಿಗಳನ್ನು ಲಕ್ಷ್ಮಿ ಎಂದು ಭಾವಿಸಿ ಕುರಿಗಳಿಗೆ ಪೂಜೆ ಸಲ್ಲಿಸುವ ಮೂಲಕ ಕುರಿಲಕ್ಷ್ಮಿಯನ್ನು ಆಚರಿಸುತ್ತಾರೆ. ಲಕ್ಷ್ಮಿ ಎಂದು ಭಾವಿಸಿರುವುದರಿಂದ ಹಾಲು ಹಿಂಡುವಾಗ, ಮರಿ ಉಣಿಸುವಾಗ, ಕುರಿಮಂದಿ ಉಬ್ಬಿಸುವಾಗ ಕಾಲಿನಿಂದ ಮುಟ್ಟಿಸುವುದು ಅಥವಾ ಒದೆಯುವುದಾಗಲಿ ಮಾಡುವುದಿಲ್ಲ. ಒಂದು ವೇಳೆ ಕಾಲು ತಗುಲಿದರೆ ಅವುಗಳಿಗೆ ನಮಸ್ಕಾರ ಮಾಡುತ್ತಾರೆ. ಈ ಹಬ್ಬವನ್ನು ಆಚರಿಸುವಾಗ ಗುಡ್ಡಗಾಡು ಪ್ರದೇಶದಲ್ಲಿ ನಾಗರಪಂಚಮಿಯಿಂದ ದೀಪಾವಳಿವರೆಗೆ ಅಲೆದಾಡುತ್ತಿರುತ್ತಾರೆ.

ಈ ಹಬ್ಬದ ಆಚರಣೆಯ ನಂತರ ಹೊಲ-ಗದ್ದೆಗಳ ಕಡೆ ವಲಸೆ ಹೋಗುತ್ತಾರೆ. ವಲಸೆ ಹೋಗುವಿಕೆಯು ಯಾವ ದಿಕ್ಕಿನ ಕಡೆ ಹೋಗಬೇಕೆಂದು ಆಚರಣೆಯಿಂದಲೇ ಕಂಡುಕೊಳ್ಳುತ್ತಾರೆ.

ಒಂದು ಕಡೆ ಗುಡಾರ ಹೂಡಿ ಕುರಿತಬ್ಬಿದ ಕುಟುಂಬಗಳೆಲ್ಲಾ ಸೇರಿಕೊಂಡು ಸಾಮೂಹಿಕವಾಗಿ ಈ ಹಬ್ಬವನ್ನು ಆಚರಿಸುತ್ತಾರೆ. ಹಬ್ಬರ ಸಲುವಾಗಿ ಹೆಣ್ಣು ಮಕ್ಕಳನ್ನು ಗಂಡನ ಮನೆಯಿಂದ ತವರು ಮನೆಗೆ ಅದರಲ್ಲೂ ಹೊಸದಾಗಿ ಮದುವೆಯಾದವರನ್ನು ಕಡ್ಡಾಯವಾಗಿ ಕರೆದುಕೊಂಡು ಬಂದು ಸೀರೆ ಉಡಿಸುತ್ತಾರೆ. ಸ್ಥಿತಿವಂತರಿದ್ದರೆ ಬಂಗಾರದ ಒಡವೆಗಳನ್ನು ತಂದು ಕೊಡುತ್ತಾರೆ. ಈ ಹಬ್ಬದ ಆಚರಣೆಯನ್ನು ಬೆಳಿಗ್ಗೆ ಕುರಿಗಳು ಅಡವಿಗೆ ಹೋಗುವುದರೊಳಗೆ ಮಾಡಬೇಕಾಗಿರುವುದರಿಂದ ರಾತ್ರಿಯಿಂದಲೇ ಸಿದ್ಧತೆ ಶುರುವಾಗುತ್ತದೆ. ಹಬ್ಬಕ್ಕೆ ತಗಲುವ ಖರ್ಚು-ವೆಚ್ಚಗಳನ್ನು ಸಮಾನವಾಗಿ ಹಂಚಿಕೊಳ್ಳುತ್ತಾರೆ.

ಲಕ್ಷ್ಮಿ ಪೂಜೆ ಮಾಡುವ ಸ್ಥಳವು ಎಲ್ಲಾ ಗುಡಾರಗಳಿಗೆ ಹತ್ತಿರವಿರುವಂತೆ ಮಧ್ಯದ ಸ್ಥಳವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಆ ಸ್ಥಳದಲ್ಲಿ ವೃತ್ತಾಕಾರದಲ್ಲಿ ಕುರಿ ಹಿಕ್ಕೆಯಿಂದ ಸಾರಿಸಿ ಶುಭ್ರಗೊಳಿಸುತ್ತಾರೆ. ಅದರ ಮೇಲೆ ಕುರಿ ಹಿಕ್ಕಿಯಿಂದ ೫ ಪಾಂಡವರ ಮೂರ್ತಿಗಳನ್ನು ಮಾಡಿ ಇಡುವರು. ಇವುಗಳ ಗಾತ್ರವು ಇಳಿಕೆಯ ಕ್ರಮದಲ್ಲಿರುತ್ತದೆ. ಕುರಿ ಹಿಕ್ಕಿಯಿಂದ ಸಾರಿಸಿ ಶುಭ್ರಗೊಳಿಸಿದ ಸ್ಥಳ್ಕಕೆ ಅಂಟಿಕೊಂಡಂತೆ ಕಬ್ಬಿನ ಅಥವಾ ಜೋಳದ ಹಸಿರು ದಂಟುಗಳನ್ನು ನಾಲ್ಕು ಕಡೆ ನೆಟ್ಟು ದೇವರ ಗುಡಿಯ ಗೋಪುರದ ಆಕಾರದಂತೆ ಮೇಲ್‌ತುದಿಯಲ್ಲಿಯ ಎಲ್ಲಾ ದಂಟುಗಳನ್ನು ಕೂಡಿಸಿ ಕಟ್ಟುವರು. ಹಾಗೆಯೇ ಮುಖದ್ವಾರದ ದಂಟುಗಳಿಗೆ ಎರಡು ಬಾಳೆದಿಂಡುಗಳನ್ನು ಕಟ್ಟುವರು. ಅದನ್ನು ಹೂಗಳಿಂದ ಶೃಂಗಾರಗೊಳಿಸುವರು. ಗುಡಿಯಾಕಾರದ ಕಬ್ಬಿನ ದಂಟಿನ ಮುಂದೆ ಕಂಬಳಿ ಹಾಸಿ, ಅಕ್ಕಿಯನ್ನು ಹಾಕಿ ಗದ್ದುಗೆ ತಯಾರು ಮಾಡುತ್ತಾರೆ. ಆ ಗದ್ದುಗೆಯು ಯಾವ ದಿಕ್ಕಿನಿಂದ ನೋಡಿದರೂ ಶಿವನ ತ್ರಿಶೂಲಾಕಾರವಾಗಿ ಕಾಣಿಸುತ್ತದೆ. ಗದ್ದುಗೆಯ ಮೇಲೆ ಯಾವುದಾದರೊಂದು ಆರಾಧ್ಯ ದೇವರಾದ ಬೀರ, ಮಾಳಿಂಗರಾಯ ಭಾವಚಿತ್ರವನ್ನು (ಫೋಟೋ) ಇಟ್ಟು ಅದಕ್ಕೆ ಬಂಗಾರದ ಬೋರಾಮಣಿ ಸರ ಹಾಕಲಾಗುತ್ತದೆ. ಆ ಗದ್ದುಗೆಯ ಪಕ್ಕದಲ್ಲಿ ಮತ್ತೊಂದು ಕಂಬಳಿ ಹಾಸಿ ಅದರ ಮೇಲೆ ನೀರು ತುಂಬಿದ ತಂಬಿಗೆ ಇಟ್ಟು, ತಂಬಿಗೆಯ ಮೇಲೆ ತೆಂಗಿನಕಾಯಿ ಇಟ್ಟು, ಹೂವುಗಳಿಂದ ಶೃಂಗಾರಗೊಳಿಸುವರು. ಇದೇ ಲಕ್ಷ್ಮಿ ಹಬ್ಬ.

ಕಂಬಳಿ ಗದ್ದುಗೆಯ ಮುಂದೆ ಸ್ವಲ್ಪ ಅಂತರದಲ್ಲಿ ಕುರಿಯ ಹಿಕ್ಕೆಯಿಂದ ತಯಾರಿಸಿದ ಒಣಗಿದ ಕುಳ್ಳನ್ನು ದಪ್ಪವಾಗಿ ಹಾಕಿ ಅದರ ಮೇಲೆ ಕರಿಯ ಕುರಿಗಳ ಹಾಲಿನ ಮಗಿಯನ್ನು ಸಮವಾಗಿಟ್ಟು ಕುಳ್ಳಿಗೆ ಬೆಂಕಿ ಹಚ್ಚುವರು. ಮಗಿಯಲ್ಲಿರುವ ಹಾಲು ಯಾವ ಕಡೆ ಉಕ್ಕುತ್ತದೆಯೋ ಆ ದಿಕ್ಕಿನಲ್ಲಿ ಮಳೆ-ಬೆಳೆ ಚೆನ್ನಾಗಿರುವುದಲ್ಲದೆ, ಕುರಿಗಳಿಗೆ ಮೇವು ನೀರು ದೊರೆಯುತ್ತದೆ. ಆದ್ದರಿಂದ ಕುರಿಗಳನ್ನು ಆ ದಿಕ್ಕಿನ ಕಡೆ ಹೊಡೆದುಕೊಂಡು ವಲಸೆ ಹೋದರೆ ತಮಗೆ ಹಾಗೂ ತಮ್ಮ ಬದುಕುಗಳಿಗೆ ಒಳ್ಳೆಯದಾಗುತ್ತದೆಂಬುದನ್ನು ಈ ಹಬ್ಬದಿಂದ ತಿಳಿದುಕೊಳ್ಳುತ್ತಾರೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಉತ್ತರ ದಿಕ್ಕಿನ ಕಡೆ ಹಾಲು ಉಕ್ಕಿತು. ಈ ಪ್ರಕಾರವೇ ಅಲೆಮಾರಿ ಕುರುಬರು ವಲಸೆ ಹೋಗುತ್ತಾರೆ.

ಆ ದಿನದಂದು ಸ್ತ್ರೀ-ಪುರುಷರು ಹಾಗೂ ಮಕ್ಕಳು ಶುಭ್ರ ಅಥವಾ ಹೊಸ ಬಟ್ಟೆಗಳನ್ನು ಧರಿಸಿ ಹಣೆಗೆ ಭಂಡಾರವನ್ನು ಹಚ್ಚಿಕೊಳ್ಳುವರು. ಪೂಜೆ ಮಾಡಲು ಎಲ್ಲಾ ಸಿದ್ಧತೆಯಾದ ನಂತರ ಕುಟುಂಬಕ್ಕೊಂದರಂತೆ ಕುರಿ ಅಥವಾ ಟಗರನ್ನು ಲಕ್ಷ್ಮಿಗಳನ್ನು ಹಿಡಿದುಕೊಂಡು ಬಂದು ಗುಡಿಯಾಕಾರದ ಕಬ್ಬಿನ ದಂಟಿನ ಅಕ್ಕಪಕ್ಕದಲ್ಲಿ ನಿಲ್ಲಿಸುವರು. ಕುರಿ ಮತ್ತು ಟಗರುಗಳಿಗೆ ಭಂಡಾರ ಹಚ್ಚಿ ಹೂವಿನ ಹಾರ ಹಾಕುವರು.

ಅಂದು ದೇವರಿಗೆ ನೈವೇದ್ಯ ಮಾಡಿದ ಹೋಳಿಗೆ, ತುಪ್ಪ, ಹಾಲು, ಅನ್ನ, ಸೆಂಡಿಗೆ, ಇತ್ಯಾದಿಗಳನ್ನು ಬಾಳೆಯ ಎಲೆ ಅಥವಾ ಪತ್ರಾಳಿ ಮೇಲಿಟ್ಟು ಊದಿನಕಡ್ಡಿ ಹಚ್ಚಿ, ಕಾಯಿ ಒಡೆಯುವರು. ನಂತರ ಹೂವಿನ ಮಾಲೆ ಹಾಕಿ ನಿಲ್ಲಿಸಿದ ಕುರಿ, ಟಗರನ್ನು ಗುಡಿಯ ಸುತ್ತ ಐದು ಸುತ್ತ ತಿರುಗಿಸುವರು. ತಿರುಗಿಸುವಾಗ ಮರಾಠಿ ಭಾಷೆಯಲ್ಲಿ “ಅಡಿಪಿಡಿ ಜಾಂದೆ ಬಾದ್ರ ಜಾ ಯಾವುಂಡೆ” ಎಂದು ಜೋರಾಗಿ ಕೂಗುವರು. ತಮ್ಮಲ್ಲಿರುವ ಎಲ್ಲಾ ಪೀಡೆಗಳು ನದಿ ಅಥವಾ ಹೊಳೆ ಆ ಕಡೆ ಹೋಗಲಿ ಎಂದು ಸಂಬೋಧಿಸುತ್ತಾರೆ. ಇದಾದ ನಂತರ ದೇವರ ನೈವೇದ್ಯಕ್ಕಿಟ್ಟಿರುವ ಎಲ್ಲಾ ಎಡೆಯನ್ನು ಕಲಿಸಿ ಪ್ರತಿಯೊಂದು ಕುಟುಂಬದ ಕುರಿಗಳಲ್ಲಿ ಚರಗ ಚೆಲ್ಲುತ್ತಾರೆ. ಚರಗ ಚೆಲ್ಲುವವನ ಹಿಂದೆ ಇನ್ನೊಬ್ಬ ತಂಬಿಗೆಯಲ್ಲಿರುವ ನೀರು ಚಿಮುಕಿಸುತ್ತಾರೆ. ಕುರಿಗಳ ಸಂಖ್ಯೆ ಚಗರ ಚೆಲ್ಲಿದ ಹಾಗೆ ಮುಂದಿನ ವರ್ಷದೊಳಗೆ ಬೆಳೆಯಬೇಕು ಎಂಬ ನಂಬಿಕೆಯಿಂದ ಈ ರೀತಿಯಾಗಿ ಮಾಡುತ್ತಾರೆ.

ಇದಾದ ಮೇಲೆ ತವರು ಮನೆಗೆ ಬಂದ ಹೆಣ್ಣು ಮಕ್ಕಳು ಕುರಿಗಳಿಗೆ ಆರತಿ ಬೆಳಗಿ ತಮ್ಮ ತಂದೆಯ ಕುರಿಯ ಸಂಖ್ಯೆ ಸಮೃದ್ಧಿಯಾಗಿ ಬೆಳೆಯಲಿ ಎಂದು ಹಾರೈಸುವರು. ಹಾಗೆಯೇ ಅಪ್ಪ, ಅಣ್ಣ, ತಮ್ಮನಿಗೂ ಆರತಿ ಬೆಳಗಿ ಅವರಿಗೆ ಮತ್ತು ಅವರ ಕುಟುಂಬಕ್ಕೆ ಒಳ್ಳೆಯದಾಗಲೆಂದು ಹಾರೈಸುತ್ತಾರೆ. ಆರತಿ ಬೆಳಗಿದ್ದಕ್ಕೆ ಆರತಿಯ ತಟ್ಟೆಯಲ್ಲಿ ಖುಷಿಗಾಗಿ ೧೦, ೫೦, ೧೦೦ ರೂ. ಗಳವರೆಗೆ ನೀಡುವರು. ಇವೆಲ್ಲಾ ಕಾರ್ಯಗಳು ಮುಗಿದ ನಂತರ ಸಾಮೂಹಿಕವಾಗಿ ಕುಳಿತುಕೊಂಡು ಊಟ ಮಾಡುವರು.

**೩. ಮಲಪುರಿ ಹಬ್ಬ**

ಪ್ರತಿ ವರ್ಷ ಶ್ರಾವಣ ಮಾಸದಲ್ಲಿ ಸೋಮವಾರ ಅಥವಾ ಶುಕ್ರವಾರ ದಿನಗಳಂದು ಗಂಗಾ ಪೂಜೆಯನ್ನು ಆಚರಿಸುತ್ತಾರೆ. ಇದನ್ನು ಮಲಪುರಿ ಹಬ್ಬ ಎಂದು ಕರೆಯುತ್ತಾರೆ.

ಇದು ನಿಸರ್ಗ ಮತ್ತು ಅಲೆಮಾಡಿ ಕುರುಬರಿಗೆ ಇರುವ ಸಂಬಂಧವನ್ನು ವ್ಯಕ್ತಪಡಿಸುತ್ತದೆ. ಈ ಹಬ್ಬವನ್ನು ಆಚರಿಸುವ ಹಿನ್ನಲೆಯೆಂದರೆ ಶ್ರಾವಣ ಮಾಸದಲ್ಲಿ ಅತಿಹೆಚ್ಚು ಮಳೆಯಾಗಿ ಬಹಳ ದಿನಗಳವರೆಗೆ ಮಲಪ್ರಭ ನದಿ ತುಂಬಿ ಎರಡು ದಡಸೇರಿ ಹರಿಯುತ್ತಿತ್ತು. ಆ ಸಮಯದಲ್ಲಿ ಕುರಿಗಳಿಗೆ ಮೇವು ಹಾಗೂ ತಮಗೆ ಆಹಾರ ದೊರೆಯದೆ ಕ್ಲಿಷ್ಟ ಪರಿಸ್ಥಿತಿ ನಿರ್ಮಾಣವಾಯಿತು. ಅಲೆಮಾರಿ ಕುರುಬರು ತಮ್ಮ ಬದುಕುಗಳನ್ನು ಹೊಡೆದುಕೊಂಡು ಗುಡ್ಡಗಾಡು ಪ್ರದೇಶಕ್ಕಾಗಿ ಅಥವಾ ಬಯಲು ಪ್ರದೇಶ್ಕಕಾಗಿ ವಲಸೆ ಹೋಗುವುದು ಅಸಾಧ್ಯವಾಯಿತು. ಆಗ ಪ್ರಕೃತಿ ದೇವಿಯಾದ ಗಂಗಾದೇವಿಯನ್ನು ಪ್ರಾರ್ಥಿಸಿ ನಮಗೆ ದಾರಿ ತೋರಿಸಿ. ನಿನಗೆ ಪ್ರತಿವರ್ಷ ಶ್ರಾವಣ ಮಾಸದಲ್ಲಿ ಪೂಜೆ ಸಲ್ಲಿಸುತ್ತೇವೆಂದು ಬೇಡಿಕೊಂಡರು. ಅವರ ಬೇಡಿಕೆಗೆ ಮನ್ನಿಸಿದ ಗಂಗಾದೇವಿ ತಕ್ಷಣ ಹರಿಯುವ ನೀರು ಎರಡು ಭಾಗವಾಗಿ ನಿಂತು ಕುರಿಗಳು ಹೋಗಲಿಕ್ಕೆ ದಾರಿ ಮಾಡಿಕೊಟ್ಟಳು. ಆದ್ದರಿಂದ ಅಂದಿನಿಂದ ಇಂದಿನವರೆಗೆ ಮಲಪ್ರಭ ನದಿಯ ಹೆಸರಿನಲ್ಲಿ ಗಂಗಾದೇವಿಗೆ ಪೂಜೆ ಸಲ್ಲಿಸುವುದನ್ನು ಮಲಪ್ರಭ ಹಬ್ಬ ಎನ್ನುವ ಬದಲಾಗಿ 'ಮಲಪುರಿ ಹಬ್ಬ' ವೆಂದು ಕರೆಯುತ್ತಾರೆ.

ಶ್ರಾವಣ ಮಾಸ ಮಳೆಗಾಲವಾದ್ದರಿಂದ ಕುರಿಮಂದೆಗಳು ಗುಡ್ಡಗಾಡು ಪ್ರದೇಶದಲ್ಲಿರುತ್ತವೆ. ಈ ಹಬ್ಬವನ್ನು ಒಂದೇ ಕಡೆ ತಬ್ಬಿದ ಕುಟುಂಬಗಳು ಸೇರಿಸಾಮೂಹಿಕವಾಗಿ ಆಚರಣೆ ಮಾಡುತ್ತವೆ. ಆದ ಖರ್ಚು-ವೆಚ್ಚಗಳನ್ನು ಸಮನಾಗಿ ಹಂಚಿಕೊಳ್ಳುವರು. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಪಾಪಿನಾಯಕನಹಳ್ಳಿ ಮತ್ತು ಕಮಲಾಪುರ ಮಧ್ಯದಲ್ಲಿ ಬರುವ ಗುಡ್ಡದಲ್ಲಿ ಚಿಕ್ಕೋಡಿ ತಾಲೂಕು ಅಪ್ಪನ ಹಟ್ಟಿ ಅಪ್ಪನ ಗುಂಪಿನವರು ಈ ಹಬ್ಬವನ್ನು ಆಚರಣೆ ಮಾಡಿದರು.

ಈ ಆಚರಣೆಗೆ ಮಹಿಳೆಯರು ಉಪವಾಸ ಇರುವುದು. ಕುರಿಮಂದೆಗಳು ವೇವು ಮೇಯಲು ಅಡವಿಗೆ ಹೋದನಂತರ ತಲೆ ಸ್ನಾನ ಮಾಡಿ ಅನುಕೂಲವೆನಿಸಿದ ಗುಡಾರದ ಸ್ಥಳಕ್ಕೆ ಸೇರಿಕೊಳ್ಳುತ್ತಾರೆ. ಆ ದಿನದ ಗಂಗಾದೇವಿಯ ನೈವೇದ್ಯಕ್ಕೆ ಹಾಗೂ ತಮಗೂ ವಿಶೇಷ ಅಡುಗೆಯನ್ನಾಗಿ ಹೋಳಿಗೆ ಮಾಡುತ್ತಾರೆ. ಕುಟುಂಬದ ಸಂಖ್ಯೆ ಹೆಚ್ಚು ಇರುವುದರಿಂದ ಮಾಡಿದ ಹೋಳಿಗೆಗಳನ್ನು ಕಟ್ಟಿಗೆ ಮತ್ತು ಕಂಬಳಿಗಳ ಸಹಾಯದಿಂದ ತಯಾರು ಮಾಡಿದ ಮಂಚದ ಮೇಲೆ ಹಾಕಿರುತ್ತಾರೆ. ಅದು ನೋಡುಗರಿಗೆ ವಿಶೇಷ ಹಾಗೂ ಹೊಸತನವಾಗಿ ಕಾಣಿಸುತ್ತದೆ. ಕುರಿಹಿಂಡುಗಳು ಸಾಯಂಕಾಲ ಗುಡಾರಕ್ಕೆ ಮರಳಿದ ನಂತರ ಪುರುಷರೆಲ್ಲರು ಸೇರಿ ಪರಡಗಿ ಬಾಗೀನಾ ತಯಾರು ಮಾಡುತ್ತಾರೆ. ಕೆಳಗಡೆ ಕರಿಯ ಕಂಬಳಿ ಹಾಸಿ ಅದರ ಮೇಲೆ ಗದ್ದುಗೆ ಚೌಕಾಕಾರದಲ್ಲಿ ತಂದ ೫ ಬಾಳೆ, ಜೋಳದ ಅಥವಾ ಸಜ್ಜೆ ದಂಟುಗಳನ್ನಿಟ್ಟು, ದಾರದಿಂದ ಕಟ್ಟುತ್ತಾರೆ. ಪರಡಗಿ ತಯಾರು ಮಾಡಿದ ನಂತರ ಅದಕ್ಕೆ ಭಂಡಾರ ಕುಂಕುಮ ಹಚ್ಚಿ ಹೋಳಿಗೆ ಇಟ್ಟು ಪೂಜೆ ಮಾಡುವರು.

ಗುಡಾರದಲ್ಲಿ ಪೂಜೆ ಮುಗಿದ ನಂತರ ಯಾರಾದರೊಬ್ಬರು ತಲೆಗೆ ಪೇಟಾ ಸುತ್ತಿಕೊಂಡು, ತಲೆಯ ಮೇಲೆ ಕರಿ ಕಂಬಳಿ ಹಾಕಿಕೊಳ್ಳುವರು. ನಂತರ ಪರಡಗಿಯನ್ನು ತಲೆಯ ಮೇಲೆ ಹೊತ್ತು, ನದಿ, ಹಳ್ಳ, ಹಗರಿ, ಹೊಳೆ ಅಥವಾ ಕಾಲುವೆ ಇರುವ ಸ್ಥಳಕ್ಕೆ ಪುರುಷರೆಲ್ಲರು ಹೋಗುವರು. ಹೊತ್ತು ತಂದ ಪರಡಗಿ ಹಾಗೂ ಉಣ್ಣಲು ತಂದ ಬುತ್ತಿಯನ್ನು ಕಾಲುವೆ ದಡದಲ್ಲಿ ಇಳಿಸುವರು. ಗಂಗಾದೇವಿಯ ಪೂಜೆಗೆಂದು ತಂದ ೫ ಬಳೆಹಣ್ಣು, ೫ ನಿಂಬೆಹಣ್ಣು, ೫ ಹಸಿರುಬಳೆ, ೫ ಉತ್ತುತ್ತಿ ಹಾಗೂ ಬೆಲ್ಲವನ್ನು ಪರಡಗಿಯ ಮೇಲಿಟ್ಟು ಭಂಡಾರ, ಕುಂಕುಮ ಹಚ್ಚುವರು. ನಂತರ ಪರಡಗಿ ಸುತ್ತ ಮೇಣದ ಬತ್ತಿ, ದೀಪ ಹಚ್ಚಿ ಊದಿನಕಡ್ಡಿ ಬೆಳಗಿಸಿ, ಕಾಯಿ ಒಡೆಯುವರು. ಇದಾದ ಮೇಳೆ ೫ ಜನರು ಪರಡಗಿಯನ್ನು ಎತ್ತಿಕೊಂಡು ಹರಿಯುವ ನೀರಿಗೆ ಬಿಡುವರು. ಜೈ ಗಂಗಮ್ಮ ಜೈ ಗಂಗಮ್ಮ ಎಂದು ಜೋರಾಗಿ ಹೇಳುವರು. ಅಲೆಮಾರಿ ಕುರುಬರು ಗಂಗಾದೇವಿಗೆ ಅರ್ಪಿಸಿದ ಪರಡಗಿ ಮುಣುಗದೆ ಹಾಗೂ ಮುಣಬತ್ತಿಯ ದೀಪಗಳು ನಂದದೆ ಬಹಳ ದೂರದವರೆಗೆ ಹರಿದು ಹೋದರೆ ಆ ವರ್ಷ ತಮಗೆ ಮತ್ತು ತಮ್ಮ ಕುರಿಮಂದೆಗೆ ಯಾವ ರೋಗರುಜಿನ ಬಾರದೆ ಸಮೃದ್ಧಿಯಾಗುತ್ತದೆ ಎಂಬ ನಂಬಿಕೆ ಇಂದಿಗೂ ಬಲವಾಗಿ ಬೇರೂರಿದೆ. ಒಂದು ವೇಳೆ ಪರಡಗಿ ಮುಣಗಿ ಮುಂಬತ್ತಿ ದೀಪಗಳು ನಂದಿದರೆ ಕೆಡುಕು ಸಂಭವಿಸುತ್ತದೆಂದು ನಂಬುವರು. ಆ ವರ್ಷ ಅತಿವೃಷ್ಟಿ, ಅನಾವೃಷ್ಟಿ ಅಥವಾ ನೆರೆಹಾವಳಿಗಳು ಸಂಭವಿಸುವುದರ ಜೊತೆಗೆ ಕುರಿಗಳಿಗೆ ಹೆಚ್ಚು ರೋಗರುಜಿನಗಳು ಬಂದು ಆರ್ಥಿಕ ನಷ್ಟ ಸಂಭವಿಸುತ್ತವೆಂಬ ನಂಬಿಕೆ ಇದೆ.

ಗಂಗಾದೇವಿಗೆ ಪರಡಗಿ ಅರ್ಪಿಸಿದ ನಂತರ ಗುಡಾರದಿಂದ ತಂದ ಹೋಳಿಗೆ ಬುತ್ತಿಯನ್ನು ಕಾಲುವೆ ದಂಡೆಯ ಮೇಲೆ ಊಟ ಮಾಡುತ್ತಾರೆ. ಒಂದು ವೇಳೆ ಊಟ ಮಾಡಲಾಗಿಯೂ ಬುತ್ತಿ ಉಳಿದರೆ ಅದನ್ನು ಗುಡಾರದ ಸ್ಥಳಕ್ಕೆ ತರದೆ ಗಂಗಾದೇವಿಗೆ ಬಿಟ್ಟು ಬರುತ್ತಾರೆ. ಕಾರಣ ತಮಗೂ ಮತ್ತು ಕುರಿಗಳಿಗೂ ಬರುವ ರೋಗರುಜಿನಗಳನ್ನು ಗಂಗಾದೇವಿಗೆ ಅರ್ಪಿಸಿರುತ್ತಾರೆ. ಬುತ್ತಿಯನ್ನು ಹಿಂದಕ್ಕೆ ತಂದರೆ ಬುತ್ತಿಯ ಜೊತೆಗೆ ರೋಗಗಳು ಬಂದು, ಕುರಿಗಳನ್ನು ಕಾಡುತ್ತವೆಂಬ ಭಯವಿದೆ. ಗುಡಾರಕ್ಕೆ ಬಂದ ನಂತರ ಮಹಿಳೆಯರು ಊಟ ಮಾಡುತ್ತಾರೆ. ೭ ಗಂಟೆಯಿಂದ ೧೦ ಗಂಟೆಯವರೆಗೆ ಜರುಗುತ್ತದೆ.

**೪. ಕತ್ತೆ ಬಿಡೋದು**

ಭಾರತದ ಆರ್ಥಿಕತೆಯಲ್ಲಿ ವಿವಿಧ ಸಮುದಾಯಗಳು ತಮ್ಮ ಜೀವನೋಪಾಯಕ್ಕಾಗಿ ವಿವಿಧ ವೃತ್ತಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ವೃತ್ತಿಯನ್ನು ವಂಶಪರಂಪರೆಯಾಗಿ ಮುಂದುವರೆಸಿಕೊಂಡು ಬಂದ ಜನಸಮುದಾಯಗಳು ತಮ್ಮ ವೃತ್ತಿಯಲ್ಲಿ ನಿರೀಕ್ಷೆಗೆ ಮೀರಿ ಪ್ರತಿಫಲ ದೊರೆತಾಗ ಹರಕೆ ಅಥವಾ ಆಚರಣೆಗಳ ಮೂಲಕ ಆಪ್ತರೊಂದಿಗೆ ಹಾಗೂ ಬಂಧು ಬಳಗದವರೊಂದಿಗೆ

ಸಂಭ್ರಮ ಸಂತೋಷವನ್ನು ಹಂಚಿಕೊಳ್ಳುತ್ತಾರೆ. ಹಾಗೆಯೇ ಅಲೆಮಾರಿ ಕುರುಬರು ತಮ್ಮ ಕುಲ ಕಸುಬಿನಲ್ಲಿ ಸಾಧನೆಗೈದಾಗ ಕುರಿಗಳಲ್ಲಿ ಕತ್ತೆ ಬಿಡುವ ಸಂಪ್ರದಾಯದಮೂಲಕ ಸಂಭ್ರಮಿಸುವರು. ಒಂದು ಕುಟುಂಬದ ಕುರಿಗಳ ಸಂಖ್ಯೆ ಒಂದು ಸಾವಿರ ದಾಟಿದ ನಂತರ ಈ ಆಚರಣೆ ಮಾಡುತ್ತಾರೆ. ಇದು ಅನಾದಿ ಕಾಲದಿಂದಲೂ ನಡೆದುಕೊಂಡು ಬಂದ ಸಂಪ್ರದಾಯ.

ಕುರಿಗಳ ಸಂಖ್ಯೆ ಒಂದು ಸಾವಿರ ದಾಟಿನಂತರ ಆಪ್ತರೊಂದಿಗೆ ಹಾಗೂ ಬಂಧುಗಳೊಂದಿಗೆ ಚರ್ಚಿಸುವರು. ನಂತರ ಪುರೋಹಿತರಲ್ಲಿಗೆ ಹೋಗಿ ಶುಭದಿನ ಕೇಳಿ ಕತ್ತೆ ಬಿಡುವ ದಿನ ನಿಗದಿ ಮಾಡುತ್ತಾರೆ. ದಿನ ನಿಗದಿ ಮಾಡಿದ ಮೇಲೆ ಅಗಸರಲ್ಲಿಗೆ ಹೋಗಿ ಒಂದು ಅಥವಾ ಎರಡು ಸೊಲ ಮರಿ ಹಾಕಿದ ಹೆಣ್ಣು ಕತ್ತೆಯನ್ನು ಕೊಂಡು ಅವರಲ್ಲಿಯೇ ಬಿಟ್ಟು ಬರುತ್ತಾರೆ. ಆಚರಣೆ ಒಂದೆರಡು ದಿನ ಬಾಕಿ ಇರುವಂತೆ ಕುರಿ ಮಂದೆಯ ಸ್ಥಳಕ್ಕೆ ಕತ್ತೆಯನ್ನು ಹೊಡೆದುಕೊಂಡು ಬರುವರು. ಆಚರಣೆಯ ದಿನದಂದು ಕತ್ತೆಗೆ ಬಟ್ಟೆಯನ್ನು ಉಡಿಸಲು ಅಥವಾ ಶೃಂಗಾರಗೊಳಿಸಲು ಬಣ್ಣ ಬಣ್ಣದ ಹೊಸ ಬಟ್ಟೆಯನ್ನು ತಂದು ಹೊಲಿಸುವರು. ಅಂದು ಕತ್ತೆಯನ್ನು ಮದುವಣಿಗಿತ್ತಿಯ ರೂಪದಲ್ಲಿ ಶೃಂಗಾರಗೊಳಿಸಲಾಗುವುದು.

ಕತ್ತೆ ಬಿಡುವ ವಿಚಾರವನ್ನು ಮನೆದೇವರ ಪೂಜಾರಿಗೆ, ಡೊಳ್ಳಿನವರಿಗೆ, ಆಪ್ತರಿಗೆ ಹಾಗೂ ಬಂಧು-ಬಳಗದವರಿಗೆ ತಿಳಿಸಿ ಆಹ್ವಾನಿಸುವರು. ಕುಟುಂಬದ ಸದಸ್ಯರಿಗೂ, ಅಳಿಯಂದಿರಿಗೆ, ಹೆಣ್ಣುಮಕ್ಕಳಿಗೆ ಹಾಗೂ ಹತ್ತಿರದ ಸಂಬಂಧಿಗಳಿಗೆ ಬಟ್ಟೆ ತರುವರು. ಕೆಲವರು ಹೆಣ್ಣು ಮಕ್ಕಳಿಗೆ ಖುಷಿಗಾಗಿ ಬಂಗಾರದ ಒಡವೆಗಳನ್ನು ತಂದು ಹಾಕುತ್ತಾರೆ. ಒಟ್ಟಾರೆಯಾಗಿ ಈ ಆವರಣೆಯು ಮದುವೆಯಂತೆಯೇ ಜರುಗುತ್ತದೆ.

ಈ ಸಂಭ್ರಮವು ಕುರಿ ಮುಂದೆ ತಬ್ಬಿದ ಗುಡಾರದ ಸ್ಥಳದಲ್ಲಿ ಜರುಗುವುದು. ಆ ದಿನದ ಆಚರಣೆಯ ಸಿಹಿ ಊಟವಾಗಿ ಲಡ್ಡು ಮಾಡುತ್ತಾರೆ. ಆದ್ದರಿಂದ ಮುಂಜಾನೆಯಿಂದಲೇ ಸಿದ್ಧತೆಗಳು ಪ್ರಾರಂಭವಾಗುತ್ತವೆ. ಸಾಯಂಕಾಲದೊಳಗೆ ಬೀಗರು, ಬಂಧುಗಳು, ಆಪ್ತರು, ಪೂಜಾರಿ ಹಾಗೂ ಡೊಳ್ಳಿನವರು ಬಂದು ಸೇರುತ್ತಾರೆ. ಅಂದು ಮಾತ್ರ ಕುರಿಗಳು ಸಾಯಂಕಾಲದೊಳಗೆ ಗುಡಾರಕ್ಕೆ ಆಗಮಿಸುತ್ತವೆ.

ನಂತರ ಕತ್ತೆ ಬಿಡುವ ಕಾರ್ಯಕ್ರಮವು ಡೊಳ್ಳು ಬಡಿಯುವ ಮೂಲಕ ಆರಂಭವಾಗುತ್ತದೆ. ಆ ದಿನದ ಕೇಂದ್ರ ಬಿಂದು ಕತ್ತೆಯಾಗಿದ್ದರಿಂದ ಅದಕ್ಕೆ ಸ್ನಾನ ಮಾಡಿಸುವರು. ನಂತರ ಪೂಜಾರಿಯು ಕತ್ತೆಗೆ ಬಟ್ಟೆ ತೊಡಿಸಿ, ಭಂಡಾರ ಹಚ್ಚಿ ಕುಲದೇವರು ಮತ್ತು ಮನೆದೇವರು ಹೆಸರು ಹೇಳಿ ಕತ್ತೆ ಬಿಟ್ಟ ಕುಟುಂಬದ ಕುರಿಗಳ ಸಂಖ್ಯೆ ಸಾವಿರದಿಂದ, ಐದು ಸಾವಿರವಾಗಲಿ, ಐದು ಸಾವಿರದಿಂದ ಹತ್ತು ಸಾವಿರವಾಗಲಿ ಎಂದು ಏರು ಧ್ವನಿಯಲ್ಲಿ ದೇವರನ್ನು ಪ್ರಾರ್ಥಿಸುವರು. ಈ ಸಮುದಾಯದಲ್ಲಿ ಐದು ಸಾವಿರ ಕುರಿಗಳಾದರೆ ಹಂದಿ ಬಿಡುವ ಸಂಪ್ರದಾಯವಿದೆ. ಬಿಟ್ಟ ಕತ್ತೆಯನ್ನು ವಾರ ಅಥವಾ ಹತ್ತು ದಿನಗಳವರೆಗೆ ಕಟ್ಟಿ ಹಾಕಿ ಗುಡಾರದ ಸಮೀಪ ಮೇಯಿಸುತ್ತಾರೆ. ನಂತರ ದಿನಗಳಲ್ಲಿ ಕುರಿಗಳ ಜೊತೆ ಮೇಯಲು ಹೊಡೆದುಕೊಂಡು ಹೋಗುವರು. ಕ್ಷೇತ್ರಕಾರ್ಯದ ಅವಧಿಯಲ್ಲಿ ಚಿಕ್ಕೋಡಿ ತಾಲೂಕಿನ ಅಪ್ಪನಹಟ್ಟಿ ಗ್ರಾಮದ ಅಪ್ಪಣನವರ ಸಾವಿರ ಕುರಿಗಳಲ್ಲಿ ಕತ್ತೆ ಇದ್ದುದು ಕಂಡುಬಂದಿತ್ತು.

ಮನೆಯವರು ಬೇರೆ ದೇವರಾಗಿದ್ದರೆ ಅಲಗ ಹಾಯುವ ಕಾರ್ಯಕ್ರಮವಿರುತ್ತಿತ್ತು. ಇಷ್ಟೆಲ್ಲ ಆದ ಮೇಲೆ ಬಂಧುಗಳಿಗೆ ಬಟ್ಟೆ ಬರೆಗಳನ್ನು ಕೊಟ್ಟ ನಂತರ ಎಲ್ಲರನ್ನು ಸಾಲಾಗಿ ಕೂಡಿಸಿ ಊಟಕ್ಕೆ ಬಡಿಸುತ್ತಾರೆ. ಬಂದ ಪೂಜಾರಿಯನ್ನು ಬರಿಗೈಯಲ್ಲಿ ಕಳುಹಿಸಬಾರದೆಂದು ಉದ್ದೇಶದಿಂದ ಅವನಿಗೊಂಡು ಕುರಿಮರಿ ಕೊಟ್ಟು ಆಶೀರ್ವಾದ ಪಡೆದುಕೊಳ್ಳುತ್ತಾರೆ. ಒಟ್ಟಾರೆಯಾಗಿ ಅಲೆಮಾರಿ ಕುರುಬರು ಮದುವೆಯ ರೀತಿಯಲ್ಲಿ ಒಂದೂವರೆ ಲಕ್ಷದವರೆಗೆ ಹಣವನ್ನು ವ್ಯಯ ಮಾಡುತ್ತೆವೆಂದು ಅಪ್ಪನಹಟ್ಟಿ ಅಪ್ಪಣ್ಣ ಹೇಳುತ್ತಾರೆ. ಈ ಸಂಪ್ರದಾಯದಿಂದ ಇವರ ಕೌಟುಂಬಿಕ ಆದಾಯದ ಮೇಲೆ ಎಷ್ಟರ ಮಟ್ಟಿಗೆ ಪರಿಣಾಮ ಬೀರುತ್ತದೆಂಬುದನ್ನು ಗ್ರಹಿಸಬಹುದಾಗಿದೆ.

**ಕತ್ತೆ ಬಿಡುವ ವಿಚಾರವಾಗಿ ಅಲೆಮಾರಿ ಕುರುಬರ ಅಭಿಪ್ರಾಯಗಳು**

ಕುರಿಗಳ ಸಂಖ್ಯೆ ಒಂದು ಸಾವಿರ ದಾಟುವವರೆಗೆ ಬಿಡುವುದಿಲ್ಲ. ಆ ಸಂಖ್ಯೆಗಿಂತ ಕಡಿಮೆ ಇರುವಾಗಲೇ ವಯಸ್ಸಾದ, ರೋಗಗ್ರಸ್ಥ ಹಾಗೂ ಕೆಲವು ಗಟ್ಟಿಮುಟ್ಟಾದ ಕುರಿಗಳನ್ನು ಮಾರಾಟ ಮಾಡುತ್ತೇವೆಂದು ಸೌಂದಲಗ ಅಪ್ಪಣ್ಣನವರು ಹೇಳುತ್ತಾರೆ. ಒಂದು ಸಾವಿರ ಕುರಿ ಆದ

ನಂತರೆ ಕತ್ತೆ ಬಿಡಬೇಕು. ಕತ್ತೆ ಬಿಟ್ಟ ನಂತರ ಅದೃಷ್ಟ ಚೆನ್ನಾಗಿದ್ದರೆ ಮುಂದೆ ಒಳ್ಳೆಯದಾಗುತ್ತದೆ. ಇಲ್ಲವಾದರೆ ಕುರಿಗಳಿಗೆ ಮತ್ತು ನಮಗೆ ತೊಂದರೆಯಾಗುತ್ತದೆ. ಆದ್ದರಿಂದಲೇ ಕುರಿಗಳ ಸಂಖ್ಯೆ ೧೦೦೦ ದಾಟುವವರೆಗೆ ಬಿಡುವುದಿಲ್ಲವೆಂದು ಹೇಳುತ್ತಾರೆ ಮಾಹಿತಿದಾರ ಅಪ್ಪಣ್ಣ ಪೂಜಾರಿ ಸೌಂದಲಗ. ಈ ಹೇಳಿಕೆಯು ಅವರ ನಂಬಿಕೆ ಅಥವಾ ಕಲ್ಪನೆಯಿಂದ ಕೂಡಿದೆ. ಆದರೆ ಅವನ ನೈಜ ಬದುಕನ್ನು ಪ್ರಾಯೋಗಿಕವಾಗಿ ನೋಡಿದಾಗ ಹಗಲಿರುಳು ಕುರಿಗಳ ಜೊತೆಯಲ್ಲಿಯೇ ಕಾಲಕಳೆಯಬೇಕು. ವಾರಕ್ಕೊಮ್ಮೆ ಅಥವಾ ವಾರಕ್ಕೆರಡು ಸಲ ಕುರಿ ತಬ್ಬುವ ಹೊಲಗದ್ದೆಗಳನ್ನು ಬದಲಾಯಿಸಬೇಕು. ಮಳೆಗಾಲದಲ್ಲಿ ಅವುಗಳ ಸಂಗೋಪನೆ ಬಹಳ ಕಷ್ಟದಾಯವಾಗಿದೆ. ಇದು ಶ್ರಮ ಸಾಂದ್ರ ಉದ್ಯೋಗವಾದ್ದರಿಂದ ಅಷ್ಟೊಂದು ಕುರಿಗಳನ್ನು ಸಾಕಿ ಸಲಹಲು ಕುಟುಂಬದ ಸದಸ್ಯರನ್ನು ಹಾಗೂ ಆಳು ಮಕ್ಕಳನ್ನು ಸರಿದೂಗಿಸುವುದು. ರೋಗ-ರುಜಿನಗಳು ಬಂದಾಗ ಔಷಧೋಪಚಾರ ಮಾಡುವುದು ಇತ್ಯಾದಿ ಸಮಸ್ಯೆಗಳಿರುವುದರಿಂದಲೇ ಕುರಿಗಳ ಸಂಖ್ಯೆಯನ್ನು ಸಾವಿರಕ್ಕೇರಿಸುವುದಿಲ್ಲ ಎಂದು ಕಾಣಿಸುತ್ತದೆ.

ಬೆಳಗಾವಿ ಜಿಲ್ಲೆಯ ಅಲೆಮಾರಿ ಕುರುಬರ ಪ್ರಭಾವಿ ನಾಯಕರಾದ ಲಕ್ಷ್ಮಣರಾವ್ ಚಂಗಳಿ ಪ್ರಕಾರ ಸುಂದರವಾದ ದೊಡ್ಡ ಕಟ್ಟಡ, ಕಾರ್ಖಾನೆ, ಮನೆ, ಅಂಗಡಿ ಇತ್ಯಾದಿಗಳಲ್ಲಿ ಬೆದರು ಗೊಂಬೆಯನ್ನು ಇಳಿಬಿಟ್ಟಿರುತ್ತಾರೆ. ಹಾಗೆಯೇ ಸುಂದರವಾದ ಸ್ತ್ರೀ-ಪುರುಷರು ಸಭೆ ಸಮಾರಂಭಗಳಲ್ಲಿ ಭಾಗವಹಿಸುವಾಗ ಮುಖದ ಯಾವುದಾದರೂ ಒಂದು ಭಾಗದಲ್ಲಿ ಕಪ್ಪು ಚುಕ್ಕೆಯನ್ನಿಟ್ಟಿರುತ್ತಾರೆ. ಈ ರೀತಿಯಾಗಿ ಗೊಂಬೆ ಇಳಿಬಿಡುವುದು. ಮುಖದ ಮೇಲೆ ಕಪ್ಪು ಚುಕ್ಕೆ ಇಡುವುದರ ಉದ್ದೇಶ ಜನರ ದೃಷ್ಟಿಯು ಗೊಂಬೆ ಅಥವಾ ಕಪ್ಪು ಚುಕ್ಕೆಯ ಕಡೆಗೆ ಹರಿಯುತ್ತದೆ. ಇಲ್ಲವಾದರೆ ಆಯುಷ್ಯ ಕಡಿಮೆಯಾಗುತ್ತದೆ. ಹಾಗೆಯೇ ಬಹಳಷ್ಟು ಕುರಿಗಳಲ್ಲಿ ಒಂದು ಕತ್ತೆ ಇದ್ದರೆ ಅಥವಾ ಒಳ್ಳೆಯದರಲ್ಲಿ ಒಂದು ಕೆಟ್ಟದಿದ್ದರೂ ಕತ್ತೆ-ಕುರಿಗಳನ್ನು ನೋಡುಗರ ದೃಷ್ಟಿ ಕತ್ತೆಯ ಕಡೆ ಹರಿಯುತ್ತದೆ. ಇದರಿಂದ ಕುರಿಗಳಿಗೆ ರೋಗರುಜಿನಗಳು ಬಾರದೆ ಕಷ್ಟ-ನಷ್ಟವಾಗುವುದಿಲ್ಲ ಎಂದು ಹೇಳುತ್ತಾರೆ.

ಇನ್ನೂ ಕೆಲವರು ಕತ್ತೆ ಬಿಡೋದು ಮೊದಲಿನಿಂದಲೂ ನಡೆದು ಬಂದಿದ್ದು ಆ ಸಂಪ್ರದಾಯವನ್ನು ಯಾವ ಕಾರಣಕ್ಕೂ ಮುಂದುವರಿಯುವುದಿಲ್ಲ. ಕುರಿಗಳ ಸಂಖ್ಯೆ ಹೆಚ್ಚಾಗುವುದು ಅಥವಾ ಕಡಿಮೆಯಾಗುವುದು ನಮ್ಮ ಕೈಯಲ್ಲಿ ಏನಿದೆ, ಆ ಎಲ್ಲಾ ಆ ಬೀರದೇವರದು ಎಂದು ಹೇಳುತ್ತಾರೆ.

ಈ ಮೇಲಿನ ಅಭಿಪ್ರಾಯಗಳು ಭಿನ್ನವಾಗಿವೆ. ಆದರೂ ಅಲೆಮಾರಿ ಕುರುಬರು ೧೦೦೦ ಕುರಿಗಳಾಗುವವರೆಗೆ ಅವುಗಳ ಸಂಖ್ಯೆಯನ್ನು ಇಂದಿನ ಕಾಲದಲ್ಲಿ ಹೆಚ್ಚಿಸುವುದೆಂದರೆ ಸಾಮಾನ್ಯ ಕೆಲಸವಲ್ಲ. ಏಕೆಂದರೆ ಬರುವ ರೋಗ-ರುಜಿನಗಳ ಸಂಖ್ಯೆ ಹೆಚ್ಚಾಗಿವೆ.

**ಸಮಸ್ಯೆ ಮತ್ತು ಪರಿಹಾರೋಪಾಯಗಳು**

ಪ್ರಸ್ತುತ ದಿನಗಳಲ್ಲಿ ಬಹುತೇಕ ಜನರು ನಗರ, ಪಟ್ಟಣ ಹಾಗೂ ಗ್ರಾಮಗಳಲ್ಲಿ ವಾಸಿಸುತ್ತಿರುವರು. ಇವರಲ್ಲಿಯೇ ಹಲವು ಜನರಿಗೆ ಮೂಲ ಅವಶ್ಯಕತೆಗಳು ಮತ್ತು ಸಾಮಾಜಿಕ ಸೌಲಭ್ಯಗಳು ದೊರೆಯದಿರುವುದು ತಿಳಿದಿರುವ ಸಂಗತಿ. ಸದಾ ನಿಸರ್ಗದ ಮಡಿಲಲ್ಲಿಯೇ ಅಲೆದಾಡುತ್ತಾ ಜೀವನ ಸಾಗಿಸುವ ಅಲೆಮಾರಿ ಕುರುಬರು ಇನ್ನಷ್ಟು ಸಮಸ್ಯೆಗಳನ್ನು ಎದುರಿಸುತ್ತಿರುವರು. ಈ ಕುರಿತು ಯೋಚಿಸಿದಾಗ ಉತ್ತರ ಸುಲಭವಾಗಿ ದೊರೆಯದು. ಕಾರಣ ಅವರ ಜೀವನಶೈಲಿ ವಿಶಿಷ್ಟವಾಗಿದೆ. ಅಲ್ಲದೆ ಇತರೆ ಅಲೆಮಾರಿ ಸಮುದಾಯಗಳಿಗಿಂತ ಭಿನ್ನ ಸಮಸ್ಯೆಗಳಿವೆ. ಆದ್ದರಿಂದ ಅಲೆಮಾರಿ ಕುರುಬರ ಹಿತರಕ್ಷಣೆ ಹಾಗೂ ಕುರಿ ಸಂಗೋಪನವೃತ್ತಿ ಮುಂದುವರಿಸಿಕೊಂಡು ಹೋಗಲು ವಿಶೇಷವಾದ ಮತ್ತು ಪ್ರತ್ಯೇಕವಾದ ಕ್ರಮಗಳನ್ನು ಸರ್ಕಾರ ಕೈಗೊಳ್ಳುವುದು ಜರೂರಾಗಿದೆ.

**ಹುಲ್ಲುಗಾವಲು**

ಕೃಷಿ ಮತ್ತು ಕೈಗಾರಿಕೆಗಳ ಅಭಿವೃದ್ಧಿ ಹೆಸರಿನಲ್ಲಿ ಹುಲ್ಲುಗಾವಲು ಅರಣ್ಯ ಪ್ರದೇಶ ಕ್ಷೀಣಿಸುತ್ತಲಿದೆ. ಸ್ವಾತಂತ್ರ್ಯಾನಂತರ ಭಾರತ ಸರ್ಕಾರ ಹಲವಾರು ಅಭಿವೃದ್ಧಿ ಯೋಜನೆ ಹಾಗೂ ಘೋಷಣೆಗಳ ಮೂಲಕ ಪ್ರಗತಿಯತ್ತ ಸಾಗಿದೆ. ಅಂಥವುಗಳಲ್ಲಿ ಒಂದಾದ. Grow more food rather than grow more wool ಎಂಬುದು ಕಾನೂನುಬಾಹಿರವಾಗಿ ಹುಲ್ಲುಗಾವಲು ಪ್ರದೇಶವನ್ನು ಒತ್ತುವರಿ

ಮಾಡಿಕೊಳ್ಳಲು ಕೃಷಿಕರಿಗೆ ಅನುಕೂಲವಾಯಿತು. ಆದರೆ ಅದೇ ಘೋಷಣೆಯು ಕುರಿಗಾಯಿಗಳಿಗೆ ಮಾರಕವಾಗಿ ಪರಿಣಮಿಸಿದೆ. ಪ್ರಸ್ತುತ ದಿನಗಳಲ್ಲಿ ಹುಲ್ಲುಗಾವಲು ಪ್ರದೇಶ ಗೋಚರಿಸದ ಪರಿಸ್ಥಿತಿ ನಿರ್ಮಾವಾಗಿದೆ.

ಗಣಿಗಾರಿಕೆಯು ಬಂಡವಾಳದಾರರಿಗೆ ವರವಾದರೆ ಕುರಿಗಾಯಿಗಳಿಗೆ ಶಾಪವಾಗಿದೆ. ಮಳೆಗಾಲದಲ್ಲಿ ಅಂದರೆ ಆಗಸ್ಟ್ ನಿಂದ ನವ್ಹಂಬರ್ ತಿಂಗಳವರೆಗೆ ಕುರಿ-ಕುರುಬನ ಆಶ್ರಯತಾಣವಾಗಿದ್ದ ಗುಡ್ಡಗಾಡು ಗಣಿ ಪ್ರದೇಶ (ಬಳ್ಳಾರಿ ಜಿಲ್ಲೆ) ಇಂದು ಗಣಿಗಾರಿಕೆಯಿಂದ ಸಾವಿರಾರು ಎಕರೆ ಹುಲ್ಲುಗಾವಲು ಇಲ್ಲದಂತಾಗಿದೆ. ಗಣಿಗಾರಿಕೆಯು ಎರಡು ರೀತಿಯ ದುಷ್ಪರಿಣಾಮ ಬೀರಿದೆ. ಒಂದು ಮೇವಿನ ಪ್ರದೇಶ ಕಡಿಮೆಯಾದರೆ ಮತ್ತೊಂದು ಗಣಿಗಾರಿಕೆಯಿಂದ ಹರಿದು ಬಂದ ನೀರನ್ನು ಕುಡಿದ ಕುರಿಗಳು ಹಲವಾರು ರೋಗಗಳಿಗೆ ತುತ್ತಾಗುತ್ತಿವೆ. ಇನ್ನು ಅಲ್ಪಸ್ವಲ್ಪ ಹುಲ್ಲುಗಾವಲು ಪ್ರದೇಶವಿದ್ದರೂ ಗಣಿಮಾಲೀಕರು ತಂತಿ ಬೇಲಿಯನ್ನು ಹಾಕಿ ನಿರ್ಬಂಧಿಸಿದ್ದಾರೆ. ಸುಮಾರು ೧೦-೧೨ ವರ್ಷಗಳ ಹಿಂದೆ ಈ ಪ್ರದೇಶದಲ್ಲಿ ಉತ್ಕೃಷ್ಟವಾದ ಮೇವು, ಗಿಡಗಂಟೆಗಳ ತಪ್ಪಲು ದೊರೆಯುತ್ತಿತ್ತು. ಪ್ರಸ್ತುತ ದಿನಗಳಲ್ಲಿ ಗಣಿಗಾರಿಕೆಯು ಕುರಿಗಾಯಿಯನ್ನು ಆತಂಕದ ಸ್ಥಿತಿಯಲ್ಲಿ ಇಡುವುದರ ಜೊತೆಗೆ ಪ್ರಾಣಿ ಸಂತತಿಗಳ ಭವಿಷ್ಯ ಕುರಿತು ಚಿಂತಿಸುವಂತಾಗಿದೆ.

ಮೇವು ಅಥವಾ ಹುಲ್ಲುಗಾವಲಿನ ಸಮಸ್ಯೆ ನಿವಾರಿಸುವ ನಿಟ್ಟಿನಲ್ಲಿ ಸರ್ಕಾರ ಶಾಶ್ವತ ಪರಿಹಾರಗಳನ್ನು ಕಂಡುಕೊಳ್ಳುವುದು ಅನಿವಾರ್ಯವಾಗಿದೆ. ಇವರು ಅಲೆದಾಡುವ ಗ್ರಾಮಗಳಲ್ಲಿರುವ ಸರ್ಕಾರಿ ಒಡೆತನದ ಅರಣ್ಯ ಭೂಮಿ ರಾಜಸ್ವಭೂಮಿ, ಗೋಮಾಳ ಮತ್ತು ಇತರೆ ಭೂಮಿಯನ್ನು ಪ್ರತಿ ಹೋಬಳಿ ಮಟ್ಟದಲ್ಲಿ ಗುರುತಿಸುವುದು ಹಾಗೂ ಆ ಭೂಮಿಯನ್ನು ಅಲೆಮಾರಿ ಕುರುಬರ ಕುರಿಗಳಿಗೋಸ್ಕರ ಮೀಸಲಿಡುವುದು ಭೂಮಿಗೆ ಶಾಶ್ವತ ನೀರಾವರಿ ಸೌಲಭ್ಯಗಳನ್ನು ಒದಗಿಸುವುದು. ಆ ಭೂಮಿಯಲ್ಲಿ ಕುರಿ ಮೇಕೆಗಳಿಗೆ ಹಿತವೆನಿಸಿದ ಸುಧಾರಿತ ತಳಿಯ ಮೇವಿನ ಬೆಳೆಗಳನ್ನು ಬೆಳೆಯುವುದು. ಅದರ ನಿರ್ವಹಣೆಯನ್ನು ಅಲೆಮಾರಿ ಕುರುಬರ ಸಹಕಾರದೊಂದಿಗೆ ಸರ್ಕಾರ ಕೈಗೊಳ್ಳುವುದು.

**ಮಾರುಕಟ್ಟೆ**

ಉತ್ಪಾದನಾಕಾರನ ಉತ್ಪನ್ನವು ಉತ್ತಮ ಬೆಲೆ ಪಡೆಯಬೇಕಾದರೆ ಅದು ಮಾರುಕಟ್ಟೆ ಪ್ರವೇಶಿಸಿ ಮಾರಾಟವಾಗುವಂತಿರಬೇಕು. ಹಾಗಿದ್ದಾಗ ಮಾತ್ರ ಒಳ್ಳೆಯ ಬೆಲೆ ಬಂದು ಲಾಭಗಳಿಸಲು ಸಾಧ್ಯವಾಗುತ್ತದೆ. ಅಲೆಮಾರಿ ಕುರುಬನ ಬದುಕುಗಳು ಮಾರುಕಟ್ಟೆ ಪ್ರವೇಶಿಸದೆ ತಾನು ಅಲೆದಾಡುವ ಪ್ರದೇಶದಲ್ಲಿಯೇ ಮಾರಾಟ ಮಾಡುವುದರಿಂದ ಉತ್ತಮ ಬೆಲೆ ಪಡೆಯಲು ಸಾಧ್ಯವಾಗುತ್ತಿಲ್ಲ. ಅವನ್ನು ಮಾರುಕಟ್ಟೆಗೆ ಸಾಗಿಸುವುದು ಬಹಳ ಕಷ್ಟ. ಒಂದು ವೇಳೆ ಪ್ರಯತ್ನ ಪಟ್ಟು ಸಾಗಿಸಿದ ನಂತರ ಮಾರಾಟವಾಗದಿದ್ದ ಪಕ್ಷದಲ್ಲಿ ಮರಳಿ ಹಿಂದಕ್ಕೆ ಸಾಗಿಸುವುದು ಇನ್ನೂ ಕಷ್ಟಕರ. ಆದ್ದರಿಂದ ಅಲೆಮಾರಿ ಕುರುಬರು ತಾವು ಅಲೆದಾಡುವ ಪ್ರದೇಶದಲ್ಲಿಯೇ ಕಟುಕರು ಕುರಿ ವ್ಯಾಪಾರಸ್ಥರು ಕೇಳಿದ ಬೆಲೆಗೆ ಮಾರಾಟ ಮಾಡುತ್ತಾರೆ. ಮಾರಾಟ ಮಾಡುವಾಗ ಅವನ್ನು ತೂಕದ ಆಧಾರದಲ್ಲಿ ಮಾರಾಟ ಮಾಡದೆ ನಡುವನ್ನು ಹಿಚುಕಿ, ಕೈ ಇಟ್ಟು ಒಂದಕ್ಕೆ ಇಂತಿಷ್ಟು ಬೆಲೆ ನಿರ್ಧರಿಸಿ ಗುಂಪಾಗಿ ಮಾರಾಟ ಮಾಡಲಾಗುತ್ತದೆ. ಕುರಿಗಾರರಿಗೆ ಮಾರುಕಟ್ಟೆಯಲ್ಲಾಗುವ ಶೋಷಣೆ ಕುರಿತಂತೆ ಲಕ್ಷ್ಮಣರಾವ್ ಚಂಗಳೆ ಈ ರೀತಿ ಅಭಿಪ್ರಾಯಪಡುತ್ತಾರೆ. ವ್ಯಾಪಾರಸ್ಥರು ಕುರಿಮರಿಗಳನ್ನು ಕೊಳ್ಳುವಾಗ ಮರಿಗಳಿಗೆ, ವಯಸ್ಕ ಕುರಿಗಳಿಗೆ ಮತ್ತು ವಯಸ್ಸಾದ ಕುರಿಗಳಿಗೆ ವಿವಿಧ ಬೆಲೆ ನಿಗಧಿ ಮಾಡಿಕೊಳ್ಳುತ್ತಾರೆ. ಆದರೆ ತಾವು ಗ್ರಾಹಕರಿಗೆ ಮಾಂಸ ಮಾರಾಟ ಮಾಡುವಾಗ ಒಂದೇ ಬೆಲೆ ನಿಗದಿ ಮಾಡಿ ಮಾರಾಟ ಮಾಡುತ್ತಾರೆ. ಇದರಿಂದ ಉತ್ಪಾದಕ ಮತ್ತು ಅನುಭೋಗಿ ಇಬ್ಬರೂ ಶೋಷಣೆಗೆ ಒಳಗಾಗುತ್ತಿರುವುದನ್ನು ಕಾಣುತ್ತೇವೆ. ಇದಕ್ಕೆ ಉದಾಹರಣೆಯೆಂಬಂತೆ, ಹಕ್ಕಿಜ್ವರ (Bird flue) ಕೋಳಿಗಳಿಗೆ ಹರಡಿದೆ ಎಂಬ ವದಂತಿಯಿಂದ ಒಂದು ಕೆ.ಜಿ. ಕುರಿಗಳ ಮಾಂಸ ರೂ.೧೫೦ ರಿಂದ ೨೦ ರೂ. ಗಳಿಗೆ ಏರಿಕೆಯಾಗಿತ್ತು. ಆದರೆ ಕುರಿಮರಿಗಳ ಬೆಲೆಯಲ್ಲಿ ಮಾತ್ರ ಏರಿಕೆಯಾಗಿಲ್ಲ. ಇದರಿಂದ ಕುರಿ-ಮೇಕೆ ಮಾರುಕಟ್ಟೆಯು ಮಧ್ಯವರ್ತಿಗಳ ಬಿಗಿ ಹಿಡಿತದಲ್ಲಿದೆ ಎಂಬುದು ತಿಳಿದುಬರುತ್ತದೆ. ೨೦೦೩ ರ ಜಾನುವಾರು ಗಣತಿಯಂತೆ ಕರ್ನಾಟಕ ರಾಜ್ಯದಲ್ಲಿ ೭೨.೬೫ ಲಕ್ಷ ಕುರಿಗಳು ಹಾಗೂ ೪೪.೮೪ ಲಕ್ಷ ಮೇಕೆಗಳಿವೆ. ಇಷ್ಟೊಂದು ಸಂಖ್ಯೆಯಲ್ಲಿ ಕುರಿ-ಮೇಕೆಗಳಿದ್ದರೂ ಸಹ ಕ್ರಮಬದ್ಧ (Regulated) ಮಾರುಕಟ್ಟೆ ಇಲ್ಲದಿರುವುದು ಕುರಿಗಾರರ ಶೋಷನೀಯ ಸ್ಥಿತಿಯನ್ನು ವ್ಯಕ್ತಪಡಿಸುತ್ತದೆ.

ಭಾರತದಲ್ಲಿ ಅದರಲ್ಲೂ ವಿಶೇಷವಾಗಿ ಕರ್ನಾಟಕ ರಾಜ್ಯದಲ್ಲಿ ಅಗಾಧವಾದ ಕುರಿ-ಮೇಕೆಗಳ ಸಂಪತ್ತಿದೆ. ಇದು ರಾಜ್ಯದ ಆರ್ಥಿಕ ಅಭಿವೃದ್ಧಿಗೆ ಮೂಲ ಬಂಡವಾಳವಾಗಿದೆ. ಮಧ್ಯವರ್ತಿಗಳ ಬಂಡವಾಳದಾರರ ಹಿಡಿತದಿಂದ ತಪ್ಪಿಸಲು ಕೊತೆಗೆ ಕುರಿಗಾರರಿಗೆ ನ್ಯಾಯಯುತವಾದ ಬೆಲೆ ದೊರೆಯುವಂತೆ ಮಾಡಲು ಕೃಷಿ ಉತ್ಪನ್ನಗಳ ಮಾರುಕಟ್ಟೆ ಎಪಿಎಂಸಿ ಮಾದರಿಯಲ್ಲಿ ಕುರಿ-ಮೇಕೆ ಉತ್ಪನ್ನಗಳ ಮಾರುಕಟ್ಟೆ ಕಾಯಿದೆ ಜಾರಿಗೆ ಬರಬೇಕು. ಕುರಿಗಳ ನಡುವನ್ನು ಒತ್ತಿ ವ್ಯಾಪಾರ ಮಾಡುವುದನ್ನು ಬಿಟ್ಟು ತೂಕದ ಆಧಾರದಲ್ಲಿ ಬೆಲೆ ನಿರ್ಧಾರವಾಗಬೇಕು. ಅಲೆಮಾರಿ ಕುರುಬರು ಅಲೆದಾಡುವ ಪ್ರದೇಶಗಳಲ್ಲಿ ಉತ್ತಮ ಮಾರುಕಟ್ಟೆ ಸೌಲಭ್ಯ ಒದಗಿಸುವ ಸಲುವಾಗಿ ಹೊಸಪೇಟೆ, ದಾವಣಗೆರೆ, ಶಿವಮೊಗ್ಗ, ಬೆಳಗಾಂ ಮತ್ತು ಹಾವೇರಿಯಲ್ಲಿ ಸುಸಜ್ಜಿತ ಕಸಾಯಿಖಾನೆಗಳನ್ನು ಸ್ಥಾಪಿಸಬೇಕು.

**ನೈಸರ್ಗಿಕ ವಿಕೋಪಗಳು**

ಪ್ರಕೃತಿಯ ಮಡಿಲಲ್ಲಿ ಬದುಕುವ ಇವರು ಮತ್ತು ಇವರ ಬದುಕುಗಳು ಅನೇಕ ನೈಸರ್ಗಿಕ ವಿಕೋಪಗಳಿಗೆ ತುತ್ತಾಗುತ್ತವೆ. ಸಿಡಿಲು, ಆಲಿಕಲ್ಲು, ಅತಿವೃಷ್ಟಿ, ನೆರೆಹಾವಳಿ ಇತ್ಯಾದಿಗಳಿಂದ ಸಾವಿಗೀಡಾಗುವವರಲ್ಲಿ ಅಲೆಮಾರಿ ಕುರುಬರ ಸಂಖ್ಯೆಯೇ ಅಧಿಕವಾಗಿದೆ. ಸಾಕಷ್ಟು ಸಂಖ್ಯೆಯ ಕುರಿಗಳು ಸಿಡಿಲು ಮತ್ತು ಆಲಿಕಲ್ಲು ಮಳೆಗೆ ಬಲಿಯಾಗುತ್ತವೆ. ಅಷ್ಟೇ ಅಲ್ಲದೆ ದಿಡೀರ್ ಬಂದ ಪ್ರವಾಹದಲ್ಲಿ ಕೊಚ್ಚಿ ಹೋಗುವುದುಂಟು. ರಸ್ತೆ ಅಥವಾ ಒಳದಾರಿಗಳಲ್ಲಿ ಕುರಿಗಳನ್ನು ಸಾಗಿಸುವಾಗ ಯರ್‍ರಾಬಿರ್‍ರಿಯಾಗಿ ಓಡುವ ವಾಹನಗಳು ಡಿಕ್ಕಿ ಹೊಡೆದು ನೂರಾರು ಕುರಿಗಳು ಅಸು ನೀಗುತ್ತವೆ.

ಪ್ರಕೃತಿ ವಿಕೋಪಗಳಿಗೆ ತುತ್ತಾಗುವ ಕುರಿಗಳಿಗೆ ಹಾಗೂ ಅಲೆಮಾರಿ ಕುರುಬರಿಗೆ ರಾಜ್ಯಮಟ್ಟದ ಒಂದು ಸಮಗ್ರ ವಿಮಾ ಯೋಜನೆಯನ್ನು ಸಂಪೂರ್ಣವಾಗಿ ರಾಜ್ಯ ಸರ್ಕಾರದಿಂದಲೇ ಜಾರಿಗೊಳಿಸುವುದು ಜರೂರಾಗಿದೆ. ಏಕೆಂದರೆ ಕ್ಷಣಾರ್ಧದಲ್ಲಿ ತನ್ನದೆನ್ನುವ ಎಲ್ಲವನ್ನು ಕಳೆದುಕೊಂಡು ಬಿಡುತ್ತಾರೆ. ಇದಕ್ಕೆ ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ ಜಮ್ಮು ಮತ್ತು ಕಾಶ್ಮೀರ ರಾಜ್ಯದ ಮಾದರಿಯಲ್ಲಿ ಜನಶ್ರೀ ವಿಮಾ ಯೋಜನೆಯನ್ನು ಇತ್ತೀಚೆಗೆ ರಾಜ್ಯ ಸರ್ಕಾರ ಆರಂಭಿಸಿದೆ. ಈ ವಿಮಾ ಸೌಲಭ್ಯವನ್ನು ನೈಸರ್ಗಿಕ ವಿಕೋಪದ ವೇಳೆ ಮರಣ ಹೊಂದುವ ಕುರಿಮೇಕೆಗಳಿಗೆ ಮಾತ್ರ ನೀಡಲಾಗಿದೆ. ಆದರೆ ವರ್ಷಗಟ್ಟಲೇ ಮನೆ-ಮಠಗಳನ್ನು ತೊರೆದು ಪ್ರಾವನ್ನು ಕೈಯಲ್ಲಿ ಹಿಡಿದು ಕುರಿಗಳೊಡನೆ ಅಲೆಯುವ ಅಲೆಮಾರಿ ಕುರುಬರೂ ವಿಮಾ ಸೌಲಭ್ಯ ಪಡೆಯುವುದರಿಂದ ಅನರ್ಹಗೊಳಿಸಲಾಗಿದೆ. ಬಡತನ ರೇಖೆ ಎಂಬ ಮಾನದಂಡ ಅಳವಡಿಸಿದ್ದರಿಂದ ನೂರರಿಂದ ಐದು ನೂರು ಕುರಿಗಳನ್ನು ಹೊಂದಿರುವ ಅಲೆಮಾರಿ ಕುರುಬರು ಈ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಪ್ರತಿ ಕುರಿ ಕನಿಷ್ಠ ರೂ. ೧,೫೦೦ ಬೆಲೆ ಇರುವುದರಿಂದ ನೂರಿನ್ನೂರು ಕುರಿಗಳ ಒಡೆಯರ ಆಸ್ತಿಯ ಮೌಲ್ಯ ಲಕ್ಷ ರೂಪಾಯಿ ದಾಟುತ್ತದೆ. ಅಂತಹ ಅಲೆಮಾರಿ ಕುರುಬರು ಬಡತನ ರೇಖೆಗಿಂತ ಕೆಳಗಿನ ವರ್ಗಕ್ಕೆ ಸೇರದಿರುವದರಿಂದ ವಿಮಾ ಸೌಲಭ್ಯ ವ್ಯಾಪ್ತಿಗೆ ಬರುವುದಿಲ್ಲ. ಆದ್ದರಿಂದ ಎಲ್ಲಾ ಕುರಿಗಾರರ ದುರಂತಮಯ ಸನ್ನಿವೇಶಗಳನ್ನು ತಡೆಗಟ್ಟಲು ಕುರಿಗಾರರಿಗೆ ಜನಶ್ರೀ ವಿಮಾ ಮತ್ತು ಕುರಿಗಳಿಗೆ ಸಮಗ್ರ ವಿಮಾ ಯೋಜನೆಗಳು ಜಾರಿಗೊಳಿಸಬೇಕಾಗಿದೆ.

**ಕುರಿಗಳ ಭದ್ರತೆ**

ಪ್ರಕೃತಿ ಮಡಿಲಲ್ಲಿಯೇ ಕುರಿ ಸಂಗೋಪನೆ ಮಾಡುವುದರಿಂದ ಚಿರತೆ, ತೋಳ, ನರಿ, ಕತ್ತೆ ಕಿರುಬ ಮೊದಲಾದ ಕಾಡು ಪ್ರಾಣಿಗಳು, ಕುರಿಗಳನ್ನು ತಿನ್ನಲು ಬಂದು ಬಹಳ ತೊಂದರೆ ಕೊಡುತ್ತವೆ. ಕುರಿಗಳನ್ನು ರಕ್ಷಿಸಿಕೊಳ್ಳಲು ಇಡೀ ರಾತ್ರಿ ಬ್ಯಾಟರಿ ಹಿಡಿದು ನಾಯಿಗಳ ಸಹಾಯದಿಂದ ಕುರಿಗಳ ಸುತ್ತ ತಿರುಗುತ್ತಿರಬೇಕು. ಕೆಲವೊಮ್ಮೆ ಎಷ್ಟೇ ಎಚ್ಚರದಿಂದ ಇದ್ದರೂ ಅಪಾಯ ತಪ್ಪಿದ್ದಲ್ಲ. ಇವರು ಕಳ್ಳರ ಕಾಟದಿಂದ ಮುಕ್ತರಾಗಿಲ್ಲ. ಕೆಲವರು ಹಗಲುಗಳ್ಳತನ ಮಾಡಿದರೆ ಇನ್ನೂ ಕೆಲವರು ರಾತ್ರಿ ಕಳ್ಳತನ ಮಾಡುತ್ತಾರೆ. ಗುಡ್ಡಗಾಡು ಪ್ರದೇಶದಲ್ಲಿ ಕುರಿ ಮೇಯಿಸುವಾಗ ಹಗಲುಗಳ್ಳಲು ಹಿಂದೆ ಬಿದ್ದ ಅಥವಾ ಹಿಂಡು ಬಿಟ್ಟು ದೂರ ಮೇಯುತ್ತಿರುವ ಕುರಿಗಳನ್ನು ಹಿಡಿದು ಕಾಲುಕಟ್ಟಿ ನಂತರ ಅರಚದಂತೆ ನಾಲಿಗೆಗೆ ಪಿನ್ನು ಅಥವಾ ಮುಳ್ಳು ಹಾಕುತ್ತಾರೆ. ಕುರಿಗಳು ಗುಡಾರಕ್ಕೆ ಮರಳಿದ ನಂತರ ರಾತ್ರಿ ಸಾಗಿಸಿ ಮಾರಾಟ ಮಾಡುತ್ತಾರೆ. ರಾತ್ರಿ ಕಳ್ಳತನ ಮಾಡುವವರು ಕುರಿಗಾರರು ಸಂಪೂರ್ಣ ನಿದ್ರೆ ಹೋಗಿದ್ದನ್ನು ಗಮನಿಸಿ, ಕುರಿಗಳನ್ನು

ಹೊತ್ತುಕೊಂಡು ಹೋಗುತ್ತಾರೆ. ಇತ್ತೀಚಿನ ದಿನಗಳಲ್ಲಿ ಕುರಿ ಕಳವು ಹೆಗಲ ಮೇಲೆ ಹೊತ್ತು ಸಾಗಿಸುವುದರ ಬದಲು ಟೆಂಪೋ ಅಥವಾ ಲಾರಿಗಳಲ್ಲಿ ಹೇರಿಕೊಂಡು ಹೋಗುತ್ತಿದ್ದಾರೆ. ಉದಾಹರಣೆಗೆ ಅಕ್ಷಯ ತದಗಿ ಅಮವಾಸ್ಯೆಯ ದಿನ ಅಂದರೆ ೧೭.೪.೨೦೦೭ರ ದು ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಸೌಂದಲಗೆ ಗ್ರಾಮದ ಮಂಜುನಾಥ ದುರಗಣ್ಣನವರ್, ಕಡಕಲಾಟ ಗ್ರಾಮದ ಖಾನಪ್ಪ ಪೂಜಾರಿ ಮತ್ತು ನಾಯಿಂಗಳಾಜ್ ಗ್ರಾಮದ ದೇವರಸಿ ಖಾನಪ್ಪನವರು ಬಳ್ಳಾರಿ-ಸಿರುಗುಪ್ಪ ಮುಖ್ಯ ರಸ್ತೆಯಲ್ಲಿರುವ ಶ್ರೀನಿವಾಸ ಕ್ಯಾಂಪ್ ಹತ್ತಿರ ಕುರಿಗಳನ್ನು ತಬ್ಬಿದಾಗ ೪೫ ಕುರಿ ಕಳ್ಳತನವಾಗಿವೆ. ಇದು ಒಂದು ಉದಾಹರಣೆ. ಇಂತಹ ಕಳ್ಳತನಗಳು ವರ್ಷದಲ್ಲಿ ಎಷ್ಟು ಆಗುತ್ತವೆ ಎಂಬುದನ್ನು ಸ್ಪಷ್ಟವಾಗಿ ಹೇಳಲು ಸಾಧ್ಯವಿಲ್ಲ. ಪೊಲೀಸ್ ಇಲಾಖೆಗೆ ದೂರು ನೀಡಿದರೂ ಪ್ರಯೋಜನವಾಗುತ್ತಿಲ್ಲ. ಪ್ರಸ್ತುತ ದಿನಗಳಲ್ಲಿ ಕಳ್ಳತನ ಹೆಚ್ಚಾಗುತ್ತಿರುವುದರಿಂದ ಕೆಲವರು ವೃತ್ತಿಯಿಂದ ದೂರ ಸರಿಯುತ್ತಿದ್ದಾರೆ.

ಪ್ರಕೃತಿ ಮಡಿಲಲ್ಲಿ ಜೀವಿಸುತ್ತಿರುವದರಿಂದ ಅವರಿಗೆ ಮತ್ತು ಕುರಿಗಳಿಗೆ, ವನ್ಯ ಮೃಗಗಳು ಹಾಗೂ ಆಗಂತುಕರಿಂದ ಜೀವ ಭಯವಿದೆ. ಆದ್ದರಿಂದ ಆತ್ಮರಕ್ಷಣೆಗಾಗಿ ಬಂದೂಕು ಹೊಂದುವ ಪರವಾನಗಿಯನ್ನು ಸೂಕ್ತ ಪ್ರಾಧಿಕಾರದಿಂದ ನೀಡುವುದು. ಸದರಿ ಬಂದೂಕನ್ನು ಯಾವುದೇ ಜಿಲ್ಲೆಗಳ ಗಡಿ ನಿರ್ಬಂಧವಿಲ್ಲದೆ ಇಡೀ ರಾಜ್ಯಾದ್ಯಂತ ತೆಗೆದುಕೊಂಡು ಹೋಗಲು ಪರವಾನಗಿ ನೀಡುವುದು ಅಗತ್ಯತೆ ಇದೆ.

**ಮೂಲಸೌಕರ್ಯ**

ಮಾನವನ ಬದುಕು ಸುಲಲಿತವಾಗಿ ನಡೆದುಕೊಂಡು ಹೋಗಲು ಮೂಲಸೌಕರ್ಯಗಳು ಬೇಕು. ಅವುಗಳಲ್ಲಿ ಸಾರಿಕೆ-ಸಂಪರ್ಕ, ಕುಡಿಯುವ ನೀರು, ಶಿಕ್ಷಣ, ಆರೋಗ್ಯ, ವಸತಿ ಇತ್ಯಾದಿ ಮುಖ್ಯವಾದವು. ಇವರು ಅಲೆದಾಡುವ ದಾರಿ ದುರ್ಗಮವಾದದು. ಅದು ಬೆಟ್ಟ-ಗುಡ್ಡ, ಕಲ್ಲು-ಮುಳ್ಳು, ತೆಗ್ಗು-ದಿನ್ನೆ, ನೀರು-ಕೆಸರುಗಳಿಂದ ಕೂಡಿರುತ್ತದೆ. ಇಂತಹ ಮಾರ್ಗಗಳ ಮೂಲಕವೇ ತಮ್ಮ ಕೌಟುಂಬಿಕ ಸಾಮಾನುಗಳನ್ನು ಕುದುರೆಗಳ ಮೇಲೆ ಹೇರಿಕೊಂಡು, ಇನ್ನೂ ಕೆಲವನ್ನೂ ತಲೆಯ ಮೇಲೆ ಹೊತ್ತುಕೊಂಡು ಸಾಗಿಸಬೇಕು. ಹೀಗೆ ಸಾಮಾನುಗಳನ್ನು ಸಾಗಿಸುವಾಗ ಅನುಭವಿಸುವ ಯಾತನೆಗಳನ್ನು ಶಬ್ದಗಳಲ್ಲಿ ಹೇಳಲು ಅಸಾಧ್ಯವೆನಿಸುತ್ತದೆ.

ಸಂತೋಷ ಅಥವಾ ದುಃಖದ ವಿಷಯವನ್ನು ಮುಟ್ಟಿಸಬೇಕು. ಅಥವಾ ಭೇಟಿಯಾಗಿ ತಿಳಿಸಬೇಕೆಂದರೆ ಪಡಬಾರದ ರಷ್ಟಪಡುತ್ತಾರೆ. ಯಾವ ದಿನ, ಯಾವ ಸ್ಥಳದಲ್ಲಿ ಕುರಿ ತಬ್ಬುತ್ತಾರೆ ಮತ್ತು ಯಾವ ದಿನ ಎಲ್ಲಿಗೆ ಗುಡಾರ ಬದಲಾಯಿಸುತ್ತಾರೆಂಬುದು ಯಾರಿಗೂ ಗೊತ್ತಾಗಿರುವುದಿಲ್ಲ. ಅದು ಆ ದಿನದಲ್ಲಿ ಬದಲಾಯಿಸುವವರಿಗೆ ಮಾತ್ರ ತಿಳಿದಿರುತ್ತದೆ. ಕೆಲವೊಂದು ಸಲ ಸ್ವಗ್ರಾಮದಿಂದ ಕಾಣಲು ಬಂದವರು ವಾರಗಟ್ಟಲೇ ಹುಡುಕಿ ಹಿಂತಿರುಗಿದ ಸಂದರ್ಭಗಳಿವೆ. ಆದರೆ ಇತ್ತೀಚೆಗೆ ಮೊಬೈಲ್ ಮತ್ತು ದೂರವಾಣಿ ಸೇವೆಗಳು ಅನುಕೂಲ ಸಿಂಧು ಮಾಧ್ಯಮವಾಗಿ ಲಭಿಸಿವೆ.

ಶುದ್ಧ ಕುಡಿಯುವ ನೀರು ಕನಸಿನ ಮಾತು. ಮಳೆಯಿಂದ ಅಥವಾ ಬಸಿಯುವಿಕೆ ಮೂಲಕ ಹರಿದು ಬಂದು ಕುಣಿ, ತಗ್ಗು, ಕೆರೆ, ಹಳ್ಳ ಇತ್ಯಾದಿ ಸ್ಥಳಗಳಲ್ಲಿ ನಿಂತ ನೀರನ್ನೇ ಕುಡಿಯಲು ಹಾಗೂ ದಿನಬಳಕೆ ಮಾಡಲು ಬಳಸುತ್ತಾರೆ. ಕೆಲವೊಮ್ಮೆ ನೀರಾವರಿ ಪ್ರದೇಶದಲ್ಲಿ ಸಿಂಪಡಿಸಿದ ಕ್ರಿಮಿನಾಶಕಗಳ ಮಿಶ್ರಣವುಳ್ಳ ನೀರಿನಲ್ಲಿ ಬೆರೆತು ಅಥವಾ ಸಾಂಕ್ರಾಮಿಕ ರೋಗಾಣುಗಳು ಸೇರಿದ ನೀರನ್ನು ಕುಡಿದ ಕುರಿಗಳನ್ನು ಸಾವನ್ನಪ್ಪಿದ ಸಂಬರ್ಧಗಳುಂಟು. ಕುರಿಗಾರರು ವಾಂತಿ-ಭೇದಿಯಂತಹ ರೋಗಗಳಿಗೆ ತುತ್ತಾಗಿರುವ ಉದಾಹರಣೆಗಳಿರುವುದು ತಿಳಿದುಬಂದಿದೆ. ಕುರಿ-ಮೇಕೆಗಳನ್ನು ಕಾಡುತ್ತಿರುವ ದೊಡ್ಡ ರೋಗ ಪಿ.ಪಿ.ಆರ್., ಮೈಲಿಬೇನಿ, ನೀಲಿನಾಲಿಗೆ, ಸಿಡುಬು, ಕಾಲು-ಬಾಯಿಬೇನೆ ಇತ್ಯಾದಿ ರೋಗಗಳ ನಿಯಂತ್ರಣ ಮಾಡುವ ಸಲುವಾಗಿ ಪಲ್ಸ್‌ಪೋಲಿಯೋ ಅಭಿಯಾನ ಮಾದರಿಯಂತೆ ರೋಗ ನಿರೋಧಕ ಲಸಿಕೆ ಹಾಕುವ ಆಂದೋಲನವನ್ನು ಸರ್ಕಾರ ಕೈಗೊಳ್ಳಲೇಬೇಕು. ರಾಜ್ಯದಲ್ಲಿರುವ ಸಮಸ್ತ ಕುರಿ-ಮೇಕೆಗಳ ಆರೋಗ್ಯ ರಕ್ಷಣೆಗೆ ಸರ್ಕಾರ ಜಂತುನಾಶಕ ಔಷಧಗಳನ್ನು ಉಚಿತವಾಗಿ ಪೂರೈಕೆ ಮಾಡಬೇಕು. ಕುರಿ ಮತ್ತು ಕುರುಬನ ನೀರಿನ ಬವಣೆಯನ್ನು ಹೋಗಲಾಡಿಸಲು ಅವರು ಅಲೆದಾಡುವ ಮಾರ್ಗಗಳಲ್ಲಿ ಕೊಳವೆ ಬಾವಿಗಳನ್ನು ಕೊರೆದು, ನೀರಿನ ತೊಟ್ಟಿಗಳನ್ನು ನಿರ್ಮಿಸಿ, ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಬೇಕು. ಇದರಿಂದ ಕುರಿಗಳಿಗೆ ಹಾಗೂ ಕುರಿಗಾರರಿಗೆ ಕಾಣಿಸಿಕೊಳ್ಳುವ ರೋಗ-ರುಜಿನಗಳನ್ನು ಕಡಿಮೆಗೊಳಿಸಬಹುದು.

ಔಪಚಾರಿಕ ಶಿಕ್ಷಣ ಜಾರಿಗೆ ಬಂದ ಮೇಲೆ ರಾಜ್ಯದ ವಿವಿಧ ಸಮುದಾಯಗಳು ಅವರವರ ಸಾಮಾಜಿಕ-ಆರ್ಥಿಕ ಸ್ಥಿತಿಗಳಿಗೆ ತಕ್ಕಂತೆ ಶಿಕ್ಷಣ ಪಡೆದು ವಿದ್ಯಾವಂತರಾಗತೊಡಗಿದರು. ಆದರೆ ಇವರಿಗೆ ಔಪಚಾರಿಕ ಶಿಕ್ಷಣದ ಅವಕಾಶವೇ ಸಿಗಲಿಲ್ಲ. ಅತಿ ಹಿಂದುಳಿದಿರುವಿಕೆ ಮತ್ತು ತಮ್ಮ ಜೀವನೋಪಾಯಕ್ಕಾಗಿ ಕುಟುಂಬ ಕಟ್ಟಿಕೊಂಡು ಕುರಿಗಳ ಜೊತೆ ವರ್ಷವಿಡೀ ಅಲೆದಾಡುತ್ತಿರುತ್ತಾರೆ. ಇದು ಅವರ ಮಕ್ಕಳನ್ನು ಶಾಲೆಗೆ ಕಳುಹಿಸಲು ಅಡ್ಡಿ ಉಂಟುಮಾಡಿದೆ. ಜೊತೆಗೆ ಕುರಿ ಸಂಗೋಪನೆ ಶ್ರಮ ಸಾಂದ್ರ ಉದ್ಯೋಗವಾದ್ದರಿಂದ ಕುಟುಂಬದ ಎಲ್ಲ ಸದಸ್ಯರು ಅಂದರೆ ಚಿಕ್ಕವರಿದ್ದಾಗ ಮರಿಗಳ ಸಂಗೋಪನೆ, ಹತ್ತು-ಹದಿನೈದು ವರ್ಷಗಳಾದ ನಂತರ ಕುರಿ ಕಾಯಲು ಕಳುಹಿಸುತ್ತಾರೆ. ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆ ಹಾಗೂ ರಾಜ್ಯ ಸರ್ಕಾರಗಳು ೧೪ ವರ್ಷಗಳವರೆಗಿನ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಘೋಷಣೆಗಳು ಅಲೆಮಾರಿ ಕುರುಬರ ಮಕ್ಕಳ ವ್ಯಾಪ್ತಿಯವರೆಗೆ ಸಾಗಿದರೆ ಅದಕ್ಕೊಂದು ಅರ್ಥ ಸಿಕ್ಕಂತಾಗುತ್ತದೆ. ಆದ್ದರಿಂದ ಬಿಹಾರ ಸರ್ಕಾರ ಮಾದರಿಯಲ್ಲಿ ಎಲ್ಲಿ ವಲಸೆಯೋ ಅಲ್ಲಿ ಶಾಲೆ ಎಂಬ ಯೋಜನೆಯನ್ನು ಜಾರಿಗೊಳಿಸುವುದು ಅಗತ್ಯವಾಗಿದೆ. ಈ ಯೋಜನೆಯಡಿ ಕ್ಷೇತ್ರ ಶಿಕ್ಷಣ ಸಂಪನ್ಮೂಲ ಕೇಂದ್ರಗಳಿಂದ ಅಲೆಮಾರಿ ಕುರುಬರ ಮಕ್ಕಳಿಗೆ ವರ್ಗಾವಣೆ ಪತ್ರವನ್ನು ವಿತರಿಸುವುದು. ವಲಸೆಯ ಸಮಯದಲ್ಲಿ ನೆಲಸಬಹುದಾದ ಗುಡಾರ ಹೂಡಿದ ಗ್ರಾಮದ ಭೂಪ್ರದೇಶಕ್ಕೆ ವಲಸೆ ಹೋಗುವ ಮುನ್ನ ವರ್ಗಾವಣೆ ಪತ್ರದಲ್ಲಿ ದಾಖಲಿಸಿ, ಮುಂದಿನ ಶಾಲೆಗೆ ವರ್ಗಾಯಿಸುವ ಪದ್ಧತಿಯನ್ನು ಅನುಸರಿಸುವುದು. ಹಾಗೆಯೇ ಮಕ್ಕಳನ್ನು ಕುರಿತಬ್ಬುವ ಸ್ಥಳದಿಂದ ಬೆಳಿಗ್ಗೆ ಶಾಲೆಗೆ ಕರೆತರಲುಮತ ತು ಸಂಜೆ ಕುರಿತಬ್ಬಿದ ಸ್ಥಳಕ್ಕೆ ಬಿಟ್ಟು ಬರಲು ವಾಹನದ ವ್ಯವಸ್ಥೆ ಮಾಡಬೇಕು.

ಕರ್ನಾಟಕ ರಾಜ್ಯದಲ್ಲಿ ಕುರಿ ಸಾಕಾಣಿಕೆಗೆ ವಿಪುಲ ಅವಕಾಶಗಳಿವೆ. ಇವರು ಹೆಚ್ಚಾಗಿ ಅಲೆದಾಡುವ ಜಿಲ್ಲಾ ಕೇಂದ್ರಗಳ ಸಮೀಪ ಕುರಿ ಸಾಕಾಣಿಕೆ ಫಾರ್ಮಗಳನ್ನು ಸ್ಥಾಪಿಸಬೇಕು. ಈಗಾಗಲೇ ದೇಶದಲ್ಲಿಯೇ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ 'ಜೈಪುರದ ಕುರಿ ಸಾಕಾಣಿಕೆ ಸಂಶೋಧನಾ ಕೇಂದ್ರ'ದ ಮಾದರಿಯಲ್ಲಿಯೇ ಕರ್ನಾಟಕ ರಾಜ್ಯದ ಹಾವೇರಿ ಅಥವಾ ದಾವಣಗೆರೆ ಜಿಲ್ಲೆಯಲ್ಲಿ ಸ್ಥಾಪನೆಯಾಗಬೇಕು.

**ಉಪಸಂಹಾರ**

ಸಮಾಜ ಎಂಬುದು ವಿಶಾಲತೆಯ ದೃಷ್ಟಿಯಿಂದ ಕೈಗೆಟುಕದಿರುವ ವ್ಯಾಪ್ತಿಯನ್ನು ಹೊಂದಿದೆ. ವಿಜ್ಞಾನವು ನಿಗೂಢ ವಿಸ್ಮಯಗಳ ತವರೂರಾಗಿದೆ. ಈ ಎರಡೂ ವಿಷಯಗಳು ಮನುಷ್ಯನನ್ನು ಹೊರತುಪಡಿಸಿ ನಿಲ್ಲುವುದಿಲ್ಲ. ಮಾನವನ ಬೌದ್ಧಿಕ ಶಕ್ತಿಯ ಫಲವಾಗಿ ಜಗತ್ತಿನಲ್ಲಿ ಎಷ್ಟೇ ಹೊಸ ಹೊಸ ಆವಿಷ್ಕಾರಗಳನ್ನು ಮಾಡಿದರೂ ಕೆಲವೊಂದು ಸಮುದಾಯಗಳ ಮೂಲ ವೃತ್ತಿಯನ್ನು ಬದಲಾಯಿಸಿಕೊಳ್ಳಲು ಸಾಧ್ಯವಿಲ್ಲ. ಅಲೆಮಾರಿ ಕುರುಬರು ಕುಲಮೂಲ ವೃತ್ತಿಯನ್ನು ಬದಲಾಯಿಸಿಕೊಳ್ಳದ, ಬದಲಾಯಿಸಿಕೊಂಡರೆ ಜೀವನಕ್ಕೆ ಬೇರೆ ಗತಿ ಇಲ್ಲದ ಸ್ಥಿತಿಯಲ್ಲಿರುವರು. ನೈಸರ್ಗಿಕ ವಿಜ್ಞಾನದೊಂದಿಗೆ ಹಾಗೂ ಸಮಾಜದ ವಿವಿಧ ಆಚರಣೆಗಳಿಗೆ ಹೊಂದಿಕೊಂಡು ಇಂದಿಗೂ ತಾವು ಬದುಕುವ ಪ್ರಾಣಿ ಸಂತತಿಗಳನ್ನು ಅಭಿವೃದ್ಧಿ ಪಡಿಸುತ್ತಾ ಮಾನವನ ಆಹಾರ ಸರಪಳಿಗೆ ಕೊಂಡಿಯಾಗಿದ್ದಾರೆ.ಅವ ರ ನಿತ್ಯದಬ ದುಕು, ಕೌಟುಂಬಿಕ ಪರಿಸರ, ದುಡಿಮೆಯ ಛಲ, ಸಾಧು ಪ್ರಾಣಿಗಳಿಗೆ ಕುರಿ-ಮೇಕೆ ವರವಾದರೆ, ಮನುಷ್ಯ ನಿರ್ಮಿತ ಮೂಲ ಸೌಕರ್ಯಗಳಿಂದ ದೂರವಾಗಿದ್ದಾರೆ.

ಜನವಸತಿ ಪ್ರದೇಶಗಳಲ್ಲಿ ಜೀವಿಸುವ ಅಕ್ಷರಸ್ಥ, ವಿದ್ಯಾವಂತ, ಜ್ಞಾನವಂತ, ಮನುಷ್ಯರ ಸೌಲಭ್ಯಗಳಿಲ್ಲವೆಂದು ಗೋಗರೆಯುವರು, ಯಾವುದೇ ನಿರ್ದಿಷ್ಟ ಸ್ಥಳದಲ್ಲಿ ವಾಸಿಸದೆ, ಅಕ್ಷರಲೋಕ ಕಾಣದ ಇವರ ಬದುಕಿನ ಸಮಸ್ತೆಗಳು ಅನಂತವಾಗಿವೆ. ಈ ಸಮಸ್ಯೆಗಳಿಗೆ ಸೂಚಿಸುವ ಪರಿಹಾರೋಪಾಯಗಳು ಕೂಡ ಅಷ್ಟೇ ಜಟಿಲವಾಗಿವೆ. ಆದರೂ ಸಹ ಸಮಸ್ಯೆಗಳ ನಡುವೆಯೂ ಪರರನ್ನು ಬಯಸದೆ, ವೃತ್ತಿ ಜೀವನವನ್ನು ಬಿಡದೆ, ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಉಳಿಸಿಕೊಂಡು ಪರಿಸರ ಸ್ನೇಹಿಯಾಗಿದ್ದಾರೆ.

**ಆಧಾರ ಗ್ರಂಥಗಳು**


೧. ಶಿವಾನಂದ ಗುಬ್ಬಣ್ಣವರ, ಕರ್ನಾಟಕ ಕುರುಬರು, ಅಕ್ಷರ ಪ್ರಕಾಶನ, ಧಾರವಾಡ, ೧೯೯೩.

೨. ಹನುಮಂತಯ್ಯ ವ್ಹಿ.ಆರ್. (ಸಂ) ಪ್ರೊ. ಸುಧಾಕರ, ಕುರುಬರ ಚರಿತ್ರೆ, ಪ್ರತಿಭೆ ಪ್ರಕಾಶನ, ಮೈಸೂರು, ೧೯೯೬.

೩. ಮೈತ್ರಿ ಕೆ.ಎಂ., ಬುಡಕಟ್ಟು ಕುಲಕಸುಬುಗಳು, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ, ೨೦೦೨.

೪. ಶಂ. ಬಾ. ಜೋಶಿ, ಕರ್ನಾಟಕ ವೀರಕ್ಷತ್ರಿಯರು, ಮನೋಹರ ಘಾಣೇಕರ ಪ್ರಕಾಶಕರು, ಸಮಾಜ ಬುಕ್ ಡಿಪೋ, ಧಾರವಾಡ.

೫. ಡಾ. ಗೋವಿಂದಯ್ಯ, ಎಂ.ಜಿ.ಡಾ. ಜಗನ್ನಾಥ, ಗ್ರಾಮೀಣ ಅಭಿವೃದ್ಧಿಯಲ್ಲಿ ಕುರಿಸಾಕಾಣಿಕೆ ಮಹತ್ವ, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು, ೨೦೦೫.

೬. ಬಸವರಾಜಪ್ಪ ಎಸ್., ಜೈವಿಕ ಗೊಬ್ಬರಗಳು, ಪ್ರಸಾರಾಂಗ ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ ೨೦೦೧.

**ಪತ್ರಿಕಾ ವರದಿಗಳು**

೧. ತುಂಗಭದ್ರಾ ಬಲದಂಡೆಯ ಅಕ್ಷರಜ್ಞಾನ ವಂಚಿತ ಕುರಿಗಾರ ಮಕ್ಕಳು, ಪ್ರಾದೇಶಿಕ ಸುದ್ದಿ ಪ್ರಜಾವಾಣಿ, ೧.೩.೨೦೦೫.

೨. ಕುರಿಗಾರರ ರಕ್ಷಣೆಗೆ ವಿಮಾ ಯೋಜನೆ, ಪ್ರಾದೇಶಿಕ ಸುದ್ದಿ, ಪ್ರಜಾವಾಣಿ ೧೧.೦೭.೨೦೦೫.

೩. ಕುರಿಗಾರರು (ಕೊಪ್ಪಳ, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಯ ನೋಡಿ)

೧. ಜಾನಪದ ಕ್ಷೇತ್ರದಲ್ಲಿ ಕುರಿಗಾರರ ಛಾಪು, ಲೇಖನ: ರುದ್ರಪ್ಪ ಭಂಡಾರಿ

೨. ಸಾಮಾಜಿಕ ಸೌಲಭ್ಯ ವಂಚಿತ ಅಲೆಮಾರಿ ಬದುಕು ಲೇಖನ: ಕೆ.ಎಂ. ಮಂಜುನಾಥ, ವಿಜಯ ಕರ್ನಾಟಕ, ೭.೧೧.೨೦೦೫, ಸಂಪುಟ ೧೨.

೪. ನಡೆದಾಡುವ ಬ್ಯಾಂಕುಗಳನ್ನು ಕಾಡುವ ರೋಗ, ಲೇ: ಡಾ. ಬುಳೂರು ಆರ್. ಹರೀಶ್, ಪ್ರಜಾವಾಣಿ, ಕೃಷಿ ಸಾಪ್ರಾಹಿತ, ೮.೨.೨೦೦೬, ಪುಟ ೪.

೫. ವಿಮೆ ಬಡ ಕುರಿಗಾರರನ್ನೇ ಮರೆತ ಜನಶ್ರೀ, ಲೇಖನ: ಸಿದ್ದಯ್ಯ ಹಿರೇಮಠ, ಪ್ರಜಾವಾಣಿ, ಕರ್ನಾಟಕ ದರ್ಶನ, ಪುರವಣಿ ೨೪.೧.೨೦೦೭, ಪುಟ ೧.

**Reference**

1. Banerjee G.C. A Text Book of Animal husbandry, 1969, oxford and IBH Publishing Co-Pvt. Ltd., Calcutta.

2. Basathakur (ARS) Sheep Research, Production & Marketing I India 1998-Inter-Inter-India Publication, New Delhi.

3. Bharara L.P. Socio economic aspects of Live Stock migration and Pastrol Nomedism in drought prone areas of Rajasthan in livestack economy of India. Oxford and IBH Publishing-Bombay 1989.

4. Devendra C. and G.B. Mclerely, Goat, and Sheep production I the Topics 1982, International Trepical Agricultureal series, New Delhi.

5. Pragya Sharma, Tribal society in a Flux (Raika) 2005, Panchasheela prakashan, Jaipur.

**ಮಾಹಿತಿದಾರರು**

೧. ಅಪ್ಪಣ್ಣ ಕಾಮಣ್ಣ ಪೂಜಾರಿ, ವಯಸ್ಸು ೫೨, ಸೌಂದಲಗ, ಚಿಕ್ಕೋಡಿ ತಾ., ಬೆಳಗಾವಿ ಜಿಲ್ಲೆ, ಮೊ. ೯೮೪೫೪ ೩೦೧೫೧.

೨. ಅಣ್ಣಪ್ಪ ಸತ್ಯಪ್ಪ ಪೂಜಾರಿ, ವಯಸ್ಸು ೫೫, ಅಪ್ಪನಹಟ್ಟಿ ಚಿಕ್ಕೋಡಿ ತಾ. ಬೆಳಗಾವಿ ಜಿಲ್ಲೆ, ಮೊ. ೯೪೪೮೭ ೩೨೯೩೭.

೩. ಮಂಜುನಾಥ, ಭೀಮ ದುರಗಣ್ಣನವರ್, ವಯಸ್ಸು ೩೨, ಸೌಂದಲಗ, ಚಿಕ್ಕೋಡಿ ತಾ. ಬೆಳಗಾವಿ ಜಿಲ್ಲೆ.

೪. ಲಕ್ಷ್ಮಣರಾವ್ ಚಿಂಗಳೆ, ವಯಸ್ಸು ೫೫, ಮಾಜಿ ಅಧ್ಯಕ್ಷರು ಕರ್ನಾಟಕ ಕುರುಬರ ಸಂಘ, ಬೆಂಗಳೂರು, ಸಾ.ನಿಪ್ಪಾಣಿ, ತಾ. ಚಿಕ್ಕೋಡಿ. ಬೆಳಗಾವಿ ಜಿಲ್ಲೆ, ಮೊ.೯೪೪೮೧ ೨೮೪೦೯.

೫. ಗಾದಿಲಿಂಗನಗೌಡ, ಸಹಾಯಕ ನಿರ್ದೇಶಕರು, ಪಶುವೈದ್ಯಕೀಯ ಆಸ್ಪತ್ರೆ, ಬಳ್ಳಾರಿ.

## ೫. ಹತ್ತಿ ಕಂಕಣ ಕುರುಬರು

ಭಾರತೀಯ ಸಾಮಾಜಿಕ ವ್ಯವಸ್ಥೆಯೇ ಸಂಕೀರ್ಣವಾದುದು. ಸಮುದಾಯಗಳು, ಪಂಗಡಗಳು, ಒಳಪಂಗಡಗಳು ಪುರಾತನ ಕಾಲದಿಂದಲೂ ಅಸ್ತಿತ್ವದಲ್ಲಿರುವುದು ಸ್ಪಷ್ಟವಾಗಿದೆ. ದ್ರಾವಿಡರು ಇಲ್ಲಿನ ಮೂಲ ನಿವಾಸಿಗಳಾದರೂ ಆರ್ಯರು ಮತ್ತು ಆರ್ಯೇತರರ ಸಂಗಮದಿಂದಾಗಿ ಸಾಂಕೃತಿಕ ಸಂಘರ್ಷ ಮತ್ತು ಸಾಮರಸ್ಯಗಳ ಅನುಸಂಧಾನವು ನಿರಂತರವಾಗಿ ತನ್ನ ಉಳಿವನ್ನು ಪಡೆದುಕೊಳ್ಳುತ್ತಲೇ ಬಂದಿದೆ.

ಪ್ರಪಂಚದ ಪ್ರಥಮ ವೃತ್ತಿ ಪಶುಪಾಲನೆ ಆರಂಭಗೊಂಡಿದ್ದು ಆದಿಮಾನವನ ಸಂಸ್ಕೃತಿಯ ಉತ್ತರಾರ್ಧದಲ್ಲಿ. ಮನುಕುಲದ ವಿಕಾಸವು ಆರಂಭವಾದದು ಹಟ್ಟಿಗಳಲ್ಲಿ ಎಂದು ವಿದ್ವಾಂಸರ ಅಧ್ಯಯನ ಶೋಧಗಳಿಂದ ದೃಢಪಟ್ಟಿದೆ. ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿ ಕಂಡುಬರುವ ಕುರುಬ ಸಮುದಾಯದ ಪ್ರಮುಖ ಪಂಗಡಗಳಲ್ಲಿ ಹತ್ತಿಕಂಕಣ ಕುರುಬರು ಒಂದು. ಆದಿಮಾನವನು ಆಹಾರ ಹುಡುಕಾಟಕ್ಕಾಗಿ ಅಲೆಮಾರಿ ಜೀವನವನ್ನು ಆಯ್ಕೆ ಮಾಡಿಕೊಂಡು ಮೂಲತಃ ಬೇಟೆ ಕಾಯಕವನ್ನು, ಕಾಲಾಂತರದಲ್ಲಿ ಪಶುಪಾಲನೆಯನ್ನು, ಮುಂದುವರೆದು ಕೃಷಿಯತ್ತ ವಾಲಿದರು ಎಂದರೆ ಅತಿಶಯೋಕ್ತಿಯಾಗದು ಎಂದು ಎಮ್.ಎಮ್. ಕಲ್ಬುರ್ಗಿಯವರು ಅಭಿಪ್ರಾಯಪಡುತ್ತಾರೆ.

ಶ್ರಮ ಸಂಸ್ಕೃತಿಯ ಪ್ರತೀಕವೆನಿಸುವ ಕುರುಬ ಸಮುದಾಯವು ಸಂಸ್ಕೃತಿಯೊಂದರ ನಿರ್ಮಾಣಕ್ಕೆ ಕಾರಣೀಭೂತರಾದವರು. ಸಂಸ್ಕೃತಿಗೆ ಪೂರಕವೆನಿಸುವ ವೃತ್ತಿಯನ್ನು ಕೈಗೊಂಡವರು. ಪಶುಪಾಲಕರಾದ ಕುರುಬರು ಶಿವನ ಆರಾಧಕರೂ ಹೌದು. ಕರ್ನಾಟಕ ಸಾಂಸ್ಕೃತಿಕ ಚರಿತ್ರೆಯನ್ನು ಅನಾವರಣಗೊಳಿಸಿದರೆ ಹಲವು ಸಮುದಾಯಗಳಂತೆ ಕುರುಬ ಸಮುದಾಯಕ್ಕೂ ವಿಶೇಷ ಶಕ್ತಿ ಮತ್ತು ಸಂಸ್ಕೃತಿಯೊಂದು ಹುದುಗಿಕೊಂಡಿರುವುದು ಗೋಚರಿಸುತ್ತದೆ. ಪ್ರಾಚೀನ ಕಾಲದಿಂದಲೂ ಕುರಿ ಸಾಕಾಣಿಕೆ, ಕಂಬಳಿ ನೇಯ್ಗೆ, ಕೃಷಿಯನ್ನು ಮುಖ್ಯ ಕಸುಬುಗಳನ್ನಾಗಿ ರೂಢಿಸಿಕೊಂಡವರು.

ಆರ್ಯರು ಭಾರತಕ್ಕೆ ಕಾಲಿಟ್ಟ ಕ್ಷಣದಿಂದಲೇ ಶೂದ್ರ ಸಂಸ್ಕೃತಿಯು ಚೆಲ್ಲಾಪಿಲ್ಲಿಯಾಗಿ ಒಟ್ಟು ಭಾರತೀಯ ಸಂಸ್ಕೃತಿಯು ಪರಿವರ್ತನಾ ಹಾದಿ ಹಿಡಿದಿದ್ದು ಈಗ ಇತಿಹಾಸ. ಇಂತಹ ಸಂಸ್ಕೃತಿ ಸಂಘರ್ಷದ ಮಧ್ಯದಲ್ಲಿಯೂ ಕುರುಬರು ತಮ್ಮ ಮೂಲ ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಬಂದಿದ್ದಾರೆ. ಸಂಸ್ಕೃತಿಯೆಂಬುದು ಮನುಷ್ಯನ ಉಸಿರಾಗಿದ್ದು, ಇದಕ್ಕೆ ತಾರತಮ್ಯದ ಲೇಪನವಂತೂ ಇರಲಾರದು. ಮನುಷ್ಯನ ವಾಸಸ್ಥಾನವಿದ್ದ ಕಡೆಯಲ್ಲಿ ಸಂಸ್ಕೃತಿಯೊಂದು ಇದ್ದು ಅದು ಅವರದೇ ಆಗಿರುತ್ತದೆ. ಸಂಸ್ಕೃತಿಯೊಂದು ಸಮುದಾಯವೊಂದರ ಆಸ್ತಿಯಾಗಿ ಸಂವಹನಗೊಳ್ಳುತ್ತಾ ಬಂದರೂ ಪ್ರಾದೇಶಿಕ ವೈವಿಧ್ಯತೆ, ವೈಪರೀತ್ಯ ಕೂಡಿರಲೂ ಸಾಧ್ಯ. ವ್ಯಕ್ತಿಯೊಬ್ಬನ ಬಾಹ್ಯ ಮತ್ತು ಆಂತರಿಕ ಸ್ತರಗಳಲ್ಲಿ ರೂಪುಗೊಳ್ಳುವ ನಡೆನುಡಿ, ಉಡುಗೆ ತೊಡುಗೆ, ಆಚಾರ ವಿಚಾರಗಳೆಲ್ಲವೂ ಸಾಮಾಜಿಕ ವಿನ್ಯಾಸದ ಬೇರೆ ಬೇರೆ ಆಯಾಮಗಳಲ್ಲಿ ಒಳಮೂಡುತ್ತದೆ.

ಜನಾಂಗವೊಂದರ ಪ್ರಾದೇಶಿಕತೆಯು ಸೀಮಿತವಾದ ಚೌಕಟ್ಟನ್ನು ನಿರ್ಮಿಸಿಕೊಂಡಿದ್ದರೂ ಕೂಡ ಪರಂಪರಾಗತ ಸಂಸ್ಕೃತಿಯ ಅಭಿವ್ಯಕ್ತಿಯ ಪ್ರಕ್ರಿಯೆಯನ್ನು ಗ್ರಹಿಸಬೇಕಾಗುತ್ತದೆ. ಪ್ರಕೃತಿ ಆರಾಧಕರಾದ ಕುರುಬ ಜನಾಂಗವು ಭಾರತದ ಮೂಲನಿವಾಸಿಗಳು ಮಾತ್ರವಲ್ಲ, ಕರ್ನಾಟಕದ ಬಹುಸಂಖ್ಯಾತ ಜನಾಂಗಗಳಲ್ಲೊಂದು. ಬುಡಕಟ್ಟು ಜನಾಂಗದ ಲಕ್ಷಣಗಳಿದ್ದರೂ ನಾಗರೀಕತೆಯ ಸೋಂಕು ತಗುಲಿ ಹತ್ತಿ ಕಂಕಣದಂತಹ ಪಂಗವೊಂಡರ ಗಮನಕ್ಕೆ ಕಾರಣವಾಗಿದ್ದಾರೆ.

ಮೂಲದಲ್ಲಿ ಒಂದೇ ಆಗಿದ್ದ ಕುರುಬ ಜನಾಂಗವು ಕಾಲಾನಂತರದಲ್ಲಿ ಹಲವಾರು ಉಪಪಂಗಡಗಳಾಗಿ ವಿಭಜನೆಗೊಂಡಂತೆ ಕಂಡುಬರುತ್ತದೆ. ಇದಕ್ಕೆ ಸ್ಥಳದಿಂದ ಸ್ಥಳಕ್ಕೆ ವಲಸೆ ಹೋಗುವುದು, ಉದ್ಯೋಗದಲ್ಲಾದ ಬದಲಾವಣೆ, ಆಯಾ ಪ್ರದೇಶದಲ್ಲಿ ರೂಪಿಸಿಕೊಂಡ ಆಚಾರ-ವಿಚಾರಗಳಲ್ಲಿಯೂ ಭಿನ್ನತೆಯೂ ಕಾರಣವಿರಬಹುದು.

ಕುರುಬರಲ್ಲಿ ಉಣ್ಣೆ ಕಂಕಣ ಮತ್ತು ಹತ್ತಿಕಂಕಣ ಕುರುಬರೆಂದು ಎರಡು ಪ್ರಮುಖವಾದ ಪಂಗಡಗಳಿವೆ. ಉಣ್ಣೆ ಕಂಕಣ ಕುರುಬರು ಮದುವೆಯ ಸಂದರ್ಭದಲ್ಲಿ ವಧುವರರ ಕೈಗಳಿಗೆ ಉಣ್ಣೆ ನೂಲಿನಿಂದ ಮಾಡಿದ ಎಳೆಯನ್ನು ಕಟ್ಟುತ್ತಾರೆ. ಹೀಗಾಗಿ ಇವರಿಗೆ ಉಣ್ಣೆ ಕಂಕಣ ಕುರುಬರು ಎಂದು ಹೆಸರಾಯಿತು. ಮದವೆಯ ವೇಳೆಯಲ್ಲಿ ಮದುಮಕ್ಕಳಿಗೆ ಹತ್ತಿಯ ನೂಲಿನಿಂದ ಕಂಕಣವನ್ನು ಕಟ್ಟಿದರೆ ಇವರು ಹತ್ತಿ ಕಂಕಣದವರೆಂದು ಹೆಸರು ಪಡೆದುಕೊಂಡಿದ್ದಾರೆ. ಈ ಕಂಕಣ ಭೇದವನ್ನು ಬಿಟ್ಟರೆ ಈ ಎರಡೂ ಪಂಗಡಗಳ ನಡುವೆ ಮತ್ತಾವುದೇ ವ್ಯತ್ಯಾಸಗಳಿಲ್ಲ. ಇವೆರಡೂ ಪಂಗಡಗಳಲ್ಲಿ ನೀರುಬಳಕೆ ಅಂದರೆ ಊಟ ಉಪಚಾರಗಳು ಯಾವುದೇ ಭೇದವಿಲ್ಲದೆ ನಡೆಯುತ್ತವೆ. ಆದರೆ ಹೆಣ್ಣು-ಗಂಡಿನ ಕೂಡು-ಕೊಳ್ಳುವಿಕೆಯ ವ್ಯವಹಾರ ಮಾತ್ರ ಕಂಡುಬರುವುದಿಲ್ಲ. ಕಾರಣ ಈ ಎರಡು ಪಂಗಡಗಳಲ್ಲಿ ನಾವು ಅಣ್ಣತಮ್ಮಂದಿರೆಂಬ ಭಾವನೆ ಮನೆ ಮಾಡಿದೆ. ಹೀಗೆ ಕುರುಬರಲ್ಲಿ ಉಂಟಾಗಿರುವ ಕಂಕಣ ಭೇದಗಳಿಗೆ ಮೂಲವನ್ನು ಹುಡುಕಿದರೆ ಹಲವಾರು ಕಟ್ಟು ಕಥೆಗಳು ಕುರುಬ ಜನಾಂಗದಲ್ಲಿಯೂ ಮತ್ತು ಹಾಲುಮತ ಪುರಾಣಗಳಲ್ಲಿಯೂ ದೊರೆಯುತ್ತವೆ.

ಸಮಾಜವು ಯಾವತ್ತೂ ವಿಕಸನಶೀಲವಾಗಿದ್ದು, ಅಪೂರ್ಣತೆಯಿಂದ ಪೂರ್ಣತೆಯೆಡೆಗೆ ಸಾಗುವುದು ಅದರ ವೈಶಿಷ್ಟ್ಯ. ಕೆಲವೊಮ್ಮೆ ಆ ಸಮಾಜವು ಪೂರ್ಣವಾಗಿದ್ದರೂ ಪ್ರತಿಷ್ಠೆಯತ್ತ ಸಾಗುವುದು ಸ್ವಾಭಾವಿಕವಾಗಿದೆ. ಜಗತ್ತಿನ ಹಲವೆಡೆ ಹಲವು ಹೆಸರುಗಳಿಂದ ಕರೆಸಿಕೊಳ್ಳುವ ಈ ಸಮುದಾಯವು ಆಧುನಿಕ ಕಾಲದವರೆಗೆ ತನ್ನ ಹಾದಿಯನ್ನು ವಿಸ್ತರಿಸಿಕೊಳ್ಳುವಾಗ ಕಂಡುಬಂದ ಏರಿಳಿತಗಳಲ್ಲಿ ಒಳಪಂಗಡಗಳಾಗಿ ವಿಭಜನೆಗೊಳ್ಳುವುದು ಅತಿಮುಖ್ಯವಾದುದು.

ಉಂಡಾಡು ಪದ್ಮಣ್ಣನ ಇಬ್ಬರು ಹೆಂಡರಿಯರಿಂದ ಹುಟ್ಟಿದ ಸಂತಾನದಲ್ಲಿ ಒಂದು ಹತ್ತಿಕಂಕಣವಾಗಿ, ಮತ್ತೊಂದು ಉಣ್ಣೆಕಂಕಣವಾಗಿ ಹೆಸರು ಪಡೆದು ವಿಭಜಿತವಾಗಿದೆ. ಹತ್ತಿಕಂಕಣ ಮತ್ತು ಉಣ್ಣೆ ಕಂಕಣ ಈ ಭಿನ್ನತೆಯು ಅವರು ಲಗ್ನದ ಸಂದರ್ಭದಲ್ಲಿ ಕಟ್ಟಿಕೊಳ್ಳುವ ಕಂಕಣದ ಆಧಾರದ ಮೇಲೆ ಆಯಾಯಾ ಒಳಪಂಗಡಕ್ಕೆ ಹೆಸರು ಬರುತ್ತದೆ. ಈ ಎರಡೂ ಪಂಗಡಗಳಲ್ಲಿ ಒಂದರೊಳಗೊಂದು ಕೊಟ್ಟು ತರುವ ಸಂಬಂಧ ನಿಷಿದ್ಧ. ಕಾರಣ ಮೇಲು ಕೀಳು ಎಂಬ ಭಾವನೆ, ಒಂದು ನಿರ್ಧಿಷ್ಟ ಒಳಪಂಗಡಕ್ಕೆ ಸೇರಿದ ಕುರುಬರು ಎಲ್ಲಿಗೇ ಹೋದರೂ ಅಣ್ಣ-ತಮ್ಮಂದಿರೇ ಹೊರತು ನೆಂಟರಾಗುವುದಿಲ್ಲ.

ಹತ್ತಿಕಂಕಣವೆಂದು ಹೆಸರು ಪಡೆದುದಕ್ಕೆ ತಗರ ಪವಾಡದಲ್ಲಿ ಈ ಪದ್ಯಗಳನ್ನು ಅವಲೋಕಿಸಬಹುದು.

ಕಂದಯ್ಯ ನಿನ್ನ ಹಿರಿಹೆಂಡತಿ ಲಿಂಗಮ್ಮಗೆ
ಕಂದರು ಹದಿಮೂರು ಮಂದಿ
ಚೆಂದದಿ ಹತ್ತಿಕಂಕಣದ ಕುರುಬರೆಂದು
ನಿಂದು ಶಿವನು ನಿರೂಪಿಸಿದ

ನಿನ್ನ ಸಂತತಿಯವರುಗಳೆಲ್ಲರು ಚೊಕ್ಕ
ಚೆನ್ನ ಹತ್ತಿಯ ಕಂಕಣದ
ಬಿನ್ನಾಣಕಾರರೆನಿಸಿ ಬಾಳುವರು ಚೊಕ್ಕ
ಚಿನ್ನಕ್ಕೆ ಸಮನಾಗಿ ಮಗನೆ (ತಗರ ಪವಾಡ, ಸಂಧಿ-೨)

ಅಂದರೆ ಪದ್ಮ ಗೊಂಡನ ಹಿರಿಯ ಹೆಂಡರಿ ಲಿಂಗಮ್ಮನ ಹೊಟ್ಟೆಯಲ್ಲಿ ಜನಿಸಿದ ೧೩ ಜನ ಗಂಡುಮಕ್ಕಳೂ ಹತ್ತಿಕಂಕಣದ ಕುರುಬರೆಂದು ಹೆಸರು ಪಡೆದು ಶ್ರೇಷ್ಟತೆಯ ಸೂಚನೆಯಾಗಿಯೂ ಕಂಡುಬರುತ್ತಾರೆ.

ಸಿದ್ಧಮಂಕ ಚರಿತೆಯ ಪ್ರಕಾರ ಉಂಡಾಡು ಪದ್ಮಣ್ಣನಿಗೆ ಇಬ್ಬರು ಮಡದಿಯರು. ಹಿರಿಯಾಕೆ ಚಿಮ್ಮಲಬ್ಬೆ. ಕಿರಿಯಾಕೆ ಜಿಂಕಬ್ಬೆ (ಜಿಂಕಾದೇವಿ) ಜಿಂಕಬ್ಬೆಯ ಮದುವೆಯಲ್ಲಿ ಸುರಗ, ಕಂಕಣ, ಬಾಸಿಂಗ, ದಂಡೆ ಹಾಗೂ ಮಂಗಳಸೂತ್ರಗಳೆಂಬ ಪಂಚವಿಧಿಗಳಿಗೆ ಹತ್ತಿಯ ಎಳೆಗಳನ್ನು ಬಳಸಿದ್ದರಿಂದ ಈಕೆಯ ಸಂತತಿಯವರೆ ಮುಂದೆ ಹತ್ತಿಕಂಕಣ ಕುರುಬರು ಇಲ್ಲವೆ ಬಿಳಿಯಕಂಕಣ ಕುರುಬರು ಅಥವಾ ಹೊಸಕುರುಬರು ಎಂದು ಕರೆಯುತ್ತಾರೆ.

ಕುರುಬರ ಮೂಲಪುರುಷನಾದ ಉಂಡಾಡು ಪದ್ಮಣ್ಣನಿಂದ ಶಾಸ್ತ್ರೋಕ್ತವಾಗಿ ಮದುವೆಯಾದ ಹೆಂಡತಿಯ ಮಕ್ಕಳಿಗೆ ಹತ್ತಿಕಂಕಣ ಕುರುಬರೆಂದು ಹೆಸರಾಯಿತು. ಇವರು ಪ್ರಮುಖವಾಗಿ ಕೃಷಿಯಾಧಾರಿತ ಸಮುದಾಯ. ಎಲ್ಲಿ ಫಲವತ್ತಾದ ಕೃಷಿಗೆ ಯೋಗ್ಯವಾದ ಭೂಮಿ ಹೆಚ್ಚು ಕಂಡುಬರುತ್ತದೋ ಅಂತಹ ಕಡೆಗಳಲ್ಲಿ ಹತ್ತಿಕಂಕಣ ಕುರುಬರು ಕಂಡುಬರುತ್ತಾರೆ. ಹತ್ತಿಕಂಕಣ ಕುರುಬರು ಕರ್ನಾಟಕದಲ್ಲಿ ಬಿಜಾಪುರ, ಬಾಗಲಕೋಟೆ, ಧಾರವಾಡ, ಗದಗ, ಬಳ್ಳಾರಿ, ಗುಲ್ಬರ್ಗಾ, ಮೈಸೂರು, ಚಿಕ್ಕಮಗಳೂರು ಹಾಗೂ ಬೆಂಗಳೂರು ಜಿಲ್ಲೆಗಳಲ್ಲಿ ಕಂಡುಬರುತ್ತಾರೆ. ಕೃಷಿಯ ಜೊತೆಗೆ ಕಂಬಳಿ ನೇಕಾರಿಕೆ, ಕುರಿ ಸಂಗೋಪನೆ ಈ ಎಲ್ಲಾ ಸುಬುಗಳನ್ನು ಮಾಡುವುದರ ಜೊತೆಗೆ ಆಹಾರ ಪದ್ಧತಿಯಲ್ಲಿ ಲಿಂಗಾಯತ ಧರ್ಮದ ಪ್ರಭಾವಕ್ಕೊಳಗಾಗಿ ಬಹುಪಾಲು ಸಸ್ಯಹಾರಿಗಳಾಗಿದ್ದರೆ, ಇನ್ನು ಕೆಲವರು ಮಾಂಸಹಾರಿಗಳಾಗಿದ್ದಾರೆ.

ಈ ಎರಡೂ ಪಂಗಡಗಳವರು ನೂರಾರು ವರ್ಷಗಳಿಂದ ಅಣ್ಣ ತಮ್ಮಂದಿರೆಂಬ ಭಾವನಾತ್ಮಕ ಸಂಬಂಧದ ಹಿಂದಿನ ನಿಗೂಢತೆಯ ಅರಿವಾಗುತ್ತದೆ.

೧೮೮೪ ರಲ್ಲಿ ಮುಂಬಯಿ ಕರ್ನಾಟಕ ಪ್ರದೇಶದಲ್ಲಿ ಕುರುಬರ ಬಗ್ಗೆ ಸಂಶೋಧನೆ ಕೈಗೊಂಡ ಜೇಮ್ಸ್ ಕ್ಯಾಂಬೆಲ್ ಅವರು ಹೀಗೆ ಹೇಳುತ್ತಾರೆ.

ಪ್ರಾಚೀನ ಕಾಲದಿಂದಲೂ ಕುರುಬರು ಉಣ್ಣೆಯ ಕಂಕಣ ಧರಿಸುತ್ತ ಬಂದಿದ್ದರೂ ಹತ್ತಿ ಕಂಕಣದ ಪ್ರವೇಶ ಯಾವಾಗ ಆಯಿತು ಎಂಬ ಪ್ರಶ್ನೆಗೆ ಉತ್ತರ ಹುಡುಕಿದಾಗ ಮಾತ್ರ ಈ ಕಂಕಣ ಭೇದದ ಕತೆಯ ಹಿಂದಿನ ನಿಗೂಢತೆಯ ನಿಜಾಂಶ ತಿಳಿಯಲು ಸಾಧ್ಯ. ಇದಕ್ಕಾಗಿ ಹತ್ತಿಯ ಇತಿಹಾಸದ ಕಡೆಗೆ ಗಮನ ಹರಿಸಿದರೆ ಪ್ರಪಂಚದಲ್ಲಿ ಹತ್ತಿ ಗಿಡಿದ ಅವಿಷ್ಕಾರ ಕ್ರಿ.ಪೂ.೧೨೦೦-೧೦೦೦ ರಲ್ಲಿ ಆಗಿರಬಹುದಾದ ಸಾಧ್ಯತೆ ಇರುವುದಾಗಿ ವಿಜ್ಞಾನಿಗಳ ವಾದ. ಹತ್ತಿಯ ಗಿಡಕ್ಕೆ ಮೊದಲು ಕುರಿಯಗಿಡ ಎಂದೇ ಕರೆಯಲಾಗುತ್ತಿತ್ತು. ಇದರಿಂದ ಮೊದಲು ಕುರಿಯ ತುಪ್ಪಳದಿಂದ ನೇಕಾರಿಕೆ ಇತ್ತು ಎಂಬುದು ಸ್ಪಷ್ಟ.

ಇಂದಿನ ಹತ್ತಿಕಂಕಣ ಕುರುಬರಾರೂ ನೇಕಾರರಲ್ಲ. ಇವರ ವೃತ್ತಿ ಕುರಿಗಾರಿಕೆ ಮತ್ತು ಕೃಷಿಯಾಗಿದೆ. ಹತ್ತಿಕಂಕಣದಲ್ಲಿ ಹಟಗಾರ, ಖಿಲ್ಲಾರಿ ಹಾಗೂ ಸನಗರ ಎಂದು ಮೂರು ಒಳಪಂಗಡಗಳು ಇವೆ. ಖಿಲ್ಲಾರಿಗಳು ಅರೆಅಲೆಮಾರಿ ಕುರುಬರಾದರೆ, ಹಟಗಾರರು ಕುರಿಗಾರಿಕೆಯೊಂದಿಗೆ ಕೃಷಿಕರು, ಸನಗಾರರು ಮಹಾರಾಷ್ಟ್ರದ ಗಡಿಭಾಗದಲ್ಲಿರುವ ಕಂಬಳಿನೇಕಾರರು. ಇವರೆಲ್ಲರೂ ಹತ್ತಿ ಕಂಕಣವನ್ನು ಧರಿಸುತ್ತಾರೆ. ಕರ್ನಾಟಕದಲ್ಲಿ ಬಳ್ಳಾರಿ ಜಿಲ್ಲೆಯನ್ನು ಕೂಡಿಕೊಂಡು ಉತ್ತರಕ್ಕೆ ಬಂದಂತೆಲ್ಲ ಹತ್ತಿ ಕಂಕಣಕ್ಕೆ ಸೇರಿದ ಕುರುಬರೇ ಹೆಚ್ಚು. ಇವರಲ್ಲಿಯೂ ಬಹಳಷ್ಟು ಒಳಪಂಗಡಗಳಿವೆ. ಬನ್ನಿ ಎಲ್ಲವರು, ಗೌಡರು, ಎಡವೆಲ್ಲೋರು, ಮಲ್ಲಿಎಲ್ಲವರು, ಕಡ್ಲೆ ಎಲ್ಲವರು, ಸೊಂಟಿ ಎಲ್ಲವರು, ಬಸರಿ ಎಲ್ಲವರು, ಅಕ್ಕಿಎಲ್ಲವರು, ಎಕ್ಕೆ ಎಲ್ಲವರು, ಜಮ್ಮೆಲ್ಲವರು, ಬಂಡಾರದೋರು, ಇತ್ಯಾದಿ ಇವುಗಳಿಗೆ ಬೆಡಗು ಎಂದು ಕರೆಯುತ್ತಾರೆ. ಇವರಲ್ಲಿಯೂ ಒಂದು ನಿರ್ಧಿಷ್ಟ ಬೆಡಗಿಗೆ ಸೇರಿದವರು ಎಲ್ಲದ್ದರೂ ಅಣ್ಣ-ತಮ್ಮಂದಿರು ಹೊರತು ನೆಂಟರಾಗುವುದಿಲ್ಲ.

ಹತ್ತಿಕಂಕಣದವರಲ್ಲಿಯೂ ಬೀರೇಶ್ವರ, ಮಲ್ಲೇಶ್ವರ, ಮೈಲಾರಲಿಂಗ, ಕರಿಸಿದ್ಧೇಶ್ವರ, ಗಂಗರಾಯ, ಅಸಬೇಡಪ್ಪ, ಯಲ್ಲಮ್ಮ ಮುಂತಾದ ದೇವರುಗಳಿಗೆ ನಡೆದುಕೊಳ್ಳುವ ಒಕ್ಕಲುಗಳಿವೆ. ಆದರೆ ಉಣ್ಣೆ ಕಂಕಣ ಕುರುಬರಿಗೆ ರೇವಣಸಿದ್ದೇಶ್ವರ ಸಮಾನ ದೈವವಾದಂತೆ ಇವರಿಗೆ ಆಗಿಲ್ಲ. ಇವರಲ್ಲಿ ಕೆಲವರಿಗೆ ರೇವಣಸಿದ್ದೇಶ್ವರೂ ಬೇರೆ ದೈವಗಳಂತೆ ಒಬ್ಬ ಮನೆದೇವರಾಗಿದ್ದಾನೆ. ಹತ್ತಿಕಂಕಣ ಕುರುಬರಿಗೆ ಒಡೆಯರುಗಳು ಗುರುಗಳಾದರೂ ಮನೆಯ ಸಾಂಸ್ಕೃತಿಕ ಆಚರಣೆಗಳಲ್ಲಿ ಪುರೋಹಿತರಂತೆ ಭಾಗಿಯಾಗುವ ನಿಯಮ ಇಲ್ಲ. ಇವರಿಗೆ ಮದುವೆಯ ಸಂದರ್ಭದಲ್ಲಿ ಗುರುವಿನ ಎಲೆಯನ್ನು ಕೊಡುತ್ತಾರೆ. ಕೆಲವರು ಮನೆಗೆ ಕರೆದುಕೊಂಡು ಹೋಗಿ ಬಟ್ಟೆಬರೆಯನ್ನು ಗುರುವಿಗೆ ಮಾಡುತ್ತಾರೆ. ಆಗ ರೊಕ್ಕವನ್ನು ದಕ್ಷಿಣೆಯಾಗಿ ಕೊಡುತ್ತಾರೆ. ಇದೇನಿದ್ದರೂ ಸಂತೋಷಕ್ಕಾಗಿ ಕೊಡುವುದೇ ಹೊರತು ನಿಯಮ ಪಾಲನೆಯಿಲ್ಲ.

ಸಿಂಧನೂರು, ರಾಯಚೂರು ಭಾಗಗಳಲ್ಲಿ ಹತ್ತಿ ಕಂಕಣ ಕುರುಬರ ಮದುವೆಯ ಕಾರ್ಯಕ್ಕೆ ವೀರಶೈವ ಜಂಗಮರು ಅಥವಾ ಬ್ರಾಹ್ಮಣ ಆಚಾರಿಗಳು ಪುರೋಹಿತರು ಬರುತ್ತಾರೆ. ಮತ್ತೊಂದು ಗಮನಾರ್ಹ ಅಂಶವೆಂದರೆ ಈ ಸುತ್ತಿನಲ್ಲಿ ಇರುವ ಒಡೆಯರುಗಳೆಲ್ಲ ಕೊಟ್ಟು ತರುವ ಸಂಬಂಧವನ್ನು ಕುರುಬರ ಕೂಡ ನಡೆಸದೆ ತಮ್ಮ ತಮ್ಮಲ್ಲಿಯೇ ನಡೆಸಿದ್ದಾರೆ. ಆದರೆ ಹಳೆ ಮೈಸೂರಿನ ಕಡೆ ಒಡೆಯರುಗಳು ತಮಗೆ ತಾವು ಅಣ್ಣ ತಮ್ಮಂದಿರೇ ಹೊರತು ನೆಂಟರಾಗುವುದಿಲ್ಲ.

ಹತ್ತಿಕಂಕಣದ ಕೆಲವು ಬಣದವರ ಪ್ರಕಾರ ಇವರ ಪೂರ್ವಜರೆಲ್ಲ ಮೊದಲಿಗೆ ಲಿಂಗವಂತರಾಗಿದ್ದರಂತೆ, ಆದರೆ ತಿನ್ನುಣ್ಣುವುದನ್ನು ಬಿಡಲಾರದ್ದಕ್ಕೆ ತಮ್ಮ ಲಿಂಗಗಳನ್ನೆಲ್ಲ ತಮ್ಮ ತಮ್ಮ ಮನೆ ದೇವರುಗಳಿಗೆ ಅರ್ಪಿಸಿ ತಾವು ಯಥಾರೀತಿ ತಿನ್ನುಣ್ಣುವುದಕ್ಕೆ ಪ್ರಾರಂಭಿಸಿದರಂತೆ. ಹತ್ತಿಕಂಕಣ ಕುರುಬರಲ್ಲೂ ಕೆಲವು ಗುಂಪುಗಳಿವೆ. ಇವುಗಳಿಗೆ ಬೆಡಗುಗಳ ನಿಧಿಷ್ಟತೆಯೇನಿಲ್ಲ. ಎಲ್ಲ ಬೆಡಗಿನವರೂ ಸೇರಿಕೊಂಡು ತಮ್ಮ ಸಾಂಸ್ಕೃತಿಕ ಕಾರ್ಯಗಳ ಸಂಗ ನೇರವೇರಿಕೆ ಅನುಕೂಲಕ್ಕಾಗಿ ತಮ್ಮ ತಮ್ಮಲ್ಲಿಯೇ ಗುಂಪುಗಳನ್ನು ಮಾಡಿಕೊಂಡಿದ್ದಾರೆ. ಇದಕ್ಕೆ ಪಣ ಅಥವಾ ಬಣ ಎಂದು ಕರೆಯಲಾಗುತ್ತದೆ. ಮದುವೆಯ ಸಂದರ್ಭದಲ್ಲಿ ಒಂದೇ ಬಣಕ್ಕೆ ಸೇರಿದ ವಧೂ ವರರಾದರೆ ಗಂಡು-ಹೆಣ್ಣಿನ ಕಡೆಯವರಿಬ್ಬರೂ ಕೂಡಿಕೊಂಡು ಲಗ್ನದ ಎಲ್ಲಾ ಕೆಲಸ ಕಾರ್ಯಗಳನ್ನು ನಡೆಸಿಕೊಡುತ್ತಾರೆ. ಹೀಗಲ್ಲದೆ ಬೇರೆ ಬಣ ಕನ್ಯೆಯನ್ನು ಎತ್ತಿಕೊಡುತ್ತಾರೆ. ಅಂದರೆ ಲಗ್ನದ ಶಾಸ್ತ್ರದ ವಿಧಿಗಳನ್ನು ನೆರವೇರಿಸುವುದಕ್ಕಾಗಿ ಕನ್ಯೆಯನ್ನು ಗಂಡಿನವರ ವಶಕ್ಕೆ ಒಪ್ಪಿಸುವುದು. ಇಂಥ ಸಂದರ್ಭದಲ್ಲಿ ಕನ್ಯೆಯ ಬಳಗದವರು ಲಗ್ನದ ಯಾವುದೇ ಕಾರ್ಯದಲ್ಲಿ ಪಾಲ್ಗೊಳ್ಳುವಂತಿಲ್ಲ. ಅವರೇನಿದ್ದರೂ ಕರೆದಾಗ ಊಟ ಮಾಡುವುದು ಮತ್ತು ಧಾರೆಯ ಕಾಲದಲ್ಲಿ ಹೆಣ್ಣು ಗಂಡಿನ ಮೇಲೆ ಅಕ್ಕಿ ಕಾಳು ಹಾಕುವುದು. ಅದು ತಪ್ಪಿ ಇನ್ನಾವುದೇ ಶಾಸ್ತ್ರ ಕಾರ್ಯ ಮಾಡಿದರೂ ದೊಡ್ಡ ಜಗಳವೇ ನಡೆಯುತ್ತದೆ. ಇದನ್ನು ನೋಡಿಯೇ ಕುರುಬ ಕೂಡಿ ಕೆಟ್ಟ ದೊಂಬ ಅಗಲಿ ಕೆಟ್ಟ ಎಂಬ ಗಾದೆ ಹುಟ್ಟಿಕೊಂಡಿರಬಹುದು.

ಹತ್ತಿಕಂಕಣ ಕುರುಬರಲ್ಲಿಯೂ ಕೆಲವು ಆಚರಣೆ ಸಂಪ್ರದಾಯಗಳನ್ನು ಕಾಣಬಹುದು. ಎಲ್ಲ ಸಮುದಾಯಗಳಂತೆ ಕುರುಬ ಸಮುದಾಯದ ಉಪ ಪಂಗಡವಾದ ಹತ್ತಿಕಂಕಣ ಕುರುಬರು ಆರಿಸುವ ಆವರಣೆ ಉದ್ದೇಶ ಒಂದೇ ಆಗಿದ್ದರೂ ಆಚರಣೆಗಳು ಮಾತ್ರ ಒಂದೇ ತೆರನಾಗಿಲ್ಲ. ಸಮಾಜ ನೆಲೆಗೊಂಡ ಸ್ಥಿತಿಗತಿ, ಸಾಮಾಜಿಕ ಮನೋಧರ್ಮ, ನಂಬಿಕೆ ಇತ್ಯಾದಿ ಅಂಶಗಳ ಗುಣವಾಗಿ ಆಚರಣೆ ರೂಪ ತಾಳುತ್ತದೆ. ಕಾಲಾಂತರದಲ್ಲಿ ಹಲವು ಪ್ರಭಾವಗಳಿಗೆ ಒಳಗಾಗದಂತೆ ಈ ಆಚರಣೆಗಳಲ್ಲಿ ಬದಲಾಗುವುದೂ ಸಹಜ.

ಹತ್ತಿಕಂಕಣ ಕುರುಬರಲ್ಲಿ ಗಂಡುಮಕ್ಕಳಿಗೆ ಮದುವೆಗೆ ಮುನ್ನ ಪಟ್ಟ ಮಾಡುವ ಆಚರಣೆ ಇದೆ. ಈ ಪಟ್ಟವನ್ನು ಮರು ತಿಂಗಳ ಮಗುವಿನಿಂದ ಹಿಡಿದು ಮದುವೆಯಾಗುವ ವಯೋಮಾನದ ಹುಡುಗರಿಗೆಲ್ಲ ಮಾಡುತ್ತಾರೆ. ಖರ್ಚು ಕಡಿಮೆ ಮಾಡುವ ಉದ್ದೇಶ ಇದಾಗಿರಬಹುದು. ಹೀಗೆ ಸಾಮೂಹಿಕವಾಗಿ ನಡೆಯುವಾಗಲೂ ನಿರ್ಧಿಷ್ಟ ಬೆಡಗಿನ ಅಣ್ಣ ತಮ್ಮಂದಿರು ಮಾತ್ರ ಗುಂಪಾಗಿ ಸೇರಿ ಆಚರಿಸುತ್ತಾರೆ. ಈ ಸಮಯದಲ್ಲಿ ಮನೆದೇವರಾದ ಬೀರಲಿಂಗೇಶ್ವರ, ಗಂಗರಾಯನನ್ನು ಹೊರಡಿಸಿಕೊಂಡು ಡೊಳ್ಳಿನ ಸಮೇತ ಹೊಳೆಗೆ ಹೋಗುತ್ತಾರೆ. ಅಲ್ಲಿ ದೇವರಿಗೆ ಗಂಗಾಸ್ನಾನ ಮಾಡಿಸುತ್ತಾರೆ. ಅನಂತರ ಕುರಿ ಬಲಿಕೊಟ್ಟು ಅಡಿಗೆ ಮಾಡಿ ಬಂದ ಜನರಿಗೆ ಉಣಬಡಿಸುತ್ತಾರೆ. ಅಲ್ಲಿಂದ ಮುಂದೆ ಗುಡಿಗೆ ದೇವರನ್ನು ಕರೆತಂದು ಗುಡಿದುಂಬಿಸುತ್ತಾರೆ.

ಗುಡಿಗೆ ಬಂದ ಮೇಲೆ ನಾಲ್ಕು ಗಡಿಗೆಗಳಲ್ಲಿ ನೀರು ತಂದು ಚಚೌಕಾಕಾರದಲ್ಲಿ ಇಟ್ಟು ಅದಕ್ಕೆ ಸುತ್ತಲೂ ಐದು ಸುತ್ತು ಹತ್ತಿ ನೂಲು ಸುತ್ತುತ್ತಾರೆ. ಇದಕ್ಕೆ ಸುರಿಗೆ ಸುತ್ತುವುದು ಎಂದು ಹೆಸರು. ಹೀಗೆ ಕೂರಿಸುವುದಕ್ಕೆ ಮುಂಚೆ ಸುರಿಗೆಯಿಂದ ಏಳಿಸಿ ಅವರ ತಂದೆ ತಾಯಿಗಳನ್ನು ಕೂಡಿಸಿ ಬಂಉಉ ಬಳಗವನ್ನು ಸೇರಿಸಿಕೊಂಡು ಅವರಿಗೆ ಬಂಡಾರ ದೇವರ ಅರಿಶಿನ ಹೊಯ್ಯುತ್ತಾರೆ. ಈ ಆಚರಣೆಯುದ್ದಕ್ಕೂ ಡೊಳ್ಳಿನ ಸೇವೆ ನಡೆಯುತ್ತಿರಬೇಕು. ಇವರಿಗೆ ಹಿರೇ ಕುರುಬರು ಎಂದು ಕರೆಯಲಾಗುತ್ತದೆ.

ಹತ್ತಿಕಂಕಣ ಕುರುಬರು ಮದುವೆಗೆ ಸಿದ್ಧವಾಗಿರುವ ಹುಡುಗನಿಗೆ ಕನ್ಯೆಯನ್ನು ನೋಡುವುದಕ್ಕೆ ಮುಂಚೆ ಕೆಲವು ಸಂಪ್ರದಾಯಗಳನ್ನು ಆಚರಿಸುತ್ತಾರೆ. ಈ ಆಚರಣಾ ವಿಧಿಗೆ 'ಮನೀರ್ಲು' ಎಂದು ಕರೆಯುತ್ತಾರೆ. ಬಲಿಕೊಟ್ಟು ಕುರಿಯ ರಕ್ತವನ್ನು ಮದುವೆಯಾಗಲಿರುವ ಹುಡುಗನ ಗಣೆಗೆ ಹಚ್ಚುವ ವಿಧಿ ಇದಾಗಿದೆ. ಇದಾದ ನಂತರ ಕನ್ಯೆಯು ತಮ್ಮ ಬಳಗದಲ್ಲಿರಲಿ ಬೇರೆ ಬಳಗದ ಹೆಣ್ಣಾಗಿರಲಿ ತಂದುಕೊಳ್ಳಬೇಕೆಂಬ ಮನಸು ಮಾಡಿದರೆ ಐನೋರಿಂದ ಜೋತಿಷ್ಯ ಕೇಳಿಸಿ ಆನಂತರ ಮೂರಕ್ಕಿಂತ ಹೆಚ್ಚು ಜನ ಹೋಗಿ ಕನ್ಯೆಯನ್ನು ನೋಡಿಕೊಂಡು ಬರುತ್ತಾರೆ. ಅದಕ್ಕೆ ದಾರಿ ಶಕುನ ಅತೀ ಮುಖ್ಯ. ಶುಭ ಅಶುಭ ಶಕುನಗಳಲ್ಲಿ ಅಶುಭ ಶಕುನಗಳೇನಾದರೂ ಆದರೆ ಹೆಣ್ಣು ನೋಡುವ ಶಾಸ್ತ್ರ ನಿಲ್ಲಿಸುತ್ತಾರೆ.

ಹೆಣ್ಣಿನ ಲಕ್ಷಣ ಪರೀಕ್ಷೆ ನಡೆಸುವಾಗಲೂ ಗಂಡಿನವರಿಗೆ ಒಪ್ಪಿಗೆಯಾದರೆ ಅದೇ ದಿನ ಕೊಬ್ಬರಿ ಹೋಳು, ಉತ್ತುತ್ತಿ, ಕಲ್ಲುಸಕ್ಕರೆ, ಎಲೆಅಡಿಕೆ, ಬಾಳೆಹಣ್ಣುಗಳಿಂದ ಹೆಣ್ಣಿನ ಉಡಿಯನ್ನು ತುಂಬುತ್ತಾರೆ. ಹೆಣ್ಣಿನವರು ವರನ ಮನೆಗೆ ಬಂದಾಗ ಅಲ್ಲಿ ವಧುವನ್ನು ಲಕ್ಷಣ ಪರೀಕ್ಷೆ ಈಡು ಮಾಡಿದಂತೆ ಗಂಡನ್ನು ಪರೀಕ್ಷಿಸುವುದಿಲ್ಲ. ಗಂಡಿನ ಮನೆತನ ಒಪ್ಪಿತವಾದರೆ ಮಾತುಕತೆ ಆಡಿಮುಗಿಸುತ್ತಾರೆ. ಈ ಮಾತುಕತೆಗಳೆಲ್ಲ ಹೆಣ್ಣಿನವರು ಗಂಡಿಗೆ ಕೊಡಬಹುದಾದ ವಸ್ತುಗಳಿಗೆ ಸಂಬಂಧಿಸಿದ್ದಾಗಿರುತ್ತದೆ. ಇದಾದ ಸ್ವಲ್ಪ ದಿನಗಳಲ್ಲಿಯೇ ನಿಶ್ಚಯ ಕಾರ್ಯ ಜರುಗುತ್ತದೆ. ಒಪ್ಪಿಗೆಯ ಸಿಹಿ ಊಟವನ್ನು ಉಂಡ ನಂತರ ಗಂಡಿನ ಕಡೆಯವರು ಒಳ್ಳೆಯ ದಿನ ನೋಡಿ ಕನ್ಯೆಯ ಮನೆಗೆ ಹೋಗಿ ವೀಳ್ಯ ತಿದ್ದಿ ನಿಶ್ಚಯ ಕಾರ್ಯಮಾಡುತ್ತಾರೆ. ಈ ನಿಶ್ಚಯ ಕಾರ್ಯವಾದ ಮೇಲೆ ಗಂಡಿನವರಾಗಲಿ ವಧುವಿನ ಕರೆಯವರಾಗಲಿ ಈ ಸಂಬಂಧವನ್ನು ಮುಡಿಯಬಾರದು.

ಮದುವೆಗೆ ಮುಂಚೆ ಐದು ಅಥವಾ ಒಂಭತ್ತು ದಿನ ಮುಂಚಿತವಾಗಿ ವರನ ಮನೆಯಲ್ಲಿ ಲಕ್ಷ್ಮೀ ಪೂಜೆ ನಡೆಯುತ್ತದೆ. ಆ ದಿನ ಮನೆಯಲ್ಲಿ ಎಲ್ಲರೂ ಶುಚಿರ್ಭೂತರಾಗಿ ತುಂಬಿದ ಬಿಂದಿಗೆಯನ್ನು ಬಂಗಾರದಿಂದ ಅಲಂಕರಿಸಿ ಅದರ ಮುಂದೆ ಲಕ್ಷ್ಮೀ ಸೀರೆ ತಾಂಬೂಲಿಟ್ಟು ಪೂಜಿಸುತ್ತಾರೆ. ಹೀಗೆ ಪೂಜಿಸುವ ಬಿಂದಿಗೆಯೇ ಲಕ್ಷ್ಮೀಯಾಗಿರುತ್ತದೆ. ಲಕ್ಷ್ಮಿ ಪೂಜೆಯ ಮರುದಿನವೇ ಲಗ್ನ ಕಟ್ಟುವ ಆಚರಣೆ, ಈ ಕಾರ್ಯಕ್ಕೆ ಐನೋರು, ಕುಲದ ಹಿಡಿಯರು, ಪೂಜಾರಿಗಳು ಸೇರುತ್ತಾರೆ. ಪುರೋಹಿತರು ಕೈಯಿಂದ ಬರೆಸಿದ ಲಗ್ನ ಪತ್ರಿಕೆಯನ್ನು ಕುಳಿತ ಸಭೇ ಎದುರಿಗೆ ಓದಿ ನಂತರ ಅರಿಶಿನ ಕುಂಕುಮ ಹಚ್ಚಿ ಪೂಜಿಸುತ್ತಾರೆ. ಲಗ್ನ ಪತ್ರಿಕೆಯಾದ ಮೇಲೆ ಕನ್ಯೆಯ ಮನೆಯಲ್ಲಿ ತುಪ್ಪದ ಊಟ ನಡೆಸಿದರೆ, ಹೆಣ್ಣಿನ ಮನೆಯಲ್ಲಿ ತುಪ್ಪದ ಊಟ ಮುಗಿಸಿಕೊಂಡು ವಾಪಸ್ಸು ಬಂದ ಮಾರನೆಯ ದಿನವೇ ಗಂಡಿನ ಮನೆಯಲ್ಲಿ ದೇವರೂಟ. ದೇವರೂಟ ಯಾವಾಗಲು ತಾಳಿಕಟ್ಟುವ ಹಿಂದಿನ ದಿವಸ. ಇದು ನಿಯಮ. ಊರಿನ ಹಿರಿಯರನ್ನು ಕರೆದು ಊಟ ಹಾಕಿದರೆ ದೈವಸಮಾನ ಎಂಬ ಭಾವನೆ ಇರಬಹುದು. ದೇವರ ಊಟದ ದಿನವೇ ಮುತ್ತೈದೆಯರ ಪೂಜೆ. ಇದಕ್ಕೆ ಗೌರಿಪೂಜೆ ಎನ್ನಲಾಗುತ್ತದೆ.

ಮದುವಣಿಗೆ ಶಾಸ್ತ್ರ ದಿನ ಗಂಡು ಹೆಣ್ಣಿನ ಊರಿಗೆ ಬಂದರೆ ಗಂಡು ಉಳಿದುಕೊಳ್ಳಲು ಬಿಡದಿ ಮನೆ ನೀಡುವುದು. ಕಂಕಣ ಕಟ್ಟುವಿಕೆಯೊಂದಿಗೆ ನಿಜವಾದ ಆಚರಣೆಗಳು ಆರಂಭವಾಗುತ್ತವೆ, ಕುಲದ ಪೂಜಾರಿಗಳು ವೀಳ್ಯೆದೆಲೆ ಮತ್ತು ಅರಿಶಿನ ಕೊನೆಯಿಂದ ಹತ್ತಿದಾರ ಉಪಯೋಗಿಸಿ ಕೈಗೆ ಕಟ್ಟುವ ಕಂಕಣವನ್ನು ತಯಾರಿಸುತ್ತಾರೆ. ಇವುಗಳನ್ನು ಈ ಲಗ್ನ ಕಾರ್ಯದಲ್ಲಿ ನಿರತರಾಗುವ ಕಾರ್ಯಕರ್ತರುಗಳಾದ ಮುತ್ತೈದೆಯರು ಮತ್ತು ಗಂಡು ಮಕ್ಕಳ ಬಲಗೈಗೆ ಕಟ್ಟುತ್ತಾರೆ. ಈ ಕಂಕಣ ಕಟ್ಟಿಸಿಕೊಳ್ಳುವವರು ಗಂಡಿನ ಕಡೆಯವರೆ ಆಗಿರುವುದು ರೂಢಿ. ಕಂಕಣ ಕಟ್ಟಿಸಿಕೊಂಡ ಇಬ್ಬರು ಹೆಣ್ಣು ಮಕ್ಕಳು ಇಬ್ಬರು ಗಂಡಸರು ಐನೀರು ತರುವುದು ನಂತರ ಮನೆಮುಂದಿನ ಕೆಳಗೆ ನೀರು ತುಂಬಿ ತಂಡ ಕೊಡಗಳನ್ನು ಇಟ್ಟುಕೊಂಡು ಅಲ್ಲಿಯೇ ಕುಳಿತುಕೊಳ್ಳಬೇಕು. ಆ ನಾಲ್ಕೂ ಕೊಡಗಳಿಗೆ ಹತ್ತಿ ನೂಲಿನಿಂದ ಐದು ಸುತ್ತ ಸುತ್ತುತ್ತಾರೆ. ಇದಕ್ಕೆ ಸುರಿಗೆ ಸುತ್ತುವುದು ಎನ್ನಲಾಗುತ್ತದೆ.

ಇದಾದ ನಂತರ ಮೀಯುವ ಶಾಸ್ತ್ರ. ದೇವರ ಕೋಣೆಯಲ್ಲಿ ಬಾಸಿಂಗ ಕಟ್ಟುವುದು. ತಾಳಿ ಕಟ್ಟುವ ಮುಹೂರ್ತ ಮೊದಲೇ ನಿಗಧಿಯಾಗಿರುತ್ತದೆ. ಉಣ್ಣೆಕಂಕಣ ಕುರುಬರ ಆಚರಣೆಗಳಲ್ಲಿ ಒಡೆಯರನ್ನು ಬಿಟ್ಟರೆ ಬೇರೆ ಯಾರಿಂದಲೂ ಮೂಡಿಸುವಂತಿಲ್ಲ. ಆದರೆ ಹತ್ತಿ ಕಂಕಂಣ ಕುರುಬರಲ್ಲಿ ಪುರೋಹಿತರು ಪ್ರಮುಖ ಪಾತ್ರ ವಹಿಸುತ್ತಾರೆ.

ಮನೆಯ ತಲೆ ಬಾಗಿಲಿನಲ್ಲಿ ನೆಟ್ಟಿದ್ದ ಸಣ್ಣ ಚಪ್ಪರದ ಕೆಳಗೆ ಬಲಭಾಗದಲ್ಲಿ ಒಂದು ತೂರುವ ತಟ್ಟೆಯಲ್ಲಿ ಜೋಳದ ಹಕ್ಕಿಯನ್ನು ಇಡುತ್ತಾರೆ. ಮತ್ತೊಂದೆಡೆಯಲ್ಲಿ ತಪ್ಪರದ ಎಡಭಾಗದಲ್ಲಿ ಬೀಸುವ ಕಲ್ಲನ್ನು ಇಟ್ಟಿರುತ್ತಾರೆ. ತೂರುವ ತಟ್ಟೆಯಲ್ಲಿ ವರನನ್ನು ಬೀಸುವ ಕಲ್ಲಿನಲ ಮೇಲೆ ವಧುವನ್ನು ನಿಲ್ಲಿಸುತ್ತಾರೆ. ಇಷ್ಟಾದ ಮೇಲೆ ಪುರೋಹಿತರು ಸಂಸ್ಕೃತ ಶ್ಲೋಕ ಪಠಿಸಿ ಮಾಂಗಲ್ಯ ಕಟ್ಟಿಸುತ್ತಾರೆ.

ಹತ್ತಿಕಂಕಣ ಆಹಾರ ಪದ್ಧತಿಯನ್ನು ಗಮನಿಸಿದರೆ ಇವರು ಹೆಚ್ಚು ಶಾಖಾಹಾರಿಗಳು. ಕಾರಣ ಲಿಂಗಾಯತ ಧರ್ಮದ ಪ್ರಭಾವಕ್ಕೆ ಒಳಗಾಗಿರಬಹುದು. ಕಡಿಮೆ ಮಾಂಸಾಹಾರಿಗಳಾಗಿ ಕಂಡುಬರುತ್ತಾರೆ. ತುಮಕೂರು ಜಿಲ್ಲಾ ಸಿರಾ ತಾಲೂಕಿನ ಕೆಲವು ಪ್ರದೇಶಗಳಲ್ಲಿ ಕಂಡುಬರುವಂತೆ ಹತ್ತಿಕಂಕಣ ಕುರುಬರಲ್ಲಿ ಮದುವಣಿಗೆ ಶಾಸ್ತ್ರದ ದಿವನ ಮದುವೆಯ ಮುಂಚೆ ಅಂದರೆ ಒಂಬತ್ತು ದಿನ ಮುಂಚೆ ಗೋಧಿ, ಹತ್ತಿಕಾಳು, ರಾಗಿಯನ್ನು ನೆನೆಹಾಕಿ ಮೊಳಕೆ ಬಂದ ಧಾನ್ಯಗಳನ್ನು ಗಂಗಾಪೂಜೆ ಮಾಡುವ ಮೂಲಕ ಧಾನ್ಯಗಳ ಪೂಜೆಯನ್ನು ವಧುವಿನ ಕೈಯಲ್ಲಿ ಮಾಡಿಸುವ ವಿಶೇಷ ಆಚರಣೆಯೊಂದು ಕಂಡುಬರುವುದು ಈ ಪ್ರದೇಶದ ವೈಶಿಷ್ಟ್ಯ. ಇದು ಮುಂದೆ ವಂಶಾಭಿವೃದ್ಧಿಯ ಸಂಕೇತವೆನಿಸುತ್ತದೆ.

ಹಬ್ಬ-ಹರಿದಿನಗಳ ಹಿನ್ನೆಲೆಯಲ್ಲಿ ಅವಲೋಕಿಸಿದಾಗ ಈ ತಾಲೂಕಿನಲ್ಲಿ ಮಾತ್ವೇ ಕಂಡುಬರುವ ಗೌರಮ್ಮ ಕೊಂತಮ್ಮ. ಇದನ್ನು ವಿಶೇಷವಾಗಿ ದೀಪಾವಳಿ ಆದ ಹದಿನೈದು ದಿನಗಳ ನಂತರ ಆಚರಿಸುವರು. ಮೊದಲನೆ ದಿನ ಗೌರಮ್ಮನನ್ನು ಪೂಜಿಸಿ ಸಿಹಿ ಅಡುಗೆ ಮಾಡಿದರೆ, ಎರಡನೆ ದಿನ ಮಾಂಸದೂಟವನ್ನು ಮಾಡಿ ನೆಂಟರಿಷ್ಟರನ್ನು ಆಹ್ವಾನಿಸಿ ಸಂಭ್ರಮಿಸುವರು. ಹತ್ತಿಕಂಕಣ ಕುರುಬರ ಮನೆಯ ಅಳಿಯಂದಿರು ಹೋದಾಗ ಆತನನ್ನು ಕುರಿತು ಹಾಡುಗಳನ್ನು ಕಾಡಿ ಕಳುಹಿಸುತ್ತಾರೆ. ಇದು ಬೇರೆ ಎಲ್ಲಿಯೂ ಕಾಣದಿರುವ ಸಂಗತಿಯಾಗಿದೆ.

ತುರುವೇಕೆರೆ ತಾಲೂಕಿನ ದಂಡಿನಶಿವರದ ಹತ್ತಿಕಂಕಣ 'ಹರಿಣಿ' ಮದುವೆ ಎಂಬ ಆಚರಣೆಯು ರೂಢಿಯಲ್ಲಿದ್ದು, ಇದರ ವೈಶಿಷ್ಟವೆಂದರೆ ಎಲ್ಲ ಮದುವೆ ಶಾಸ್ತ್ರಗಳನ್ನು ವಿಧವೆಯರು ನೆರವೇರಿಸುತ್ತಾರೆ. ಧಾರೆ ಮಹೂರ್ತದ ಚಪ್ಪರಕ್ಕೆ ಇವರು ಕಳ್ಳಿಕಡ್ಡಿ ಮತ್ತು ಹತ್ತ ಟೊಂಗೆಯನ್ನು ಕಟ್ಟುವ ಮೂಲಕ ಗಂಡು ಹೆಣ್ಣಿನ ಕೈಗಳಿಗೆ ಹಾಲು ಹಾಕಲಾಗುತ್ತದೆ. ಈ ಆಚರಣೆ ಮತ್ತೆಲ್ಲಿಯೂ ಕಂಡುಬರದು. ಒಟ್ಟಿನಲ್ಲಿ ಕುರುಬ ಸಮುದಾಯದಲ್ಲಿ ಹತ್ತಿಕಂಕಣ ಕುರುಬರದು ಪ್ರಮುಖವಾದ ಉಪಪಂಗಡವಾಗಿದೆ.

**ಗ್ರಂಥ ಋಣ**

೧. ಕುರುಬರ ಹೆಜ್ಜೆಗಳು, ಚಂದ್ರಕಾಂತ ಬಿಜ್ಜರಗಿ.

೨. ಕುರುಬರ ಗುರು ಒಡೆಯರು, ಡಾ. ಎಫ್. ಟಿ. ಹಳ್ಳಿಕೇರಿ.

೩. ಯಡೆಕುಂಟೆ ಗೆಣೆಸಾಲು, ಪ್ರೊ. ಎಸ್. ಜಿ. ಸಿದ್ದರಾಮಯ್ಯ.

೪. ಹೊಳೆದಂಡೆ ಕರಿಕೆ, ಡಾ. ಚಿಕ್ಕಣ್ಣ ಯಣ್ಣೆಕಟ್ಟೆ.

## ೬. ಉಣ್ಣೆಕಂಕಣ ಕುರುಬರು

ಈ ಸಮ್ಮೇಳದಲ್ಲಿ ಚರ್ಚೆಯಾಗುತ್ತಿರುವ ವಿಷಯಗಳ ಪರಿಕಲ್ಪನೆ ಎರಡು ಉದ್ದೇಶಗಳಿಂದ ಮಹತ್ವ ಪಡೆದಿದೆ. ಒಂದನೆ ಉದ್ದೇಶವೆಂದರೆ ಜಾಗತಿಕ ಸಂಸ್ಕೃತಿ ತನ್ನ ಏಕರೂಪಿ ಸಂಸ್ಕೃತಿಯನ್ನು ಭಾರತೀಯ ಸಮುದಾಯಗಳ ಮೇಲೆ ಒತ್ತಾಯ ಪೂರ್ವಕವಾಗಿ ಹೇರುವ ರಾಜಕಾರಣವನ್ನು ಹೊಡೆದು ಹಾಕುವುದು. ಅಂದರೆ, ಈಗ ಜಾಗತಿಕ ಮಟ್ಟದಲ್ಲಿ ಖಾಸಗೀಕರಣದವರು ಭಾರತ ದೇಶದ ಸಾಮಾಜಿಕ ವ್ಯವಸ್ಥೆಯೊಳಗೆ ಜಾತಿ ಅನ್ನುವುದು ಇಲ್ಲ. ಅದು ಕೇವಲ ಭ್ರಮೆ ತನ್ನುವ ಪರಿಕಲ್ಪನೆಯಲ್ಲಿ ಅಧ್ಯಯನಗಳನ್ನು ಮಾಡಿಸಿ ಮಂಡಿಸುತ್ತಿದ್ದಾರೆ. ಇದರ ಹಿಂದಿನ ರಾಜಕಾರಣವೆಂದರೆ ತಮ್ಮದೆಯಾದ ಅಥವಾ ತಮ್ಮ ಅನುಕೂಲಕ್ಕೆ ಉಪಯೋಗ ಆಗುವಂತೆ ತಾವೇ ಸೃಷ್ಟಿಸಿಕೊಂಡಿರುವ ಸಂಸ್ಕೃತಿಯನ್ನು ಜಾರಿಗೆ ತರುವುದು. ಇದನ್ನು ಜಾರಿಗೆ ತರುವುದಕ್ಕೆ ನಮ್ಮಲ್ಲಿರುವ 'ಬಹುಸಂಸ್ಕೃತಿ' ಅಡ್ಡಿಯನ್ನುಂಟು ಮಾಡುತ್ತಿದೆ. ಹಾಗಾಗಿ ಬಹುಸಂಸ್ಕೃತಿಯನ್ನು ಹೊಡೆದು ಹಾಕುವುದಕ್ಕೆ ಜಾತಿ ವ್ಯವಸ್ಥೆಯೇ ಇಲ್ಲವೆಂದು ಪ್ರತಿಪಾದನೆ ಮಾಡುವುದಕ್ಕೆ ಹೊರಟಿದ್ದಾರೆ. ಇದು ಪೂರ್ವ ಸಿದ್ಧತಾ ಫಲಿತವೇ ಹೊರತು ವಾಸ್ತವ ಅಲ್ಲ. ಇದರಿಂದ ಹಲವು ಅಪಾಯಗಳು ಆಗುತ್ತಿವೆ. ನಮ್ಮದೆಯಾದ ಸಂಸ್ಕೃತಿ, ವಿಸ್ಮೃತಿ ಆಗುತ್ತಿದೆ. ಏಕೆಂದರೆ ಈ ಅಧ್ಯಯನ ವಿಧಾನ ವಾಸ್ತವ ಸಂಗತಿಯನ್ನು ಬಚ್ಚಿಡುತ್ತದೆ. ದೇಶಿ ಸಮುದಾಯಗಳನ್ನು ಅಪರಾಧಿಗಳನ್ನಾಗಿ ಮಾಡುತ್ತಿದೆ. ಸಂಸ್ಕೃತಿ ಇವರ ವಾದದಂತೆ ಇಲ್ಲ. ನಮ್ಮ ಜಾತಿ ಮೂಲವಾದ ಸಂಸ್ಕೃತಿ ಇದೆ. ಜಾತಿ ಮೂಲವಾದ ಭಾಷೆ ಇದೆ. ಜಾತಿ ಮೂಲವಾದ ಆಹಾರ ಪದ್ಧತಿ ಇದೆ. ಜಾತಿ ಮೂಲವಾದ ಧರ್ಮವಿದೆ. ಜಾತಿ ಮೂಲವಾದ ನಂಬಿಕೆಗಳು, ನಡಾವಳಿಗಳು ಇವೆ. ಇಲ್ಲಿ ಸಾವಿರ ಜಾತಿಗಳಿದ್ದರೆ ಸಾವಿರ ಭಾಷೆಗಳಿವೆ. ಸಾವಿರ ಕಲ್ಪನೆಗಳಿವೆ. ಸಾವಿರ ಆಚರಣೆಗಳಿವೆ. ಇವೇ ಸಾಮಾಜಿಕ ಸತ್ಯಗಳು. ಪ್ರತಿಯೊಂದು ಸಂಸ್ಕೃತಿಯಲ್ಲೂ ಅದರದೇ ಆದ ವಾಸ್ತವವಿದೆ. ಜೀವ ಚೈತನ್ಯವಿದೆ. ಜ್ಞಾನವಿದೆ. ವಿವೇಕವಿದೆ. ಈ ಪರಿಕಲ್ಪನೆಗಳು ಜಾತಿ, ಧರ್ಮ, ಲಿಂಗ ಜನಾಂಗಗಳ ಆಧಾರದಲ್ಲಿ ಭಿನ್ನ ಸಮುದಾಯಗಳಾಗಿ ಜೀವಂತವಾಗಿವೆ. ಇವುಗಳು ಶ್ರೇಷ್ಠವೆಂದಲ್ಲ. ಕೆಳಜಾತಿ ಕೆಳವರ್ಗಗಳು ಅದೇ ವ್ಯವಸ್ಥೆಯ ಪ್ರತಿಷ್ಠಿತ ಜಾತಿ ವರ್ಗಗಳಿಂದ ತುಳಿತಕ್ಕೆ ಒಳಗಾಗಿವೆ. ಮೌಢ್ಯ ಜೀವ ವಿರೋಧಿ ಗುಣಗಳಿರುವಂತೆ ಇಲ್ಲಿ ಅಪಾರವಾದ ಜೀವಪರ ಮೌಲ್ಯಗಳಿವೆ. ಜೀವ ಚೈತನ್ಯವು ಇದೆ. ಈ ಚೈತನ್ಯವನ್ನು ಶೋಧಿಸಿ ಪ್ರಸ್ತುತ ಸಂದರ್ಭಕ್ಕೆ ತಕ್ಕಂತೆ ಅನವಯಿಸಿಕೊಳ್ಳುವುದರ ಮೂಲಕ ಪ್ರತಿಷ್ಠಿತರ ಆಲೋಚನ ವಿನ್ಯಾಸಗಳು ಬದಲಿಸಬಹುದು. ಇದು 'ಜಾಗತಿಕ ಏಕರೂಪಿ ಚಿಂತನೆ'ಯ ತಾತ್ವಿಕತೆಯನ್ನೂ ದುರ್ಬಲಗೊಳಿಸಲು ನೆರವಾಗುತ್ತದೆ. ಈ ಕುರಿತು ನಮ್ಮ ಸಮುದಾಯಗಳಿಗೆ ತಿಳಿಸಿ ಹೇಳಬೇಕಾದ ತುರ್ತು ನಮ್ಮ ಮುಂದಿದೆ' (ರಹಮತ್; ಪ್ರತಿಸಂಸ್ಕೃತಿ, ೧೯೯೩, ಪು. ೧೬-೧೮). ಜೊತೆಗೆ ನಮ್ಮಲ್ಲಿರುವ ಜ್ಞಾನಶಿಸ್ತುಗಳನ್ನು ಹೊಸದಾಗಿ ಸಮರ್ಥಿಸಿಕೊಳ್ಳಬೇಕಾದ ಅನಿವಾರ್ಯತೆ ದಿನ ದಿನಕ್ಕೆ ಹೆಚ್ಚುತ್ತಲಿದೆ. ಹಾಗಾಗಿ ಹಾಲುಮತ ಸಮುದಾಯಗಳ ಕುಲಗಳ ಮಹತ್ವವನ್ನು ತಿಳಿಸಿ ಹೇಳುವ ಕೆಲಸವನ್ನು ಇವತ್ತಿನ ಸಮ್ಮೇಳನ ಮಾಡುತ್ತಿದೆ.

ಎರಡನೆ ಉದ್ದೇಶವೆಂದರೆ ಸಮುದಾಯ ಚರಿತ್ರೆಯನ್ನು ಸಮಷ್ಠಿ ನೆಲೆಯಲ್ಲಿ ಅರ್ಥೈಸಿಕೊಳ್ಳುವುದು ಅಥವಾ ಕಟ್ಟಿಕೊಳ್ಳುವುದು. ಒಂದು ಸಮುದಾಯದಲ್ಲಿರುವ ಕುಲಗಳು ಆ ಸಮುದಾಯದ ಸಾಂಸ್ಕೃತಿಕ ಅಸ್ಮಿತೆಗಳು. ಸಮಾಜದ ಹಲವು ಕಾರಣಗಳಿಂದ ಬಿಡಿ ಬಿಡಿ ಘಟಕಗಳಾಗಿ ರೂಪ ತಾಳಿರುತ್ತವೆ. ಈ ಸಮುದಾಯದ ಸಾಂಸ್ಕೃತಿಕ ಚರಿತ್ರೆಯನ್ನು ಗ್ರಹಿಸುವಾಗ ಆ ಎಲ್ಲಾ ಕುಲಗಳ ಸಾಂಸ್ಕೃತಿಕ ಕಥನಗಳನ್ನು ಒಟ್ಟಿಗೆ ಸೇರಿಸಿಯೇ ಅರ್ಥೈಸಿಕೊಳ್ಳಬೇಕು. ಆಗ ಸಮುದಾಯದ ಸಮಷ್ಠಿ ಚರಿತ್ರೆಯನ್ನು ಕಟ್ಟಿಕೊಳ್ಳುವುದಕ್ಕೆ ಸಾಧ್ಯ. ಹಾಲುಮತ ಸಮುದಾಯಕ್ಕೆ ಈ ಬಗೆಯ ಅಧ್ಯಯನದ ಮಹತ್ವ ಇನ್ನೂ ಹೆಚ್ಚು.ಈ ಸಮುದಾಯದ ಸಂರಚನೆ ವಿಭಿನ್ನ. ಇಲ್ಲಿ ಸಾವಿರಾರು ಕುಲಗಳಿವೆ. ಹತ್ತಾರು ಪಂಗಡಗಳಿವೆ. ಅವುಗಳೆಲ್ಲವೂ ಭಿನ್ನವಾದ ಚರಿತ್ರೆಯನ್ನು ಹೇಳುತ್ತಿವೆ. ಸಂರಚನೆಯಲ್ಲೂ ಅಲ್ಲದೆ ಪ್ರಾದೇಶಿಕತೆಯಲ್ಲೂ ಭಿನ್ನತೆಗಳಿವೆ. ಉದಾಹರಣೆಗೆ 'ಕುಲದ ಪ್ರಜ್ಞೆ' ಅಥವಾ 'ಕುಲ ಆರಾಧನೆ'ಯ ಮಹತ್ವ ಮತ್ತು ವಿಧಾನವನ್ನು

ನೋಡುವುದಾದರೆ ಉತ್ತರ ಕರ್ನಾಟಕದ ಹಾಲುಮತಸ್ಥರಿಗಿಂತ ದಕ್ಷಿಣ ಕರ್ನಾಟಕದ ಹಾಲುಮತಸ್ಥರಲ್ಲಿ ಹೆಚ್ಚಾಗಿದೆ. ಗೋತ್ರ(ಕುಲ)ಕ್ಕೆ ಒಂದು ಕುಲದೈವ ಮತ್ತು ಆ ದೈವವನ್ನು ಆರಾಧನೆ ಮಾಡುವುದಕ್ಕೆ ಒಂದು ದೇವಾಲಯ ಇರಲೇಬೇಕು ಎನ್ನುವ ಪದ್ಧತಿ ಇದೆ. ಕುಲ ದೈವದ ದೇವಾಲಯವನ್ನು ಹೊಂದಿರದ ಕುಲವನ್ನು ಬೆಳವಣಿಗೆ ಹೊಂದಿದ ಕುಲವೆಂದು ಪರಿಗಣಿಸುತ್ತಾರೆ. ಈ ಪರಿಕಲ್ಪನೆ ಇವತ್ತಿನದಲ್ಲ, ಪ್ರಾಚೀನವಾದದು. ಐದು-ಆರು ದಶಕಗಳಿಂದೀಚೆಗೆ ಇನ್ನೂ ಹೆಚ್ಚಾಗಿದೆ. ಹಾಗಾಗಿಯೇ ಕೆಲವೊಂದು ಗ್ರಾಮಗಳಲ್ಲಿ ಆರರಿಂದ ಎಂಟು ಹಾಲುಮತದ ಆರಾಧ್ಯ ದೈವಗಳ ದೇವಾಲಯಗಳನ್ನು ಕಾಣಬಹುದು. ಇತರ ಸಮುದಾಯಗಳಲ್ಲಿ ಈ ಪರಿಕಲ್ಪನೆ ತುಂಬಾ ಕಡಿಮೆ. ಕುಲದ ಅಥವಾ ಮನೆತನದ ಧಾರ್ಮಿಕ ಆಚರಣೆಗಳ ಸಂದರ್ಭದಲ್ಲಿ ಕುಲದೈವಕ್ಕೆ ಮೊದಲ ಆದ್ಯತೆ, ಕುಲದೈವಕ್ಕೆ ಪೂಜೆ ಸಲ್ಲಿಸಿದ ನಂತರವೇ ಆಚರಣೆಗಳನ್ನು ಆರಂಬಿಸುತ್ತಾರೆ. ಕೆಲವೊಂದು ಗ್ರಾಮಗಳಲ್ಲಿ ಎರಡು ಮೂರು ಕುಲದೈವಗಳ ದೇವಾಲಯಗಳಿವೆ. ಒಂದು ಹಳೆಯದು ಮತ್ತೊಂದು ಹೊಸದು. ಮೊದಲ ಪೂಜೆ ಹಳೆ ದೇವಾಲಯಗಳಲ್ಲಿ ನಡೆಯಬೇಕು ಅನ್ನುವುದು ಇವರ ನಿಯಮ. ಪ್ರಾಚೀನ ದೇವಾಲಯಗಳನ್ನೇ ನಮ್ಮ ದೈವದ ಮೂಲ ನೆಲೆಯೆಂದು ಆವಿಸಿ ಆರಾಧನೆ ಮಾಡುತ್ತಾರೆ. ಈ ನಂಬಿಕೆ ಒಂದು ಗ್ರಾಮದಿಂದ ಮತ್ತೊಂದು ಗ್ರಾಮಕ್ಕೆ ವಲಸೆ ಹೋದ ಮತ್ತು ಗ್ರಾಮಕ್ಕೆ ಗ್ರಾಮವೇ ಸ್ಥಳಾಂತರವಾದ ಹಾಲುಮತಸ್ಥರಲ್ಲೂ ಇದೆ. ತಮ್ಮ ಪೂರ್ವಜರು ವಾಸವಾಗಿದ್ದ ಗ್ರಾಮದ ದೇವಾಲಯಗಳ ಸ್ಥಳಗಳನ್ನೇ ತಮ್ಮ ದೈವಗಳ ಮೂಲಸ್ಥಳಗಳೆಂದು ಭಾವಿಸಿ ಆರಾಧಿಸುತ್ತಿದ್ದಾರೆ. ಹೊಸದುರ್ಗ ತಾಲೂಕು 'ಕಡ್ಲೆಕಂಸಾಗರ' ಗ್ರಾಮದಲ್ಲಿ ಈ ಬಗೆಯ ಆವರಣೆಗಳನ್ನು ಕಾಣಬಹುದು. ಈಗ ಕಡ್ಲೆಕಂಸಾಗರ ಗ್ರಾಮದಲ್ಲಿ ಜನವಸತಿ ಇಲ್ಲ. ಹಿಂದೆ ಹೆಚ್ಚು ಜನರು ವಾಸವಾಗಿದ್ದು ಕುರುಹುಗಳು ದಟ್ಟವಾಗಿವೆ. ಬೀರಪ್ಪ ರೇವಣಸಿದ್ಧ ಮತ್ತು ಇಂಡೆ ಮಲ್ಲಿಕಾರ್ಜು ದೈವಗಳ ದೇವಾಲಯಗಳಿವೆ. ಬೀರಪ್ಪ ದೇವಾಲಯ ಶಿಥಿಲಾವಸ್ಥೆ ತಲುಪಿದೆ. ಉಳಿದೆರಡು ದೇವಾಲಯಗಳು ಚೆನ್ನಾಗಿವೆ. ಈ ದೈವಗಳನ್ನು ಪೂಜೆ ಮಾಡುವ ಪೂಜಾರಿ ಮನೆತನಗಳಿವೆ. ಅವರು ಸಹ ಸುತ್ತಮುತ್ತಲಿನ ಹಳ್ಳಿಗಳಲ್ಲಿ ವಾಸವಾಗಿದ್ದಾರೆ. ಪೂಜಾ ಕಾರ್ಯಕ್ಕಾಗಿ ದಿನಾಲು ಬಂದು ಹೋಗುತ್ತಾರೆ. ಪೂಜಾರಿಗಳು ಇದು ನಮ್ಮ ಪಾರಂಪರಿಕ ವೃತ್ತಿ. ನಮ್ಮ ಮನೆತನದ ಹಕ್ಕು. ಐದಾರು ತಲೆಮಾರುಗಳಿಂದಲೂ ಈ ಕಾರ್ಯವನ್ನು ಮಾಡಿಕೊಂಡು ಬಂದಿದ್ದೇವೆ ಎನ್ನುತ್ತಾರೆ. ಸುಮಾರು ಐದು ಶತಮಾನದ ಕೆಳಗೆ ಉತ್ತರ ಕರ್ನಾಟಕದ ಕುರುಬರು ಗುಂಪಾಗಿ ಇಲ್ಲಿಗೆ ವಲಸೆ ಬಂದು ನೆಲೆಸಿದ ಗ್ರಾಮವಿದು. ಇಲ್ಲಿ ನೆಲೆಸಿದವರು ೧೦-೨೦ ಕಿಲೋಮೀಟರ್‌ಅಂತರದ ಸುತ್ತಮುತ್ತಲಿನ ಹಳ್ಳಿಗಳಕ್ಕಿ ನೆಲೆಸಿದ್ದಾರೆ. ಅವರು ನೆಲೆಸಿದ ಸ್ಥಳಗಳಲ್ಲಿ ಅದೇ ದೈವಗಳ ಗುಡಿಗಳನ್ನು ಕಟ್ಟಿಕೊಂಡಿದ್ದಾರೆ. ಆ ದೈವಗಳ ಜಾತ್ರೆಗಳನ್ನು ಆರಂಭಿಸುವಾಗ ಕಂಸಾಗರದಲ್ಲಿರುವ ದೈವಗಳನ್ನು ಪೂಜಿಸಿ, ಅಪ್ಪಣೆ ಪಡೆದು ಆರಂಭಿಸುವ ಪದ್ಧತಿ ಇವರಲ್ಲಿದೆ.

ಕಂತೆಸೇವೆ, ತೋಪುಜಾತ್ರೆ, ದೊಡ್ಡ ದೇವರ ಜಾತ್ರೆ ಮುಂತಾದ ಜಾತ್ರೆಗಳಲ್ಲಿ ಒಂದೊಂದು ಕಡೆ ಸೇರುವ ಮತ್ತು ಒಟ್ಟಾಗಿ ಸೇರಿ 'ಎಡೆ'ಯನ್ನು ಅರ್ಪಿಸುವ ವಿಧಾನ ಭಿನ್ನವಾದದು. ತೋಪು ಜಾತ್ರೆ ಮತ್ತು ದೊಡ್ಡದೇವರ ಜಾತ್ರೆಗಳಿಗೆ ಆ ದೈವದ ಗುಡಿಕಟ್ಟು ವ್ಯವಸ್ಥೆಗೆ ಸೇರಿದ ಏಳು ಕುಲದವರು ಸುಮಾರು ಎಪ್ಪತ್ತು-ಎಂಬತ್ತು ಹಳ್ಳಿಗಳಲ್ಲಿ ವಾಸವಾಗಿದ್ದಾರೆ. ಜಾತ್ರೆಯಲ್ಲಿ ಅಷ್ಟು ಗ್ರಾಮಗಳ ಒಂದೊಂದು ಕುಲದವರು ಒಂದು ಕಡೆ ನೆಲೆಸುವ ವಿಧಾನ ಗಮನ ಸೆಳೆಯುತ್ತದೆ. ನಾವೆಲ್ಲ ಒಂದೇ ಮನೆತನಕ್ಕೆ ಸೇರಿದವರು. ಅಣ್ಣ-ತಮ್ಮಂದಿರು ಎನ್ನುವುದು ಇವರ ಅಭಿಪ್ರಾಯ. ಈ ವಿಧಾನ 'ಕುಲಭದ್ಧತೆ'ಯನ್ನು ಪ್ರತಿಬಿಂಬಿಸುತ್ತದೆ. ಇಂತಹ ಹಲವು 'ಕುಲ ಬದ್ಧತೆ' ನಿಯಮಗಳು ಹಾಲುಮತ ಸಂಸ್ಕೃತಿಯಲ್ಲಿವೆ. ಸೈದ್ಧಾಂತಿಕವಾಗಿ ಇವುಗಳ ಅಧ್ಯಯನ ಆಗಬೇಕಾಗಿದೆ. ಮೊದಲು ಇವುಗಳ ಬಿಡಿ ಬಿಡಿ ಅಧ್ಯಯನ ಆಗಬೇಕು. ಬಹಳ ಹಿಂದೆಯೇ ಈ ಕೆಲಸ ಆಗಬೇಕಾಗಿತ್ತು. ಈಗ ಆರಂಭವಾಗಿದೆ. ಒಂದೇ ವೇದಿಕೆಯಲ್ಲಿ ಹದಿನೆಂಟು ಪಂಗಡಗಳ; ಕುಲಗಳ ಚರ್ಚೆ ನಡೆಯುತ್ತಿದೆ. ಹಾಲುಮತ ಸಂಸ್ಕೃತಿಯಲ್ಲಿ ಇಷ್ಟೊಂದು ಕುಲಗಳ ಚರ್ಚೆ ಒಂದೇ ವೇದಿಕೆಯಲ್ಲಿನ ಡೆಯುತ್ತಿರುವುದು ಇದು ಮೊದಲ ಬಾರಿ

* * *

ಹಾಲುಮತ ಸಮುದಾಯದಲ್ಲಿ ಪ್ರಮುಖವಾಗಿ ಕಾಣಿಸಿಕೊಳ್ಳುವ ಪಂಗಡಗಳೆಂದರೆ 'ಹತ್ತಿಕಂಕಣ' ಮತ್ತು 'ಉಣ್ಣೆ ಕಂಕಣ'. ಇವುಗಳನ್ನು ಅತ್ಯಂತ ಪ್ರಾಚೀನ ಪಂಗಡಳೆಂದೂ ಕರೆಯುತ್ತಾರೆ.' 'ಕಂಕಣ' ಅನ್ನುವುದು ಇಲ್ಲಿ ವಿಶಾಲವಾದ ಅರ್ಥವನ್ನು ಪಡೆದುಕೊಂಡಿದೆ. 'ಕುಲ', 'ಪಂಗಡ' ಮತ್ತು 'ಮನೆತನ' ಎನ್ನುವ ಅರ್ಥದಲ್ಲಿ ಜೀವಂತವಾಗಿದೆ. 'ಉಣ್ಣೆಕಂಕಣ'ವನ್ನು ಹೇಳುವ ಸೃಷ್ಟಿ ಮೂಲ ಕಥನಗಳು ಇದಕ್ಕೆ ಹೊರತಾಗಿಲ್ಲ. 'ಕಂಕಣ' ಅನ್ನುವುದು ಅವರ ಕುಲವನ್ನು ಗುರುತಿಸಿಕೊಳ್ಳುವುದಕ್ಕೆ ಬಳಕೆಯಾದ ಸಾಂಕೇತಿಕ ವಸ್ತು. ಹತ್ತಿ ಕಂಕಣದವರು

ಹತ್ತಿಯನ್ನು ಸಾಂಕೇತಿಕ ವಸ್ತುವನ್ನಾಗಿ ಮಾಡಿಕೊಂಡರೆ, ಉಣ್ಣೆಕಂಕಣದವರು ಉಣ್ಣೆಯನ್ನು ಸಾಂಕೇತಿಕ ವಸ್ತುವನ್ನಾಗಿ ಮಾಡಿಕೊಂಡಿದ್ದಾರೆ. ಇವು ಅವರವರ 'ಕುಲಚಿಹ್ನೆ'ಯು ಹೌದು. "ಒಂದು ಮಾತನ್ನು ಇಲ್ಲಿ ಗಮನಿಸಬೇಕು. ಆರಂಭದಲ್ಲಿ ಕುಲ ಚಿಹ್ನೆ ಅವರನ್ನು ಅವರು ಗುರುತಿಸಿಕೊಳ್ಳುವ ಸಾಧನವಾಗಿತ್ತೇ ಹೊರತು ದೈವವಾಗಿರಲಿಲ್ಲ. ಆದರೆ ಬರು ಬರುತ್ತಾ ಆಯಾ ಗುಂಪುಗಳಲ್ಲಿ ಬಲಾಢ್ಯ ಮತ್ತು ದುರ್ಬಲ ಎಂಬ ಗುಂಪುಗಳಾದವು. ಒಂದು ಮತ್ತೊಂದನ್ನು ನಿಯಂತ್ರಿಸಬಯಸಿತು. ಸಮಾಜದಲ್ಲಿ ತನ್ನ ಸ್ಥಾನಮಾನವನ್ನು ಮೇಲೇರಿಸಿಕೊಂಡ ಲಾಂಛನ ಇತರರಿಗೂ ಅನುಸರಿಸಬೇಕಾದ ಅಥವಾ ಗೌರವಿಸಬೇಕಾದ ಸಂಗತಿಯಾಯಿತು. ಹೀಗೆ ಗೌರವಿಸಲ್ಪಟ್ಟ ಲಾಂಛನವೇ ಮುಂದೆ ದೈವವಾಗಿ ರೂಪುಗೊಂಡಿರಬೇಕು ಎನ್ನುವುದು ಅನೇಕ ವಿದ್ವಾಂಸರ ಅಭಿಪ್ರಾಯ" (ಹಿ.ಚಿ. ಬೋರಲಿಂಗಯ್ಯ, ದೇಸಿ ಸಂಸ್ಕೃತಿ ಸಂಕಥನ, ೨೦೦೮, ಪುಟ ೦೩). 'ಉಣ್ಣೆ' ಉಣ್ಣೆ ಕಂಕಣದವರಿಗೆ ಕೇವಲ ಲಾಂಛನ ಮಾತ್ರವಲ್ಲ. ದೈವವೂ ಹೌದು. ಹಾಗಾಗಿ ಉಣ್ಣೆ ಕಂಕಣದವರ ಚರಿತ್ರೆಯನ್ನು ಅರ್ಥೈಸಿಕೊಳ್ಳುವಾಗ ಅವರಲ್ಲಿ ಉಣ್ಣೆ ಬಳಕೆ ಆಗುತ್ತಿರುವ ಸ್ವರೂಪವನ್ನು ಮತ್ತು ಅದರ ಬಗ್ಗೆ ಕಟ್ಟಿಕೊಂಡಿರುವ ಕಥನಗಳನ್ನು ಮುಖ್ಯವಾಗಿಟ್ಟುಕೊಳ್ಳಬೇಕು. ಏಕೆಂದರೆ ಈ ಕಂಕಣದವರ ಬಗ್ಗೆ ಲಿಖಿತ ಆಧಾರದಗಳು ಸಿಗುವುದು ಕಡಿಮೆ. ಜೊತೆಗೆ ಆಚರಣೆಗಳೇ ಇವರ ಸಾಂಸ್ಕೃತಿಕ ಅಭಿವ್ಯಕ್ತಿ. ಆದ್ದರಿಂದ ಆಚರಣೆಗಳಲ್ಲಿ ವೃತ್ತಿಗಳಲ್ಲಿ ಉಣ್ಣೆಯನ್ನು ಬಳಸುತ್ತಿರುವ ವಿಆನಗಳ ಮೂಲಕ ಇವರ ಚರಿತ್ರೆಯನ್ನು ಸೈದ್ಧಾಂತಿಕವಾಗಿ ಕಟ್ಟಿಕೊಳ್ಳಬೇಕಾಗಿದೆ. ಆದರೆ ಜನನದಿಂದ ಮರಣದವರೆಗೂ ನಡೆಯುವ ಆಚರಣೆಗಳಲ್ಲಿ ಉಣ್ಣೆ ಈ ಕಂಕಣದವರಲ್ಲಿ ಹೇಗೆ ಬಳಕೆಯಾಗುತ್ತಿದೆ ಎನ್ನುವ ವಿವರಗಳನ್ನು ಸಂಗ್ರಹಿಸುವುದಕ್ಕೆ ನನ್ನಿಂದ ಆಗಿಲ್ಲ. ಆ ಕೊರತೆಯನ್ನು ಇಲ್ಲಿ ನೆರೆದ ವಿದ್ವಾಂಸರು ಮತ್ತು ಸಭಿಕರು ತುಂಬುತ್ತೀರಿ ಎನ್ನುವ ನಂಬಿಕೆ ನನ್ನದು. ಏಕೆಂದರೆ ಉಣ್ಣೆ ಕಂಕಣದವರು ಹೆಚ್ಚಾಗಿರುವ ಪ್ರದೇಶವಿದು. ಉಣ್ಣೆ ಕಂಕಣದವರು ಮತ್ತು 'ಕಂಬಳಿ' ನೇಯುವ ಜನರು ಹೆಚ್ಚಾಗಿರುವುದರಿಂದ ಮಾಹಿತಿ ಸಿಕ್ಕೇ ಸಿಗುತ್ತೆ ಅನ್ನುವ ನಂಬಿಕೆ ನನ್ನದು.

* * *

ಹತ್ತಿಕಂಕಣ ಮತ್ತು ಉಣ್ಣೆ ಕಂಕಣಗಳ ಸೃಷ್ಟಿಯನ್ನು ಹೇಳುವ ಅನೇಕ ಕಥನಗಳು ಸಿಗುತ್ತವೆ. ಇವು ಜನಪದವಾದುದರಿಂದ ಸಹಜವಾಗಿಯೇ ಹಲವಾರು ಪಠ್ಯಗಳಲ್ಲಿ ಪ್ರಸಾರವಾಗಿದೆ. ಇಲ್ಲಿ ಆ ಎಲ್ಲಾ ಪಠ್ಯಗಳನ್ನು ಹೇಳುವುದಿಲ್ಲ. ಒಂದು ಕಥನವನ್ನು ಹೇಳಿ ತೌಲನಿಕ ಅಧ್ಯಯನಕ್ಕಾಗಿ ಮತ್ತು ಕಥನಗಳಲ್ಲಿ ಆದ ರೂಪಾಂತರವನ್ನು ಹೇಳುವುದಕ್ಕಾಗಿ ಕೆಲವು ಪಠ್ಯಗಳಲ್ಲಿನ ಸಾಲುಗಳನ್ನು ಮಾತ್ರ ಹೇಳುತ್ತೇನೆ. ಒಂದು ಕಥನ ಹೀಗಿದೆ:

"ಭೃಂಗಿ ಕೈಲಾಸದಲ್ಲಿ ಶಿವ-ಪಾರ್ವತಿ ಒಡ್ಡೋಲಗದಲ್ಲಿರುವಾಗ ತನ್ನ ಮೂರು ಕಾಲುಗಳಿಂದ ನರ್ತನ ಮಾಡಿದ. ಇದನ್ನು ನೋಡಿದ ದೇವತೆಗಳು ಪರಿಹಾಸ್ಯದಿಂದ ನಕ್ಕರು. ಭೃಂಗಿಗೆ ಕೋಪ ಬಂತು. ಆ ಕೋಪದಲ್ಲಿ ನೀವು ಭೂಲೋಕದಲ್ಲಿ ಕುರಿಗಳಾಗಿ ಹುಟ್ಟಿ" ಎಂದು ಶಾಪ ಹಾಕಿದ. ದೇವತೆಗಳು ಕುರಿಗಳಾಗಿ ಹುಟ್ಟಿ ಭೂ ಲೋಕದ ಹುತ್ತವೊಂದರಲ್ಲಿ ಅಡಗಿ ಕುಳಿತರು. ಆ ಜಾಗ ಹಾಲುಮತದ ಮೂಲ ಪುರುಷನಾದ ಆದಿಗೊಂಡನಿಗೆ ಸೇರಿತ್ತು. ಆದಿಗೊಂಡನಿಗೆ ಏಳು ಜನ ಮಕ್ಕಳು. ಕೊನೆಯವನು ಪದ್ಮಣ್ಣ. ಈತ ಸೋಮಾರಿ. ಮನೆಯಲ್ಲಿ ಎರಡೊತ್ತು ಉಂಡು-ತಿಂದು ಕೆಲಸ ಮಾಡದೆ ತಿರುಗುತ್ತಿದ್ದ. ಹಾಗಾಗಿ ಈತನನ್ನು ಉಂಡಾಡು ಪದ್ಮಣ್ಣ ಎಂದು ಕರೆಯುತ್ತಿದ್ದರು. ಇವನ ಸೋಮಾರಿತನವನ್ನು ಅಣ್ಣಂದಿರು ಸಹಿಸುತ್ತಿರಲಿಲ್ಲ. ತೋಟದಲ್ಲಿ ಕೆಲಸಕ್ಕೆ ಬರುವಂತೆ ಹಲವು ಬಾರಿ ಒತ್ತಾಯ ಮಾಡಿದರೂ ಕೇಳಲಿಲ್ಲ. ಕೋಪಿತರಾದ ಅಣ್ಣಂದಿರು ಒಂದು ದಿವಸ ತಂದೆ-ತಾಯಿಯರ ಹತ್ತಿರ ಹೋಗಿ ಕೆಲಸಕ್ಕೆ ಕಳಿಸುವಂತೆ ಹಠ ಮಾಡುತ್ತಾರೆ. ಈ ಒತ್ತಡಕ್ಕೆ ಮಣಿದ ತಂದೆ ತಾಯಿ ಪದ್ಮಣ್ಣನನ್ನು ಹೊಲಕ್ಕೆ ಕಳಿಸಿದರು. ಹೊಲಕ್ಕೆ ಬಂದ ಪದ್ಮಣ್ಣನಿಗೆ ಅಣ್ಣಂದಿರು ಹುತ್ತವನ್ನು ಅಗೆಯಲು ಹೇಳಿದರು. ಅಲ್ಲಿ ದೇವತೆಗಳು ಭೃಂಗಿಯ ಶಾಪದಿಂದ ಕುರಿಗಳಾಗಿ ಕುಳಿತಿರುವುದು ಇವರ್ಯಾರಿಗೂ ತಿಳಿದಿರಲಿಲ್ಲ. ಪದ್ಮಣ್ಣ ಹುತ್ತವನ್ನು ಅಗೆದಾಗ ಕುರಿಗಳು ಹೊರಬಂದವು. ಇವುಗಳನ್ನು ನೋಡಿದ ಪದ್ಮಗೊಂಡ ಭಯಭೀತನಾದ. ಹೊರ ಬರದಂತೆ ತಡೆಯುವುದಕ್ಕೆ ಪ್ರಯತ್ನಿಸಿದ. ಬೆಂಕಿಯನ್ನು ಹಾಕಿದ. ಕೆಲವು ಕುರಿಗಳು ಸುಟ್ಟು ಹೊರಬಂದವಾದರೂ ನಿಲ್ಲಲಿಲ್ಲ. ಇದನ್ನು ಕಂಡು ಹೆದರಿದ ಪದ್ಮಣ್ಣ ಭಯದಿಂದ ಕಾಡಿನತ್ತ ಓಡಿದ ಕುರಿಗಳು ಆತನನ್ನು ಬಿಡಲೇ ಇಲ್ಲ. ಹಿಂದೆ ಹಿಂದೆ ಓಡಿಬಂದವು. ಸುಸ್ತಾಗಿ ಕಾಡಿನಲ್ಲಿ ನಿಂತಾಗ 'ನಮ್ಮನ್ನು ರಕ್ಷಿಸು ನಮ್ಮನ್ನು ರಕ್ಷಿಸು' ಎನ್ನುತ್ತ ಅವನನ್ನೇ ನೋಡುತ್ತ ನಿಂತವು. ಏನೂ ತೋಚದ ಪದ್ಮಣ್ಣ ಶಿವನನ್ನು ಪ್ರಾರ್ಥಿಸಿದ. ಪ್ರತ್ಯಕ್ಷನಾದ ಶಿವ ನೀನು

ಕುರಿಗಳನ್ನು ಕಾಪಾಡುವುದಕ್ಕಾಗಿಯೇ ಭೂ ಲೋಕದಲ್ಲಿ ಜನ್ಮ ತಾಳಿರುವೆ. ಆದ್ದರಿಂದ ನೀನು ಕುರಿಗಳನ್ನು ಕಾಯ್ದುಕೊಂಡು ಸುಖವಾಗಿ ಬಾಳು ಎಂದು ಹರಸಿ ಕಣ್ಮರೆಯಾದ.

ಶಿವನ ಮಾತಿನಂತೆ ಕುರಿಗಳನ್ನು ಕಾಯುತ್ತಾ ಅಲೆಮಾರಿಯಾದ ಪದ್ಮಣ್ಣನಿಗೆ ಊಟ ಸಿಗದೆ ಏಳು ದಿನಗಳ ಕಾಲ ಉಪವಾಸವಾಗಿದ್ದ. ಈ ಕಷ್ಟದ ಪರಿಸ್ಥಿತಿಯನ್ನು ಅರಿತ ಶಿವ ಪರೀಕ್ಷಿಸಲೆಂದೇ ಪದ್ಮಣ್ಣನ ಹತ್ತಿರ ಭಿಕ್ಷೆಗೆ ಬಂದ. ತಾನೂ ಉಪವಾಸವಿರುವ ಸಂಗತಿ ಅರುಹಿದ. ಶಿವ ಕುರಿಗಳನ್ನು ಹಿಡಿದುತಂದು ಹಾಲು ಹಿಂಡಿದ. ಕಪ್ಪರದೊಳಗೆ ಹಾಕಿ ಗಿಣ್ಣವನ್ನು ಮಾಡಿದ. ಇಬ್ಬರು ಸೇರಿ ಊಟ ಮಾಡಿದರು. ಅಗ್ನಿ ಇದ್ದಲ್ಲಿ ಹೀಗೆ ಅಡಿಗೆ ಮಾಡಿಕೊಂಡು ಊಟ ಮಾಡು ಎಂದು ಹರಸಿ ಶಿವ ಅಂತರ್ದಾನಾದ. ಪದ್ಮಣ್ಣನ ಕುರಿಗಾರಿಕೆಯ ಅಲೆಮಾರಿತನ ಮುಂದುವರೆಯಿತು. ಆತನಿಗೆ ಒಂದು ದನ ಬೆಂಕಿಯ ಅವಶ್ಯಕತೆಯುಂಟಾಯಿತು. ಬೆಟ್ಟವನ್ನು ಹತ್ತಿ ಸುತ್ತ ದೃಷ್ಟಿ ಹಾಯಿಸಿದ. ದೂರದಲ್ಲಿ ಹೊಗೆ ಬರುತ್ತಿರುವುದು ಕಾಣಿಸಿತು. ಕುತೂಹಲದಿಂದ ಅಲ್ಲಿಗೆ ಹೋದ. ಅದು ಗುಹೆ. ರಾಕ್ಷಸಿವಾಸ ಮಾಡಿದ್ದ ಸ್ಥಳವದು. ಗುಹೆ ಹೊಕ್ಕನು. ಒಳಗಡೆ ಸುಂದರ ಕನ್ಯೆ ಕಾಣಿಸಿದಳು. ಆಕೆ ರಾಕ್ಷಸಿಯಿಂದ ಅಪಹರಿಸಲ್ಪಟ್ಟ ಕನ್ಯೆ ಆಗಿದ್ದಳು. ಪದ್ಮಣ್ಣನನ್ನು ನೋಡಿದ ಕನ್ಯೆ ರಾಕ್ಷಸಿಯ ಬಂಧನದಿಂದ ಮುಕ್ತರನ್ನಾಗಿ ಮಾಡಿ ವಿವಾಹವಾಗುವಂತೆ ಬೇಡಿಕೊಂಡಳು. ಕೆಲವು ದಿನಗಳ ಕಾಲ ಅಲ್ಲಿಯೇ ತಂಗಿದ್ದ ಪದ್ಮಣ್ಣ ಕನ್ಯೆಯ ಸಹಾಯ ಪಡೆದು ರಾಕ್ಷಸಿಯನ್ನು ಸಂಹಾರ ಮಾಡಿದ. ತನ್ನ ಕುಲದೇವರಾದ ಬೀರೇಶನನ್ನು ನೆನೆದ. ಶಿವ-ಪಾರ್ವತಿಯರು ಪ್ರತ್ಯಕ್ಷರಾದರು. ಇವರಿಬ್ಬರ ಬೇಡಿಕೆಯನ್ನು ಆಲಿಸಿದ ಶಿವ-ಪಾರ್ವತಿಯರು ವಿವಾಹ ಕಾರ್ಯವನ್ನು ಆರಂಭಿಸಿದರು. ಆ ಸಂದರ್ಭದಲ್ಲಿ ಕಂಕಣಕ್ಕೆ ದಾರ ಸಿಗಲಿಲ್ಲ. ಕುರಿ ಉಣ್ಣೆಯನ್ನು ತಂದು ದಾರವನ್ನು ಮಾಡಿ ಪಾರ್ವತಿಯ ಕೊರಳಲ್ಲಿದ್ದ ಅರಿಶಿಣವನ್ನು ಹತ್ತಿ ಕಂಕಣ ಕಟ್ಟಿದರು. ನಂತರ ಪದ್ಮಣ್ಣನ ವಂಶದವರಗೆ 'ಉಣ್ಣೆ ಕಂಕಣ'ದವರೆಂದೂ ಆತನ ಅಣ್ಣಂದಿರು ವಂಶದವರಿಗೆ ಹತ್ತಿಕಂಕಣದವರೆಂದೂ ನಾಮಕರಣ ಮಾಡಿ ಕಣ್ಮರೆಯಾದರು.

* * *

ಈ ಕಥನದ ಕೊನೆಯಲ್ಲಿ ಕಾಣಿಸುವ ವಸ್ತು ಪರಿಕಲ್ಪನೆ ಓದುಗನಲ್ಲಿ ಅನೇಕ ಗೊಂದಲಗಳನ್ನು ಸೃಷ್ಠಿಸುತ್ತದೆ. ಪದ್ಮಗೊಂಡ ಮತ್ತು ಆತನ ಅಣ್ಣಂದಿರು ಹತ್ತಿಕಂಕಣ ಮತ್ತು ಉಣ್ಣೆ ಕಂಕಣದವರಾದರು ಅನ್ನುವುದು ಲಿಖಿತ ಹಾಲುಮತ ಪುರಾಣಗಳ ತಾತ್ವಿಕತೆ. ರಸ್ತಾಪುರ ಭೀಮಕವಿಯ ಹಾಲುಮತೋತ್ತೇಜಕ ಪುರಾಣ ಮತ್ತು ಇತರ ಹಾಲುಮತ ಪುರಾಣಗಳಲ್ಲಿ ಈ ಚಿತ್ರಣಗಳನ್ನೇ ಕಾಣಬಹುದು. ಆದರೆ ಜನಪದ ಹಾಲುಮತ ಮಹಾಕಾವ್ಯದಲ್ಲಿ ಕಾಣಿಸುವ ವಸ್ತು ಚಿತ್ರಣ ಭಿನ್ನವಾಗಿದೆ. ಪದ್ಮಗೊಂಡ ಮತ್ತು ಆತನ ಅಣ್ಣಂದಿರು ಎನ್ನುವ ಬದಲು ಪದ್ಮಗೊಂಡನ ಇಬ್ಬರು ಹೆಂಡತಿಯರ ಮಕ್ಕಳು ಎನ್ನುವ ಚಿತ್ರಣವಿದೆ.

"ತಾಯಿ ಮಕ್ಕಳು ಕೂಡಿದರಯ್ಯ ತಂದಿ ಮಕ್ಕಳು ಕೂಡಿದರಯ್ಯ
ತಂದಿ ಮಕ್ಕಳು ಕೂಡ್ಯಾರವರು ಮದುಮಗೊಂಡ ಹೇಳ್ಯಾನ
ಉಣ್ಣೆ ಕಂಕಣದವರಿಗಪ್ಪ ಹಿರಿಯಾ ಮಗನಂದಾರ
ಹತ್ತಿಕಂಕಣದವರಿಗಪ್ಪ ಸಣ್ಣ ಮಗನ ನೀನಯ್ಯ
ನೀನೇ ದೊಡ್ಡ ತಮ್ಮನೇ ಅವರೇ ಸಣ್ಣ ತಮ್ಮದೇರಾ
ಶಿವಲಿಂಗಮ್ಮನ ಮಕ್ಕಳಿಗಯ್ಯ ಹತ್ತಿಕಂಕಣದವರಿಗೆ
ಹತ್ತಿಕಂಕಣದವರಿಗಯ್ಯಾ ನೀವೇ ತಮ್ಮದೇರು ಅಂದಾಳು
ಮಡ್ಡಪ್ಪ ಪಾಲ ಕೊಟ್ಟಾನೆ ಅಣ್ಣದೇರು ಪಾಲ ಕೊಟ್ಟಾನ
ಶಿವಲಿಂಗಮ್ಮನ ಮಕ್ಕಳಿಗಯ್ಯಾ ಇಬ್ಬರಿಗೆ ಪಾಲು ಕೊಟ್ಟಾರ
ತಾಯಿದೇರಿಗೆ ಹಿಡಿದೇವೆ ತಂದಿನ ಬಿಟ್ಟು ಬಂದೀವೆ
ಸಿದ್ದಮ್ಮನ ಗಂಡ ಮದುಮಗೊಂಡ ಶಿವಲಿಂಗಮ್ಮನ ಗಂಡ ಪದುಮಗೊಂಡ
ಇಬ್ಬರ ಇಬ್ಬರಿಗಲ್ಲೇಳಯ್ಯ ಪದಮಗೊಂಡನಿದ್ದಾನೆ

ತಂದಿ ಹಿಡಿದು ಬಂದಾರೆ ನಾವೇ ಗೊಂಡಗುರುಬರೆ
ಕಾಡಿನಲ್ಲಿ ಇದ್ದರ ನಾವ ಕಾಕುರುಬರಾದೇವೆ
ಕಾಡುಕುರುಬರು ನಾವೇನಾದೇವು ಅಡವೀಯ ಕುರುಬರು ನಾವೇನ
ಗೊಂಡಕುರುಬರು ನಾವೇನಯ್ಯ ಪದಮಗೊಂಡನ ಮಕ್ಕಳೆ
ಗೊಂಡಗೋಳಾ ಪದಗೋಳಯ್ಯ ಇಲ್ಲಿಗೆ ಮುಗದಾವೇನಯ್ಯ"
(ವೀರಣ್ಣ ದಂಡೆ: ಜನಪದ ಹಾಲುಮತ ಮಹಾಕಾವ್ಯ, ಪುಟ ೪೮)

ಪದ್ಮಗೊಂಡನ ಮಕ್ಕಳೇ ಎರಡು ಪಂಗಡಗಳಾಗಿ ಕವಲೊಡೆದರು. ಜೊತೆಗೆ ಕಾಡುಕುರುಬ ಮತ್ತು ಗೊಂಡಗುರುಬ ಪಂಗಡಗಳ ಸೃಷ್ಟಿ ಮೂಲವನ್ನು ಹತ್ತಿಕಂಕಣ ಮತ್ತು ಉಣ್ಣೆ ಕಂಕಣ ಸೃಷ್ಟಿ ಮೂಲದೊಂದಿಗೆ ತಳಕು ಹಾಕೊಕೊಂಡಿದೆ. ಗೊಂಡ ಮತ್ತು ಕಾಡುಕುರುಬ ಕುಲಗಳ ಸೃಷ್ಟಿಯನ್ನು ಹೇಳುವ ವಿಧಾನ ಭಿನ್ನವಾದದು. ಇವೆರಡು ವಿಂಗಡನೆಗೊಂಡ ಕುಲಗಳಲ್ಲ. ವಾಸಿಸುವ ಪ್ರದೇಶದಿಂದ ಮತ್ತು ವಂಶವನ್ನು ಗುರುತಿಸುವ ಪದದ ಬಳಕೆಯ ಹಿನ್ನೆಲೆಯಲ್ಲಿ ನಾಮಾಂಕಿತ ಪಡೆದ ಕುಲಗಳು ಎನ್ನುವ ತಾತ್ವಿಕತೆಯನ್ನು ನಮ್ಮ ಮುಂದಿಡುತ್ತದೆ. ಕಾಡುಕುರುಬರಿಗೆ ಕಾಡಿನಲ್ಲಿ ವಾಸಿಸುವ ಕಾರಣಕ್ಕೆ ಈ ಹೆಸರು ಬಳಕೆಗೆ ಬಂತು ಎನ್ನುವುದನ್ನು ಹಲವು ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ಕಾಡುಕುರುಬ ಮತ್ತು ಗೊಂಡಗುರುಬ ಉಣ್ಣೆ ಕಂಕಣಕ್ಕೆ ಸೇರಿದವರು ಎನ್ನುವುದು ಜನಪದ ಹಾಲುಮತ ಮಹಾಕಾವ್ಯದವಾದ. ಇತರ ಹಾಲುಮತ ಮಹಾಕಾವ್ಯಗಳಲ್ಲಿ ಈ ಚಿತ್ರಣ ಕಾಣಿಸುವುದಿಲ್ಲ. ಗೊಂಡಗುರುಬರು ಪದ್ಮಗೊಂಡನ ಮಕ್ಕಳೆಂದು ನೇರವಾಗಿ ಹೇಳಿಬಿಡುತ್ತದೆ. ಈ ವಾದವನ್ನು ಸ್ಪಷ್ಟಪಡಿಸಿಕೊಳ್ಳುವುದಕ್ಕೆ ಗೊಂಡರ ಕುಲಮೂಲ ಕಥನಗಳನ್ನು ಅಧ್ಯಯನ ಮಾಡಬೇಕು.

ಹತ್ತಿ ಕಂಕಣ ಮತ್ತು ಉಣ್ಣೆ ಕಂಕಣಗಳ ಸೃಷ್ಟಿ ಮೂಲ ಕಥನಗಳ ಪರಿಕಲ್ಪನೆಗಳು ಅಲ್ಲದೆ ವಸ್ತು ಸ್ವರೂಪವು ಸಹ ಅಧ್ಯಯನಕಾರರನ್ನು ಗೊಂದಲಕ್ಕೆ ಸಿಕ್ಕಿಸಿಬಿಡುತ್ತದೆ. ಈ ಬಗ್ಗೆ ಚಂದ್ರಕಾಂತ ಬಿಜ್ಜರಗಿ ಅವರು ವ್ಯಕ್ತಪಡಿಸಿರುವ ಆತಂಕವನ್ನು ಇಲ್ಲಿ ನೆನಪಿಸಿಕೊಳ್ಳಬಹುದು. "ಈ ಕಥನದಲ್ಲಿ ಕೃಷಿ ಮೊದಲಿಗೆ ನಂತರ ಪಶುಪಾಲನೆ ಇದೆ. ಭೌಗೋಳಿಕವಾಗಿ ಪಶುಪಾಲನೆ ಮೊದಲು. ಕೃಷಿ ನಂತರದು. ಆದರೆ ಈ ಸೃಷ್ಟಿ ಕಥನ ವಿಮುಖ ಚಲನೆಯ ಚರಿತ್ರೆಯನ್ನು ನಮ್ಮ ಮುಂದಿಡುತ್ತದೆ. ಇದು ತಪ್ಪು. ಈ ಕಥನದ ರೂಪಾಂತರದ ಮೇಲೆ ಅನ್ಯಧರ್ಮದ ರಾಜಕಾರಣವಿದೆ. ಜೈನಧರ್ಮದ ಪ್ರಭಾವವೇ ಇದಕ್ಕೆ ಕಾರಣ ಎನ್ನುತ್ತಾರೆ" (ಚಂದ್ರಕಾಂತ ಬಿಜ್ಜರಗಿ, ಕುರುಬರ ಹೆಜ್ಜೆಗಳು). ಇದು ಕೇವಲ ಬಿಜ್ಜರಗಿ ಅವರ ಅನುಮಾನವಲ್ಲ. ಈ ಸೃಷ್ಟಿ ಕಥನಗಳನ್ನು ಅಧ್ಯಯನ ಮಾಡ ಹೊರಟ ಪ್ರತಿಯೊಬ್ಬರಲ್ಲೂ ಈ ಅನುಮಾನ ಕಾಡುತ್ತದೆ. ಇಂತಹ ಅನುಮಾನಗಳು ಬೇಕು. ಇವು ವಸ್ತುವನ್ನು ಹಲವು ಆಯಾಮಗಳಿಂದ ನೋಡುವ ದಾರಿಗಳಲ್ಲಿ ಕಲಿಸಿಕೊಡುತ್ತವೆ. ಆದರೆ ಅದನ್ನೇ ಸುತ್ತುಹಾಕುವುದು ಒಳಿತಲ್ಲ. ಏಕೆಂದರೆ ನಮ್ಮ ಮುಂದೆ ಅನೇಕ ಸವಾಲುಗಳಿವೆ. ಅಗಬೇಕಾದ ಕೆಲಸಗಳು ಹೆಚ್ಚಾಗಿವೆ. ಇಂತಹ ಅನೇಕ ಕಥನಗಳು ಕ್ಷೇತ್ರದಲ್ಲಿ ಜೀವಂತವಾಗಿವೆ. ಅವುಗಳನ್ನು ಸಂಗ್ರಹಿಸಿಲ್ಲ. ಸಂಗ್ರಹಿಸುವ ಕೆಲಸವನ್ನು ಮೊದಲು ಮಾಡಬೇಕು. ಆಗ ಕಥನದ ರೂಪಾಂತರವನ್ನು ಮತ್ತು ಕಥನದ ಮೇಳೆ ಆದ 'ಸಂಸ್ಕೃತೀಕರಣ'ವನ್ನು ಅಥವಾ ಕಥನದ ಮೇಲೆ ಆದ ರಾಜಕಾರಣವನ್ನು ಅರ್ಥೈಸಿಕೊಳ್ಳುವುದಕ್ಕೆ ಸಾಧ್ಯ. ಅದಕ್ಕಿಂತ ಮುಂಚೆ ಕಥನದ ವಸ್ತುವನ್ನು ಖಚಿತಪಡಿಸಿಕೊಳ್ಳಬೇಕು. ಅದನ್ನು ಕುಲಗಳ ಬದುಕಿನ ಅಥವಾ ಜೀವನ ವಿಧಾನದ ಹಿನ್ನೆಲೆಯಲ್ಲಿ ತಾತ್ವಿಕವಾಗಿ ವಿಶ್ಲೇಷಣೆ ಮಾಡಬೇಕು. ಹಾಗಾಗಿ ಮೊದಲು ಕಥನದ ಸಾಂಕೇತಿಕ ವಸ್ತುವಿನ ಕಡೆ ಗಮನಹರಿಸುವುದು ಒಳಿತು ಎನಿಸುತ್ತದೆ. ಈ ಕಥನದಲ್ಲಿ ವಸ್ತು ಖಚಿತವಾಗಿ ಒಂದು ಕುಟುಂಬ ಎರಡು ವೃತ್ತಿಗಳನ್ನು ಆಯ್ಕೆ ಮಾಡಿಕೊಂಡು ಅವುಗಳನ್ನು ಮುಂದುವರೆಸುವುದಕ್ಕಾಗಿ ವಿಂಗಡನೆಗೊಂಡ ಸಂದರ್ಭವನ್ನು ಹೇಳುತ್ತದೆ. ವೃತ್ತಿಗಳನ್ನು ಹಿಂಬಾಲಿಸಿದ ವ್ಯಕ್ತಿಗಳು ತಮ್ಮ ಅನನ್ಯತೆಗಾಗಿ ಬಳಸಿದ ಪರಿಕರಗಳ ವಿವರಗಳನ್ನು ಮುಂದಿಡುತ್ತದೆ. ಆ ವೃತ್ತಿ ಮತ್ತು ಪರಿಕರಗಳನ್ನು ಇಟ್ಟುಕೊಂಡು ಎರಡು ಕುಲಗಳ ಕುಲಮೂಲ ಅನನ್ಯತೆಯನ್ನು ಕಟ್ಟಬಹುದು.

* * *

ಹಿಂದೆ ಹೇಳಿದಂತೆ ಈ ಸೃಷ್ಟಿ ಮೂಲ ರೂಪಾತ್ಮಕ ಕಥನ ಒಂದು ಪ್ರಮೇಯವನ್ನು ಮಂಡಿಸುತ್ತದೆ. ಪ್ರಮೇಯದ ತಾತ್ವಿಕತೆಯನ್ನು ಸ್ಪಷ್ಟಗೊಳಿಸಬೇಕು. ಸ್ಪಷ್ಟತೆಗಾಗಿ ಕಾಣಿಸಿಕೊಂಡಿರುವ ಕೆಲವು ಚಿತ್ರಣಗಳನ್ನು ಅಧ್ಯಯನಕ್ಕಾಗಿ ಈ ರೀತಿ ಪಟ್ಟಿ ಮಾಡಿಕೊಳ್ಳಬಹುದು.

೧. ಕೃಷಿಯನ್ನು ಮಾಡುತ್ತಿದ್ದ ಆದಿಗೊಂಡನ ಅವಿಭಕ್ತ ಕುಟುಂಬದ ಸದಸ್ಯರಲ್ಲಿ ಒಬ್ಬನಾದ ಪದ್ಮಗೊಂಡ ಕುರಿಗಾರಿಕೆಯನ್ನು ಆರಂಭಿಸಿದ. ಕುರಿಗಾರಿಕೆಗಾಗಿ ಕುಟುಂಬದಿಂದ ಹೊರಬಂದು ಅಲೆಮಾರಿತನವನ್ನು ಆರಂಭಿಸುತ್ತಾನೆ. ಹಾಗಾಗಿ ಪದ್ಮಗೊಂಡ ಭೂಲೋಕದಲ್ಲಿ ಕುರಿಗಳನ್ನು ಕಂಡ ಮತ್ತು ಕಾಯ್ದ ಪ್ರಥಮ ವ್ಯಕ್ತಿಯಾಗಿ ಕಾಣಿಸುತ್ತಾನೆ.

೨. ಅಲೆಮಾರಿತನದ ಕುರಿಗಾರಿಕೆಯನ್ನು ಆರಂಬಿಸಿದ ಪದ್ಮಗೊಂಡ ಕಾಡಿನಲ್ಲಿ ವಾಸವಾಗಿದ್ದ ರಾಕ್ಷಸ ಕುಟುಂಬಕ್ಕೆ ಸೇರಿದ ಕನ್ಯೆಯನ್ನು ವಿವಾಹವಾಗುತ್ತಾರೆ. ಸಮುದಾಯದ ಕಥನಗಳಲ್ಲಿ ರಾಕ್ಷಸ ಪರಿಕಲ್ಪನೆ 'ಕಾಡಿನ ಸಂಸ್ಕೃತಿ'ಯವರು ಎನ್ನುವ ಅರ್ಥದಲ್ಲಿ ಬಳಕೆಯಾಗಿರುವುದು ಹೆಚ್ಚು. ಇಲ್ಲಿ ಕಾಡಿನ ಮಹಿಳೆ ಅನ್ನುವುದನ್ನು ರಾಕ್ಷಸಿ ಎಂದು ಕರೆದುಕೊಂಡಿರುವುದಕ್ಕೆ ಸಾಧ್ಯವಿದೆ. ಇಲ್ಲಿ ವಿವಾಹವಾಗುವ ಸಂದರ್ಭ ಮುಖ್ಯ. ಏಕೆಂದರೆ ಆ ಸಂದರ್ಭದಲ್ಲಿ ವೈವಾಹಿಕ ಕಾರ್ಯಕ್ಕಾಗಿ 'ಉಣ್ಣೆ'ಯನ್ನು ಬಳಸಲಾಗುತ್ತದೆ. ಆ ಬಳಕೆ ಪ್ರತ್ಯೇಕ ಕುಲದ ಸೃಷ್ಠಿಗೆ ಕಾರಣವಾಗುತ್ತದೆ. ಕುಟುಂಬ ವಿಂಗಡಣೆಗೆ ಕಾರಣವಾಗುತ್ತದೆ. "ನಿಮ್ಮ ವಿವಾಹದ ಸಂದರ್ಭದಲ್ಲಿ ಬಳಸುವ ಕಂಕಣಕ್ಕೆ ಉಣ್ಣೆಯನ್ನು ಬಳಸಿದ ಕಾರಣ ನೀವು ಉಣ್ಣೆ ಕಂಕಣದವರಾಗಿ ಬಾಳಿರಿ" ಎಂದು ಶಿವ-ಪಾರ್ವತಿಯರು ಹರಸುತ್ತಾರೆ.

೩. ಪದ್ಮಗೊಂಡನ ಇಬ್ಬರು ಹೆಂಡತಿಯರು ತಮ್ಮ ತಮ್ಮ ಮಕ್ಕಳನ್ನು ಎದುರುಗಡೆ ಇಟ್ಟುಕೊಂಡು ಪದ್ಮಗೊಂಡನ ಸಮ್ಮುಖದಲ್ಲಿಯೇ ಆತನ ಆಸ್ತಿಯನ್ನು ಒಪ್ಪಿತವಾದ ಮನಸ್ಸಿನಿಂದ ಹಂಚಿಕೊಳ್ಳುತ್ತಾರೆ. ಇಬ್ಬರ ಹೆಂಡತಿಯ ಮಕ್ಕಳಿಗೆ ಕುರಿಗಳು ಸಮಾನವಾಗಿ ಹಂಚಿಕೆ ಆಗುತ್ತವೆ. ಇದರಿಂದ ಎರಡು ಕಂಕಣದವರು ಕುರಿಗಾರಿಕೆಯನ್ನು ಆರಂಭಿಸಿದರು ಎನ್ನುವುದು ಖಚಿತವಾಗುತ್ತದೆ. ಈಗಲೂ ಎರಡು ಕಂಕಣದವರಲ್ಲೂ ಕುರಿಗಾರಿಕೆ ಇದೆ. ಈ ಪರಿಕಲ್ಪನೆ ನಮಗೆ ಮುಖ್ಯ.

ಆದರೆ 'ಉಣ್ಣೆಕಂಕಣ'ದವರಿಗೆ ಪ್ರಧಾನ ವೃತ್ತಿಯಾದಂತೆ ಹತ್ತಿಕಂಕಣದವರಿಗೆ ಪ್ರಧಾನವೃತ್ತಿಯಾಗಿಲ್ಲ. ಉಣ್ಣೆಕಂಕಣದವರು ಹತ್ತಿಕಂಕಣದವರಿಗಿಂತ ಆರ್ಥಿಕವಾಗಿ ಪ್ರಬಲರಾಗಿದ್ದಾರೆ. ಇದಕ್ಕೆ ಹಲವಾರು ಕಾರಣಗಳಿವೆ. ಕುರಿಗಾರಿಕೆ ಲಾಭದಾಯಕ ವೃತ್ತಿಯಾಗಿದೆ. ಈ ಕಾರಣಕ್ಕೆ ಇವತ್ತು ಸಹ ಹಲವು ಸಮುದಾಯದವರು ಈ ವೃತ್ತಿಯತ್ತ ಆಕರ್ಷಿತರಾಗುತ್ತಿದ್ದಾರೆ. ಕೃಷಿ (ಹತ್ತಿ) ಉಣ್ಣೆ (ಕುರಿಗಾರಿಕೆ) ವೃತ್ತಿಗಳು ಪ್ರತ್ಯೇಕಗೊಂಡ ಕಾಲದಲ್ಲೂ ಕುರಿಗಾರಿಕೆ ಲಾಭದಾಯಕ ವೃತ್ತಿ ಆಗಿತ್ತು. ಕುರಿ ಬಹು ಉಪಯೋಗಿ ವಸ್ತು ಹೌದು. ಹಾಲು, ಬೆಣ್ಣೆ, ತುಪ್ಪ, ಮಾಂಸ, ಉಣ್ಣೆ ಮತ್ತು ಚರ್ಮ ಬಳಕೆಯಾಗುತ್ತವೆ. ಜೊತೆಗೆ ಉಣ್ಣೆ ಬಳಕೆಯ ವಿಧಾನಗಳು ತಿಳಿದಷ್ಟು ಹತ್ತಿಯ ಬಳಕೆಯ ವಿಧಾನಗಳು ತಿಳಿದಿರಲಿಲ್ಲ. ಈ ಪರಿಕಲ್ಪನೆಯನ್ನು ೧೮೮೪ರಲ್ಲಿ ಮುಂಬಾಯಿ ಕರ್ನಾಟಕದಲ್ಲಿ ಕುರುಬರ ಬಗ್ಗೆ ಸಂಶೋಧನೆ ಕೈಗೊಂಡ ಜೇಮ್ಸ್‌ಕ್ಯಾಂಬೆಲ್ (James Campbell) ಅವರು ಸೂಕ್ಷ್ಮವಾಗಿ ಗುರುತಿಸಿದ್ದಾರೆ. ಜೇಮ್ಸ್ ಅವರ ಪ್ರಕಾರ ಉಣ್ಣೆ ಕಂಕಣದ ಕುರುಬರು ಹತ್ತಿ ಕಂಕಣದವರಿಗಿಂತ ಸುಧಾರಿಸಿದವರು. ಕುರಿ ಕಾಯುವುದನ್ನು ಬಿಟ್ಟು ನೇಕಾರಿಕೆಗೆ ತಿರುಗಿದ್ದರಿಂದ ಅವರು ಆರ್ಥಿಕವಾಗಿ ಸಾಂಸ್ಕೃತಿಕವಾಗಿ ಹಾಗೂ ರಾಜಕೀಯವಾಗಿ ಸುಧಾರಣೆಗೊಂಡವರು. ಆದ್ದರಿಂದ ಉಣ್ಣೆಕಂಕಣದವರೇ ಹೆಚ್ಚಾಗಿ ರಾಜರಾಗಿದ್ದು ಇತಿಹಾಸ ಪುಟಗಳಿಂದ ತಿಳಿದುಬರುತ್ತದೆ. ಆದರೆ ಹತ್ತಿಕಂಕಣದವರು ಯಥಾವತ್ತಾಗಿ ಕುರಿಕಾಯುವ ಕಾರ್ಯವನ್ನು ಮುಂದುವರೆಸಿಕೊಂಡು ಬಂದಿದ್ದಾರೆ ಎನ್ನುತ್ತಾರೆ. ಜೇಮ್ಸ್‌ಕ್ಯಾಂಬೆಲ್ ಅವರ ಈ ವಾದ ಸರಿಯಾಗಿದೆ.

ಚಳ್ಳಕೆರೆ, ರಾಯದುರ್ಗ, ಪಾವಗಡ, ಹಿರಿಯೂರು, ತಿಪಟೂರು, ಅರಸಿಕೆರೆ ಚಿಕ್ಕ ನಾಯಕನಳ್ಳಿ, ಹೊಸದುರ್ಗ, ತುರುವೇಕೆರೆ, ಅರಸಿಕೆರೆ ಸುತ್ತಮುತ್ತಲಿನ ಪ್ರದೇಶದ ಜನರು ಹೆಚ್ಚಾಗಿ ನೇಯ್ಗೆಯನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಇದಕ್ಕೆ ವೈಜ್ಞಾನಿಕ ಮತ್ತು ಆರ್ಥಿಕ, ಸಾಮಾಜಿಕ ಕಾರಣಗಳಿವೆ. ಅವುಗಳನ್ನು ಹೀಗೆ ಊಹಿಸಬಹುದು. ಆದರೆ ಇವೆ ಅಂತಿಮ ಸತ್ಯಗಳಲ್ಲ. ಇದರ ಬಗ್ಗೆ ಇನ್ನೂ ಅಧ್ಯಯನಗಳಾಗಬೇಕು. ನೇಯ್ಗೆಯನ್ನು ಮುಖ್ಯ ವೃತ್ತಿಯನ್ನಾಗಿ ಮಾಡಿಕೊಂಡಿರುವ ಚಳ್ಳಕೆರೆ, ಹಿರಿಯೂರು ಈ ಭಾಗದ ಪ್ರದೇಶವು ಭೌಗೋಳಿಕವಾಗಿ ಬೆಳಗಾವಿ, ಸೊಲ್ಲಾಪುರ, ಕೊಪ್ಪಳ, ರಾಯಚೂರು, ದಾವಣಗೆರೆ, ಹರಿಹರ ಪ್ರದೇಶಗಳಷ್ಟು ಗುರಿಗಾರಿಕೆಗೆ ಯೋಗ್ಯವಲ್ಲ. ಈಗಲೂ ಕರ್ನಾಟಕ, ಮಹಾರಾಷ್ಟ್ರ ಗಡಿನಾಡು ಪ್ರದೇಶದಿಂದ ಕುರಿಗಾರಿಕೆಗೆ ವಲಸೆ ಬರುವ ಕುರಿಗಾರರನ್ನು ನೋಡಬಹುದು. ಅವರು ಚಿತ್ರದುರ್ಗ, ಹರಿಹರ,

ಶಿವಮೊಗ್ಗ, ಚಿಕ್ಕಮಂಗಳೂರು ಜಿಲ್ಲೆಗಳ ಪ್ರಾಂತ್ಯವನ್ನು ದಾಟಿ ಬರುವುದೇ ಇಲ್ಲ. ಜೊತೆಗೆ ದಕ್ಷಿಣ ಕರ್ನಾಟಕದಲ್ಲಿ ಕಂಬಳಿಯ ಬಳಕೆ ಹತ್ತಾಗಿತ್ತು. ಹೊರದೇಶಕ್ಕೆ ರಫ್ತು ಮಾಡುವುದಕ್ಕೆ ಅನುಕೂಲಕರವಾದ ಪ್ರದೇಶವು ಇದಾಗಿತ್ತು. ಹಡಗಿನಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ವಿಶೇಷವಾಗಿ ಅರೇಬಿಯನ್ ರಾಷ್ಟ್ರಗಳಿಗೆ ರಫ್ತು ಮಾಡುವುದಕ್ಕೆ ಬಂದರುಗಳು ಸಿಗುತ್ತಿದ್ದವು. ಅರೇಬಿಯನ್ ರಾಷ್ಟ್ರಗಳಲ್ಲಿ ಕಂಬಳಿಯ ಬಳಕೆ ಹೆಚ್ಚಾಗಿತ್ತು. ಆ ಕಾರಣಕ್ಕಾಗಿ ಕುರುಬರಿಗೂ ಮತ್ತು 'ಮುಸ್ಲಿಂ'ರಿಗೂ ಒಂದು ಬಗೆಯ ಸಂಬಂಧ ಬೆಳೆಯಿತು. ಸೂಫಿಗಳು ಉಣ್ಣೆಗಾಗಿಯೆ ಅಲೆಮಾರಿ ಕುರಿಗಾರರ ಜೊತೆ ಅಲೆಮಾರಿಗಳಾಗಿ ತಿರುಗಾಡುತ್ತಿದ್ದರು. ನಾಥರು ಇದಕ್ಕೆ ಹೊರತಾಗಿಲ್ಲ.

ಎರಡನೆಯ ಕಾರಣವೆಂದರೆ ನೇಯ್ಗೆಯ ಹಂತವನ್ನು ತಲುಪಿದ ಜನರೇನು ಇದ್ದರಲ್ಲ ಆ ವರ್ಗ ಈ ಪ್ರದೇಶದ ಕಡೆಗೆ ಹೆಚ್ಚಾಗಿ ವಲಸೆ ಬಂದಿರುವುದಕ್ಕೆ ಸಾಧ್ಯವಿದೆ. ಬೇಡಿಕೆ ಮತ್ತು ಮಾರಾಟದ ಅನುಕೂಲಗಳು ಹೆಚ್ಚಾಗಿದ್ದ ಕಾರಣ ಈ ಪ್ರದೇಶವನ್ನು ಆಯ್ಕೆ ಮಾಡಿಕೊಂಡಿರಬಹುದು. ದಕ್ಷಿಣ ಕರ್ನಾಟಕದ ಕುರುಬರು ಉತ್ತರ ಕರ್ನಾಟಕದಿಂದ ವಲಸೆ ಬಂದವರೆಂದು ಹಲವು ಕಥನಗಳಿಂದ ತಿಳಿದುಬರುತ್ತವೆ. ನಮ್ಮ ಹಿರಿಯರು ವಿಜಯನಗರ ಸಾಮ್ರಾಜ್ಯದ ಪತನದ ನಂತರ ವಲಸೆ ಬಂದು ಇಲ್ಲಿ ನೆಲೆಸಿದ್ದಾರೆ ಎಂದು ಹೇಳುವ, ಮುಸ್ಲಿಂರ ಹಿಂದೆ ತಾಳಲಾರದೆ ಗ್ರಾಮದ ಕುರುಬರೆಲ್ಲರೂ ಸೇರಿ ತಮ್ಮ ದೈವಗಳನ್ನು ಬಿಟ್ಟಿಯಲ್ಲಿ ಹಾಕಿಕೊಂಡು ಬಂದು ಇಲ್ಲಿ ನೆಲೆಸಿದ್ದೇವೆಂದು ಹೇಳುವ ಹಲವು ಗ್ರಾಮ ಮೂಲ ಕಥನಗಳು ಸಿಗುತ್ತವೆ. ಇವರು ಆರಾಧನೆ ಮಾಡುವ ದೈವಗಳ ಮೂಲಕ ಹೇಳಿದಾಗ ಕರ್ನಾಟಕ ಮಹಾರಾಷ್ಟ್ರದ ಗಡಿನಾಡು ಪ್ರದೇಶವೆಂದು ಹೇಳುತ್ತಾರೆ. ಶಂಬಾ ಜೋಶಿ ಅವರು ಈಗಿನ ಕರ್ನಾಟಕ-ಮಹಾರಾಷ್ಟ್ರ ಗಡಿನಾಡು ಪ್ರದೇಶವನ್ನು ಕುರುಬರ ಮೂಲ ನೆಲೆಯೆಂದು ಗುರುತಿಸಿದ್ದಾರೆ. ಕುರುಬರ ಕುಲಗುರು 'ಗುರು ಒಡೆಯ' ವರ್ಗ ಜನ್ಮ ತಾಳಿದ್ದು ಬಿಜಾಪುರ ಜಿ. ಮುದ್ದೇಬಿಹಾಳ ತಾಲೂಕಿನ ಸರೂರು ಗ್ರಾಮದಲ್ಲಿ. ಈ ಗುರುವರ್ಗ ತುಂಬಾ ತಡವಾಗಿ ದಕ್ಷಿಣ ಕರ್ನಾಟಕಕ್ಕೆ ವಿಸ್ತರಣೆಯಾಯಿತು ಎಂಬುದು ಆಧಾರಗಳಿಂದ ತಿಳಿದುಬರುತ್ತದೆ.

ಇನ್ನೊಂದು ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಲೇಬೇಕು. 'ಕುರುಬ ಕುಲ ಗುರುವರ್ಗ' ವನ್ನು ಹುಟ್ಟು ಹಾಕಿದ ರೇವಣಸಿದ್ಧನಿಗೆ ಅರ್ಪಿಸುವ 'ಕಂತೆ ಸೇವೆ' ನೇಯ್ಗೆ ಸಂಸ್ಕೃತಿಗೆ ಸಂಬಂಧಿಸಿದ್ದು. ಕಂತೆ ಸೇವೆ ಆಚರಣೆಯಲ್ಲಿ ನೇಯುವ ವಿಧಾನವನ್ನು ಒಂದು ಆಚರಣೆಯನ್ನಾಗಿ ಆಚರಿಸುತ್ತಾರೆ. ಉತ್ತರ ಕರ್ನಾಟಕದಲ್ಲಿ ಈ ಆಚರಣೆ ಇಲ್ಲ. ತಮ್ಮ ಆರಾಧ್ಯ ದೈವಗಳಾದ ಬೀರಪ್ಪ, ಮಾಳಿಂಗರಾಯ, ಇಟ್ಟಪ್ಪ (ವಿಠೋಬ)ಅಮೋಘಸಿದ್ಧ, ಮಾಯವ್ವ ಮುಂತಾದ ದೈವಗಳಿಗೆ 'ಉಣ್ಣೆ'ಯನ್ನೇ ಅರ್ಪಿಸುತ್ತಾರೆ. ಪಟ್ಟಣಕಡೋಲಿಯ ಇಟ್ಟಪ್ಪ, ಹುಲಜಂತಿ ಮಾಳಿಂಗರಾಯ, ಚಿಂಚಲಿ ಮಾಯವ್ವನ ಜಾತ್ರೆಯಲ್ಲಿ ನೆರೆದ ಭಕ್ತರು ಸಾವಿರಾರು ಕೆ.ಜಿ. ಉಣ್ಣೆಯನ್ನು ಅರ್ಪಿಸುತ್ತಾರೆ. ಹಾರಿಸಿದ ಉಣ್ಣೆಯನ್ನು ಮನೆಗೆ ತೆಗೆದುಕೊಂಡು ಹೋಗಿ ದೈವವೆಂದು ಪೂಜಿಸುತ್ತಾರೆ. ರೋಗ-ರುಜಿನಗಳ ಪರಿಹಾರಕ್ಕೆ ಬಳಸುತ್ತಾರೆ. ಇದು 'ಉಣ್ಣೆ ಸಂಸ್ಕೃತಿ'ಯನ್ನು ಪ್ರತಿಬಿಂಬಿಸಿದರೆ ಕಂತೆ ಸೇವೆ ಆಚರಣೆ 'ನೇಯ್ಗೆ ಸಂಸ್ಕೃತಿ'ಯನ್ನು ಪ್ರತಿಬಿಂಬಿಸುತ್ತದೆ. ಕಂತೆ ಉಣ್ಣೆಯ ಮುಂದುವರೆದ ಭಾಗ. ಇದರಿಂದ ದೈವಗಳ ಪ್ರಾಚೀನತೆಯನ್ನು ಗುರುತಿಸುವುದಕ್ಕೆ ಸಾಧ್ಯವಿದೆ.

ಇವತ್ತು ಉಣ್ಣೆಯನ್ನು ಅರ್ಪಿಸುತ್ತಿರುವ ಬೀರಪ್ಪ, ಮಾಳಿಂಗರಾಯ, ಮಾಯವ್ವ, ಇಟ್ಟಪ್ಪ ಮುಂತಾದ ಸಾಂಸ್ಕೃತಿಕ ವೀರರು ರೇವಣಸಿದ್ಧ, ಸಿದ್ಧರಾಮರಿಗಿಂತ ಪ್ರಾಚೀನರು. ಈ ದೈವಗಳನ್ನು ಎರಡು ಕಂಕಣದವರು ಕುಲದೈವಗಳನ್ನಾಗಿ ಮಾಡಿಕೊಂಡು ಆರಾಧನೆ ಮಾಡುತ್ತಿದ್ದಾರೆ. ಇವರ ಕಾಲಘಟ್ಟದಲ್ಲಿ ಕುಲ ವಿಂಗಡಣೆ ಅಷ್ಟೊಂದು ಮಹತ್ವ ಪಡೆದಿರಲಿಲ್ಲವೆನಿಸುತ್ತದೆ. ರೇವಣಸಿದ್ಧನ ಕಾಲಘಟ್ಟಕ್ಕೆ ಕುಲ ವಿಂಗಡಣೆ ಸ್ಪಷ್ಟ ರೂಪ ಪಡೆಯಿತು. ಎರಡು ಕಂಕಣಗಳಲ್ಲಿರುವ ದೈವಗಳ ಆರಾಧನಾ ವಿಧಾನವನ್ನು ಎಸ್.ಜಿ. ಸಿದ್ಧರಾಮಯ್ಯ ಅವರು ಚೆನ್ನಾಗಿ ಗುರುತಿಸಿದ್ದಾರೆ. ಹತ್ತಿಕಂಕಣದಲ್ಲಿಯೂ ಬೀರೇಶ್ವರ, ಮಲ್ಲೇಶ್ವರ, ಮೈಲಾರಲಿಂಗ, ಕರಿಸಿದ್ದೇಶ್ವರ, ಗಂಗರಾಯ, ಆಸಬೇಡಪ್ಪ, ಯಲ್ಲಮ್ಮ ಮುಂತಾದ ದೇವರುಗಳಿಗೆ ನಡೆದುಕೊಳ್ಳುವ ಒಕ್ಕಲುಗಳಿವೆ. ಆದರೆ ಉಣ್ಣೆ ಕಂಕಣದ ಕುರುಬರಿಗೆ ರೇವಣಸಿದ್ಧೇಶ್ವರ ಪ್ರಧಾನ ದೈವವಾದಂತೆ ಇವರಿಗೆ ಆಗಿಲ್ಲ. ಇವರಲ್ಲಿ ಕೆಲವರಿಗೆ ರೇವಣಸಿದ್ಧೇಶ್ವರ ಬೇರೆ ದೈವಗಳಂತೆ ಮನೆದೈವಾಗಿದ್ದಾನೆ ಅಷ್ಟೆ. ಹತ್ತಿಕಂಕಣದ ಕುರುಬರಿಗೆ ಒಡೆಯರುಗಳು ಗುರುಗಳಾದರೂ ಮನೆಯ ಸಾಂಸ್ಕೃತಿಕ ಆಚರಣೆಗಳಲ್ಲಿ ಪುರೋಹಿತರಂತೆ ಭಾಗಿಯಾಗುವ ನಿಯಮವಿಲ್ಲ. ಇವರಿಗೆ ಮದುವೆಯ ಸಂದರ್ಭದಲ್ಲಿ ಗುರುವಿನ ಎಲೆಯನ್ನು ಮಾತ್ರ ಕೊಡುತ್ತಾರೆ. ಕೆಲವರು ಮನೆಗೆ ಕರೆದುಕೊಂಡು ಹೋಗಿ ಬಟ್ಟೆ ಬರಿಯನ್ನು ಕೂಡ 'ಗುರುವಿಗೆ' ಕೊಡುತ್ತಾರೆ. ಆಗ ರೊಕ್ಕವನ್ನು ದಕ್ಷಿಣೆಯಾಗಿ ಕೊಡುತ್ತಾರೆ. ಇದೇನಿದ್ದರೂ ಖುಷಿಗೆ ಮಾಡುವ ಸತ್ಕಾರವೇ ಹೊರದು ನಿಯಮ ಪಾಲನೆ ಅಲ್ಲ. 'ಗುರುವಿನ ಎಲೆ'ಯನ್ನು ಕೊಡುವುದು

ಮಾತ್ರ ನಿಯಮ ರೂಢಿ. ಸಿಂಧನೂರು, ರಾಯಚೂರು ಪ್ರದೇಶದಲ್ಲಿ ಗಮನಿಸಿದಾಗ ಇಲ್ಲಿನ ಹತ್ತಿಕಂಕಣದ ಕುರುಬರು ತಮ್ಮ ಮದುವೆ ಕಾರ್ಯಕ್ಕೆ ವೀರಶೈವ ಜಂಗಮರು ಅಥವಾ ಬ್ರಾಹ್ಮಣ ಆಚಾರಿಗಳು (ಪುರೋಹಿತರು) ಬರುತ್ತಾರೆ (ಪಾವನ). ಎಸ್. ಜಿ. ಸಿದ್ಧರಾಮಯ್ಯ ಅವರು 'ಹತ್ತಿಕಂಕಣದ ಕುರುಬರಲ್ಲಿ ಮದುವೆಯ ಆಚರಣೆ' ಎನ್ನುವ ಲೇಖನವನ್ನು ಬರೆದ ಸಂದರ್ಭದಲ್ಲಿ 'ಸಿದ್ಧಮಂಕ ಚರಿತೆ' ಮತ್ತು 'ತಗರ ಪವಾಡ' ಪಠ್ಯಗಳು ಸಂಗ್ರಹವಾಗಿರಲಿಲ್ಲ. ಅವರಿಗೆ ಈ ಎರಡು ಪಠ್ಯಗಳು ಸಿಕ್ಕಿದ್ದರೆ ಅವರ ಆಲೋಚನೆಗಳು ಬೇರೆ ಆಗಿರುತ್ತಿದ್ದವು.

ಸಿದ್ಧಮಂಕ ಚರಿತೆ, ತಗರ ಪವಾಡ ಕೃಷಿಗಳ ಕಥಾವಸ್ತು ಮತ್ತು ಕಂತೆಸೇವೆ ಆಚರಣೆಯ ಸಂದರ್ಭದಲ್ಲಿ ಮಹಿಳೆಯರು ಹಾಡುವ ಜನಪದ ಗೀತೆಗಳ ಕಥಾವಸ್ತುವನ್ನು ಗಮನಿಸಿದಾಗ ಕಲ್ಯಾಣದಲ್ಲಿ ಮಾಡಿದ ತಗರ ಪವಾಡ 'ಉಣ್ಣೆ ಸಂಸ್ಕೃತಿ'ಯನ್ನು ಅಥವಾ ಕುರಿಗಾರಿಕೆಯ ಅಸ್ತಿತ್ವವನ್ನು ಉಳಿಸಿಕೊಳ್ಳುವುದಕ್ಕೆ ಮಾಡಿದ ಹೋರಾಟದಂತೆ ಕಾಣಿಸುತ್ತದೆ. ಗುರು ಒಡೆಯರುಗಳು ಉಣ್ಣೆ ಸಂಸ್ಕೃತಿಯನ್ನು ಜೀವಂತಗೊಳಿಸುವುದಕ್ಕೆ ಸೃಷ್ಟಿಸಿರುವ ವಕ್ತಾರತಂತೆ ಕಾಣಿಸುತ್ತದೆ. ಒಡೆಯರುಗಳ ನಂತರದಲ್ಲಿ ಉಣ್ಣೆ ಸಂಸ್ಕೃತಿಯನ್ನು ಸಂಸ್ಕೃತೀಕರಣಗೊಳಿಸಿದರು. ಆ ರಾಜಕಾರದ ಚರ್ಚೆ ಬೇರೆ. ಕುರುಬರು ಕಲ್ಯಾಣದಲ್ಲಿ ಕುರಿಮಾಂಸವನ್ನು ಹೊತ್ತು ಮಾರಿದರೆನ್ನುವ ಕಾರಣಕ್ಕೆ ಕಲ್ಯಾದಿಂದ ಹೊರಹಾಕಿದರು. ಈ ಬಹಿಷ್ಕಾರವನ್ನು ರಹಮತ್ ತರೀಕೆರೆ ಅವರು 'ಆಹಾರ ಸಂಸ್ಕೃತಿ' ಮೇಲೆ ಹೇರಿದ ಬಹಿಷ್ಕಾರವೆಂದು ಕರೆಯುತ್ತಾರೆ. ಇದನ್ನು ಸ್ವಲ್ಪ ವಿಸ್ತರಿಸಿಕೊಳ್ಳಬೇಕು. ಆಹಾರಕ್ಕೂ, ವೃತ್ತಿಗೂ ಮತ್ತು ಆರ್ಥಿಕತೆಗೂ ಸಂಬಂಧಿಸಿದೆ. ಹಾಗಾಗಿ ಇದನ್ನು ವೃತ್ತಿ ಮೇಲೆ ಹೇರಿದ ಬಹಿಷ್ಕಾರವೆಂದು, ಆರ್ಥಿಕ ಅಭಿವೃದ್ಧಿಯ ಮೇಲೆ ಹೇರಿದ ಬಹಿಷ್ಕಾರವೆಂದೂ ಕರೆಯಬಹುದು. ಆರ್ಥಿಕತೆಯನ್ನು ವಿಮುಖಗೊಳಿಸಿ ಸಮುದಾಯಗಳನ್ನು ಅಧೀನರನ್ನಾಗಿ ಮಾಡಿಕೊಳ್ಳುವ ತಂತ್ರಗಾರಿಕೆ ಇದು. ಆ ಕಾರಣಕ್ಕೆ ಲಿಂಗಾಯತ ಧರ್ಮ ಕಲ್ಯಾಣದ ರಾಜಪ್ರಭುತ್ವವನ್ನು ಬಳಸಿಕೊಂಡು ಹಲವು ಪಶುಪಾಲನ ಸಮುದಾಯಗಳ ಮೇಲೆ ತನ್ನ ಧಾರ್ಮಿಕ ರಾಜಕಾರಣವನ್ನು ಪ್ರಯೋಗ ಮಾಡಿತು. ಈ ರಾಜಕಾರಣಕ್ಕೆ ಬಲಿಯಾದ ಸಮುದಾಯಗಳು ತೀವ್ರವಾದ ಪ್ರತಿರೋಧ ಮಾಡಿದವು. ಜಯಶೀಲವಾದವು. ತಮ್ಮ ಸಾಂಸ್ಕೃತಿಕ ಅನನ್ಯತೆಯೇ ಶ್ರೇಷ್ಠವೆಂದು ಪ್ರತಿಪಾದನೆ ಮಾಡಿದವು. ಆದರೂ ತಮ್ಮ ಸಂಸ್ಕೃತಿಯನ್ನು ಯಥಾವತ್ತಾಗಿ ಮುಂದುವರೆಸುವುದಕ್ಕೆ ಅಥವಾ ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಲಿಂಗಾಯತ ಧರ್ಮದ ಸಾಂಸ್ಕೃತಿಕ ರಾಜಕಾರಣಕ್ಕೆ ಬಲಿಯಾಗಿ ಸಂಸ್ಕೃತೀಕರಣಗೊಂಡವು. ಹಾಲುಮತ ಸಮುದಾಯವು ಇದಕ್ಕೆ ಹೊರತಾಗಿಲ್ಲ. ಕಲ್ಯಾಣದಿಂದ ಹಾಕಿದ ಬಹಿಷ್ಕಾರವನ್ನು ಮರುಳಮಂಕ, ಶಾಂತಮುತ್ತಯ್ಯ, ರೇವಣಸಿದ್ಧ, ಸಿದ್ಧರಾಮ ಮುಂತಾದ ಸಾಂಸ್ಕೃತಿಕ ನಾಯಕರೆಲ್ಲರೂ ಸೇರಿ ಪ್ರತಿರೋಧ ಮಾಡಿದರು. ಒಂದು ಸಮುದಾಯದ ಹಲವು ಸಾಂಸ್ಕೃತಿಕ ನಾಯಕರೆಲ್ಲರೂ ಒಟ್ಟಿಗೆ ಸೇರಿ ಕಲ್ಯಾಣದ ಬಹಿಷ್ಕಾರವನ್ನು ಪ್ರತಿರೋಧಿಸಿದ ವಿವರಗಳು ಬೇರೆ ಸಮುದಾಯಗಳಲ್ಲಿ ಸಿಗುವುದಿಲ್ಲ. ಇದು ಹಾಲುಮತ ಸಮುದಾಯದ ವಿಶೇಷತೆ. ಈ ಸಮಷ್ಠಿ ಹೋರಾಟ ನಂತರದ ಕಾಲಮಾನದಲ್ಲಿ ಗುಂಪುಗಾರಿಕೆಯನ್ನು ಸೃಷ್ಟಿಸಿತು. ಒಡೆಯರಲ್ಲಿ ಕಾಣಿಸುವ ಮೂರು ಪಂಗಡಗಳು ವಿಂಗಡಣೆಗೊಂಡ ಚಿತ್ರಣಗಳಾಗಿ ಕಾಣಿಸುತ್ತವೆ. ಇವುಗಳು ಹಾಲುಮತದ ಗುರು ಪರಂಪರೆಯಲ್ಲಿದ್ದ ಆಂತರಿಕ ಸಂಘರ್ಷವನ್ನು ಪ್ರತಿಬಿಂಬಿಸುತ್ತವೆ.

ಒಡೆಯ ವರ್ಗ ಸೃಷ್ಟಿಯಾದ ನಂತರ ಉಣ್ಣೆ ಸಂಸ್ಕೃತಿಯಲ್ಲಿ ಅನೇಕ ಪಲ್ಲಟಗಳಾದವು. 'ಕಂಬಳಿ' (ನೇಯ್ಗೆ) ಸಂಸ್ಕೃತಿ ಪ್ರಧಾನಧಾರೆಗೆ ಬಂದಿತು. ಆರ್ಥಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ ಉಳಿದ ಸಮುದಾಯಗಳ ಮೇಲೆ ಹಿಡಿತ ಸಾಧಿಸಿತು. ಈ ಮನಸ್ಥಿತಿ ರೂಢಿಗತವಾದ ಕಾರಣಕ್ಕಾಗಿಯೇ ಉಣ್ಣೆ ಕಂಕಣದವರು ಹೆಚ್ಚಾಗಿ ರಾಜರುಗಳಾದರು. ಕಂಬಳಿ ನೇಯುವುದು ತಾಂತ್ರಿಕ ಕೆಲಸವಾಗಿತ್ತು. ತಾಂತ್ರಿಕ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಮುದಾಐಗಳು ತಾಂತ್ರಿಕೇತರ ಸಮುದಾಯ ಅಥವಾ ವರ್ಗದ ಮೇಲೆ ಹಿಡಿತ ಸಾಧಿಸಿರುವುದು ಚರಿತ್ರೆಯುದ್ದಕ್ಕೂ ಕಾಣಬಹುದು. ಕಂಬಳಿಯಲ್ಲಿ ವಿಶೇಷವಾಗಿ 'ಬಿಳಿ ಕಂಬಳಿ' ಪ್ರಧಾನಧಾರೆಗೆ ಬಂದಿತು. ಬಿಳಿ ಶ್ರೇಷ್ಠ ಕಪ್ಪು ಕನಿಷ್ಠ ಎನ್ನುವ ಪರಿಕಲ್ಪನೆಯಲ್ಲಿ ಇವತ್ತಿಗೂ ಜೀವಂತವಾಗಿದೆ. ಗುರು ಒಡೆಯರು ಅಥವಾ ರೇವಣಸಿದ್ಧ. ಸಿದ್ಧರಾಮ ಶಾಂತಮುತ್ತಯ್ಯನ ಸಂಸ್ಕೃತಿಯವರು ಮಾತ್ರ ಬಿಳಿ ಕಂಬಳಿಯನ್ನು ಬಳಸಬೇಕು. ಗೊರವರು, ಪೂಜಾರಿಗಳು, ದಳವಾಯಿಗಳು ಅಥವಾ ಮೈಲಾರಲಿಂಗ ಬೀರಪ್ಪ ಮಾಳಿಂಗರಾಯ ಬುಳ್ಳಪ್ಪ ಮುಂತಾದ ದೈವಗಳ ಆಚರಣಾತ್ಮಕ ಸಂದರ್ಭಗಳಲ್ಲಿ ಕಪ್ಪು ಕಂಬಳಿಯನ್ನು ಬಳಸಬೇಕು ಎನ್ನುವ ನಿಯಮಗಳು ಜಾರಿಗೆ ಬಂದವು. ಮುದ್ದೇಬಿಹಾಳ್ ತಾಲೂಕು ಸರೂರು ಗ್ರಾಮದ ಒಡೆಯರು ಆಚರಣೆಗಳ

ಸಂದರ್ಭದಲ್ಲಿ ಬಿಳಿ ಕಂಬಳಿಯನ್ನು ಬಳಸುತ್ತಾರೆ. ಅದನ್ನು ಧರಿಸಿ ನರ್ತನ ಮಡುತ್ತಾರೆ. ಧರಿಸಿ ಮರಗಳನ್ನು ಮೈಲಾರಲಿಂಗನ ಗೊರವರು ಹೇಳಿಕೆಗಳನ್ನು ಹೇಳುವಾಗ ಕಪ್ಪು ಕಂಬಳಿಯನ್ನು ಬಳಸುತ್ತಾರೆ. ಇದು ಅಲ್ಲದೇ ಕಪ್ಪು, ಬಿಳಿ ಕಂಬಳಿಯಲ್ಲೂ ವರ್ಗೀಕರಣವಿದೆ. ಪಟ್ಟಿ (ಏನಿನ) ಕಂಬಳಿಗಳನ್ನು ಬಳಸಲಾಗುತ್ತದೆ. ಪಟ್ಟಿಗಳನ್ನು ಅವರನ್ನು ಗುರುತಿಸಿಕೊಳ್ಳುವ ಅನನ್ಯತೆ ಸಂಕೇತಗಳಾಗಿ ಬಳಸಿಕೊಳ್ಳುವುದಕ್ಕೆ ಆರಂಭಿಸಿದರು. ರೇವಣಸಿದ್ಧನ ಒಡೆಯರುಗಳು ಒಂದು ಬರೆಯ ಪಟ್ಟಿ ಕಂಬಳಿಯನ್ನು ಬಳಸಿದರೆ ಸಿದ್ಧರಾಮ, ಅಮೋಘಸಿದ್ಧ ಒಡೆಯರು ಮತ್ತೊಂದು ಬಗೆಯ ಪಟ್ಟಿ ಕಂಬಳಿಗಳನ್ನು ಬಳಸುತ್ತಿದ್ದಾರೆ. ಈ ನಿಯಮಗಳು ಕಾನೂನಿನಂತೆ ಬಳಕೆಯಲ್ಲಿವೆ. ಯಾರು ಮೀರುವುದಿಲ್ಲ. ಮೀರಿ ಬಳಿಸಿದರೆ ನಮಗೆ, ನಮ್ಮ ಮನೆತನಕ್ಕೆ ಒಳಿತಾಗುವುದಿಲ್ಲ ಎನ್ನುವ ನಂಬಿಕೆ ಇವರಲ್ಲಿದೆ. ಇವು ಸೃಷ್ಟಿಕೃರ್ತ ನಿಯಮಗಳೇ ಹೊರತು ಇದರಲ್ಲಿ ರಾಜಕಾರಣವಿದೆ. ಈ ಬಗೆಯ ಬಳಕೆಯ ವಿಧಾನದಲ್ಲಿ ಹಾಲುಮತ ಸಮುದಾಯದ ಕುಲ ತಾರತಮ್ಯದಂತೆ, ವರ್ಗ ತಾರತಮ್ಯದಂತೆ ಕಾಣಿಸುತ್ತದೆ. ಹಾಗಾಗಿ ಉಣ್ಣೆ ಕಂಕಣದವರಲ್ಲಾದ ಸಾಂಸ್ಕೃತಿಕ ಪಲ್ಲಟವನ್ನು ಅಥವಾ ಸಂಸ್ಕೃತೀಕರಣವನ್ನು ಅಧ್ಯಯನ ಮಾಡುವುದಕ್ಕೆ 'ಕಂಬಳಿ ಸಂಸ್ಕೃತಿ'ಯನ್ನು ಸೈದ್ಧಾಂತಿಕವಾಗಿ ಅಧ್ಯಯನ ಮಾಡಬೇಕು.

* * *

ವೃತ್ತಿಯನ್ನು ಕೇಂದ್ರವಾಗಿಟ್ಟುಕೊಂಡು ವಿಂಗಡಣೆಗೊಂಡ ಈ ಕುಟುಂಬ ಜಾತಿ ರೂಪವಾಗಿ ಪರಿವರ್ತನೆಗೊಂಡಿತು. ಭಾರತದ ಹಲವು ಸಮುದಾಯಗಳು ಜಾತಿಯತೆಗೆ ತಿರಿಗಿರುವುದು ಈ ಹಿನ್ನೆಲೆಯಲ್ಲಿಯೇ. ಬುಡಕಟ್ಟು ಸಮುದಾಯಗಳು ಜಾತಿಗಳಾಗಿ ರೂಪಾಂತರಗೊಂಡಿರುವ ವಿಧಾನವನ್ನು ಡಾ. ಮೊಗಳ್ಳಿ ಗಣೇಶ್ ಅವರು 'ಬುಡಕಟ್ಟು ಸಮುದಾಯಗಳ ತಾತ್ವಿಕ ರೂಪಾಂತರ'ವೆಂದು ಕರೆಯುತ್ತಾರೆ. 'ಹತ್ತಿಕಂಕಣ' ಮತ್ತು 'ಉಣ್ಣೆ ಕಂಕಣ' ಜಾತಿಯತೆ ಪರಿಕಲ್ಪನೆಗೆ ರೂಪಾಂತರಗೊಂಡ ನಂತರ ಹಲವು ಪಲ್ಲಡಗಳಾದವು. ವೈವಾಹಿತ ಸಂಬಂಧಕ್ಕೆ ನಿಷೇಧವನ್ನು ಹಾಕಿಕೊಮಡವು. ತಮ್ಮ ತಮ್ಮ ಅನನ್ಯತೆಯನ್ನು, ವೃತ್ತಿಯನ್ನು ಸ್ಥಾಪಿಸುವುದಕ್ಕೆ ಮತ್ತು ಕಾಪಾಡಿಕೊಳ್ಳುವುದಕ್ಕೆ ಹೋರಾಡ ಮಾಡಿದವು. ಈ ಕಾರಣಕ್ಕಾಗಿ ಒಂದು ಮತ್ತೊಂದರ ಮೇಲೆ ಯಜಮಾನಿಕೆಯನ್ನು ಸ್ಥಾಪಿಸುವುದಕ್ಕೆ ಆರಂಭಿಸಿದವು. ಈಗಿನ ವಿಜಾಪುರ ಜಿಲ್ಲೆ ಬಿಜ್ಜರಗಿ ಗ್ರಾಮದ ಸ್ಥಳದಲ್ಲಿ ಬೀರಪ್ಪನ ಸಾಕು ಶಿಷ್ಯನಾದ ಮಾಳಿಂಗರಾಯ ಗಾಣಿಗರ ಮಲ್ಲಪ್ಪನೊಂದಿಗೆ ಮಾಡಿದ ಸಂಘರ್ಷ ಕೃಷಿ ಮತ್ತು ಪಶುಪಾಲಕ (ಕುರಿಗಾರ)ರ ನಡುವೆ ನಡೆದ ಸಂಘರ್ಷವೇ ಸರಿ. ಮಾಳಿಂಗರಾಯ, ಮಲ್ಲಪ್ಪ ಬೆಳೆದ ಬೆಳೆಗಳಿಗೆ ಕುರಿಗಳನ್ನು ಬಿಟ್ಟು ಮೇಯಿಸಿ ಹಾಳು ಮಾಡುತ್ತಾವೆ. ಸೋಲಿಸಿ ತನ್ನ ಒಕ್ಕಲನ್ನಾಗಿ ಮಾಡಿಕೊಳ್ಳುತ್ತಾನೆ. ಪಶುಪಾಲಕರಲ್ಲಿ ಆಂತರಿಕ ಸಂಘರ್ಷಗಳು ಆರಂಭವಾದವು. ದನಗಾರ ಮತ್ತು ಕುರಿಗಾರರಲ್ಲಿ ಸಂಘರ್ಷಗಳು ಆರಂಭವಾದವು ಡಿ.ಡಿ. ಕೊಸಂಬಿಯವರು Myth and Reelity ಕೃತಿಯಲ್ಲಿ ಈ ಪರಿಕಲ್ಪನೆಯನ್ನು ಕುರಿತು ಚರ್ಚೆ ಮಾಡುತ್ತಾರೆ. ಪಶುಪಾಲನೆಗಳ ವಿಂಗಡಣೆಯಿಂದಲೇ ಹಟ್ಟಿಗಳ ಯಜಮಾನಿಕೆ ಆರಮಭವಾಯಿತು ಎನ್ನುವುದು ಇವರ ವಾದ. ಇವತ್ತು ಚಿತ್ರದುರ್ಗ ಪರಿಸರದಲ್ಲಿ ಕಾಣಿಸುವ 'ಕಾಡುಗೊಲ್ಲ' ಮತ್ತು 'ಕುರುಬರ ಹಟ್ಟಿಗಳು' ಒಂದೇ ಕುಲಗಳು ಅಥವಾ ಒಂದು ಸಮುದಾಯ ಮಾಡಿಕೊಂಡಿರುವ ವೃತ್ತಿ ವಿಂಗಣೆಯಂತೆ ಕಾಣಿಸುತ್ತದೆ. ಸಮುದಾಯಗಳು ಈ ಬಗೆಯಲ್ಲಿ ವಿಂಗಡಣೆಗೊಂಡಿರುವ ವಿಧಾನವನ್ನು ವಿದ್ವಾಂಸರು ಆರ್ಥಿಕ ಛಿದ್ರೀಕರಣವೆಂದು ಕರೆಯುತ್ತಾರೆ. ಹತ್ತಿಕಂಕಣ ಮತ್ತು ಉಣ್ಣೆಕಂಕಣ ಆರ್ಥಿಕವಾಗಿ ಛಿದ್ರೀಕರಣಗೊಂಡ ರೂಪಕಗಳೇ ಸರಿ. ಇದನ್ನು ಹಾಲುಮತ ಸಮುದಾಯದಲ್ಲಿ ಆರ್ಥಿಕ ಛಿದ್ರೀಕರಣಗೊಂಡ ಮೊದಲ ಹಂತವೆಂದು ಕರೆಯಬಹುದು. ಹಾಗಾಗಿ ಈ ಕುಲಗಳ ಸೃಷ್ಠಿಯನ್ನು ಸಾಮಾಜಿಕ, ರಾಜಕೀಯ, ಧಾರ್ಮಿಕ ಹಿನ್ನೆಲೆಗಳ ಜೊತೆಗೆ ಆರ್ಥಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡಬೇಕು. ಇದಕ್ಕೆ ಸಾಂಸ್ಕೃತಿಕ ವೀರರ ಆಚರಣೆಗಳನ್ನು ಮುಖ್ಯವಾಗಿಟ್ಟಕೊಳ್ಳಬೇಕು.

ಏಕೆಂದರೆ ಹುಲಜಂತಿ ಮಾಳಿಂಗರಾಯನ ಜಾತ್ರೆ, ಓರಂಗಲ್ಲಿನ ಯಲ್ಲಮ್ಮನ ಜಾತ್ರೆ. ಅರಕೇರಿ ಅಮೋಘಸಿದ್ಧನ ಜಾತ್ರೆ, ಚಿಂಚಲಿ ಮಾಯವ್ವನ ಜಾತ್ರೆ, ಮುಂತಾದ ಸಾಂಸ್ಕೃತಿಕ ವೀರರ ಜಾತ್ರೆಗಳು ಆರ್ಥಿಕ ವಹಿವಾಟುಗಳ ಕೇಂದ್ರಗಳಾಗಿದ್ದವು. ಸಾಂತ್ಯೆಮರ್ ಅವರು (Postral Detes in Western India) 'ಜಾತ್ರೆಗಳು ಆರಂಭವಾದದ್ದು ಆರ್ಥಿಕ ವಹಿವಾಟುಗಳಿಗಾಗಿ ಎನ್ನುತ್ತಾರೆ. ಇದಕ್ಕೆ ಕರ್ನಾಟಕ ಮಹಾರಾಷ್ಟ್ರದಲ್ಲಿ ಪ್ರಚಲಿತದಲ್ಲಿರುವ ಖಂಡೋಬಾ, ಬಿರೋಭಾ ಮತ್ತು ವಿಠೋಬಾ ದೈವಗಳು ದನಗಾರರ ಮೂಟೆಗಳಲ್ಲಿ ದೊರೆತ ಕಂಥನಗಳನ್ನು ಹಾಗೂ ಆ ದೈವಗಳ ಜಾತ್ರೆಗಳಲ್ಲಿ ನಡೆಯುವ ವ್ಯಾಪಾರಗಳನ್ನು ಉದಾಹರಣೆ ಕೊಡುತ್ತಾರೆ. ಎಸ್.ಎಸ್. ಹಿರೇಮಠ ಮತ್ತು ಚಿಂತಾಮಣಿ ಢೇರೆ ಮುಂತಾದ ವಿದ್ವಾಂಸರು ಸಾಂತ್ಯೆಮರ್ ಅವರ ವಾದವನ್ನು ಒಪ್ಪಿಕೊಂಡಿದ್ದಾರೆ.

ಉಣ್ಣೆಕಂಕಣದವರಿಗೆ ಕುರಿಗಾರಿಕೆ ವ್ಯಾಪಾರದ ಮುಖ್ಯ ವಸ್ತು ಆಗಿತ್ತು. ಹಾಲು, ಮಾಂಸ, ಉಣ್ಣೆ, ಕಂಬಳಿಯನ್ನು ಹೊತ್ತು ಮಾರಾಟ ಮಾಡುತ್ತಿದ್ದರು ಎನ್ನುವುದು ಎಲ್ಲರಿಗೂ ತಿಳಿದ ವಿಷಯ. ಹಾಲಿನ ಜೊತೆಗೆ ಕುರಿಮಾಂಸವನ್ನು ಹೊತ್ತು ಮಾರಿದರೆನ್ನುವ ಕಾರಣಕ್ಕೆ ಕಲ್ಯಾಣದಿಂದ ಬಹಿಷ್ಕಾರಕ್ಕೆ ಒಳಗಾಗುತ್ತಾರೆ. ಕುರಿಗಾರಿಕೆಯನ್ನು ಮಾಡಬೇಕಾದರೆ ಹಾಲು ಹಿಂಡುವ, ಉಣ್ಣೆ ಕತ್ತರಿಸುವ, ಕಂಬಳಿ ನೇಯುವ ಮತ್ತು ಮಾರಾಟ ಮಾಡುವ ವಿಧಾನಗಳು ಗೊತ್ತಿರಬೇಕು. ಗೊತ್ತಿದ್ದರೆ ಮಾತ್ರ ಕುರಿಗಾರಿಗೆ ಮಾಡುವುದಕ್ಕೆ ಅರ್ಹ. ಗೊತ್ತಿರದಿದ್ದರೆ ಆ ಜ್ಞಾನವನ್ನು ಕೊಟ್ಟು ಕುರಿಗಾರಿಕೆ ಹಚ್ಚುತ್ತಿದ್ದರು. ಸಾಂಸ್ಕೃತಿಕ ವೀರರ ಜೀವನ ಚರಿತ್ರೆಯಲ್ಲಿ ಈ ಪರಿಕಲ್ಪನೆಯನ್ನು ಕಾಣಬಹುದು. ಉದಾಹರಣೆ ಕಾಲುಮತದ ಸಾಂಸ್ಕೃತಿಕ ವೀರನಾದ ಇಟ್ಟಪ್ಪ (ವಿಠೋಬಾ-ಪಾಂಡುರಂಗ) ಮಾಳಿಂಗರಾಯ ಮತ್ತು ಬೀರಪ್ಪನಲ್ಲಿ ಕುರಿಗಾರಿಕೆಯನ್ನು ಕಲಿಯುವ ಅಥವಾ ಮಾಡುವ ಹಂಬಲವನ್ನು ವ್ಯಕ್ತಪಡಿಸುತ್ತಾನೆ. ಇವರು ಕುರಿಗಾರಿಕೆ ಅವಕಾಶ ಕಲ್ಪಿಸಿಕೊಡುವುದಿಲ್ಲ. ಇದಕ್ಕೆ ಬೇರೆ ಬೇರೆ ಕಾರಣಗಳಿವೆ. ಆದರೆ ಚರ್ಚೆ ಇಲ್ಲಿ ಅಸಮಂಜಸ. ಇವರ ನಿರಾಕರಣೆಯಿಂದ ಬೇಸತ್ತ ಇಟ್ಟಪ್ಪ ಅಕ್ಕ ನಾಗಮ್ಮನೆನ್ನುವ ಸಪ್ತಮಾತೃಕೆಯರ ಹತ್ತಿರ ಹೋಗುತ್ತಾನೆ. ಅವರು ಕುರಿಗಾರಿಕೆಯನ್ನು ಕಲಿಸುವ ಮೊದಲು ಹಾಲು ಹಿಂಡುವ, ಉಣ್ಣೆ ಕತ್ತರಿಸುವ, ಕಂಬಳಿ ನೇಯುವ ಮತ್ತು ಸಂತೆಗಳಲ್ಲಿ ಇವುಗಳನ್ನು ಮಾರಾಡ ಮಾಡಿಕೊಂಡ ಬರುವ ಕಾಯಕಕ್ಕೆ ಹಚ್ಚುತ್ತಾರೆ.

ತನ್ನ ಮಿನಿಯಾ ಮುಂದೇನ ಗಳಗಿ ಕಟ್ಟುತಾನೇನ
ಕಂಬಳೆಪ್ಪ ಕಂಬಳಿ ಏಸ ಕಂಬಳಿ ನೈದಾನ
ಪಾಂಡುರಂಗನಲ್ಲೇಳ ಏಳನೂರ ಕಂಬಳಿ
ಏಳ ನೂರ ಕಂಬಳಿ ನೈದ ಕಟ್ಟು ತಾನೇನ
ಬಂಗಾರ ವರ್ಣದ ಕಂಬಳಿ ಗಳಗಿ ಹಾಕುತಾನೇನ
ಬಾರೊ ಬಾರೋ ಹಡದಪ್ಪ ಏಳಂಪುರದ ಪ್ಯಾಟ್ಯಾಗ
ಏಳಂಪುರದ ಪ್ಯಾಟ್ಯಾಗೆ ಮೂರ ರೂಪಾಯಿಗ ಮಾರ್ಯಾನೆ
ಮೂರ ರೂಪಾಯಿಗ ಮಾರಿ ಸಗರವಾಡಕ ಹೋದನ
(ವೀರಣ್ಣದಂಡೆ (ಸಂ); ಜನಪದಹ ಲುಮತ ಮಹಾಕಾವ್ಯ, ಪುಟ ೬೨೭)

ಕುರಿಗಾರಿಕೆಯಲ್ಲಿ ವೃತ್ತಿಗಿಂತ ಆರ್ಥಿಕತೆಗೆ ಪ್ರಧಾನ್ಯತೆ ಇತ್ತು. ಹಾಗಾಗಿ ಹತ್ತಿ ಕಂಕಣದ ಮತ್ತು ಉಣ್ಣೆ ಕಂಕಣಗಳು ವೃತ್ತಿಯನ್ನು ಆಧರಿಸಿ ವಿಂಗಡಣೆಗೊಂಡ ಕುಲಗಳಾಗಿ ನಮಗೆ ಕಾಣಿಸುತ್ತವೆ. ಕರ್ನಾಟಕ ಮಹಾರಾಷ್ಟ್ರ ಗಡಿನಾಡು ಮತ್ತು ಬಳ್ಳಾರಿ, ರಾಯಚೂರ, ಕೊಪ್ಪಳ ಸುತ್ತಮುತ್ತಲಿನ ಪ್ರದೇಶ ಅಥವಾ ಭೀಮಾ, ತುಂಗಭದ್ರ ನದಿ ದಂಡೆಯ ಮಧ್ಯಪ್ರದೇಶ ಭೌಗೋಳಿಕವಾಗಿ ಹತ್ತಿ ಬೆಳೆಯುವುದಕ್ಕೆ ಮತ್ತು ಕುರಿಗಾರಿಕೆ ಯೋಗ್ಯವಾದ ಭೂಮಿ, ಇಲ್ಲಿ ಜನ್ಮ ತಾಳಿರುವುದರಿಂದ ಆರ್ಥಿಕ ಹಿನ್ನೆಲೆಯಲ್ಲಿಯೇ ರೂಪಗೊಂಡಿರುವುದಕ್ಕೆ ಸಾಧ್ಯವಿದೆ. ಜೊತೆಗೆ ಇಲ್ಲಿಯೇ ತಮ್ಮ ಅಸ್ತಿತ್ವವನ್ನು ಕಟ್ಟಿಕೊಂಡಿವೆ. ಎರಡು ಕುಲಗಳು ಸಂಘರ್ಷ ಮಾಡಿವೆ, ಸಂಸ್ಕೃತೀಕರಣಗೊಂಡಿವೆ. ಇದರಲ್ಲಿ ಹತ್ತಿಕಂಕಣದವರು ಸಂಸ್ಕೃತೀಕರಣಗೊಂಡಿದ್ದು ಹೆಚ್ಚು. ವಿರು ಒಂದು ಕಡೆ ನಲೆನಿಂತ ಕಾರಣಕ್ಕೆ ಹಲವು ಧರ್ಮಗಳ ಪ್ರಭಾವವು ಆಯ್ತು. 'ಆಹಾರ ಸಂಸ್ಕೃತಿ'ಯಲ್ಲೂ ಬದಲಾವಣೆಯನ್ನು ಕಂಡುಕೊಂಡರು. ಹೆಚ್ಚು ಜನ ಲಿಂಗಾಯತ ಸಂಸ್ಕೃತಿಗೆ ಪರಿವರ್ತನೆಯಾಗಿ ಅಥವಾ ಪ್ರಭಾವಿತರಾಗಿ ಸಸ್ಯಹಾರಿಗಳಾದರು. ಇದಕ್ಕೆ ಕೃಷಿಯಲ್ಲಿ ಸಾಧನೆ ಮಾಡಿದ್ದು ಮತ್ತು ಹತ್ತಿ ಬಳಕೆಯಲ್ಲಿ ಸುಧಾರಣೆ ಕಂಡಿದ್ದು ಕಾರಣವಾಯಿತು. ಉಣ್ಣೆ ಕಂಕಣದವರಲ್ಲಿ ಇಷ್ಟು ಪ್ರಮಾಣಭರಿತವಾಗಿ ಬದಲಾವಣೆಗಳು ಆಗಲಿಲ್ಲ. ತಮ್ಮ ದೈವಗಳೆ ಅಥವಾ ತಮ್ಮ ಸಾಂಸ್ಕೃತಿಕ ವೀರರೇ ನಮ್ಮ ಕುರಿಗಳನ್ನು ರಕ್ಷಣೆ ಮಾಡಿದವರು ಮತ್ತು ಮಾಡುತ್ತಿರುವವರು ಎನ್ನುವ ನಂಬಿಕೆಯನ್ನು ಕಳೆದುಕೊಳ್ಳಲಿಲ್ಲ. ನಂಬಿಕೆಯಿಂದಲೇ ಸಾಂಸ್ಕೃತಿಕ ವೀರರನ್ನು ಆರಾಧಿಸುತ್ತಿದ್ದರು. ಆದ್ದರಿಂದಲೇ ಕುರಿಗಾರಿಕೆಯ ಅಲೆಮಾರಿತನದ ಜೊತೆಗೆ ಸಾಂಸ್ಕೃತಿಕ ವೀರರ ಜೊತೆಗೆ ವಿಸ್ತರಣೆ ಮಾಡುತ್ತಾ ನಡೆದರು. ಹೆಚ್ಚು ದೈವಗಳು ವಿಸ್ತರಣೆ ಆಗಿದ್ದು ಇವರಿಂದಲೇ. ಈ ಮಾತುಗಳನ್ನು ಒಂದು ಕುಲ ಹೆಚ್ಚು, ಮತ್ತೊಂದು ಕುಲ ಕಡಿಮೆ ಅನ್ನುವ ಉದ್ದೇಶದಿಂದ ಮಾತನಾಡುತ್ತಿಲ್ಲ. ಚರಿತ್ರೆಯ ವಿಶ್ಲೇಷಣೆ ಅಷ್ಟೆ. ಅಧ್ಯಯನದ ದೃಷ್ಟಿಯಿಂದ ಎರಡು ಕುಲಗಳು ಮುಖ್ಯ. ಒಂದು 'ಕಂಕಣ' ಮೂಲ ಸಂಸ್ಕೃತಿಗೆ ಹೆಚ್ಚು ಆಕರವಾದರೆ ಮತ್ತೊಂದು ಕಂಕಣ ಸಂಸ್ಕೃತೀಕರಣಗೊಂಡಿರುವ ವಿಧಾನವನ್ನು ತಿಳಿದುಕೊಳ್ಳುವುದಕ್ಕೆ ಹೆಚ್ಚು ಆಕರವಾಗಿದೆ. ಎನ್ನುವ ಗ್ರಹಿಕೆ ನನ್ನದು. ಈ ಎರಡು

ಕುಲಗಳನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿದಾಗ ಮಾತ್ರ ಹಾಲುಮತದ ಸಮಗ್ರ ಚರಿತ್ರೆಯನ್ನು ಕಟ್ಟಿಕೊಳ್ಳುವುದಕ್ಕೆ ಸಾಧ್ಯ. ಹಾಗಾಗಿ ಈ ಪರಿಕಲ್ಪನೆಯಿಂದಲೇ ಹುಡುಕಾಟಗಳನ್ನು ಆರಂಭಿಸಬೇಕು. ಎಲ್ಲದಕ್ಕಿಂತ ಮುಖ್ಯವಾಗಿ ಈ ಎರಡು ಕಂಕಣಗಳ ಅಧ್ಯಯನ ಮೊದಲಿಗೆ ಆಗಬೇಕು.

## ೭. ಒಡೆಯರು

ಭಾರತೀಯ ಸಂಸ್ಕೃತಿಯಲ್ಲಿ ಕುರುಬ ಸಮುದಾಯಕ್ಕೆ ವಿಶೇಷ ಚರಿತ್ರೆ ಇವೆ. ಕರ್ನಾಟಕದ ಮಟ್ಟಿಗೆ ಇದು ದೊಡ್ಡ ಸಮಾಜ. ಒಂದು ಸಮಾಜವೆಂದರೆ ಅಲ್ಲಿ ಧಾರ್ಮಿಕ ಪುರುಷರು, ಸಾಂಸ್ಕೃತಿಕ ವೀರರು, ಆಚರಣಾದೈವಗಳು, ಅವರದೇ ಆದ ಸಾಮಾಜಿಕ ನಂಬಿಕೆ, ಸಂಪ್ರದಾಯ, ವಿಧಿವಿಧಾನಗಳು ರೂಪುಗೊಂಡಿರುತ್ತವೆ. ಇಂಥ ಸಾಮಾಜಿಕ ಚಟುವಟಿಕೆಗಳು ವ್ಯವಸ್ಥಿತವಾಗಿ, ಸುಗಮವಾಗಿ ನಡೆಯುವುದಕ್ಕಾಗಿ ಆ ಸಮಾಜ ಧಾರ್ಮಿಕ ಮುಖಂಡರೆನಿಸಿದ ಪುರೋಹಿತ ವರ್ಗವನ್ನು ನಿಯೋಜಿಸಿಕೊಂಡಿರುತ್ತದೆ. ಕುರುಬ ಸಮುದಾಯ ನಿಯೋಜಿಸಿಕೊಂಡಿರುವ ಇಂಥ ಪುರೋಹಿತ ವರ್ಗದವರನ್ನೆ "ಒಡೆಯರು" ಎಂದು ಕರೆಯಲಾಗುತ್ತದೆ. ಇವರು ಆ ಸಮಾಜದ ಏಳ್ಗೆ, ಸಾಮಾಜಿಕವಾಗಿ ನಡೆಯುವ ಹಬ್ಬ-ಉತ್ಸವಗಳು, ಮದುವೆ-ಮರಣಗಳಂಥ ಕಾರ್ಯಗಳಲ್ಲಿ ಪೌರೋಹಿತ್ಯವನ್ನು ವಹಿಸಿಕೊಂಡಿರುತ್ತಾರೆ. ಕುರುಬ ಸಮಾಜದ ಒಡೆಯರು ಒಳಪಂಗಡಗಳಲ್ಲಿ ಪ್ರಮುಖರಾಗಿದ್ದಾರೆ.

### ೧. ಒಡೆಯರು ಪದದ ಅರ್ಥ

'ಒಡೆಯ' ಎಂದರೆ ಸಾಮಾನ್ಯವಾಗಿ ನಾಯಕ, ಯಜಮಾನ, ಮುಖಂಡ, ಹಿರಿಯ, ನೇತಾರ, ಮುಂದಾಳು ಎಂದು ಹೇಳಲಾಗುತ್ತದೆ. ಕುರುಬ ಸಮುದಾಯದಲ್ಲಿ ಬರುವ 'ಒಡೆಯದು' ಎಂಬ ಪದಕ್ಕೆ ಸ್ವಾಮಿ, ಅಯ್ಯ, ಜಂಗಮ, ಧಾರ್ಮಿಕ ಮುಖಂಡ, ಗುರು ಎಂಬರ್ಥಗಳಿವೆ. ಹೀಗಾಗಿ ಕುರುಬರ ಅಯ್ನೋರು, ಕುರುಬರ ಗುರುವಿನವರು, ಕುರುಬರ ಮಾರಾಯಗೋಳು, ಎಂದು ಕರೆಸಿಕೊಳ್ಳುವ ಧಾರ್ಮಿಕ ಮುಖ್ಯಸ್ಥನೇ 'ಗುರು ಒಡೆಯರು'- ಎಂಬ ಪದ ವಿಶಾಲಾರ್ಥವಾಗಿ ಹಾಗೂ ಪಾರಿಭಾಷಿಕವಾಗಿ ಪ್ರತಿನಿಧಿಸುತ್ತದೆ.

### ೨. ಗುರು ಒಡೆಯರ ಪರಂಪರೆ

ಕುರುಬ ಸಮುದಾಯದ ಪೌರೋಹಿತ್ಯವನ್ನು ನಡೆಸುವ ಒಡೆಯರಿಗೆ 'ಗುರು' ಸ್ಥಾನ ನೀಡಿದ ಪ್ರಯುಕ್ತ ಇವರು ಗುರು ಒಡೆಯರೆನಿಸಿದರು. ಇಂಥ ಗುರು ಒಡೆಯರಿಗೆ ಒಂದು ಸಂಪ್ರದಾಯದ ಹಿನ್ನೆಲೆಯಲ್ಲಿ ನಿರ್ವಹಿಸಿರುವ ಅನೇಕ ಕಾವ್ಯ-ಪುರಾಣ, ಜನಪದ ಕಥನಗಳು, ಶಾಸನಗಳು, ಆಧುನಿಕ ಕಾಗದ ಪತ್ರಗಳಂಥ ಆಕರಗಳು ಲಭ್ಯವಿವೆ. ಆ ಎಲ್ಲ ಆಕರಗಳ ನೆರವಿನಿಂದ ಗುರು ಒಡೆಯರ ಪರಂಪರೆ ಮೂರು ಸಂಪ್ರದಾಯಗಳಲ್ಲಿ ಕವಲೊಡೆದಿರುವುದನ್ನು ಗಮನಿಸಬಹುದಾಗಿದೆ.

**೧. ರೇವಣಸಿದ್ಧ ಸಂಪ್ರದಾಯದ ಗುರು ಒಡೆಯರು:** ಕರ್ನಾಟಕದಲ್ಲಿ ರೇವಣಸಿದ್ಧೇಶ್ವರ ದೇವಾಲಯ, ಮಠಗಳು ನೂರಾರು ಇವೆ. ಇವುಗಳ ಪೂಜಾರಿಗಳಾಗಿ, ಪೀಠಾಧಿಕಾರಿಗಳಾಗಿ 'ಶಾಂತೊಡೆಯರು' ಕಂಡು ಬರುತ್ತಾರೆ. ಬಿಜಾಪುರ ಜಿಲ್ಲೆಯ ಸರೂರಿನ ಶಾಂತಮುತ್ತಯ್ಯ ಮೂಲಪುರುಷನಾದ್ದರಿಂದ ಇವರು ತಮ್ಮನ್ನು ಶಾಂತೊಡೆಯರು ಎಂದು ಕರೆದುಕೊಂಡಿದ್ದಾರೆ. ಶಾಂತೊಡೆಯ ಸಂಪ್ರದಾಯವನ್ನು ನಿರೂಪಿಸುವ "ತಗರ ಪವಾಡ" ಹೆಸರಿನ ಚಾರಿತ್ರಿಕ ಕಾವ್ಯ "ಸತ್ತ ಕುರಿಯನ್ನು ಕಲ್ಯಾಣಕ್ಕೆ ತಂದ ತಪ್ಪಿಗಾಗಿ ಬಹಿಷ್ಕಾರಗೊಂಡಿದ್ದ ಕಲ್ಯಾಣದ ಕುರುಬರು ೧೨ ವರ್ಷಗಳ ಬಳಿಕ ಶಾಂತಮುತ್ತಯ್ಯನ ಕೃಪೆಯಿಂದ ಕಲ್ಯಾಣ ಪ್ರವೇಶಿಸಿದ" ಕಥೆಯನ್ನು ತಿಳಿಸುತ್ತದೆ. ಅಲ್ಲಿ "ಶಾಂತಮುತ್ತಯ್ಯ ಗುರು, ರೇವಣಸಿದ್ಧ ಪರಮ ಗುರು"-ಎಂಬ ಉಲ್ಲೇಖದಿಂದ ಶಾಂತಮುತ್ತಯ್ಯ ಸಂಪ್ರದಾಯದ ಒಡೆಯರನ್ನು, ರೇವಣಸಿದ್ಧ ಸಂಪ್ರದಾಯದ ಒಡೆಯರೆಂದೂ ಕರೆಯಲಾಗುತ್ತದೆ. ಹೀಗಾಗಿ ರೇವಣಸಿದ್ಧನೆಂಬ ಪರಮಗುರು, ಶಾಂತ ಮುತ್ತಯ್ಯನೆಂಬ ಗುರು ಸಂಪ್ರದಾಯದ ಒಡೆಯರು "ಶಾಂತೊಡೆಯರು" ಎಂಬ ಹೆಸರಿನಿಂದ ಪ್ರಚಲಿತವಾಗಿದ್ದಾರೆ. ಗುರು ಪರಂಪರೆಯನ್ನು ಸಾರುವ ಸಿರಿವಾರ (೧೧೭೦), ಕೆಲ್ಲೂರ (೧೧೭೫), ಹೋತಗಲ್ಲ (೧೧೭೫), ತುರುವೇಕೆರೆ (೧೪೮೦) ಮುಂತಾದ

ಶಾಸನಗಳು, ತಾಮ್ರಪತ್ರಗಳು, ಕಾಗದ ದಾಖಲೆಗಳು ಲಭ್ಯವಿವೆ. ಕರ್ನಾಟಕದಲ್ಲಿ ಶಾಂತೊಡೆಯರ ಸಂಪ್ರದಾಯದ ಒಡೆಯರ ಮನೆತನಗಳು ೧೦೦ಕ್ಕೂ ಹೆಚ್ಚು ದೊರೆಯಬಹುದು. ಹಲ್ಲೂರು, ಕೊಪ್ಪಳ, ಬಂಕಾಪುರ, ಚಿಕ್ಕನಾಯಕನಹಳ್ಳಿ, ಸವದತ್ತಿ, ಹುಮ್ನಾಬಾದ, ಡಂಬಳ, ತುರುವೇಕೆರೆ, ಬಳ್ಳಾರಿ ಭಾಗಗಳಲ್ಲಿ ಈ ಸಂಪ್ರದಾಯದ ಗುರು ಒಡೆಯರು ಕಂಡುಬರುತ್ತಾರೆ.

**೨. ಸಿದ್ಧರಾಮೇಶ್ವರ ಸಂಪ್ರದಾಯದ ಗುರು ಒಡೆಯರು:** ಕರ್ನಾಟಕದಲ್ಲಿ ಸಿದ್ಧರಾಮೇಶ್ವರ ದೇವಾಲಯ, ಮಠಗಳು ನೂರಾರು ಇವೆ. ಇವುಗಳ ಅರ್ಚಕರಾಗಿ, ಪೀಠಾಧಿಕಾರಿಗಳಾಗಿ 'ಮಂಕೊಡೆಯರು' ಕಂಡುಬರುತ್ತಾರೆ. ಸೊಲ್ಲಾಪುರ ಸೀಮೆಯ ಸಿದ್ಧರಾಮೇಶ್ವರನ ಅನುಯಾಯಿಯಾದ ಸಿದ್ಧಮಂಕನನ್ನು ಮಂಕಂತಂದೆ, ಮರುಳ ಮಂಕ ಎಂದು ಕರೆಯಲಾಗಿದೆ. ಈತ ಈ ಸಂಪ್ರದಾಯದ ಮೂಲಪುರುಷನಾದ್ದರಿಂದ ಇವರು 'ಮಂಕೊಡೆಯರು' ಎಂದು ತಮ್ಮನ್ನು ಕರೆದುಕೊಂಡಿದ್ದಾರೆ. ಈ ಸಂಪ್ರದಾಯವನ್ನು ನಿರೂಪಿಸುವ "ಸಿದ್ಧಮಂಕ ಚರಿತೆ" ಹೆಸರಿನ ಚಾರಿತ್ರಿಕ ಕಾವ್ಯ "ಸುತ್ತ ಕುರಿಯನ್ನು ಕಲ್ಯಾಣಕ್ಕೆ ತಂದ ತಪ್ಪಿಗಾಗಿ ಬಹಿಷ್ಕಾರಗೊಂಡ ಕಲ್ಯಾಣದ ಕುರುಬರು ೧೨ ವರ್ಷಗಳ ಬಳಿಕ ಸಿದ್ಧಮಂಕ ತಂದೆಯ ಕೃಪೆಯಿಂದ ಕಲ್ಯಾಣ ಪ್ರವೇಶೀಸಿದ" ಕಥೆಯನ್ನು ತಿಳಿಸುತ್ತದೆ. ಅಲ್ಲಿ "ಮಂಕ ತಂದೆ ಗುರು ಸಿದ್ಧರಾಮ ಪರಮಗುರು" ಎಂಬ ಉಲ್ಲೇಖದಿಂದ ಸಿದ್ಧಮಂಕ ಸಂಪ್ರದಾಯದ ಒಡೆಯರನ್ನು, ಸಿದ್ಧರಾಮೇಶ್ವರ ಸಂಪ್ರದಾಯದ ಒಡೆಯರೆಂದೂ ಕರೆಯಲಾಗುತ್ತದೆ. ಹೀಗಾಗಿ ಸಿದ್ಧರಾಮೇಶ್ವರನೆಂಬ ಪರಮಗುರು, ಸಿದ್ಧಮಂಕನೆಂಬ ಗುರು ಸಂಪ್ರದಾಯದ ಒಡೆಯರು "ಮಂಕೊಡೆಯರು" ಎಂಬ ಹೆಸರಿನಿಂದ ಪ್ರಚಲಿತವಾಗಿದ್ದಾರೆ. ಶಾಂತೊಡೆಯರಿಗೆ ಹೋಲಿಸಿದರೆ ಈ ಸಂಪ್ರದಾಯದ ಗುರು ಒಡೆಯರು ಕಡಿಮೆ. ಮುದ್ದೇಬಿಹಾಳ, ತುಮಕೂರು ಭಾಗಗಳಲ್ಲಿ ಈ ಮನೆತನಗಳು ಕಂಡುಬರುತ್ತದೆ. ಸರೂರಿನ ಮಲ್ಲಿಕಾಜುನ ದೇವಾಲಯದ ಕ್ರಿ.ಶ.೧೨೦೮ ಹಾಗೂ ೧೨೧೦ರ ಶಾಸನಗಳು, 'ಮಂಕಯ್ಯಗಳೆಂಬ' ಉಲ್ಲೇಖ ಒಳಗೊಂಡಿರುವುದನ್ನು ನೋಡಿದರೆ ಇವರ ಪ್ರಾಚೀನತೆ ತಿಳಿದುಬರುತ್ತದೆ.

**೨. ಅಮೋಘಸಿದ್ಧ ಸಂಪ್ರದಾಯದ ಗುರು ಒಡೆಯರು:** ಕರ್ನಾಟಕದಲ್ಲಿ, ಬಿಜಾಪುರ, ಬೆಳಗಾವಿ, ಗುಲಬರ್ಗಾ ಜಿಲ್ಲೆಗಳಲ್ಲಿ, ಶಿರಹಟ್ಟಿ ತಾಲೂಕಿನಲ್ಲಿ ಹಾಗೆಯೇ ಕರ್ನಾಟಕೇತರ ಪ್ರಾಂತಗಳಾದ ಸೊಲ್ಲಾಪುರ, ಸಾಂಗಲಿ, ಸಾತಾರ ಜಿಲ್ಲೆಗಳಲ್ಲಿ ಅಮೋಘಸಿದ್ಧ ಸಂಪ್ರದಾಯದ ಮಠಗಳು, ದೇವಾಲಯಗಳು ಹರಡಿಕೊಂಡಿವೆ. ಇವುಗಳ ಅರ್ಚಕರಾಗಿ, ಪೀಠಾಧಿಕಾರಿಗಳಾಗಿ "ಅಮೋಘ ಒಡೆಯರು" ಇಲ್ಲವೇ "ಅಮುಗೋಡೆಯರು" ಕಂಡುಬರುತ್ತಾರೆ. ಅಮೋಘಸಿದ್ಧನ ಸಂಪ್ರದಾಯದ ಕಥೆ ಪುರಾಣದಿಂದ ಹಿಡಿದು ಕಲ್ಯಾಣದ ಶರಣರು, ಸೊನ್ನಲಿಗೆ ಸಿದ್ಧರಾಮೇಶ್ವರರೊಂದಿಗೆ ತಳುಕು ಹಾಕಿಕೊಂಡಿದೆ. ಬಿಜಾಪುರ ಜಿಲ್ಲೆಯ 'ಮುಮ್ಮಟಗಿರಿ' ಈ ಸಂಪ್ರದಾಯ ಒಡೆಯರ ಮೂಲ ಕೇಂದ್ರವಾಗಿರಬೇಕು. ಈ ಸಂಪ್ರದಾಯದ ಪರಂಪರೆಯು ಕುತೂಹಲಕಾರಿಯಾಗಿದ್ದು, ಮಕ್ಕಳು, ಮೊಮ್ಮಕ್ಕಳು, ಶಿಷ್ಯಪ್ರಶಿಷ್ಯರಿಂದ ಈ ಪರಂಪರೆ ಉಜ್ವಲವಾಗಿ ಬೆಳೆದಿದೆ.

**೩. ಗುರು ಒಡೆಯರ ಆಚರಣೆಗಳು:** ಧಾರ್ಮಿಕವಾಗಿ ಸಿದ್ಧಪುರುಷರಾದ ರೇವಣಸಿದ್ಧ, ಸಿದ್ಧರಾಮ ಹಾಗೂ ಅಮೋಘಸಿದ್ಧರ ಅರ್ಚಕರಾಗಿ ದೇವತಾರಾಧನೆ, ಹಬ್ಬ, ಉತ್ಸವ ಜಾತ್ರೆಗಳಲ್ಲಿ ಭಾಗವಹಿಸಿ ವಿಧಿವತ್ತಾಗಿ ಆ ಎಲ್ಲ ಆಚರಣೆಗಳನ್ನು ನಡೆಸಿಕೊಡುತ್ತಾರೆ. ವಿಶೇಷವಾಗಿ ಸಾಮಜಿಕ ಆಚರಣೆಗಳಾದ ಕುರುಬರ ಜನನ, ನಾಮಕರಣ, ಮದುವೆ, ಗೃಹಪ್ರವೇಶ, ಅಂತ್ಯಸಂಸ್ಕಾರ, ಋತುಮತಿ ಸಮಯದ ಶುದ್ಧಿಕರಣ ಕ್ರಿಯೆ, ಮನೆಮದ್ದು, ಅಂತ್ರ-ತಂತ್ರ-ಜ್ಯೋತಿಷ್ಯ, ವ್ಯಾಜ್ಯ, ಪರಿಹಾರಗಳಂಥ ಲೌಖಿಕ ಬದುಕಿನ ನಿರ್ವಹಣೆಗಳಲ್ಲಿ ಗುರು ಒಡೆಯರ ಸಾಮಾಜಿಕ ಜವಾಬ್ದಾರಿ ಅತಿ ಮುಖ್ಯವಾಗಿ ತೋರುತ್ತದೆ.

ವಧು-ವರರನ್ನು ಸುರಗಿನೂಲು ಸುತ್ತಿ ಹಸೆಮಣೆಯ ಮೇಲೆ ಕುಳ್ಳಿರಿಸಿ, ಎಣ್ಣೆ ಇಟ್ಟು ಅರಿಷಿಣವನ್ನು ಹಚ್ಚಿ ಸ್ನಾನಮಾಡಿಸಿ ಹೊಸ ಬಟ್ಟೆ ಧರಿಸುತ್ತಾರೆ. ಕರಿಯ ಕಂಬಳಿ ಗದ್ದುಗೆ ಮೇಲೆ ಕುಳಿತು ಒಡೆಯರು ಕಂಕಣಧಾರಣೆ ಮಾಡಿಸಿ "ಕಲಿಕಲಿಯಾದ ಕರ್ಯಜ್ಜನಾಗಿ, ಭೀಮಣ್ಣನಾಗಿ, ಭಿಲ್ಲರಾಜ್ಯವನಾಳಿ, ಗುರು ರೇವಣಸಿದ್ಧ ಕಟ್ಟಿದ ಸೇಸೆ ಸ್ಥಿರವಾಗಿರಲಿ, ಸರೂರು ಶಾಂತ ಮುತ್ತಯ್ಯ ಕಟ್ಟಿದ ಕಲ್ಯಾಣ ಸ್ಥಿರವಾಗಿರಲಿ, ಸೋಬತಿ ಸೋಬಾನ"- ಎಂದು ಒಡೆಯರು ಮದುಮಕ್ಕಳಿಗೆ ಶುಭಹಾರೈಕೆಯ, ಮಂತ್ರದೀಕ್ಷೆಯನ್ನು ವಾಚಿಸುತ್ತಾರೆ. ಹಾಗೆಯೇ ಜನನ-ಋತುಮತಿ ಸಂದರ್ಭದಲ್ಲಿ ಒಡೆಯರು ಸೂತಕವನ್ನು ಕಳೆಯುವುದು ಒಂದು ರೀತಿಯ ಆಚರಣೆಯಾಗದೆ. ಸೂತಕವಾದ ಭಕ್ತರ ಮನೆಗೆ ೫ ಇಲ್ಲವೇ ೧೩ ದಿವಸಕ್ಕೆ ಆಗಮಿಸಿದ ಒಡೆಯರು, ಕರಿಯ ಕಂಬಳಿ ಗದ್ದುಗೆಯ ಮೇಲೆ ಕುಳಿತು, ಪಾದ

ತೊಳೆಸಿಕೊಂಡು ಆ ಪಾದೋದಕರಿಂದ ಭಕ್ತರ ಮನೆಯ ಸೂತಕವನ್ನು ತೊಡೆದು ಶುದ್ಧೀಕರಣ ಮಾಡುತ್ತಾರೆ. ಇಂಥದ್ದೇ ಮರಣ ಸಂದರ್ಭದ ಆಚರಣೆಯನ್ನು "ಕರ್ಮನಿರಸನಾಚರಣೆ" ಎಂದು ಕರೆಯುವುದುಂಟು. ಸತ್ತ ವ್ಯಕ್ತಿಯ ಹಣೆಗೆ ಒಡೆಯರು ನೊಸಲಿಟ್ಟು ಅಂತಿಮ ಕ್ರಿಯೆಗೆ ದಾರಿ ಮಾಡಿಕೊಡುವುದು, ಅನಂತರದಲ್ಲಿ ಲಿಂಗಾಯತರಂತೆ "ಒಳಗೆ ತೆಗೆದುಕೊಳ್ಳುವ" ಕ್ರಿಯೆಯನ್ನು ನೆರವೇರಿಸುವುದು ರೂಢಿಯಲ್ಲಿದೆ. ಲೋಕೋಪಕಾರಕ ಕಾರ್ಯಗಳಾದ ನಾಟಿವೈದ್ಯ, ಜ್ಯೋತಿಷ್ಯ ಹೇಳುವುದರ ಮೂಲಕ ಶ್ರೀಸಾಮಾನ್ಯರ ಸಾಮಾಜಿಕ, ಮಾನಸಿಕ ಸ್ವಾಸ್ಥ್ಯಕ್ಕೆ ಕಾರಣರಾಗಿದ್ದಾರೆ. ಕೌಟುಂಬಿಕವಾಗಿ ಜಗಳ-ತಕರಾರುಗಳು ಸಂಭವಿಸಿದರೆ ಅದರ ನ್ಯಾಯ ನಿರ್ಣಾಯಕರಾಗಿ ಒಡೆಯರೇ ತೀರ್ಪುಗಾರರಾಗಿರುತ್ತಾರೆ. ಇಲ್ಲೆಲ್ಲ ಸಾಮಾಜಿಕ ನೆಮ್ಮದಿಯ ಕಾಳಜಿಗಾಗಿ ಒಡೆಯರು ನಿರ್ವಹಿಸುವ ಪಾತ್ರ ಮುಖ್ಯವೆನಿಸಿದೆ. ಹೀಗಾಗಿ 'ಒಡೆಯರು' ಸಾಮಾಜಿಕ ಮುಖಂಡನಾಗಿ ರೂಪಾಂತರಗೊಳ್ಳುವುದನ್ನು ಗಮನಿಸಬಹುದಾಗಿದೆ.

**೪. ಗುರು ಒಡೆಯರ ಸಾಂಸ್ಕೃತಿಕ ಶಿಷ್ಟಾಚಾರಗಳು:** ಉಣ್ಣೆಕಂಕಣ - ಹತ್ತಿಕಂಕಣ ಕುರುಬರಿಗೆ ಕುಲಗುರುಗಳಾಗಿರುವ ಶಾಂತೊಡೆಯರು, ಹಣೆಗೆ ವಿಭೂತಿ, ಕಾರ್ಯಕ್ಕೆ ಕರಿಯ ಕಂಬಳಿ ಉಪಯೋಗಿಸುತ್ತಾರೆ. ಮಂಕೊಡೆಯರು ಸಾಧುಗುರುಬರಿಗೆ-ಚಿಕ್ಕಗುರುಬರಿಗೆ ಕುಲಗುರುಗಳಾಗಿರುವುದರ ಜೊತೆಗೆ ಹಣೆಗೆ ವಿಭೂತಿ, ಕಾರ್ಯಕ್ಕೆ ಬಿಳಿಯ ಕಂಬಳಿ ಉಪಯೋಗಿಸುತ್ತಾರೆ. ಕುರುಬರಿಗೆ ಕುಲಗುರುಗಳಾಗಿರುವ ಅಮುಗೊಡೆಯರು ಹಣೆಗೆ ಭಂಡಾರ, ಕಾರ್ಯಕ್ಕೆ 'ಕರಿಯ ಕಂಬಳಿ' ಜೊತೆಗೆ 'ನೇಮದ ಬೆತ್ತ' ಉಪಯೋಗಿಸುತ್ತಾರೆ. ಶಾಂತೊಡೆಯರು-ಅಮುಗೊಡೆಯರು ರಕ್ತಸಂಬಂಧವನ್ನು ಬೆಳೆಸುತ್ತಾರೆ. ಈ ಎರಡು ಸಂಪ್ರದಾಯದವರು ಕುರುಬರೊಂದಿಗೂ ಕೊಡು-ಕೊಳ್ಳುವಿಕೆಯನ್ನು ನಡೆಸುತ್ತಾರೆ. ಇದಕ್ಕೆ ಮಂಕೊಡೆಯರು, ಹೊರತಾಗಿದ್ದಾರೆ. ಈ ಮೂರು ಸಂಪ್ರದಾಯದ ಗುರು ಒಡೆಯರು 'ಲಿಂಗಧಾರಿಗಳು' 'ಸಸ್ಯಾಹಾರಿಗಳು'. ವಿಶೇಷವಾಗಿ ಒಡೆಯರ ಮನೆಯಲ್ಲಿ ಗಂಡುಮಗು ಹುಟ್ಟಿದ ಮೂರು ದಿನಗಳಲ್ಲಿ ಪೀಠವಿರುವ (ಶಿವಲಿಂಗ) ಸಣ್ಣಲಿಂಗವನ್ನು ಕಟ್ಟುತ್ತಾರೆ. ಇದನ್ನು 'ಹುಟ್ಟುಲಿಂಗ'ವೆಂದು ಕರೆಯಲಾಗಿದೆ. ಇದು ಒಂದನೇ ಲಿಂಗದೀಕ್ಷೆ. ಇನ್ನು ಮದುವೆಯ ಸಮಯದಲ್ಲಿ ವಧುವರರಿಗೆ ಲಿಂಗದೀಕ್ಷೆ ನೀಡುವುದು ಎರಡನೇ ಹಂತ. ಇದು ಇಷ್ಟಲಿಂಗ. ಇಲ್ಲಿ ಕುರುಬರ ಓಣಿಯ ಸಹವಾಸ, ಸಹವ್ಯಸನಗಳಿಂದ ಯುವಕ-ಯುವತಿಯರನ್ನು ಮುಕ್ತಗೊಳಿಸುವುದು. ಹಾಗೆಯೇ ಭಕ್ತರೆನಿಸಿದ ಕುರುಬ ಹುಡುಗಿಯನ್ನು ಒಡೆಯರ ಸೊಸೆಯಾಗಿ ತಂದುಕೊಳ್ಳುವ ಸಂದರ್ಭದಲ್ಲಿ ಲಿಂಗದೀಕ್ಷೆ ನೀಡಿ ದಂಪತಿಗಳಿಬ್ಬರಿಗೂ ಜೋಳಿಗೆ ಬೆತ್ತಕೊಟ್ಟು ಕೋರಧ್ಯಾನ್ಯ ಭಿಕ್ಷೆಗೆ ಕಳಿಸುವುದರ ಮೂಲಕ ಗಂಡನ್ನು 'ಒಡೆಯ'ನನ್ನಾಗಿ, ಹೆಣ್ಣನ್ನು 'ಒಡೆಯರಮ್ಮ' ನನ್ನಾಗಿ ರೂಪಾಂತರಿಸುವ ಈ ಪ್ರಕ್ರಿಯೆ ಲಿಂಗಾಯತರ 'ಅಯ್ಯಾಚಾರ'ಕ್ಕೆ ಸಮಾನಾಂತರವಾಗಿದೆ.

**೫. ಒಡೇರಮ್ಮನ ಸಮಾಜಿಕ ಸ್ಥಾನಮಾನ:** ಹೆಣ್ಣು ಸಾಕ್ಷಾತ್ ಶ್ರೀಗೌರಿ, ಸಾಕ್ಷಾತ್ ಕಪಿಲ ಸಿದ್ಧ ಮಲ್ಲಿಕಾರ್ಜುನ, ಆಕೆ ಮಾಯೆಯಲ್ಲ ಎಂಬ ಶರಣ ಸಿದ್ಧಾಂತವನ್ನು ಅಕ್ಷರಶಃ ಆಚರಣೆಗೆ ತಂದಿರುವುದು ಕುರುಬ ಗುರು ಒಡೆಯರ ಪತ್ನಿ ಒಡೇರಮ್ಮನ ಸಾಮಾಜಿಕ ಸ್ಥಾನಮಾನಗಳಲ್ಲಿ. ಪುರುಷರಿಗೆ (ಒಡೆಯರಿಗೆ) ಇರುವ ಎಲ್ಲ ಸಾಮಾಜಿಕ, ಧಾರ್ಮಿಕ ಹಕ್ಕು ಬಾಧ್ಯತೆಗಳು ಈಕೆಗೆ ಇರುತ್ತವೆ. ಒಡೇರಮ್ಮ ಆದ ದಿನದಿಂದ ತಂದೆ-ತಾಯಿ ಮೊದಲಾಗಿ ಅಬಾಲವೃದ್ಧರೂ ಈಕೆಗೆ ನಮಸ್ಕರಿಸಬೇಕು. ಎದೆಯ ಮೇಲೆ ಲಿಂಗ, ಹಣೆಯ ಮೇಲೆ ವಿಭೂತಿ ಧರಿಸಿದ ಈಕೆಗೆ ಸಮುದಾಯದ ಎಲ್ಲ ಧಾರ್ಮಿಕ ಆಚರಣೆಗಳಲ್ಲಿ ಒಡೆಯರಷ್ಟೆ ಆದ್ಯತೆ ಕೊಡಲಾಗಿದೆ. ಭಾರತೀಯ ಸಂಸ್ಕೃತಿಯಲ್ಲಿ ಪತಿ ವಿಯೋಗ ಪತ್ನಿಗೆ ಮಾತ್ರವಲ್ಲ ಸಮಾಜಕ್ಕೆ ಅಶುಭ ಸೂಚನೆ. ಇದರಿಂದ ಆಕೆ ಧಾರ್ಮಿಕ ಹಾಗೂ ಸಾಮಾಜಿಕ ರಂಗಗಳಿಂದ ಹೊರಗೆ, ಇದು ಬಹುತೇಕ ಸಮುದಾಯಗಳ ಸಂವಿಧಾನಾತ್ಮಕ ವಿಧಿ. ಆದರೆ ಕುರುಬ ಸಮುದಾಯ ಇದಕ್ಕೆ ಹೊರತಾಗಿದೆ. ಒಡೇರಮ್ಮನಿಗೆ ಪತಿ ವಿಯೋಗವಾದರೂ, ಆಕೆ ವಿಧವೆಯಲ್ಲ. ಕೈಹಿಡಿದ ಗಂಡ ತೀರಿದರೂ ಕಟ್ಟಿಕೊಂಡ ಲಿಂಗದೊಂದಿಗೆ ಪತಿತನವನ್ನು ಕಾಣುವ ಶರಣಸತಿಭಾವವನ್ನು ಒಡೇರಮ್ಮ ಹೊಂದಿರುವುದು ನಿಜಕ್ಕೂ ಶರಣತತ್ತ್ವವನ್ನು ಆಚರಣೆಗೆ ತಂದಿರುವ ವಿಶೇಷ ಉಪಕ್ರಮವಾಗಿದೆ. ಸೌಭಾಗ್ಯ ಸಂಕೇತಗಳಾದ ಮಂಗಳಸೂತ್ರ, ಬಳೆ, ಮೂಗುತಿ, ಕುಂಕುಮಗಳನ್ನು ಉಳಿಸಿಕೊಳ್ಳುವುದರ ಮೂಲಕ 'ಚಿರಮುತ್ತೈದೆ'ಯ ಸ್ಥಾನವನ್ನು ಆಕೆಗೆ ನೀಡಲಾಗಿದೆ. ಒಬ್ಬ ಮಹಿಳೆಯ ಆಸ್ತಿ, ಆಧ್ಯಾತ್ಮಜ್ಞಾನ, ಧಾರ್ಮಿಕ ಮನೋಭಾವಗಳನ್ನು ಮೂಲೆಗುಂಪಾಗಿಸುವ ಹುನ್ನಾರದಲ್ಲಿ ಪುರುಷವರ್ಗ, ಪುರೋಹಿತವರ್ಗ, ಸೃಷ್ಟಿಸುತ್ತಲಿದ್ದ 'ಮಹಾಸತಿ ಆಚರಣೆ' ಸಂದರ್ಭದಲ್ಲಿ; ಅದನ್ನು

ನಿರಾಕರಿಸಿ ಸ್ವಾತಂತ್ರ್ಯದ ಬಗ್ಗೆ ದನಿಎತ್ತಿದ ಶರಣ ಚಳುವಳಿಯ ಆಶಯವನ್ನು ಬಿಡದೇ ಅನುಷ್ಠಾನಗೊಳಿಸಿದ ಹೆಗ್ಗಳಿಕೆಯನ್ನು ಕುರುಬ ಸಮುದಾಯದ ಒಡೇರಮ್ಮನ ಸಾಮಾಜಿಕ ಸ್ಥಾನಮಾನದಲ್ಲಿ ಕಾಣಬಹುದಾಗಿದೆ.

**೬. ಗುರು ಒಡೆಯರು ಮತ್ತು ವಿಭೂತಿಗಟ್ಟಿ:** ಭಂಡಾರ ಪ್ರಜ್ಞೆಯ ಜೊತೆಗೆ ವಿಭೂತಿ ಪ್ರಜ್ಞೆಯನ್ನು ಗಟ್ಟಿಗೊಳಿಸಿಕೊಂಡಿರುವ ಕುರುಬ ಸಮಾಜ 'ವಿಭೂತಿಗೆ' ಗುರುಸ್ಥಾನ ನೀಡಿ, ಒಡೆಯರ ಗೌರವ ಸಲ್ಲಿಸಿದೆ. ಸಮಾಜದಲ್ಲಿ ಗುರು ಒಬ್ಬ, ಭಕ್ತ ಸಮುದಾಯ ಹಲವು. ಹೀಗಾಗಿ ಎಲ್ಲರಿಗೂ ಪ್ರತ್ಯೇಕ ಗುರುದರ್ಶನ ಅಸಂಭವ. ಇಂಥ ಸಂದರ್ಭದಲ್ಲಿ ಒಡೆಯರ ಪ್ರತಿನಿಧಿಯಾಗಿ ವಿಭೂತಿ ಗಟ್ಟಿಯನ್ನು ಆಹ್ವಾನಿಸುತ್ತಾರೆ. ಇದು ಊರಿನ ಕುರುಬಗೌಡನ ಮನೆಯಲ್ಲಿರುತ್ತದೆ. ಅದನ್ನು ಪೂಜಾವಿಧಿಗಳಿಂದ ತಂದು ಕರಿಯ ಕಂಬಳಿಯ ಮೇಲೆ ಮೂರ್ತಿಗೊಳಿಸಿ ತಮ್ಮ ಧಾರ್ಮಿಕ ಕಾರ್ಯಗಳನ್ನು ಪೂರೈಸಿಕೊಳ್ಳುವ ವಿಶಿಷ್ಟ ಆಚರಣೆ ಇವರಲ್ಲಿದೆ. ಇದನ್ನು 'ಕಾಲಿಲ್ಲದ ಐನೋರ' ಎಂದು ಕರೆಯುತ್ತಾರೆ.

**೭. ಗುರು ಒಡೆಯರ ಹೇಳಿಕೆಗಳು:** ಅರವತ್ತು ಸಂವತ್ಸರಗಳನ್ನು ತಮ್ಮ ಪ್ರಾಕೃತಿಕ ಬದುಕಿನಲ್ಲಿ ಹತ್ತಿರದಿಂದ ಕಂಡ ಕುರುಬ ಸಮಾಜ ಮಳೆ-ಬೆಳೆ-ನಕ್ಷತ್ರಾದಿ ಸಂಗತಿಗಳನ್ನು "ಹೇಳಿಕೆಗಳ" ರೂಪದಲ್ಲಿ ವಿವರಿಸುತ್ತದೆ. ಬೆಡಗಿನಿಂದ, ಕಾವ್ಯತ್ಮಕವಾಗಿ ಕೂಡಿದ ಈ ಹೇಳಿಕೆಗಳು ಮೈಲಾರಲಿಂಗನ ಕಾಣಿಕೆ (ಕಾರ್ಣಿಕೆ) ರೂಪದಲ್ಲಿರುತ್ತವೆ. ನಿಸರ್ಗದ ಸೂಕ್ಷ್ಮ ನಿರೀಕ್ಷಣೆ, ಮೋಡಗಳ ಚಲನವಲನ, ಪಕ್ಷಿಗಳ ಕಲರವ, ಗಾಳಿಯ ಸುಳಿದಾಟದ ದಿಸೆಗಳಿಂದ ಋತುಮಾನದ ಬದಲಾವಣೆಗಳನ್ನು ಹೇಳಿಕೆಗಳ ಮೂಲಕ ಬಿತ್ತರಿಸುವ ರೀತಿ ದೈವೀಸ್ಫೂರ್ತಿಗೆ ನಿದರ್ಶನವೆನಿಸಿದೆ. ಉದಾ: ಮುರುಗಾನೂರು ಸಿದ್ಧ ಏನ ಹೇಳ್ಯಾನಂದೀರಿ! ಹಿಂಗಾಗಿ ನಾಡಕ ಹಿಂಗಾರಿ, ಮುಂಗಾರಿ ನಾಡಕ ಮುಂಗಾರಿ, ಹಿಂಗಾರಿ ಮಿಂಗಾರಿ ಕಾಚಾ ಮಾಡುದುರಾಗ ಜೋಡು ನುಚ್ಚಿನ ಕಟ್ಟಿ ಹಾಕಿ ನೆಲೆ ಗಾಣಮಿಣಿ-ಹೀಗೆ ಅಮವಾಸ್ಯೆ ಶಿವರಾತ್ರಿ ಹಬ್ಬ-ಹರಿದಿನಗಳಲ್ಲಿ ಇಂಥ ಹೇಳಿಕೆಗಳನ್ನು ಮಾಡುತ್ತಾರೆ. ಪ್ರಾಯಶಃ ಲಿಂಗಾಯತ "ಕುಲಜ್ಞಾನ ಸಾಹಿತ್ಯದ" ಮತ್ತೊಂದು ಪರಿಭಾಷೆ ಗುರು ಒಡೆಯರ ಈ ಹೇಳಿಕೆಗಳು. ಹೀಗಾಗಿ ಜೈನರ ಅವಧಿಜ್ಞಾನ, ಲಿಂಗಾಯತರ ಕಾಲಜ್ಞಾನ, ಕುರುಬರ ಹೇಳಿಕೆಗಳ ತೌಲನಿಕ ಅಧ್ಯಯನ ಮಾಡುವುದರ ಮೂಲಕ ಈ ಸಮುದಾಯಗಳ ಸಾಂಸ್ಕೃತಿಕ ಅನನ್ಯತೆಯನ್ನು ದಾಖಲಿಸಬಹುದಾಗಿದೆ.

**೮. ಗುರು ಒಡೆಯರು ಮತ್ತು ಆಧುನಿಕ ಪರಂಪರೆ:** ಪ್ರಾಚೀನ ಗುರು ಒಡೆಯರ ಪರಂಪರೆಯನ್ನು ಸಮಾಜ ಸಂಘಟನೆಗಾಗಿ ಮುಂದುವರಿಸಿಕೊಂಡು ಬರುತ್ತಲಿರುವ ಆಧುನಿಕರಲ್ಲಿ ವೇದಮೂರ್ತಿ ಸಿದ್ಧಪ್ಪಯ್ಯ ಒಡೆಯರು. ಸಂಗ್ರೇಶಕೊಪ್ಪದ ವೇದಮೂರ್ತಿ ಚನ್ನಯ್ಯ ಒಡೆಯರು, ಶ್ರೀಶಂಕರಗೌಡ ಮಾಲೀಪಾಟೀಲ ಒಡೆಯರು, ಹೀಗೆ ಹತ್ತಾರು ಜನ ಒಡೆಯರು ಕುರುಬ ಸಮಾಜದಲ್ಲಿದ್ದು ಅವರ ಕುರಿತಾಗಿ ಪೂರ್ಣ ಪ್ರಮಾಣದ "ಹಾಲುತ ಪುಣ್ಯಪುರುಷರ" ಮಾಲೆಗಳಲ್ಲಿ ಗ್ರಂಥ ಪ್ರಕಟಿಸುವುದರ ಕಡೆಗೆ ಚಿಂತಿಸಬೇಕಾಗಿದೆ. ಯಾಕೆಂದರೆ ಆಧುನಿಕ ಬದುಕಿನ ಆರ್ಭಟದಲ್ಲಿ ಅವರ ಸಾಮಾಜಿಕ ಸ್ಥಾನಮಾನದ ಶಿಥಿಲೀಕರಣ, ಆರ್ಥಿಕ ಅಭದ್ರತೆ, ಧಾರ್ಮಿಕ ಪಲ್ಲಟತೆಗಳು ಉಂಟಾಗಿರುವುದು ಸಹಜ. ಹೀಗಾಗಿ ಗುರು ಒಡೆಯರ ಜೀವನ ಪದ್ಧತಿಯ ಪರಿವರ್ತನಾ ಹಂತಗಳ ಇತಿಹಾಸವನ್ನು ಇದರಿಂದ ರೂಪಿಸಿಕೊಟ್ಟಂತಾಗುತ್ತದೆ.

ಒಟ್ಟಿನಲ್ಲಿ ಕುರುಬರ ಒಳಪಂಗಡವೆನಿಸುವ "ಗುರು ಒಡೆಯರ" ಅಧ್ಯಯನವೆಂದರೆ ಆ ಸಮುದಾಯದ ಧಾರ್ಮಿಕ, ಆರ್ಥಿಕ ಸಾಮಾಜಿಕ ಅಧ್ಯಯನದ ಜೊತೆಗೆ ಜಾನಪದ ನಂಬಿಕೆ ಆಚರಣೆ, ಸಂಪ್ರದಾಯಗಳನ್ನು ಕಾಳಜಿಯಿಂದ ಪೋಷಿಸಿಕೊಂಡು ಬಂದ ಅಧ್ಯಯನವೂ ಆಗುತ್ತದೆ. ಕಾರಣ ಸಮಾಜದಲ್ಲಿ 'ಗುರು ಒಡೆಯರು' ನಿರ್ವಹಿಸಿದ ಅಂತರಂಗ-ಬಹಿರಂಗಗಳು ಅಂದರೆ ವ್ಯಕ್ತಿ ಉದ್ಧಾರ ಮತ್ತು ಸಮಾಜ ಉದ್ಧಾರಗಳ ಶುದ್ಧೀಕರಣದ ದಾಖಲೀಕರಣವನ್ನು ವ್ಯಾಪಕವಾಗಿ ಮಾಡುವುದು ಮುಂದಿನ ದಿನಮಾನಗಳಲ್ಲಿ ನಡೆಯಬೇಕಾಗಿದೆ. ಕುರುಬ ಗುರುಒಡೆಯರ ನಡಾವಳಿಗಳು ಲಿಂಗಾಯತ ಜಂಗಮರ ನಡಾವಳಿಗಳಿಗೆ ಹತ್ತಿರವಾಗಿವೆ. ಈ ಹತ್ತಿರಕ್ಕೆ ಕಾರಣವಾಗಿರಬಹುದಾದ ಚಾರಿತ್ರಿಕ - ಐತಿಹಾಸಿಕ ಹಿನ್ನೆಲೆಯನ್ನು ಆ ಮೂಲಕ ಶೋಧಿಸಿದಂತಾಗುತ್ತದೆ.

**ಸಹಾಯಕ ಗ್ರಂಥಗಳು**


೧. ಕುರುಬರ ಗುರು ಒಡೆಯರು: ಸಾಂಸ್ಕೃತಿಕ ಅಧ್ಯಯನ, ಡಾ.ಬಿ.ಜಿ. ಬಿರದಾರ, ವಿಕಾಸ ಪ್ರಕಾಶನ, ಹೊಸಪೇಟೆ, ೨೦೦೦

೨. ಕುರುಬರ ಗುರು ಒಡೆಯರು: (ಸಂ) ಡಾ. ಎಫ್. ಟಿ. ಹಳ್ಳಿಕೇರಿ, ವಿಕಾಸ ಪ್ರಕಾಶನ, ಹೊಸಪೇಟೆ, ೨೦೦೭.

೩. ಲಿಂಗಾಯತ: (ಪ್ರ.ಸಂ). ಡಾ.ಎಂ. ಎಂ. ಕಲಬುರ್ಗಿ, ಚಿತ್ತರಗಿ ಶ್ರೀ ವಿಜಯ ಮಹಾಂತೇಶ ಎಜ್ಯುಕೇಶನ್ ಸೊಸಾಯಿಟಿ, ಇಳಕಲ್ಲ, ೨೦೦೯.

೪. ಚಿದಾನಂದ ಸಂಪುಟಗಳು, ಸ್ವಪ್ನ ಪಬ್ಲಿಕೇಷನ್, ಬೆಂಗಳೂರು.

## ೮. ಹಂಡೆ ಕುರುಬರು

ನಮ್ಮ ಭಾರತ ದೇಶದ ಜನಸಂಖ್ಯೆಯಲ್ಲಿ ಮೂರನೆಯ ಸ್ಥಾನದಲ್ಲಿರುವ ಕುರುಬ ಸಮುದಾಯ ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಡುತ್ತ, ಹೆಚ್ಚು ಕಡಿಮೆ ಎಲ್ಲಾ ರಾಜ್ಯಗಳಲ್ಲೂ ಇರುವುದಾಗಿ ತಿಳಿಯುತ್ತದೆ. ಕರ್ನಾಟಕದ ನೆಲದಲ್ಲಂತೂ ಆದಿಯಿಂದಲೂ ಇರುವ ಸಮುದಾಯಗಳಲ್ಲಿ ಇದೂ ಒಂದೆಂದು ತಿಳಿಯಲಾಗಿದೆ. ಹಾಗೆ ತಿಳಿಯಲು, ಸಾಮಾನ್ಯವಾಗಿ ಕನ್ನಡ ಬಿಟ್ಟು ಬೇರೆ ಭಾಷೆ ಆಡದ ಜನ ಸಮುದಾಯಗಳಲ್ಲಿ ಕುರುಬರ ಸಮುದಾಯವೂ ಒಂದೆಂದು ತಿಳಿದಿರುವುದು ಒಂದು ಮುಖ್ಯ ಕಾರಣವೆಂದು ತಿಳಿಯುತ್ತದೆ. ಕುರುಬ ಸಮುದಾಯದಲ್ಲಿ ವಿವಿಧ ಬಗೆಯ ಪಂಗಡಗಳಿದ್ದು, ಅವನ್ನು ಒಂದೊಂದೆಡೆ ಒಂದೊಂದು ರೀತಿಯಲ್ಲಿ ಹೇಳಲಾಗಿದೆ. ಹತ್ತಿಕಂಕಣದವರು, ಉಣ್ಣೆ ಕಂಕಣದವರು, ಹಂಡೆ ಕುರುಬರು, ಜಂಡೆ ಕುರುಬರು, ಒಡೆಯರು ಎಂಬ ಐದು ಪಂಗಡಗಳಿರುವುದಾಗಿ ಒಂದೆಡೆ ಹೇಳಿದರೆ, ಇನ್ನೊಂದೆಡೆ ಹಂಡೆ ಕುರುಬರು ಮತ್ತು ಕುರುಬರು ಎಂದು ಎರಡು ಪಂಗಡಳಿವೆಯೆಂದೂ, ಅವರಲ್ಲಿ ಕುರುಬರೆಂಬುವರಲ್ಲಿ ಆನಿ (ಆನೆ) ಕುರುಬರು, ಹಾಲು ಕುರುಬರು, ಅಸಲು ಕುರುಬರು ಮತ್ತು ಮೂರು ಹಿಂಡಿನ ಕುರುಬರು ಇತ್ಯಾದಿಯಾಗಿ ಇರುವುದಾಗಿ ಹೇಳಲಾಗಿದೆ. ಇಂಥ ವೈವಿಧ್ಯಮಯ ವರ್ಗೀಕರಣಕ್ಕೆ ಪ್ರಾದೇಶಿಕ ಭೇದವೂ ಕಾರಣವಿರುವಂತೆ ಕಾಣುತ್ತದೆ. ಅದೇನೆ ಇದ್ದರೂ ಹಂಡೆ ಕುರುಬರೆಂಬುವರು ಕುರುಬ ಸಮುದಾಯದಲ್ಲಿ ಬಹುಮುಖ್ಯವಾದ ಒಂದು ಪಂಗಡದವರೆಂದು ಕಾಣಿಸುತ್ತದೆ.

ಕುರಿಸಾಕಾಣಿಕೆಯಿಂದಾಗಿ ಕುರುಬರು ಎಂಬ ಹೆಸರು ಬಂದಿರುವುದು ಈಗಾಗಲೇ ವಿದಿತ. ಆದರೆ ಹಂಡೆ ಕುರುಬರು ಎಂಬ ಹೆಸರು ಹೇಗೆ ಬಂದದ್ದು ಎಂಬ ಪ್ರಶ್ನೆ ಕುತೂಹಲಕಾರಿಯಾದದ್ದು. ಅಲ್ಲದೆ ಈ ಹೆಸರಿನ ಸರಿಯಾದ ರೂಪ 'ಹಂಡೆ ಕುರುಬರು' ಎಂದೇ? 'ಅಂಡೆ ಕುರುಬರು' ಎಂದೋ? ಎಂಬ ಪ್ರಶ್ನೆಯೂ ಇದೆ. ಈ ಹಂಡೆ ಅಂಡೆಗಳೆರಡಕ್ಕೂ ಅನೇಕ ವಿವರಣೆಗಳು ಈಗಾಗಲೇ ಬಂದಿವೆ. ಅವೆಲ್ಲವನ್ನೂ ಇಲ್ಲಿ ವಿವೇಚಿಸಲು ಸಾಧ್ಯವಿಲ್ಲ. ಅವುಗಳಲ್ಲಿ ಕೆಲವು ಸತ್ಯಕ್ಕೆ ಸಮೀಪದವಿರಬೇಕು ಎನಿಸಿದರೆ, ಇನ್ನು ಕೆಲವು ಅವುಗಳ ಕಲ್ಪನಾ ಮಯತೆಯಿಂದಾಗಿ ಸತ್ಯಕ್ಕೆ ದೂರವಾದವು ಎಂದೇ ಅನಿಸುತ್ತದೆ. ಕುರುಬರು ಎಂಬುದಕ್ಕೆ ದನಗಾರರು ದನಗರು ಮುಂತಾದ ಶಬ್ದಗಳು ಪರ್ಯಾಯ ಶಬ್ದಗಳಂತೆ ಬಳಕೆಗೊಂಡಿರುವುದರಿಂದ ಇವರು ಬಿಳಿಯ ಹಸುಗಳನ್ನು (ಹೆಚ್ಚಾಗಿ) ಸಾಕುತಿದ್ದವರಿರಬಹುದೇ? ಎಂದು ಸಂದೇಹವಾಗುತ್ತದೆ. ಇನ್ನು ಅಂಡೆ ಎಂದರೆ ಹಾಲು ತುಂಬಲು ಬಳಸುತ್ತಿದ್ದ ಬೊಂಬಿನ ಕೊಳವೆ (ಪಾತ್ರ) ಎಂಬರ್ಥವೂ ವಿಚಾರಣೀಯವಾಗಿದೆ. ಹೀಗೆ ಇಂಥ ಯಾವುದೋ ಒಂದು ಮೂಲ ಅರ್ಥದಿಂದ ಈ ಶಬ್ದಗಳು ಬಳಕೆಯಾಗಿರುವ ಸಾಧ್ಯತೆ ಇದೆ.

'ಅಂಡೆ ಕುರುಬರು' ಎಂಬುದಕ್ಕಿಂತ 'ಹಂಡೆ ಕುರುಬರು' ಎಂಬ ರೂಪವೇ ಹೆಚ್ಚಾಗಿ ಬಳಕೆಯಾಗಿರುವುದರಿಂದ ಇಲ್ಲಿ ಆ ರೂಪವನ್ನೇ ಸ್ವೀಕರಿಸಲಾಗಿದೆ. ಹಂಡೆ ಕುರುಬರನ್ನು ಹಂಡೆ ವಜೀರರು, ಹಂಡೆ ರಾವುತರು, ಹಂಡೆ ದನುಗರು (ದನಗರರು) ಇಂಥ ಪರ್ಯಾಯ ಹೆಸರುಗಳಿಂದಲೂ ಕರೆಯಲಾಗಿದೆ. 'ಕೃಷ್ಣದೇವರಾಯನ ದಿನಚರಿ'ಯಲ್ಲಿ 'ಕುರುಬ ರಾವುತರು' ಎಂದು ಕರೆದಿರುವುದು ಹಂಡೆ ಕುರುಬ ಪಂಗಡದವರನ್ನೇ ಎಂದು ತೋರುತ್ತದೆ. ಮಹಾರಾಷ್ಟ್ರದಲ್ಲಿ (ಧನಗರ' ಎಂಬ ಮಾತು ಸಾರ್ವಿಕ (general) ವಾಗಿ ಕುರುಬರನ್ನು ಹೆಸರಿಸಲು ಮತ್ತು ಕರೆಯಲು ಈಗಲೂ ರೂಢಿಯಲ್ಲಿದೆ ಎಂದು ಹೇಳುತ್ತಾರೆ. ಇವರು ಮಹಾರಾಷ್ಟ್ರದ ದಕ್ಷಿಣ ಪ್ರದೇಶದಿಂದ ಕರ್ನಾಟಕ ಪ್ರದೇಶದೊಳಕ್ಕೆ ಬಂದವರು ಎಂಬುದನ್ನು ಸೂಚಿಸುವಂತಿದೆ ಹಂಡೆದನುಗರು (ಧನಗರರು) ಎಂಬ ಹೆಸರು.

ಹಂಡೆ ಕುರುಬರು ಇತರ ಕುರುಬ ಪಂಗಡಗಳವರಂತೆ ಕುರಿ ಸಾಕುವುದನ್ನೇ ಹೆಚ್ಚಾಗಿ ಕೈಕೊಂಡವರಲ್ಲ. ಕುರಿಸಾಕಣಿಕೆಗಿಂತ ಕಂಬಳಿ ನೇಯುವ ವೃತ್ತಿಯನ್ನು ಕೈಕೊಂಡದ್ದೇ ಹೆಚ್ಚು. ಹಾಲು, ಮೊಸರು ಮಾರುತ್ತಿದ್ದ ಅಥವಾ ವರ್ತನೆ ಕೊಡುತ್ತಿದ್ದ ವೃತ್ತಿಯನ್ನೂ ಕೈಕೊಂಡಿರಬಹುದು. ಘಟ್ಟದ ಕೆಳಗಿನ ಹಂಡೆ ಕುರುಬರು ಕುರಿಗಳ ಬದಲಿಗೆ ಹಸು ಎಮ್ಮೆಗಳನ್ನೂ ಸಾಕುತ್ತಿದ್ದರೆಂದೂ, ಅವುಗಳ ಹಾಲು, ಮೊಸರು, ತುಪ್ಪ ಇವನ್ನು ಮಾರಿಕೊಂಡು ಜೀವನ ಸಾಗಿಸುತ್ತಿದ್ದರೆಂದೂ ಹೇಳುತ್ತಾರೆ. ಇವರು ಇಂಥ ವೃತ್ತಿಗಳಲ್ಲದೆ ಇತರೆಡೆ, ಪೊಲೀಸರಿಗೆ ಶಸ್ತ್ರಧಾರಿ ಸುದ್ದಿವಾಹಕರಾಗಿಯೂ ಕೆಲಸ ಮಾಡುತ್ತಿದ್ದರೆಂದೂ ಇನ್ನು ಕೆಲವೆಡೆ ಇವರು ವ್ಯವಸಾಯದ ಕುಬಿನಲ್ಲಿ ನಿರತರಾಗಿದ್ದರೆಂದೂ ತಿಳಿದುಬರುತ್ತದೆ.

ಬಹುಹಿಂದೆಯೇ ಲಿಂಗಾಯತ ಧರ್ಮವನ್ನು ಸ್ವೀಕರಿಸಿದ ಹಂಡೆ ಕುರುಬರು ಮದ್ಯ ಮಾಂಸಗಳನ್ನು ಸೇವಿಸದೆ, ಭಕ್ತಿಯಿಂದ ಆ ಧರ್ಮವನ್ನು ಅನುಸರಿಸುತ್ತಿರುವುದಾಗಿ ಅನೇಕ ಕಡೆ ಹೇಳಲಾಗಿದೆ. ಹಿಂದೊಂದು ಕಾಲಕ್ಕೆ ಇವರು ಮೂಲತಃ ಶೈವ ಧರ್ಮೀಯರಾಗಿದ್ದುದು ಅವರ ಮೇಲೆ ಲಿಂಗಾಯತದ ಪ್ರಭಾವವಾಗಲು ಕಾರಣವಾಗಿರಬೇಕು. ಅಲ್ಲದೆ ಕುರುಬರು ಮೂಲ ಗುರುಗಳೆನಿಸಿದ ರೇವಣಸಿದ್ಧೇಶ್ವರ, ಅವರ ಪ್ರಸಾದಪುತ್ರರೆಂದು ನಂಬಲಾದ ಸಿದ್ಧರಾಮೇಶ್ವರ ಇವರ ಪರೋಕ್ಷ ಪ್ರಭಾವವೂ ಇವರ ಮೇಲಿದ್ದಂತೆ ಕಾಣುತ್ತದೆ. ಜೊತೆಗೆ ಮುಂದೆ ವಿವರಿಸಲಾಗುವ ಹಂಡೆ ಪಾಳೆಯಗಾರರ ಮೂಲಪುರುಷನೆನಿಸಿದ ಹನುಮಪ್ಪ ನಾಯಕನು, ಮೊದಲಿಗೆ ಶರಣ ಸಿದ್ಧರಾಮನ ಕಾರ್ಯಕ್ಷೇತ್ರವಾಗಿದ್ದ ಸೊನ್ನಲಪುರದಲ್ಲಿದ್ದನೆಂದೂ, ವಿಜಯನಗರದ ರಾಮರಾಯ ಮತ್ತು ತಿರುಮಲರಾಯರು ಅವನನ್ನು ಅವನ ಸೈನ್ಯದೊಂದಿಗೆ ಕರೆಸಿಕೊಂಡು, ತಮ್ಮಲ್ಲಿ ಸೇವೆಯಲ್ಲಿರಿಸಿಕೊಂಡರೆಂದೂ ಹೇಳಿರುವಲ್ಲಿ, ಸಿದ್ಧರಾಮೇಶ್ವರನ ಪ್ರಭಾವ ಇವರ ಮೇಲಾಗಲು ಅವನು ಸೊನ್ನಲಪುರದಲ್ಲಿದ್ದ ಒಂದು ಹಿನ್ನೆಲೆಯನ್ನು ಸೂಚಿಸಿದಂತಿದೆ.

ಇದಲ್ಲದೆ ಇದೇ ಪಂಗಡಕ್ಕೆ ಸೇರಿದ 'ಹಂಡೆ ಮಲ್ಲಪ್ಪ' ಎಂಬುವನೊಬ್ಬ ರಚಿಸಿದ ಕೆಲವು ಹಾಡುಗಳು ಚಿತ್ರದುರ್ಗದ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದಲ್ಲಿರುವ ಹಸ್ತಪ್ರತಿಯೊಂದರಲ್ಲಿ ದೊರೆತಿದ್ದು ಅವು ಇನ್ನೂ ಪ್ರಕಟವಾಗಬೇಕಾಗಿದೆ. ಅವು ಬಹುಶಃ ಭಕ್ತಿಪರವಾದ ಅಥವಾ ತತ್ತ್ವಪರವಾದ ಹಾಡುಗಳಿದ್ದುದರಿಂದಲೋ ಏನೋ 'ಹಂಡೆ ಮಲ್ಲಪ್ಪ ಮಾಡಿದ ವಚನ' ಎಂದು ಕರೆಯಲ್ಪಟ್ಟಿವೆ. ಇವು ಹ ಈ ಪಂಗಡದವರ ಲಿಂಗಾಯತ ಶ್ರದ್ಧೆಗೆ ಸಾಕ್ಷಿಯೆನ್ನುವಂತಿದೆ.

ಕುರುಬ ಸಮುದಾಯದಲ್ಲಿ ವಿಶಿಷ್ಟ ಇತಿಹಾಸ ಹೊಂದಿರುವ ಪಂಗಡವೆಂದರೆ ಹಂಡೆ ಕುರುಬರೇ ಆಗಿದ್ದಾರೆ. ಇವರು ಬಹು ಹಿಂದಿನಿಂದ ಶಕ್ತಿವಂತರಾಗಿ ಶೌರ್ಯವಂತರಾಗಿ ಅನೇಕ ಸಾಹಸಗಳನ್ನು ತೋರಿದವರು. ಅದಕ್ಕಾಗಿ ಆಗಾಗ್ಗೆ ರಾಜಮನ್ನಣೆಯನ್ನು ಸಹ ಪಡೆದವರು. ಗ್ರಾಮಗಳಲ್ಲಿ ಗೌಡಿಕೆ, ವಿಜಯನಗರ ಅರಸರ ಸೈನ್ಯದಲ್ಲಿ ರಾವುತಿಕೆ (ವಜೀರಿಕೆ), ಬಿಜಾಪುರ ಬಾದಶಹರಲ್ಲಿ ಫೌಜುದಾರಿಕೆ (ಸರದಾರಿಕೆ) ಮತ್ತು ಕೆಲವು ಸಂಸ್ಥಾನಗಳಲ್ಲಿ ಪಾಳೆಯಗಾರಿಕೆ ಇಂಥ ಸೇವೆ ಜವಾಬ್ದಾರಿಗಳನ್ನು ನಿರ್ವಹಿಸಿದವರು. ಈ ಸಮುದಾಯದವರು ಬಿಜಾಪುರ ದೇಶದಲ್ಲಿ ಕೃಷ್ಣಾ ನದಿಗೆ ಉತ್ತರ ಭಾಗದಲ್ಲಿರುವ ಮೂರ್ತಿಗಿರಿ ಎಂಬ ಗ್ರಾಮದಲ್ಲಿ ಗೌಡಿಕೆ ಮಾಡಿಕೊಂಡಿದ್ದರು ಎಂದು ಬಳ್ಳಾರಿ ಕೈಫಿಯತ್ತು ತಿಳಿಸಿದರೆ, ಈ ಸಮುದಾಯದವರು ಚಿತ್ರದುರ್ಗ ಸಂಸ್ಥಾನದ ಕೆನ್ನಳ್ಳಿ ಎಂಬಲ್ಲಿ ಗೌಡರಾಗಿದ್ದರು ಎಂದು ೧೭ನೆಯ ಶತಮಾನದ ತಾಮ್ರಶಾಸನವೊಂದು ತಿಳಿಸುತ್ತದೆ. ಈ ಸಮುದಾಯಕ್ಕೆ ಸೇರಿದವರು ವಿಜಯನಗರದ ಚಕ್ರವರ್ತಿ ಕೃಷ್ಣದೇವರಾಯನ ಕುದುರೆ ಸೈನ್ಯದಲ್ಲಿ ರಾವುತರು (ವಜೀರರು) ಆಗಿದ್ದರೆಂದು ೧೬ನೆಯ ಶತಮಾನದ ತಾಮ್ರಶಾಸನ ಪ್ರತಿಗಳು ಮತ್ತು ಕೃಷ್ಣದೇವರಾಯನ ದಿನಚರಿ ಇವು ಸೂಚಿಸಿದರೆ, ಈ ಸಮುದಾಯದವರು ಬಿಜಾಪುರದ ಬಾದಶಹರಲ್ಲಿ ಸರದಾರರಾಗಿದ್ದರೆಂದೂ ಫೌಜುದಾರರಾಗಿದ್ದರೆಂದೂ ಕುರುಗೋಡು ಮತ್ತು ಬಳ್ಳಾರಿ ಕೈಫಿಯತ್ತುಗಳು ಸೂಚಿಸುತ್ತವೆ. ಈ ಸಮುದಾಯದವರೇ ಮುಂದೆ ಬಂಕಾಪುರ ಕುರುಗೋಡು ಬಳ್ಳಾರಿ ಮತ್ತು ಅನಂತಪುರ ಸಂಸ್ಥಾನಗಳನ್ನು ಮೊದಲಿಗೆ ಬೇರೆ ಬೇರೆ ಅರಸರ ಅಧೀನರಾಗಿ, ಆ ಮೇಲೆ ಸ್ವತಂತ್ರರಾಗಿ ಆಳ್ವಿಕೆ ನಡೆಸಿದ್ದನ್ನು ಕುರುಗೋಡು, ಬಳ್ಳಾರಿ ಮತ್ತು ಹಂಡೆ ಅನಂತಪುರ ಈ ಕೈಫಿಯತ್ತುಗಳು, ಕೆಲವು ಶಾಸನಗಳು, ಕೆಲವು ಮಠಗಳ ಸನ್ನದುಗಳು, ಕೆಲವು ಸಾಹಿತ್ಯಕೃತಿ ಇತ್ಯಾದಿಗಳು ಸಾರುತ್ತವೆ. ಹೀಗೆ ಆಳ್ವಿಕೆ ನಡೆಸಿದವರೇ ಮುಂದೆ ಹಂಡೆ ಪಾಳೆಯಗಾರರು ಎಂದು ಇತಿಹಾಸರಲ್ಲಿ ಖ್ಯಾತರಾಗಿದ್ದಾರೆ. ಈ ಬಗೆಗಿನ ವಿವರವನ್ನು ಮುಂದೆ ಗಮನಿಸಲಾಗುವುದು.

ಈ ಸಮುದಾಯದವರು ಹೊಯ್ಸಳ ದೊರೆಗಳ ಕಾಲದಲ್ಲೂ ದಳವಾಯಿಕೆಗೆ ಸಾಹಸಕ್ಕೆ ಹೆಸರಾಗಿದ್ದರು ಎಂಬುದನ್ನು ಶಕ ವರ್ಷ (ಕ್ರಿ.ಶ. ೧೧೯೪) ಎಂದು ಕಾಲ ನಮೂದಾಗಿರುವ ಲೋಹ (ಹಿತ್ತಾಳೆ?) ಶಾಸನವೊಂದು ಸೂಚಿಸುತ್ತದೆ. ಹಂಡೆ ವಜೀರ ಮುಮ್ಮಡಿ ದಳವಾಯಿ ರಂಗರಾವುತ ಎಂಬುವನು ಹೊಯ್ಸಳ ದೊರೆಗಳ ಪರವಾಗಿ ಬಾರಕನೂರು (ಬಾರಕೂರು) ಪ್ರದೇಶದ ಮೇಲೆ ಸೈನ್ಯ ತೆಗೆದುಕೊಂಡು ಹೋಗಿ ಜನ ಸಾಧಿಸಿದ್ದಕ್ಕೆ ದೊರೆಗಳು ಶ್ವೇತಚ್ಛತ್ರಿ, ಹಗಲು ದೀವಟಿಗೆ, ಮಕರತೋರಣ, ಗಂಡೆ ಸರಪಣಿ, ಒಂಟಿ ಜಂಗು, ನೆಲ್ಲುಹುಲ್ಲುಬಾರಿ ಇಂಥ ವಿಶೇಷ ಸವಲತ್ತು ಬಿರುದು ಮನ್ನಣೆಗಳನ್ನು ನೀಡಿದ್ದಾಗಿ ಆ ಶಾಸನ ನಿರೂಪದಿಂದ ತಿಳಿಯುತ್ತದೆ. ಇದರಲ್ಲಿ ವಿಷ್ಣುವರ್ಧನ, ಬಲ್ಲಾಳ, ಇವರ ಹೆಸರುಗಳು ಬಂದಿವೆಯಾದರೂ, ಇದರ ಕನ್ನಡ ಲಿಪಿ ಆ ಕಾಲದ್ದಿರದೆ ನಂತರದ ಕಾಲದ್ದಾಗಿ ಕಾಣುವುದು ಮತ್ತು ಇದರೊಳಗೆ ನಿಸನಿ (ನಿಶಾನಿ), ಲಡಯಿ (ಲಡಾಯಿ), ವಜೀರ ಇಂಥ ಆ ಕಾಲಕ್ಕೆ ಅಸಂಭಾವ್ಯವೆನಿಸುವ ಅನ್ಯದೇಶ್ಯ ಶಬ್ದಗಳು ಇದರ ಕನ್ನಡ ಭಾಷೆಯಲ್ಲಿರುವುದು, ಜೊತೆಗೆ ಭಾಷೆ ಕೂಡಾ ಅಷ್ಟೊಂದು ಶುದ್ಧ ಸ್ಥಿತಿಯಲ್ಲಿ ಇಲ್ಲದಿರುವುದು, ಈ ಶಾಸನದ ಬಗ್ಗೆ ಇದು ಆ ಮೇಲಿನ ಕಾಲದಲ್ಲಿ ರಚಿಸಿಕೊಂಡಿದ್ದಿರಬಹುದೆ ಎಂದು ಸಂದೇಹ ತಾಳುವಂತೆ ಮಾಡುತ್ತವೆ. ಒಟ್ಟಿನಲ್ಲಿ ಬಹುಹಿಂದಿನಿಂದಲೂ ಈ ಸಮುದಾಯದವರು ವೀರತನದ ವೃತ್ತಿಯಲ್ಲಿ ಸಾಗಿಬಂದವರು ಎಂಬುದಕ್ಕೆ ಇದನ್ನು ಒಂದು ಸೂಚಿಕೆಯಾಗಿ ಭಾವಿಸಬಹುದು.

ಇದೇ ಹಂಡೆ ಕುರುಬ ಸಮುದಾಯದ ತಿಮ್ಮರಾವುತ ಎಂಬುವನು ವಿಜಯನಗರ ಚಕ್ರವರ್ತಿ ಕೃಷ್ಣದೇವರಾಯನ ಕಾಲದಲ್ಲಿ ತೋರಿದ ಸಾಹಸಗಳ ಬಗ್ಗೆ ಇಲ್ಲಿ ಎರಡು ಮಾತುಗಳನ್ನು ಹೇಳಬೇಕು. ತಾಳೆಯ ಗರಿಯ ಕಟ್ಟಿನಲ್ಲಿ ಪ್ರತಿಮಾಡಕೊಂಡಂತೆ ಹೆಸರಿಸಿರುವ ಮೂರು (ಇವುಗಳಲ್ಲಿ ಮೂರನೆಯದು ಅಪೂರ್ಣ) ತಾಮ್ರ ಶಾಸನಗಳು ಆ ತಿಮ್ಮರಾವುತನ ಮೂರು ವಿವಿಧ ಸಾಹಸಗಳನ್ನೂ ಅವಕ್ಕಾಗಿ ಅವನು ಪಡೆದ ಮನ್ನಣೆಯನ್ನೂ ತಿಳಿಸುತ್ತವೆ. ಇವುಗಳಲ್ಲಿ ಕೊಟ್ಟಿರುವ ಶಕ ವರ್ಷ ಸಂಖ್ಯೆ, ಸಂವತ್ಸರದ ಹೆಸರು ಕೃಷ್ಣರಾಯನಿಗೂ ಅಚ್ಯುತರಾಯನಿಗೂ, ರಾಮರಾಯನಿಗೂ ಇರುವ ಪರಸ್ಪರ ಸಂಬಂಧದ, ಬಗ್ಗೆ ಹೇಳಿರುವ ಅಸಮರ್ಪಕ ಮಾಹಿತಿ ಇತ್ಯಾದಿಗಳಿಂದ ಈ ಶಾಸನಪ್ರತಿಗಳ ಬಗ್ಗೆ ಸಂದೇಹ ಮೂಡುತ್ತದೆಯಾದರೂ, ಇವನ್ನು ಘಟನಾನಂತರದ ಕಾಲದಲ್ಲಿ (೧೫೫೮ ರಲ್ಲಿ ಮತ್ತು ಅನಂತರದಲ್ಲಿ) ದಾಖಲಿಸಿ ಪಡೆದು ಕೊಂಡಿರುವ ಸಾಧ್ಯತೆಯೊಂದಿಗೆ, ಇವು ಒಳಗೊಂಡಿರುವ ವಿಷಯದ ಸಲುವಾಫಿ ಇವನ್ನು ಗಮನಿಸಬೇಕಾಗಿದೆ. ಅವುಗಳ ಪಾಠಗಳೊಳಗೆ ಅವನ್ನು ನಿರೂಪ ಎಂದು ಹೆಸರಿಸಲಾಗಿದೆ.

ವಿಜಯನಗರದಲ್ಲಿ ಕೃಷ್ಣರಾಯನು ಆಳುತ್ತಿರುವಾಗ್ಗೆ, ನವರಾತ್ರಿ ಹಬ್ಬದ ಏಳನೆಯ ದಿನ ನಾಲ್ಕು ಮಾರು ಅಗಲ, ನಾಲ್ಕು ಮಾರು ಉದ್ದ, ನಾಲ್ಕು ಮಾರು ಆಳ ಇರುವಂಥ ಗುಂಡಿಯೊಂದರಲ್ಲಿ ಒಂದು ಹುಲಿ ಮತ್ತು ಒಂದು ಸರ್ಪವನ್ನು ಹಾಕಿದ್ದಾರೆ. ಯಾರು ಆ ಸರ್ಪವನ್ನು ಮೆಟ್ಟಿ ಆ ಹುಲಿಯನ್ನು ಎದುರಿಸಿ ಎರಡನ್ನೂ ಕೊಲ್ಲುತ್ತಾರೋ ಅಂಥವರಿಗೆ ಅವರು ಬೇಡಿದ ಇಷ್ಟಾರ್ಥವನ್ನು ದೊರೆ ಸಲ್ಲಿಸುವುದಾಗಿ ೧೨೦೦೦ ವಜೀರ (ಕುದುರೆ ಯೋಧ)ರಲ್ಲಿ ಡಂಗುರದ ಮೂಲಕ ಘೋಷಣೆ ಮಾಡಿಸಿದಾಗ, ಯಾರೂ ಆ ಸವಾಲನ್ನು ಸ್ವೀಕರಿಸಲು ಮುಂದೆ ಬರಲಿಲ್ಲ. ಆಗ ತಿಮ್ಮರಾವುತ ಎಂಬುವನು ಬಂದು, ಸವಾಲನ್ನು ಸ್ವೀಕರಿಸಿ ಅವೆರಡನ್ನೂ ಕೊಂದನು. ಅವನ ಧೈರ್ಯ ಸಾಹಸಕ್ಕೆ ಸಂತೋಷಪಟ್ಟ ದೊರೆ, “ನಿನಗೇನು ಬೇಕು” ಎಂದು ಕೇಳಿದಾಗ, ಅವನು ಸ್ವಾಮಿ, “ನಮ್ಮ ಹಂಡೆದನುಗರ ಜನಾಂಗದಲ್ಲಿ ಹೆಣ್ಣಿಗೆ ೧೦೧ ವರಹ (ತೆರ) ಕನ್ಯಾಶುಲ್ಕ ಕೊಡಬೇಕು; ಮದುವೆ ಸುಂಕ ಎಂದು ಸರ್ಕಾರಕ್ಕೆ ೭ ವರಹ ಕೊಡಬೇಕು. ಹೀಗೆ ೧೦೮ ವರಹ ಕೊಡುವಷ್ಟು ಶಕ್ತಿ ಇಲ್ಲದ ಅನೇಕ ಕುಟುಂಬಗಳಲ್ಲಿ ಅನೇಕ ಯುವಕರು ಮದುವೆಯಾಗದೆ ಹಾಗೆ ಉಳಿದಿದ್ದಾರೆ. ಸರ್ಕಾರಕ್ಕೆ ತೆರುವ ೭ ವರಹವನ್ನೇ ಹೆಣ್ಣಿನ ತೆರನಾಗಿ ನಿಗದಿಪಡಿಸಿ, ಸರ್ಕಾರಕ್ಕೆ ಪಾವತಿಸವೇಕಾದ ಸುಂಕವನ್ನು ಪೂರ್ಣವಾಗಿ ಮಾಫಿ ಮಾಡಬೇಕು” ಎಂದು ಕೇಳಿಕೊಂಡನು. ದೊರೆ ಸಂತೋಷಪಟ್ಟು ಹಾಗೇ ಮಾಡಿದನು.

ಇಲ್ಲಿ ಕೆಲವು ಅಂಶಗಳನ್ನು ಗಮನಿಸಬೇಕು: ವಿಜಯನಗರ ಕಾಲದಲ್ಲಿ ಹಂಡೆ ಕುರುಬರಲ್ಲಿ ಮದುವೆ ಹೆಣ್ಣಿಗೆ ತೆರ ಹೊರೆಯಾಗುವಷ್ಟು ಇದ್ದುದು, ಅದನ್ನು ೭ ವರಹಕ್ಕೆ ಸೀಮಿತಗೊಳಿಸಿ ನಿಗದಿಪಡಿಸಲು ತಿಮ್ಮರಾವುತ ಪ್ರಯತ್ನಿಸಿದುದು ಸ್ಪಷ್ಟವಾಗಿದೆ. ತಿಮ್ಮರಾವುತ ತನ್ನ ಸ್ವಂತಕ್ಕಾಗಿ ಯಾವುದಾದರೊಂದು ಪ್ರಾಂತದ ಮೇಲೆ ಅಧಿಪತಿಯಾಗಿ ಅಧಿಕಾರ, ಸಂಪತ್ತು ಹೀಗೆ ಏನನ್ನಾದರೂ ಬೇಡಬಹುದಾಗಿತ್ತು. ರಾಜ ಅದನ್ನು ಕೊಟ್ಟೂ ಕೊಡುತ್ತಿದ್ದ. ಆದರೆ ಅವನು ಹಾಗೆ ಸ್ವಂತ ಲಾಭವನ್ನು ಬಯಸದೆ, ತನ್ನ ಸಮುದಾಯದ ಹಿತಸಾಧನೆಗೆ ಯತ್ನಿಸಿದ್ದು ಶ್ಲಾಘನೀಯವಾಗಿ ಕಾಣುತ್ತದೆ.

ತಿಮ್ಮರಾವುತ ಮೇಲಿನ ಸಾಹಸ ಮಾಡಿದ ಮರುವರ್ಷವೇ ಮತ್ತೊಂದು ಸಾಹಸ ಮಾಡದ ವಿವರ ಇನ್ನೊಂದು ಶಾಸನ ಪ್ರತಿಯಲ್ಲಿದೆ. ಮೇಲಿನ ಸಾಹಸದ ಬಗ್ಗೆ ಕೇಳಿ ತಿಳಿದ ಮುಸ್ಲಿಂ ಬಾದಶಹನೊಬ್ಬ (ಇವನು ಡಿಳ್ಳಿಯವನಾಗಿರದೆ, ಬಹಮನಿ ಸುಲ್ತಾನರಲ್ಲೊಬ್ಬನಾಗಿರಬೇಕೆಂದು ಕಾಣುತ್ತದೆ) ಎರಡು ಪಾವಟಿಗೆಯ ಒಂದು ತೇಜಿ (ಮೇಲೆ ಹತ್ತಲು ರಿಕಾಪಿನಲ್ಲಿ ಎರಡು ಮೆಟ್ಟಿಲುಗಳಿರುವಷ್ಟು ಎತ್ತರದ ಕುದುರೆ)ಯನ್ನು ಆಭರಣ, ಉಡುಗೊರೆ, ಕಾಣಿಕೆ ಸಹಿತ ನಿಯೋಗದೊಂದಿಗೆ ವಿಜಯನಗರಕ್ಕೆ ಕಳಿಸಿ, ಅದನ್ನು ಯಾರು ಏರಿ ಪಳಗಿಸುತ್ತಾರೋ ಅವರಿಗೆ ಆ ಮಾನ ಸನ್ಮಾನಗಳೆಲ್ಲ ಸಲ್ಲುತ್ತವೆ ಎಂದು, ಹಿಂದೆ ಮಾಡಿದಂತೆ ೧೨೦೦೦ ವಜೀರರ (ರಾವುತರ) ನಡುವೆ ಘೋಷಣೆ ಮಾಡಿಸಿದಾಗ, ಅವರಲ್ಲಿ ಯಾರೊಬ್ಬರೂ ಮುಂದೆ ಬರಲಿಲ್ಲ. ಆಗ ದೊರೆ ಕೃಷ್ಣ (ದೇವ)ರಾಯನು ತಿಮ್ಮರಾವುತನನ್ನು ಕರೆದು "ಹಿಂದೆ ಹುಲಿ ಮತ್ತು ಸರ್ಪವನ್ನು ಕೊಂದು ಸಾಹದ ಮೆರೆದಿದ್ದೀಯೆ, ಈಗ ಈ ಸಾಹಸಕ್ಕೂ ನೀನೇ ಮುಂದಾಗಬೇಕು" ಎಂದಾಗ ಅವನು ಅತ್ಯಂತ ವಿನಯದಿಂದ, "ನಾನು ಈ ೧೨,೦೦೦ ವೀರಭಂಟರ ಹಸ್ತಪಾದ ಮಾತ್ರನಾಗಿ ಇದ್ದೇನೆ. ತಾವು ನುಡಿದಂತೆ ಈ ಸಾಹಸ ಕೈಕೊಳ್ಳುತ್ತೇನೆ" ಎಂದು, ಆ ಕುದುರೆಯನ್ನು ಏರಿ ಒಂದು ಯೋಜನದವರೆಗೆ ಅದನ್ನು ಓಡಿಸಿ, ಮಣಿಸಿ, ತಿರುಗಿ ಬಂದನು. ಸಂತುಷ್ಟನಾದ ದೊರೆ "ನಿನಗೇನು ಬೇಕು ಕೇಳಿಕೋ" ಎಂದಾಗ ತಿಮ್ಮರಾವುತನು "ಹಿಂದೆ ಮದುವೆ ಹೆಣ್ಣಿನ ತೆರವನ್ನು ಕಡಿಮೆ ಮಾಡಿ, ಮದುವೆ ಸುಂಕವನ್ನು ಮಾಫಿ ಮಾಡಿ ನಮ್ಮ ಜನಾಂಗದ ಕಷ್ಟ ಪರಿಹಾರ ಮಾಡಿ ಕೀರ್ತಿಶಾಲಿಗಳಾದಿರಿ. ಈಗ ನಮ್ಮ ಕುಲಾಚಾರದ ಗೌಡಿಕೆ, ಕುಲದಲ್ಲಿ ಆದ ಹಾದರ, ಅನ್ಯಾಯ, ಚರಾದಾಯ, ಹೊರಾದಾಯ, ಕೈತಪ್ಪು, ಬಾಯಿತಪ್ಪು, ಸಂತಾನವಿಲ್ಲದ (ವರ) ಬದುಕು (ಜೀವನ ನಿರ್ವಹಣೆ), ದಿಕ್ಕಿಲ್ಲದ ಹೆಣ್ಣಿನ ಜೀವನ ನಿರ್ವಹಣೆ, ಇವನ್ನೆಲ್ಲ ನೋಡಿಕೊಳ್ಳಲು ಅನುಕೂಲವಾಗುವಂತೆ ನನಗೆ ಸೀಮೆ ತಳವಾರಿಕೆ ಇತ್ಯಾದಿ ನಡೆದುಕೊಂಡು ಬರುವ ಹಾಗೆ ದಯಪಾಲಿಸಬೇಕು" ಎಂದನು. ಅದಕ್ಕೆ ಸಕಲ ಸಾಮಾಜಿಕರು (ಪ್ರಮುಖರು) ಸರದಾರರು ಅವನ ಬೇಡಿಎಕಯನ್ನು ಬೆಂಬಲಿಸಿ, ದೊರೆಯಲ್ಲಿ ಕೇಳಿಕೊಂಡರು. ದೊರೆ ಕೃಷ್ಣರಾಯ ಅದರಂತೆ ತಿಮ್ಮ ರಾವುತನ ಕೋರಿಕೆಯನ್ನು ಈಡೇರಿಸಿದನು.

ಅಪೂರ್ಣವಾಗಿ ದೊರೆತಿರುವ ಮತ್ತೊಂದು ನಿರೂಪ ಪ್ರತಿ ತಿಮ್ಮರಾವುತನ ಇನ್ನೊಂದು ಸಾಹಸದತ್ತ ಬೆರಳುಮಾಡುತ್ತದೆ. ಇವನ ಘನ ಸಾಹಸಗಳ ಬಗ್ಗೆ ಕೇಳಿದ ಒಬ್ಬ ಬಾದಶಹ ಇದರಲ್ಲಿ ಕೂಡಾ ಡಿಳ್ಳಿ ಬಾದಶಹ ಎಂದೇ ಹೇಳಿದೆಯಾದರೂ, ಹಿಂದೆ ಹೇಳಿದಂತೆ ಇವನು ನಿಜವಾಗಿ ಡಿಳ್ಳಿಯವನಿರದೆ, ವಿಜಯನಗರದ ನೆರೆಯ ಬಹಮನಿ ಸುಲ್ತಾನರಲ್ಲಿ ಯಾರಾದರೊಬ್ಬನಿರಬಹುದು ಎನಿಸುತ್ತದೆ, ೧೨೦ ಜನ ಜಟ್ಟಿಯರ ಸಂಗಡ ಆಭರಣ, ಉಡುಗೊರೆ, ಕಾಣಿಕೆ ಮುಂತಾದವನ್ನು ಆನೆಯ ಮೇಲೆ ಹೇರಿಸಿ ಸಾಗಿಸಿ, ಈ ೧೨೦ ಜಟ್ಟಿಯರೊಂದಿಗೆ (ಏಕಕಾಲದಲ್ಲಿ) ಹೋರಾಡಿ ಗೆದ್ದ ವೀರನಿಗೆ ಆ ಎಲ್ಲ ವಸ್ತುಗಳನ್ನು ಬಹುಮಾನವಾಗಿ ನೀಡಲಾಗುವುದು ಎಂದು ಕಳಿಸಿರುವುದರ ಬಗ್ಗೆ (ಹಿಂದೆ ಮಾಡಿದಂತೆಯೇ) ೧೨೦೦೦ ಜನ ವಜೀರರ ನಡುವೆ ಘೋಷಣೆ ಮಾಡಿಸಿದಾಗ, ಆಗಲೂ ಯಾರೂ ಮುಂದೆ ಬರದಿದ್ದಾಗ ದೊರೆ ತಿಮ್ಮರಾವುತನನ್ನು ಕರೆದು "ಈ ಹಿಂದೆ ನೀನು ನಾಲ್ಕು ಹುಲಿಗಳನ್ನು ಕೊಂದು ನಿನ್ನ ಸಾಮರ್ಥ್ಯ ತೋರಿದ್ದೀಯ, ಈಗ ಈ ಸವಾಲನ್ನು ಸ್ವೀಕರಿಸಲು ನೀನೇ ಸಮರ್ಥ" ಎಂದಾಗ, ಅವನು "ಸ್ವಾಮಿ, ನಾನು ವೀರಾಧಿವೀರರ ಪಾದಸೇವಕನಾಗಿ, ಈ ಸವಾಲನ್ನು ಸ್ವೀಕರಿಸುತ್ತೇನೆ" ಎನ್ನುವವರೆಗೆ ಈ ನಿರೂಪದ ಪ್ರತಿಯಿಂದ ತಿಳಿಯುತ್ತದೆ. ಮುಂದೆ ತಿಮ್ಮರಾವುತ ಆ ೧೨೦ ಜಟ್ಟಿಗಳೊಂದಿಗೆ ಹೋರಾಡಿ ಅವರನ್ನು ಮಣಿಸಿ, ಎಲ್ಲ ಮಾನ ಸನ್ಮಾನಗಳನ್ನೆ ಪಡೆದಿರಬೇಕೆಂದು ಕಾಣುತ್ತದೆ.

ಇಲ್ಲಿ ಗಮನಿಸಬೇಕಾದ ಒಂದೆರಡು ಮುಖ್ಯ ಸಂಗತಿಗಳಿವೆ, ಅವೆಂದರೆ, ತಿಮ್ಮರಾವುತ ಈ ಜಟ್ಟಿಗಳೊಂದಿಗೆ ಹೋರಾಡುವ ಕಾಲಕ್ಕಾಗಲೇ ನಾಲ್ಕು ಹುಲಿಗಳನ್ನು ಕೊಂದು ಸಾಹಸವನ್ನು ಮೆರೆದಿದ್ದ ಎಂಬ ಸಂಗತಿ ಒಂದಾದರೆ, ಅವನು ಹುಲಿಯನ್ನು ಕೊಂದ ಸಾಹಸದ ಸುದ್ದಿ ಆ ವೇಳೆಗಾಗಲೇ ಸಾಮ್ರಾಜ್ಯದಾದ್ಯಂತ ಮತ್ತು ಇತರ ಸಾಮ್ರಾಜ್ಯಗಳವರೆಗೆ ಹರಡಿತ್ತು ಎಂಬ ಸಂಗತಿ ಇನ್ನೊಂದು. ವಿಜಯನಗರಕ್ಕೆ ಶತ್ರು ಪಕ್ಷದವರಾದ ಬಹಮನಿ ರಾಜ್ಯದಂಥವರು ಇಂಥ ಸುದ್ದಿ ಕೇಳಿ ತಿಮ್ಮರಾವುತನಂತ ವೀರರಿದ್ದ ವಿಜಯನಗರದ ಬಗ್ಗೆ ಆತಂಕಗೊಂಡಿದ್ದರೆ ಅದು ಸಹಜವೇ. ಹಾಗೇ ಇನ್ನೂ ಎಂಥೆಂಥ ಸಾಹಸ ಮಾಡಬಲ್ಲವರಿದ್ದಾರೋ ಎಂದು ಪರೀಕ್ಷೆ ಮಾಡಲು, ಮೇಲೆ ಹೇಳಿದಂಥ ಕೆಲವು ಸವಾಲುಗಳನ್ನೊಡ್ಡುವ ಪ್ರಯತ್ನ ಮಾಡಿದ್ದರೆ ಅದೂ ಕೂಡಾ ಸಹಜವೇ. ಶತ್ರು ಪಕ್ಷದವನೇ ಇದ್ದರೂ 'ಗುಣಕ್ಕೆ ಮಾತ್ಸರ್ಯವಿಲ್ಲ' ಎಂಬಂತೆ ಪರೋಕ್ಷವಾಗಿ ತಿಮ್ಮರಾವುತನಂಥವರ ಬಗ್ಗೆ ಗೂಢವಾದ ಮೆಚ್ಚುಗೆ ಇದ್ದರೂ ಆಶ್ಚರ್ಯವಿಲ್ಲ. ಈ ಪರೀಕ್ಷಾ ಪ್ರಯತ್ನಗಳು ನಡೆಯುವ ಕಾಲದಲ್ಲಿ ಶತ್ರುಪಕ್ಷದವರು ಯುದ್ಧಕ್ಕೆ ತೊಡಗದೆ ಕೆಲಕಾಲ ಗಾಢ ಶಾಂತಿ ನೆಲೆಸಿದ್ದಂತೆ ಕಾಣುತ್ತದೆ.

ಒಟ್ಟಿನಲ್ಲಿ ತಿಮ್ಮರಾವುತನ ಸಾಹಸ ಪ್ರಸಂಗಗಳು ಅಂದಿನ ಹಂಡೆಕುರುಬ ಸಮುದಾಯದ ಕೆಲವು ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳಿಗೆ ಕನ್ನಡ ಹಿಡಯುವಂತಿವೆ. ಆ ಸಮುದಾಯದವರಲ್ಲಿ ತೆರ (ಕನ್ಯಾಶುಲ್ಕ ಅಥವಾ ವಧುದಕ್ಷಿಣೆ) ಮತ್ತು ಮದುವೆ ಸುಂಕ ಇವನ್ನು ಕೊಡುವಷ್ಟು ಆರ್ಥಿಕ ಚೈತನ್ಯ ಅನೇಕರಿಗೆ ಆಗ ಇರಲಿಲ್ಲ ಎಂಬುದೂ ತಿಮ್ಮರಾವುತನ ಸ್ವಜನ ಹಿತದೃಷ್ಟಿ ಹಾಗೇ ನಿಸ್ವಾರ್ಥದೃಷ್ಟಿ ಆ ಸಮುದಾಯಕ್ಕೆ ಎಷ್ಟೊಂದು ಹಿತಕಾರಿಯಾಯಿತೆಂಬುದೂ, ವಿಜಯನಗರದ ದೊರೆಗಳವರು ಯಾವ ಜಾತಿ ಭೇದ ಭಾವನೆ ಇಲ್ಲದೆ ಸಾಮರ್ಥ್ಯ ಅರ್ಹತೆಗಳನ್ನು ಪುರಸ್ಕರಿಸಿದ್ದು ಈ ಸಮುದಾಯದ ಏಳಿಗೆಗೆ ಸಹಕಾರಿಯಾಗಿರಬೇಕೆಂಬುದೂ ಮನಸ್ಸಿಗೆ ಬರುತ್ತವೆ.

ಹಂಡೆ ಕುರುಬ ಸಮುದಾಯದವರು ಕೆಲವು ಗ್ರಾಮಗಳಲ್ಲಿ ಗೌಡಿಕೆ ಮಾಡುತ್ತಿದ್ದರೆಂದು ಹಿಂದೆಯೇ ಪ್ರಸ್ತಾಪಿಸಲಾಗಿದೆಯಷ್ಟೆ. ಅವರು ಚಿತ್ರದುರ್ಗ ಸಂಸ್ಥಾನದೊಳಗಣ ಗ್ರಾಮವೊಂದರಲ್ಲಿ ಗೌಡಿಕೆ ನಡೆಯಿಸುತ್ತಿದ್ದ ಕಾಲದಲ್ಲಿ ನಡೆಯಿತೆನ್ನಲಾದ ಘಟನೆಯೊಂದನ್ನು ಇಲ್ಲಿ ಹೇಳಬೇಕಾಗುತ್ತದೆ. ತಾಮ್ರ ಶಾಸನವೊಂದು ಹೇಳುವ ಆ ಘಟನೆ ಹೀಗಿದೆ:

(ಕ್ರಿ.ಶ.೧೭ನೆಯ ಶತಮಾನದ ಸುಮಾರು ಮಧ್ಯಕಾಲದಲ್ಲಿ) ಚಿತ್ರದುರ್ಗ ಪ್ರಾಂತದಲ್ಲಿ ಕೆನ್ನಳ್ಳಿ ಎಂಬ ಗ್ರಾಮದಲ್ಲಿ ಹಂಡೆಕುರುಬರ ಸಮುದಾಯದ ತಿಮ್ಮರಾವುತ ಎಂಬುವನು ಗೌಡಿಕೆ ಮಾಡುತ್ತಿದ್ದ. ಅವನ ಮಗಳು ಲಕ್ಕು (<ಲಕ್ಷ್ಮಿ). ಪ್ರಾಯಶಃ ಅತ್ಯಂತ ರೂಪವತಿಯಾಗಿದ್ದ ಆಕೆಯ ಮೇಲೆ ಚಿತ್ರದುರ್ಗದ ದೊರೆ ೨ನೇ ಇಮ್ಮಡಿ ಮದಕೇರಿ ನಾಯಕ ಮನಸ್ಸಿಟ್ಟನಾದ ಕಾರಣ ಅವಳನ್ನು ಮದುವೆ ಮಾಡಿಕೊಳ್ಳಲು ಬಯಸಿ, ಆ ಬಗ್ಗೆ ಪ್ರಸ್ತಾಪ ಮಾಡಲು ತನ್ನ ಇಬ್ಬರು ದಳವಾಯಿಗಳನ್ನು ಕಳಿಸಿಕೊಟ್ಟ. ಅವರು ಕೆನ್ನಳ್ಳಿಗೆ ಬಂದು ಈ ಬಗ್ಗೆ ಪ್ರಸ್ತಾಪ ಮಾಡಿದಾಗ ರಾವುತರಿಗೆ ಸಿಟ್ಟು ಬಂದು. ಅವರು "ನಮ್ಮ ಜಾತಿಯವರಲ್ಲಿ ವಾಲ್ಮೀಕಿ ಜಾತಿಯವರು ಹೆಣ್ಣು ಕೇಳಲಿಕ್ಕೆ ಯಾವ ಹಕ್ಕಿದೆ?" ಎಂದು ಪ್ರಶ್ನಿಸಿ, ಕಡೆಗೆ ಆ ದಳವಾಯಿಗಳ ಕಾಲಿಗೆ ಹಗ್ಗ ಕಟ್ಟಿ ಗ್ರಾಮದ ಹೊರಕ್ಕೆ ಎಳೆಸಿ ಹಾಕಿಸಿದರು. ಆಗ ಅವರು ಬಂದು ದೊರೆಯಲ್ಲಿ ಫಿರಿಯಾದಿ ಹೇಳಿದರು. ದೊರೆ ಕುಪಿತನಾಗಿ ೧೬೮ ಮಂದಿ ಜವಾನರನ್ನು ಕೆನ್ನಳ್ಳಿಗೆ ಕಳಿಸಿದ. ಅವರು ಬಂದವರೇ ಲೂಡಿ ಮಾಡುವುದು, ಬಣವೆ ಬೆಳೆಗಳಿಗೆ ಬೆಂಕಿ ಹಚ್ಚುವುದು, ಮಾಡಿ ಕಡೆಗೆ ಆ ರಾವುತರ ಮನೆಯನ್ನು ಮುತ್ತಿ ಲಕ್ಕುವನ್ನು ಹಿಡಿದರು. ಆಗ ಕೆನ್ನಳ್ಳಿಯ ಹಿರಿಯರಾವುತರು ೫ ಜನ, ಕಿರಿಯರು ೧೫ ಜನ ಒಟ್ಟು ೨೦ ಜನ ಸೇರಿ ೧೬೮ ಜವಾನರ ಮೇಲೆ ಬಿದ್ದರು. ಆಗ ನಡೆದ ಲಡಾಯದಲ್ಲಿ ದೊರೆಯ ಕಡೆಯವರು ೧೧೨ ತಲೆಗಳು ಬಿದ್ದವು; ರಾವುತರಲ್ಲಿ ೯ ತಲೆಗಳು ಬಿದ್ದವು. ಉಳಿದ ದೊರೆಯ ಕಡೆಯವರು ಅಲ್ಲಿಂದ ಓಡಿ ಹೋದರು. ರಾವುತರಲ್ಲಿ ಸತ್ತ ೯ ಜನರಿಗೆ ಕಿಚ್ಚು ಹಾಕಿದಾಗ, "ನನ್ನಿಂದಾಗಿ ನನ್ನ ಅಣ್ಣಂದಿರು ಸತ್ತರು" ಎಂದು ಲಕ್ಕು ತಾನೂ ಅದೇ ಕಿಚ್ಚಿಗೆ ಹಾರಿ ಪ್ರಾಣ ದೊರೆದಳು. "ದೊರೆಯ ದ್ವೇಷ ಕಟ್ಟಿಕೊಂಡದ್ದಾಯಿತು. ಇತ್ತ ಲಕ್ಕು ಕೂಡಾ ತೀರಿಹೋದಳು. ನಾಳೆ ನಾವು ಬದುಕಿ ಉಳಿಯುವುದು ಕಷ್ಟ" ಎಂದು ರಾವುತರು ರಾತ್ರಿಯಲ್ಲೇ ತಮ್ಮ ದೇವರುಗಳನ್ನು ಬಂಡಿಯಲ್ಲಿ ಹೇರಿಕೊಂಡು ಇಕ್ಕೇರಿ ಸೀಮೆಗೆ ಹೋಗಿ ಅಲ್ಲಿ ಆಶ್ರಯ ಪಡೆದರು.

ಆಗ ಇಕ್ಕೇರಿಯಲ್ಲಿ ಆಳುತ್ತಿದ್ದ ಶಿವಪ್ಪನಾಯಕ (೧೬೪೬-೧೬೬೧) ದೊರೆಗೆ ದುರ್ಗದ ದೊರೆ "ನಮ್ಮ ಪ್ರಾಂತರ ರಾವುತರು ನಿಮ್ಮ ಪ್ರಾಂತಕ್ಕೆ ಬಂದು ಮರೆಬಿದ್ದಿದ್ದಾರೆ. ಅವರನ್ನು ಹಿಡಿದು ನಮಗೊಪ್ಪಿಸಿ" ಎಂದು ಪತ್ರ ಕಳಿಸಿದಾಗ, ಶಿವಪ್ಪನಾಯಕ "ನಾವು ಇಕ್ಕೇರಿಯವರು, ಮರೆಬಿದ್ದವರನ್ನು ಬಿಟ್ಟುಕೊಡುವವರಲ್ಲ. ನಾವು ಈ ರಾವುತರ ಪರಾಕ್ರಮಕ್ಕೆ, ಲಕ್ಕು ಕೊಂಡಕ್ಕೆ ಬಿದ್ದದ್ದಕ್ಕೆ ಮೆಚ್ಚಿಕೊಂಡಿದ್ದೇವೆ" ಎಂದು ಮಾರುತ್ತರದ ಪತ್ರ ಕಳಿಸಿದನು. ಆ ತರುವಾಯ ಶಿವಪ್ಪನಾಯಕ ದೊರೆ "ನಿಮಗೇನು ಬೇಕೋ ಕೇಳಿ" ಎಂದಾಗ ರಾವುತರು "ಡಿಳ್ಳಿ ಸೀಮೆಗೆ ಸೇರಿದ ತಿಮ್ಮನ ಕಟ್ಟೆ, ವಿಜಯನಗರದ ಸೀಮೆಗೆ ಸೇರಿದ ಕೆಲಕೋಟೆಪುರ ಮತ್ತು ಹಿಡಂಬದುರ್ಗ ಸೀಮೆಗೆ ಸೇರಿದ ಕೆನ್ನಳ್ಳಿ, ಈ ಗ್ರಾಮಗಳಲ್ಲಿ ನಮ್ಮ ದೇವರುಗಳಿಗೆ ಯಾರಿಂದಲೂ ಯಾವ ಅಡ್ಡಿಯೂ ಬರದ ಹಾಗೆ ನೋಡಿಕೊಳ್ಳುತ್ತೇವೆ. ಜೊತೆಗೆ ನಮ್ಮ ಜಾರಿಯವರ ಏನೇ ಲೋಪದೋಷಗಳನ್ನೂ ನಾವೇ ವಿಚಾರಿಸಿಕೊಳ್ಳುತ್ತೇವೆ. ಹಿಂದೆ ರಾಜರು ನಮಗೆ ಇಂಥ ಅಧಿಕಾರ ಹಕ್ಕು ಕೊಟ್ಟಿದ್ದಂತೆ, ಈಗ ನಮ್ಮ ಕಡೆಯಿಂದಲೂ ಅಂಥದೇ ಹುಕುಂ ಆಗಬೇಕು" ಎಂದು ಕೇಳಿಕೊಂಡಾಗ ಶಿವಪ್ಪನಾಯಕ ದೊರೆ ಅದಕ್ಕೊಪ್ಪಿ ತನ್ನ ಪ್ರಧಾನದ ಸಮಕ್ಷಮದಲ್ಲಿ ಅವರಿಗೆ ಗ್ರಾಮ ನೇಮಕ ಮಾಡಿಕೊಟ್ಟನು.

ಈ ಮೇಲಿನ ಪ್ರಸಂಗದಿಂದ ಹಂಡೆ ಕುರುಬ ಸಮುದಾಯದವರು ಸಾಮಾನ್ಯ ಪ್ರಜೆಗಳಾದರೂ, ದೊರೆಯನ್ನು ಎದುರುಹಾಕಿಕೊಳ್ಳುವಷ್ಟರ ಮಟ್ಟಿಗೆ ತಾವು ನಂಬಿದ್ದ ತಮ್ಮ ಸಮುದಾಯದ ಪಾವಿತ್ರ್ಯಕ್ಕೆ ಪ್ರಜ್ಞಾ ಪೂರ್ವಕವಾಗಿ ಪ್ರತಿಕ್ರಿಯಿಸುತ್ತಿದ್ದರೆಂದು

ವ್ಯಕ್ತವಾಗುತ್ತದೆ. ಅವರು ಹಾಗೆ ಮಾಡಿದ್ದು ಸಾಮಾನ್ಯ ಸಂಗತಿಯಾಗಿ ಕಾಣುವುದಿಲ್ಲ. ಮುಂದೆ ಅವರು ಶಿವಪ್ಪನಾಯಕ ದೊರೆ "ನನ್ನಿಂದ ನಿಮಗೇನು ಸಹಾಯವಾಗಬೇಕು" ಎಂದು ಕೇಳಿದಾಗಲೂ ಅವರು ಅದೇ ರೀತಿ ತಮ್ಮ ಸಮುದಾಯದ ಆಗು-ಹೋಗುಗಳಲ್ಲಿ ಕಟ್ಟುಪಾಡುಗಳಲ್ಲಿ ಅನ್ಯಜಾತಿಯವರು ಕೈಹಾಕದಂತೆ, ತಾವೇ ನಿಭಾಯಿಸಿಕೊಂಡು ಹೋಗುವಂತೆ, ಅಪ್ಪಣೆ ನೀಡಬೇಕು ಎಂದು ಕೇಳುವುದು ಸಹ ಮೇಲೆ ಹೇಳಿದ ಅಂಶಕ್ಕೆ ಪೂರಕವಾಗಿದೆ. ಅವರ ಸ್ವಾಭಿಮಾನವನ್ನು ಪರೋಕ್ಷವಾಗಿ ಹೇಳುವಂತಿದೆ. ಈ ಮೇಲಿನ ಎಲ್ಲ ಘಟನೆಗಳಿಂದ ಹಂಡೆ ಕುರುಬ ಸಮುದಾಯದವರು ನಿಧಾನವಾಗಿ ತಮ್ಮ ಕುಲಕಸುಬಿನ ಬದಲಿಗೆ ಗೌಡಿಕೆ, ಸರದಾರಿಕೆ, ಫೌಜುದಾರಿಕೆ, ರಾವುತಿಕೆ ಹೀಗೆ ಬೇರೆ ಬೇರೆಯ ಹೊಣೆಗಾರಿಕೆಯ ಸ್ಥಾನಗಳಲ್ಲಿ ಮತ್ತು ರಾಜರಸೇವೆಯಲ್ಲಿ ತೊಡಗಿ, ತಮ್ಮ ದಕ್ಷತೆ, ಸಾಮರ್ಥ್ಯಗಳಿಂದ ಜನಮನ್ನಣೆ ರಾಜಮನ್ನಣೆಗಳಿಸಿ ಗುರುತಿಸಲ್ಪಡುವಂತಾಗಿದ್ದರೆಂದೂ ಹೇಳಬಹುದು.

ಇದರ ಜೊತೆಗೆ ಹಂಡೆಕುರುಬ ಸಮುದಾಯವರು ಪಾಳೆಯಪಟ್ಟುಗಳ ಅಧಿಪತಿಗಳಾಗಿ ಸಹ ಇತಿಹಾಸದಲ್ಲಿ ತಮ್ಮ ಹೆಜ್ಜೆಗುರುತು ಮೂಡಿಸಿರುವುದನ್ನು ಇಲ್ಲಿ ಸ್ವಲ್ಪ ಅವಲೋಕಿಸಬಹುದು; ಇತಿಹಾಸದಲ್ಲಿ ಇವರು 'ಹಂಡೆ ಪಾಳೆಯಗಾರರು' ಎಂದು ಪ್ರಸಿದ್ಧರಾಗಿದ್ದಾರೆ. ಇವರ ಬಗ್ಗೆ ವಿವರವಾಗಿ ಬರೆಯುವುದು ಇನ್ನೊಂದು ಪ್ರತ್ಯೇಕ ಲೇಖನ ಅಥವಾ ಕಿರುಹೊತ್ತಿಗೆಯಾಗುವಷ್ಟು ವ್ಯಾಪ್ತಿಯನ್ನು ಹೊಂದಿರುವುದರಿಂದ, ಅವರ ಇತಿಹಾಸದ ಬಗ್ಗೆ ಇಲ್ಲಿ ಸಂಕ್ಷಿಪ್ತವಾಗಿ ಮಾತ್ರ ಅವಲೋಕಿಸಲಾಗಿದೆ. ಇವರ ಇತಿಹಾಸ ರಚನೆಗೆ ಹಿಂದೆ ಹೇಲಿದಂತೆ ಹಲವು ಶಾಸನಗಳು, ಸಾಹಿತ್ಯ ಕೃತಿಗಳು, ಕೃಫಿಯತ್ತುಗಳು ಕೆಲವು ಲಿಂಗಾಯತ ಮತ್ತಿತರ ಮಠಗಳ ಸನ್ನದು-ನಿರೂಪ-ದಾನಪತ್ರಗಳು, ಇಂಥ ಅನೇಕ ಆಕರಗಳು ಸಹಾಯಕವಾಗಿವೆ. ಇಷ್ಟಾದರೂ ಇವರ ಚರಿತ್ರೆ ಪೂರ್ಣವಾಗಿ ತಿಳಿದಿದೆ ಎಂದು ಹೇಳಲಾಗುವಂತಿಲ್ಲ. ಈಗ ತಿಳಿದುಬಂದಿರುವಂತೆ ಈ ಪಾಳೆಯಗಾರರ ಮೂಲಪುರುಷ (ಲಕ್ಕಿನಾಯಕನ ಮಗನಾದ) ಬಾಲದ ಹನುಮಪ್ಪನಾಯಕ. ಈ ಮನೆತನದವರು ಮೊದಲಿಗೆ ಬಿಜಾಪುರ ಬಾದಶಹನಲ್ಲಿ ಸರದಾರರಾಗಿ ಆ ರಾಜ್ಯಕ್ಕೆ ಸೇರಿದ ಮುತ್ತಿಗೆ ವಡವಡಿಗೆ ಗ್ರಾಮಗಳಲ್ಲಿ ಇದ್ದರೆಂದೂ, ಹೀಗಿರುವಾಗ ಬಾದಶಾಹನು ದಕ್ಷಿಣಕ್ಕೆ ತನ್ನ ರಾಜ್ಯವನ್ನು ವಿಸ್ತರಿಸುವ ಆಶಯದಿಂದ ಆಗ ತನ್ನಲ್ಲಿ ಫೌಜುದಾರನಾಗಿದ್ದ ಬಾಲದ ಹನುಮಪ್ಪನಾಯಕನಿಗೆ ದಕ್ಷಿಣದಲ್ಲಿದ್ದ ಬಂಕಾಪುರವನ್ನು ಜಹಗೀರಾಗಿ ನೀಡಿ (೧೫೬೮ರಲ್ಲಿ) ಅಲ್ಲಿಗೆ ಕಳಿಸಿಕೊಟ್ಟನೆಂದೂ, ಹೀಗೆ ಬಂಕಾಪುರಕ್ಕೆ ಬಂದ ಅವನು ಅಲ್ಲಿ ಕೋಟೆ ಕಟ್ಟಿಸಿ, ಅಲ್ಲಿ ಶಾಂತಿ ಹಾಗೂ ಸುವ್ಯವಸ್ಥೆಯನ್ನು ನೆಲೆಗೊಳಿಸಿದಾಗ, ಬಾದಶಹ ಅವನಿಗೆ ವಜೀರ ಬಿರುದು ಬೀಡಿ, ಬಳ್ಳಾರಿಗೆ ಕಳಿಸಿಕೊಟ್ಟಾಗ ಅಲಿಗೆ ಬಂದ ಅವನು ಬಳ್ಳಾರಿಯ ಗುಡ್ಡಕ್ಕೆ ಹೊಂದಿಕೊಂಡಂತೆ ಅಲ್ಲೂ ಕೋಟೆ ಕಟ್ಟಿಸಿ, ಸುತ್ತ ಮುತ್ತಲ ಪ್ರದೇಶವನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡು ಆಳಿದನೆಂದೂ ತಿಳಿಯುತ್ತದೆ.

ಮೊದಲಿಗೆ ಸೊನ್ನಲಪುರದಲ್ಲಿದ್ದ ಹನುಮಪ್ಪನಾಯಕನನ್ನು ವಿಜಯನಗರದ ರಾಮರಾಯ ಮತ್ತು ತಿರುಮಲರಾಯ ಇವರು ಕರೆಸಿಕೊಂಡು ತಮ್ಮಲ್ಲಿ ಸೇವೆಯಲ್ಲಿರಿಸಿಕೊಂಡರೆಂದೂ ಮುಂದೆ ಅವನು ನಿಜಾಮ್ ಶಾಹನನ್ನು ಸೆರೆಹಿಡಿದು ತಂದು ಅವರಿಗೊಪ್ಪಿಸಿ ಸಾಹಸ ಸ್ವಾಮಿಭಕ್ತಿಯನ್ನು ಮೆರೆದಿದ್ದಾಗಿ ತಿಳಿಯುತ್ತದೆ. ಹೀಗೆಯೇ ವಿಜಯನಗರದ ರಾಮರಾಯನು ಶತ್ರುಗಳಿಂದ ಸೆರೆಯಾಗಿದ್ದಾಗ ಇವನು ಹೋಗಿ ಪಾರುಮಾಡಿದನೆಂದೂ ಅದಕ್ಕೆ ರಾಮರಾಯ ಅವನಿಗೆ ಅನೇಕ ಗ್ರಾಮಗಳನ್ನು ನೀಡಿದನೆಂದು ತಿಳಿಯುತ್ತದೆ. ಆಗ ಬಂಕಾಪುರವಷ್ಟೇ ಅಲ್ಲದೆ, ಕುರುಗೋಡು, ಶಿರಗುಪ್ಪಿ, ತೆಕ್ಕಲಕೋಟೆ, ಅನಂತಪುರ, ಧರ್ಮಪುರ, ನಂದ್ಯಾಲ, ಸಿರಿವಾಳ, ಪರಗಣೆಗಳೂ, ಸಿಂಧನೂರು, ದರೋಜಿ, ವಡ್ಡು, ಕಣೇಕಲ್ಲು ಮುಂತಾದ ಸಮ್ಮತ್ತುಗಳೂ ಇವನ ಆಳ್ವಿಕೆಯ ವ್ಯಾಪ್ತಿಗೆ ಬಂದಿದ್ದವು. ಇಷ್ಟೊಂದು ವಿಶಾಲ ಪ್ರಾಂತಾಧಿಕಾರ ಹೊಂದಿದ ಇವನು ಮುಂದೆ ತನ್ನ ಮಕ್ಕಳೊಂದಿಗೆ ಬಳ್ಳಾರಿಯಲ್ಲಿದ್ದು ಕೆಲಕಾಲ ರಾಜ್ಯಭಾರ ಮಾಡಿದ. ಇವನ ಆಳ್ವಿಕೆ ೧೫೩೭ಕ್ಕೆ ಮುಂಚಿನಿಂದಲೇ ಪ್ರಾರಂಭವಾಗಿದ್ದಂತೆ ತಿಳಿದುಬಂದಿದೆ.

ಬಾಲದ ಹನುಮಪ್ಪನಾಯಕನಿಗೆ ಐದು ಜನ ಗಂಡುಮಕ್ಕಳೂ ಒಬ್ಬ ಮಗಳೂ ಇದ್ದರು. ಮುಂದೆ ರಾಜ್ಯಕ್ಕಾಗಿ ಗಂಡು ಮಕ್ಕಳು ತಮ್ಮ ತಮ್ಮಲ್ಲಿ ಯಾವುದೇ ಅಸಮಾಧಾನ, ಘರ್ಷಣೆ ಆಗದ ಹಾಗೆ ಮತ್ತು ತಂದೆ ಗಳಿಸಿದ ರಾಜ್ಯ ವ್ಯವಸ್ಥಿತವಾಗಿ ನಡೆದುಕೊಂಡು ಹೋಗಲು ಅಡ್ಡಿಯಾಗದ ಹಾಗೆ, ಅವರು ಹಂಚಿಕೊಂಡರು. ಹಿರಿತನದ ಅನುಕ್ರಮದಲ್ಲಿ ಅಂಕುಶರಾಯನಿಗೆ ಬಂಕಾಪುರದ ಸೀಮೆ, ದೇವಪ್ಪನಾಯಕನಿಗೆ ಸಿರಿವಾಳದ ಸೀಮೆ, (ನಿಚ್ಚಮದುವಣಿಗ ಅಥವಾ ನಿಚ್ಚ ಮದಲಿಂಗ ಎಂಬ ಅನ್ವರ್ಥನಾಮ ಹೊಂದಿದ್ದ) ರಾಮಪ್ಪನಾಯಕನಿಗೆ ಕುಂದುರ್ಪೆ ಸೀಮೆ, ಹಿರಿಯ ಮಲಕಪ್ಪನಾಯಕನಿಗೆ ಬಳ್ಳಾರಿ, ಕುರುಗೋಡು, ತೆಕ್ಕಲಕೋಟೆ, ಸಿನ್ನೂರು, ಸಿರುಗುಪ್ಪತಿ, ಮೇಕೆ ಇತ್ಯಾದಿ ಸೀಮೆ ಮತ್ತು ಚಿಕ್ಕಮಲಕಪ್ಪನಾಯಕನಿಗೆ ಅನಂತಪುರ ಧರ್ಮಾವರಂ ಸೀಮೆ- ಹೀಗೆ ಹಂಚಿಕೆ

ಮಾಡಿಕೊಂಡರು. ಹೀಗೆ ಇವರು ಹಂಚಿಕೊಂಡ ಪ್ರಾಂತಗಳಲ್ಲಿ ಮುಂದೆ ಕೆಲಕಾಲ ಅವರ ಆಳ್ವಿಕೆ ಸಾಗಿತು. ಇವರಲ್ಲಿ ಮೂರನೆಯ ಹಾಗೂ ನಾಲ್ಕನೆಯ ಮಕ್ಕಳಾದ ಉಳಿಯದೆ, ಅವರಿಗೆ ಸೇರಿದ್ದ ಪ್ರಾಂತ್ಯಗಳು ಉಳಿದ ಸೋದರ ಸಂತತಿಯವರ ಪಾಲಾಗಿ ಅನೇಕ ವರ್ಷಗಳವರೆಗೆ ಈ ಹಂಡೆ ಮನೆತನದವರ ಆಳ್ವಿಕೆ ನಡೆಯಿತು.

ಬಾಲದ ಹನುಮಪ್ಪನಾಯಕನ ಐದು ಜನ ಗುಂಡುಮಕ್ಕಳನ್ನು ಕುರುಗೋಡು ಕೃಫಿಯತ್ತಿನಲ್ಲಿರುವ ಒಂದು ಭಟ್ಟಾಂಗಿ ಪದ್ಯ, ಅನುಕ್ರಮವಾಗಿ ಪಾಂಡವರಿಗೆ ಹೋಲಿಸಿ ಹೀಗೆ ವರ್ಣಿಸುತ್ತದೆ.

ಧರೆಗೇ ಧರ್ಮಜನಂಕುಶ
ಪರಬಲದೊಳ್ ಭೀಮ ದೇವ ಅರ್ಜುನ ರಾಮಂ
ಧುರಧೀರ ಕುಲ ಮಲ್ಕನು
ನೆರೆ ಗೆಲ ಸಹದೇವ ಚಿಕ್ಕಮಲ್ಯ ವಜೀರಾ

ಹೀಗೆ ವರ್ಣಿಸುವುದರ ಜೊತೆಗೆ, ಅಂಕುಶರಾಯ ಬಹುಧರ್ಮಿಷ್ಠ, ದ್ಯಾವಣ್ಣನಾಯಕ ಬಹುಪರಾಕ್ರಮಿ, ನಿಚ್ಚಮದುವಣಿಗ ರಾಮಪ್ಪನಾಯಕ ಬಹುಭೋಗಿ, ಹಿರೇಮಲ್ಕಪ್ಪನಾಯಕ ಮತ್ತು ಚಿಕ್ಕಮಲ್ಕಪ್ಪನಾಯಕ ಇವರು ಪ್ರಸಿದ್ಧ ಪುರುಷರು ಎಂದೂ ಹೇಳುತ್ತದೆ.

ಬಾಲದ ಹನುಮಪ್ಪ ನಾಯಕನಿಗೂ ಬಿಜಾಪುರದ ಬಾದಶಹನಿಗೂ ವೈಮನಸ್ಯ ಉಂಟಾದ ಒಂದು ಕುತೂಹಲಕಾರಿ ಪ್ರಸಂಗವನ್ನು ಕುರುಗೋಡು ಮತ್ತು ಬಳ್ಳಾರಿ ಕೈಫಿಯತ್ತುಗಳೆರಡೂ ಹೇಳುತ್ತವೆ. ಅದನ್ನು ಇಲ್ಲಿ ಹೀಗೆ ಸಂಗ್ರಹಿಸಬಹುದು: ಬಾಲದ ಹನುಮಪ್ಪ ನಾಯಕನು ಒಮ್ಮೆ ತನ್ನ ಐವರು ಗಂಡು ಮಕ್ಕಳೊಂದಿಗೆ ಬಿಜಾಪುರಕ್ಕೆ ಹೋಗಿ ಬಾದಶಹನನ್ನು ಕಂಡಾಗ, ಬಾದಶಹನು ನಾಯಕನ ಸ್ಫುರದ್ರೂಪಿಗಳಾದ ಆ ಮಕ್ಕಳನ್ನು ಕಂಡು, “ಈ ಮಕ್ಕಳೊಳಗೆ ಒಬ್ಬನನ್ನು ನಮಗೆ ಕೊಡು” ಎಂದು ನಾಯಕನನ್ನು ಕೇಳಿದನು. ಆಗ ನಾಯಕನು ತನ್ನ ಮಕ್ಕಳಲ್ಲೊಬ್ಬನನ್ನು ಮುಸ್ಲಿಮನಾಗಿ ಮತಾಂತರಿಸಿ ತನ್ನಲ್ಲಿ ಇಟ್ಟುಕೊಳ್ಳಬೇಕೆಂಬ ಬಯಕೆ ಬಾದಶಹನಿಗಿರುವುದನ್ನು ಗ್ರಹಿತಿ, ಕೋಪ ಬಂದು “ನಿಮ್ಮ ಜನಾನಾ (ಅಂತಃಪುರ)ದಲ್ಲಿ ಒಬ್ಬ ಬೀಬಿ (ಸತಿ)ಯನ್ನು ಕೊಟ್ಟರೆ, ಈ ರೀತಿ ಇರುವ ಮಗನನ್ನು ಹುಟ್ಟಿಸಿಕೊಡುತ್ತೇನೆ” ಎಂದನು. ಹಾಗೆಂದವನೇ ಅಲ್ಲಿ ನಿಲ್ಲದೆ ಹೊರಟು ತ್ವರಿತವಾಗಿ ತನ್ನ ಸೈನ್ಯ ಸಹಿತವಾಗಿ ಬಿಜಾಪುರವನ್ನು ತೊರೆದು ಸಾಗಿದಾಗ, ಬಾದಶಹನ ೧೦ ಸಾವಿರದಷ್ಟು ಫೌಜು ಬೆನ್ನಟ್ಟಿ ಬರು, ನಾಯಕನು ತನ್ನೆಲ್ಲ ಜನ ಸಮೇತ ಕೃಷ್ಣಾನದಿಯನ್ನು ದಾಟಿ ಮುಂದಕ್ಕೆ ಹೋದನು. ಆದರೆ ಬಾದಶಹನ ದಂಡು ಮಾತ್ರ ನದಿ ದಾಟಲಾಗದೆ ವಾಪಸಾಗಿ ನಡೆದ ಸಂಗತಿಯನ್ನು ಬಾದಶಹನಿಗೆ ವರದಿ ಮಾಡಿತು. ಇತ್ತ ಬಾಲದ ಹನುಮಪ್ಪ ನಾಯಕನು ತನ್ನ ಮಕ್ಕಳು ಸಹಿತವಾಗಿ ಬಳ್ಳಾರಿಗೆ ಬಂದನು. ಮುಂದೆ ಅವನು ಅಲ್ಲಿ ಕೆಲಕಾಲ ರಾಜ್ಯವಾಗಿ ನಿಧನನಾಗಲಾಗಿ, ಅವನ ಮಕ್ಕಳು ಮೇಲೆ ಹೇಳಿದಂತೆ ರಾಜ್ಯವನ್ನು ಹಂಚಿಕೊಂಡು ಆಳತೊಡಗಿದರು.

ಬಾಲದ ಹನುಮಪ್ಪನಾಯಕನ ಹಿರಿಯಮಗನಾದ ಅಂಕುಶರಾಯ ತಂದೆ ಮರಾಣಾನಂತರ ಬಂಕಾಪುರ, ನಂದ್ಯಾಲ, ಸಿರಿವಾಳ ಈ ಸೀಮೆಗಳ ಪ್ರಭುವಾಗಿದ್ದ. ಇವನ ಮರಣಾನಂತರ ಇವನ ಮಕ್ಕಳಾಗಿದ್ದ ಸಿದ್ಧಪ್ಪನಾಯಕ, ಪ್ರಸನ್ನಪ್ಪನಾಯಕ ಇವರು ಆಳುತ್ತಿದ್ದಾಗ, ಬಿಜಾಪುರದ ಆದಿಲ್‌ಶಾಹನ ಆಕ್ರಮಣದಿಂದ ತಮ್ಮ ಪ್ರಾಂತವನ್ನು ಕಳೆದುಕೊಂಡು ಬಳ್ಳಾರಿಯ ಸಮೀಪದ ಹಂದರಹಾಳು ಎಂಬಲ್ಲಿ ಒಕ್ಕಲುತನದ ವೃತ್ತಿಯನ್ನು ಕೈಕೊಳ್ಳಬೇಕಾಯಿತು. ಈ ಸಿದ್ಧಪ್ಪನಾಯಕನಿಗೆ ದೊಡ್ಡ ತಲೆ ರಾಮಪ್ಪನಾಯಕ ಮತ್ತು ಹನುಮಪ್ಪನಾಯಕ, ಇವರು ಇಬ್ಬರು ಮಕ್ಕಳು. ಬಾಲದ ಹನುಮಪ್ಪನಾಯಕನ ಕೊನೆಯ ಮಗ ಚಿಕ್ಕಮಲಕಪ್ಪನ ಸಂತತಿಯಲ್ಲಿ ಮುಂದೆ ಬಂದ ದ್ಯಾವಪ್ಪನಾಯಕ ಎಂಬುವನ ಹಿರಿಯ ಪತ್ನಿ ಪದ್ಮಮ್ಮನಲ್ಲಿ ಹನುಮಪ್ಪನಾಯಕ, ಹಿರಿಯ ರಾಮಪ್ಪನಾಯಕ ಮತ್ತು ಚಿಕ್ಕರಾಮಪ್ಪ ನಾಯಕ ಎಂಬ ಮಕ್ಕಳಿದ್ದು, ಕಿರಿಯ ಪತ್ನಿ ನೀಲಮ್ಮನಿಗೆ ಸಂತಾನವಿರಲಿಲ್ಲ. ಹಿರಿಯ ಹೆಂಡತಿಯ ಮಕ್ಕಳು ಬಳ್ಳಾರಿ ಪರಗಣೆಯನ್ನು ಆಳಿ ಕೆಲಕಾಲಾನಂತರ ನಿಧನರಾಗಲು, ಅವರಾರಿಗೂ ಸಂತಾನವಿಲ್ಲದ ಕಾರಣ ನೀಲಮ್ಮ ಹಂದರಹಾಳಿಗೆ ಬಂದು ಮೇಳೆ ಹೇಳಿದ ಸಿದ್ಧಪ್ಪ ನಾಯಕನ ಮಕ್ಕಳನ್ನು ಬಳ್ಳಾರಿಗೆ ಕರೆದುಕೊಂಡು ಹೋಗಿ, ಹಿರಿಯವನಾದ ದೊಡ್ಡ ತಲೆ ರಾಮಪ್ಪನಾಯಕ ಬಾಲಕನನ್ನು ಪಟ್ಟಕ್ಕೆ ಕೂರಿಸಿದಳು. ಅವನು ಬಳ್ಳಾರಿ, ಸಿರಿಗೇರಿ, ಎಮ್ಮಿಗನೂರು ಮುಂತಾದ ಪರಗಣೆಗಳನ್ನು ಆಳಿದನು.

ನೀಲಮ್ಮ ದೊಡ್ಡತಲೆ ರಾಮಪ್ಪನಾಯಕನನ್ನು ಪಟ್ಟಕ್ಕೆ ಕೂರಿಸಿದಾಗ, ಕಿರಿಯವನಾದ ಹನುಮಪ್ಪನಾಯಕನಿಗೆ ಅಸಮಾಧಾನವಾದರೂ ಜೊತೆಯಲ್ಲೇ ಇದ್ದನು. ಈ ಮಧ್ಯೆ ಮೊಗಲರ ದಂಡು ಬಂದು ಆ ರಾಮಪ್ಪನಾಯಕನ ಮೇಲೆ ಆಕ್ರಮಣಮಾಡಲು ಯತ್ನಿಸಿದಾಗ, ತಮ್ಮನಾದ ಹನುಮಪ್ಪನಾಯಕನನ್ನು ಒತ್ತೆಯಾಳಾಗಿ ಕೊಡಬೇಕಾಗಿ ಬಂತು. ಗ್ರಾಮವೊಂದರ ಕೋಟೆಯೊಳಗೆ ಒಂದೆಡೆ ಅವನನ್ನು ಸೆರೆಯಲ್ಲಿಡಲಾಯಿತು. ಅಣ್ಣನಿಗೆ ಅವನನ್ನು ಬಿಡಿಸಲು ಆಗಲೇ ಇಲ್ಲ. ಹೀಗಿರುವಾಗ ಸಮಯನೋಡಿ ತಮ್ಮನು ತಾನೇ ಅಲ್ಲಿಂದ ತಪ್ಪಿಸಿಕೊಂಡು ಕೆಂಚನಗುಡ್ಡಕ್ಕೆ ಹೋಗಿ ಅಲ್ಲಿ ಆಶ್ರಯಪಡೆದನು. ಮುಂದೆ ದೊಡ್ಡ ತೆಲೆ ರಾಮಪ್ಪನಾಯಕನು ತೀರಿಹೋಗಲಾಗಿ ಹನುಮಪ್ಪನಾಯಕನನ್ನು ಬಳ್ಳಾರಿಗೆ ಕರೆದುಕೊಂಡು ಹೋಗಿ ಅವನನ್ನು ಪಟ್ಟಕ್ಕೆ ಕೂರಿಸಿದರು. ಇವನು ಬಳ್ಳಾರಿ ಕುರುಗೋಡು ತೆಕ್ಕಲಕೋಟೆ ಈ ಪ್ರದೇಶಗಳನ್ನು ಆಳಿ ಕೆಲಕಾಲನಂತರ ನಿಧನನಾದನು. ಇವನಿಗೆ ಸಹ ಸಂತಾನವಿರದಿದ್ದರೂ, ಇವನ (ಪ್ರಿಯಪತ್ನಿ ಸಿದ್ಧರಾಮವ್ವ ಎಂಬುವಳು ಸಾಕಿ ಬೆಳೆಸಿದ್ದ) ದೊಡ್ಡಪ್ಪನಾಯಕ ಎಂಬ ಸಾಕುಮಗನಿಗೆ ಪಟ್ಟವೆಂದು ಸಾರಲಾಯಿತು. ಇದನ್ನು ಇಷ್ಟಪಡದ ಹನುಮಪ್ಪನಾಯಕನ ಧರ್ಮಪತ್ನಿ ಪದ್ಮಮ್ಮ ಎಂಬುವಳು. ತನ್ನ ಅಣ್ಣನ ಒಂದು ಚಿಕ್ಕ ಮಗುವನ್ನು ದ್ಯಾವಪ್ಪನಾಯಕ ಎಂಬ ಹೆಸರಿನಿಂದ ಪಟ್ಟಕ್ಕೆ ತರಲು ಯತ್ನಿಸಿದಳು. ಆಗ ದೊಡ್ಡತಲೆ ರಾಮಪ್ಪನಾಯಕನ ಹೆಂಡತಿ ಸಿದ್ಧಮ್ಮನಿಂದ ಆ ಕೊಲೆಯ ಪ್ರಯತ್ನ ತಪ್ಪಿ, ದೊಡ್ಡಪ್ಪನಾಯಕನು ಪಟ್ಟವೇರುವಂತಾಯಿತು.

ಮುಂದೆ ಈ ದೊಡ್ಡಪ್ಪನಾಯಕನು ಆಳುವಾಗ್ಗೆ, ಶ್ರೀರಂಗಪಟ್ಟಣದ ಹೈದರಾಲೀಖಾನ್‌ನ ದಂಡು ಬಳ್ಳಾರಿಯ ಕೋಟೆಯನ್ನು ಮುತ್ತಿದಾಗ, ಅದನ್ನು ಅವನ ದಳಪತಿಗಳು ಹೈದರಾಲಿಗೆ ಬಳ್ಳಾರಿ ವಶವಾಗದಂತೆ ಹೋರಾಡಿ ಅವನ ದಂಡನ್ನು ಅಲ್ಲಿಂದ ಕಾಲ್ತೆಗೆಸಿದರು. ಮುಂದೆ ದೊಡ್ಡಪ್ಪ ನಾಯಕನ ಆಳ್ವಿಕೆಯೇನೂ ಬಹಳ ಕಾಲ ನಡೆಯಲಿಲ್ಲ.

ಹಿಂದೆ ಹೇಳಿದ ಅಂಕುಶರಾಯನ ಎರಡನೆಯ ಮಗ ಪ್ರಸನ್ನನಾಯಕನು ರಾಜ್ಯವಾಳಿದುದರ ಬಗ್ಗೆ ವಿವರ ದೊರೆತಿಲ್ಲ. ಹಿಂದೆ ಹೇಳಿದಂತೆ ನೀಲಮ್ಮ ದೊಡ್ಡ ತಲೆರಾಮಪ್ಪನಾಯಕ (ಬಾಲಕ)ನನ್ನು ಪಟ್ಟಕ್ಕೆ ಕೂರಿಸುವಾಗ ತಂದೆ ಸಿದ್ಧಪ್ಪನಾಯಕ ಮತ್ತು ಚಿಕ್ಕಪ್ಪ ಪ್ರಸನ್ನನಾಯಕ ಇವರು ಇದ್ದರೆ ತನ್ನ ಅಧಿಕಾರ ಏನೂ ನಡೆಯದು ಎಂದು ಅವರಿಬ್ಬರನ್ನೂ ಕೊಪ್ಪಿಸಿದಳು ಎಂದು ಹೇಳಿಕೆಯಿದೆ.

ಇನ್ನು ಬಾಲದ ಹನುಮಪ್ಪನಾಯಕನ ಎರಡನೆಯ ಮಗನಾದ ದ್ಯಾಮಪ್ಪ (ದೇವಪ್ಪ) ನಾಯಕನೂ, ಕೊನೆಯ ಮಗನಾದ ಚಿಕ್ಕ ಮಲಕಪ್ಪನಾಯಕನೂ ಜಂಟಿಯಾಗಿ ಬಳ್ಳಾರಿ, ಕುರುಗೋಡು, ತೆಕ್ಕಲಕೋಟೆ, ಸಿಂಧನೂರು, ಸಿರುಗುಪ್ಪೆ, ಕಣೇಕಲ್ಲು, ರೂಪಗುಡ್ಡಿ (<ವಿರುಪನಗುಡ್ಡಿ?) ವಡ್ಡು, ದರೋಜಿ, ಇವೇ ಮೊದಲಾದ ಸೀಮೆಗಳನ್ನು ಆಳಿದರು. ಹಿಂದೆ ಹೇಳಿದಂತೆ ಬಿಜಾಪುರದ ಆದಿಲ್ ಶಹನ ದಂಡು ದಾಳಿಮಾಡಿದ ಕಾಲಕ್ಕೆ, ಬಂಕಾಪುರ ಶತ್ರುಗಳ ವಶವಾಗಿ, ದ್ಯಾಮಪ್ಪನಾಯಕ ಅವರೊಂದಿಗೆ ಕಪ್ಪಕೊಡುವ ಒಪ್ಪಂದ ಮಾಡಿಕೊಂಡು ಕೆಲಕಾಲ ಆಳ್ವಿಕೆ ನಡೆಸಿ ಮರಣಿಸಿದನು. ಈತನ ಮಗನಾದ ಪವಾಡದ ರಾಮಪ್ಪನಾಯಕ ಕೆಲಕಾಲ ಆಳ್ವಿಕೆ ನಡೆಸಿ ಅವನೂ ಸಂತಾನರಹಿತನಾಗಿ ವಿಧಿವಶನಾದನು.

ಬಾಲದ ಹನುಮಪ್ಪನಾಯಕನ ಮೂರನೆಯ ಮಗನೇ 'ನಿಚ್ಚಮದವಣಿಗ' ಎಂಬ ಹೆಸರು ಹೊತ್ತ ರಾಮಪ್ಪನಾಯಕ. ಇವನು ತನ್ನ ಪಾಲಿಗೆ ಬಂದ ಪ್ರದೇಶವನ್ನು ಆಳುತ್ತಾ ಇರುವಾಗ, ಕುಂದುರ್ಪಿ ಬಳಿ ಕದನವೊಂದರಲ್ಲಿ ಗುಂಡುತಾಗಿ ಮೃತನಾದನು. ಬಾಲದ ಹನುಮಪ್ಪನಾಯಕನ ನಾಲ್ಕನೆಯ ಮಗ ಹಿರಿಯ ಮಲಕಪ್ಪನಾಯಕ ತನ್ನ ಪಾಲಿಗೆ ಬಂದ ಪ್ರದೇಶಗಳನ್ನು ಆಳಿದನು. ಇವನಿಗೆ ಸಿದ್ಧಪ್ಪನಾಯಕ ಎಂಬ ಹೆಸರಿನ ಮಗನೊಬ್ಬನಿದ್ದನೆಂದು ಹೇಳಿಕೆ ಇದ್ದರೂ ಅವನ ಬಗ್ಗೆ ಹೆಚ್ಚಿನ ಮಾಹಿತಿ ತಿಳಿದುಬರುವುದಿಲ್ಲ. ಇನ್ನೂ ಬಾಲದ ಹನುಮಪ್ಪ ನಾಯಕನ ಕೊನೆಯ ಮಗ ಚಿಕ್ಕಮಲಕಪ್ಪನಾಯಕ ತನ್ನ ಪಾಲಿನ ಪ್ರದೇಶದ ಆಡಳಿತ ನಿರ್ವಹಿಸಿದ. ಅವನು ಮಗ ಚಿಕ್ಕನಾಯಕ ಸಾಹೇಬ ತಂದೆಯ ಪ್ರದೇಶಗಳನ್ನು ಆಳುವ ಉತ್ತರಾಧಿಕಾರಿಯಾದನು. ಇವನ ಆಳ್ವಿಕೆ ಸುಸೂತ್ರವಾಗಿ ನಡೆದಂತೆ ಕಾಣುವುದಿಲ್ಲ. ಏಕೆಂದರೆ ಬಿಜಾಪುರದ ಆದಿಲ್ ಶಹನ ಕಡೆಯಿಂದ ಕೆಲವು ಪ್ರದೇಶಗಳು ಕೈಬಿಟ್ಟು ಹೋಗಿ, ಮುಂದೆ ಮೊಗಲರ ಕಡೆಯಿಂದಲೂ ಕೆಲವು ಪ್ರದೇಶ ಕೈತಪ್ಪಿಹೋಗಿ, ಇವನ ಪಾಲಿಗೆ ಕೇವಲ ಕುರುಗೋಡು ಮತ್ತು ಬಳ್ಳಾರಿ ಎರಡು ಪರಗಣೆಗಳು ಮಾತ್ರ ಉಳಿದಂತೆ ಕಾಣುತ್ತದೆ. ಈ ಪರಗಣೆಗಳೊಂದಿಗೆ ತೆಕ್ಕಲಕೋಟೆಯೂ ಸೇರಿದ ಪ್ರದೇಶವನ್ನು ಮುಂದೆ ಆಳಿದನು ಅವನ ಮಗನಾದ ದ್ಯಾಮಪ್ಪನಾಯಕ. ಅವನು ಪೋರವಾ, ಗುತ್ತಿಗನೂರು, ಆನೆಗೊಂದಿ ಗಡಿ ಪರದೇಶ, ಯಮ್ಮಿಗನೂರು, ಹಾವಿನಹಾಲು, ಸಿರಿಗೇರಿ,

ಕರೂರು, ಇವುಗಳವರೆಗೆ ತನ್ನ ರಾಜ್ಯ ವಿಸ್ತರಣೆ ಮಾಡಿ ಆಳ್ವಿಕೆ ನಡೆಸಿದ.ಇವನಿಗೆ ಮೊದಲ ಹೆಂಡತಿ ಪದ್ಮಮ್ಮನಲ್ಲಿ ಹನುಮಪ್ಪನಾಯಕ, ಹಿರಿಯ ರಾಮಪ್ಪನಾಯಕ ಮತ್ತು ಚಿಕ್ಕರಾಮಪ್ಪನಾಯಕ ಎಂಬ ಮೂರು ಮಕ್ಕಳು; ಆದರೆ ಎರಡನೆಯ ಹೆಂಡತಿ ನೀಲಮ್ಮನಲ್ಲಿ ಯಾವ ಮಕ್ಕಳೂ ಆಗಲಿಲ್ಲ. ಈ ಬಗ್ಗೆ ಹಿಂದೆಯೇ ವಿವರಿಸಲಾಗಿದೆ. ಇನ್ನೂ ಹನುಮಪ್ಪ ನಾಯಕ ಬಳ್ಳಾರಿಯಲ್ಲಿದ್ದುಕೊಂಡು ಕುರುಗೋಡು ಸೀಮೆಯನ್ನು, ಹಿರಿಯ ರಾಮಪ್ಪನಾಯಕ ಬಳ್ಳಾರಿ, ಕುರುಗೋಡು, ತೆಕ್ಕಲಕೋಡೆ ಈ ಮೂರು ಸೀಮೆಗಳನ್ನು ಚಿಕ್ಕರಾಮಪ್ಪನಾಯಕ ತೆಕ್ಕಲಕೋಟೆಯೊಂದನ್ನೂ ಅನುಕ್ರಮವಾಗಿ ಒಬ್ಬರಾದ ಮೇಲೆ ಒಬ್ಬರು ಆಲಿದಂತೆ ಹೇಳಲಾಗಿದೆ. ಈ ಮೂವರಿಗೆ ಸಂತಾನವಿಲ್ಲದ ಕಾರಣ ರಾಣಿ ನೀಲಮ್ಮ ಈ ಹಿಂದೆ ವಿವರಿಸಿರುವಂತೆ ಸಿದ್ಧಪ್ಪ ನಾಯಕ ಎಂಬುವನ ಹಿರಿಯ ಮಗ ಬಾಲಕ ದೊಡ್ಡ ತಲೆರಾಮಪ್ಪನಾಯಕನನ್ನು ಕರೆತಂದು ಅವನಿಗೆ ಪಟ್ಟಗಟ್ಟಿ ಅವನು ಪರವಾಗಿ ತಾನೇ ಕೆಲಕಾಲ ರಾಜ್ಯವಾಳಬೇಕಾಯಿತು. ಆಮೇಲೆ ದೊಡ್ಡತಲೆರಾಮಪ್ಪ ನಾಯಕನಿಗೂ ನೀಲಮ್ಮನಿಗೂ ವಿರಸವುಂಟಾದಾಗ, ಅವನು ಅವಳನ್ನೇ ಕೊಲ್ಲಿಸಿ ರಾಜ್ಯಭಾರ ಮಾಡಬೇಕಾಯಿತು.

ಇಷ್ಟು ಸುದೀರ್ಘಕಾಲ ಹಂಡೆ ಮನೆತನದವರ ಕೈಯಲ್ಲಿದ್ದ ಬಳ್ಳಾರಿಯನ್ನು ತಮ್ಮ ವಶಮಾಡಿಕೊಳ್ಳಬೇಕೆಂದು ಬಿಜಾಪುರದವರು, ಮೊಗಲರು, ಅದೋನಿ (ಆದಿವಾನಿ)ಯವರು ಕಣ್ಣಿಟ್ಟಿದ್ದರಾದರೂ, ಅಂತಿಮವಾಗಿ ಅವನ್ನು ತನ್ನ ಕೈವಶಮಾಡಿಕೊಳ್ಳುವಲ್ಲಿ ಯಶಸ್ವಿಯಾದವನು ಶ್ರೀರಂಗಪಟ್ಟಣದ ಹೈದರ್ಅಲೀ ಖಾನ್. ಕ್ರಿ.ಶ. ೧೭೭೫ ರಿಂದ ೧೭೮೨ರ ವರೆಗೆ ಹೈದರ್ ಮತ್ತು ತಿಪ್ಪು ಅವರ ವಶದಲ್ಲಿದ್ದ ಇದು ಮುಂದೆ ೧೭೯೨ರಲ್ಲಿ ನಡೆದ ಮೂರನೇ ಮೈಸೂರು ಯುದ್ಧದ ಅನಂತರ ಹೈದರಾಬಾದ್ ನಿಜಾಮನ ವಶಕ್ಕೆ ಬಂದು, ಆಮೇಲೆ ೧೮೦೦ರ ಹೊತ್ತಿಗೆ ಬ್ರಿಟಿಷರ ಪಾಲಾಯಿತು.

ಈ ಮೇಲಿನ ಚರಿತ್ರ ವಿವರಕ್ಕೆ ವಿಭಿನ್ನವಾದ ಚರಿತ್ರ ವಿವರಗಳು ಅನಂತಪುರ ಕೈಫಿಯತ್ತಿನಲ್ಲಿ ಕಾಣಸಿಗುತ್ತವೆ. ಕೆಲವು ಮುಖ್ಯಾಂಶಗಳನ್ನು ಮಾತ್ರ ಇಲ್ಲಿ ಸಂಗ್ರಹಿಸಿದೆ. ಈ ಕೈಫಿಯತ್ತಿನ ಪ್ರಕಾರ, ಬಾಲದ ಹನುಮಪ್ಪ ನಾಯಕನ ಮಗ ಇಮ್ಮಡಿ ಹಂಪರಾಯ. ಇವನು ೧೨ ವರ್ಷ ರಾಜ್ಯವಾಳಿದ ಮೇಲೆ ಇವನ ಮಗ ಮಲಕಪ್ಪರಾಯನು ದೊರೆಯಾಗಿ ಆಳಿದನು. ಕೆಲವು ಯುದ್ಧಗಳಲ್ಲಿ ಉವನು ವಿಜಯನಗರದ ಅರಸರ ಪರವಾಗಿ ಪಾಲ್ಗೊಂಡಿದ್ದನು. ಆ ಸಾಮ್ರಾಜ್ಯ ಅಸ್ತಂಗತವಾದ ಮೇಲೆ ಗೋಲ್ಕೊಂಡದ ನವಾಬನನ್ನು ಆಶ್ರಯಿಸಿದನು. ತನ್ನ ರಾಜ್ಯವನ್ನು ಇನ್ನಷ್ಟು ವಿಸ್ತರಿಸಿ ಅನಂತಪುರದಲ್ಲಿ ಅರಮನೆ ನಿರ್ಮಿಸಿ ಅದನ್ನೇ ರಾಜಧಾನಿ ಯಾಗಿಸಿಕೊಂಡನು. ಇವನ ಪಟ್ಟಮಹಿಷಿ ಸಿದ್ಧರಾಮಮ್ಮನಲ್ಲಿ ಇವನಿಗೆ ದೇವಪ್ಪರಾಯ, ಸಣ್ಣರಾಮಪ್ಪರಾಯ, ಲಿಂಗಪ್ಪರಾಯ ಮತ್ತು ಹಂಪರಾಯ ಎಂಬ ನಾಲ್ಕು ಗಂಡುಮಕ್ಕಳಾದರು. ಇವನು ದೇವಪ್ಪರಾಯನಿಗೆ ನಂದ್ಯಾಲ ಸೀಮೆ, ಸಣ್ಣ ರಾಮಪ್ಪರಾಯನಿಗೆ ಬಳ್ಳಾರಿ, ಕುರುಗೋಡು ಸೀಮೆ, ಲಿಂಗಪ್ಪರಾಯನಿಗೆ ಕುಂದುರ್ಪಿ, ಕಣೇಕಲ್ಲು ಸೀಮೆ, ಹಂಪರಾಯನಿಗೆ ಅನಂತಪುರ, ಬುಕ್ಕಾಪಟ್ಟಣ ಮತ್ತು ಧರ್ಮಾವರ ಸೀಮೆ – ಹೀಗೆ ಹಂಚಿಕೆ ಮಾಡಿಕೊಟ್ಟನು. ಈ ಮಲಕಪ್ಪನ ಕಾಲದಲ್ಲಿ ಅವನ ರಾಜ್ಯ ಮತ್ತು ಅದರ ಕಂದಾಯದ ಆದಾಯ ದೊಡ್ಡ ಪ್ರಮಾಣದಲ್ಲೇ ಇದ್ದುವು. ಮಲಕಪ್ಪನ ತರುವಾಯ ಹಂಪರಾಯ ಮತ್ತು ಸಿದ್ಧಪ್ಪರಾಯ, ಇವರು ಆಳಿದರು.

ಸಿದ್ಧಪ್ಪರಾಯನ ಅನಂತರದಲ್ಲಿ ಬಂದವನು ಪವಾಡಪ್ಪನಾಯಕ, ಇವನ ಕಾಲದಲ್ಲಿ ಧರ್ಮಾವರವು ರಾಯದುರ್ಗದವರ ವಶವಾಯಿತು. ಇವನು ಅಕಾಲಿಕವಾಗಿ ಮರಣಿಸಿದಾಗ ಇವನ ಪತ್ನಿ ಸಿದ್ಧರಾಮಕ್ಕ ಸಿದ್ಧಪ್ಪನಾಯಕ ಎಂಬ ಮಗನ ಪರವಾಗಿ ತಾನೇ ಕೆಲಕಾಲ ಆಳ್ವಿಕೆ ನಡೆಸಿದಳು. ಇವನ ಮಗನೇ ಪ್ರಸನ್ನಪ್ಪನಾಯಕ. ಇವನು ರಾಯದುರ್ಗದವರಿಂದ ಧರ್ಮಾವರವನ್ನು ಮರಳಿ ಗೆದ್ದುಕೊಂಡನಾದರೂ ಸಂಚಿನಲ್ಲಿ ದುರಂತ ಮರಣಕ್ಕೀಡಾದನು. ಇವನ ತರುವಾಯದಲ್ಲಿ ಇಮ್ಮಡಿ ಪವಾಡಪ್ಪನಾಯಕನು ಆಳುವಾಗ್ಗೆ ಕಡಪೆಯ ನವಾಬನಿಗೆ ಕಪ್ಪ ಕೊಡಲು ಒಪ್ಪಲಿಲ್ಲವಾದ್ದರಿಂದ ತನ್ನ ಅರಮನೆಯಲ್ಲೇ ಗೃಹಬಂಧಿಯಾಗಬೇಕಾಯಿತು. ಹಾಗೆ ಗೃಹಬಂಧಿಯಾಗಿದ್ದ ಇವನನ್ನು ಶತ್ರುಗಳು ಕಡಪೆಗೆ ಸಾಗಿಸಿಕೊಂಡು ಹೋಗುವ ಪ್ರಯತ್ನದಲ್ಲಿದ್ದರು. ಆಗ ಗುರುಗಳಾದ ನಿಡುಮಾಮಿಡಿ ಕರಿಬಸವ ಸ್ವಾಮಿಗಳೆಂಬುವರು ತಮ್ಮ ಶಿಷ್ಯರೊಂದಿಗೆ ಅನಂತಪುರಕ್ಕೆ ಬಂದು ಅವನನ್ನು ರಕ್ಷಿಸಿದರು. ಹಾಗಾಗಿ ಇವನು ತನ್ನ ಕೊನೆಯ ದಿನಗಳನ್ನು ನಿಡುಮಾಮಿಡಿ ಮಠದಲ್ಲಿ ಕಳೆದನು. ಪ್ರಸನ್ನಪ್ಪನ ಮಗ ರಾಮಪ್ಪನನ್ನು ಪಟ್ಟಕ್ಕೆ ಕೂರಿಸಬೇಕೆಂದು ಗುತ್ತಿಯ ಪ್ರಭುವಾದ ಮುರಾರಿರಾವ್ ಘೋರ್ಪಡೆ ಮುಂತಾದವರು ಬೆಂಬಲಿಸಿ, ಪಟ್ಟಕ್ಕೆ ತಂದರು. ಆದರೆ ಇನ್ನೊಂದು ಗುಂಪು ಬೆಂಬಲಿಸಿದ್ದ ಸಿದ್ಧಪ್ಪನು ಸೆರೆಯಲ್ಲೇ ಅಸುನೀಗಿದನು. ಅವನ ಪತ್ನಿ ಭದ್ರಮ್ಮ ಅಲ್ಲಿಂದ ಬಳ್ಳಾರಿಗೆ ಹೋಗಿ ಅಲ್ಲಿ ದೊರೆಯಾಗಿದ್ದ ಇದೇ ವಂಶದ ರಾಮಪ್ಪನಲ್ಲಿ ಆಶ್ರಯ ಪಡೆದಳು.

ರಾಮಪ್ಪನ ಆಳ್ವಿಕೆಯ ಕಾಲಕ್ಕೆ ದಾಳಿ ಮಾಡ ಬಂದ ರಾಯದುರ್ಗದ ಕೋನೇಟಿರಾಯನು ರಾಮಪ್ಪನಿಂದ ಸೋಲಿಸಲ್ಪಟ್ಟನು. ಇತ್ತ ಬಳ್ಳಾರಿಯಲ್ಲಿದ್ದ ಭದ್ರಮ್ಮನ ಸಂಚಿನ ಮೇರೆಗೆ ಬಳ್ಳಾರಿಯ ರಾಮಪ್ಪನು ಅನಂತಪುರದ ರಾಮಪ್ಪನ ಮಗನನ್ನು ದತ್ತು ತೆಗೆದುಕೊಳ್ಳಲು, ಅನಂತಪುರಕ್ಕೆ ಬಂದವನು ಅನಂತಪುರದ ರಾಮಪ್ಪನನ್ನು ಕೊಲೆಮಾಡಿಸಿ ಆ ರಾಜ್ಯವನ್ನೂ ತನ್ನ ರಾಜ್ಯಕ್ಕೇ ಸೇರ್ಪಡೆ ಮಾಡಿಕೊಂಡನು. ಅನಂತಪುರದ ರಾಮಪ್ಪನ ಮಗ ಸಿದ್ಧರಾಮಪ್ಪನನ್ನು ಬಳ್ಳಾರಿಯಲ್ಲಿ ಸೆರೆಯಲ್ಲಿಟ್ಟಿದ್ದಾಗ ಅವನು ಅಲ್ಲಿಂದ ತಪ್ಪಿಸಿಕೊಂಡು ಹಿರೇಹಾಳಿಗೆ ಹೋಗಿ ಅಲ್ಲಿದ್ದು, ಮುಂದೊಂದು ದಿನ ಅನಂತಪುರಕ್ಕೆ ಅಧಿಪತಿಯಾದನು. ತನ್ನ ರಾಜ್ಯವನ್ನು ಇನ್ನಷ್ಟು ವಿಸ್ತರಿಸಿಕೆಲಕಾಲಾನಂತರ ದೈವಾಧೀನನಾದನು. ಬಸಲತ್‌ಜಂಗ್ ಎಂಬುವನು ಬಳ್ಳಾರಿಯನ್ನು ಮುತ್ತಿದ್ದಾಗ ಅಲ್ಲಿಂದ ದೊಡ್ಡಯ್ಯ ಎಂಬ ಹೆಸರಿನ ಹಂಡೆ ವಂಶದ ದೊರೆ ಹೈದರಾಲಿಯ ನೆರವು ಪಡೆದು ಅವನನ್ನು ಓಡಿಸಿದನಾದರೂ ಮುಂದೆ ಹೈದರಾಲಿಯ ಈ ಸಂದರ್ಭದ ದುರ್ಲಾಭ ಪಡೆದು, ಬಳ್ಳಾರಿಯನ್ನು ತನ್ನ ಕೈವಶ ಮಾಡಿಕೊಂಡು, ಆ ಮೇಲೆ ಗುತ್ತಿಯನ್ನು ಮುತ್ತಿ ತೆಗೆದುಕೊಂಡು, ಅನಂತಪುರ ರಾಜ್ಯವಾಳಲು ಅಲ್ಲಿಯ ನಾಯಕನಿಗೆ ಕಪ್ಪ ನಿಗದಿ ಮಾಡಿದನಾದರೂ, ಅವನು ಕಪ್ಪದ ಬಾಕಿ ವಸೂಲಿಗೆಂಬಂತೆ ಬಂದು ಸಿದ್ಧರಾಮಪ್ಪನನ್ನು ಬಂಧಿಸಿ, ಅನಂತಪುರವನ್ನೂ ವಶಪಡಿಸಿಕೊಂಡನು. ಸಿದ್ಧರಾಮಪ್ಪನ ಇಬ್ಬರು ಮಕ್ಕಳು ಹೈದರಾಲಿಯ ಸೈನ್ಯದೊಳಗೆ ಸೇರಿದರು. ಉಳಿದ ಇನ್ನೊಬ್ಬ (ಮೂರನೆಯ ಮಗ ಸಿದ್ಧಪ್ಪ) ನನ್ನು ಶ್ರೀರಂಗಪಟ್ಟಣದಲ್ಲಿ ಸೆರೆಯಲ್ಲಿಡಲು ಕಳಿಸಿಕೊಡಲಾಯಿತು. ಸಿದ್ಧರಾಮಪ್ಪ ಗತಿಸಿದ ಮೇಲೆ, ಮುಂದೆ ಬಂದ ಟಿಪ್ಪು ಸುಲ್ತಾನ್ ಆ ವಂಶವನ್ನೇ ತೊಡೆದು ಹಾಕಲು ಯತ್ನಿಸಿದ ಎಂದು ಹೇಳಲಾಗಿದೆ. ಸೆರೆಯಲ್ಲಿದ್ದ ಸಿದ್ಧಪ್ಪ ಹೇಗೋ ತಪ್ಪಿಸಿಕೊಂಡು, ಕಾಳಹಸ್ತಿ ರಾಜನಲ್ಲಿಗೆ ಹೋಗಿ ಅವನ ಆಶ್ರಯ ಪಡೆದುಕೊಂಡನು. ಮುಂದೆ ಟಿಪ್ಪುವಿನ ಮರಣಾನಂತರ ಇವನು ಅನಂತಪುರಕ್ಕೆ ಹೋಗಿ ಅದನ್ನು ಮರಳಿ ತನ್ನ ಕೈಗೆ ತೆಗೆದುಕೊಂಡನು. ಅವನಿಗೆ ಹೈದರಾಬಾದಿನ ನಿಜಾಮನ ಆಶ್ರಯವೂ ದೊರೆತು, ಕೆಲಕಾಲ ಆಳ್ವಿಕೆ ನಡೆಸಿ ೧೮೦೧ರಲ್ಲಿ ವಿಧಿವಶನಾದನು. ಅಲ್ಲಿಗೆ ಹಂಡೆ ಪಾಳೆಯಗಾರರ ಪ್ರಭುತ್ವ ಕೊನೆಗೊಂಡಿತು.

ಇಂಗ್ಲಿಷರ ಪ್ರಭುತ್ವ ಬಂದ ಮೇಲೆ ಹಂಡೆ ಪಾಳೆಯಗಾರರ ವಂಶದವರಿಗೆ ರಾಜಧನ ನಿಗದಿಯಾಗಿ ಅನೇಕ ವರ್ಷಗಳವರೆಗೆ ಅದು ಅವರಿಗೆ ಸಲ್ಲುತ್ತ ಬಂದಿತು ಎನ್ನುವುದು ಆಮೇಲಿನ ಇತಿಹಾಸ.

ಈ ವಂಶದವರು ಪಾಳೆಯಗಾರರಾಗಿರುವ ಪೂರ್ವದಲ್ಲಿಯೇ ಲಿಂಗಾಯತ ಧರ್ಮೀಯರಾಗಿದ್ದರೆಂದು ತಿಳಿದುಬರುತ್ತದೆ. ಇವರು ತಮ್ಮ ಆರಾಧ್ಯ ದೈವವಾಗಿ ಸ್ವೀಕರಿಸಿದ್ದು ೧೨ನೆಯ ಶತಮಾನದ ಹಿಡಿಯ ಶರಣರಲ್ಲಿ ಒಬ್ಬರಾಗಿ ಖ್ಯಾತರಾಗಿರುವ ಸೊನ್ನಲಿಗೆಯ ಸಿದ್ಧರಾಮೇಶ್ವರರನ್ನು. ಈ ಪಾಳೆಯಗಾರರ ಹಲವು ದಾನಪತ್ರ ಇತ್ಯಾದಿಗಳ ಮೇಲ್ಭಾಗದಲ್ಲಿ ಮತ್ತು ಒಳಗೆ ಸಿದ್ಧರಾಮೇಶ್ವರರ ಸ್ಮರಣೆಯನ್ನು ಕಾಣಬಹುದು. ಇವರು ಲಿಂಗಾಯತ ಗುರುಗಳಾದ ಶ್ರೀ ಕೊಟ್ಟೂರು ಸ್ವಾಮಿಗಳ ಪರಂಪರೆ, ಶ್ರೀಶೈಲ ನಿಡುಮಾಮಿಡಿ ಸ್ವಾಮಿಗಳ ಪರಂಪರೆ, ಶ್ರೀ ತೋಂಟದ ಸ್ವಾಮಿಗಳ ಪರಂಪರೆಯವರಿಗೆ ಭಕ್ತಿ-ಗೌರವಗಳಿಂದ ನಡದುಕೊಂಡದ್ದಲ್ಲದೆ ಅನೇಕ ದಾನ-ದತ್ತಿಗಳನ್ನು ನೀಡಿದ್ದಾರು. ಇವರಷ್ಟೇ ಅಲ್ಲದೆ ಬ್ರಾಹ್ಮಣ ಗುರುಗಳಾದ ಶ್ರೀ ಕೂಡಲಿಶೃಂಗೇರಿ ಸ್ವಾಮಿಗಳ ಪರಂಪರೆಯವರಿಗೂ ಸಹ ಇವರು ದಾನದತ್ತಿಗಳನ್ನು ನೀಡಿ ಭಕ್ತಿ ತೋರಿದ್ದಾರೆ.

ಇವರು ಅನೇಕ ಕೋಟೆ, ಅರಮನೆ, ದೇವಾಲಯ, ಬಾವಿ, ಕೆರೆ, ದೀಪಸ್ತಂಭ ಮುಂತಾದವನ್ನು ವಿವಿಧ ಸ್ಥಳಗಳಲ್ಲಿ ನಿರ್ಮಿಸಿದರೆಂದು ತಿಳಿಯುತ್ತದೆ. ಬಳ್ಳಾರಿಯ ಕೋಡೆ, ಅದರೊಳಗಿರುವ ಚಿತ್ರಶಿಲ್ಪಗಳಿಂದ ಕೂಡಿದ ಕಲ್ಲಿನ ಬಾವಿ, ಹಾವೇರಿ ಜಿಲ್ಲೆಯ ಬಂಕಾಪುರದಲ್ಲಿರುವ ಪಂಚಮಲಕಪ್ಪನ ಬಾವಿ, ಬಳ್ಳಾರಿ ಜಿಲ್ಲೆಯ ಯರ್ರದುರ್ಗದ ಕೋಟೆ ಮತ್ತು ದೇವಾಲಯಗಳು, ಕುರುಗೋಡಿನ ನೀಲಮ್ಮನ ದೇವಸ್ಥಾನ ಇವೇ ಮುಂತಾದವು ಈ ನಾಯಕರ ಕೊಡುಗೆಗಳಾಗಿ ಇಂದಿಗೂ ನಮ್ಮೆದುರಲ್ಲಿವೆ.

**ಪರಾಮರ್ಶನ ಸಾಹಿತ್ಯ**

೧. ಶ್ರೀ ಜಗದ್ಗುರು ಕೊಟ್ಟೂರು ಸ್ವಾಮಿ ಗುರುಪರಂಪರೆ (ಸಂ) ಗೌ.ಮ.ಉಮಾಪತಿಶಾಸ್ತ್ರಿ ಹೊಸಪೇಟೆ, ೧೯೮೩.

೨. ಶ್ರೀ ನಿಡುಮಾಮಿಡಿ ಪೀಠದ ಸಂಕ್ಷಿಪ್ತ ಚರಿತ್ರ, ಡಾ.ಎಂ. ಜಿ. ನಾಗರಾಜ್, ಬೆಂಗಳೂರು, ೨೦೦೪.

೩. ಕನ್ನಡ ಸಾಹಿತ್ಯ ಸಂಸ್ಕೃತಿ ಶೋಧನೆ, ಡಾ. ಸಿ. ನಾಗಭೂಷಣ, ನಂದಿಹಳ್ಳಿ-ಸಂಡೂರು, ೧೯೯೯.

೪. ಬಂಕಾಪುರ ಶೋಧನ, ಡಾ. ಚೆನ್ನಕ್ಕ ಎಲಿಗಾರ, ಧಾರವಾಡ, ೧೯೯೦.

೫. ಬುಕ್ಕರಾಯ ಚರಿತ್ರೆ, (ಸಂ) ಎಸ್. ಸಿ. ಪಾಟೀಲ, ವಿಜಾಪುರ, ೨೦೦೨೦.

೬. ಕರ್ನಾಟಕದ ಕೈಫಿಯತ್ತುಗಳು, (ಸಂ) ಡಾ. ಎಂ. ಎಂ. ಕಲಬುರ್ಗಿ, ಹಂಪಿ, ೧೯೯೪.

೭. ಬಳ್ಳಾರಿ ಜಿಲ್ಲೆ ಶಾಸನ ಸಂಪುಟ, ಕನ್ನಡ ವಿ.ವಿ. ಹಂಪಿ, ೨೦೦೦.

೮. ಹಂಪಿ ಶಾಸನ ಸಂಪುಟ, ಕನ್ನಡ ವಿ.ವಿ., ಹಂಪಿ, ೨೦೦೦.

೯. ವೀರಶೈವ ಹಂಡೆವಜೀರ ಜನಾಂಗದ ಪರಿಚಯ, ಡಾ.ಎಸ್.ಸಿ. ಪಾಟೀಲ, ವಿಜಾಪುರ, ೨೦೦೪.

೧೦. ಹಂಡೆ ಪಾಳೆಯಗಾರರ ಧಾರ್ಮಿಕ ಸೇವೆ, ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ ಅಪ್ರಕಟಿತ ಲೇಖನ, ೨೦೦೮.

೧೧. ವಿಜಯನಗರದ ಅಧ್ಯಯನ-ಸಂಪುಟ ೧೨, (ಸಂ) ಡಾ. ಆರ್. ಗೋಪಾಲ್ ಮತ್ತು ಇತರರು ೨೦೦೮.

೧೨. ಶ್ರೈಶೈಲ ಪೀಠದರ್ಶನ (ಸಂ) ಶ್ರೀ ಜಚನಿ, ಬೆಂಗಳೂರು, ೧೯೬೭.

೧೩. ಬಳ್ಳಾರಿ  ಜಿಲ್ಲಾ ಸಾಂಸ್ಕೃತಿಕ ದರ್ಶನ. ಕುಂ.ಬಾ. ಸದಾಶಿವಪ್ಪ, ಹರಪನಹಳ್ಳಿ, ೧೯೯೦.

೧೪. ಹಂಡೆ ಕುರುಬರು: ಒಂದು ಅಧ್ಯಯನ, ವೈ. ಕೆ. ಗುಂಡಕರ್ಜಗಿ, ಧಾರವಾಡ ೨೦೦೨,  ಪಿಎಚ್.ಡಿ. ಮಹಾಪ್ರಬಂಧ (ಅಪ್ರಕಟತ).

೧೫. ನಿರಂತರ, ಪ್ರೊ. ಬಿ. ರಾಜಶೇಖರಪ್ಪ, ಪಾಂಡವಪುರ, ೨೦೦೧.

೧೬. ಮುಂಬೈ ಕರ್ನಾಟಕದ ಗ್ಯಾಝೇಟೀಯರು, (ಅನು) ವೆಂಕಟರಂಗೋಕಟ್ಟೆ, ೧೮೯೩, AES, Reprint, Newdelhi 1984.

೧೭. ಕೂಡ್ಲಿ ಶೃಂಗೇರಿ ಸಂಸ್ಥಾನದ ಪ್ರಾಚೀನ ಶಾಸನ ಲೇಖನ ಸಂಗ್ರಹ, ಭಾಗ-೧, ೧೯೬೫.

೧೮. ಕನ್ನಡ ನಿಘಂಟು, ಸಂಪುಟ ೧, ಕಸಾಪ, ಬೆಂಗಳೂರು, ೧೯೭೦.

೧೯. ಕನ್ನಡ ನಿಘಂಟು, ಸಂಪುಟ ೪, ಕಸಾಪ, ಬೆಂಗಳೂರು, ೧೯೭೯.

೨೦. ಕನ್ನಡ ನಿಘಂಟು, ಸಂಪುಟ ೮, ಕಸಾಪ, ಬೆಂಗಳೂರು, ೧೯೯೫.

೨೧. ಸತ್ಯಶುದ್ಧಕಾಯದ ಸಂಪುಟ ೨, ಸಂಚಿಕೆ ೫-೬, ಮೇ-ಆಗಸ್ಟ್ ೧೯೯೨, ಚಿತ್ರದುರ್ಗ.

(ಲೇಖನ: ೨ನೆಯ ಬಲ್ಲಾಲಣ ಕಾಲದ ಒಂದು ತಾಮ್ರ ಶಾಸನ, ಟಿ. ಶಂಭುಲಿಂಗಪ್ಪ)

೨೨. ಕರ್ಣಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ, ಶಂ. ಬಾ. ಜೋಶಿ, ಶಾರವಾಡ.

೧೩. The wars of the Rajas- C.P. Brown (1853) Newdelhi, 1988.

೧೪. The Mysore Tribes and Castes. Vol IV. H.V. Nanjudayya, L.K. Ananthakrishna Iyer, Mysore 1931.

೧೫. A journary from Madras.... Vol. I, II & III Francis Buchanan, London, 1805.

## ೬. ದನಗರ ಗವಳಿಗರು

ದನಗರ, ಕುರುಬ ಪದಕ್ಕೆ ಇನ್ನೊಂದು ಪರ್ಯಾಯ ಪದ. ಮಹಾರಾಷ್ಟ್ರ, ಮಧ್ಯಪ್ರದೇಶ ರಾಜ್ಯಗಳಲ್ಲಿ ಕುರುಬರಿಗೆ ದನಗಾರರೆಂದೇ ಕರೆಯಲಾಗುತ್ತಿದೆ. ಅಷ್ಟೇ ಏಕೆ, ಕರ್ನಾಟಕದ ಬೆಳಗಾವಿ, ಉತ್ತರ ಕನ್ನಡ, ಧಾರವಾಡ ಜಿಲ್ಲೆಗಳಲ್ಲಿಯೂ ಕೆಲವು ಕುರುಬರಿಗೆ ದನಗರ ಎಂದು ಸಂಬೋಧಿಸಲಾಗುತ್ತಿದೆ. ದನಕರ ಎಂಬ ಅಡ್ಡ ಹೆಸರುಗಳೂ ಇವೆ. ಕುರುಬ ಅಥವಾ ದನಗರ ಸಮುದಾಯದಲ್ಲಿ ಗವಳಿಗರು ಎಂಬ ಉಪಪಂಗಡವಿದೆ. ವೆಂಕಟ ರಂಗೋಕಟ್ಟಿ[1], ರಾ.ಚಿಂ. ಢೇರೆ[2], ಶಂಬಾ ಜೋಶಿ[3], ಎಡ್ಗರ್ ಥರ್ಸ್ಟನ್[4], ಗುಂಥರ ಸೊಂತಾಯಮರ[5], ಕೆ.ಸಿ. ಮಲ್ಹೋತ್ರಾ[6] ಮತ್ತು ಮಾಧವ ಗಾಡ್ಗೀಳ[7] ಮೊದಲಾದ ಕೆಲವೇ ವಿದ್ವಾಂಸರು ಈ ಸಮುದಾಯದ ಬಗೆಗೆ ಅಧ್ಯಯನ ಮಾಡಿದ್ದಾರೆ[1]. ಎಡ್ಗರ್ ಥರ್ಸ್ಟನ್‌ನು Caste and Tribes of Southern India ಗ್ರಂಥದಲ್ಲಿ ದನಗರ ಗವಳಿಗರನ್ನು ಕುರಿತು ಹೀಗೆ ಹೇಳಿದ್ದಾನೆಃ Dhangar or Donigar is recorded in the Madras Sences Report 1901, as a Marathi caste of Shephereda and cattle-breeders. I gather from a note (Gazzetter of the Bombay Presidency XV Part I, 1883) on the Dhanagar of the Kanara district in the Bombay Presidency, that the word Dhangar is generally derived from the Sanskrit dhenu, a cow. Their home speech is Marathi, but they can speech kanarese. They keep a special breed of cows and buffaloes, known as Dhanagar mhasis and Dhanagar gavlis which are the largest cattle in kanara. Many of Shivajis infantry were Satar Dhanagars[8]. ಅಂದರೆ ದನಗರ ಗವಳಿಗರು ಉತ್ತರ ಕನ್ನಡ ಜಿಲ್ಲೆಯಲ್ಲಿ ಆಕಳು ಎಮ್ಮೆಗಳನ್ನು ಸಾಕಿಕೊಂಡು ಹೈನುಗಾರಿಕೆಯನ್ನು ಮಾಡುವ ಉದ್ಯೋಗವನ್ನು ಮಾಡುವವರು. ಈ ಹಿನ್ನೆಲೆಯಲ್ಲಿ ಕರ್ನಾಟಕದ ದನಗರ ಗವಳಿಗರ ಮೂಲ, ಪರಂಪರೆ, ಬೆಡಗುಗಳು ಕುಟುಂಬ ವ್ಯವಸ್ಥೆ, ಭೌಗೋಳಿಕ ವ್ಯಾಪ್ತಿ, ವೇಷ ಭೂಷಣಗಳು, ಆವರಣ ಸಂಪ್ರದಾಯ, ಉದ್ಯೋಗ, ಆರ್ಥಿಕ ವಿಚಾರ, ಶೈಕ್ಷಣಿಕ ಹಾಗೂ ಸಾಮಾಜಿಕ ಸಂಘಟನೆ, ಸೌಲಭ್ಯಗಳು, ವರ್ತಮಾನದ ಪರಿಸ್ಥಿತಿ ಇವೇ ಮೊದಲಾದ ಸಂಗತಿಗಳನ್ನು ಲಭ್ಯವಾದ ಆಕರ ಸಾಮಗ್ರಿಗಳು ಹಾಗೂ ಕ್ಷೇತ್ರಕಾರ್ಯ ಮೂಲಕ ಸಮಗ್ರವಾಗಿ ಅವಲೋಕಿಸುವುದು ಪ್ರಸ್ತುತ ಸಂಪ್ರಬಂಧದ ಉದ್ದೇಶವಾಗಿದೆ.

ಈ ಸಮುದಾಯದ ಬಗ್ಗೆ ಮಾಹಿತಿ ಕರೋಢೀಕರಿಸಲು ನಾನು ಸ್ನೇಹಿತರಾದ ಡಾ. ಬಿ.ಜಿ. ಬಿರಾದಾರ ಅವರೊಂದಿಗೆ ಮುಂಡಗೋಡ ತಾಲೂಕಿನ ಕ್ಷೇತ್ರಕಾರ್ಯ ಕೈಕೊಂಡಿದ್ದೆ. ಆ ಸಂದರ್ಭದಲ್ಲಿ ಅಲ್ಲಿನ ಪದವಿಪೂರ್ವ ಕಾಲೇಜಿನ ಅಧ್ಯಾಪಕರಾದ ಶ್ರೀ ಹೊಂಗಲ ಅವರು ಗವಳಿಗ ಸಮುದಾಯದ ಬಗ್ಗೆ ಕೆಲವು ವಿವರಗಳನ್ನು ನೀಡುತ್ತ “ಜೇನುಮುರಿ ಗ್ರಾಮದಲ್ಲಿ ಗವಳಿಗರು ಅಧಿಕ ಸಂಖ್ಯೆಯಲ್ಲಿ ನೆಲೆಸಿದ್ದಾರೆ. ಅಲ್ಲಿಗೆ ಹೋದರೆ ನಿಮಗೆ ಅಧಿಕೃತ ಮಾಹಿತಿ ಸಿಗಬಹುದು” ಎಂಬ ಸೂಚನೆಯನ್ನು ನೀಡಿದರು. ಜೇನುಮುರಿ ಗ್ರಾಮವು ಮುಂಡಗೋಡದಿಂದ ಐದು ಕಿ.ಮೀ. ಅಂತರದಲ್ಲಿ ಹುಬ್ಬಳ್ಳಿ ರಸ್ತೆಗೆ ಹೊಂದಿಕೊಂಡು ಇದೆ. ಆ ಗ್ರಾಮಕ್ಕೆ ಹೋಗಿ ಇಳಿದಾಗ ಎಲ್ಲೆ ಆಕಳುಗಳ ಸಮೂಹವೇ ನಮಗೆ ಕಂಡುಬಂದಿತು. ಅವುಗಳ ಹಿಂದೆ ಒಬ್ಬ ಗಿಡ್ಡ ವ್ಯಕ್ತಿಯು ಕೈಯಲ್ಲಿ ಕೋಲು ಹಿಡಿದುಕೊಂಡು ಎಮ್ಮೆ ದನಗಳನ್ನು ಮೇಯಿಸಲು ಅರಣ್ಯದ ಕಡೆಗೆ ಹೊರಟಿದ್ದನು. ನಾವು ಆತನನ್ನು ನೋಡಿದಾಗಲೇ ಗವಳಿಗರ ವ್ಯಕ್ತಿಯೇ ಇರಬೇಕೆಂದು ಊಹಿಸಿದ್ದೆವು. ಆತನನ್ನು ಮಾತನಾಡಿಸಿದಾಗ ನಮ್ಮ ಊಹೆ ನಿಜವಾಯಿತು. ಆತ ನಮ್ಮನ್ನು ಊರೊಳಗೆ ಕರೆದುಕೊಂಡು ಹೋಗಿ

ತಮ್ಮ ಹಿರಿಯರನೆಲ್ಲ ಒಂದು ಮನೆಯಲ್ಲಿ ಕೂಡಿಸಿ, ತಮ್ಮ ಸಮುದಾಯದ ಬಗ್ಗೆ ಮಗೆ ಅನೇಕ ಮಾಹಿತಿಗಳನ್ನು ಹೇಳಿದರು. ಆ ಎಲ್ಲ ಮಾಹಿತಿಗಳನ್ನು ಬಳಸಿಕೊಂಡು ಈ ಸಂಪ್ರಬಂಧವನ್ನು ಸಿದ್ಧಪಡಿಸಿದ್ದೇನೆ.

**೧. ಗವಳಿಗರ ಮೂಲ**

ಗವಳಿಗರ ಮೂಲ ಮಹಾರಾಷ್ಟ್ರ. ವಿಶೇಷವಾಗಿ ಮಹಾರಾಷ್ಟ್ರದ ದಕ್ಷಿಣ ಭಾಗದಲ್ಲಿ ಈ ಸಮುದಾಯವು ಅಧಿಕ ಪ್ರಮಾಣದಲ್ಲಿದೆ. ಎಮ್ಮೆ ಆಕಳುಗಳನ್ನು ಸಾಕಿಕೊಂಡು ಹೈನುಗಾರಿಕೆಯನ್ನೇ ಮುಖ್ಯ ಉದ್ಯೋಗವನ್ನಾಗಿ ಮಾಡಿಕೊಂಡು ಬಂದ ಗವಳಿಗರು ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯತ್ತ ವಲಸೆ ಬರಲು ಜೇನುಮುರಿಯ ನವಲು ಜಾನು ಜೋರೆ ಅವರು ಕೊಡುವ ಬಹುಮುಖ್ಯವಾದ ಕಾರಣಗಳು ಹೀಗಿವೆ: ಮಹಾರಾಷ್ಟ್ರದಲ್ಲಿ ಕಳೆದೆರಡು ಶತಮಾನಗಳ ಹಿಂದೆ ಮಳೆ ಅಧಿಕ ಪ್ರಮಾಣದಲ್ಲಿ ಬೀಳುತ್ತಿತ್ತು. ಹೀಗಾಗಿ ಎಮ್ಮೆ ಆಕಳುಗಳನ್ನು ಮೇಯಿಸಲು ಕಾಡಿಗೆ ಹೋಗುವುದು ಕಷ್ಟಕರವಾಗಹತ್ತಿತ್ತು. ಮೇಲಾಗಿ ಮಹಾರಾಷ್ಟ್ರದಲ್ಲಿ ಆ ಕಾಲದಲ್ಲಿ ತುಂಬ ಛಳಿ ಇರುತ್ತಿತ್ತು. ಆ ಛಳಿಗೆ ಆಕಳು ಎಮ್ಮೆಗಳು ಸಾಯುತ್ತಿದ್ದವು. ಇದನ್ನರಿತ ನಮ್ಮ ಪೂರ್ವಜನರು ಅಂದಾಜು ಎರಡುನೂರು ವರ್ಷಗಳ ಹಿಂದೆ ದನಗಳನ್ನು ಹೊಡೆದುಕೊಂಡು ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯತ್ತ ವಲಸೆ ಬಂದರು. ದನಕರುಗಳನ್ನು ಮೇಯಿಸಲು ಈ ಪ್ರದೇಶವು ಪ್ರಶಸ್ತವಾದ ಸ್ಥಳ. ಏಕೆಂದರೆ ದಟ್ಟವಾದ ಅರಣ್ಯ ಪ್ರದೇಶದಲ್ಲಿ ಹುಲ್ಲುಗಾವಲು ಇರುತ್ತದೆ.

ಕಳೆದ ೩೦-೪೦ ವರ್ಷಗಳ ಹಿಂದೆ ಕಾಡುಪ್ರಾಣಿಗಳ ಕಾಟ, ಮಳೆಯ ಆರ್ಭಟ ಮುಂತಾದುವನ್ನು ಲೆಕ್ಕಿಸದೇ ಕಾಡಿನಲ್ಲಿಯೇ ಆಕಳು ಎಮ್ಮೆಗಳನ್ನು ಸಾಕಿಕೊಂಡು ವಾಸಿಸುತ್ತಿದ್ದರು. ಹಟ್ಟಿಯನ್ನು ಹಾಕಿಕೊಂಡಿದ್ದೇವೆ. ಸರ್ಕಾರದವರು ವಿದ್ಯುಚ್ಛಕ್ತಿ ಕೊಟ್ಟಿದ್ದಾರೆ. ಆದರೆ ಮನೆಗಳು ನಮ್ಮ ಹೆಸರಿನಲ್ಲಿ ಖರೀದಿಯಾಗಿಲ್ಲ. ಆದರೂ ನಾವು ಮನೆ ಕಂದಾಯವನ್ನು ಸರ್ಕಾರಕ್ಕೆ ಕಟ್ಟುತ್ತೇವೆ. ಹೀಗೆ ಅನೇಕ ಮಾಹಿತಿಗಳನ್ನು ನಮಗೆ ಜೋರೆ ಅವರು ನೀಡುತ್ತಾ ಹೋದರು.

ಈ ಸಮುದಾಯದ ಮಾತೃಭಾಷೆ ಮರಾಠಿ. ಮನೆಯಲ್ಲಿ ಎಲ್ಲರೂ ಮರಾಠಿಯಲ್ಲಿಯೇ ಮಾತನಾಡಿದರೆ, ಹೊರಗಿನ ಜನರೊಂದಿಗೆ ಕನ್ನಡ ಭಾಷೆಯಲ್ಲಿ ವ್ಯವಹರಿಸುತ್ತಾರೆ. ಬಹುತೇಕ ಎಲ್ಲ ಗವಳಿಗರು ಸ್ಪಷ್ಟವಾಗಿ ಕನ್ನಡವನ್ನು ಮಾತನಾಡುತ್ತಾರೆ. ಗವಳಿಗರಿಗೆ ನವಲು, ದುಂಡು, ಬೀರು, ವಿಠಲ, ರಾಮು, ಇಟ್ಟು, ಜಾನು, ಸಗ್ಗು, ಬೊಮ್ಮು, ದಿವೂ ಮುಂತಾದ ಹೆಸರುಗಳನ್ನು ಪುರುಷರಿಗೆ ಇಟ್ಟಿರುತ್ತಾರೆ. ಮಹಿಳೆಯರಿಗೆ ಗಂಗೂಬಾಯಿ, ಸಕ್ಕೂಬಾಯಿ, ಬೊಮ್ಮಬಾಯಿ, ಸೋನುಬಾಯಿ, ಜನ್ನುಬಾಯಿ, ನಾಗೂಬಾಯಿ, ಸಾವುಬಾಯಿ ಮೊದಲಾದ ಹೆಸರುಗಳನ್ನಿಡುವ ಪದ್ಧತಿ ಇದೆ.

**೨. ಭೌಗೋಳಿಕ ವ್ಯಾಪ್ತಿ**

ಮೂಲತಃ ಮಹಾರಾಷ್ಟ್ರದವರಾದ ದನಗರ ಗವಳಿಗರಲ್ಲಿ ಕೆಲವರು ಕಳೆದ ಶತಮಾನದಲ್ಲಿ ಕರ್ನಾಟಕಕ್ಕೆ ವಲಸೆ ಬಂದವರು. ಬೆಳಗಾವಿಯ ಜಿಲ್ಲೆಯ ಖಾನಾಪುರ, ಧಾರವಾಡ ಜಿಲ್ಲೆಯ ಕಲಘಟಗಿ, ಧಾರವಾಡ, ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ, ಯಲ್ಲಾಪುರ, ದಾಂಡೇಲಿ ಹಾಗೂ ಹಳಿಯಾಳ, ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಯ ಎನ್.ಆರ್.ಪುರ, ತರೀಕೆರೆ ತಾಲೂಕುಗಳಲ್ಲಿ ಗವಳಿ ಸಮುದಾಯದವರ ನೆಲೆಗಳಿವೆ. ಅದರಲ್ಲಿಯೂ ಯಲ್ಲಾಪುರ ತಾಲೂಕಿನಲ್ಲಿ ಇವರು ಅಧಿಕ ಸಂಖ್ಯೆಯಲ್ಲಿ ನೆಲೆಸಿದ್ದಾರೆ. ಈ ಅಂಶವನ್ನು ವೆಂಕಟ ರಂಗೋ ಕಟ್ಟಿಯವರು ಸಹ ತಮ್ಮ ಗ್ಯಾಝೇಟಿಯರನಲ್ಲಿ ದಾಖಲಿಸಿದ್ದಾರೆ. ಮುಂಡಗೋಡ ತಾಲೂಕಿನ ಜೇನುಮುರಿ, ಮೈನಳ್ಳಿ, ನ್ಯಾಸರ್ಗಿ, ಚೌಡಳ್ಳಿ, ಉಗ್ಗಿನಕೇರಿ, ಗುಂಜಾವತಿ, ಯಲ್ಲಾಪುರ ತಾಲೂಕಿನ ಸಿಡ್ಲಗುಂಡಿ, ಕಿರುವತ್ತಿ, ಹಳಿಯಾಳ ತಾಲೂಕಿನ ಕೆಲವು ಗ್ರಾಮಗಳಲ್ಲಿ ದನಗರ ಗವಳಿಗರು ಅಧಿಕ ಸಂಖ್ಯೆಯಲ್ಲಿ ಕಂಡು ಬರುತ್ತಾರೆ.

**೩. ಚರಿತ್ರೆಯ ಪುಟಗಳಲ್ಲಿ ಗವಳಿಗರು**

ಹತ್ತನೆಯ ಶತಮಾನಕ್ಕಿಂತ ಪೂರ್ವದಲ್ಲಿಯೇ ದನಗರ ಸಮುದಾಯದವರು ಕರ್ನಾಟಕದಲ್ಲಿ ನೆಲೆಸಿದ್ದರೆಂಬುದನ್ನು ಶಾಸನವೊಂದು ನಿದರ್ಶನವಾಗಿದೆ. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಸೊಗಲದ ಕ್ರಿ.ಶ. ೯೮೦ರ ಶತಮಾನವು ಬೆಳಾಡಿಯ ಧನಗರ (ಕುರುಬ) ಸಮುದಾಯದ ಕರಿಯ ಕೇತಿಮಯ್ಯನ ಹೆಂಡತಿ ಕಂಚಿಕಬ್ಬೆಯ ವ್ಯಕ್ತಿತ್ವ, ಅವಳು ಸುವರ್ಣಾಕ್ಷಿ ದೇವರಿಗೆ ದಾನ ನೀಡಿದ ವಿಷಯಗಳನ್ನು ವಿವರಿಸುತ್ತದೆ. ಬಹುಶಃ ದನಗರರಿಗೆ ಸಂಬಂಧಿಸಿದ ಮೊದಲ ಶಾಸನವಿದು. "..... ಮಾರಾಜನ ಬೆಳವಾಡಿಯ ಚಾರುಗುಣಂ ಕರಿಯಕೇತಿಮಯ್ಯ|ನವಳು ವಿಸ್ತಾರ ಗುಣಾಂಬುಧಿ ಧರ್ಮ್ಮದ ಮೇರುವನಾ ಕಂಚಿಕಬ್ಬೆಯಂ ಪೊಗಳದರಾರ್| ಪರಹಿತ ಗುಣ ಚರಿತದ | **ಧನಗಾರ ಗೋತ್ರದ ಕಂಚಿಯಬ್ಬೆ** ಮಾತಾರತ್ನ ಧರೆಗೆಸೆವ ದಾನಮ್ಮ್ರದ ಪರಿಣತಿಕೆಯ ಪಿರಿದು ಪರಮ ಮಾಹೇಶ್ವ|ರಿಯೆ..." ಎಂದು ಕಂಚಿಕಬ್ಬೆಯ ವ್ಯಕ್ತಿತ್ವವನ್ನು ಈ ಶಾಸನ ವರ್ಣನಾತ್ಮಕವಾಗಿ ವಿವರಿಸುತ್ತದೆ.[9] ಹಾಗೆಯೇ ಮರಾಠಾ ದೊರೆ ಛತ್ರಪತಿ ಶಿವಾಜಿಯು ಮೂಲತಃ ಕರ್ನಾಟಕದ ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ಸೊರಟೂರು ಗ್ರಾಮದವನು. ಮೇಲಾಗಿ ಈತ ದನಗರ ಗವಳಿಗ ಸಮುದಾಯಕ್ಕೆ ಸೇರಿದವನೆಂಬುದನ್ನು ರಾ.ಚಿಂ. ಢೇರೆಯವರು ತಮ್ಮ ಗ್ರಂಥವೊಂದರಲ್ಲಿ ಆಧಾರಗಳೊಂದಿಗೆ ಸ್ಪಷ್ಟ ಪಡಿಸಿದ್ದಾರೆ.[10]

**೪. ಬೆಡಗು (ಕುಲ)ಗಳು**

ಯಾವುದೇ ಸಮುದಾಯದಲ್ಲಿ ವೈವಿಧ್ಯಮಯವಾದ ಬೆಡಗುಗಳಿರುವುದು ಸಹಜ. ಅದರಂತೆ ಗವಳಿಗರ ಸಮುದಾಯದಲ್ಲಿಯೂ ಅಂದಾಜು ಐವತ್ತಕ್ಕೂ ಹೆಚ್ಚು ಬೆಡಗುಗಳಿವೆ. ಜೋರ್ಯಾ, ಗಾವಡಿ, ಪಿಂಗಳಿ, ಕೊಕರಿ, ಸಿಂಧ್ಯಾ, ವರುಕಾ, ಎಡಿಗೆ ಇತ್ಯಾದಿ ಬೆಡಗುಗಳು ಈ ಪ್ರದೇಶದ ಗವಳಿಗರಲ್ಲಿವೆ. ಎಡಿಗೆ ಎಂಬ ಬೆಡಗಿನವರು ಇನ್ನುಳಿದ ಗವಳಿಗರಿಗೆ ಗುರುಗಳಾಗಿ ಕಾರ್ಯ ನಿರ್ವಹಿಸುತ್ತಾರೆ. ಜನನ, ನಾಮಕರಣ, ಮದುವೆ, ಮರಣಗಳಂಥ ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ಪುರೋಹಿತರಂತೆ ನಿಂತು ನಡೆಸಿಕೊಡುತ್ತಾರೆ. ಹೀಗಾಗಿ ಈ ಬೆಡಗಿನವರಿಗೆ ಗವಳಿಗರ ಸಮುದಾಯದಲ್ಲಿ ಉನ್ನತವಾದ ಗೌರವ ಸ್ಥಾನವಿದೆ. ಒಂದು ಬೆಡಗಿನವರು ಇನ್ನೊಂದು ಬೆಡಗಿನವರ ಜೊತೆ ವೈವಾಹಿಕ ಸಂಬಂಧಗಳನ್ನು ಬೆಳೆಸುತ್ತಾರೆ. ಅಂದರೆ ಇತರೆ ಸಮುದಾಯಗಳಂತೆ ಇಲ್ಲಿಯೂ ಸಗೋತ್ರ ಮದುವೆ ನಿಷೇಧವಿದೆ.

**೫. ವೇಷಭೂಷಣ-ಊಟೋಪಚಾರಗಳು**

ಗವಳಿಗರ ವೇಷಭೂಷಣಗಳು ಉಡುಗೆ ತೊಡುಗೆಗಳು ವಿಶಿಷ್ಟವಾಗಿವೆ. "ಇವರ ಮೈಬಣ್ಣ ಕಪ್ಪು, ಆಳು ಗಿಡ್ಡ, ಲಂಗೋಟಿ, ರುಮಾಲು, ಕಂಬಳಿ ಇಷ್ಟೇ ಇವರ ಉಡುಗೆಗಳು. ಹೆಂಗಸರು ಕುಪ್ಪಸ ಹಾಕುವರು. ಕಚ್ಚೆ ಹಾಕುವುದಿಲ್ಲ" ಎಂದು ವೆಂಕಟ ರಂಗೋಕಟ್ಟಿಯವರು ತಮ್ಮ ಗ್ಯಾಝೇಟೀಯರನಲ್ಲಿ ದಾಖಲಿಸಿದ್ದಾರೆ[11]. ಆದರೆ ಇತ್ತೀಚಿನ ವರ್ಷಗಳಲ್ಲಿ ಪುರುಷರು ಹಾಫ್ಪ್ಯಾಂಟ್ (ಬರ್ಮುಡಾ), ಧೋತ್ರ, ಅಂಗಿ, ರುಮಾಲು ಅಥವಾ ಟೊಪ್ಪಿಗೆಯನ್ನು ಧರಿಸುತ್ತಾರೆ. ಕೈಯಲ್ಲಿ ಕಡಗ, ಕಿವಿಯಲ್ಲಿ ಮುತ್ತು, ಕೊರಳಲ್ಲಿ ಸರ, ಕೈಯಲ್ಲಿ ಕೋಲು, ಹೆಗಲ ಮೇಲೆ ಕಂಬಳಿ, ಮಹಿಳೆಯರು ರವಿಕೆ ಸೀರೆ ಕಚ್ಚೆ ಹಾಕಿಕೊಂಡಂಥವರು ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ ಯಲ್ಲಾಪುರ, ಹಳಿಯಾಳ, ಧಾರವಾಡ ಜಿಲ್ಲೆಯ ಕಲಘಟಗಿ ಜಿಲ್ಲೆಯಲ್ಲಿ ಕಂಡುಬಂದರೆ ಅವರು ಧನಗರ ಗವಳಿಗರಾಗಿರುತ್ತಾರೆ. ಇವರು ತುಂಬ ಭಯಸ್ಥರು. ಮೊದ ಮೊದಲು ಪ್ಯಂಟ ಧರಿಸಿದ ವ್ಯಕ್ತಿಗಳನ್ನು ಕಂಡರೆ, ಸೈಕಲ್ ಮೋಟಾರು ಮತ್ತು ಇತರೆ ವಾಹನಗಳನ್ನು ನೋಡಿದರೆ ಹೆದರಿಕೊಂಡು ಓಡಿಹೋಗುತ್ತಿದ್ದರು. ಇತ್ತೀಚಿನ ವರ್ಷಗಳಲ್ಲಿ ನಗರದ ಸಂಪರ್ಕ ಬಂದ ಮೇಲೆ ಗವಳಿಗರು ಭಯದಿಂದ ದೂರವಾಗಿದ್ದಾರೆ.

ಸಾಮಾನ್ಯವಾಗಿ ಗವಳಿಗರು ಶಾಖಾಹಾರಿಗಳು. ರೊಟ್ಟಿ, ಚಪಾತಿ, ಅನ್ನ ಸಾರು ಪಲ್ಯಗಳಂಥ ಆಹಾರ ಪದಾರ್ಥಗಳನ್ನು ದಿನಾಲು ಮನೆಯಲ್ಲಿ ಮಾಡುತ್ತಾರೆ. ಊಟದ ಜೊತೆಗೆ ಹಾಲು ಮೊಸರು ಮಜ್ಜಿಗೆ ಬೆಣ್ಣೆಯನ್ನು ಉಪಯೋಗಿಸುತ್ತಾರೆ. ಬೆಳಿಗ್ಗೆ ಚಹಾ ಕಡ್ಡಾಯವಾಗಿ ಸೇವಿಸುತ್ತಾರೆ. ನಂತರ ಹನ್ನೊಂದು ಗಂಟೆಯ ಹೊತ್ತಿಗೆ ಊಟವನ್ನು ಮಾಡಿ ಪಶುಪಾಲನೆಗಾಗಿ ಅರಣ್ಯಕ್ಕೆ ಹೋಗುವುದು ಇವರ ನಿತ್ಯದ ದಿನಚರಿ. ಬೆಳಗಿನ ಉಪಹಾರವಂತೂ ಇಲ್ಲವೇ ಇಲ್ಲ. ಕೆಲವರು ವಾರ ಹದಿನೈದು ದಿವಸಕ್ಕೊಮ್ಮೆ ಕೋಳಿ ಅಥವಾ ಕುರಿ ಮಾಂಸವನ್ನು ಸೇವಿಸುತ್ತಾರೆ. ಎಲೆ ಅಡಿಕೆ ಹಾಕಿಕೊಳ್ಳುವುದು ಸರ್ವೇಸಾಮಾನ್ಯ.

**೬. ಉದ್ಯೋಗ**

ಈಗಾಗಲೇ ಹೇಳಿದಂತೆ ಗವಳಿಗರ ಪ್ರಧಾನ ಉದ್ಯೋಗ ಪಶುಪಾಲನೆ. ಆಕಳು ಎಮ್ಮೆಗಳನ್ನು ಸಾಕಿಕೊಂಡು ಹೈನುಗಾರಿಕೆ ಮಾಡಿ ಬದುಕುವುದೇ ಇವರ ಮುಖ್ಯ ಉದ್ಯೋಗ, ಕೆಲವರು ಆಕಳು ಎಮ್ಮೆಗಳ ಜೊತೆಗೆ ಆಡುಗಳನ್ನು ಸಾಕುತ್ತಿದ್ದಾರೆ. ಒಂದೊಂದು ಕುಟುಂಬದವರು ಕನಿಷ್ಠ ಐದು, ಗರಿಷ್ಟ ಮೂವತ್ತು ಎಮ್ಮೆ ಅಥವಾ ಐದು ಆಕಳುಗಳನ್ನು ಹೊಂದಿರುತ್ತಾರೆ. ಈ ಹಿಂದೆ ದಿನಾಲು ಹಾಲನ್ನು ಮಾರಿಕೊಂಡು ಬರಲು ಪಕ್ಕದ ನಗರಗಳಿಗೆ ಹೋಗಿಬರುತ್ತಿದ್ದರು. ಇತ್ತೀಚಿನ ವರ್ಷಗಳಲ್ಲಿ ಯಲ್ಲಾಪುರ ತಾಲೂಕಿನ ಕಿರುವತ್ತಿಯಲ್ಲಿ ಶ್ರೀಕೃಷ್ಣ ಹಾಲಿನ ಡೈರಿಯವರು ಗವಳಿಗರಿರುವ ಊರಿಗೆ ಬಂದು ಹಾಲನ್ನು ಖರೀದಿ ಮಾಡಿಕೊಂಡು ಹೋಗುತ್ತಾರೆ. ಇನ್ನುಳಿದಂತೆ ಹಾಲಿನಿಂದ ಮೊಸರು, ಬೆಣ್ಣೆ, ಮಜ್ಜಿಗೆಯನ್ನು ತಯಾರಿಸಿ ಮಾರಾಟ ಮಾಡುತ್ತಾರೆ. ಜೊತೆಗೆ ಹಾಲಿನಿಂದ ಖೋವಾವನ್ನೂ ತಯಾರಿಸುವುದನ್ನು ಕಾಣಬಹುದು. ಈ ಖೋವಾವನ್ನು ಧಾರವಾಡ-ಹುಬ್ಬಳ್ಳಿ ಹಾಗೂ ಬೆಳಗಾವಿಗಳಲ್ಲಿರುವ ಬೇಕರಿಯವರು ಖರೀದಿಸುತ್ತಾರೆ. ಇತ್ತೀಚೆಗೆ ಆರ್ಥಿಕವಾಗಿ ಸಬಲವಿದ್ದ ಕೆಲವು ಗವಳಿಗರು ಹೊಲ ಗದ್ದೆಗಳನ್ನು ಲಾವಣಿ ರೂಪದಿಂದ ಅಥವಾ ಖರೀದಿ ಮಾಡಿಕೊಂಡು ಒಕ್ಕಲುತನ ಕೈಕೊಂಡಿದ್ದಾರೆ.

ಒಂದು ಕುಟುಂಬದಲ್ಲಿ ಹೆಚ್ಚು ಸದಸ್ಯರಿದ್ದರೆ ರೈತರ ಹೊಲದಲ್ಲಿ ದುಡಿಯಲು ಹೋಗುವುದು ಸಹಜ. ಮಹಿಳೆಯರು ಮನೆಯ ಕೆಲಸಗಳ ಜೊತೆಗೆ ಹೈನುಕಾರಿಗೆ ಮಾಡುವುದು, ಕೂಲಿಕೆಲಸಕ್ಕೆ ಹೋಗುವುದನ್ನು ಕಾಣುತ್ತೇವೆ. ಅಷ್ಟೇ ಏಕೆ, ಬೇಸಿಗೆ ಕಾಲದಲ್ಲಿ ದನಗಳನ್ನು ಮೇಯಿಸಲು ಅಡವಿಯಲ್ಲಿ ಹುಲ್ಲು ಮೇವು ಇರುವುದಿಲ್ಲ. ಅದಕ್ಕಾಗಿ ಕುಟುಂಬದ ಕೆಲವು ಸದಸ್ಯರು ದುಡಿಯಲಿಕ್ಕೆ ತಿಂಗಳಾನುಗಟ್ಟಲೆ ಗೋವಾಕ್ಕೆ ವಲಸೆ ಹೋಗುತ್ತಾರೆ.

**೭. ಕೌಟುಂಬಿಕ ವ್ಯವಸ್ಥೆ**

ಗವಳಿಯರದು ಪುರುಷ ಪ್ರಧಾನ ಕುಟುಂಬ. ಮನೆಯ ಯಜಮಾನನೇ ಎಲ್ಲ ಜವಾಬ್ದಾರಿಯನ್ನು ನಿರ್ವಹಿಸಿಕೊಂಡು ಹೋಗುತ್ತಾನೆ. ಮಹಿಳೆಯರು ಮನೆಗೆಲಸ ಮಾಡಿಕೊಂಡು ಹೋಗುವುದರ ಜೊತೆಗೆ ಮಕ್ಕಳ ಪಾಲನೆ ಪೋಷಣೆ ಮಾಡುವ ಜವಾಬ್ದಾರಿಯು ಇರುತ್ತದೆ. ಈ ಹಿಂದೆ ಬಾಲ್ಯವಿವಾಹ ಪದ್ಧತಿ ಇವರಲ್ಲಿ ರೂಢಿಯಲ್ಲಿತ್ತು. ಆದರೆ ಇತ್ತೀಚಿನ ಸರ್ಕಾರದ ಕಟ್ಟುನಿಟ್ಟಾದ ನೀತಿ ನಿಯಮಾವಳಿಗಳಿಂದ ಬಾಲ್ಯವಿವಾಹ ಪದ್ದತಿಯನ್ನು ಕೈಬಿಡಲಾಗಿದೆ. ಹುಡುಗರಿಗೆ ೨೧ ವರ್ಷ ಹುಡುಗಿಯರಿಗೆ ೧೮ ವರ್ಷ ತುಂಬಿದ ನಂತರ ಮದುವೆ ಮಾಡುತ್ತಾರೆ. ವರದಕ್ಷಿಣೆ ಕೊಡುವ ಪದ್ದತಿಯನ್ನು ಗವಳಿಗರಲ್ಲಿ ಕಾಣುವುದಿಲ್ಲ. ಬದಲಾಗಿ ವಧುದಕ್ಷಿಣೆ ಕೊಟ್ಟು ಮದುವೆ ಮಾಡಿಕೊಳ್ಳುವ ಪರಂಪರೆ ಈಗಲೂ ಇವರಲ್ಲಿ ಇದೆ. ಆದರೆ ಅಳಿಯನಿಗೆ ಖುಷಿಯಿಂದ ವಾಚು, ಸೈಕಲ್, ಉಂಗುರ ಹೀಗೆ ತಮ್ಮ ಶಕ್ತಾನುಸಾರ ಕಾಣಿಕೆಯಾಗಿ ಕೊಡುತ್ತಾರೆ. ವಿಧವೆಯರಿಗೆ ಮರುಮದುವೆಯಾಗಲು ಅವಕಾಶವನ್ನು ಕಲ್ಪಿಸಲಾಗಿದೆ.

**೮. ಆಚರಣೆ ಸಂಪ್ರದಾಯಗಳು**

ಒಂದೊಂದು ಸಮುದಾಯದ ಆಚರಣೆ ಸಂಪ್ರದಾಯಗಳು ವಿಶಿಷ್ಟವಾಗಿರುತ್ತವೆ. ಆ ವಿಶಿಷ್ಟತೆಯಿಂದಲೇ ಆಯಾ ಸಮುದಾಯದ ಅನನ್ಯತೆಯು ನಮಗೆ ಸ್ಪಷ್ಟವಾಗುತ್ತದೆ. ಗವಳಿಗರು ದೀಪಾವಳಿ, ಮಹಾನವಮಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಅಂದು ತಮ್ಮ ತಮ್ಮ ಹಟ್ಟಿಗಳನ್ನು ಅಥವಾ ಮನೆಗಳನ್ನು ಆಕಳ ಸೆಗಣಿಯಿಂದ ಸಾರಿಸಿ ಸ್ವಚ್ಛಗೊಳಿಸುತ್ತಾರೆ. ಸಿಹಿ ಅಡುಗೆಯನ್ನು ಮಾಡಿ ನೈವೇದ್ಯ ಮಾಡಿ ಮನೆಮಂದಿಯೆಲ್ಲ ಒಟ್ಟಾಗಿ ಹಬ್ಬವನ್ನು ಆಚರಿಸುತ್ತಾರೆ.

ಮಹಾರಾಷ್ಟ್ರದ ಪಟ್ಟಣಕಡೋಲಿಯ ಇಟ್ಟಪ್ಪಹಾಗ ಪಂಢರಪುರದ ವಿಠೋಬರು ಗವಳಿಗರ ಪ್ರಮುಖ ಆರಾಧ್ಯ ದೈವಗಳು.[12] ಪ್ರತಿ ವರ್ಷಕ್ಕೊಮ್ಮೆ ಈ ಕ್ಷೇತ್ರಕ್ಕೆ ಹೋಗಿ ದರ್ಶನವನ್ನು ಪಡೆದುಕೊಂಡು ಬರುತ್ತಾರೆ. ಇತ್ತೀಚೆಗೆ ಗವಳಿಗರು ತಾವು ನೆಲೆ ನಿಂತ ಗ್ರಾಮಗಳಲ್ಲಿಯೇ ವಿಠಲ ದೇವಸ್ಥಾನಗಳನ್ನು ನಿರ್ಮಿಸಿಕೊಂಡು ಆರಾಧನೆ ಮಾಡುತ್ತಿದ್ದಾರೆ.

## ೯. ಆರ್ಥಿಕ ಪರಿಸ್ಥಿತಿ

ಆರ್ಥಿಕವಾಗಿ ಗವಳಿಗರು ತುಂಬ ಹಿಂದುಳಿದವರು. ಹೈನುಗಾರಿಕೆಯ ಆದಾಯವೇ ಇವರ ಬದುಕಿಗೆ ಆಧಾರ. ಎಮ್ಮೆ ಆಕಳುಗಳಿಗೆ ಆಹಾರ ಒದಗಿಸುವುದು ಈಗೀಗ ತುಂಬ ಕಷ್ಟವಾಗುತ್ತಿದೆ ಎಂದು ನಾವು ಭೆಟ್ಟಿ ಮಾಡಿದ ಕೆಲವು ಗವಳಿಗರು ತಮ್ಮ ನೋವನ್ನು ಹೇಳಿಕೊಂಡರು. ಅರಣ್ಯದಲ್ಲಿ ಹುಲ್ಲುಗಾವಲು ಪ್ರದೇಶ ಕಡಿಮೆಯಾದ ಕಾರಣ ದನಕರುಗಳು ಹೊಟ್ಟೆತುಂಬ ಮೇಯಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಹೈನುಕಾರಿಕೆಯ ಪ್ರಮಾಣದಲ್ಲಿ ಇಳಿಕೆ ಕಂಡುಬರುತ್ತಿದೆ. ಮಳೆಗಾಲ ಅಥವಾ ಚಳಿಗಾಲದಲ್ಲಿ ಹೇಗೊ ದನಕರುಗಳನ್ನು ಅಡವಿಗೆ ಹೋಗಿ ಮೇಯಿಸಿಕೊಂಡು ಬರುತ್ತಾರೆ. ಆದರೆ ಬೇಸಿಗೆ ಕಾಲದಲ್ಲಿ ಮಾತ್ರ ರೈತರಿಂದ ಖರೀದಿಸಿ ಸಂಗ್ರಹಿಸಿದ ಮೇವನ್ನು ಹಾಕಿ ಸಾಕಬೇಕಾಗುತ್ತದೆ. ಅಲ್ಲದೇ ಶೇಂಗಾ ಹಿಂಡಿ ಮತ್ತು ಗೋಧಿ ಅಥವಾ ಜೋಳದ ತೌಡ್ನನು ಕಲಸಿ ಹಾಕಿದರೆ ಎತ್ತು ಎಮ್ಮೆಗಳು ಸ್ವಲ್ಪ ಹೆಚ್ಚಿಗೆ ಹಾಲನ್ನು ಕರೆಯುತ್ತವೆ. ದಿನಾಲು ಐದರಿಂದ ಹತ್ತು ಲೀಟರವರೆಗೆ ಹಾಲನ್ನು ಮಾರಾಟ ಮಾಡುತ್ತಾರೆ. ಇದನ್ನು ಬಿಟ್ಟರೆ ಮಿಕ್ಕ ಹಾಲನ್ನು ಕಾಸಿ ಹೆಪ್ಪು ಹಾಕಿ ತುಪ್ಪ, ಮಜ್ಜಿಗೆ, ಖವ್ವಾ ಮಾಡುತ್ತಾರೆ. ಅವುಗಳನ್ನು ಪೇಟೆಗೆ ಹೋಗಿ ಮಾರಾಟ ಮಾಡಿಕೊಂಡು ಬರುತ್ತಾರೆ. ಇನ್ನು ಎಮ್ಮೆ ಆಕಳುಗಳ ಸೆಗಣಿಯ ಗೊಬ್ಬರವನ್ನು ರೈತರಿಗೆ ಮಾರಾಟ ಮಾಡುತ್ತಾರೆ. ಈ ಮಾರಾಟದಿಂದ ಬಂದ ಹಣದಿಂದ ದನಗಳಿಗೆ ಮೇವು ಹಿಂದು ತೌಡನ್ನು ತರುತ್ತಾರೆ. ಆರ್ಥಿಕ ಅನುಕೂಲಕ್ಕಾಗಿ ಮುಂಡಗೋಡದಲ್ಲಿ ಗವಳಿಗ ಸಮಾಜದವರು "ದನಗರ ಗೌಳಿಗರ ಸಹಕಾರಿ ಸಂಘ"ವನ್ನು ೧೯೯೯ ರಲ್ಲಿ ಸ್ಥಾಪಿಸಿದ್ದಾರೆ. ಸಂಘದ ಮೊದಲ ಕಾರ್ಯಕಾರಿ ಸಮಿತಿಯ ಅಧ್ಯಕ್ಷರಾಗಿ ಶ್ರೀ ಬೀರು ಜನ್ನು ಖಾತ್ರಟ, ಸದಸ್ಯರಾಗಿ ನವಲು ದೇವು ಜೋರೆ, ಬಿಕ್ಕುಬಾಬು ಜೋರೆ, ದೂಳು ವಿಠ್ಠು ತೊರವತ,ಜ ನ್ನು ವಾಘು ಗೌಳಿ, ಕೋಂಡು ಬಾಗೂ ಜೋರೆ, ಬಮ್ಮು ಬೀರು ಎಡಿಗೆ, ಬಮ್ಮು ಬಾಗೂ ಎಡಿಗೆ, ಬಾಬು ದಾಕ್ಲು ಕೋಕರೆ, ಜಾನು ಲಕ್ಕು ಪಾಂಡುರಮೀಸೆ ಹಾಗೂ ಮಹಿಳಾ ಪ್ರತಿನಿಧಿಯಾಗಿ ನಾಗೂಬಾಯಿ ಜನ್ನು ಜೋರೆ ಅರು ಕಾರ್ಯ ನಿರ್ವಹಿಸಿದ್ದಾರೆ. ಆರಂಭದಿಂದಲೂ ಯು.ಎಂ. ಹೆಗಡೆ ಅವರು ಸಂಘದ ಮುಖ್ಯ ಕಾರ್ಯನಿರ್ವಾಹಕರಾಗಿ ಸಂಘವನ್ನು ಮುನ್ನಡೆಸುತ್ತಿದ್ದಾರೆ. ಪ್ರತಿಯೊಬ್ಬ ಗವಳಿಗ ವ್ಯಕ್ತಿಗೆ ಐದುಸಾವಿರವರೆಗೂ ಕಡಿಮೆ ಬಡ್ಡಿಯ ಸಾಲಸೌಲಭ್ಯವನ್ನು ಕಲ್ಪಿಸಲಾಗಿದೆ. ಕಂತುಗಳ ರೂಪದಲ್ಲಿ ಸಾಲದ ಹಣವನ್ನು ತುಂಬುತ್ತ ಹೋಗವುದು ಕಡ್ಡಾಯ.

ಹುಬ್ಬಳ್ಳಿ ರಸ್ತೆಗೆ ಹೊಂದಿಕೊಂಡಂತೆ ಮುಂಡಗೋಡದಲ್ಲಿ ದನಗರ ಗವಳಿಗರ ಸಹಕಾರ ಸಂಘದ ಕಟ್ಟಡವನ್ನು ನಿರ್ಮಿಸಲಾಗಿದೆ. ಇಲ್ಲಿಯೇ ಮುಂಡಗೋಡ ತಾಲೂಕು ದನಗರ ಗವಳಿಗರ ವಿವಿದೋದ್ಧೇಶ ಸಹಕಾರಿ ಸಂಘವನ್ನು ಆರಂಭಿಸಲಾಗಿದೆ. ಈ ಸಂಘದ ಮೂಲಕ ಗವಳಿಗರಿಗೆ ಆಹಾರ ಧಾನ್ಯಗಳನ್ನು, ಬಟ್ಟೆ, ಇತ್ಯಾದಿ ಸಾಮಾಗ್ರಿಗಳನ್ನು ರಿಯಾಯತಿ ದರದಲ್ಲಿ ಮಾರಾಟ ಮಾಡಲಾಗುತ್ತದೆ. ಯಲ್ಲಾಪುರ ತಾಲೂಕಿನ ಕಿರುವತ್ತಿಯಲ್ಲಿ ಉನ್ನತಿ ಗವಳಿಗರ ಸಹಕಾರ ಸಂಘವನ್ನು ಸ್ಥಾಪಿಸಲಾಗಿದೆ.ಈ ಸಂಘವು ಆ ಆಭಗದ ಗವಳಿಗರ ಆರ್ಥಿಕ ಅಭಿವೃದ್ಧಿಗೆ ಬಹಳಷ್ಟು ಸಹಾಯಕಾರಿಯಾಗಿದೆ.

## ೧೦. ಶೈಕ್ಷಣಿಕ

ಭಾರತದ ಪ್ರತಿಯೊಬ್ಬ ಪ್ರಜೆಗೂ ಶಿಕ್ಷಣವನ್ನು ಕಡ್ಡಾಯವಾಗಿ ಕೊಡಿಸಬೇಕು ಎಂಬುದಕ್ಕೆ ಸರಕಾರ ಬದ್ಧವಾಗಿದೆ. ಆದರೂ ನಮ್ಮಲ್ಲಿ ಎಷ್ಟೋ ಬುಡಕಟ್ಟು ಮತ್ತು ಹಿಂದುಳಿದ ಸಮುದಾಯಗಳು ಇನ್ನೂ ಶಿಕ್ಷಣದಿಂದ ವಂಚಿತವಾಗಿವೆ. ಇದಕ್ಕೆ ದನಗರ ಗವಳಿಗರು ಹೊರತಾಗಿಲ್ಲ. ಇತ್ತೀಚೆಗೆ ಸರಕಾರ ಗವಳಿಗರಿರುವ ಪರಿಸರದಲ್ಲಿಯೇ ಶಾಲೆಯನ್ನು ಸ್ಥಾಪಿಸಿದೆ. ಈ ಮೂಲಕ ಅವರ ಶೈಕ್ಷಣಿಕ ಅಭಿವೃದ್ಧಿಗೆ ಸಹಾಯಕಾರಿಯಾಗುತ್ತಲಿದೆ. ನಾವು ಭೇಟಿ ನೀಡಿದ ಜೇನುಮುರಿ ಮೂವತ್ತು ಗವಳಿಗರ ಮನೆಗಳನ್ನು ಹೊಂದಿರುವ ಒಂದು ಪುಟ್ಟ ಗ್ರಾಮ. ಈ ಗ್ರಾಮದಲ್ಲಿರುವ ಗವಳಿಗರ ಮಕ್ಕಳಿಗಾಗಿ ಐದನೆಯ ತರಗತಿಯವರೆಗೆ ಸರಕಾರಿ ಶಾಲೆಯನ್ನು ಹದಿನಾಲ್ಕು ವರ್ಷಗಳ ಹಿಂದೆ ಆರಂಭಿಸಿದೆ. ಹೀಗಾಗಿ ಗವಳಿಗರ ಮಕ್ಕಳು ಈಗೀಗ ವಿದ್ಯಾವಂತರಾಗುತ್ತಿದ್ದಾರೆ. ಐದನೆಯ ತರಗತಿಯವರೆಗೆ ಓದಿದ ಮಕ್ಕಳು ಹೆಚ್ಚಿನ ವಿದ್ಯಾರ್ಜನೆಗಾಗಿ ಸಮೀಪದ ಮುಂಡಗೋಡಕ್ಕೆ ಹೋಗುತ್ತಾರೆ. ಕೆಲವು ಮಕ್ಕಳು ಮುಂಡಗೋಡ, ಯಲ್ಲಾಪುರ, ಕಲಘಟಗಿ, ಹಳಿಯಾಳಗಳಲ್ಲಿರುವ ಸರಕಾರಿ ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶ ಪಡೆದಿದ್ದಾರೆ. "ಹೈನುಕಾರಿಗೆ ಉದ್ಯೋಗ ತುಂಬ ಕಷ್ಟವಾಗುತ್ತಿರುವ

ಈ ಕಾಲದಲ್ಲಿ ನಮ್ಮ ಮಕ್ಕಳು ವಿದ್ಯಾಭ್ಯಾಸ ಮಾಡಿ ನೌಕರಿಗೆ ಹೋಗುವುದೇ ಸರಿಯಾದ ಮಾರ್ಗೋಪಾಯ" ಎಂಬುದು ಗವಳಿಗರ ಅಭಿಪ್ರಾಯವಾಗಿದೆ. ಇಂದಿನ ಬಹುತೇಕ ಗವಳಿಗರ ಮಕ್ಕಳೆಲ್ಲಶಿಕ್ಷಣವನ್ನು ಪಡೆಯುತ್ತಿರುವುದು ಆಶಾದಾಯಕವಾಗಿದೆ.

**೧೧. ಸಂಘಟನೆ-ಸೌಲಭ್ಯಗಳು**

ಮುಗ್ಧರು, ಸೌಮ್ಯವಾದಿಗಳು, ನೇರ ನಡೆನುಡಿಯನ್ನು ಮೈಗೂಡಿಸಿಕೊಂಡ ದನಗರ ಗವಳಿಗರಲ್ಲಿ ಸಂಘಟನೆಯ ಕೊರತೆ ಎದ್ದು ಕಾಣುತ್ತದೆ. ಆರ್ಥಿಕ ಅನುಕೂಲಕ್ಕಾಗಿ ಸಹಕಾರ ಸಂಘವನ್ನು ಸ್ಥಾಪಿಸಿದ್ದನ್ನು ಬಿಟ್ಟರೆ ಒಗ್ಗಟ್ಟಾಗಿ ತಮಗೆ ದೊರಬೇಕಾದ ಸರಕಾರಿ ಸೌಲಭ್ಯಗಳನ್ನು ಕೇಳಿ ಪಡೆದುಕೊಳ್ಳಲು ಪ್ರಯತ್ನಿಸುತ್ತಿಲ್ಲ. ಹೀಗಾಗಿ ಸರಕಾರದಿಂದ ಸಿಗುವ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಅವರೇ ಹೇಳುವಂತೆ "ಜನಪ್ರತಿನಿಧಿಗಳು ಚುನಾವಣೆ ಇದ್ದಾಗ ಮಾತ್ರ ನಮ್ಮ ಹಟ್ಟಿಗಳಿಗೆ ಭೇಟಿ ನೀಡಿ ಅನೇಕ ಆಶ್ವಾಸನೆಗಳನ್ನು ನೀಡಿ ಮತವನ್ನು ಕೇಳುತ್ತಾರೆ. ಆಶ್ವಾಸನಗಳನ್ನು ಕೊಟ್ಟು ಹೋದವರು ಮತ್ತೆ ಮರಳಿ ಕಾಲಿಡುವುದಿಲ್ಲ. ನಾವು ಅವರನ್ನೂ ಮತ್ತೆ ಕೇಳಲಿಕ್ಕೂ ಹೋಗುವುದಿಲ್ಲ" ಎನ್ನುತ್ತಾ. ಜೇನುಮುರಿ ಗ್ರಾಮದಲ್ಲಿ ಈ ಸಮುದಾಯದ ಮಹಿಳೆಯೊಬ್ಬಳು ಈ ವರ್ಷ ಗ್ರಾಮ ಪಂಚಾಯಿತಿ ಸದಸ್ಯಳಾಗಿ ಆಯ್ಕೆಯಾಗಿದ್ದಾಳೆ.

ಕರ್ನಾಟಕದ ಕುರುಬರು ಗವಳಿಗರು ನಮ್ಮವರೆಂದು ಈವರೆಗೂ ಅರಿತುಕೊಂಡಂತಿಲ್ಲ. ಈಗಲಾದರೂ ಕುರುಬರ ಸಮುದಾಯದ ನಾಯಕರು, ಜನಪ್ರತಿನಿಧಿಗಳು, ಸಂಘಸಂಸ್ಥೆಗಳು ಗವಳಿಗರನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡು ಅವರಿಗೆ ಸಿಗಬಹುದಾದ ಸೌಲಭ್ಯಗಳನ್ನು ಪಡೆದುಕೊಳ್ಳುವಲ್ಲಿ ಸಹಾಯ ಸಹಕಾರ ನೀಡಬೇಕಾಗಿವೆ. ಕರ್ನಾಟಕ ಪ್ರದೇಶ ಕುರುಬರ ಸಂಘವು ಗವಳಿಗರನ್ನು ತನ್ನ ವ್ಯಾಪ್ತಿಗೆ ಸೇರಿಸಿಕೊಳ್ಳಬೇಕಾಗಿದೆ. ಅಂದಾಗ ಮಾತ್ರ ಅವರೂ ಮುಖ್ಯವಾಹಿನಿಗೆ ಬರಲು ಸಾಧ್ಯವಾಗುತ್ತದೆ.

ಮೀಸಲಾತಿಯಲ್ಲಿಯೂ ದನಗರ ಗವಳಿಗರಿಗೆ ನ್ಯಾಯ ದೊರಕಬೇಕಾಗಿದೆ. ಹಿಂದುಳಿದ ವರ್ಗಗಳ ಪ್ರವರ್ಗ ೧ ರಲ್ಲಿ ಇವರಿಗೆ ಮೀಸಲಾತಿಯನ್ನು ಕಲ್ಪಿಸಲಾಗಿದೆ. ಹಟ್ಟಿ ಹಾಕಿಕೊಂಡು ವಾಸಿಸುತ್ತಿರುವ ಇವರು ಕಾಡು ತಿರುಗಿಕೊಂಡು ಪಶುಪಾಲನೆ ಮಾಡುತ್ತ ಹೈನುಗಾರಿಕೆ ವೃತ್ತಿಯನ್ನು ಮಾಡುತ್ತಿರುವ ಇವರನ್ನು ಪರಿಶಿಷ್ಟ ಪಂಗಡ (Scheduled Tribe) ದಲ್ಲಿ ಪರಿಗಣಿಸಬೇಕು. ಅಂದಾಗ ಮಾತ್ರ ಗವಳಿಗರಿಗೆ ಸರಕಾರಿ ಸೌಲಭ್ಯಗಳು ಹೆಚ್ಚಿನ ಪ್ರಮಾಣದಲ್ಲಿ ಲಭ್ಯವಾಗುತ್ತವೆ. ಮೇಲಾಗಿ ಶೈಕ್ಷಣಿಕ ಸಮಾಜಿಕ ಮತ್ತು ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಅನುಕೂಲವಾಗುತ್ತದೆ.

**೧೨. ಉಪಸಂಹಾರ**

ಒಟ್ಟಾರೆ ಕುರುಬರ ಉಪಪಂಗಡಗಳಲ್ಲಿ ಒಂದಾದ ದನಗರ ಗವಳಿಗರು ಪಶುಪಾಲನೆ ಮಾಡುತ್ತಾ ಹೈನುಗಾರಿಕೆಯನ್ನೇ ತಮ್ಮ ಮೂಲ ಉದ್ಯೋಗವನ್ನಾಗಿ ಮಾಡಿಕೊಂಡು ಬಂದಂಥವರು. ಜಾಗತೀಕರಣದ ಪ್ರಭಾವದಿಂದಾಗಿ ಅವರ ಉದ್ಯೋಗ ಹಾಗೂ ದೈನಂದಿನ ಬದುಕಿನಲ್ಲಿಯೂ ಏರುಪೇರುಗಳಾಗುತ್ತಿರುವುದು ಸಹಜ. ಈ ಏರುಪೇರುಗಳಿಗೆ ಬಗ್ಗದೇ ಗವಳಿಗರು ಮುನ್ನಡೆಯಬೇಕಾದ ಅಗತ್ಯವಿದೆ. ಈ ಅಗತ್ಯವನ್ನು ಕಂಡುಕೊಳ್ಳಬೇಕಾದರೆ ಅವರಿಗೆ ಅವರ ಸಂಸ್ಕೃತಿ ಸಮುದಾಯದ ಅನನ್ಯತೆಯನ್ನು ತಿಳಿಸಿಕೊಡುವುದು ಅವಶ್ಯವಿದೆ. ಈ ಹಿನ್ನೆಲೆಯಲ್ಲಿ ದನಗರ ಗವಳಿಗರನ್ನು ಕುರಿತು ಸಮಗ್ರವಾದ ಅಧ್ಯನವನ್ನು ಕೈಕೊಳ್ಳಬೇಕಾಗಿದೆ. ಅದಕ್ಕೆ ಪೂರ್ವಪೀಠಿಕೆಯಾಗಿ ಈ ಸಂಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

[1]ವೆಂಕಟರಂಗೋ ಕಟ್ಟಿ, (ಅನುವಾದ) ಗ್ಯಾಝೇಟಿಯರ್, ಏಷಿಯನ್ ಎಜುಕೇಷನಲ್ ಸರ್ವೀಸಸ್ ನವದೆಹಲಿ, ೧೮೯೩, ಪುಟ ೧೭೫.

[2]ರಾ.ಚಿಂ.ಢೇರೆ, ಶ್ರೀ ವಿಠಲ: ಒಂದು ಮಹಾಸಮನ್ವಯ, ಅನುವಾದ ಚಂದ್ರಕಾಂತ ಪೋಕಳೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೨.

[3]ಶಂಬಾ ಜೋಷಿ, ಮರ್ಹಾಠೀ ಸಮಸ್ಕೃತಿ: ಕೆಲವು ಸಮಸ್ತೆಗಳು, ೧೯೫೮.

[4]Edger Thurston, Caste and Tribes of Southern India, Vol-II, Asian Educational Services, New Delhi, 2001.

[5]Gunther Sontheimer, Pastrol Deities in Western India, 1989.

[6]K.C. Malhotra & Madhava Gadgil, The Ecological Basis of the Geographical Distribution of the Dhanagars: A Pastroal Caste-Cluster of Maharashtra.

[7]Madhava Gadgi & K.C. Malhotra, Ecology of Pastroal Caste: Gavali Dhanagars of peninsular India, Human Ecology Vol-10, No-I, 1982.

[8]Edger Thurston, Caste and Tribes of Southern India, Vol-II, Asian Educational Services, Page No. 167.

[9]Epigraphia India Vol-XVI, Page-4.

[10]ಸರಜೂ ಕಾಟ್ಕರ್, ಶಿವಾಜಿಯ ಮೂಲ ಕನ್ನಡ ನೆಲ (ರಾ.ಚಿಂ.ಢೇರೆಯವರ ಶಿಖರ ಶಿಂಗಣಾಪುರ ಶಂಭು ಮಹಾದೇವ ಕೃತಿಯಯ ಆಧಾರ), ಲೋಹಿಯಾ ಪ್ರಕಾಶನ ಬಳ್ಳಾರಿ, ೨೦೦೬.

[11]ವೆಂಕಟರಂಗೋ ಕಟ್ಟಿ, (ಅನುವಾದ) ಗ್ಯಾಝೇಟಯರ್, ಏಷಿಯನ್ ಎಜುಕೇಷನಲ್ ಸರ್ವೀಸಸ್ ನವದೆಹಲಿ, ೧೮೯೩ ಪುಟ ೧೭೫.

[12]ರಾ.ಚಿಂ. ಢೇರೆಯವರು ತಮ್ಮ ಶ್ರೀ ವಿಠಲ: ಒಂದು ಮಹಾಸಮನ್ವಯ ಕೃತಿಯಲ್ಲಿ ಗವಳಿಗರ ಆರಾಧ್ಯ ದೈವಗಳ ಕುರಿತು ಚರ್ಚಿಸಿದ್ದಾರೆ. ನೋಡಿ: ಅನುವಾದ : ಚಂದ್ರಕಾಂತ ಪೋಕಳೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೨.

## ೧೦. ಹೆಗ್ಗಡೆಯವರು

ಹೆಗ್ಗಡೆಗಳು ಕುರುಬರು, ಅವರು ಕುರುಬ ಜನಾಂಗದ ಒಂದು ಪ್ರಮುಖ ಉಪಪಂಗಡ. ಹೆಗ್ಗಡೆಗಳನ್ನು ಹೆಗ್ಗಡಿಗಳು, ಹೆಗ್ಗಡೆಯವರು ಎಂದೆಲ್ಲಾ ಕರೆಯಲಾಗುವುದು. ಹೆಗ್ಗಡೆಗಳು ಈ ಹಿಂದೆ ಹಾಲುಮತದವರು ಎಂದಷ್ಟೇ ಜನಗಣತಿಗಳಲ್ಲಿ ಮತ್ತು ಇತರೆ ಸರ್ಕಾರಿ ದಾಖಲೆಗಳಲ್ಲಿ ನಮೂದಿಸುತ್ತಿದ್ದರು. ಪರಂಪರಾನುಗತವಾಗಿ ಕುರುಬರನ್ನು ಹಾಲುಮತದವರೆಂದು ಕರೆಯುವುದು ಎಲ್ಲರಿಗೂ ತಿಳಿದಿದೆ. ಹಾವನೂರು ಆಯೋಗದ ವರದಿಯಲ್ಲಿ ಹೆಗ್ಗಡೆಗಳು ಎಂಬ ಪದವನ್ನ ಹಾಲುಮತ, ಹಾಲುಮತ ಕುರುಬರು ಎಂಬ ಪದಗಳಿಗೆ ಸಮಾನಾರ್ಥ ಸೂಚಕವಾಗಿ ಬಳಸಲಾಗಿದೆ.

**ಹೆಗ್ಗಡೆಗಳ ಮೂಲ ಮತ್ತು ಹಂಚಿಕೆ**

ಹೆಗ್ಗಡೆಗಳು ಬಹಳ ಹಿಂದಿನಿಂದಲೂ ಅಲ್ಪಸಂಖ್ಯಾರತೆಂದೇ ತೋರುತ್ತದೆ. ಭೌಗೋಳಿಕವಾಗಿ ಹೆಗ್ಗಡೆಗಳು ಪ್ರಸ್ತುತ ರಾಮನಗರ ಜಿಲ್ಲೆ ಮಾಗಡಿ, ರಾಮನಗರ, ಕನಕಪುರ ಮತ್ತು ಚನ್ನಪಟ್ಟಣ, ಮಂಡ್ಯ ಜಿಲ್ಲೆ ವಿಶೇಷವಾಗಿ ಮದ್ದೂರು, ಮಂಡ್ಯ, ಮಳವಳ್ಳಿ ತಾಲ್ಲೂಕುಗಳಲ್ಲಿ, ಮೈಸೂರು ಜಿಲ್ಲೆಯ ಹುಣಸೂರು, ಪಿರಿಯಾಪಟ್ಟಣ ಮತ್ತು ಮೈಸೂರು ತಾಲ್ಲೂಕುಗಳಲ್ಲಿ ಚದುರಿದಂತೆ ಹಂಚಿಹೋಗಿದ್ದಾರೆ. ಈ ಯಾವುದೇ ತಾಲ್ಲೂಕುಗಳಲ್ಲಿ ಹೆಗ್ಗಡೆಯವರು ಬಹು ಸಂಖ್ಯಾತರಲ್ಲ. ಹೀಗಾಗಿ ಇವರು ಪ್ರಸ್ತುತ ಸಂದರ್ಭದಲ್ಲಿ ಉನ್ನತ ಪಟ್ಟದ ರಾಜಕಾರಣದಲ್ಲಿ ನಿರ್ಣಾಯಕ ಶಕ್ತಿಯೇನಲ್ಲ. ಆದರೆ ಕೆಲವು ತಾಲ್ಲೂಕುಗಳ (ಮಂಡ್ಯ ಮತ್ತು ಚೆನ್ನಪಟ್ಟಣ) ಹಲವು ಹಳ್ಳಿಗಳಲ್ಲಿ ರಾಜಕೀಯ ಮೀಸಲಾತಿಯಿಂದ ಗ್ರಾಮ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗಳಲ್ಲಿ ಕೆಲವು ಹೆಗ್ಗಡೆಗಳು ಸದಸ್ಯರಾಗಿ ಇತ್ತೀಚೆಗೆ ಆಯ್ಕೆಯಾಗುತ್ತಿರುವುದುಂಟು. ಹೀಗೆ ಹೆಗ್ಗಡೆಗಳು ದಕ್ಷಿಣ ಕರ್ನಾಟಕದಲ್ಲಷ್ಟೇ ಇದ್ದಾರೆ.

'ಹೆಗ್ಗಡೆ' ಎಂಬ ಪದವು ಭಾಷಿಕವಾಗಿ ಪೆರ್ಗಡೆ ಎಂಬ ಹಳೆಗನ್ನಡ ಪದದಿಂದ ಮೂಡಿಬಂದಿದೆ. ಪೆರ್ಗಡೆ ಎಂದರೆ ಮುಖ್ಯಸ್ಥನೆಂದರ್ಥ. ಹಾಲುಮತಕ್ಕೆ ಸೇರಿದ ಕುರುಬ ಹೆಗ್ಗಡೆಗಳು ತೀರಾ ಇತ್ತೀಚಿನವರೆಗೂ ಹೆಗ್ಗಡೆಗಳೆಂದು ತಮ್ಮ ಗಂಡುಮಕ್ಕಳಿಗೆ ಹೆಸರಿಡುವುದು ವಾಡಿಕೆಯಾಗಿದೆ. ತೀರಾ ಇತ್ತೀಚಿನವರೆಗೆ ಹೆಗ್ಗಡೆಗಳು ಗ್ರಾಮ ಪ್ರಧಾನವಾದ ಪಶು, ಕುರಿಪಾಲನೆ ಮತ್ತು ಕೃಷಿಕ ಜನಾಂಗದವರಾಗಿದ್ದರು.

'ಹೆಗ್ಗಡೆ' ಎನ್ನುವ ಹೆಸರನ್ನು ದಕ್ಷಿಣ ಕನ್ನಡ ಜಿಲ್ಲೆಯ ಆಳುವ ವರ್ಗವಾಗಿದ್ದ ಜೈನರು ಗೌಡ ಸಾರಸ್ವತ ಜನಾಂಗದ ಕೆಲವು ಕುಟುಂಬಗಳು, ಸವರ್ಣೀಯ ಹಿಂದೂಗಳಾದ ಭೂ ಮಾಲೀಕ ವರ್ಗದ ಬಂಟರಲ್ಲೂ, ಹೆಗ್ಗಡೆಗಳು ಮತ್ತು ಉತ್ತರ ಕನ್ನಡ ಜಿಲ್ಲೆಯ ಹವ್ಯಕ ಬ್ರಾಹಣರ ಕೆಲವು ಕುಟುಂಬಗಳು ಹೆಗ್ಗಡೆಗಳು ಎಂದು ಹೆಸರಿಟ್ಟುಕೊಳ್ಳುವುದು ವಾಡಿಕೆಯಲ್ಲಿದೆ. ಇಂದಿನ ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಬೆಟ್ಟ-ಗುಡ್ಡಗಳ ತಪ್ಪಲಿನಲ್ಲಿ ಹೆಗ್ಗಡೆ ಎಂಬ ಜಾತಿಯ ಅಲ್ಪಸಂಖ್ಯಾತ ಪಂಗಡವಿದೆ. ಈ ಪಂಗಡದ ಜನರು ತಾವು ಹಂಪಿಯಿಂದ ವಿಜಯನಗರ ಸಾಮ್ರಾಜ್ಯದ ಪತನನಂತರ ಜೀವರಕ್ಷಣೆಗಾಗಿ ಪಲಾಯನಗೈದವರೆಂದು ಹೇಳುತ್ತಾರೆ. ಇದು ಮೌಖಿಕ ಇತಿಹಾಸ. ಈ ಎಲ್ಲಾ ಅನ್ಯ ಜಾತಿಗಳ ಬ್ರಾಹ್ಮಣ ಮತ್ತು ಬ್ರಾಹ್ಮಣೇತರ ಮೂಲಗಳು ಜನವರ್ಗಗಳಲ್ಲಿ ಹೆಗ್ಗಡೆ ಎಂಬ ಪದವು ಸೀಮಿತವಾಗಿ ಕೆಲವು ಕುಟುಂಬಗಳಿಗಷ್ಟೇ ಬಳಸಲ್ಪಡುವುದರಿಂದ ಅದು ಸ್ಥಾನ ಸೂಚಕವಷ್ಟೇ ಆಗಿರಬಹುದು. ಅದು ಹಾಲುಮತ ಹೆಗ್ಗಡೆಗಳಂತೆ ಜಾತಿ 'ಸೂಚಕವಾಗಿಲ್ಲ. ಕಾರ್ಕಳ ತಾಲ್ಲೂಕಿನ ಹಂಪಿ ಮೂಲದ ಹೆಗ್ಗಡೆಗಳು ಅರಮನೆಯ ಉಪಚಾರ, ಅಡುಗೆಮನೆ ಮತ್ತು ವಿಲಾಸಿ ಜೀವನದ ಮೇಲುಸ್ತುವಾರಿ ನಡೆಸುತ್ತಿದ್ದ ಮನೆ ಹೆಗ್ಗಡೆಗಳೇ ಅಥವಾ ಹಂಪಿ ಹೆಗ್ಗಡೆಗಳು ಹಾಲು ಮತದವರೇ ಆಗಿದ್ದ ಹಂಪಿ ಅರಸರ ಹಕ್ಕ-ಬುಕ್ಕರ ಜಾತಿಗೆ ಸೇರಿದವರೇ ಎನ್ನುವುದು ಸ್ಪಷ್ಟ ಪಡಬೇಕಿದೆ. ಉತ್ತರ ಹೌದು ಎಂದಾದರೆ ಕಾರ್ಕಳ ತಾಲ್ಲೂಕಿನ ಹಂಪಿ ಹೆಗ್ಗಡೆಗಳಿಗೂ, ಹಳೇ ಮೈಸೂರು ಪ್ರಾಂತ್ಯದ ಹಾಲುಮತ ಹೆಗ್ಗಡೆಗಳಿಗೂ ರಕ್ತ ಸಂಬಂಧ ಬೆಸೆಯಬಹುದು. ಈ ಹಾಲುಮತ ಹೆಗ್ಗಡೆಗಳು ಟಿಪ್ಪು ಸೇನೆ ಮತ್ತು ಆಡಳಿತದಲ್ಲಿ, ವಿಜಯನಗರ ಸೇವೆಯಲ್ಲಿದ್ದರೆಂದೂ ಹಿರಿಯರು ಹೇಳುತ್ತಾರೆ. ಈ ವಿಚಾರವೊಂದು ಜನಪದ ನಂಬಿಕೆಯಾಗಿ, ತಲೆತಲಾಂತರದಿಂದ ಹರಿದುಬಂದಿದೆ. ಕೆಲವು ಹಾಲುಮತ ಹೆಗ್ಗಡೆಗಳು ತಾವು ಆರ್ಯ ಜನಾಂಗದವರೆಂದೂ ಹೆಮ್ಮೆ ಪಡುತ್ತಾರೆ.

**ಹೆಗ್ಗಡೆ ಜನಾಂಗಿಕ ಮೂಲ ಜನಪದ ವಿಶ್ಲೇಷಣೆ**

ಹೆಗ್ಗಡೆಗಳು ಹಾಲುಮತ ಕುರುಬ ಜನಾಂಗದ ಉಪಪಂಗಡವಾಗಿ ದಕ್ಷಿಣ ಕರ್ನಾಟಕ ಹಳೆ ಮೈಸೂರು ಭಾಗದಲ್ಲಷ್ಟೇ ಇದ್ದಾರೆ. ಹೆಗ್ಗಡೆಗಳು ಭಾರತದ ಅಥವಾ ಕರ್ನಾಟಕದ ಇತರೆ ಭಾಗಗಳಲ್ಲಿ ಕಂಡುಬರುವುದಿಲ್ಲ.

ಹೆಗ್ಗಡೆಗಳ ಜನಾಂಗಿಕ ಮೂಲದ ಕುರಿತು ಒಂದು ಜನಪದ ಕಥೆಯಿದೆ. ಒಂದಾನೊಂದು ಕಾಲದಲ್ಲಿ ಋತುಮತಿಯಾದ ಬ್ರಾಹ್ಮಣ ಕನ್ಯೆಯೋರ್ವಳನ್ನು ವಿಪ್ರರಾರೂ, ಅವಳು ಋತುಮತಿಯಾಗಿ ಬಿಟ್ಟಿದ್ದಾಳೆ ಎಂಬ ಕಾರಣದಿಂದ ವಿವಾಹವಾಗದ್ದರಿಂದ ಅವಳ ಕಣ್ಣಿಗೆ ಬಟ್ಟೆ ಕಟ್ಟಿ ಕಾಡಿಗೆ ಬಿಟ್ಟರು. ಆಕೆಯನ್ನು ಕಾಡಿನಲ್ಲಿ ಕುರಿಪಾಲನೆ ಮಾಡುತ್ತಿದ್ದ ಕುರುಬನೋರ್ವನು ರಕ್ಷಿಸಿದನು. ಆಕೆಗೆ ಆತ ವಸತಿ ಕಲ್ಪಿಸಿದನು. ಆಗ ಆತನಲ್ಲಿ ಆ ಬ್ರಾಹ್ಮಣ ಕನ್ಯೆ ಅನುರಕ್ತಳಾದಳು. ಹೀಗೆ ಬ್ರಾಹ್ಮಣ ಕನ್ಯೆ ಮತ್ತು ಕುರುಬನೋರ್ವನ ದಾಂಪತ್ಯದಲ್ಲಿ ಜನಸಿದವರೇ ಈ ಹೆಗ್ಗಡೆಗಳು. ಕುರುಬ ತಂದೆಗೆ ಬ್ರಾಹ್ಮಣ ಕನ್ಯೆಯು ಎರಡನೆಯ ಪತ್ನಿಯಾದಳು. ಶಿವನಿಗೆ ಗಂಗೆಯಿದ್ದಂತೆ.

ಈ ಜನಪದ ಕತೆಯ ಪ್ರಕಾರ ಮೂಲಪುರುಷನ ಮೊದಲ ದಾಂಪತ್ಯದಲ್ಲಿ ಜನಿಸಿದವರು ಸೋಮವಾರದ ಕುರುಬರು. ಈತನ ಎರಡನೆಯ ದಾಂಪತ್ಯದಲ್ಲಿ ಬ್ರಾಹ್ಮಣ ಪತ್ನಿಯಲ್ಲಿ ಜನಿಸಿದ ಮಕ್ಕಳು ಗುರುವಾರದ ಕುರುಬರು ಎಂದು ಕರೆಯಲ್ಪಟ್ಟರು. ಇಲ್ಲಿ ವರ್ಗೀಕರಣವು ಸೋಮವಾರ ಮತ್ತು ಗುರುವಾರವೆಂದು ದಿನದ ಹೆಸರಿನ ಪ್ರಕಾರ ನಡೆದಿದೆ. ಇದರರ್ಥ ಕುರುಬರ ಕುಲದೈವವಾದ ಶ್ರೀ ಬೀರೇಶ್ವರನನ್ನು ಪೂಜಿಸಲು ಮೊದಲ ಪತ್ನಿ ಮಕ್ಕಳಿಗೆ ಸೋಮವಾರವನ್ನು ಮತ್ತು ಎರಡನೆಯ ಪತ್ನಿ ಬ್ರಾಹ್ಮಣ ಕನ್ಯೆಯಲ್ಲಿ ಜನಿಸಿದ ಮಕ್ಕಳಿಗೆ ಗುರುವಾರವನ್ನು ಮೂಲಪುರುಷನು ಗೊತ್ತುಪಡಿಸಿದನು. ಹೀಗೆ ಒಂದೇ ತಂದೆಯಿಂದ ಆದರೆ ಕುರುಬ ಮತ್ತು ಬ್ರಾಹ್ಮಣ ಜಾತಿಗಳ ತಾಯಂದಿರ ಗರ್ಭದಲ್ಲಿ ಜನಿಸಿದ ಮಕ್ಕಳೇ ಮುಂದೆ ಹಾಲುಮತದವರೆಂದು ಬೆಳೆದು ಎಲ್ಲೆಡೆ ವಾಸಿಸಿದರು. ಹೀಗೆ ಈ ಜನಪದ ಕಥೆ ಮುಕ್ತಾಯವಾಗುತ್ತದೆ.

ಈ ಮೇಲ್ಕಂಡ ಜನಪದ ಕಥೆ ಒಂದು ನಂಬಿಕೆಯನ್ನು ಹುಟ್ಟುಹಾಕಿತು. ಅದೇ ಸೋಮವಾರ ಮತ್ತು ಗುರುವಾರದ ಕುರುಬರು ಪರಸ್ಪರ ಅಣ್ಣ ತಮ್ಮಂದಿರು ಎನ್ನುವುದಾಗಿದೆ. ಈ ಕಾರಣದಿಂದಾಗಿ ತೀರಾ ಇತ್ತೀಚಿನವರಿಗೆ ಈ ಸೋಮವಾರದ ಮತ್ತು ಗುರುವಾರದ ಕುರುಬರ ನಡುವೆ ವೈವಾಹಿಕ ಸಂಬಂಧಗಳನ್ನು ನಿಷೇಧಿಸಲಾಗಿತ್ತು. ಏಕೆಂದರೆ ಹೆಗ್ಗಡೆಗಳು ಸೋಮವಾರ ಮತ್ತು ಗುರುವಾರದ ಕುರುಬರು ಅಣ್ಣ ತಮ್ಮಂದಿರೆಂದು ನಂಬಲಾಗಿತ್ತು. ಈ ನಂಬಿಕೆ ಶಿಕ್ಷಣ ಪ್ರಸರಣ ಹೆಚ್ಚಿದಂತೆ ಸಡಿಲವಾಗುತ್ತಿದೆ.

**ಜೀವನ**

ಹೆಗ್ಗಡೆಗಳ ಸಾಮಾಜಿಕ ಜೀವನವು ಇತರೆ ಕುರುಬರನ್ನು ಬಹುಮಟ್ಟಿಗೆ ಮತ್ತು ಒಕ್ಕಲಿಗ ಜನಾಂಗವನ್ನು ಸಾಕಷ್ಟು ಮಟ್ಟಿಗೆ ಹೋಲುವುದು. ಆಹಾರ ಪದ್ಧತಿಗಳು, ವಿವಾಹ ಸಂಬಂಧಗಳು ಜನನ, ಮರಣ ಆಚಾರಗಳು, ಋತುಮತಿಯಾಗುವಿಕೆ, ಶೋಬಾನ ಆಚರಣೆ ಮುಂತಾದವುಗಳಲ್ಲಿನ ವ್ಯತ್ಯಾಸಗಳು, ದೇವರು ದೇವತೆಗಳ ನಂಬಿಕೆ ವ್ಯತ್ಯಾಸಗಳು ಯಾವುದೇ ಜಾತಿ ಜನಾಂಗಗಳ ನಡುವಣ ವ್ಯತ್ಯಾಸಗಳನ್ನು ಅಥವಾ ಅಂತರಗಳನ್ನು ಅಳೆಯುವ ಮಾನದಂಡಗಳಾಗಿವೆ.

ಹೆಗ್ಗಡೆಗಳಿಗೆ ಕುರುಬರೊಡೆಯರು (ಬೀರೇದೇವರ ಪೂಜಾರಿಗಳು) ಪುರೋಹಿತರು. ಹೆಗ್ಗಡೆಗಳು ತಮ್ಮ ಎಲ್ಲಾ ಶುಭ ಮತ್ತು ದುರಂತ ಕಾರ್ಯಗಳನ್ನು ಒಡೆಯರುಗಳ ನೇತೃತ್ವದಲ್ಲಿ ಮಾಡುತ್ತಾರೆ.

ಜೀವನದ ಇತರೆ ಆಚರಣೆಗಳು ಮುಖ್ಯವಾಹಿನಿ ಕುರುಬರಂತೆಯೇ ಇವೆ. ಈ ಅರ್ಥದಲ್ಲಿ ಹೆಗ್ಗಡೆಗಳಿಗೂ ಮತ್ತು ಇತರೆ ಕುರುಬರಿಗೂ ಹೆಚ್ಚು ವ್ಯತ್ಯಾಸಗಳಿಲ್ಲ. ಹೆಗ್ಗಡೆಗಳು ಕೂಡಾ ಉಣ್ಣೆ ಕಂಕಣದವರು. ರೇವಣಸಿದ್ಧ ಮತ್ತು ಬೀರೇಶ್ವರನನ್ನು ಪೂಜಿಸುವವರು. ಹೀಗಾಗಿ ಹೆಗ್ಗಡೆಗಳು ಕೂಡಾ ಹಳೆಯ ಕುರುಬರೇ.

ಹೆಗ್ಗಡೆಗಳಿಗೂ ಮತ್ತು ಇತರೆ ಕುರುಬರಿಗೂ (ಮುಳ್ಳುಕುರುಬರು), ಊರಕುರುಬರು (ಸೋಮವಾರದವರು ಮತ್ತು ರವಿವಾರದವರು), ಕಾಡು ಕುರುಬರು, ಜೇನು ಕುರುಬರು, ಬೆಟ್ಟ ಕುರುಬರು ಒಂದು ಅತ್ಯಂತ ಮಹತ್ವದ ವ್ಯತ್ಯಾಸವಿದೆ. ಅದೇನೆಂದರೆ ಹೆಗ್ಗಡೆಗಳು-ಗುರುವಾದ ಕುರುಬರು ಕೋಳಿ ತಿನ್ನುವುದಿಲ್ಲ. ಹೆಗ್ಗಡೆಗಳು-ಕುರಿ, ಮೇಕೆ ಮಾಂಸ ಮತ್ತು ಮೀನು ತಿನ್ನುವರು. ಮೀನನ್ನು ಅಪರೂಪಕ್ಕಷ್ಟೇ ತಿನ್ನುವರು. ಹೆಗ್ಗಡೆಗಳು ಕೋಳಿ ಮುಟ್ಟಿಸಿಕೊಂಡರೆ ಸ್ನಾನ ಮಾಡಬೇಕು. ಕೋಳಿಯೆಂದು ಹೆಗ್ಗಡೆಗಳ ಮೇಲೆ ಹಾರಲಿ ಅಥವಾ ಹೆಗ್ಗಡೆಯೇ ಕೋಳಿಯನ್ನು ಮುಟ್ಟಲಿ ಆಗ ಹೆಗ್ಗಡೆಗೆ ಮೈಲಿಗೆ ಆಗುತ್ತದೆ. ಪ್ರಾಯಶ್ಚಿತ್ತವೆಂಬಂತೆ ಮೈಲಿಗೆಯಾದ ಹೆಗ್ಗಡೆ ಸ್ನಾನ ಮಾಡಿ ಸ್ವಚ್ಛವಾದ ಹೊಸ ವಸ್ತ್ರವನ್ನು ಧರಿಸಿ ಶಿವಪೂಜೆ ಮಾಡಿ ವಿಭೂತಿ ಧರಿಸಿದರೆ ಮೈಲಿಗೆ ಕಳೆದುಕೊಂಡಂತೆ!

ಭಾರತದಲ್ಲಿ ಎಲ್ಲಾ ಜಾತಿಗಳಿಗೂ ಪಾವಿತ್ರ್ಯತೆ ಮತ್ತು ಮೈಲಿಗೆ ಹುಚ್ಚು ಹಿಡಿದಿದೆ. ಹೆಚ್ಚು ಧಾರ್ಮಿಕ ಆಚಾರಗಳನ್ನು (Rituals) ಅನುಸರಿಸಿದರೆ, ಕಡಿಮೆ ಮಾಂಸಾಹಾರಿಗಳಾದರೆ, ಅಥವಾ ಸಂಪೂರ್ಣವಾಗಿ ಶಾಖಾಹಾರಿಗಳಾದರೆ ಅವರು ಹೆಚ್ಚು ಪವಿತ್ರರಾದಂತೆ, ಎಂದು ನಂಬಲಾಗುವುದು, ಹೀಗೆ ಹೆಚ್ಚು ಬ್ರಾಹ್ಮಣೀಕರಣಕ್ಕೊಳಗಾದವರು ಸಾಮಾಜಿಕವಾಗಿ ಉಚ್ಛ ವರ್ಣಗಳವರೆಗೆ ಸ್ವಲ್ಪಮಟ್ಟಿಗೆ

ಸ್ವೀಕಾರಾರ್ಹವಾಗುವರು. ಹೀಗೆ ಕೋಳಿ ತಿನ್ನದ, ಕೋಳಿಗಳ ಬಳಿಗೂ ಸುಳಿಯದ ಹೆಗ್ಗಡೆಗಳು ತಾವು ಇತರೆಲ್ಲಾ ಕುರುಬರಿಂತ ಶ್ರೇಷ್ಠರೆಂದೆ ನಂಬಿದ್ದಾರೆ.

**ಧಾರ್ಮಿಕ ಮತ್ತು ಸಾಂಸ್ಕೃತಿಕ ಜೀವನ**

ಹೆಗ್ಗಡೆಗಳು ಶೈವರು. ಇವರ ಗಂಡು ದೇವತೆಗಳು ರೇವಣಸಿದ್ಧ ಮತ್ತು ಬೀರೇಶ್ವರ, ಹೆಣ್ಣು ದೇವತೆಮಸಣಮ್ಮ. ಇತ್ತೀಚೆಗೆ ಹೆಗ್ಗಡೆಗಳು ನಗರೀಕರಣ ಮತ್ತು ಆಧುನಿಕ ಶಿಕ್ಷಣಕ್ಕೆ ತೆರೆದುಕೊಂಡಂತೆ ಬಹುದೇವತಾರಾಧನೆಯನ್ನು ಸ್ವೀಕರಿಸುತ್ತಿದ್ದಾರೆ. ಆದರೆ ಹೆಗ್ಗಡೆಗಳ ಕುಲದೇವರು ಶ್ರೀ ಬೀರೇಶ್ವರ.

ಹೆಗ್ಗಡೆಗಳ ಹೆಣ್ಣು ದೇವತೆ ಮಸಣಮ್ಮ-ಅಂದರೆ ಮಹಾರಾಷ್ಟ್ರದ ಮಹಾಲಸ್ಸಮ್ಮ- ಅಂದರೆ ಪಾರ್ವತಿ, ಶಕ್ತಿ ಅಥವಾ ಚಾಮುಂಡೇಶ್ವರಿ ಎಂದರ್ಥ. ಮಸಣಮ್ಮನಿಗೆ ಚೆನ್ನಪಟ್ಟಣ ತಾಲ್ಲೂಕಿನ ರಾಮನಗರ ಜಿಲ್ಲೆ ಹೊಸೂರುದೊಡ್ಡಿ ಮತ್ತು ಮುದುಗೆರೆ ಗ್ರಾಮಗಳಲ್ಲಿ ಪ್ರತ್ಯೇಕ ದೇವಾಲಯಗಳಿವೆ. ಈ ದೇವಾಲಯಗಳಲ್ಲಿ ಕರಿಕಂಬಳಿ ಗದ್ದಿಗೆ ಹಾಕಿ ಕಳಸವನ್ನು ಪೂಜಿಸುವರು. ಕಳಸವು ತಾಮ್ರದ ಚೊಂಬಿಗೆ ಪವಿತ್ರ ಜಲ ತುಂಬಿ ಒಂದು ತೆಂಗಿನಕಾಯಿಗೆ ಅರಿಶಿನ ಕುಂಕುಮವಿರಿಸಿ, ವೀಳ್ಯದೆಲೆಯನ್ನು ಕಮಲದಾಕಾರದಲ್ಲಿ ಚೊಂಬಿಗೆ ಜೋಡಿಸಿ, ಹೂ ಇಟ್ಟು ಸಿಂಗರಿಸಲ್ಪಟ್ಟಿರುವುದು. ಮಸಣಮ್ಮನ ಪೂಜಾರಿ ಸರ್ವೇಸಾಮಾನ್ಯವಾಗಿ ಶಾಖಾಹಾರಿ, ಈ ಮಸಣಮ್ಮನಿಗೆ ದೇವಾಲಯಗಳು ಕಡಿಮೆ.

ಹೆಗ್ಗಡೆಗಳು ಶ್ರೀ ಬೀರೇಶ್ವರ ಭಕ್ತರು. ಅವರು ತಮ್ಮ ಗಂಡು ದೇವತೆಯನ್ನು ಶ್ರೀ ಬೀರಪ್ಪ, ಶ್ರೀ ಬೀರಲಿಂಗ, ಶ್ರೀ ಬೀರಲಿಂಗೇಶ್ವರ, ಶ್ರೀ ಕೊಂಡಣ್ಣ, ಶ್ರೀ ಕೆಂಗಣ್ಣಸ್ವಾಮಿ ಎಂದೆಲ್ಲಾ ಕರೆಯುವರು. ಬೀರೇದೇವರನ್ನು ಕೆಲವು ಶಾಸನಗಳಲ್ಲಿ (೧೨ ರಿಂದ ೧೬ನೆಯ ಶತಮಾನಕ್ಕೆ ಸೇರಿದವು) ಬೀರಭದ್ರನೆಂದು ಕರೆಯಲಾಗಿದೆ. ಈ ಬೀರಭದ್ರನು ಮುಂದೆ ವೀರಭದ್ರನಾದನು. ಈತ ಶಿವನ ಪರಿವಾರದೇವತೆ. ಹೀಗೆ ಅನೇಕ ಊರುಗಳಲ್ಲಿ ಬೀರಭದ್ರನ ದೇವಸ್ಥಾನಗಳು ವೀರಶೈವರ ಪ್ರಾಬಲ್ಯ-ಮತಾಂತರ ನಡೆದಂತೆ-ಬೆಳೆದಂತೆ, ವೀರಭದ್ರೇಶ್ವರ ಅಥವಾ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನಗಳಾಗಿ ಪರಿವರ್ತನೆಗೊಂಡವೆಂದು ಹೆಗ್ಗಡೆಗಳು ನಂಬುತ್ತಾರೆ.

ಹೆಗ್ಗಡೆಗಳಿಗೆ ಸೇರಿದ ಏಳು ಬೀರೇದೇವರ ದೇವಸ್ಥಾನಗಳಿವೆ. ಅವುಗಳಾವುವೆಂದರೆ ಚೆನ್ನಪಟ್ಟಣ ತಾಲ್ಲೂಕಿನ ಶೆಟ್ಟಿಹಳ್ಳಿ-ಹೊಸೂರು ದೊಡ್ಡಿಯಲ್ಲಿರುವ ಶ್ರೀ ದೊಡ್ಡ ಬೀರೇಶ್ವರ, ಚೆನ್ನಪಟ್ಟಣ ತಾಲ್ಲೂಕಿನ, ಅಬ್ಬೂರಿನಲ್ಲಿರುವ ಹೆಬ್ಬುಲಿ ಗವಿಬೀರೇಶ್ವರ (ಇಂದು ಈ ಊರಿನಲ್ಲಿ ಸಂಪೂರ್ಣವಾಗಿ ಒಕ್ಕಲಿಗರಿದ್ದಾರೆ. ಈ ಒಕ್ಕಲಿಗರೇ ದೇವಸ್ಥಾನದ ಆಡಳಿತ ಮಂಡಳಿಯಲ್ಲಿದ್ದಾರೆ. ಇಲ್ಲಿ ಅರ್ಚಕರು ಮಾತ್ರವೇ ಕುರುಬರೊಡೆಯರು. ಇವರು ಸಮೀಪದ ಮುಂಕುಂದ ಗ್ರಾಮದವರು. ಈ ಹಳ್ಳಿಯೇ ಪ್ರಾಚೀನ ಕಾಲದಲ್ಲಿ ಗಂಗರಸರ ಪ್ರಾದೇಶಿಕ ರಾಜಧಾನಿ ಆಗಿತ್ತು. ಹೊಸಗೆರೆ ಶ್ರೀ ಬೀರೇಶ್ವರ (ಕೆಂಡಗಣ್ಣ ಸ್ವಾಮಿ) ಕೆರೆಗೋಡು ಶ್ರೀ ಬೀರೇಶ್ವರ (ಕೋಡಿ ದೊಡ್ಡಿ) ಸಾತನೂರು ಶ್ರೀ ಬೀರೇಶ್ವರ ಇಲ್ಲಿ ಹಳೆಗುಡಿ ಮತ್ತು ಹೊಸಗುಡಿ ಎಂಬ ಎರಡು ಬೀರೇಶ್ವರ ದೇವಸ್ಥಾನಗಳಿವೆ. ಈ ಪೈಕಿ ಹೊಸಗುಡಿ ಕಟ್ಟಲು ಸ್ಥಳೀಯ ಈಡಿಗ ಗೌಡರು ಹಣಕಾಸು ನೆರವು ನೀಡಿದ್ದಾರೆ. ಮತ್ತೊಂದು ಬೀರೇಶ್ವರ ದೇವಸ್ಥಾನವು ಮದ್ದೂರು ತಾಲ್ಲೂಕಿನ ಆಲೂರು ಗ್ರಾಮದಲ್ಲಿದೆ. ಈ ಆಲೂರು ಶಿಂಷಾ ನದಿ ದಂಡೆಯಲ್ಲಿದೆ. ಸಾತನೂರು, ಕೆರಗೋಡು ಮತ್ತು ಆಲೂರಿನ ಬೀರೇದೇವರ ದೇವಸ್ಥಾನಗಳು ಮಂಡ್ಯ ಮತ್ತು ಮದ್ದೂರು ತಾಲ್ಲೂಕುಗಳಲ್ಲಿವೆ. ಬೆಸಗರಹಳ್ಳಿ ಸಮೀಪವಿರುವ ಮಹಿರ್ನವಿದೊಡ್ಡಿಯ ಶ್ರೀ ಬೀರೇದೇವರು ಇನ್ನೊಂದು ಗಡಿ ಆಗಿದೆ.

ಹೆಗ್ಗಡೆಗಳ ಜನಾಂಗದ ಎಲ್ಲಾ ಏಳು ಗಡಿಗಳ ಬೀರೇದೇವರ ದೇವಸ್ಥಾನಗಳಿಗೂ ೧೦ ರಿಂದ ೪೦ ಎಕರೆವರೆಗೆ ಭೂಮಿಯನ್ನು ನಾಲ್ಕನೆಯ ಕೃಷ್ಣರಾಜ ಒಡೆಯರ್ ಅವರು ದಾನವಾಗಿ ನೀಡಿದ್ದಾರೆ. ಈ ಭೂಮಿಯನ್ನು ಇಂದಿನವರೆಗೂ ಬೀರೇದೇವರ ದೇವಸ್ಥಾನಗಳ ಯಜಮಾನರುಗಳ ಸಮಿತಿಯು ಸಂರಕ್ಷಿಸುತ್ತ ಬಂದಿದೆ. ಈ ಭೂಮಿಯಲ್ಲಿ ಕೃಷಿ ಕೈಗೊಳ್ಳದ ಮೂಲಕ ದೇವಸ್ಥಾನಗಳಿಗೆ ಆದಾಯ ಹುಟ್ಟುವಳಿ ತರಬಹುದು. ತೀರಾ ಇತ್ತೀಚಿನವರೆಗೂ ಬೀರೇದೇವರ ದೇವಸ್ಥಾನಗಳಲ್ಲಿ ಹುಂಡಿ ಇಡುತ್ತಿರಲಿಲ್ಲ. ಈಗ ಒಂದೆಡರು ಬೀರೇದೇವರ ದೇವಸ್ಥಾನಗಳಲ್ಲಿ ಭಕ್ತರಿಂದ ಕಾಣಿಕೆ ಸಂಗ್ರಹಿಸಲು ಹುಂಡಿಗಳನ್ನು ಇಡಲಾಗಿದೆ. ಆದರೆ ಕಾಣಿಕೆ ಸಂಗ್ರಹವು ದೊಡ್ಡ

ಮೊತ್ತವೇನೂ ಆಗುತ್ತಿಲ್ಲ. ಏಕೆಂದರೆ ಮುಗ್ಧ ಶಿವನ ಭಕ್ತರು ಹೆಗ್ಗಡೆಗಳು ಬಹುತೇಕ ಆರ್ಥಿಕವಾಗಿ ಬಡವರು ಅತ್ಯಂತ ಹಿಂದುಳಿದವರು. ಆಗಾಗ್ಗೆ ಬೀರೇದೇವರ ದೇವಸ್ಥಾನಗಳ ನಿರ್ವಹಣೆಗೆಂದು ಪ್ರತಿವರ್ಷ ಕಾಣಿಕೆ ಸಂಗ್ರಹಿಸುವ ಪರಿಪಾಠ ಹೆಗ್ಗಡೆಗಳಲ್ಲಿಲ್ಲ. ಬದಲಾಗಿ ಹತ್ತು-ಇಪ್ಪತ್ತು ವರ್ಷಕ್ಕೆ ನಡೆಯುವ ಬೀರೇದೇವರ ಜಾತ್ರಗಳಿಗೆ, ದೇವಸ್ಥಾನದ ರಿಪೇರಿ ಮತ್ತು ಪುನರ್‌ನಿರ್ಮಾಣದ ಕಾರ್ಯಗಳಿಗಾಗಿ, ಆಯಾಯ ಸಂದರ್ಭಗಳಲ್ಲಷ್ಟೇ ಕಾಣಿಕೆಯನ್ನು ಹಾಲುಮತ ಹೆಗ್ಗಡೆಗಳಿಂದ ಮತ್ತು ಇತರೆ ಜನಾಂಗಗಳಿಂದಲೂ ಸಂಗ್ರಹಿಸಲಾಗುತ್ತದೆ.

ಮಂಡ್ಯ ಮತ್ತು ರಾಮನಗರ ಜಿಲ್ಲೆಗಳ ಶ್ರೀ ಬೀರೇದೇವರ ದೇವಾಲಯಗಳಿಗೆ ಹಳ್ಳಿಗಳ ಒಕ್ಕಲಿಗರು, ಈಡಿಗರು, ಅಗಸರು, ಕುಂಬಾರರು ಮತ್ತು ದಲಿತರು ಭಕ್ತರಾಗಿರುವರು. ಈ ಪ್ರದೇಶದಲ್ಲಿರುವ ಬೀರೇದೇವರ ದೇವಸ್ಥಾನಗಳ ನಿರ್ಮಾಣಕ್ಕೆ ಬೇರೆ ಜನಾಂಗಗಳು ನೆರವಾಗಿರುವುದರಿಂದ ಒಕ್ಕಲಿಗರಿಗೆ ಕೆಲವರಿಗೆ ದೇವಸ್ಥಾನಗಳ ಆಡಳಿತ ಮಂಡಳಿಗಳಲ್ಲಿ ಪ್ರಾತಿನಿಧ್ಯ ನೀಡಲಾಗಿದೆ. ಉಳಿದವರಿಗೆ ಮಹಾಮಂಗಳಾರತಿ ಸಮಯದಲ್ಲಿ ಮೊತ್ತಮೊದಲಿಗೆ ಮಂಗಳಾರತಿ, ಗಂಧ, ತೀರ್ಥ ಪ್ರಸಾರ ಸ್ವೀಕರಿಸುವ ವಿಶೇಷ ಹಕ್ಕು ನೀಡಲಾಗಿದೆ. ಈ ಹೊಂದಾಣಿಕೆಯು ೩೦೦-೪೦೦ ವರ್ಷಗಳಿಂದಲೂ ನಡೆದು ಬಂದಿದೆಯೆಂದು ಹಿರಿಯರು ಹೇಳುವರು. ಆದರೆ ಕೆಲವು ಬೀರೇದೇವರ ದೇವಸ್ಥಾನಗಳಲ್ಲಿ ಹೆಗ್ಗಡೆಗಳ ಯಜಮಾನರು ಮತ್ತು ಒಕ್ಕಲಿಗ ಯಜಮಾನರ ನಡುವೆ ಮೇಲಾಟವೇರ್ಪಟ್ಟು ವ್ಯಾಜ್ಯಗಳು ನಡೆದಿವೆ. ಕೊನೆಗೆ ಬೀರೇದೇವರ ದೇವಸ್ಥಾನಗಳು ಹಾಲುಮತ ಕುರುಬ ಹೆಗ್ಗಡೆಗಳಿಗೆ ಸೇರಿದ್ದೆಂದು ನ್ಯಾಯಾಲಯಗಳು ತೀರ್ಪು ನೀಡಿವೆ. ಇದಕ್ಕೆ ಶೆಟ್ಟಿಹಳ್ಳಿ-ಹೊಸೂರು ದೊಡ್ಡಿಯ ಶ್ರೀ ದೊಡ್ಡ ಬೀರೇಶ್ವರ ದೇವಸ್ಥಾನ ಮತ್ತು ಮದ್ದೂರು ತಾಲ್ಲೂಕಿನ ಹೊಸ್ಕರೆ ಗ್ರಾಮದ ಶ್ರೀ ಬೀರೇಶ್ವರ ದೇವಸ್ಥಾನದ ದೃಷ್ಟಾಂತಗಳಿವೆ.

ಇತ್ತೀಚೆಗೆ ತಮ್ಮ ಬೀರೇದೇವರ ದೇವಸ್ಥಾನಗಳನ್ನು ಹೆಚ್ಚು Mass Appeal ಇರುವಂತೆ ರೂಪಿಸುವ ಪ್ರಯತ್ನ ನಡೆದಿದೆ. ಇದಕ್ಕೂ ಶೆಟ್ಟಿಹಳ್ಳಿ-ಹೊಸೂರು ದೊಡ್ಡಿಯ ಶ್ರೀ ದೊಡ್ಡ ಬೀರೇಶ್ವರ ದೇವಸ್ಥಾನದಲ್ಲಿ ನಾಲ್ಕು ಅಡಿಗಳ ಎತ್ತರದ ಗಣಪತಿ ಮತ್ತು ಪಾರ್ವತಿ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. ಈ ವಿಗ್ರಹಗಳು ಒಕ್ಕಲಿಗ ಜನಾಂಗದ ಭಕ್ತರು ಪ್ರಾಯೋಜಿಸಿದ್ದಾರೆ.

ಹೆಗ್ಗಡೆಗಳ ಬೀರೇದೇವರ ದೇವಸ್ಥಾನಗಳಲ್ಲಿ ಯಾವುದೇ ಧಾರ್ಮಿಕ ಆಚರಣೆಯು ಇದುವರೆಗೂ, ವ್ಯಾಪಾರೀಕರಣಕ್ಕೊಳಗಾಗಿಲ್ಲ. ನೇರವಾದ ಸರಳ ಪೂಜಾ ವಿಧಾನಗಳಿವೆ. ಬೀರೇದೇವರಾಗಲಿ, ಅದರ ಪೂಜಾರಿಗಳಾದ ಕುರುಬರೊಡೆಯರಾಗಲಿ ಬ್ರಾಹ್ಮಣೀಕರಣಕ್ಕೊಳಪಟ್ಟಿಲ್ಲ. ಹೀಗಾಗಿ ವಿವಿಧ ತೆರನಾದ ಅರ್ಚನೆಗಳಿಲ್ಲ. ಭಕ್ತರಿಗೆ ಶುಲ್ಕಗಳ ಕಾಟವಿಲ್ಲ. ಬೀರೇದೇವರ ದೇವಸ್ಥಾನಗಳಿಗೆ ಆದಾಯವಿಲ್ಲ. ಭಕ್ತರು ಸರ್ವೇ ಸಾಮಾನ್ಯವಾಗಿ ಬೆಲ್ಲ, ಅಕ್ಕಿ, ತೆಂಗಿನ ಕಾಯಿಯನ್ನು ಕಾಣಿಕೆಯಾಗಿ ದೇವರಿಗೆ ಅರ್ಪಿಸುತ್ತಾರೆ. ಈ ಕಾಣಿಕೆ ೧/೩ನೆಯ ಭಾಗವನ್ನು ಬಳಸಿ ಪ್ರಸಾದವನ್ನು ಒಡೆಯರುಗಳು ಸಿದ್ಧಪಡಿಸುತ್ತಾರೆ. ಈ ಪ್ರಸಾದವನ್ನು ಭಕ್ತರಿಗೂ ವಿತರಿಸಲಾಗುವುದು. ಪ್ರತಿ ಬೀರೇದೇವರ ದೇವಸ್ಥಾನದಲ್ಲೂ ಒಂದು ಅಡುಗೆ ಮನೆ ಮತ್ತು ಕುಡಿಯುವ ನೀರಿಗೆಂದು ಭಾವಿಯನ್ನು ನಿರ್ಮಿಸಲಾಗಿದೆ. ಬೀರೇದೇವರ ದೇವಸ್ಥಾನಗಳನ್ನು ದ್ರಾವಿಡ ಶೈಲಿಯಲ್ಲಿ ರಚಿಸಲಾಗಿದೆ. ಗರ್ಭಗುಡಿಯ ನಂತರ ಸುಖನಾಸಿಯಿದೆ. ಇಲ್ಲಿ ದೊಡ್ಡದಾದ ಡೊಳ್ಳು ಇದೆ. ಅದನ್ನು ಮಹಾಮಂಗಳಾರತಿ ಸಮಯದಲ್ಲಿ ಬಾರಿಸಲಾಗುವುದು. ಭಕ್ತರು ಸುಖನಾಸಿಯಲ್ಲಿ ನಿಂತು ದೇವರು ದರ್ಶನ ಪಡೆಯಬಹುದು. ದೇವಸ್ಥಾನದ ಸುತ್ತ ದೇಗುಲದ ಗೋಡೆಗಳ ಮೇಲೆ ಯಾವುದೇ ಶಿಲ್ಪಗಳಿಲ್ಲ. ಹೊರ ಆವರಣದೊಳಗೆ ಕಲ್ಲಿನ ಮಂಟಪಗಳಿವೆ. ಅದರಲ್ಲಿ ಕೆಲವೊಮ್ಮೆ ಭಕ್ತರು ತಂಗುವರು. ಈ ದೇವಸ್ಥಾನಗಳು ೧೦೦ ವರ್ಷಗಳ ಹಿಂದೆ ತೆಲುಗು ಮತ್ತು ತಮಿಳುನಾಡಿನ ಶಿಲ್ಪಿಗಳು ಮತ್ತು ಕಾರ್ಮಿಕರನ್ನು ಬಳಸಿ ನಿರ್ಮಿಸಲಾಗಿದೆ. ಈ ಕುರಿತು ಗುತ್ತಿಗೆ ಕರಾರಿನ ಪತ್ರಗಳು ದೇವಸ್ಥಾನಗಳ ಹೆಗ್ಗಡೆಗಳಲ್ಲಿ ದೊರಕುತ್ತವೆ.

ರಾಮನಗರ ಪಟ್ಟಣಕ್ಕೆ ೧೦ ಕಿ.ಮೀ. ದೂರದಲ್ಲಿ ಕನಕಪುರದ ಕಡೆಗೆ ರೇವಣಸಿದ್ದೇಶ್ವರ ಬೆಟ್ಟವಿದೆ. ಅಲ್ಲಿ ದೊಡ್ಡಯ್ಯನ-ಅಂದರೆ ರೇವಣಸಿದ್ಧೇಶ್ವರ ದೇವಸ್ಥಾನವಿದೆ. ಇಲ್ಲಿಗೆ ರಾಮನಗರ ಮತ್ತು ಮಂಡ್ಯ ಜಿಲ್ಲೆಗಳ ಹಾಲುಮತ ಹೆಗ್ಗಡೆಗಳು ನಡೆದುಕೊಳ್ಳುವರು. ಈ ರೇವಣಸಿದ್ಧೇಶ್ವರ ದೇವಸ್ಥಾನದಲ್ಲಿ ವೀರಶೈವ ಅರ್ಚಕರಿದ್ದಾರೆ. ಅಲ್ಲೊಂದು ವೀರಶೈವ ಮಠವೂ ಇದೆ. ಈ ಮಠವು ಕುರುಬ ಒಡೆಯರುಗಳಿಂದ -ಪ್ರಾಯಶಃ ರೇವಣಸಿದ್ಧೇಶ್ವರರಿಂದಲೇ ಪ್ರಾರಂಭಿಸಲ್ಪಟ್ಟು-ನೂರಾರು ವರ್ಷಗಳ ಅಂತರದಲ್ಲಿ-ಅವರು ವೀರಶೈವರೊಂದಿಗೆ ಲಿಂಗಧಾರಣೆ ಕಾರಣದಿಂದ ಗುರುತಿಸಿಕೊಂಡರು. ಹೀಗಾಗಿ ಕುರುಬರ ಅನೇಕ ರೇವಣಸಿದ್ದೇಶ್ವರ ಮಠಗಳು

ಬಾಳೆಹೊನ್ನೂರಿನ ಪೀಠದಂತೆ ವೀರಶೈವರಿಗೆ ಸೇರಿ ಹೋಗಿವೆ. ಹೆಗ್ಗಡೆಗಳ ಬೀರೇದೇವರ ದೇವಸ್ಥಾನಗಳಿಗೆ ಬಾಳೆಹೊನ್ನೂರಿನ ರೇಣುಕಾಚಾರ್ಯ ಪೀಠದ ಗುರುಗಳು ಭೇಟಿ ಕೊಟ್ಟು ಹಾಲುಮತ ಹೆಗ್ಗಡೆಗಳಿಂದ ಕಾಣಿಕೆ ಸಂಗ್ರಹಿಸುತ್ತಿದ್ದುದುಂಟು. ಈ ಕುರಿತ ದಾಖಲೆಗಳು ಹೊಸೂರು ಶ್ರೀ ದೊಡ್ಡ ಬೀರೇಶ್ವರ ದೇವಸ್ಥಾನದ ಶ್ರೀ ರೇವಣ ಒಡೆಯರ್ ಅವರಲ್ಲಿರುವುದಾಗಿ ತಿಳಿದುಬಂದಿದೆ.

**ಶಿಕ್ಷಣ ಮತ್ತು ಆಧುನೀಕರಣ**

ತೀರಾ ಇತ್ತೀಚಿನವರೆಗೆ ಹೆಗ್ಗಡೆಗಳು ಬಹುತೇಕವಾಗಿ ಅನಕ್ಷರಸ್ಥರು. ಕಳೆದೆರಡು ದಶಕಗಳಲ್ಲಷ್ಟೇ ಹೆಗ್ಗಡೆಗಳ ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ. ಈ ಹೆಗ್ಗಡೆಗಳು-ಅಂದರೆ ಗುರುವಾರದ ಕುರುಬರು-ಶೈಕ್ಷಣಿಕವಾಗಿ ಹಿಂದುಳಿದವರು. ಈ ಕುರಿತ ಕೆಲವು ಮುಖ್ಯಾಂಶಗಳು ಹೀಗಿವೆ:

೧. ಶಾಲೆ ತೊರೆಯುವವರ ಸಂಖ್ಯೆ ಹೆಚ್ಚು. ಈ ಪೈಕಿ ಹೆಣ್ಣು ಮಕ್ಕಳೇ ಅಧಿಕ.

೨. ಉನ್ನತ ಶಿಕ್ಷಣ-ಸಾಮಾನ್ಯ, ವೈದ್ಯಕೀಯ, ಎಂಜಿನಿಯರಿಂಗ್ ಮತ್ತು ಇತರೆ ವೃತ್ತಿಪರ ಶಿಕ್ಷಣ ಪಡೆಯುತ್ತಿರುವವರ ಸಂಖ್ಯೆ ಇರುವರೆಗೂ ಬೆರಳೆಣಿಕೆಯಷ್ಟಿದೆ.

ಗುರುವಾರದ ಕುರುಬರು ಶಿಕ್ಷಣ ಮತ್ತು ಆಧುನಿಕತೆ ಮತ್ತು ನರಗೀಕರಣದ ಕುರಿತು ವಿಶೇಷ ಒಲವನ್ನೇನೂ ಹೊಂದಿಲ್ಲ. ಇವರಲ್ಲಿ ಬಹುಸಂಖ್ಯಾತರು ಸಣ್ಣ ಮತ್ತು ಅತಿ ಸಣ್ಣ ರೈತರು; ಭೂರಹಿತ ಕೃಷಿ ಕಾರ್ಮಿಕರು ಶೈಕ್ಷಣಿಕ ಹಿಂದುಳಿಯುವಿಕೆಯಿಂದಾಗಿ ಸರ್ಕಾರಿ ನೌಕರಿಗಳಲ್ಲಿ ಈ ಹೆಗ್ಗಡೆಗಳ ಪ್ರಾತಿನಿಧ್ಯ ನಗಣ್ಯವೆನ್ನುವಂತಿದೆ. ಹೆಗ್ಗಡೆಗಳು ಆರ್ಥಿಕವಾಗಿ ಕೂಡಾ ಹಿಂದುಳಿದವರೇ. ಹೀಗಾಗಿ ಬಂಡವಾಳದ ಕೊರತೆ ಇದೆ. ಆದ್ದರಿಂದ ಹೆಗ್ಗಡೆಗಳಲ್ಲಿ ವಾಣಿದ್ಯೋದ್ದಿಮೆಗಳ ಮಾಲೀಕರಿಲ್ಲ. ಇತರೆಲ್ಲಾ ಶೂದ್ರಾತಿಶೂದ್ರರಂತೆ ವೃದ್ಧಾಪ್ಯದಲ್ಲಿರುವವರಿಗೆ, ಕಡುಬಡವರಿಗೆ ಸರ್ಕಾರದ ಸಾಮಾಜಿಕ ನೆರವಿನ ಅಗತ್ಯವಿದೆ. ಹೆಗ್ಗಡೆಗಳು ಇಂದು ಕಂಬಳಿ ನೇಯುವುದನ್ನು ತೆರೆದಿದ್ದಾರೆ. ಕುರಿಪಾಲನೆ ಮತ್ತು ಕೃಷಿ ಹೆಗ್ಗಡೆಗಳ ಮುಖ್ಯ ಜೀವ.

**ಮಹಿಳಾ ಸ್ಥಾನಮಾನ**

ಹೆಗ್ಗಡೆಗಳು ಪಿತೃಪ್ರಧಾನ ಸಾಮಾಜಿಕ ವ್ಯವಸ್ಥೆ ಹೊಂದಿದ್ದಾರೆ. ಆದ್ದರಿಂದ ಹೆಣ್ಣು ಮಕ್ಕಳಿಗೆ ಹೆಗ್ಗಡೆಗಳು ಸಮಾನ ಹಕ್ಕುಗಳನ್ನೇನೂ ನೀಡುವುದಿಲ್ಲ. ಈ ವರ್ಗದ ಹೆಂಗಸರು ಶಿಕ್ಷಣ ವಂಚಿತರು. ಬೆರಳೆಣಿಕೆಯಷ್ಟು ಪದವೀಧರೆಯರು ಕಳೆದ ದಶಕದಿಂದ ಕಾಣಸಿಗುವರು. ಮೀಸಲಾತಿಯು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಸ್ವಲ್ಪಮಟ್ಟಿಗೆ ನೆರವಾಗಿದೆ.

ಇತರೆ ಗ್ರಾಮೀಣ ಜಾತಿಗಳ ಹೆಂಗಸರಂತೆ ಹೆಗ್ಗಡೆಗಳ ಹೆಂಗಸರೂ ತಮ್ಮದೇ ಮಹಿಳಾ ಸ್ವ-ಸಹಾಯ ಸಂಘಗಳನ್ನು ರಚಿಸಿಕೊಳ್ಳುತ್ತಿದ್ದಾರೆ. ಬಡ ಮಹಿಳೆಯರು ಬಡ ಕೃಷಿ ಕಾರ್ಮಿಕರಾಗಿ, ಬೀಡಿ, ಅಗರಬತ್ತಿ ಕೈಗಾರಿಕೆಗಳಲ್ಲಿ, ತರಕಾರಿ, ಹೂ ಮಾರಾಟಗಾರರಾಗಿ ಕೂಡಾ ದುಡಿಯುತ್ತಿದ್ದಾರೆ. ರಾಮನಗರ ಜಿಲ್ಲೆಯಲ್ಲಿ ಕೆಲವು ಹೆಂಗಸರು ಸಿಲ್ಕ್ ಫಿಲೇಚರ್‌ಗಳಲ್ಲೂ ದುಡಿಯುತ್ತಿದ್ದಾರೆ. ಹೆಗ್ಗಡೆಗಳ ಸಮಾಜದಲ್ಲಿ ಮಹಿಳಾ ಸಬಲೀಕರಣಕ್ಕೆ ಪೂರಕವಾದ ವಾತಾವರಣವಿಲ್ಲ. ಹೆಗ್ಗಡೆಗಳದ್ದೊಂದು ಅತ್ಯಂತ ಹಿಂದುಳಿದ ಸಮಾಜವಾಗಿದೆ. ಇವರು ಕುರುಬರೊಳಗೆ ಬಡವರೇ ಸರಿ.

# ೧೧. ಗೊಂಡ ಕುರುಬರು

ಹಾಲಿನ ಮೂಲದ ಸಮುದಾಯಗಳು ಹಾಲುಮತವಾಗಿದ್ದರೆ, ನೀರಿನ ಮೂಲಕ ಸಮುದಾಯಗಳು ನೀರುಮತ ಅಥವಾ ಗಂಗಾಮತವಾಗಿರುವವು. ವಿಶ್ವದ ಜೀವಜಗತ್ತು ಬದುಕಿಗಾಗಿ ಹಾಲು ಮತ್ತು ನೀರನ್ನೇ ಅವಲಂಬಿಸಿವೆ. ಹೀಗಾಗಿ ಹಾಲು ಮತ್ತು ನೀರಿನ ಮತಗಳು ವಿಶ್ವಮತಗಳಾಗುವವು. ಇವು ಪ್ರಕೃತಿಜನ್ಯ ಮತಗಳು. ಹಾಲು ಮತ್ತು ನೀರಿಗೆ ಅವಿನಾಭಾವ ಸಂಬಂಧವಿರುವುದು. ಹಾಲನ್ನು ಕಾಯಿಸಿ ನೀರನ್ನು ಹಾಲಿನಿಂದ ಬೇರ್ಪಡಿಸಿದ್ದಾಗ ಹಾಲು ಉಕ್ಕುವುದು. ಅದಕ್ಕೆ ನೀರು ಬೆರೆಸಿದಾಗ ಅದು ಶಾಂತವಾಗುವುದು. ಹಾಲು ನೀರಿನ ಹಿನ್ನೆಲೆಯ ಮತಗಳು ಕರ್ನಾಟಕದಲ್ಲಿ ಕಾಣಸಿಗುವವು. ಅವೇ ಹಾಲುಮತ ಮತ್ತು ಗಂಗಾಮತಗಳು. ಹಾಲುಮತವನ್ನು ಕುರುಬ, ಕುರುಮನ್ಸ, ಕಾಡುಕುರುಬ, ಜೇನುಕುರುಬ, ಕಾಟ್ಟುನಾಯಕನ್, ಗೊಂಡ ಮತ್ತು ರಾಜಗೊಂಡ ಇತ್ಯಾದಿ ಬುಡಕಟ್ಟುಗಳು ಹಾಗೂ ಕುರುಬ ಸಮುದಾಯದ ಕಳ್ಳುಬಳ್ಳಿಯ ಸಮುದಾಯಗಳು ತಮ್ಮ ಮತವೆಂದು ನಂಬಿ ನಡೆದುಕೊಳ್ಳುವವು. ಇದು ಕುರಿ, ಆಡು, ದನ, ಎಮ್ಮೆ ಸಾಕಾಣಿಕೆ ದಾರರ ಮತ. ಕುರುಬ ಜನಾಂಗದ ಮೂಲವೆಂದರೆ ಮಾನಪ ಜನಾಂಗದ ಮೂಲವೆಂದೇ ಹೇಳಬೇಕಾಗುತ್ತದೆ. ಬೇಟೆಗಾರಿಕೆಯಿಂದ ಕವಲೊಡೆದ ಪಶುಪಾಲಕರೇ ಕುರುಬರ ಮೂಲಿಗರು. ಇವರೇ ಹಾಲುಮತದ ಸ್ಥಾಪಕರು.

ಕುರಿ, ಕುರುಬ, ಧನಗರ ಹಟ್ಟಿಕಾರ, ಕುಡಿಒಕ್ಕಲಿಗ, ಸುಮಾಲಿ, ಹಿಡಿಂಬಿ ರಾಕ್ಷಸ, ವೀರಗೊಲ್ಲಾಳ, ಬೀರೇಶ್ವರ, ಉಣ್ಣೆಕಂಕಣ, ಹತ್ತಿಕಂಕಣ, ಕಕ್ಕರ ಕಂಕಣ ಇತ್ಯಾದಿಗಳನ್ನು ಬ್ರಹ್ಮಾಂಡ ಪುರಾಣದಲ್ಲಿ ಪ್ರಸ್ತಾಪಿಸಲಾಗಿದೆ. ಇದರಲ್ಲಿ ಹಳೆಯ ಹಾಗೂ ಹೊಸ ಶಗಳೆಲ್ಲವೂ ಮೇಳೈಸಿಕೊಂಡಿವೆ. ಇಲ್ಲಿಯ ರಾಕ್ಷಸರೆಂದರೆ ಬುಡಕಟ್ಟಿನವರೆಂದರ್ಥ. ಕರ್ನಾಟಕ ರಾಜ್ಯದ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿರುವ ಹಾಲುಮತ ಹಿನ್ನೆಲೆಯ ಗೊಂಡ, ರಾಜಗೊಂಡ ಮತ್ತು ಕುರುಬ ಬುಡಕಟ್ಟುಗಳ ಪರಿಚಯ ಇಲ್ಲಿದೆ.

### ೧. ಗೊಂಡ (GOND)

ಭಾರತದ ಬುಡಕಟ್ಟುಗಳಲ್ಲಿ ಅತ್ಯಧಿಕ ಸಂಖ್ಯೆಯಲ್ಲಿರುವವರೇ ಗೊಂಡರು. ವಿಂಧ್ಯ ಸಾತಪುರ ಪರ್ವತ ಶ್ರೇಣಿಯಿಂದ ಗೋದಾವರಿ ಜಲಾನಯನ ಭೂ ಪ್ರದೇಶದವರೆಗೆ, ಉತ್ತರ ಪ್ರದೇಶ ಮತ್ತು ಬಿಹಾರದಿಂದ ಆಂಧ್ರಪ್ರದೇಶ, ಕರ್ನಾಟಕದವರೆಗೆ ಮತ್ತು ಮಹಾರಾಷ್ಟ್ರದಿಂದ ಓರಿಸ್ಸಾದವರೆಗೆ ಇವರು ಪಸರಿಸಿಕೊಂಡಿದ್ದಾರೆ. ಇವರು ಆಳಿದ ೫೨ ಕೋಟೆಗಳು ಇತಿಹಾಸ ಸಾಕ್ಷಿಯಾಗಿರುವವು. ದ್ರಾವಿಡ ಮೂಲದ ಗೊಂಡಿ ಇವರ ಮಾತೃಭಾಷೆಯಾಗಿರುವುದು. ಅಲ್ಲದೆ ಹಿಂದಿ, ಮರಾಠಿ, ಕನ್ನಡ, ತೆಲುಗು ಇತ್ಯಾದಿ ಪ್ರಾದೇಶಿಕ ಭಾಷೆಗಳನ್ನು ಬಳಸುವರು. **ಗೊಂಡವಾನಾ** ಇವರ ಹೃದಯ ಸ್ಥಾನವಾಗಿರುವುದು. ಇವರಲ್ಲಿ ೫೦ ಕ್ಕೂ ಹೆಚ್ಚಿನ ಉಪ ಪಂಗಡಗಳಿವೆ. ೨೦೦೧ ರ ಜನಗಣತಿಯ ಪ್ರಕಾರ ಭಾರತದಲ್ಲಿ ಇವರು ಜನಸಂಖ್ಯೆ ೧,೧೩,೪೪,೭೨೯ ಮತ್ತು ಕರ್ನಾಟಕದಲ್ಲಿ ೧,೩೭,೭೦೦ ಇರುವುದಾಗಿ ದಾಖಲಾಗಿದೆ. ಇದರಲ್ಲಿಯೂ ಒಂದು ಪಂಗಡ ಕರ್ನಾಟಕದಲ್ಲಿ ಹಾಲುಮತದ ಹುಟ್ಟಿಗೆ ಕಾರಣವಾಗಿರುವುದಾಗಿ ಹಾಲುಮತ ಪುರಾಣ ಧ್ವನಿಸುತ್ತದೆ. ಬೀದರಿನ ಮೂಲ ನಿವಾಸಿಗಳು ಗೊಂಡರು. ಇವರು ದ್ರಾವಿಡ ಮೂಲದವರು. ಇವರಿಗೆ ಧನಗರ ಮತ್ತು ಕುರುಬ ಎಂಬ ಹೆಸರುಗಳಿಂದಲೂ ಪರಿಚಯಿಸಲಾಗುವುದು. ಉತ್ತರ ಕನ್ನಡ ಜಿಲ್ಲೆಯ ಗೊಂಡರು ಒಕ್ಕಲಿಗೆ ಸಮುದಾಯಕ್ಕೆ ಹತ್ತಿರದವರಂತೆ ಕಂಡು ಬರುವ ಇನ್ನೊಂದು ಪಂಗಡ.

'ಗೊಂಡ' ಶಬ್ದವು ತೆಲುಗು ಭಾಷೆಯ 'ಕೊಂಡ' ಎಂಬ ಪದದಿಂದ ಬಂದುದೆಂದು ಭಾಷಾ ವಿಜ್ಞಾನಿಗಳ ಅಭಿಪ್ರಾಯ. 'ಕೊಂಡ' ಎಂದರೆ ತೆಲುಗು ಭಾಷೆಯಲ್ಲಿ ಗುಡ್ಡ ಅಥವಾ ಬೆಟ್ಟ (ಪರ್ವತ) ಎಂದು ಅರ್ಥ. ಕಾಲಕ್ರಮೇಣ 'ಕ' ಕಾರ ಘೋಷ ಧ್ವನಿಯಾಗಿ 'ಗ' ಕಾರವಾಗಿ 'ಗೊಂಡ' ಎಂದು ರೂಪಾಂತರ ಹೊಂದಿರಬೇಕೆಂಬುದು ಹಿಸ್ಲೋಪರ ವಾದವಾಗಿದೆ (ರಸೇಲ್ ಆರ್.ವಿ., ೧೯೭೫: ४೨-४३)

ಜನರಲ್ ಕನ್ನಿಂಗ್ ಹ್ಯಾಮರು 'ಗೊಂಡ' ಪದವು 'ಗೌಡ' ಎಂಬ ಶಬ್ದದಿಂದ ಉತ್ಪನ್ನವಾಗಿ ಅದು ಗೌರ> ಗೋದ> ಕೋದಗಳಾಗಿ ಪರಿವರ್ತನೆ ಹೊಂದಿ ಅನಂತರ 'ಗೊಂಡ' ಆಯಿತೆಂದು ಹೇಳುತ್ತಾರೆ. (ನಾಯಕ, ಹಾ.ಮಾ. : ೧೯೭೩: ೫೨೮-೯).

'ಗೊಂಡ' ಎಂಬ ಪದವು 'ಗೋ' ಮತ್ತು 'ಅಂಡ' ಎಂಬ ಎರಡು ಶಬ್ದಗಳಿಂದ ಕೂಡಿದೆ 'ಗೋ' ಎಂದರೆ 'ಭೂಮಿ' ಮತ್ತು 'ಅಂಡ' ಎಂದರೆ 'ಪುತ್ರ' ಎಂದರ್ಥ, 'ಗೊಂಡ ಪದದ ಅರ್ಥ ಭೂಮಿಯ ಪುತ್ರ ಎಂದಾಗುತ್ತದೆ (ವಿಠಲಸಿಂಹ ಧುರ್ವೆ: ೧೯೯೦:೭)

ತಜ್ಞರ ವಾದಗಳಾಗಲಿ ಅಥವಾ ಅಭಿಪ್ರಾಯಗಳಾಗಲಿ ಸತ್ಯವೆಂದು ಅಲ್ಲಗಳೆಯುವಂತಿಲ್ಲ. 'ಗೊಂಡ' ಪದವು ಮೂಲತಃ ಬೆಟ್ಟ, ಗುಡ್ಡ ಪ್ರದೇಶವಾಚಕವಾಗಿ ನಂತರ ಜನಾಂಗವಾಚಕರಾಗಿರುವುದು ಕಂಡು ಬರುವುದು.

ಮೂಲವಾಗಿ ಗೊಂಡ ಪದದ ಉದಯವು ಕನ್ನಡ ಭಾಷೆಯ ಜನಾಂಗದಿಂದಾಗಿರುವ ಸಾಧ್ಯತೆಗಳಿವೆ ಅದು 'ಗೋ' ಮತ್ತು 'ಅಂಡ' ಎಂಬ ನುಡಿಗಟ್ಟಿನಿಂದಾಗಿ ಸೃಷ್ಠಿ, ಸ್ಥಿತಿಲಯಗಳ ಪ್ರತೀಕ ಹಾಗೂ ಪ್ರತ್ಯಯವಾಗಿ ಬಳಕೆಯಾಗುವುದು.

ಗೊಂಡ ಪದದ ಒಳಾರ್ಥವನ್ನು ಒಡೆದು ನೋಡಿದಾಗ ಅದರ ಅರ್ಥ ಸ್ಪಷ್ಟವಾಗುವುದು. ಅದರ ಮೂಲ 'ಗೋ+ಅ' ಎಂಬೆರಡಕ್ಷರಗಳಿಂದ ಉಂಟಾಗಿರಬಹುದು. ಕನ್ನಡ ನಿಘಂಟುಗಳಲ್ಲಿ 'ಗೋ' ಎಂದರೆ ಗೋವು, ಭೂಮಿ, ಬೆಟ್ಟ ಮತ್ತು 'ಅ' ಅಂದರೆ ಅಜ (ಆಡು ಅಥವಾ ಮೇಕೆ, ಮೇಷ ಅಥವಾ ಕುರಿ) ಎಂಬರ್ಥಗಳೂ ಇವೆ. ಗೋವು (ದನ)ಗಳ ಪಾಲಕರು ಗೋಪಾಲಕರು ಅಥವಾ ದ(ಧ)ನಗಾರರಾದರೆ; ಅಜ(ಕುರಿ)ಗಳ ಪಾಲಕರು ಅಜಪಾಲಕರು ಅಥವಾ ಕುರಿಗಾರರು ಆಗಿರುವರು. ಕುರಿಗಾರರು, ದ(ಧ)ನಗಾರರು ಬೇರೆಯಲ್ಲ. ಅವರು ಮೂಲತಃ ಪಶುಪಾಲಕರೆಂದರ್ಥ. 'ಗೋ' ಎಂದರೆ 'ಭೂಮಿ' ಅದರಂತೆ 'ಕುರು' ಎಂದರೂ ಭೂವಿಶೇಷ. ಆದುದರಿಂದ ಗೋಪನೆಂದರೆ ಭೂಪತಿ ಕುರು(ಂ) ಬನೆಂದರೂ ಭೂಪ" (ಜೋಶಿ, ಶಂ. ಬಾ: ೧೯೭೭:೩೧).

'ಗೋ' ಎಂದರೆ 'ಭೂಮಿ' ಅದು ಗೋಲಾಕಾರವಾಗಿದೆ. 'ಅ' ಎಂದರೆ 'ಆಡು' ಅಥವಾ 'ಕುರಿ' ಅವುಗಳ ಹಿಕ್ಕೆಯು ಗೋಲ(ಅಂಡ) ಆಕಾರವಾಗಿದ್ದು ಭೂಮಿಯ ಪ್ರತಿ ರೂಪವಾಗಿದೆ. ಹೀಗೆ ಗೋ+ ಅಂಡ> ಗೊಂಡ ಎಂದು, ವಿಕಸಿಸಿರಲು ಸಾಧ್ಯತೆಗಳಿವೆ.

'ಗೊಂಡಾರಣ್ಯ' ಈ ಪದದಲ್ಲಿ ಭಿನ್ನ ಭಾಷೆಯ ಎರಡು ಶಬ್ದಗಳಿವೆ. ಅವು ಗೊಂಡ ಮತ್ತು ಅರಣ್ಯ. ಒಂದು ದೇಶಿಯ ನುಡಿ. ಇನ್ನೊಂದು ಸಂಸ್ಕೃತ ಪದ, "ಗೊಂಡಾರಣ್ಯ" ಎಂಬೀ ಬಗೆಯ ಪದ. ಪ್ರಯೋಗವು ಇವೆರಡೂ ಜನ ಒಗ್ಗಿಕೊಂಡು ಒಡಗೂಡಿ ಬಾಳತೊಡಗಿದುದರ ಸಂಕೇತವಾಗಿದೆ.

ಗೊಂಡರು ಗೊಂಡಾರಣ್ಯದ ಮೂಲನಿವಾಸಿಗಳು. ಪೃಥ್ವಿಯ ೫ ಖಂಡಗಳಿವೆ ಗೊಂಡ್ವಾನಾ ಖಂಡಗಳೆಂದು ಪರಿಚಯಿಸುವರು. ಅವು:೧. ಏಷ್ಯಾ(ಭಾರತ), ೨. ಆಫ್ರಿಕಾ, ೩. ದಕ್ಷಿಣ ಅಮೇರಿಕ, ೪. ಅಂಟಾಟಿಕಾ ಮತ್ತು ೫. ಆಸ್ಟ್ರೇಲಿಯ. ಗೊಂಡ್ವಾನದ ಆದಿಜನಾಂಗವೂ ಗೊಂಡರು. ಇವರು ಬೇಟೆಗಾರಿಕೆ, ಪಶುಪಾಲನೆಯಿಂದ ನಿಧಾನವಾಗಿ ಕೃಷಿಯತ್ತ ಕೂಡಿಕೊಳ್ಳುತ್ತಿದ್ದಾರೆ.

ಗೊಂಡರ ಹುಟ್ಟಿನ ಬಗ್ಗೆ ಹಲವಾರು ಐತಿಹ್ಯಗಳು, ಪೌರಾಣಿಕ ಮತ್ತು ದಂತಕಥೆಗಳಿವೆ. ಅವುಗಳಲ್ಲೊಂದು ಹೀಗಿದೆ: "ಮುದ್ದುಗೊಂಡ ಮುದ್ದಮ್ಮಳಿಂದ ಗೊಂಡ ಜನಾಂಗ ಹುಟ್ಟುವುದು. ಆದಿಗೊಂಡನು ಮುದ್ದುಗೊಂಡನ ಮಗ. ಆದಿಗೊಂಡನ ಹೆಂಡತಿ ಆದಮ್ಮ. ಅವರ ಪುತ್ರರಾದ ಅಮರಗೊಂಡ, ಶಿವಗೊಂಡ, ಬೆಟ್ಟದ ಬೀರುಗೊಂಡ" (ಚನ್ನಮಲ್ಲಿಕಾರ್ಜುನ:೧೯೫೮: ೩೫೭). ಇವರ ವಂಶಜರೆಗೊಂಡರೆಂದು ಹಾಲ್ಮತ ಪುರಾಣದಲ್ಲಿ ಉಲ್ಲೇಖಗೊಂಡಿದೆ. ಹೀಗೆ 'ಗೊಂಡ' ಪದ ಪ್ರತ್ಯಯಗೊಂಡ ಹೆಸರುಗಳುಳ್ಳ ಸಾಂಪ್ರದಾಯಿಕ ಪಶುಪಾಲಕರೇ 'ಗೊಂಡ' ಜನಾಂಗವೆಂದು ಸ್ಪಷ್ಟವಾಗುವುದು.

"ಗೊಂಡರು ಬುಡಕಟ್ಟಿನವರು. ಅವರು ಸಾಮಾನ್ಯವಾಗಿ ಬೀದರ್, ಗುಲಬರ್ಗಾ, ರಾಯಚೂರು ಜಿಲ್ಲೆಗಳಲ್ಲಿ ವಾಸಿಸುವರು. ವಾಸ್ತವದಲ್ಲಿ ಅವರು ಆಂಧ್ರಪ್ರದೇಶ, ಮಧ್ಯಪ್ರದೇಶ, ಮಹಾರಾಷ್ಟ್ರ ಹಾಗೂ ಕರ್ನಾಟಕದಲ್ಲಿ ಕಂಡುಬರುವರು. ಇಂದಿಗೂ ಇವರಲ್ಲಿ ಖಡಗೊಂಡ, ಬೀರಗೊಂಡ, ತುಳಜಗೊಂಡ, ಶಿವಗೊಂಡ, ಶಣಗೊಂಡ ಎಂಬೀ ಗೊಂಡ ಪದ ಪ್ರತ್ಯಯಗೊಳ್ಳುವ ಹೆಸರುಗಳು ಕಂಡುಬರುತ್ತವೆ. ಇವರ ಹಲವಾರು ಸಂಪ್ರದಾಯಗಳು ಹಾಗೂ ಹವ್ಯಾಸಗಳು ಕುರುಬ ಸಮುದಾಯಕ್ಕೆ ಹೋಲಿಕೆಯಾಗುತ್ತವೆ" (ಡಾ.ಶಶಿ.ಎಸ್.ಎಸ್.

೧೯೭೮:೬೧). ಗೊಂಡರ ಪೌರಾಣಿಕ ಅಂಶಗಳಿಗೆ ಪ್ರಸಿದ್ಧ ಸಮಾಜಶಾಸ್ತ್ರಜ್ಞ ಡಾ. ಎಸ್.ಎಸ್. ಶಶಿಯವರ ಸಂಶೋಧಿತ ಅಂಶಗಳು ಪುಷ್ಠಿ ನೀಡುತ್ತವೆ.

ಗೊಂಡ ಹೆಸರಿನ ಸ್ಥಳನಾಮಗಳು: ಗೊಂಡ ಹೆಸರಿನ ಸ್ಥಳನಾಮಗಳು ದಕ್ಷಿಣ ಭಾರತದಲ್ಲಿ ಹೇರಳವಾಗಿರುವುದು. ಅದರಲ್ಲೂ ಕರ್ನಾಟಕದಲ್ಲಿ ಸುಮಾರು ೩೦೦ಕ್ಕೂ ಹೆಚ್ಚಿನ ಸ್ಥಳನಾಮಗಳು ಗೊಂಡ, ರಾಜಗೊಂಡ, ಲಾಲಗೊಂಡ, ಎಡೆಗಳನ್ನು ಹೊಂದಿವೆ. ಉದಾ: ಆಡಗೊಂಡನಹಳ್ಳಿ, ಆದಿಗೊಂಡನಹಳ್ಳಿ, ಅಜಗೊಂಡನಹಳ್ಳಿ, ಆಲಗೊಂಡನಹಳ್ಳಿ, ಅಮ್ಮಗೊಂಡನಹಳ್ಳಿ, ಅಣ್ಣಗೊಂಡನಹಳ್ಳಿ, ಅಪ್ಪಗೊಂಡನಹಳ್ಳಿ, ಬಾಚೆಗೊಂಡನಹಳ್ಳಿ, ಬಂಜಗೊಂಡನಹಳ್ಳಿ, ಬೆಟ್ಟಗೊಂಡನಹಳ್ಳಿ, ಬೀಚಗೊಂಡನಹಳ್ಳಿ, ಬೀಡುಗೊಂಡನಹಳ್ಳಿ, ಬೈರಗೊಂಡನಹಳ್ಳಿ, ಬೀರಗೊಂಡನಹಳ್ಳಿ, ಬೊಮ್ಮಗೊಂಡನಹಳ್ಳಿ, ಚೇಲಗೊಂಡನಹಳ್ಳಿ, ಚೌಡಗೊಂಡನಹಳ್ಳಿ, ಚೋರಗೊಂಡನಹಳ್ಳಿ, ದಾಸಗೊಂಡನಹಳ್ಳಿ, ದೇವಗೊಂಡನಹಳ್ಳಿ, ಗಡಿಗೊಂಡಗಾಂವ, ಗಂಗೊಂಡನಹಳ್ಳಿ, ಗೌಡಗೊಂಡನಹಳ್ಳಿ, ಗಿರಿಗೊಂಡನಹಳ್ಳಿ, ಗೊಂಡವಾನ, ಗೋಪಗೊಂಡನಹಳ್ಳಿ, ಗುಡಿಗೊಂಡನಹಳ್ಳಿ, ಹಾಲುಗೊಂಡನಹಳ್ಳಿ, ಹನುಮಗೊಂಡನಹಳ್ಳಿ, ಹರಗೊಂಡನಹಳ್ಳಿ, ಹಾರೊಗೊಂಡನಹಳ್ಳಿ, ಹಾಸಗೊಂಡನಹಳ್ಳಿ, ಗೆಹ್ಹಗೊಂಡನಹಳ್ಳಿ, ಹುಚ್ಚಗೊಂಡನಹಳ್ಳಿ, ಜಡೆಗೊಂಡನಹಳ್ಳಿ, ಕಾಡಗೊಂಡನಹಳ್ಳಿ, ಕಾಮಗೊಂಡನಹಳ್ಳಿ, ಕಾಟಗೊಂಡನಹಳ್ಳಿ, ಕೆಂಗೊಂಡನಹಳ್ಳಿ, ಕೋಲಗೊಂಡನಹಳ್ಳಿ, ಕೊಂತಗೊಂಡನಹಳ್ಳಿ, ಕೋಟಗೊಂಡನಹಳ್ಳಿ, ಕುರುಗೊಂಡ್ಯ, ಲಕ್ಷ್ಮೀಗೊಂಡನಹಳ್ಳಿ, ಲಾಲಗೊಂಡನಹಳ್ಳಿ, ಲಾಲಬಾಗ, ಲಾಳಸಂಗ, ಮಾಚಗೊಂಡನಹಳ್ಳಿ, ಮಾಯಗೊಂಡನಹಳ್ಳಿ, ಮೋಟಗೊಂಡನಹಳ್ಳಿ, ನಾಗಗೊಂಡನಹಳ್ಳಿ, ನಾರಾಯಣಗೊಂಡನಹಳ್ಳಿ, ನೆಲಗೊಂಡನಹಳ್ಳಿ, ನೀಲಗೊಂಡನಹಳ್ಳಿ, ಪರುಬಗೊಂಡನಹಳ್ಳಿ, ಪಾಯಗೊಂಡನಹಳ್ಳಿ, ರಾಚಪ್ರಗೊಂಡಗಾಂವ, ರಾಜಗೊಂಡನಹಳ್ಳಿ, ರಾಮಗೊಂಡನಹಳ್ಳಿ, ಸಂಗೊಂಡಹಳ್ಳಿ, ಶೆಟ್ಟಿಗೊಂಡನಹಳ್ಳಿ, ಸಿದ್ಧಗೊಂಡನಹಳ್ಳಿ, ಸೂರಗೊಂಡನಹಳ್ಳಿ, ತಿಪ್ಪಗೊಂಡನಹಳ್ಳಿ, ಯಾಚಗೊಂಡನಹಳ್ಳಿ, ಯಲಗೊಂಡನಹಳ್ಳಿ[೨] ಇತ್ಯಾದಿ ಈ ಸ್ಥಳನಾಮಗಳು ಕೊಂಡ, ರಾಜಗೊಂಡ, ಲಾಲಗೊಂಡರ ಸಾಂಸ್ಕೃತಿಕ ವೀರರ, ತಮ್ಮ ಪೂರ್ವಿಕರ, ಕುಲಕಸುಬುಗಳ, ದೈವಗಳ, ಮತ್ತು ಪ್ರಾಕೃತಿಕ ಅಂಶಗಳ ಹೆಸರುಗಳನ್ನು ಪ್ರತಿನಿಧಿಸುತ್ತವೆ. ದೇವನಹಳ್ಳಿ ತಾಲೂಕಿನ ಲಾಲಗೊಂಡನಹಳ್ಳಿಯು ಒಂದು ಕಾಲದಲ್ಲಿ ಲಾಳಗೊಂಡೆ ನೆಲೆ. ಇಂದು ಆ ಗ್ರಾಮದಲ್ಲಿ ಲಾಳಗೊಂಡರೊಬ್ಬರೂ ಇಲ್ಲ. ಲಾಳಗೊಂಡರೂ ಗೊಂಡರ ಕಳ್ಳುಬಳ್ಳಿಯವರೇ ಆಗಿದ್ದವರು ಬಹುಸಂಖ್ಯಾತರು ಲಿಂಗಾಯತರಾಗಿದ್ದಾರೆ.

**ಕರ್ನಾಟಕ ಗೊಂಡ, ರಾಜಗೊಂಡರ ಜಿಲ್ಲಾವಾರು ಜನಸಂಖ್ಯೆ**

| **ಕ್ರ.ಸಂ** | **ಜಿಲ್ಲೆ** | **ಒಟ್ಟು** | **ಗಂಡು** | **ಹೆಣ್ಣು** |
|---|---|---|---|---|
| ೦೧ | ಬಾಗಲಕೋಟ | ೨೨ | ೧೩ | ೯ |
| ೦೨ | ಬೆಂಗಳೂರು ಗ್ರಾಮೀಣ | ೯ | ೪ | ೫ |
| ೦೩ | ಬೆಂಗಳೂರು ನಗರ | ೧,೫೫೫ | ೮೨೪ | ೭೩೧ |
| ೦೪ | ಬಳ್ಳಾರಿ | ೬೩ | ೩೫ | ೨೮ |
| ೦೫ | ಬೆಳಗಾವಿ | ೩೦ | ೧೬ | ೧೪ |
| ೦೬ | ಬೀದರ | ೧,೧೧,೮೫೮ | ೫೭,೪೪೩ | ೫೪,೪೧೫ |
| ೦೭ | ಬಿಜಾಪುರ | ೨೦ | ೧೪ | ೬ |
| ೦೮ | ಚಾಮರಾಜನಗರ | ೪ | ೨ | ೨ |
| ೦೯ | ಚಿಕ್ಕಮಗಳೂರು | ೧೧೫ | ೫೫ | ೬೦ |
| ೧೦ | ಚಿತ್ರದುರ್ಗ | ೧ | ೧ | – |
| ೧೧ | ದಕ್ಷಿಣ ಕನ್ನಡ | ೧೧೫ | ೬೬ | ೪೯ |
| ೧೨ | ದಾವಣಗೆರೆ | ೩೭೫ | ೧೮೨ | ೧೯೩ |

| | | | | |
|---|---|---|---|---|
| ೧೩ | ಧಾರವಾಡ | ೧೭೪ | ೮೫ | ೮೯ |
| ೧೪ | ಗದಗ | ೯ | ೬ | ೩ |
| ೧೫ | ಗುಲಬರ್ಗಾ | ೧೨,೨೫೦ | ೬,೨೯೫ | ೫,೯೫೫ |
| ೧೬ | ಹಾಸನ | ೨೨೪ | ೧೧೮ | ೧೦೬ |
| ೧೭ | ಹಾವೇರಿ | ೧೧ | ೫ | ೯ |
| ೧೮ | ಕೊಡಗು | ೪೫ | ೨೬ | ೧೯ |
| ೧೯ | ಕೋಲಾರ | ೫೫ | ೨೫ | ೩೦ |
| ೨೦ | ಕೊಪ್ಪಳ | ೪೩ | ೨೬ | ೧೭ |
| ೨೧ | ಮಂಡ್ಯ | ೫ | ೨ | ೩ |
| ೨೨ | ಮೈಸೂರು | ೧೯೮ | ೧೦೧ | ೯೭ |
| ೨೩ | ರಾಯಚೂರು | ೨೨೫ | ೧೦೮ | ೧೧೭ |
| ೨೪ | ಶಿವಮೊಗ್ಗ | ೮೭೧ | ೨೩೦ | ೨೪೧ |
| ೨೫ | ತುಮಕೂರು | ೧೫ | ೭ | ೮ |
| ೨೬ | ಉಡುಪಿ | ೩೭೧ | ೧೯೬ | ೧೭೫ |
| ೨೭ | ಉತ್ತರ ಕನ್ನಡ | ೮,೪೩೭ | ೪,೨೩೮ | ೪,೧೯೯ |
| | **ಕರ್ನಾಟಕ ಒಟ್ಟು** | **೧,೩೬,೭೦೦** | **೭೦,೧೨೩** | **೬೬,೫೭೭** |

೨೦೦೧ರ ಜನಗಣತಿಯ ಪ್ರಕಾರ ಕರ್ನಾಟಕದಲ್ಲಿ ೨೭ ಜಿಲ್ಲೆಗಳಲ್ಲಿ ಗೊಂಡ, ರಾಜಗೊಂಡರು ಹೀಗೆ ದಾಖಲಾಗಿದ್ದಾರೆ. ಇವರು ಬೀದರ, ಗುಲಬರ್ಗಾ, ಉತ್ತರ ಕನ್ನಡ ಮತ್ತು ಬೆಂಗಳೂರು ನಗರ ಜಿಲ್ಲೆಗಳಲ್ಲಿ ದಟ್ಟವಾಗಿಯೂ ಮತ್ತು ಇತರೆ ಜಿಲ್ಲೆಗಳಲ್ಲಿ ಚದುರಿದಂತೆಯೂ ಹರಡಿಕೊಂಡಿದ್ದಾರೆ.

ಬೀದರ್ ಜಿಲ್ಲೆಯ ಗೊಂಡರು ಪಶುಪಾಲಕರು. ಕುರಿ ಹಾಗೂ ದನಗಳ ಪಾಲನೆಯಿಂದಾಗಿ ಇವರಿಗೆ ಕುರುಬ ಮತ್ತು ದ(ಧ)ನಗರ ಎಂದಲೂ ಕರೆಯುವುದುಂಟು. ಆಂಧ್ರಪ್ರದೇಶ ಹಾಗೂ ಮಧ್ಯಪ್ರದೇಶದ ಗೊಂಡರಿಗೂ ಕಸುಬಾಧಾರಿತ ಪದಗಳು ಬಳಕೆಯಾಗುವವು. ಉದಾಃ ಕೋಯ್ತುರ ಗೊಂಡ (ಕುರುಬ), ಗೋವಾರಿಗೊಂಡ (ದನಗಾರ), ರಾಜಗೊಂಡ, ಇತ್ಯಾದಿ. ಬೀದರಿನ ಗೊಂಡರಲ್ಲಿ ಈರಕಾರ, ವಾರು, ವಗ್ಯ, ಕರಗಾರ, ಫುಲೇಕರ, ಬಿರಾದಾರ, ಮೆತ್ರಿ, ಶರಗಾರ ಎಂಬ ಇತ್ಯಾದಿ ಪ್ರಬೇಧಗಳಿರುವವು. ಇವು ಕಸಬು ಹಾಗೂ ಧಾಮಿಧಕಾಚರಣೆಗಳನ್ನು ಪ್ರತಿನಿಧಿಸುವವು. ಇವರಲ್ಲಿ ಶೇ. ೯೯ ರಷ್ಟು ಉಣ್ಣೆ ಕಂಕಣ ಹಾಗೂ ಕೇವಲ ಶೇ.೧ ರಷ್ಟು ಮಾತ್ರ ಹತ್ತಿ ಕಂಕಣದವರಾಗಿದ್ದಾರೆ. ಇವರಲ್ಲಿಯ ಬೆಡಗುಗಳು ಮಾಯವಾಗಿವೆ. ತೆರಪದ್ಧತಿ ವಿಮುಖಗೊಂಡು ವರದಕ್ಷಿಣೆ ಜಾರಿಗೆ ಬರುತ್ತಲಿದೆ. ಇವರು ಖಂಡೋಬ, ಬೀರಗೊಂಡ, ಮಾಳಗೊಂಡ, ಹಿರೋದ್ಯ, ಎಲ್ಲಮ್ಮ, ಲಕ್ಷ್ಮಿ ಇತ್ಯಾದಿ ದೈವಗಳನ್ನು ಪೂಜಿಸುವರು. ಇವರಲ್ಲಿ ಸತ್ತವರನ್ನು ಹೂಳುವ ಮತ್ತು ಸೂತಕಾಚರಿಸುವ ಸಂಪ್ರದಾಯವಿದೆ.

೧೯೯೨ರ ಬೀದರ ಜಿಲ್ಲೆಯ ಗೊಂಡರು ಸಮೀಕ್ಷೆಯ ಪ್ರಕಾರ ೫೪೦ ಗ್ರಾಮಗಳಲ್ಲಿ ಗೊಂಡರು ನೆಲೆಸಿದ್ದಾರೆ. ಇವರು ೧೪,೮೩೫ ಕುಟುಂಬಗಳಲ್ಲಿ ೯೭,೫೩೧ ಜನರಿದ್ದು, ಅದರಲ್ಲಿ ೫೧,೪೦೧ ಪುರುಷರು ಹಾಗೂ ೪೬,೧೩೦ ಸ್ತ್ರೀಯರಿದ್ದಾರೆ. ಜಿಲ್ಲೆಯಲ್ಲಿ ಗೊಂಡರ ಜನಸಾಂದ್ರತೆ ಪ್ರತಿ ಕಿ.ಮೀಟರಿಗೆ ೧೮. ಇವರಲ್ಲಿ ಶೇಕಡ ೯೭ ರಷ್ಟು ಗ್ರಾಮೀಣ ಗುಡ್ಡಗಾಡುಗಳಲ್ಲಿ ನೆಲೆಸಿದರೆ, ಕೇವಲ ಶೇಕಡ ೩ ರಷ್ಟು ಮಾತ್ರ ನಗರವಾಸಿಗಳಾಗಿದ್ದಾರೆ.

ಗೊಂಡರು ಸಾಂಪ್ರದಾಯಿಕ ಅಲೆಮಾರಿ ಪಶುಪಾಲನೆಯಿಂದ ವಿಮುಖರಾಗುತ್ತ ಕೃಷಿ ಕೂಲಿಗಳಾಗಿ ಪರಿವರ್ತನೆಗೊಳ್ಳುತ್ತಿದ್ದಾರೆ. ಬೃಹತ್ ಕೈಗಾರಿಕೆಗಳಿಂದಾಗಿ ಕೊಂಡರ ಗೃಹ ಕೈಗಾರಿಕೆಯಾದ ಕಂಬಳಿ ನೆಯ್ಗೆ ನೆಲಕಚ್ಚಿದೆ. ಗ್ರಾಮೀಣ ಗುಡ್ಡಗಾಡುಗಳಲ್ಲಿ ಇಂದಿಗೂ ಗೊಂಡರಲ್ಲಿ ಅಧಿಕ ಪಶುಪಾಲನೆ ಕಂಡುಬರುತ್ತದೆ.

ಆದಿವಾಸಿಗಳ ಗುಣಲಕ್ಷಣಗಳ ಆಧಾರದ ಮೇಲೆ ಭಾರತ ಸರ್ಕಾರ ಪ್ರಪ್ರಥಮವಾಗಿ ೧೯೫೦ರ ಸೆಪ್ಟೆಂಬರ್ ೬ ರಂದು ಹೈದರಾಬಾದ್ ರಾಜ್ಯದ ಪರಿಶಿಷ್ಟ ವರ್ಗಗಳ ಪಟ್ಟಿಯಲ್ಲಿ ೯ ಬುಡಕಟ್ಟುಗಳನ್ನು ಸೇರಿಸಿತ್ತು. ಅವುಗಳಲ್ಲಿ ಗೊಂಡ್ (ನಾಯ್ಕಪೋಡ ಮತ್ತು ರಾಜಗೊಂಡ ಸೇರಿ) ಬುಕಟ್ಟು ಕ್ರ.ಸಂಖ್ಯೆ ೪ ರಲ್ಲಿ ಕಂಡು ಬರುತ್ತದೆ. ಬೀದರ್, ಗುಲಬರ್ಗಾ ಹಾಗೂ ರಾಯಚೂರು, ಜಿಲ್ಲೆಗಳು ೧೯೫೬ರ ನವೆಂಬರ್ ೧ ರವರೆಗೆ ಹೈದರಾಬಾದ ರಾಜ್ಯಕ್ಕೆ ಸೇರಿದ್ದವು. ಭಾರತದಲ್ಲಿ ಜನಗಣತಿ ಪ್ರಾರಂಭವಾದಾಗಿನಿಂದಲೂ ಬೀದರ, ಗುಲಬರ್ಗಾ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಗೊಂಡ ಬುಡಕಟ್ಟಿನವರೆಗೆ ಉಲ್ಲೇಖವಿದೆ. ಆದರೆ ಅಂದಿನ ಮೈಸೂರು ರಾಜ್ಯದಲ್ಲಿಯ ಬೇರೆ ಯಾವುದೇ ಜಿಲ್ಲೆಗಳಲ್ಲಿ ೧೯೫೧ ರ ಜನಗಣತಿಯಲ್ಲಿ ಗೊಂಡರ ಉಲ್ಲೇಖವಿಲ್ಲ.

ಕರ್ನಾಟಕ ರಾಜ್ಯದಲ್ಲಿ ಬೀದರ ಗುಲಬರ್ಗಾ ಹಾಗೂ ರಾಯಚೂರು ಜಿಲ್ಲೆಗಳಿಗೆ ಸೀಮಿತಗೊಂಡ ಗೊಂಡ ಜನಾಂಗದ ಭೌಗೋಳಿಕ ವ್ಯಾಪ್ತಿ ಕರ್ನಾಟಕದಾದ್ಯಂತ ವಿಸ್ತರಿಸಿ ದಿನಾಂಕ:೨೭-೭-೧೯೭೭ರಂದು ಭಾರತ ಸರ್ಕಾರ ಅಧಿಚೂಸನೆ ಹೊರಡಿಸಿತು. ಆ ಪಟ್ಟಿಯಲ್ಲಿ ಕರ್ನಾಟಕದಲ್ಲಿ ಒಟ್ಟು ೮೯ ಬುಡಕಟ್ಟುಗಳನ್ನು ಗುರುತಿಸಿದೆ. ಆ ಪಟ್ಟಿಯನ್ನೇ ೧೯೮೧, ೧೯೯೧ ಹಾಗೂ ೨೦೦೧ರ ಜನಗಣತಿಯಲ್ಲಿ ಬಳಸಲಾಗಿದೆ.

ಗೊಂಡ, ರಾಜಗೊಂಡ, ಧನಗರ ಹಾಗೂ ಕುರುಬ ಎಂಬ ಪದಗಳು ಬೇರೆ ಬೇರೆ ಕಮದರೂ ಕೂಡ ಬೀದರ್ ಮತ್ತು ಗುಲಬರ್ಗಾ ಜಿಲ್ಲೆಯಲ್ಲಿ ಅವುಗಳೆಲ್ಲ ಒಂದೇ ಜನಾಂಗವನ್ನು ಗುರುತಿಸುವ ಪದಗಳಾಗಿವೆ. ಕರ್ನಾಟಕದ ಕೊಡಗಿನಲ್ಲಿ ಕುರುಬ; ಮಹಾರಾಷ್ಟ್ರದಲ್ಲಿ ಧನಗರ; ದೇಶದ ಹಲವಾರು ರಾಜ್ಯಗಳಲ್ಲಿ ಗೊಂಡ, ರಾಜಗೊಂಡ ಪದಗಳೆಲ್ಲ ಪರಿಶಿಷ್ಟ ವರ್ಗದ ಪಟ್ಟಿಯಲ್ಲಿವೆ. ಸಂವಿಧಾನಬದ್ಧವಾಗಿ ಬೀದರ್ ಹಾಗೂ ಗುಲಬರ್ಗಾ ಜಿಲ್ಲೆಗಳಲ್ಲಿ ಕುರುಬ ಮತ್ತು ಧನಗರ ಎಂಬ ಪದಗಳು ಪರಿಶಿಷ್ಟ ವರ್ಗದ ಪಟ್ಟಿಯಲ್ಲಿಲ್ಲ. ಅವು ಗೊಂಡರ ಕಸುಬಾಧಾರಿತ ಪದಗಳಾಗಿವೆ. ಸಂವಿಧಾನಬದ್ಧ ಸೌಲಭ್ಯಗಳ ತೊಡಕಿನಿಂದಾಗಿ ಆದಿವಾಸಿಗಳ ಹಿತದೃಷ್ಟಿಯಿಂದ ಇವರು ಮೂಲತಃ ಗೊಂಡರೆಂದು ಮನಗಂಡು ಕರ್ನಾಟಕ ಸರ್ಕಾರ ಕುರುಬ ಪದವನ್ನು ಗೊಂಡ, ರಾಜಗೊಂಡರ ಪರ್ಯಾಯ ಪದವೆಂದು ಪರಿಗಣಿಸಿ ಸಂವಿಧಾನಬದ್ಧ ಸೌಲಭ್ಯಗಳಲ್ಲಿ ಕಲ್ಪಿಸಲೆಂದು ದಿನಾಂಕ: ೨೩-೧೨-೧೯೯೬ ರಂದು ಹಾಗೂ ೧೦-೨-೧೯೯೭ರಂದು ಕೇಂದ್ರ ಸರಕಾರಕ್ಕೆ ಶಿಫಾರಸ್ಸು ಮಾಡಿದೆ.

ಬೀದರ, ಗುಲಬರ್ಗಾ ಜಿಲ್ಲೆಯ ಗೊಂಡರ ಮುಖ್ಯ ಕುಲಕಸುಬು ಮೇಕೆ, ಮೇಷ ಮತ್ತು ದನಗಳ ಪಾಲನೆಯಾಗಿತ್ತು, ಇಂದು ಪಶುಪಾಲನೆಯಿಂದ ವಿಮುಖರಾಗುತ್ತ ಕ್ರಮೇಣ ಕೃಷಿಯತ್ತವಾಲಿದ್ದಾರೆ. ಕಂಬಳಿ ನೇಯ್ಗೆಯೂ ಇವರ ಪ್ರಮುಖ ಕಸುಬಾಗಿತ್ತು. ಇದು ಇಂದು ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಭಾವದಿಂದ ಗೌಣವಾಗುತ್ತಿದೆ. ಇಂದು ಬಹು ಸಂಖ್ಯಾತರು ಕೃಷಿ ಕೂಲಿಗಳು ಮತ್ತು ಇತರೆ ಕೂಲಿಗಳಾಗಿದ್ದಾರೆ. ಹಲವರು ಸರ್ಕಾರಿ ಮತ್ತು ಖಾಸಗಿ ಉದ್ಯಮಗಳಲ್ಲೂ ಸೇವೆ ಸಲ್ಲಿಸುತ್ತಲಿದ್ದಾರೆ.

**೨. ರಾಜ್‌ಗೊಂಡ್ (Rajgond)**

ಭಾರತ, ಮೂಲತಃ ಬುಡಕಟ್ಟುಗಳ ದೇಶ. ಗೊಂಡ, ಕೋಲ ಮತ್ತು ಮುಂಡಗಳು ಭಾರತದ ಮೂಲ ಬುಡಕಟ್ಟುಗಳು. ಗೊಂಡರು ಭಾರತದ ಬುಡಕಟ್ಟುಗಳಲ್ಲಿಯೇ ಅತ್ಯಧಿಕ ಸಂಖ್ಯೆಯಲ್ಲಿರುವವರು ಎಂದು ಹೇಳಿಯಾಗಿದೆ. ಅವರಿಂದ ಕವಲೊಡೆದವರೇ ರಾಜಗೊಂಡರು. ಗೊಂಡ, ರಾಜಗೊಂಡರು **ಗೊಂಡಾರಣ್ಯ**ದ ಮೂಲಿಗರು. ದ್ರಾವಿಡ ಮೂಲದ **ಗೊಂಡಿ** ಇವರ ಮಾತೃಭಾಷೆ. ರಾಜಕೀಯ ಹಿನ್ನೆಲೆಯುಳ್ಳ ಗೊಂಡರಿಗೆ 'ರಾಜಗೊಂಡ' ಎಂಬ ಹೆಸರು ಲಭ್ಯವಾಗಿದೆ.

**ಹಿನ್ನೆಲೆ:** ಮಧ್ಯಭಾಗದ ಗೊಂಡರು ಸಂಘಟಿತಗೊಂಡು ಬಹಳ ಹಿಂದೆಯೇ ಸಣ್ಣಪುಟ್ಟ ರಾಜ್ಯಗಳನ್ನು ಸ್ಥಾಪಿಸಿದರು. ರಾಜರ ಪರಂಪರೆ ಮುಂದುವರಿದಂತೆ ರಾಜರು ಮತ್ತು ಅವರ ಸಂಬಂಧಿಗಳೆಲ್ಲ ರಾಜಗೊಂಡರೆಂದೇ ಗುರುತಿಸಲ್ಪಟ್ಟರು. ಗೊಂಡರು ರಾಜ್ಯಗಳನ್ನು ಸ್ಥಾಪಿಸಿದೊಡನೆ ತಮ್ಮ ಹಿನ್ನೆಲೆಯನ್ನು ಮರೆಯಲಿಲ್ಲ. ಇನ್ನು ಬಹುಸಂಖ್ಯಾತರು ತಮ್ಮ ಹಿಂದಿನ ಕಾಯಕವನ್ನೇ ಮುಂದುವರೆಸುವವರಾಗಿದ್ದರು. ಪ್ರಕೃತಿಯ ರಹಸ್ಯಮಯ ಜ್ಞಾನ ಅವರಿಗಿತ್ತು. ಅವರು ಪ್ರಕೃತಿಯ ಆರಾಧಕರಾಗಿದ್ದರು. ನಿಸರ್ಗದ ವನಸ್ಪತಿಗಳಲ್ಲಿಯ ನಿಗೂಢ ಶಕ್ತಿಯ ಅರಿವು ಅವರಲ್ಲಿ ಹಲವರಿಗಿತ್ತು. ಅತಹವರು ನಾಟಿ ವೈದ್ಯರಾಗಿ ಹೊರಹೊಮ್ಮಿದರು. ರಾಜರಿಗೆ ಆಯುರ್ವೇದದ ವೈದ್ಯರಾದವರು, ಕಾಲಾಂತರದಲ್ಲಿ ರಾಜವೈದ್ಯರಾದರು. ರಾಜರು ತಮ್ಮ ರಾಜ್ಯಗಳನ್ನು ಮುಸ್ಲಿಮರ ಆಕ್ರಮಣದಿಂದ ಕಳೆದುಕೊಂಡ ಮೇಲೆ ರಾಜರ ಆಸ್ಥಾನದಲ್ಲಿಯ ರಾಜವೈದ್ಯರು ನಿರ್ಗತಿಕರಾದಾಗ ಸಾಮಾನ್ಯ ಜನರಿಗೆ ಆಯುರ್ವೇದದ ವೈದ್ಯರಾಗಿ ತಮ್ಮ ವೈದ್ಯಕೀಯ ಸೇವೆಯನ್ನು ವಿಸ್ತರಿಸಿದರು. ಕಾಲಾಂತರದಲ್ಲಿ ರಾಜವೈದ್ಯರು ರಾಜಗೊಂಡರೆಂದು ಹೇಳಿಕೊಳ್ಳುತ್ತಿರುವುದರಿಂದ ಸಾರ್ವಜನಿಕರಿಂದ ರಾಜಗೊಂಡರೆಂದು ಕರೆಯಲ್ಪಟ್ಟರು.

**ರಾಜಗೊಂಡರ ವಲಸೆಯ ನೆಲೆಗಳು:** ರಜಾಶ್ರಯ ಕಳೆದುಕೊಂಡ ರಾಜವೈದ್ಯ ರಾಜಗೊಂಡರು ಉದರ ಪೋಷಣೆಗಾಗಿ ವಲಸಿಗರಾಗಿ ಕಾಲಾಂತರದಲ್ಲಿ ಈ ಕೆಳಕಂಡ ನೆಲೆಗಳಲ್ಲಿ ನೆಲೆಗೊಂಡರು. ಮಹಾರಾಷ್ಟ್ರ ರಾಜ್ಯದ ನಾಸಿಕ್‌ದ ಟಕ್ಕರ ಮೈದಾನದ ಫುಲೆನಗರ, ನಾಗಪುರದ ರಘೋಜಿನಗರ, ಅಮರಾವತಿ ಜಿಲ್ಲೆಯ ಅಕೋಲ ತಾಲೂಕಿನ ಮೃತಜಾಪುರ, ಕಾಜಲೇಶ್ವರ, ಹಿವರಖೇಡ, ಧೂಲಿಯ ಜಿಲ್ಲೆಯ ಮಾಳೆಗಾಂವ ಮತ್ತು ಉಪನಗರ, ಅಹಮದ್‌ನಗರ ಜಿಲ್ಲೆಯ ಶ್ರೀರಾಂಪುರ, ಮುಂಬಯಿಯ ವಡಾಲಾ (ದಾದರ್), ಜಲಗಾಂವ ಜಿಲ್ಲೆಯ ಪಾಚೋರ ರೈಲ್ವೆನಿಲ್ದಾಣ, ಲಾತೂರಿನ ವಿಕಾಸನಗರ, ಪುಣೆಯ ಶಿವಾಜಿನಗರ; ಆಂಧ್ರಪ್ರದೇಶದ ವಿಜಯವಾಡ ಜಿಲ್ಲೆಯ ಕಾಕಂಡಿ, ಹೈದ್ರಾಬಾದಿನ ಕುಕಟಪಲ್ಲಿ, ಅನಂತಪುರ; ಮಧ್ಯಪ್ರದೇಶ ರಾಜ್ಯದ ಖಾಡ್ವಾ, ಜಿಲ್ಲೆಯ ಸುಧಾಮಪುರಿ, ಭೂಪಾಲ್, ಉಜ್ಜೈನ; ಕೇರಳದ ಕೋಯಿಮತ್ತೂರ್: ರಾಜಸ್ಥಾನದ ಆಜ್ಮೀರ: ಗುಜರಾತ್ ರಾಜ್ಯದ ಭಾವನಗರ್ ಜಿಲ್ಲೆಯ ಕಿಶೋದ, ಅಹಮದಾಬಾದ್: ಉತ್ತರ ಪ್ರದೇಶದ ಬೇವಾಸ್; ದೆಹಲಿ ಮತ್ತು ಕರ್ನಾಟಕ ರಾಜ್ಯದ ಬೀದರ್ ಹೊರವಲಯದ ಹಳ್ಳದಕೇರಿ, ಹರಿಹರ ತಾಲೂಕಿನ ಬೆಳ್ಳೋಡಿ ಮತ್ತು ಬೆಂಗಳೂರಿನ ಮಾರುತಿ ಸೇವಾನಗರ. ಭಾರತದಲ್ಲಿ ಸುಮಾರು ೧೦೦೦ ಕುಟುಂಬಗಳು ಮತ್ತು ಸುಮಾರು ೧೦,೦೦೦ ಜನಸಂಖ್ಯೆ ರಾಜಗೊಂಡರದಿರಬಹುದಾಗಿದೆ.

ಬೀದರಿನ ಹೊರವಲಯದ ರಾಜಗೊಂಡ ಕಾಲೊನಿಯಲ್ಲಿ ನೆಲೆಗೊಂಡ ರಾಜಗೊಂಡರು ತಮ್ಮ ಉದರ ಪೋಷಣೆಗಾಗಿ ಆಯುರ್ವೇದದ ವ್ಯಾಪಾರಕ್ಕಾಗಿ ಹೈದರಾಬಾದ್, ನಿಜಾಮಬಾದ್, ಬೊಂಗೀರ, ಆದಿಲಾಬಾದ್, ಉದಗೀರ, ನಾಂಡೇಡ, ಚಂದ್ರಪುರ, ನಾಗಪುರ, ಲಾತೂರ, ಪೂರ್ಥ್ಯಿ, ಪರಳಿ, ಪರಭಣಿ, ಗುಲಬರ್ಗಾ ಇತ್ಯಾದಿಗಳತ್ತ ಹಾಗೂ ಹರಿಹರ ತಾಲೂಕಿನ ಬೆಳ್ಳೊಡಿ ಗ್ರಾಮದಲ್ಲಿ ನೆಲೆಗೊಂಡ ರಾಜಗೊಂಡರು ಚಿತ್ರದುರ್ಗ, ಹೊಸಪೇಡೆ, ಗಂಗಾವತಿ, ಹರಪನಹಳ್ಳಿ, ಬಳ್ಳಾರಿ, ದಾವಣಗೆರೆ, ಚಿಕ್ಕಮಗಳೂರು, ಬಿಜಾಪುರ, ಬಾಗಲಕೋಟೆ, ಧಾರವಾಡ, ಮಂಗಳೂರು, ಹಾಸನ, ಗೋವಾ ಇತ್ಯಾದಿಗಳತ್ತ ಮತ್ತು ಬೆಂಗಳೂರಿನ ಮಾರುತಿ ಸೇವಾನಗರದಲ್ಲಿ ನೆಲೆಗೊಂಡ ರಾಜಗೊಂಡರು ಬೆಂಗಳೂರು, ಕೇರಳ ತಮಿಳುನಾಡು ಪ್ರದೇಶಗಳಿಗೆ ವಲಸೆ ಹೋಗುವರು.

ಸಾಮಾನ್ಯವಾಗಿ ರಾಜಗೊಂಡರು ತಮ್ಮ ವಲಸೆಯನ್ನು ರೈಲ್ವೆ ರಹದಾರಿ ಇದ್ದೆಡೆಗೆ ಮುಂದುವರಿಸುವರು. ಕಾರಣ ಅವರೊಂದಿಗೆ ಸಾಗಲಿರುವ ಅವರ ಗುಡಾರ ರೈಲ್ವೆಯಲ್ಲಿ ಸಾಗಿಸಲು ಅನುಕೂಲವಾಗುವುದು. ಅಲ್ಲದೆ ರೈಲ್ವೆ ನಿಲ್ದಾಣದಲ್ಲಿಯ ನೀರು ಬಳಸಲು ಅನುಕೂಲವಾಗುವುದು. ಇದು ಇವರ ಆರ್ಥಿಕ ಜೀವನಕ್ಕೆ ತಕ್ಕುದಾಗಿರುವುದು. ಹಳ್ಳಿಗಳಿಗೂ ತಿಂಗಳುಗಟ್ಟಲೆ ಆಯುರ್ವೇದದ ವ್ಯಾಪಾರಕ್ಕಾಗಿ ಕುಟುಂಬ ಸಮೇತ ಇವರು ವಲಸೆ ಹೋಗುವುದುಂಟು.

**ಸಾಮಾಜಿಕ ರಚನೆ:** ಖೋಮಗಳಿಂದ ಕೂಡಿದ ರಾಜಗೊಂಡರ ಸಾಮಾಜಿಕ ರಚನೆ ಬಿಗಿಯಾಗಿದೆ. ಕುಲ, ಬಳಿ ಅಥವಾ ಬೆಡಗುಗಳಿಗೆ ಇವರು ಖೋಮಗಳೆಂದು ಕರೆಯುವರು. ಇನ್ನೊಂದು ಅರ್ಥದಲ್ಲಿ ಖೋಮವೆಂದರೆ ಮೂಲವಂಶ ಎಂದರ್ಥ. ರಾಜಗೊಂಡರ ಇಡಿ ಜನ ಸಮುದಾಯವನ್ನು ನಾಲ್ಕು ಸಮೂಹಗಳಲ್ಲಿ ಗುರುತಿಸಬಹುದು. ಇವರು ತಮ್ಮ ಸಮೂಹಗಳಿಗೆ 'ದೈವ'ಗಳೆಂದು ಕರೆಯುವರು. ಅವು ಚಾರದೇವ, ಪಾಂಚದೇವ, ಸಾದೇವ ಮತ್ತು ಸಾತದೇವಗಳು. ಈ ದೇವಗಳೇ ರಾಜಗೊಂಡರ ಮೂಲ ಬಂಧುತ್ವದ ಸಂಕೇತವಾಗಿವೆ.

ಮೂಲದಲ್ಲಿ ೧೨ ದೇವರುಗಳಿದ್ದು ಅನಂತರದಲ್ಲಿ ಕೇವಲ ನಾಲ್ಕು ದೇವಗಳಿಗೆ ಸೀಮಿತಗೊಳಿಸಿರುವ ಬಗ್ಗೆ 'ಗೊಂಡಿ ಧರ್ಮದರ್ಶನ' ಗ್ರಂಥದಲ್ಲಿ ಉಲ್ಲೇಖವಿದೆ. ಚಾರದೇವದಲ್ಲಿ ೪, ಪಾಂಚದೇವದಲ್ಲಿ ೫, ಸಾದೇವದಲ್ಲಿ ೬ ಮತ್ತು ಸಾತದೇವರಲ್ಲಿ ೭ ಮೂಲ ಪುರುಷರಿದ್ದು, ಇವರೇ ರಾಜಗೊಂಡರಿಗೆ ಮೂಲ ದೈವವಾಗಿದ್ದಾರೆ. ಇವರ ವಂಶಜರೇ ಈ ರಾಜಗೊಂಡರೆನ್ನಲು ಇಂದಿಗೂ ಇವರು ತಮ್ಮ ಬಂಧುತ್ವವನ್ನು ತಮ್ಮ ದೇವಗಳಿಂದಲೂ ಹಾಗೂ ಖೋಮಗಳಿಂದಲೂ ಗುರುತಿಸಿಕೊಳ್ಳುವುದು ಸಾಕ್ಷಿಯಾಗಿರುವುದು.

ಕರ್ನಾಟಕ ರಾಜಗೊಂಡರಲ್ಲಿ ಈ ನಾಲ್ಕು ದೇವರುಗಳಿಗೆ ಸಂಬಂಧಪಟ್ಟ ಖೋಮಗಳಿವೆ. ಪ್ರಸ್ತುತ (೨೦೦೦) ಸಮೀಕ್ಷೆಯ ಪ್ರಕಾರ ಸಾದೇವರ ೧೬೯: ಚಾರದೇವ ೩೨: ಸಾತದೇವರ ೨೦: ಹಾಗೂ ಪಾಂಚದೇವರ ೪: ಕುಟುಂಬಗಳು ಕರ್ನಾಟಕದಲ್ಲಿವೆ. ಸಾದೇವರದಲ್ಲಿಯ ಕುಟುಂಬಗಳು ಕರ್ನಾಟಕದಲ್ಲಿ ಹೆಚ್ಚಲು ಕಾರಣ ಆ ದೇವಗಳಲ್ಲಿಯ ಖೋಮಗಳು ಹಾಗೂ ಖೋಮಗಳಲ್ಲಿಯ ಕುಟುಂಬಗಳು ಹೆಚ್ಚಾಗಿರುವುದು. ಸಾದೇವದಲ್ಲಿಯ ಖೋಮಗಳೆಂದರೆ ರಾಯಸೀಡಂ ಅಥವಾ ಚಾಮಕಾರ(೭೩), ಉಇಕಾ (೭೯) ತಡಾಸಂ (೬) ವಡಕಡೆ (೩), ಅತ್ರಾಂ (೭) ಹಾಗೂ ಗೇಡಂ(೧) ಚಾರದೇವದಲ್ಲಿ ಕೇವಲ ಸೇಡ್ಮಾಕಿ (೩೭) ಸಾತದೇವದಲ್ಲಿ ಪುಸ್ನಾಕೆ (೧೪) ಮೇಶ್ರಾಂ (೨) ವಾಡವಿಯ (೩) ಧರ್ಮೆ (೧) ಹಾಗೂ ಪಾಂಚದೇವರಲ್ಲಿ ಆಡಾ (೪) ಈ ಖೋಮಗಳು ಕರ್ನಾಟಕದಲ್ಲಿವೆ. ದೇವ ಹಾಗೂ ಖೋಮಗಳ ಕುಟುಂಬಗಳಿಗೆ ಸಂಬಂಧಿಸಿದಂತೆ ಅವರ ಜನಸಂಖ್ಯೆಯಲ್ಲಿಯೂ ಏರಿಳಿತಗಳಿವೆ.

**ಬಂಧುತ್ವ:** ರಕ್ತ ಸಂಬಂಧದಿಂದ ಉಗಮಗೊಂಡ ಇವರ ಬಂಧುತ್ವ ಬಲಿಷ್ಟವಾಗಿದೆ. ವಾಸ್ತವದಲ್ಲಿ ಒಂದೇ ದೇವದಲ್ಲಿಯ ವಿವಾಹ ಸಂಬಂಧಕ್ಕೆ ನಿಷೇಧವಿದೆ. ಬೆಸದೇವಗಳಲ್ಲಿಯ ವಿವಾಹ ಸಂಬಂಧಕ್ಕೆ ಊನವಿಲ್ಲ. ಆದರೆ ಎಲ್ಲ ದೇವರುಗಳಲ್ಲಿಯ ಜನಸಮುದಾಯ ಒಂದೇ ನೆಲೆಯಲ್ಲಿ ಲಭ್ಯವಿರುವುದು ಕಷ್ಟ ಸಾಧ್ಯ. ಹಾಗಿದ್ದಲ್ಲಿ ಒಂದೇ ಅಥವಾ ಸಮದೇವದವರಾಗಿದ್ದರೂ ಭಿನ್ನ ಖೋಮಿನವರೊಂದಿಗೆ ಸಂಬಂಧ ಬೆಳೆಸಿರುವುದು ಕಂಡುಬಂದಿದೆ. ಇದು ವಾಸ್ತವದಲ್ಲಿ ಎಲ್ಲ ಕಡೆ ಕಂಡುಬರಲಿಕ್ಕಿಲ್ಲ. ಸಮದೇವದವರೆಲ್ಲ ಸೋದರ ಸಂಬಂಧಿಗಳು ಮತ್ತು ಬೆಸ ದೇವದವರೆಲ್ಲ ನೆಂಟರೆಂಬ ಭಾವನೆಯಿದೆ. ಇವರು ಸಾಮಾನ್ಯವಾಗಿ ತಮ್ಮನ್ನು ಗುರುತಿಸಿಕೊಳ್ಳುವಾಗ ತಮ್ಮ ಹೆಸರಿನೊಂದಿಗೆ ತಮ್ಮ ಖೋಮಿನ (ಕುಲದ ಅಥವಾ ಬಳಿಯ) ಹೆಸರು ಸೇರಿಸಿಕೊಂಡೆ ಗುರುತಿಸಿಕೊಳ್ಳುವ ರೂಢಿಯಿದೆ. ಉದಾ: ಶಾಮಬಾಬು ರಯಾಸೀಡಂ, ವಸಂತ ಜಾಮಕಾರ ಇತ್ಯಾದಿ. ಇಲ್ಲಿ ರಾಯಸೀಡಂ ಮತ್ತು ಜಾಮಕಾರ ಇವು ಇವರ ಖೋಮಿನ ಹೆಸರಾಗಿರುವುದನ್ನು ಗಮನಿಸಬಹುದು.

**ದೈವಾರಾಧನೆ:** ರಾಜಗೊಂಡರು ತಮ್ಮ ಗೊಂಡಿ ಧರ್ಮದ ವಿಧಿವಿಧಾನಗಳಂತೆ ಸಂಸ್ಕಾರಗಳನ್ನು ದೈವಾರಾಧನೆಗಳನ್ನು ಮಾಡುವರು. ಗೊಂಡಿ ಧರ್ಮದರ್ಶನದ ಪ್ರಕಾರ ಗೊಂಡ, ರಾಜಗೊಂಡರು ೧೨ ದೈವಗಳನ್ನು ೭೫೦ ಕುಲಗೋತ್ರಗಳನ್ನು ಹಾಗೂ ೨೨೫೦ ಕುಲಚಿನ್ಹೆಗಳನ್ನು ತಮ್ಮ ದೈವವೆಂದು ಆರಾಧಿಸುವವರಾಗಿದ್ದರು. ಆದರೆ ಇಂದು ಆ ಪ್ರಮಾಣದಲ್ಲಿ ಆರಾಧನೆ ಕಂಡುಬಂದಿರುವುದಿಲ್ಲ. ಗೊಂಡರು, ರಾಜಗೊಂಡರು ಮೂಲತಃ ಸರ್ವಚೇತನಾವಾದಿಗಳು ಎಂಬುದನ್ನು ಇವರ ಕುಲಚಿಹ್ನೆಗಳು ಸಾಬೀತುಪಡಿಸುತ್ತವೆ. ಇಂದು ರಾಜಗೊಂಡರು ಫೆರಸಾಪೇನ್ (ಮಹಾದೇವ), ಬಾರಾದೇವ (ಬೀರದೇವ), ಭೀಮಲಪೇನ, ಮಹಾಕಾಳಿ, ಮರಿಯಮ್ಮ ಇತ್ಯಾದಿ ದೈವಗಳನ್ನು ಆರಾಧಿಸುವರು.

ರಾಜಗೊಂಡರು ಶಿವರಾತ್ರಿ, ದಸರಾ, ಹೋಳಿ ಇತ್ಯಾದಿ ಹಬ್ಬಗಳನ್ನು ಆಚರಿಸುವರು, ಬೀದರಿನ ರಾಜಗೊಂಡರು ಶಿವರಾತ್ರಿಯಿಡಿ ಉಪವಾಸ, ಭಜನೆ, ಕೀರ್ತನೆ, ಗೊಂಡಿ ನೃತ್ಯ ಮಾಡಿ ಮರುದಿನ ಸಾಮೂಹಿಕ ಭೋಜನ ಮಾಡುವರು. ಶಿವನನ್ನು ಪ್ರತಿಷ್ಠಾಪಿಸಿ ಶ್ರದ್ಧಾ ಭಕ್ತಿಯಿಂದ ಮಹಾದೇವನನ್ನು ಫೆರಸಾಪೆನೆಂದು ಆರಾಧಿಸುವರು. ಹರಿಹರ ತಾಲೂಕಿನ ಬೆಳ್ಳೂಡಿಯ ರಾಜಗೊಂಡರು ದಸರಾ ಹಬ್ಬವನ್ನು ಅತಿ ಉಲ್ಲಾಸ, ಸಂತಸ ಸಡಗರದಿಂದ ಆಚರಿಸುವರು. ದಸಾ ಹಬ್ಬದಂದು ರಾತ್ರಿಯಿಡಿ ಸ್ತ್ರೀಪುರುಷರೆಲ್ಲರೂ ಗೊಂಡಿ ನೃತ್ಯ ಮಾಡಿ ಕುಣಿದಾಡುವರು.

ಕರ್ನಾಟಕದಲ್ಲಿಯ ರಾಜಗೊಂಡ ಅಲೆಮಾರಿ ಆದಿವಾಸಿಗಳು ಆರ್ಥಿಕವಾಗಿ ಬಹಳ ಬಡವರು. ಇವರ ವೇಷಭೂಷಣಗಳನ್ನು ನೋಡಿದೊಡನೆಯೇ ಇವರ ಆರ್ಥಿಕ ಪರಿಸ್ಥಿತಿಯ ಅರಿವಾಗುತ್ತದೆ. ಇವರು ಕೃಷಿ, ಕೃಷಿಕೂಲಿ ಹಾಗೂ ಪಶುಪಾಲನೆಯಲ್ಲಿ ತೊಡಗಿಸಿ

ಕೊಂಡವರಲ್ಲ. ಇವರಿಗೆ ಇವರದ್ದೆ ಎಂಬ ಒಂದಿಂಚೂ ಭೂಮಿ ಇದ್ದಿಲ್ಲ. ಮೋಸದ ವ್ಯವಹಾರ ಇವರು ತಿಳಿದಿಲ್ಲ. ಜೀವನಕ್ಕಾಗಿ ಅಲೆದಾಟ ತಪ್ಪಿಲ್ಲ. ಇವರಲ್ಲಿಯ ಸಾಂಪ್ರಾದಾಯಿಕ ಆಯುರ್ವೇದ ಕಸುಬಿನಲ್ಲಿ ಜಾತಿ ಪಂಚಾಯತಿಯ ಕಾನೂನುಗಳಲ್ಲಿ ಹಾಗೂ ನಂಬಿಕೆಗಳಲ್ಲಿ ಪರಿವರ್ತನೆ ತರುವವರೆಗೆ ಇವರಲ್ಲಿ ಆರ್ಥಿಕ ಸುಧಾರಣೆ ಕಷ್ಟ ಸಾಧ್ಯ.

ಗಿಡಮೂಲಿಕೆಗಳೇ ರಾಜಗೊಂಡರಿಗೆ ಜೀವನಾಧಾರ. ಅದಕ್ಕೆ ಇವರು 'ಜಡಿಬೂಟಿ' ಎಂದು ಕರೆಯುವರು. ಅಂದರೆ ಔಷಧ, ಗಿಡಮೂಲಿಕೆಗಳ ನಾರು ಬೇರುಗಳೆಂದು ಅರ್ಥ. ವಿಂಧ್ಯ, ಸಾತಪುರ, ನರ್ಮದಾ, ಗೋದಾವರಿ, ಇತ್ಯಾದಿ ನದಿ ಜಲಾನಯನ ಪ್ರದೇಶಗಳಿಂದ ಗಿಡಮೂಲಿಕೆಗಳನ್ನು ಇವರು ಸಂಗ್ರಹಿಸುತ್ತಾರೆ. ಅದು ಸಾಧ್ಯವಾಗದಿದ್ದಾಗ ಸ್ಥಳೀಯ ಆಯುರ್ವೇದಿಕ ಅಂಗಡಿಗಳಿಂದ ಖರೀದಿಸಿ ಔಷಧ ತಯಾರಿಸುವರು ಮತ್ತು ಸುತ್ತಮುತ್ತ ಮಾರಾಟ ಮಾಡುವರು. ರಸ್ತೆಯ ಬದಿಯಲ್ಲಿ ಮಾರಾಟ ಮಾಡುವುದರಿಂದ ಈ ವ್ಯಾಪಾರಕ್ಕೆ ತಕ್ಕ ಪ್ರತಿಫಲ ಸಿಗುತ್ತಿಲ್ಲ. ಸರ್ಕಾರಿ ಆಯುರ್ವೇದಿಕ ಚಿಕಿತ್ಸಾಲಯಗಳು ಆರಂಭಗೊಂಡಿವೆ. ಹೀಗಾಗಿ ಆಯುರ್ವೇದ ವ್ಯಾಪಾರದ ಮೇಲೆ ಅವಲಂಭಿಸಿರುವ ಇವರ ಕುಟುಂಬಗಳು ಕ್ಷೀಣಿಸುತ್ತಿವೆ. ಇಂದಿನ ಹೊಸ ಪೀಳೀಗೆ ಆಯುರ್ವೇದದ ಬದಲಾಗಿ ಕಿವಿ ಸ್ವಚ್ಛಗೊಳಿಸುವ ಮತ್ತು ವಾಹನಗಳ ಸ್ವೈರಿಂಗ್ ವೈರ್ ಕೆಲಸಗಳಲ್ಲಿ ಹಾಗೂ ಚಿಕ್ಕ ಮಕ್ಕಳು ಬಿಸಾಡಿದ ಪ್ಲಾಸ್ಟಿಕ್ ಪೇಪರ್‌ಗಳನ್ನು ಆಯುವುದರಲ್ಲಿ ತೊಡಗಿದ್ದಾರೆ. ಇದು ಹೀಗೆ ಮುಂದುವರಿದರೆ ಈ ಬುಡಕಟ್ಟಿನಲ್ಲಿರುವ ಆಯುರ್ವೇದದ ಜ್ಞಾನ ಕೆಲವೇ ವರ್ಷಗಳಲ್ಲಿ ಮರೆಮಾಚುವುದರಲ್ಲಿ ಸಂಶಯವಿಲ್ಲ. ಹಾಗಾಗದಂತೆ ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸುವುದು ಅಗತ್ಯವಾಗಿದೆ.

**೩. ಕುರುಬ (Kuruba)**

ಕರ್ನಾಟಕದಲ್ಲಿ ಕುರುಬರು ಬಹುಸಂಖ್ಯಾತರಾಗಿದ್ದರೂ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಘೋಷಿತ ಕುರುಬ ಬುಡಕಟ್ಟು ಮಾತ್ರ ಒಂದು ಅಲ್ಪಸಂಖ್ಯಾತ ಬುಡಕಟ್ಟಾಗಿ ಉಳಿದಿದೆ. ೧೯೫೦ರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪರಿಷ್ಕೃತ ಪಟ್ಟಿಯ ಆದೇಶದ ಪರಿಶಿಷ್ಟ III ಭಾಗ VIII (೧) ರ ಪ್ರಕಾರ ಕೊಡಗು ಜಿಲ್ಲೆಗೆ ಸೀಮಿತಗೊಂಡಂತೆ ಕರುಬ ಸಮುದಾಯ ಬುಡಕಟ್ಟು ಪಟ್ಟಿಗೆ ಸೇರಿದೆ. ಕರ್ನಾಟಕದ ಬೇರೆಲ್ಲ ಬುಡಕಟ್ಟುಗಳ ಪ್ರಾದೇಶಿಕ ಸಮುದಾಯ ಬುಡಕಟ್ಟು ಪಟ್ಟಿಗೆ ಸೇರಿದೆ. ಕರ್ನಾಟಕದ ಬೇರೆಲ್ಲ ಬುಡಕಟ್ಟು ಪ್ರಾದೇಶಿಕ ಮಿತಿಯನ್ನು ಸಡಿಲಿಸಿ ಕರ್ನಾಟಕದಾದ್ಯಂತ ವಿಸ್ತರಿಸಿದ್ದರೂ ಕುರುಬ ಮತ್ತು ಮರಾಠ ಬುಡಕಟ್ಟುಗಳು ಕೊಡಗು ಜಿಲ್ಲೆಗೆ; ಕಮ್ಮಾರ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲೂಕಿಗೆ; ಕಣಿಯನ್, ಕಣ್ಯನ್ ಕೊಳ್ಳೇಗಾಲ ತಾಲೂಕಿಗೆ; ಮರಾಟಿ ಬುಡಕಟ್ಟು ದಕ್ಷಿಣ ಕನ್ನಡ ಜಿಲ್ಲೆಗೆ ಸೀಮಿತಗೊಂಡಿರುವವು. ತಮ್ಮ ಪ್ರಾದೇಶಿಕ ಮಿತಿಯನ್ನು ಕರ್ನಾಟಕದಾದ್ಯಂತ ವಿಸ್ತರಿಸಿಕೊಳ್ಳಲೇ ಇಲ್ಲ. ಇದಕ್ಕೆ ಮುಖ್ಯಕಾರಣ ರಾಜಕೀಯ ಹಾಗೂ ಸಾಮಾಜಿಕ ಇಚ್ಛಾಶಕ್ತಿಯ ಕೊರತೆ ಎಂದೆನಿಸುವುದು. ಈ ರೀತಿಯ ಪ್ರಾದೇಶಿಕ ಮಿತಿಯನ್ನು ಹೇರುವುದರಿಂದ ಈ ಬುಡಕಟ್ಟುಗಳ ಕಾರ್ಯವ್ಯಾಪ್ತಿಗೆ ಹಾಗೂ ಸ್ವಚ್ಛಂದ ಬದುಕಿಗೆ ಕಡಿವಾಣ ಹಾಕಿದಂತಾಗುವುದು. ಇದರಿಂದ ಈ ಬುಡಕಟ್ಟುಗಳ ಅಭಿವೃದ್ಧಿ ಕುಂಠಿತಗೊಳ್ಳುವುದರೊಂದಿಗೆ ಪ್ರಾದೇಶಿಕವಾಗಿ ಇವರಲ್ಲಿ ಸಂಕುಚಿತ ಮನೋಭಾವನೆ ಉಮಟಾಗಬಹುದು. ಹೀಗಾಗಿ ಈ ನಾಲ್ಕು ಬುಡಕಟ್ಟುಗಳ ಪ್ರಾದೇಶಿಕ ಮಿತಿಯನ್ನು ಸಡಿಲಿಸಿ ಹಲವು ಮಾನದಂಡಗಳೊಂದಿಗೆ ಕರ್ನಾಟಕ ರಾಜ್ಯದಾದ್ಯಂತ ವಿಸ್ತರಿಸುವುದು ಸೂಕ್ತ.

ಬೇಟೆಗಾರಿಕೆಯಿಂದ ಕವಲೊಡೆದ ಪಶುಪಾಲಕರಲ್ಲಿ ಮುಖ್ಯವಾಗಿ ಮ್ಯಾಸ (ಮೇಷ) ಬೇಡರು, ಕಾಡುಗೊಲ್ಲರು, ಕುರುಬರು ಮತ್ತು ದ(ಧ)ನಗಾರರು ಮುಖ್ಯವಾಗಿರುವರು. ಒಂದೇ ಕೌಟುಂಬಿಕ ಕಳ್ಳುಬಳ್ಳಿಯಿಂದ ಕವಲೊಡೆದ ಬುಡಕಟ್ಟುಗಳಿವು. 'ಮ್ಯಾಸ' ಎಂಬುದು 'ಮೇಷ' ಪದದ ಅಪಭ್ರಂಶ ಪದ. ಮೇಷ ಎಂದರೆ ಮೇಕೆ, ಟಗರು, ಕುರಿ, ಆಡು ಎಂದರ್ಥ. ಇವುಗಳ ಪಾಲಕರಿಗೆ ಮೇಕೆ ಅಥವಾ ಮೇಷಪಾಲಕರೆನ್ನುವರು. ಇವರೇ ಹಾಲುಮತದ ಹುಟ್ಟಿಗೆ ಕಾರಣರಾದವರು.ಇವರು ಬೇಟೆಗಾರಿಕೆಯಿಂದ ಕವಲೊಡೆದವರು ಎಂಬುದಕ್ಕೆ ಮ್ಯಾಸ(ಮೇಷ)ದ ಜೊತೆಗಿದ್ದ ಬೇಡರು ಎಂಬ ಜೋಡು ನುಡಿಯೇ ಸಾಕ್ಷಿ. ಮೇಷ ಮತ್ತು ಮೇಕೆ ನುಡಿ(ಶಬ್ದ)ಗಳು ಈ ಪ್ರಾಣಿಗಳ ಧ್ವನಿಜನ್ಯ ಪದಗಳು. ಈ ಪ್ರಾಣಿಗಳು ಮ್ಯಾ...(ಮ+ಉ+ಅ) ಎಂದು ಕೂಗುವುದರಿಂದ ಇವುಗಳ ಪಾಲಕರೂ ಮೇಷ (ಕುರಿ) ಪಾಲಕರು > ಮ್ಯಾಸಬೇಡರು > ಮ್ಯಾಸ ನಾಯಕರೆಂದೆನಿಸಿಕೊಂಡರು. ಕಾಡುಗೊಲ್ಲರು ಕಾಡಿನ ಮೂಲದವರೆಂಬುದಕ್ಕೆ ಗೊಲ್ಲಪದದ ಜೊತೆಯಿದ್ದ

ಕಾಡು ಎಂಬ ಪದವೇ ಸ್ಪಷ್ಟಪಡಿಸುತ್ತದೆ. ಗೊಲ್ಲರೆಂದರೆ ಗೋವುಗಳ ಪಾಲಕರೆಂದರ್ಥ. ಪ್ರಕೃತಿಜನ್ಯ ಗೋವುಗಳ ರಕ್ಷಕರಿವರು. ದ(ಧ)ನಗಾರರೂ ಕೂಡ ದನಗಳ ರಕ್ಷಕರೆ. ದನಗಾರರೇ ಕಾಲಾಂತರದಲ್ಲಿ ಧನಗರರೆಂದು ಕರೆಯಲ್ಪಟ್ಟರು. ಇವರಿಗೆ ಇವರ ದನಗಳೇ ಧನ(ಸಂಪತ್ತು)ವಾಗಿರುವುದರಿಂದ ಧನಗರ ಎಂಬೀ ಹೆಸರು ಬಂದಿರುವುದು.

ಮೇಷದ ಇನ್ನೊಂದು ಹೆಸರು ಕುರಿ. ಆದರೆ ಕುರಿ ಮೇಷದ ಮೂಲ ಹೆಸರಲ್ಲ. ಹಾಗೆಯೇ ಮೇಷ-ಮೇಕೆ ಪಾಲಕರ ಮೂಲ ಹೆಸರೂ ಕುರುಬ ಅಲ್ಲ. ಮೇಕೆ-ಮೇಷದಿಂದ ಉತ್ಪನ್ನಗೊಂಡ ಇನ್ನೊಂದು ಹೆಸರೇ ಕುರಿ. ಇದಕ್ಕೆ ಆಧ್ಯಾತ್ಮಕ ನೆಲೆಯಿರುವುದು. ಮೇಷ-ಮೇಕೆ ಮ್ಯಾ...(ಮ+ಉ+ಅ) ಎಂದು ಜಪಿಸುವುದು. ಇದು ಮಾನವನ ಮೂಲ ಮಂತ್ರ. ಇಲ್ಲಿಂದಲೇ ಭಾಷೆಯು ಉಗಮವಾಗಿರುವುದು. ಮಾನವ ಇದನ್ನು ಅನುಕರಿಸುತ್ತ ಭಾಷೆ ಕಲಿತ. ಮೇಷ- ಮೇಕೆಯ ನುಡಿ ಮ್ಯಾ...ದಲ್ಲಿ "ಮ, ಉ, ಅ" ಎಂಬೀ ಮೂರು ಅಕ್ಷರಗಳಿವೆ. ಮೇಷ-ಮೇಕೆ ಪಾಲಕ ಮೇಷದ ನುಡಿ(ಮ್ಯಾ...)ಯನ್ನು ಅನುಕರಿಸುವಾಗ (ಮ+ಉ+ಅ) ತಿರುಮುರುವಾಗಿ 'ಅ+ಉ+ಮ ಎಂದು ಉಚ್ಚರಿಸಲಾರಂಭಿಸಿದ. ಇಲ್ಲಿ ಮಹರ್ಷಿ ವಾಲ್ಮೀಕಿಯ 'ರಾಮ'ನಾಮ ಸ್ಮರಣೆ 'ಮರಾ..' ನಾಮ ಸ್ಮರಣೆಯಾಗಿರುವುದನ್ನು ಸ್ಮರಿಸಬಹುದು. ಹಾಗೆಯೇ ಮೇಷ ಮೇಕೆಯ ನುಡಿ ಮ್ಯಾ....(ಮ+ಉ+ಅ) ಮೇಷಪಾಲಕನ ಅನುಕರಣೆಯಲ್ಲಿ ಅ+ಉ+ಮ(ಓಂ) ಆಗಿರುವುದು. 'ಓಂ' ಮಾನವನ ಮೂಲ ಬೀಜಮಂತ್ರ. ಅನಂತರ ಮಾನವ 'ಓಂ' ಕಾರಕ್ಕೆ ಸಹಸ್ರಾರು ಅರ್ಥಗಳನ್ನು ಕಲ್ಪಿಸಿದ. ಮಾನವ ಆಧ್ಯಾತ್ಮ ಶಿಖರವೇರಲು ಮೇಷ (ಓಂ) ಕ್ಕೆ ಗುರಿಯಾಗಿಟ್ಟುಕೊಂಡನು. ಅವನ ಗುರಿ (ಮೇಷ)ಯೇ ಕುರಿಯಾಯಿತೆಂದು ಗೊಂಡರೆ ಧರ್ಮಗುರು ಸಿದ್ಧಯ್ಯ ಆಧುನಿಕ ಒಡೆಯರ್ ಅವರ ವಾದ.

ಈ ಗುರುಗಳು ತಮ್ಮ ವಾದವನ್ನು ನಿಸರ್ಗ ಹಾಗೂ ಭಾಷಿಕ ಹಿನ್ನೆಲೆಯಲ್ಲಿ ತಾರ್ಕಿಕವಾಗಿ ಪ್ರತಿಪಾದಿಸಿರುವರು. ಓಂಕಾರ ಜಪಿಸುವ ಮೇಷ-ಮೇಕೆ ಮಾನವನಿಗೆ ಪ್ರಕೃತಿಯ ರಹಸ್ಯದ ಅರಿವು ಮಾಡಿಸಿತು. ಇದು ಜ್ಞಾನ (ಮೇಷ)ದ ಪ್ರತೀಕವಾಯಿತು. ಅಹಿಂಸೆಯು ಇದರ ಪರಮೋಧರ್ಮವಾಯಿತು. ಹೀಗೆ ಮೇಷದ ಇನ್ನೊಂದು ಹೆಸರು ಆಧ್ಯಾತ್ಮದಲ್ಲಿ ಗು(ಕು)ರಿಯಾಗಿ ಇದರ ಪಾಲಕನು ಗು(ಕು)ರುಬ>ಕುರುಬ ಎಂಬೀ ಹೆಸರಿನಿಂದ ಕರೆಯಲ್ಪಟ್ಟನು. ಹೀಗಾಗಿ ಕುರುಬ ಎಂದರೆ 'ಜ್ಞಾನಿ' ಎಂದರ್ಥ. ಮೂಲತಃ ಇದೊಂದು ಜಾತಿ ಅಥವಾ ಕಸುಬುಸೂಚಕ ಪದವಲ್ಲ. ಇದು ಆಧ್ಯಾತ್ಮವನ್ನು ಪ್ರತಿನಿಧಿಸುವ ಪದ. ಆ ಕಾರಣಕ್ಕಾಗಿಯೇ ಏನೋ ಏಸು ಕ್ರೈಸ್ತರು 'ನಾನೇ ಒಳ್ಳೇ ಕ್ರೈಸ್ತ ಎಂದುಕೊಳ್ಳದೆ, "ನಾನೊಬ್ಬ ಒಳ್ಳೇ ಕುರುಬ" ಎಂದುಕೊಂಡಿದ್ದಾರೆ. ಎಲ್ಲ ಧರ್ಮಗಳು ಜ್ಞಾನ ಮತ್ತು ಆಧ್ಯಾತ್ಮ ಪ್ರತಿನಿಧಿಸುವುದರಿಂದ ಇವೆಲ್ಲವೂ ಕುರುಬನ (ಜ್ಞಾನಿಯ) ಕೊಡುಗೆಯಾಗಿವೆ.

ಎಲ್ಲ ವೇದ(ಸತ್ಯ)ಗಳಿಗೂ ಮೂಲ ವೇದ ಅಜಪವೇದ. ಇಂದು ಭೂಗತವಾಗಿದೆ. 'ಅಜ' ಎಂದರೂ ಆಡು (ಮೇಕೆ), ಕುರಿ (ಜ್ಞಾನ). ಇದು 'ಅ' ಮತ್ತು 'ಜ' ಎಂಬೀ ಎರಡು ಅಕ್ಷರಗಳ ಜೋಡುನುಡಿ. 'ಅ' ಎಂದರೆ 'ಇಲ್ಲ' 'ಜ' ಎಂದರೆ 'ಹುಟ್ಟು' ಎಂಬರ್ಥ. ಅಜ (ಜ್ಞಾನ)ಕ್ಕೆ ಸಮಾನವಾದ ಜ್ಞಾನ (ಸತ್ಯ) ಇನ್ನೊಂದು ಹುಟ್ಟಿಲ್ಲ ಎಂದರ್ಥ. ಇದರ ಅರ್ಥ ಪ್ರಕೃತಿಯ ಸತ್ಯಜ್ಞಾನ. ಹಾಗೆಂತಲೇ ಜ್ಞಾನಕ್ಕೆ ಮೂಲವಾದ ಮೇಷವು ರಾಶಿ ಚಕ್ರದಲ್ಲಿ ಪ್ರಥಮ ಸ್ಥಾನ ಹೊಂದಿರುವುದು. ಈ ಸತ್ಯ ಸಾರ್ವತ್ರಿಕವಾಗಿರುವುದು.

ಕುರುಬ ಹುಟ್ಟುವ ಮುನ್ನ
ಕುಲವಿಲ್ಲ ಗೋತ್ರವಿಲ್ಲ
ಕುರುಬನ ಫಲ ಕಾಣಾ ಬಸವಣ್ಣ

ಎಂಬೀ ಅಲ್ಲಮ ಪ್ರಭುಗಳ ವಚನದಲ್ಲಿಯೂ ಕುರುಬ ಎಂಬ ಪದವು ಜ್ಞಾನಿ ಎಂಬ ಅರ್ಥವನ್ನೇ ಧ್ವನಿಸುತ್ತದೆ. ಕುರುಬ (ಜ್ಞಾನ) ಹುಟ್ಟುವ ಮುನ್ನ ಕುಲಗೋತ್ರಗಳು ಹುಟ್ಟಿಲ್ಲ. ಕುರುಬನ (ಜ್ಞಾನಿಯ) ಪ್ರತಿಫಲಗಳೇ ಕುಲಗೋತ್ರಗಳು ಎಂಬುದರಲ್ಲಿ ಅರ್ಥವಿದೆ. 'ಬೆಳಗಾಗುತ್ತಲೇ ಕುರುಬನ ಮುಖ ನೋಡಬೇಕು. ಕುರುಬನಿಂದಲೇ ಬೋಣಿಗೆ ಮಾಡಬೇಕು. ಇದರಿಂದ ಒಳ್ಳೆಯದಾಗುತ್ತದೆಂಬ ನಂಬಿಕೆ ಇಂದಿನದೇನಲ್ಲ. ಇಲ್ಲಿಯೂ 'ಕುರುಬ' ಜ್ಞಾನದ ಸಂಕೇತವೆ. ಜ್ಞಾನಿಯಿಂದಲೇ ಒಳಿತಾಗುವುದು ಅಜ್ಞಾನಿಯಿಂದಲ್ಲ ಎಂಬುದು ಪೂರ್ವಜರು ಅರಿತವರಾಗಿದ್ದರು. ಈ ಪರಂಪರೆಯೇ ಇನ್ನೂ ಮುಂದುವರಿಯುತ್ತಿದೆ. ಆದರೆ ಕಾಲಾಂತರದಲ್ಲಿ ಕುರುಬ ಎಂಬ ಪದ ತನ್ನ ಮೂಲ

ಕಳೆದುಕೊಂಡು ಒಂದು ಪಶುಪಾಲನೆಯ ಬುಡಕಟ್ಟಾಗಿ ಪರಿಚಯಗೊಂಡಿತು (ಬ್ರಾಹ್ಮಣರೆಂದರೂ ಜ್ಞಾನಿಗಳೆಂಬ ಅರ್ಥವಿತ್ತು, ಇಂದು ಅದೊಂದು ಜಾತಿಯಷ್ಟೆ). ಜ್ಞಾನ ಮೂಲದ ಕುರುಬರೇ ಅಜಪವೇದಾದಿಯಾಗಿ ಎಲ್ಲ ದೇವಗಳಿಗೂ ಹಾಗೂ ಹಾಲುಮತದಾದಿಯಾಗಿ ಎಲ್ಲ ಮತಧರ್ಮಗಳ ಹುಟ್ಟಿಗೂ ಕಾರಣ.

ಇಂತಹ ಭವ್ಯ ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿರುವ ಕುರುಬರು ವಿಶ್ವದ ಮೂಲನಿವಾಸಿಗಳು. ಕರ್ನಾಟಕದ ಮೂಲನಿವಾಸಿಗಳಲ್ಲಿ ಕುರುಬರು ಮೊದಲಿಗರು ಎಂದು ಹೇಳಿಯಾಗಿದೆ. ಕುರುಬ ಎಂಬ ಪದಕ್ಕೆ ಬೆಟ್ಟ ಎಂಬ ಅರ್ಥವೂ ಇದೆ. ಇವರಲ್ಲಿ ಹಾಲು, ಒಕ್ಕೆ, ಅಂಡೆ, ಜಾಡಿ ಅಥವಾ ಕಂಬಳಿ ಕುರುಬರೆಂಬ ಗುಂಪುಗಳಿವೆ.

ಕರ್ನಾಟಕದಲ್ಲಿ ಕುರುಬ, ಗೊಂಡ, ರಾಜಗೊಂಡ, ಕಾಡುಕುರುಬ, ಜೇನುಕುರುಬ, ಧನಗರ ಎಂಬೀ ಎಲ್ಲ ಪದಗಳೂ ಒಂದೇ ಬುಡಕಟ್ಟಿಗೆ ಬಳಸುವ ಸಮನಾಂತರ ಪದಗಳು. ಈ ಎಲ್ಲ ಪದಗಳನ್ನು ಹೊಂದಿರುವ ಸಾಮಾಜಿಕ ಸಂಘಟನೆಗಳು ಕರ್ನಾಟಕದಲ್ಲಿ ಅಲ್ಲಲ್ಲಿ ಕಂಡುಬರುತ್ತವೆ. ಹೀಗಿದ್ದಾಗ್ಯೂ ಈ ಭಿನ್ನ ಪದಗಳನ್ನು ಹೊಂದಿರುವ ಹಲವರಲ್ಲಿ ವೈವಾಹಿಕ ಸಂಬಂಧ ನಿಂತುಹೋಗಿ ಪ್ರಯ್ಉಏಕ ಬುಡಕಟ್ಟಾಗಿ ಗೋಚರಿಸುತ್ತವೆ. ಹೀಗಾಗಲು ಪ್ರಾದೇಶಿಕತೆ ಹಾಗೂ ಕಸಬುಗಳೇ ಕಾರಣಗಳಾಗಿರಬಹುದು.

ಕುರುಬರು ಮೂಲತಃ ಶೈವರು. ಇವರು ಮೈಲಾರ, ಬೀರಪ್ಪ, ಜುಂಜಪ್ಪ, ಮಾಳಿಂಗರಾಯ, ರೇವಣ್ಣಸಿದ್ಧ, ಎಲ್ಲಮ್ಮ, ಕಾಳಿ, ದುರ್ಗಿ ಇತ್ಯಾದಿ ದೈವಗಳನ್ನು ಆರಾದಿಸುವರು. ದೀಪಾವಳಿ, ದಸರಾ, ಹೋಳಿ, ಶಿವರಾತ್ರಿ ಇತ್ಯಾದಿ ಹಬ್ಬಗಳನ್ನು ಆಚರಿಸುವರು. ಇವರಲ್ಲಿ ಉಣ್ಣೆ ಹಾಗೂ ಹತ್ತಿ ಕಂಕಣಗಳೆಂಬ ಪ್ರಭೇದಗಳಿವೆ. ಇವರಿಬ್ಬರಲ್ಲಿ ಅಣ್ಣ ತಮ್ಮಂದಿರೆಂಬ ಭಾವನೆಯಿದೆ. ಹೀಗಾಗಿ ಪರಸ್ಪರ ವಿವಾಹ ನಿಷೇಧವಿದೆ. ಈ ಎರಡು ಕಂಕಣಗಳಲ್ಲಿ ನೂರಾರು ಬೆಡಗುಗಳಿವೆ. ಬೆಸಬೆಡಗುಗಳೊಂದಿಗೆ ವಿವಾಹ ಜರುಗುವುದು. ಅತ್ತಿ, ಆಲ, ಹಾಲ, ಕುರಿ, ಅರಿಶಿಣ, ಆನೆ, ಇತ್ಯಾದಿ ನೂರರು ಬೆಡಗುಗಳು ಇವರಲ್ಲಿವೆ. ಮೃತರನ್ನು ಹೂಳುವ ಮತ್ತು ಸೂತಕ ಆಚರಿಸುವ ಸಂಪ್ರದಾಯವಿದೆ.

೧೯೨೧, ೧೯೩೧, ೧೯೪೧ರ ಜನಗಣತಿಯ ಪ್ರಕಾರ ಅಂದಿನ ಮೈಸೂರು ರಾಜ್ಯದಲ್ಲಿಯ ಕುರುಬರ ಜನಸಂಖ್ಯೆ ಕ್ರಮವಾಗಿ ೪,೦೧,೨೨೨ (ಗಂಡು ೨,೦೨,೬೦೩ ಹೆಣ್ಣು ೧,೯೮,೬೧೯); ೪,೩೫,೯೩೦(ಗಂಡು ೨,೨೦,೪೫೬ ಹೆಣ್ಣು ೨,೧೫,೮೭೪), ಹಾಗೂ ೪,೬೬,೦೫೧ (ಗಂಡು ೨,೩೫,೭೭೭ ಹೆಣ್ಣು ೨,೩೦,೨೭೪) ಎಂದು ದಾಖಲಾದರೆ, ೧೯೭೧ರ ಜನಗಣತಿಯ ಪ್ರಕಾರ ಕೊಡಗಿನ ಕುರುಬ ಬುಡಕಟ್ಟಿನ ಜನಸಂಖ್ಯೆ ೮,೮೫೭ ಎಂದು ದಾಖಲಾಗಿದೆ. ಇವರ ಮಾತೃಭಾಷೆ ಕನ್ನಡ. ಸಾಕ್ಷರರು ಕಡಿಮೆಯಾಗಿದ್ದರೂ ಶಿಕ್ಷಣದ ಬಗ್ಗೆ ಧನಾತ್ಮಕ ಅಭಿಪ್ರಾಯವನ್ನು ಹೊಂದಿದ್ದಾರೆ.

ಬೇಟೆ ಮೂಲದ ಕೊಡಗಿನ ಕುರುಬರು ಮೂಲತಃ ಬೇಟೆ ಮತ್ತು ಆಹಾರ ಸಂಗ್ರಹಣೆಯ ಪ್ರವೃತ್ತಿಯವರು. ಕಾಲಾಂತರದಲ್ಲಿ ಸಾಧು ಪ್ರಾಣಿಗಳಾದ ಮೇಷ, ಮೇಕೆಗಳ ಪಾಲಕರಾಗಿ ಪಶುಪಾಲಕರಾದವರು. ಇಂದಿಗೂ ಸಹಸ್ರಾರು ಕುರಿಗಳೊಂದಿಗೆ ಸಹಸ್ರಾರು ಕುಟುಂಬಗಳ ಅಲೆಮಾರಿ ಪಶುಪಾಲನೆಯ ಬದುಕು ನದಿ ಜಲಾನಯನ ಪ್ರದೇಶಗಳಲ್ಲಿ ಕಾಣಸಿಗುವುದು. ಪ್ರಕೃತಿಯೊಂದಿಗೆ ಮತ್ತು ಪಶುಗಳೊಂದಿಗೆ ಪ್ರೀತಿಯಿಂದ ತಮ್ಮ ಜೀವನವನ್ನು ಸವಿಯುವವರು ದಿನೇ ದಿನೇ ಕಡಿಮೆಯಾಗುತ್ತಿದ್ದಾರೆ. ಇಂದು ವಿಜ್ಞಾನ ಮತ್ತು ತಂತ್ರಜ್ಞಾನ ಯುಗ, ಕೋಳಿ ಫಾರಂಗಳಂತೆ ಕುರಿಗಳ ಫಾರಂಗಳು ತಲೆ ಎತ್ತುತ್ತಿವೆ. ಬರುವ ದಿನಗಳಲ್ಲಿ ಅಲೆಮಾರಿ ಕುರುಬರ ಜೀವನ ಚಿಂತಾಜನಕವಾಗುವುದರಲ್ಲಿ ಸಂದೇಹವಿಲ್ಲ. ಇವರಿಗಾಗಿಯೇ ಒಂದು ವಿಶೇಷ ಯೋಜನೆಯ ಅನುಷ್ಠಾನ ಅನಿವಾರ್ಯವಾಗುವುದು. ಕುರಿ ಉದ್ದಿಮೆಗೆ ಸಂಬಂಧಿಸಿದಂತೆ ಕಂಬಳಿ ನೇಯ್ಗೆಯೂ ಒಂದು ಉದ್ಯಮ. ಇದು ಕೂಡ ಕುರುಬರಿಂದ ಕಳಚಿಕೊಳ್ಳುತ್ತಿದೆ. ಇಂದು ಹೆಚ್ಚಿನ ಕುರುಬರು ಕೃಷಿ ಹಾಗೂ ಕೃಷಿ ಕೂಲಿಯನ್ನು ಅವಲಂಬಿಸಿದವರಾಗಿದ್ದಾರೆ. ಹಲವರು ಸರಕಾರಿ ಹುದ್ದೆಗಳಲ್ಲಿ ಇನ್ನು ಕೆಲವರು ವ್ಯಾಪರ ಜೇನು ಸಂಗ್ರಹಣೆ, ಅರಣ್ಯೋತ್ಪಾದನೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಇವರ ಕುರಿ ಸಾಕಾಣಿಕೆ ಹಾಗೂ ಕಂಬಳಿ ನೇಯ್ಗೆಯ ಕಾಯಕಗಳಿಗೆ ವಿಶೇಷ ಕಾಯಕಲ್ಪದ ಅವಶ್ಯಕತೆ ಇರುವುದು.

ಕರ್ನಾಟಕದ ಕುರುಬರು ೧೯೯೨ ರಲ್ಲಿ ಕನಕದಾಸರ ಹೆಸರಿನಲ್ಲಿ ಕನಕ ಗುರು ಪೀಠವೊಂದನ್ನು ಅವರ ನೆಲೆಯಾದ ಕಾಗಿಲೆಯಲ್ಲಿ ಸ್ಥಾಪಿಸಿ, ಸಮುದಾಯವನ್ನು ಸಂಘಟಿಸುತ್ತಲಿದ್ದಾರೆ. ಪೀಠದ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಲು ಕರ್ನಾಟಕದ ನಾಲ್ಕು ವಿಭಾಗಗಳಲ್ಲಿ ೪

ಶಾಖಾ ಮಠಗಳನ್ನು ಸ್ಥಾಪಿಸಿದ್ದಾರೆ. ಆದರೂ ಕೊಡಗಿನ ಕುರುಬ, ಕರ್ನಾಟಕದ ಜೇನುಕುರುಬ, ಕಾಡುಕುರುಬ, ಕಾಟ್ಟುನಾಯಕನ್, ಗೊಂಡ, ರಾಜಗೊಂಡ ಮತ್ತು ಕುರುಮನ್ಸ ಬುಡಕಟ್ಟಿನವರಿಗೆ ಹಾಗೂ ಹಾಲುಮತ ಹಿನ್ನೆಲೆಯ ಅಲೆಮಾರಿ ಎತ್ತಿನ ಹೆಳವ, ಧನಗರ ಗೌಳಿ ಇತ್ಯಾದಿವರಿಗೆ ಈ ಗುರುಪೀಠ ಅಥವಾ ಇದರ ಶಾಖಾ ಮಠಗಳು ಸಕಾರಾತ್ಮಕವಾಗಿ ಸ್ಪಂದಿಸುತ್ತಿಲ್ಲ. ಹಾಲುಮತದ ಎಲ್ಲ ಬುಡಕಟ್ಟುಗಳಿಗೂ ಗುರುಪೀಠ ಸ್ಪಂದಿಸಿ ಇವರಿಗಾಗಿ ಧನಾತ್ಮಕ ಯೋಜನೆಗಳನ್ನು ಕಾರ್ಯಗತಗೊಳಿಸುವುದು ಅಗತ್ಯವಾಗಿದೆ. ಹಾಲುಮತದ ಸೋದರ ಸಂಬಂಧಿ ಕರ್ನಾಟಕ ವಾಲ್ಮೀಕಿ ಗುರುಪೀಠ ಹಾಗೂ ಗಂಗಾಮತ ಗುರುಪೀಠಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಅವು ತನ್ನ ಒಳ ಪಂಗಡಗಳನ್ನು ಅಭಿವೃದ್ಧಿಯ ತೆಕ್ಕೆಗೆ ತೆಗೆದುಕೊಳ್ಳುತ್ತ ಆಶಾದಾಯಕವಾಗಿ ಬೆಳೆಯುತ್ತಿವೆ. ಈ ಮತದ ಪೀಠಗಳು ತನ್ನ ಮತದ ಅಭಿವೃದ್ಧಿಗಾಗಿ ತನ್ನ ಸಮಾನ ಹಾಗೂ ತನಗಿಂತ ಆರ್ಥಿಕವಾಗಿ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳ ಪೀಠಗಳೊಂದಿಗೆ ಸಕಾರಾತ್ಮಕವಾಗಿ ಬೆರೆತು ಕಾರ್ಯನಿರ್ವಹಿಸುವುದು ಅಗತ್ಯವಾಗಿದೆ.

**ಆಧಾರ ಗ್ರಂಥಗಳು**

ಉಮಾಪತಿ ಬಿ.ಇ. (ಲೇ), *'ಪರಿಶಿಷ್ಟ ಬುಡಕಟ್ಟುಗಳು, ಜಾತಿಗಳು'*, ನಾಯಕ, ಹಾ.ಮಾ. (ಪ್ರಸಂ),

**ಕರ್ನಾಟಕ, ಕನ್ನಡ ವಿಷಯ ವಿಶ್ವಕೋಶ,** (ಮೈಸೂರು: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೭೯), ಪು.೮೮೮.

**ಕಲ್ಯಾಣ ಶ್ರೀ ಬಸವೇಶ್ವರ ಪಂಚಾಂಗ,** ೧೯೯೪, ಪು. ೨೪.

ಚನ್ನಮಲ್ಲಿಕಾರ್ಜುನ, **ವೀರಶೈವ ಪಂಚಾಚಾರ್ಯ ಚರಿತ್ರೆ: ರೇವಣಸಿದ್ಧರು**(ಬ್ಯಾಡಗಿ: ಶ್ರೀ ನಿರಂಜನ ಚೆನ್ನಬಸವಸ್ವಾಮಿ, ಮುಪ್ಪಿನಸ್ವಾಮಿ ವಿರಕ್ತಮಠ, ೧೯೫೮)

ಜೋಶಿ, ಶಂ.ಬಾ. ಕರ್ನಾಟಕ-ಸಂಸ್ಕೃತಿಯ ಪೂರ್ವ ಪೀಠಿಕೆ "ದ್ವಿತೀಯ ಭಾಗ" (ಕರ್ನಾಟಕ ವೀರಕ್ಷತ್ರಿಯರು - ಹಟ್ಟಿಕಾರರು: ದನಗಾರರು) (ಧಾರವಾಡ: ಸಮಾಜ ಪುಸ್ತಕಾಲಯ ೧೯೬೭)

ತೊಂಟಾಪುರ, ಎನ್.ಬಿ., ಉತ್ತರ ಕರ್ನಾಟಕದ ಗೊಂಡ ಅರ್ಥಾತ ಕುರುಬ (ಬೆಂಗಳೂರು: ಕರ್ನಾಟಕ ರಾಜ್ಯಗೊಂಡ ಸಂಘ, ಗಾಂಧಿನಗರ, ೧೯೯೫).

ನಾಗೇಗೌಡ, ಎಚ್.ಎಲ್., **ಹೆಳವರು ಮತ್ತು ಅವರ ಕಾವ್ಯಗಳು,** (ಬೆಂಗಳೂರು: ಸಾಹಿತ್ಯ ಸದನ ಪ್ರಕಾಶನ, ೧೯೮೨),

ನಾಯಕ, ಹಾ.ಮಾ. (ಸಂ), **ಕನ್ನಡ ವಿಷಯ ವಿಶ್ವಕೋಶ**(ಮೈಸೂರು: ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ೧೯೭೩), ಸಂಪುಟ ೬.

*ಭಾರತದ ಜನಗಣತಿಯ ವರದಿಗಳು* (೧೮೯೧-೨೦೦೧).

*ಭಾರತದ ಗ್ಯಾಝೆಟಿಯರ್*"ಬೀದರ್ ಜಿಲ್ಲೆ".

*ಭಾರತದ ಗ್ಯಾಝೆಟಿಯರ್*"ಕರ್ನಾಟಕ, ತಮಿಳುನಾಡು, ಕೇರಳ, ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರ ರಾಜ್ಯಗಳು."

ಮೇತ್ರಿ ಕೆ.ಎಂ., *ಬೀದರ ಜಿಲ್ಲೆಯ ಗೊಂಡ ಆದಿವಾಸಿ ಸಮುದಾಯ: ಒಂದು ಸಮಾಜ ಶಾಸ್ತ್ರೀಯ ಅಧ್ಯಯನ*(ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಮರ್ಪಿಸಿದ ಪ್ರೌಢ ಪ್ರಬಂಧ, ೧೯೯೪) (ಅಪ್ರಕಟಿತ).

ರಸೇಲ್, ಆರ್.ವಿ. ***ದಿ ಟ್ರೈಬ್ಸ್ ಅಂಡ್ ಕಾಸ್ಟ್ಸ್  ಆಫ್ ಸೆಂಟ್ರಲ್ ಪ್ರಾವಿನ್ಸಸ್ ಆಫ್ ಇಂಡಿಯಾ*** (ಹೊಸದೆಹಲಿ: ಕಾಸ್ಮೋ ಪ್ರಕಾಶನ, ೧೯೭೫).

ವಿಠಲಸಿಂಹ ಧೂರ್ವೆ., ***ಮಹಾರಾಜಾ ಸಂಗ್ರಾಮಶಾಹಕೆ ಬಾವನ್ ಗಢ***(ನಾಗಪುರ: ಗೋಟೂಲ್ ಪ್ರಕಾಶನ, ೧೯೯೦)

ಶಶಿ ಎಸ್.ಎಸ್., ***ದಿ ಶಫರ್ಡ್ಸ್ ಆಫ್ ಇಂಡಿಯಾ 'ಎ ಸೋಸಿಯೋ-ಕಲ್ಚರಲ್ ಸ್ಟಡಿ ಆಫ್ ಶೀಪ್ ಅಂಡ್ ಕ್ಯಾಟಲ್‌ರಿಯರಿಂಗ್ ಕಮ್ಯೂನಿಟೀಸ್'*** (ದೆಹಲಿ: ಸಂದೀಪ ಪ್ರಕಾಸನ, ೧೯೭೮).

ಶಾಂತಿನಾಯಕ (ಲೇ), 'ಗೊಂಡರು', ಲಕ್ಕಪ್ಪಗೌಡ , ಎಚ್.ಜೆ. (ಪ್ರಸಂ), ***ಕರ್ನಾಟಕ ಬುಡಕಟ್ಟುಗಳು***(ಬೆಂಗಳೂರು: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ೧೯೯೮), ಸಂಪುಟ ೧, ಪುಟ, ೧೫೧-೨೩೮.

***ಸತ್ಯವೇದವು*** (ಬೆಂಗಳೂರು: ಬೈಬಲ್ ಸೊಸೈಟಿ ಆಫ್ ಇಂಡಿಯ, ೧೯೮೬) ಪು. ೧೨೩.

ಸೈಯದ್, ಜಮೀರುಲ್ಲಾ ಷರೀಫ್, ***ಗೊಂಡರ ಸಂಸ್ಕೃತಿ***(ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩).

Aijappan, A., Report on the Socio-*Economic Conditions of the Aboriginal Tribes of the Province of Madras* (Madras: Govt. Press, 1948)

Chakravarty M.R. and D.P. Mukherjee, 'Dermatoglyphic Affinities of the Tribes and Castes of Nilgiri Hills (India)'- *Zeitschrift fur Morphologie and Anthropologie,* 55(3), 1964. PP 335-56

Furer-Haimedorf. C. 'Von' Aboriginal Rebellions in the Deccan' Man in India, 25(4). 1945. PP. 20-17

—– *Tribal Hyderabad* (Hyderabad: Govt. of HEH. Nizam, 1965).

Hussain, S.K.M., `Tribal Inheritance', *Man in India* 31 (2), 1951, PP 8-7.

Karve, I., 'Anthropometric Measurements in Karnataka and Orissa and a Comparision of These Two Regions with Maharashtra', *Journal of the Anthropological Society of Bombay* (NS), 8(1), 1954, PP. 45-75.

Luiz, A.A.D., *Tribes of Mysore* (Bangalore: G.S. Viswa & Co., 1963) PP. 76-82, 86-90, 125-39, 160-5.

Nanjundayya, H.V. and Ananthakrishna Iyer L.K. *The Mysore Tribes and Caste* (Mysore: Mysore University, 1931) Vol. IV, PP-27.

Nanjundayya, H.V., *The Ethnographic Survey of Mysore* (Bangalore: Govt. Press, 1906)

Nanjundayya. H.V. and L.K. Anantha Krishna Iyer, *The Mysore Tribes and Castes* (MysoreL The Mysore University, 1931), Vol.IV, PP. 68-75

Reddy, T. Parvathi Kumar, 'Kuruba'- in Singh, K.S. (ed), People of India: Tamilnadu (Madras: Affiliated East-West Press Pvt. Ltd. 1997), Vol. XL, Part II, PP. 807-11.

Shashi, S.S. Encyclopaedia of Indian Tribes (New Delhi: Anmal Publication Pvt. Ltd., 1964. Vol.8, PP. 137-40.

Siddayya Adhumik Odiyar, *AConcept of Ajapaveda, 1992.*

Simha, R.N., *Scheduled Castes and Scheduled Tribes* (*Prohibition of Transfer of Certain Lands*) Act and Rules in Karnataka (Bangalore: Sree Ambika Book House, 1999) PP. 36.39, 41, 42, 44, 45.

Singh, K.S., The Scheduled Tribes (Delhi: Oxford University Press, 1994), Vol. III, PP. 291-93, 481-4, 662-80, 924-6.

Sontheimer, G.D., Pastroal Deities in Western India (Delhi: Oxford University Press. 1993).

Syed Siraj UI Hassan. The Castes and Tribes of H.E.H. The Nizam's Dominions (New Delhi: Asian Educational Services, 1989), PP 216-32.

Thurston, E., *Castes and Tribes of Southern India* (Madras: Govt. Press. 1909:rpt. 1975, Delhi: Cosmo Publications). Vol. I. PP. 155-77, 155-76, Vol III P.23., Vol.IV PP.99-106.

## ೧೨. ಕುಡವೊಕ್ಕಲಿಗರು

ಕುಡವೊಕ್ಕಲಿಗರು ಕರ್ನಾಟಕದ ಬಹುಪಾಲು ಜಿಲ್ಲೆಗಳಲ್ಲಿದ್ದರೂ ಅವರ ಸಂಖ್ಯಾಬಾಹುಳ್ಯವಿರುವುದು ವಿಜಾಪುರ ಮತ್ತು ಗದಗ ಜಿಲ್ಲೆಗಳಲ್ಲಿ. ಇಂದು ಕುಡವೊಕ್ಕಲಿಗರು ಎಲ್ಲಾ ದೃಷ್ಟಿಯಿಂದ ಕುರುಬರಿಗಿಂತಲೂ ಭಿನ್ನವಾದ ಒಂದು ಪ್ರತ್ಯೇಕ ಸಮುದಾಯ, ಇವರು ಪೂಜಿಸುವ ದೇವರು, ಮತಾಚರಣೆಗಳಲ್ಲಿ ಇದು ಸ್ಪಷ್ಟವಾಗಿಯೇ ಇದೆ. ಸದ್ಯಕ್ಕೆ ವೀರಶೈವ ಮತಾವಲಂಬಿಗಳಾಗಿರುವ ಇವರು ಜಾತಿ ಶ್ರೇಣಿಯಲ್ಲಿ ಕುರುಬರಿಗಿಂತಲೂ ಮೇಲಿದ್ದಾರೆ. ಆದರೆ ಮೊದಲಿನಿಂದಲೂ ಕುರುಬರು ಮತ್ತು ಕುಡವೊಕ್ಕಲಿಗರು ಭಿನ್ನರಲ್ಲ. ಅವರಿಬ್ಬರೂ ಅಣ್ಣ-ತಮ್ಮಂದಿರಾಗಬೇಕು ಎಂಬ ಅಲಿಖಿತ ಹೇಳಿಕೆಯೊಂದು ಎರಡೂ ಸಮಾಜದ ಜನಸಾಮಾನ್ಯರಲ್ಲಿದೆ. ಈ ಹೇಳಿಕೆ ಅಥವಾ ನಂಬಿಕೆಗೆ ಆಧಾರಗಳಿಲ್ಲದಿಲ್ಲ. ಅದನ್ನೀಗ ಪುರಾಣ ನೆಲೆಯಿಂದ ಆರಂಭಿಸಬಹುದು.

ಹಾಲ್ಮತೋತ್ತೇಜಕ ಪುರಾಣದಲ್ಲಿ ಬರುವ ಒಂದು ಕಥಾ ಭಾಗದೊಂದಿಗೆ ಮೇಲಿನ ವಿಚಾರವನ್ನು ಕೈಗೆತ್ತಿಕೊಳ್ಳಬಹುದು. ಒಮ್ಮೆ ಕೈಲಾಸದಲ್ಲಿ ಶಿವಸಭೆ ನಡೆದಾಗ ಶಿವನ ಎಡಬಲದಲ್ಲಿದ್ದ ಇಬ್ಬರು ಗಂಧರ್ವರು ಕುರೂಪಿ ಮುನಿಯೊಬ್ಬನನ್ನು ಕಂಡು ಕರಬಡಿದು ಅಪಹಾಸ್ಯ ಮಾಡಿ ನಕ್ಕರು. ಇದರಿಂದ ಅವಮಾನಿತ ಮುನಿನಾಥನು ಕಡುಕೋಪದಿಂದ ಅವರಿಗೆ ನರಲೋಕಕ್ಕಿಳಿದು ಕುಡವೊಕ್ಕಲಿಗರು ಉದರದಲ್ಲಿ ಸತಿಪತಿಗಳಾಗಿ ಉದ್ಭವಿಸಿರಿ ಎಂದು ಶಾಪವಿತ್ತನು.

ಹರನಯಡಬಲದಿರ್ದ ಉಭಯ ಗಂಧರ್ವರಾ
ವರಮುನಿಯ ತಂಡದಿ ಕುರೂಪಿಯಾದೊರ್ವ ಪರ
ತರ ತಾಪಸೋತ್ತಮನ ಮಹಿಮೆವರಿಯದೆ ಮೂಢರಂತೆ ಪರಿಹಾಸದಿಂದ
ನೆರೆನಕ್ಕು ಕರಬಡಿಯೆ ಮುನಿನಾಥ ಕೋಪದಿಂ
ನರಲೋಕಕ್ಕಿಳಿದು ಕುಡವೊಕ್ಕಲಿಗರುದರದೊಳ್
ಸರಸದಿಂದುದ್ಭವಾಗಿ ಸತಿಪತಿಗಳಾಗಿರಂದತಿಕೊಪದಿಂದಂ ಶಪಿಸಿದಂ[1]

ಅದರಂತೆ ಜಾಗೃತಪುರದಲ್ಲಿ ಕುಡವೊಕ್ಕಲಿಗೆ ಕುಲದ ಮುದ್ದುಗೊಂಡ ಮುದ್ದಾಯಿ ಗರ್ಭದಲ್ಲಿ ಆದಿಗೊಂಡ ಹುಟ್ಟಿದರೆ ಮುದ್ದುಗೊಂಡನ ಸೋದರಿಯಲ್ಲಿ ಚುಂಚಲೆಯ ಜನನವಾಯಿತು. ಇಬ್ಬರಿಗೆ ಮದುವೆಯಾಗಿ ಆಯ್ಗಂಡ, ಪಾಯ್ಗೊಂಡ, ಅಮರಗೊಂಡ, ಜಾಯ್ಗೊಂಡ, ಶಿವಪದ್ಮರೆಂಬ ಮಕ್ಕಳು ಹುಟ್ಟಿದರು.[2] ಕೃಷಿಕ ಮನೆತನವಾದ್ದರಿಂದ ಮೊದಲಿನ ನಾಲ್ವರು ಒಕ್ಕಲುತನ ಮಾಡುತ್ತಿದ್ದರೆ ಕೊನೆಯವ ಉಂಡಾಡಿಯಾಗಿದ್ದ. ಅಂತೆಯೇ ಅವನು ಉಂಡಾಡಿ ಪದುಮಣ್ಣನೆಂದು ಬಹುತೇಕ ಕಡೆಗೆ ವರ್ಣಿತನಾಗಿದ್ದಾನೆ.

ಜಾಬಾಲಿ ಮುನಿಯ ರಕ್ತದಿಂದುದ್ಭವಿಸಿದ ಕುರಿಗಳನ್ನು ಶಿವಪಾರ್ವತಿಯರು ಕಾಯಬೇಕಾಯಿತು. ಇದರಿಂದಾಗಿ ದಣಿದ ಪಾರ್ವತಿದೇವಿ ಆ ಕುರಿಗಳನ್ನು ಒಂದು ಹುತ್ತದಲ್ಲಿ ಹೊಗಿಸಿ ಅದಕ್ಕೆ ತನ್ನ ಮೂಗುತಿಯ ಮುದ್ರೆಯೊತ್ತಿದಳು.

ಆದಿಗೊಂಡನು ತನ್ನ ಮಕ್ಕಳನ್ನು ಕರೆದು ಬೇಸಾಯ ಮಾಡಲು ಹೇಳಿದನು. ಶಿವಪದ್ಮನು ಒಮ್ಮೆ ಹೊಲದಲ್ಲಿ ನೇಗಿಲು ಹೂಳಿಸಿದಾಗ ನೇಗಿಲು ಕುರಿ ಇರುವ ಹುತ್ತಿಗೆ ತಾಗಿ ಕುರಿಗಳು ಹೊರಬಂದವು. ಶಿವಪದ್ಮನು ಕುರಿಕಾಯತೊಡಗಿದನು. ಉಳಿದ ಅಣ್ಣಂದಿರು ಒಕ್ಕಲುತನ ಮಾಡತೊಡಗಿದರು. ಇವರ ಈ ಎರಡು ವೃತ್ತಿಗಳೇ ಕ್ರಮೇಣ ಎರಡು ಕುಲಗಳಾದವು. ಆದಿಗೊಂಡನ ಮೊದಲಿನ ನಾಲ್ಕು ಮಕ್ಕಳಂತೂ ಹಿಂದಿನಂತೆ ಕುಡವೊಕ್ಕಲಿಗರಾಗಿಯೇ ಉಳಿದರು. ಕುರಿ ಕಾಯಲು ತೊಡಗಿದ ಶಿವಪದ್ಮನು ಹಾಲುಮತದವನಾಗಿ ಕುರುಬ ಕುಲಕ್ಕೆ ಮೂಲ ಎನಿಸಿದನು.

ಇದೇ ವಿಷಯ 'ತಗರ ಪವಾಡ'ದಲ್ಲಿಯೂ ಬಂದಿದೆ. ಆದರೆ ಇಲ್ಲಿ ಆದಿಗೊಂಡನ ಹೆಂಡತಿಯ ಹೆಸರು ಮಲ್ಲಮ್ಮನೆಂದಿದೆ.

ಒಕ್ಕಲಿಗನ ಆದಿಗೊಂಡನ ಉದರದಿ
ಚಿಕ್ಕವ ಸಹ ಏಳುಮಂದಿ
ಒಕ್ಕಲಿಗನ ಇದಕ್ಕೆ ಒಕ್ಕಲಿಕ್ಕಬೇಕೆಂದು
ಮುಕ್ಕಣ್ಣ ತಾನು ಧ್ಯಾನಿಸಿದ[3]

ಒಕ್ಕಲಿಗರಲ್ಲಿ ಹಲವಾರು ಪ್ರಭೇದಗಳಿದ್ದು, ಆದಿಗೊಂಡನು ಯಾವ ಒಕ್ಕಲಿಗ ಎಂಬ ಸಂಶಯ ಬಂದರೂ ಮುಂದೆ ಆದಿಗೊಂಡನ ಮಗ ಪದ್ಮಗೊಂಡನ ವಿಷಯ ಬಂದಾಗ ಅವರು ಕುಡವೊಕ್ಕಲಿಗರೆಂಬ ವಿಷಯ ಸ್ಪಷ್ಟಗೊಳ್ಳುತ್ತವೆ.

ಕಂದ ನೀ ಕುಡವೊಕ್ಕಲಿಗ ಕುರಿಗಳಾಡಿದ ಕಾರಣ
ದಿಂದೆ ಕುರುಬ ಗೌಡನಾಗಿ
ನಿನ್ನೆಯ ಕುಲದೈವ ವೀರಬೀರಯ್ಯಗೆ
ಮುಂದೆ ಒಕ್ಕಲು ಆಗಿ ಬದುಕು[4]

ಎಂದು ಶಿವಪದ್ಮನಿಗೆ ಶಿವನು ಹೇಳುವ ಈ ಮಾತಿನಲ್ಲಿ ಆದಿಗೊಂಡ ಹಾಗೂ ಅವನ ಮಕ್ಕಳೆಲ್ಲ ಕುಡವೊಕ್ಕಲಿಗರೆಂಬುದು ಸ್ಪಷ್ಟವಾಗಿದೆ. ಸಂಗಡವೇ ಶವಪದ್ಮನ ವೃತ್ತಿ, ದೇವರು ಎರಡೂ ಭಿನ್ನವಾಗಿ ಅವನು ಕುಡವೊಕ್ಕಲಿಗರಿಂದ ಬೇರೆಯಾಗಿ ನಿಲ್ಲುವುದು ಇದೇ ಪದ್ಯದಲ್ಲಿ ವ್ಯಕ್ತವಾಗಿದೆ. ಮುಂದೆ ಶಿವನು ಪದ್ಮಣ್ಣನ ಮಗ ಶಾಂತಯ್ಯನಿಗೆ ಮಂತ್ರಪೂರ್ವಕ ದೀಕ್ಷೆ ಕೊಡುತ್ತಾ ಹೇಳುತ್ತಾನೆ.

ಒಕ್ಕಲಿಗನು ಆದಿಗೊಂಡನ ಕುಲಕೆಲ್ಲ
ಹೆಚ್ಚಳವನು ತಂದೆ ಕುರಿಯ
ಹೊಕ್ಕು ಗುರುವ ಕಂಡು ಲಿಂಗಂಗಿಯು ಆಚೆ
ಚೊಕ್ಕಟ ಶರಣನೆಂದೆನಿಪೆ[5]

ಎಂಬಲ್ಲಿ ಕುರುಬರು ಲಿಂಗಧಾರಿಗಳಾಗುವ, ಸಂಸ್ಕೃತಿಕರಣಗೊಳ್ಳುವ ಹೆಜ್ಜೆಯನ್ನು ಕಾಣುತ್ತೇವೆ.

ಭಾರತ ದೇಶದ ಕುರುಬರ ಚರಿತ್ರೆ ಬರೆದಿರುವ ವಿ.ಆರ್. ಹನುಮಂತಯ್ಯನವರು ಕುಡವೊಕ್ಕಲಿಗರನ್ನು ಕುರುಬರ ಒಳಪಂಗಡದಲ್ಲಿಯೇ ಸೇರಿಸುತ್ತಾರೆ. ಇದಕ್ಕೆ ಅವರು ಕೊಡುವ ಆಧಾರವೆಂದರೆ ಕುರುಬರು, ಕುಡುವೊಕ್ಕಲಿಗರು ಒಂದೇ ಕುಲದ ದಾಯಾದಿಗಳೆಂದು ರುದ್ರಬ್ರಹ್ಮಾಂಡ ಪುರಾಣವೆಂಬ ಒಂದು ಪುರಾತನ ಗ್ರಂಥದಲ್ಲಿ ಹೇಳಿದೆ ಎಂಬುದು.[6]

ಹೆಳವರೂ ಕುಡವೊಕ್ಕಲಿಗರ ಮತ್ತು ಕುರುಬರ ಸೋದರ ಸಂಬಂಧವನ್ನು ಸಾರುತ್ತಲೇ ಬಂದಿದ್ದಾರೆ. ಗುಲಬರ್ಗಾ ಜಿಲ್ಲೆಯ ಅಫಜಲಪುರ ತಾಲೂಕಿನ ಮದ್ರಾ ಬಿ ಗ್ರಾಮದ ಹೆಳವ ಸಮಾಜದ ಸಿದ್ರಾಮಪ್ಪ ಹೇಳುವಂತೆ ಮುದಗೊಂಡ ಮತ್ತು ಮುದಲಾಯಿಗೆ ಏಳು ಜನ ಮಕ್ಕಳು. ಆದಿಗೊಂಡ, ಅಮುಲಗೊಂಡ, ಕಂಚಿನ ಖ್ಯಾಮಗೊಂಡ, ಮುತ್ತಿನ ಜ್ಯೋಗಿಗೊಂಡ, ಕುಲದಲ್ಲಿ ಕುಡವಕ್ಕಲಿಗ, ಉಂಡಾಡ ಪದುಮಣ್ಣ, ಕಾಲಿಲ್ಲದ ಸಿದಗೊಂಡ,[7] ಇಲ್ಲಿ ಉಂಡಾಡು ಪದುಮಣ್ಣನಿಂದ ಕುರುಬ ಕುಲ ಬೆಳೆದರೆ, ಕುಲದಲ್ಲಿ ಕುಡವಕ್ಕಲಿಗನಿಂದ ಕುಡವೊಕ್ಕಲಿಗ ಕುಲವು ಬೆಳೆದುದು ಸ್ಪಷ್ಟವಾಗಿದೆ. ಹೀಗೆಯೇ ಅಕ್ಕಲಕೋಟ ತಾಲೂಕಿನ ಸಲಗರ ಎಂಬ ಊರಿನ ಮಲ್ಲಪ್ಪ ಗಂಗಪ್ಪ ಹೆಳವರ ಎಂಬುವರು ಕೊಡುವ ಮಾಹಿತಿಯಲ್ಲಿ ಮುದ್ದಾಯಿ ಮುದಗೊಂಡರಿಗೆ ಏಳು ಜನ ಮಕ್ಕಳಿದ್ದಾರೆ. ಆದಿಗೊಂಡ, ಅಮರಗೊಂಡ, ಕಂಚಿನ ಕ್ಯಾಮಗೊಂಡ, ಮುತ್ತಿನ ಜ್ಯೋತಿಗೊಂಡ, ವೀರದ್ಯಾಮಣ್ಣ,[8] ಉಂಡಾಡು ಪದುಮಣ್ಣ ಮತ್ತು ಕಾಲಿಲ್ಲದ ಸಾನಗೊಂಡ ಇವರು ಕುಲದಿಂದ ಕುಡವೊಕ್ಕಲಿಗರು. ಹೀಗೆ ಪುರಾಣ ಮತ್ತು ಹೆಳವರ ಹೇಳಿಕೆಗಳಿಂದ ಕುರುಬರು ಮತ್ತು ಕುಡವೊಕ್ಕಲಿಗರು ಅಣ್ಣ-ತಮ್ಮರೆಂಬುದು ಜನಜನಿತವಾಗಿ ಉಳಿದುಕೊಂಡು ಬಂದಿದೆ. ಇಂತಹ ಹೇಳಿಕೆಗಳೇ ಕಾರಣವಾಗಿ ಪುರಾಣಮೂಲ ಹಿನ್ನೆಲೆ ಗೆಝೆಟಿಯರುಗಳಲ್ಲಿ ಪ್ರವೇಶ ಪಡೆಯುವಂತಾಯಿತು. ಮುಂಬೈ ಕರ್ನಾಟಕ ಗೆಝೆಟಿಯರ್‌ನಲ್ಲಿ (೧೯೮೪) ರಡ್ಡೇರ ಬಗೆಗೆ ಹೇಳುವಾಗ "ಕುರುಬರ ಮೂಲ ಪುರುಷನಾದ ಕುರುಪಿ ಎಂಬುವನಿಗೆ ಕುಡವೊಕ್ಕಲಿಗ ಎಂಬ ಸಹೋದರನಿದ್ದನು"[9] ಎಂಬ ಮಾತು ಬರುತ್ತದೆ.

ಮೇಲಿನ ಈ ಎಲ್ಲಾ ವಿವರಣೆಯನ್ನು ನೋಡಿದರೆ ಇಂದು ಕುಡವೊಕ್ಕಲಿಗರು ಕುರುಬ ಸಮಾಜದ ಒಂದು ಪಂಗಡವೆನ್ನುವುದಕ್ಕಿಂತ ಅವರನ್ನು ಕುರುಬರ ಸೋದರ ಸಂಬಂಧದ ಸಮುದಾಯವೆನ್ನುವುದು ಹೆಚ್ಚು ಸೂಕ್ತವೆನಿಸುತ್ತದೆ.

ಕುಡವೊಕ್ಕಲಿಗ ಪದದ ವ್ಯುತ್ಪತ್ತಿಯನ್ನು ಬೇರೆ ಬೇರೆ ರೀತಿಯಾಗಿ ಹೇಳಲಾಗುತ್ತದೆ. ಕುಡ ಒಕ್ಕಲಿಗ ಎಂದು ವಿಗ್ರಹ ಮಾಡಿದರೆ ಕುಡ ಎನ್ನುವುದು ಒಕ್ಕಲುತನದ ಒಂದು ಉಪಕರಣವಾಗಿರುವುದರಿಂದ ಒಕ್ಕಲಿಗನಿಗೆ ಹೊಂದುತ್ತದೆ. ವ್ಯವಸಾಯದಲ್ಲಿ ಕುಡವನ್ನು ಉಪಯೋಗಿಸುವ ಒಕ್ಕಲಿಗನು ಕುಡವೊಕ್ಕಲಿಗನಾಗುವನೆಂದು ಸರಳವಾಗಿ ಅರ್ಥೈಸಬಹುದು. ಶಂ.ಬಾ. ಜೋಷಿಯವರು ಕುಡು ಎಂದರೆ ಒಕ್ಕಲಿಗ ಎಂಬ ಅರ್ಥಕೊಟ್ಟು ಕುಡುಒಕ್ಕಲಿಗ ಎರಡೂ ಸಮಾನಾರ್ಥಕಗಳೆನ್ನುತ್ತಾರೆ.[10] ಕುಡು ಎನ್ನುವುದೇ ಮಹಾರಾಷ್ಟ್ರದಲ್ಲಿ ಕುಣಬಿ ಒಕ್ಕಲುಮಗ ಎಂಬುದಕ್ಕೆ ಮೂಲವಾಗಿದೆ ಎಂಬ ಅಭಿಪ್ರಾಯವನ್ನು ಶಂ.ಬಾ. ತಾಳುತ್ತಾರೆ.[11] ಕುರವೊಕ್ಕಲಿಗರಲ್ಲಿಯ ಪೂರ್ವಪದವನ್ನು ಕುಡಿಯ ಎಂದು ಪ್ರತ್ಯೇಕಿಸಿಕೊಳ್ಳುವ ಡಾ. ಎಂ. ಚಿದಾನಂದಮೂರ್ತಿಯವರು ಕುಡಿಯ ಎಂಬುದು ರೈತನನ್ನು ಹೇಳುತ್ತದೆ ಎನ್ನುತ್ತಾರೆ.[12] ಅಲ್ಲಿಗೆ ಶಂ.ಬಾ. ಜೋಷಿ ಮತ್ತು ಚಿದಾನಂದಮೂರ್ತಿ ಇಬ್ಬರದೂ ಏಕಾಭಿಪ್ರಾಯವಾಗುತ್ತದೆ.

ಸದ್ಯಕ್ಕೆ ಕುಡವೊಕ್ಕಲಿಗ ಪ್ರಾಚೀನತೆಗೆ ಕವಿರಾಜಮಾರ್ಗವೇ ಮೊದಲನೆಯವಾಗುತ್ತದೆ. ಕವಿರಾಜಮಾರ್ಗದಲ್ಲಿ ನಾಲ್ಕುವರ್ಣದವರ ಕ್ರಿಯೆ ವೃತ್ತಿಗಳನ್ನು ಈ ರೀತಿ ಹೇಳಿದೆ.

ಪರದರ್ಗಾ ವಾರ್ವರ್ಗಾ
ಯ್ತರಸರ್ವಾ ಕುಡಿಯರಪ್ಪ ನಾಲ್ವರ್ಗಾಗಳ್
ಸ್ಥಿರ ಗೋಪಾಧ್ಯಾಯಕ್ಷ್ಮಾ
ಪರಿಪಾಲ್ಯಕ್ಷೇತ್ರ ಕರ್ಷಣಂಗಳ್ ಕ್ರಿಯೆಗಳ್[13]

ಇಲ್ಲಿ ಉಕ್ತಗೊಂಡಿರುವ ವೈಶ್ಯ, ಬ್ರಾಹ್ಮಣ, ಕ್ಷತ್ರಿಯ, ಶೂದ್ರರಿಗೆ ಅನುಕ್ರಮವಾಗಿ ಪಶುಪಾಲನೆ, ಲಾಭ್ಯಯನ, ರಾಜ್ಯಾಡಳಿತ, ಒಕ್ಕಲುತನಗಳು ವೃತ್ತಿಯಾಗಿದ್ದವು. ಇಲ್ಲಿಯ ಕುಡಿಯರು ಉತ್ತರ ಕರ್ನಾಟಕದ ಕುಡವೊಕ್ಕಲಿಗರೆಂದೂ ಅವರೆಲ್ಲ ಈಗ ವೀರಶೈವರೆಂದೂ ಚಿದಾನಂದಮೂರ್ತಿಯವರು ಹೇಳುತ್ತಾರೆ.[14]

ಕುಡವೊಕ್ಕಲಿಗರು ಶಾಸನಗಳಲ್ಲಿಯೂ ಉಲ್ಲೇಖಗೊಂಡಿದ್ದಾರೆ. ವಿಶೇಷವಾಗಿ ತರ್ದವಾಡಿಯ ಶಾಸನಗಳಲ್ಲಿ ಇವರು ಅರವತ್ತೊಕ್ಕಲು ಎಂಬುದರ ಮುಖಾಂತರ ಮತ್ತೆ ಮತ್ತೆ ಪ್ರಸ್ತಾಪಗೊಳ್ಳುತ್ತಾರೆ. ಭೂಸಾಗುವಳಿ ಮಾಡುವ ಕೃಷಿಕರ ಒಕ್ಕಲಿಗರಾಗಿದ್ದು ಕನ್ನೂರ ಶಾಸನ ಅವರನ್ನು ಕುಡಿಒಕ್ಕಲಿಗ ಎಂದು ಕರೆದಿದೆ. ಈ ಒಕ್ಕಲಿಗರು ತಮ್ಮ ಸೌಕರ್ಯ, ಸಾಮಾಜಿಕ ಸ್ಥಾನಮಾನ, ಸ್ವಹಿತ ರಕ್ಷಣೆಗಾಗಿ ಊರೂರಿಗೆ ಪ್ರತ್ಯೇಕ ಸಂಘವನ್ನು ಕಟ್ಟಿಕೊಂಡಿದ್ದರು. ಅವು ಶಾಸನಗಳಲ್ಲಿ ಅರುವತ್ತೊಕ್ಕಲು ಎಂದು ಹೆರುಗೊಂಡಿವೆ. ಇವು ಆಯಾ ಊರಿನಲ್ಲಿ ಒಕ್ಕಲುತನ ಮಾಡುವವರ ಸಂಖ್ಯೆಯನ್ನು ಸೂಚಿಸಿದೆ. ಪಾರಂಪರಿಕವಾಗಿ ಬಂದ ಹೆರಾಗಿರುವಂತೆ ತೋರುತ್ತದೆ. ತರ್ದವಾಡಿನಾಡಿನ ಕನ್ನೊಳ್ಳಿ, ಹಿರೇಬೇವನೂರ, ಇಂಡಿ, ರೇವಣಗಾಂವ, ಕಡಣಿ ಗ್ರಾಮಗಳಲ್ಲಿ ಅರವತ್ತೊಕ್ಕಲು ಸಂಘವಿದ್ದಿತು.[15] ಈ ಅರವತ್ತೊಕ್ಕಲು ಸಂಘಕ್ಕೆ ಸಾಮಾಜಿಕ ಸ್ಥಾನಮಾನವಿತ್ತು. ಗ್ರಾಮೀಣರ ವಿವಿಧ ಚಟುವಟಿಕೆಗಳಲ್ಲಿ ಅರವತ್ತೊಕ್ಕಲಿನವರು ಭಾಗವಹಿಸುತ್ತಿದ್ದರು. ವಿಶೇಷವಾಗಿ ದಾನದತ್ತಿ ಬಿಡುವ ಸಂದರ್ಭಗಳಲ್ಲಿ ಪ್ರಭುಗಳು, ಸೇನಬೋವ, ತಳವಾರ, ಬಡಿಗ, ಕಮ್ಮಾರ, ಅಕ್ಕಸಾಲಿ, ಅಗ, ಅಂಬಿಗ ಎಂದಿರುವ ಎಂಟು ಹಿಟ್ಟು[16]ಗಳೊಂದಿಗೆ (ಅಷ್ಟಪಷ್ಟ) ಇವರು ಇರಬೇಕಾದದ್ದು ಇವರ ಸಾಮಾಜಿಕ, ಧಾರ್ಮಿಕ ಪ್ರತಿಷ್ಠೆಯಾಗಿದ್ದಿತು.

ವಚನ ಚಳುವಳಿಯ ಸುಮಾರಿಗೆ ಅಷ್ಟಾದಶ ಜಾತಿಗಳು ಬೆಳೆದು ಬಂದಿರುವುದು ಸ್ಪಷ್ಟವಾಗಿದೆ. ಬೇರೆ ಬೇರೆ ವೃತ್ತಿಗಳಿಂದ ಬೇರೆ ಬೇರೆ ಕುಲಾಚಾರಗಳು ಕಾಲಾನುಕ್ರಮದಲ್ಲಿ ನಿರ್ಮಾಣಗೊಂಡವುಗಳು. ಉರಿಲಿಂಗಪೆದ್ದಿ, ಹಾವಿನಹಾಳ ಕಲ್ಲಯ್ಯ, ಸೊಡ್ಡಳಬಾಚರಸ, ಅಂಬಿಗರ ಚೌಡಯ್ಯ ಮುಂತಾದವರ ವಚನಗಳಲ್ಲಿ ಅಷ್ಟಾದಶ ಜಾತಿಗಳ ಉಲ್ಲೆಖವಿದೆ. ಅಷ್ಟಾದಶ ಜಾತಿಗಳಲ್ಲಿ ಕುಡವೊಕ್ಕಲಿಗ ಎಂಬುದೂ ಒಂದು ಜಾತಿಯೆಂದು ಅಂಬಿಗರ ಚೌಡಯ್ಯ ಸ್ಪಷ್ಟವಾಗಿಯೇ ಹೇಳಿದ್ದಾನೆ.[17] ಸೊಡ್ಡಳ ಬಾಚರಸ ಹೇಳುವ ೧೮ ಜಾತಿಗಳಲ್ಲಿ ಕುಡವೊಕ್ಕಲಿಗವಿರದೆ ಒಕ್ಕಲಿಗ ಉಲ್ಲೇಖಗೊಂಡಿದ್ದಾನೆ. ಇಲ್ಲಿ ಒಕ್ಕಲಿಗ ಎಂಬುದು ಕುಡವೊಕ್ಕಲಿಗ ಎಂಬುದಕ್ಕೆ ಪರ್ಯಾಯ ಪದವಾಗಿದೆ.[18]

ಕುಡವೊಕ್ಕಲಿಗ ಜನಾಂಗದ ಮಾಹಿತಿ ಸಂಗ್ರಹ ಸಂದರ್ಭದಲ್ಲಿ ವಿಜಾಪುರದ ಎಂ.ಬಿ. ಬಿರಾದಾರ ಹಾಗೂ ಪಾಟೀಲ ಅವರನ್ನು ಸಂದರ್ಶಿಸಲಾಯಿತು. ಈ ಜನಾಂಗದ ಭೌಗೋಳಿಕ ವಿಸ್ತಾರ, ಪ್ರಸ್ತುತ ಜೀವನ ವಿಧಾನ, ನಂಬಿಕೆ, ಸಂಪ್ರದಾಯಗಳನ್ನು ಕುರಿತಾಗಿ ಇವರಿಬ್ಬರು ಮಹನೀಯರು ಅನೇಕ ಮಾಹಿತಿ ನೀಡಿದ್ದಾರೆ. ಸಂದರ್ಶನದ ಫಲಿತಗಳನ್ನು ಹೀಗೆ ಕ್ರೋಢಿಕರಿಸಬಹುದು.

ಕುಡವೊಕ್ಕಲಿಗರು. ಕುರುಬರು ರೆಡ್ಡಿಗಳು ಮೂಲತಃ ಒಂದೇ ಉಲಿಗದವರಾಗಿದ್ದು ಆಂಧ್ರದಿಂದ ಬಂದವರು. ಮೊದಲು ಎಲ್ಲರೂ ಮಾಂಸಾಹಾರಿಗಳಾಗಿದ್ದರು ಎಂಬುದಿದೆ. ಮುಂದೆ ಇವರು ಬಸವನಾಡಿಯಲ್ಲಿ ಬಂದ ಮೇಲೆ ವೀರಶೈವ ಲಿಂಗಾಯಿತ ಧರ್ಮ ಸ್ವೀಕರಿಸಿ ಪೂರ್ಣ ಶಾಖಾಹಾರಿಗಳಾದವರು. ಫಲವತ್ತಾದ ಭೂಮಿ ಇರುವಲ್ಲಿ ಒಕ್ಕಲುತನವನ್ನು ಮುಖ್ಯ ಉದ್ಯೋಗವನ್ನಾಗಿ ಮಾಡುಕೊಂಡು ಕುಡುವೊಕ್ಕಲಿಗರು ಅಲ್ಲಲ್ಲಿ ವಾಸವಾದರು. ವಿಜಾಪುರ, ಗದಗ, ಧಾರವಾಡ, ಬೆಳಗಾಂವ, ಕೊಪ್ಪಳ, ಹಾವೇರಿ, ಬಳ್ಳಾರಿ, ರಾಯಚೂರು, ಗುಲಬರ್ಗಾ, ಬೀದರ್ ಜಿಲ್ಲೆಗಳಲ್ಲಿ ಕುಡವೊಕ್ಕಲಿಗರ ಜನಾಂಗವಿದ್ದರೂ ಮುಂಚೆ ಹೇಳಿದಂತೆ ವಿಜಾಪುರ ಮತ್ತು ಗದಗ ಜಿಲ್ಲೆಗಳಲ್ಲಿ ಅಧಿಕ ಸಂಖ್ಯೆಯಲ್ಲಿದ್ದಾರೆ. ಕರ್ನಾಟಕ ಮಹಾರಾಷ್ಟ್ರ ಗಡಿಯಲ್ಲಿ ವಿಶೇಷವಾಗಿ ಸೊಲ್ಲಾಪುರದಲ್ಲಿ ೧೮೦೦ ರಿಂದ ೨೦೦೦ ಜನಸಂಖ್ಯೆಯವರೆಗೆ ಕುಡವೊಕ್ಕಲಿಗರಿದ್ದಾರೆ. ಸುತ್ತಮುತ್ತಲಿನ ಹಳ್ಳಿಯ ಜನ ಯಾವುಯಾವುದೋ ಕಾರಣವಾಗಿ ಸೊಲ್ಲಾಪುರದಲ್ಲಿ ನೆಲೆಸಿದ್ದಾರೆ.

ಹೀಗೆಯೇ ಆಂದ್ರ-ಕರ್ನಾಟಕ ಗಡಭಾಗದಲ್ಲಿಯೂ ಕುಡವೊಕ್ಕಲಿಗರ ಅನೇಕ ಕುಟುಂಬಗಳಿವೆ. ಇವರೆಲ್ಲ ಪರಸ್ಪರ ವೈವಾಹಿಕ ಸಂಬಂಧಗಳನ್ನು ಬೆಳೆಸಿಕೊಂಡಿದ್ದಾರೆ. ಆಂಧ್ರ ಪ್ರದೇಶದಿಂದ ಬರುವ ಮುತ್ತುಗಾರರು ತಾವೂ ಕುಡವೊಕ್ಕಲಿಗರೆಂದು ಹೇಳಿಕೊಳ್ಳುತ್ತಾರೆ. ಇವರು ಶಾಖಾಹಾರಿಗಳು. ಒಕ್ಕಲುತನದ ಹಂಗಾಮು ಮುಗಿದ ನಂತರ ಬೇಸಿಗೆಯಲ್ಲಿ ಮುತ್ತು ಮಾರಲು ಬರುತ್ತೇವೆ

ಎಂಬುದನ್ನು ಅವರ ಬಾಯಿಂದ ಕೇಳಿದ್ದೇನೆ ಎನ್ನುತ್ತಾರೆ ಎಂ.ಬಿ. ಬಿರಾದಾರ ಅವರು. ಬೀದರ್ ಜಿಲ್ಲೆಯ ಕುಡವೊಕ್ಕಲಿಗರಿಗೂ ಆಂಧ್ರಪ್ರದೇಶದ ಮುತ್ತುಗಾರರಿಗೂ ವೈವಾಹಿಕ ಸಂಬಂಧಗಳು ಬೆಳೆದಿವೆ.

ವಿಜಾಪುರ ಜಿಲ್ಲೆಯಲ್ಲಿ ಗೊಂಡ ಎಂಬುದರೊಂದಿಗೆ ಕೊನೆಗೊಳ್ಳುವ ಹೆಸರಿನವರಿದ್ದಾರೆ. ಕಾಮಗೊಂಡ, ಕನಗೊಂಡ, ಮನಗೊಂಡ, ಆದಿಗೊಂಡ, ಸಮಗೊಂಡ, ಪಟಗೊಂಡ, ಕೊಟಗೊಂಡ ಎಂಬ ಹೆಸರುಗಳನ್ನಿಲ್ಲಿ ಉದಾಹರಿಸಬಹುದು.

ಕುಡವೊಕ್ಕಲಿಗರಲ್ಲಿ ನಾಲ್ಕು ಪ್ರಭೇದಗಳಿವೆ. ೧. ಸಂಡೋತಿ (ದಂಡಾವತಿ) ೨. ತಬ್ಲಾವಾಡಿ (ತದ್ದೋಡಿ) ೩. ಎತ್ತಿರಕ ೪. ಮಿಣಿಗಚಕ ಇವುಗಳ ವ್ಯುತ್ಪತ್ತಿ ಕುರಿತಾಗಿ ರೂಢಿಯಲ್ಲಿರುವ ತಿಳಿವಳಿಕೆ ಹೀಗಿದೆ. ಕುಡವೊಕ್ಕಲಿಗ ಸಮಾಜದಲ್ಲಿ ಮದುಮದುವೆ ಇರಲಿಲ್ಲ. ಆದರೆ ಕೆಲವು ಗುಂಪಿನ ಜನರು ಗಂಡ ತೀರಿಕೊಂಡ ಮೇಲೆ ಮಹಿಳೆಯರಿಗೆ ಮರುಮದುವೆ ಮಾಡಿದರು. ಆಗ ಸಮಾಜದವರೆಲ್ಲ ಕೂಡಿಕೊಂಡು ದಂಡಕಟ್ಟಿದರು. ಆಗ ಅವರಿಗೆ ದಂಡಾವತಿ ಅಂದರು. ತರ್ದವಾಡಿ ನಾಡಿನಲ್ಲಿ ಇದ್ದವರು ತದ್ದೋಡಿಗಳಾದರು. ಮದುವೆ ಸಂದರ್ಭದಲ್ಲಿ ಹಂದರದಲ್ಲಿ ಮಿಣಿ ಹಾಕುವುದರಿಂದ ಮಿಣಿಗಡಕ ಎಂಬ ಶಬ್ದ ಬಂದಿತು. ಇನ್ನು ಕೆಲವರು ಒಳ್ಳೆಯ ಜಾತಿ ಎತ್ತುಗಳನ್ನು ಕಟ್ಟಿದ್ದರಿಂದ ಇವು ಇರಕ ಇದ್ದದ್ದರಿಂದ ಅವರು ಎತ್ತಿರಕ ಆದರು.

ಸ್ವಾತಂತ್ರ್ಯ ಪೂರ್ವದಲ್ಲಿ ಈ ನಾಲ್ಕು ಪ್ರವೇಶಗಳಲ್ಲಿ ಪರಸ್ಪರ ವಿವಾಹ ಸಾಧ್ಯವಿರಲಿಲ್ಲ. ತುಂಬ ಕಟ್ಟುನಿಟ್ಟಿತ್ತು. ಸ್ವಾತಂತ್ರ್ಯಾನಂತರದಲ್ಲಿ ಸಮಾಜದ ಕೆಲವು ಸುಶಿಕ್ಷಿತರು ಕೂಡಿ ಮದುವೆಯ ಈ ನಿರ್ಬಂಧದಿಂದಾಗಿ ಸಮಸ್ಯೆಯಾಗುತ್ತಿದೆ. ಈ ಎಲ್ಲ ಒಳಪಂಗಡಗಳನ್ನು ಕೂಡಿಸಿ ಕುಡವೊಕ್ಕಲಿಗ ಎಂಬ ಒಂದೇ ಸಮಾಜವನ್ನು ಮಾಡಿದರೆ ವೈವಾಹಿಕ ಕೂಡಕೊಳ್ಳುವಿಕೆಗೆ ಅನುಕೂಲವಾಗುವುದೆಂದು ಯೋಚಿಸಿದರು. ೧೯೫೧-೫೨ ರಲ್ಲಿ ಕಾಖಂಡಗಿ ಗೌಡರು, ಮದಭಾವಿ ಗೌಡರು, ಜೇವರಗಿ ತಾಲೂಕಿನ ಅಂದೇನಿಗೌಡರು ಮುಂತಾದ ಸಮಾಜದ ಮುಖಂಡರು ಕುಡವೊಕ್ಕಲಿಗರಲ್ಲಿದ್ದ ನಾಲ್ಕು ಒಳಪಂಗಡಗಳನ್ನು ತೊಡೆದು ಹಾಕಿದ್ದರಿಂದ ನಾಲ್ಕು ಒಳಪಂಡಗಳಲ್ಲಿ ಪರಸ್ಪರ ವೈವಾಹಿಕ ಸಂಬಂಧಗಳು ಬೆಳೆಯುತ್ತಿವೆ.

ಜನನ-ಮದುವೆ-ಮರಣದಂಥ ಪ್ರಸಂಗಗಳಲ್ಲಿ ಇವರವೇ ಆದ ರೂಢಿಗತ ಸಂಪ್ರದಾಯ, ಆಚರಣೆಗಳಿವೆ.

**ಜನನ:** ಗಂಡುಮಗು ಹುಟ್ಟಿದ ಸರಿದಿನಕ್ಕೆ, ಹೆಣ್ಣುಮಗು ಹುಟ್ಟಿದ ಬೆಸದಿನಕ್ಕೆ ಹೆಸರಿಡುತ್ತಾರೆ. ಅನುಕೂಲವಾದ ದಿನ, ಸೋದರತ್ತೆ ನಾಮಕರಣ ಮಾಡುತ್ತಾಳೆ. ಹೆಸರಿಡುವಾಗ ಕೂಡಿದ ಮುತ್ತೈದೆಯರು ಅವಳ ಬೆನ್ನು ಚಪ್ಪರಿಸುತ್ತಾಳೆ. ನಾಮಕರಣ ಸಂದರ್ಭದಲ್ಲಿ ಗುಗ್ಗರಿ ಮಾಡಿ ಎಲ್ಲರಿಗೂ ಹಂಚುತ್ತಾರೆ. ಈಗಲೂ ಜೋಗುಳ ಹಾಡಲು ಹಳೆಯ ಜನ ಸಿಗುತ್ತಾರೆ. ಟಿ.ವಿ. ಬಂದ ಮೇಲೆ ಇವೆಲ್ಲ ಇಲ್ಲವಾಗಿವೆ. ಬಾಣಂತಿಯ ಕೈಯಲ್ಲಿಯ ಕೂಸನ್ನು ತೆಗೆದು ಕೊಂಡು ತೊಟ್ಟಿಲ ಕೆಳಗೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ತೆಗೆದುಕೊಳ್ಳುತ್ತಾರೆ. ತೊಟ್ಟಿಲ ಕೆಳಗೆ ಜೋಳ ಹಾಕಿ ಅದರ ಮೇಲೆ ತುಂಬಿದ ತಂಬಿಗೆ ಇಡಲಾಗುತ್ತದೆ.

ಕಿರಣಿ ಉಡಿಸುವ ಸಂಪ್ರದಾಯ ಅನೇಕ ಸಮಾಜಗಳಲ್ಲಿರುವಂತೆ ಕುಡವೊಕ್ಕಲಿಗರಲ್ಲಿಯೂ ಇದೆ. ಹುಡುಗಿಯೊಬ್ಬಳು, ೭-೮ ವರ್ಷದವಳಾಗುತ್ತಿರುವಂತೆ ಹುಡುಗಿಯ ತಾಯಿ ತವರು ಮನೆಯವರು ದಟ್ಟಿತಂದು ಉಡಿಸುತ್ತಾರೆ. ಇದಕ್ಕೆ ಹುಟ್ಟು ಕಿರಣಿ ಎಂಬ ಪರ್ಯಾಯ ಹೆಸರೂ ಇದೆ. ಹುಡುಗಿ ದೊಡ್ಡವಳಾದಾಗ ೫ ದಿನ ಕೂರಿಸುತ್ತಾರೆ. ಈಗಲೂ ತವರು ಮನೆಯವರು ಸೀರೆ ಉಡಿಸಿ ಮೈಲಿಗೆ ಕಳೆಯುವುದುಂಟು. ಅನುಕೂಲಸ್ಥರು ಬಂಗಾರ ಹಾಕುವುದು ಉಂಟು.

ಮುಂಚಿನ ದಿನಗಳಲ್ಲಿ ಮದುವೆಗಳು ಐದು ದಿನಗಳ ಕಾಲ ನಡೆಯುತ್ತಿದ್ದವು. ಆಮೇಲೆ ಮೂರು ದಿನಕ್ಕೆ ಇಳಿದು ತರುವಾಯ ಎರಡು ದಿನಕ್ಕೆ ಬಂದು ಈಗ ಒಂದು ದಿನಕ್ಕೆ ನಿಂತಿದೆ. ಮುಂಚಿನ ಐದು ದಿನಗಳ ಮದುವೆ ಒಳಕಲ್ಲು ಪೂಜೆಯಿಂದ ಪ್ರಾರಂಭಗೊಂಡ ಐದೂ ದಿನಗಳ ಕಾಲ ಮದುವೆಗೆ ಸಂಬಂಧಪಟ್ಟ ಬೇರೆ ಬೇರೆ ಆಚರಣೆ, ಸಂಪ್ರದಾಯಗಳು ನಡೆಯುತ್ತಿದ್ದವು. ಆದರೀಗ ಬದಲಾದ ಕಾಲಮಾನಕ್ಕನುಗುಣವಾಗಿ ಎಲ್ಲ ಮೊಟಕಾಗಿವೆ. ಮೂಲತಃ ಕುಡವೊಕ್ಕಲಿಗರಲ್ಲಿ ಉಡಕಿ ಪದ್ಧತಿಯಿಲ್ಲ. ಆದರೆ ಉಡಿಕಿಗೆ ಪೂರಕವಾದ ಪ್ರಯತ್ನವೊಂದು ಈ ಸಮಾಜದವರಿಂದ ನಡೆದದ್ದಿದೆ. ಚಿಕ್ಕವಯಸ್ಸಿನಲ್ಲಿ ಗಂಡನನ್ನು ಕಳೆದುಕೊಂಡಿರುವ ಒಂದು ದಿನ ಗಂಡನ ಮನೆಗೆ

ಹೋಗದೆ ವಿಧವೆಯಾದ ಹೆಣ್ಣುಮಗಳು ಜೀವನ ಪರ್ಯಂತ ಮರುಗುವುದು ಬೇಡವೆಂದು ಕೆಲವು ಜನ ಸುಶಿಕ್ಷಿತರು ಮರುಮದುವೆಯ ವಿಷಯದಲ್ಲಿ ಆಲೋಚನೆ ಮಾಡಿದರು. ೧೯೯೮ ರಲ್ಲಿ ಜರುಗಿದ ಕುಡವೊಕ್ಕಲಿಗರ ಸಮಾವೇಶ ಸಂದರ್ಭದಲ್ಲಿ ಈ ವಿಚಯಕವಾದ ತಮ್ಮ ಪ್ರಗತಿಪರ ಆಲೋಚನೆಗಳನ್ನು ಸಮಾಜದ ಎದುರು ಮಂಡಿಸಿದರು. ಆದರೆ ಸಂಪ್ರದಾಯವಾದಿಗಳು ಹೊಸ ವಿಚಾರಗಳನ್ನು ಒಪ್ಪಿಸಿಕೊಳ್ಳಲು ಸಿದ್ಧರಾಗಲಿಲ್ಲ. ಸೀಮಂತ ಕಾರ್ಯಕ್ರಮ ಉಳಿದ ಜಾತಿ ಮತಸ್ಥರಲ್ಲಿ ನಡೆಯುವಂತೆಯೇ ನಡೆಯುತ್ತದೆ. ಮರಣ ಸಂದರ್ಭದಲ್ಲಿ ಹೆಣವನ್ನು ಹೂಳಲಾಗುತ್ತದೆ.

ಶ್ರೀಶೈಲದ ಮಲ್ಲಿಕಾರ್ಜುನನು ಕೊಡವೊಕ್ಕಲಿಗರ ಕುಲದೇವರು. ಸೊಲ್ಲಾಪುರದ ಸಿದ್ಧರಾಮೇಶ್ವರನಿಗೂ ಇವರು ನಡೆದುಕೊಳ್ಳುತ್ತಾರೆ.

ಕುಡವೊಕ್ಕಲಿಗ ಸಮುದಾಯ ಇಂದು ಕ್ರಮೇಣ ಆಧುನಿಕ ಬದುಕಿಗೆ ಒಗ್ಗಿಕೊಳ್ಳುತ್ತಿದೆ. ಈ ಸಮುದಾಯದ ಅನೇಕ ಜನ ವಿದ್ಯಾವಂತರು ಶಿಕ್ಷಣ, ರಾಜಕೀಯ ಕ್ಷೇತ್ರದಲ್ಲಿ ಹೆಸರು ಮಾಡಿದ್ದಾರೆ. ಹಲವಾರು ಪ್ರತಿಷ್ಠಿತ ವಿನ್ಯಾಸ ಸಂಸ್ಥೆಗಳ ಮುನ್ನಡೆಗೆ ಇವರು ಕಾರಣರಾಗಿದ್ದಾರೆ. ಗ್ರಾಮೀಣ ಸ್ತರದಲ್ಲಿ ಈ ಜನಾಂಗದ ಜಾನಪದ ಸಂಸ್ಕೃತಿಯ ಬೇರುಗಳು ಇನ್ನೂ ಗಟ್ಟಿಯಾಗಿಯೇ ಉಳಿದಿವೆ. ಉಕ್ಕಲಿ ಬಸವನ ಬಾಗೇವಾಡಿ ತಾಲೂಕು ಜಾಲವಾಲ ಸಿಂದಗಿ ಹೊನವಾಡ ವಿಜಾಪುರ ಇಂಗಳೇಶ್ವರ ಬಸವನ ಬಾಗೇವಾಡಿ ತೊರವಿ, ವಿಜಾಪುರ ಮುಂತಾದ ಗ್ರಾಮಗಳಲ್ಲಿ ಬಹುಸಂಖ್ಯಾತರು ಕುಡವೊಕ್ಕಲಿಗರೇ ಆಗಿದ್ದಾರೆ. ಇಂದಿಗೂ ಕೃಷಿ ಪ್ರಧಾನ ಸಂಸ್ಕೃತಿಯಲ್ಲಿ ಬದುಕುತ್ತಿರುವ ಇವರು ತಮ್ಮ ಮೂಲಕ ಆಚಾರ ವಿಚಾರಗಳನ್ನು ಪ್ರತಿನಿಧಿಸುತ್ತಿದ್ದಾರೆ. ಇಂಥ ಗ್ರಾಮಗಳಲ್ಲಿ ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಕೈಗೊಳ್ಳಲು ಜನಾಂಗಿಕ ಅಧ್ಯಯನ ಎಷ್ಟೋ ಹೊಸ ವಿಷಯಗಳನ್ನು ಬೆಳಕಿಗೆ ತರಬಲ್ಲದು. ಇದು ಸಮೀಪವರ್ತಿಯಾದ ಅನ್ಯ ಸಮುದಾಯಗಳೊಂದಿಗಿನ ತೌಲನಿಕ ಅಧ್ಯಯನಕ್ಕೂ ಪ್ರೇರಣೆ ನೀಡಬಲ್ಲದು.

**ಆಕರ ಗ್ರಂಥಗಳು**


೧. ಹಾಲ್ಮತ್ತೋತ್ತೇಜಕ ಪುರಾಣ, ೧೯೮೨ (ಸಂ) ಭಾಗುತನಯ ನವಿಲೂ

೨. ತಗರ ಪವಾಡ, ೨೦೦೪, (ಸಂ) ಡಾ.ಎಂ.ಎಂ. ಕಲಬುರ್ಗಿ, ಸಿ.ಕೆ. ಪರಶುರಾಮಯ್ಯ, ಡಾ.ಎಫ್. ಟಿ. ಹಳ್ಳಿಕೇರಿ.

೩. ಭಾರತದೇಶದ ಕುರುಬರ ಚರಿತ್ರೆ, ೧೯೫೮, ವಿ.ಆರ್. ಹನುಮಂತಯ್ಯ.

೪. ಹೆಳವರು ಮತ್ತು ಅವರ ಕಾವ್ಯಗಳು ೨೦೦೫, ಎಚ್.ಎಲ್. ನಾಗೇಗೌಡ.

೫. ಮುಂಬಯಿ ಕರ್ನಾಟಕ ಗ್ಯಾಝೇಟೀಯರ್ ೧೯೪೮, (ಅನು) ವೆಂಕಟರಂಗೋಕಟ್ಟಿ.

೬. ಶಂಬಾಕೃತಿ ಸಂಪುಟ-೧, ೩. ೧೯೯೯, (ಸಂ) ಮಲ್ಲೇಪುರಂ ಜಿ. ವೆಂಕಟೇಶ್.

೭. ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ, ೧೯೮೫, ಡಾ. ಎಂ. ಚಿದಾನಂದಮೂರ್ತಿ.

೮. ಕವಿರಾಜಮಾರ್ಗಂ, ೧೯೭೫, (ಸಂ) ಎಂ.ವಿ. ಸೀತಾರಾಮಯ್ಯ.

೯. ತರ್ದವಾಡಿ ನಾಡು ಒಂದು ಅಧ್ಯಯನ. ೧೯೯೦, ಡಾ. ಎಸ್. ಕೆ. ಕೊಪ್ಪ.

೧೦. ಜಾನಪದ ಸಾಹಿತ್ಯ ದರ್ಶನ ಏಳು, ೧೯೮೩, (ಪ್ರ.ಸಂ.) ಎಸ್.ಎಂ. ವೃಷಬೇಂದ್ರಸ್ವಾಮಿ.

೧೧. ಸಮಗ್ರ ವಚನ ಸಂಪುಟ-೯, ೧೯೯೩, (ಸಂ). ಡಾ. ಎಂ.ಎಂ. ಕಲಬುರ್ಗಿ.

೧೨. ಸಕಲ ಪುರಾತನ ವಚನಗಳೂ ೧೯೭೯, (ಸಂ) ಡಾ. ಎಂ.ಎಸ್. ಸುಂಕಾಪುರ.


[1]ಹಾಲ್ಮತ್ತೋತ್ತೇಜಕ ಪುರಾಣ, ೩-೩

[2]ಅದೇ, ಪುಟ ೩-೧೯

[3]ತಗರಪವಾಡ, ೧-೭೦.

[4]ಅದೇ, ೨-೫೮.

[5]ಅದೇ, ೩-೮೬

[6]ಭಾರತ ದೇಶದ ಕುರುಬರ ಚರಿತ್ರೆ, ಪುಟ ೧೧೧

[7]ಹೆಳವರು ಮತ್ತು ಅವರ ಕಾವ್ಯಗಳು, ಪುಟ ೪.

[8]ಅದೇ, ಪುಟ ೯.

[9]ಮುಂಬಯಿ ಕರ್ನಾಟಕ ಗ್ಯಾಝೇಟೀಯರ್, ಪುಟ ೧೨೩.

[10]ಶಂಬಾ ಕೃತಿ ಸಂಪುಟ-೧, ಪುಟ ೧೫೦.

[11]ಅದೇ ಸಂಪುಟ-೩, ಪುಟ ೩೯೭.

[12]ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ, ಪುಟ ೩೮.

[13]ಕವಿರಾಜಮಾರ್ಗಂ, ೧-೬೫.

[14]ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ, ಪುಟ ೩೮.

[15]ತರ್ದವಾಡಿ ನಾಡು ಒಂದು ಅಧ್ಯಯನ, ಪುಟ ೧೫೭.

[16]ಜಾನಪದ ದರ್ಶನ, ಸಂಪುಟ-೭ ಗ್ರಂಥದಲ್ಲಿಯ ಡಾ. ಆರ್.ಎನ್. ಗುರುವ ಅವರ 'ಎಂಟು ಹಿಟ್ಟು ಬಾರಾ ಬಲುತೆ' ಎಂಬ ಲೇಖನವನ್ನು ನೋಡಿ.

[17]ಸಮಗ್ರ ವಚನ ಸಂಪುಟ-೬, ಪುಟ ೮೬.

[18]ಸಕಲ ಪುರಾತನ ವಚನಗಳು-೨, ಪುಟ ೬೮೧.

## ೧೩. ಕುಂಚಿಟಿಗರು

ಚಿತ್ರದುರ್ಗ-ತುಮಕೂರು ಜಿಲ್ಲೆಯ ಪೂರ್ವಭಾಗದಲ್ಲಿ ಕುಂಚಿಟಿಗರು ದಟ್ಟವಾಗಿ ನೆಲಸಿದ್ದಾರೆ. ಕುಂಚಿಟಿಗರು-ವಕ್ಕಲಿಗ ಸಮುದಾಯದ ಒಂದು ಪ್ರಮುಖ ಶಾಖೆ. ಕುಮಚಿಟಿಗರು ಮೂಲತಃ ಪಶುಪಾಲಕರು. ಪಶುಪಾಲನೆಯ ಕಾಲಘಟ್ಟದಲ್ಲಿ ಇವರ ಹಾಗೇ ಪಶುಪಾಲನೆಯಲ್ಲಿ ತೊಡಗಿದ್ದ ಕಾಡುಗೊಲ್ಲರು-ಮ್ಯಾಸಬೇಡರಲ್ಲಿ ಇರುವಂತೆ ಇವರಲ್ಲೂ ಪಶುಪಾಲಕ ಸಾಂಸ್ಕೃತಿಕ ವೀರರು ಇದ್ದಾರೆ. ಪಶುಪಾಲಕ ಸಂಸ್ಕೃತಿ ಅವನತವಾಗತೊಡಗಿದಂತೆ ಈ ಸಮುದಾಗಳು ಸಹಜವಾಗಿ ಕುರಿ ಸಾಕಾಣಿಕೆಗೆ ತೊಡಗಿದಂತೆ ಕಾಣುತ್ತವೆ. ವರ್ಷಕ್ಕೊಮ್ಮೆ ಕುರಿಯ ತುಪ್ಪಡ (ಉಣ್ಣೆ) ಕತ್ತರಿಸಬೇಕಾದ ಅನಿವಾರ್ಯತೆಯಿಂದ ಇವರು ಕುರುಬರ ಸಂಬಂಧಕ್ಕೆ ಬಂದಂತೆ ಕಾಣುತ್ತದೆ. ಜೊತೆಗೆ ಕಂಬಳಿ ಣೇಯುವ ಕುರುಬರಿಗೂ ಉಣ್ಣೆ ಅತ್ಯಗತ್ಯವಾದುದರಿಂದ ಸಹಜವಾಗಿ ಒಬ್ಬರಿಗೊಬ್ಬರು ಹತ್ತಿರವಾದಂತೆ ಕಾಣುತ್ತಾರೆ. ಇದರಲ್ಲಿ ಕುಂಚಿಟಿಗ-ಕುರುಬರ ಸಂಬಂಧಗಳು ಬೇರೆ ಸಮುದಾಯಗಳಿಗಿಂತ ಹೆಚ್ಚು ಆತ್ಮೀಯವಾಗಿರಬೇಕೆಂಬುದಕ್ಕೆ ಸಾಕಷ್ಟು ಆಧಾರಗಳು ದೊರೆಯುತ್ತವೆ. ಒಂದು ಭಾಷೆಯ ಮೂಲಚೂಲಗಳನ್ನು ಗುರುತಿಸಲು ಅದರ ವ್ಯಾಕರಣವನ್ನು ಗಮನಿಸಬೇಕು. ಅದು ಭಾಷೆಯ ಮೂಲ (origin)ವನ್ನು ತನ್ನೊಳಗೆ ಇಟ್ಟುಕೊಂಡಿರುತ್ತದೆ. ಹಾಗೆಯೇ ಯಾವುದೇ ಜಾತಿಯ ಮೂಲಗಳನ್ನು ಶೋಧಿಸಲು ಅದರ ಬಳಿಗಳು (ಬೆಡಗು/ ಕುಲ-ಗೋತ್ರ) ಸಹಾಯಕವಾಗುತ್ತವೆ. ಮುಂದೆ ಅಂಥ ಕೆಲವು ಬಳಿಗಳ ಮೂಲಕ ಕುರುಬ ಕುಂಚಿಟಿಗರ ಸಂಬಂಧಗಳನ್ನು ವಿಶ್ಲೇಷಿಸಲಾಗಿದೆ. ಇಂಥ ಕಡೆ ಶಬ್ಧನಿಷ್ಪತ್ತಿ. ಗಾದೆಗಳೂ ಸಹಾಯಕ್ಕೆ ಬರುತ್ತವೆ.

೧. 'ಕುಂಚಿಟಿಗರು' ಎಂಬ ಹೆಸರೇ ಕುರುಬರು ನೇಯ್ದು ಕಂಬಳಿಗೆ ಸರಿಹಾಕುವ 'ಕುಂಚ' ದಿಂದಲೇ ಬಂದಿದೆ ಎಂದು ಐತಿಹ್ಯಗಳು ಹೇಳುತ್ತವೆ. ಬಹುಶಃ ಕುರುಬರ ಕಂಬಳಿ ನೇಯುವ ಕಾಯಕದಲ್ಲಿ 'ಸರಿ ಹಾಕುವ' ಕಾರ್ಯದಿಂದ ಅವರ ವೃತ್ತಿಗೆ ಇವರು ಸಹಾಯಕರಾಗಿರಬೇಕು. ಆದ್ದರಿಂದಲೇ 'ಕುಂಚ' ಹಿಡಿದದ್ದರಿಂದ 'ಕುಂಚಿಟಿಗರು' ಆದರು ಎಂಬುದು ಒಂದು ಐತಿಹ್ಯ. ಅದರ ನಿಷ್ಪತ್ತಿ ಕುಂಚ + ಆಡಿಗ > ಕುಂಚಾಡಿಗ > ಕುಂಚಡಿಗ ಆದುದು. ನಂತರ ಕುಂಚ > ಕುಂಚಿ ಆಗತೊಡಗಿ ಕುಂಚಡಿಗ > ಕುಂಚಿಟಿಗ > ಕುಂಚಿಗ ಆಗಿರಬೇಕು. ಹಾಗಾದರೆ ಇವರನ್ನು ಕುಂಚಿಟಿಗರೆಂದು ಕರೆಯುವ ಮುನ್ನ ಇವರನ್ನು ಏನೆಂದು ಕರೆಯುತ್ತಿದ್ದರು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಈ ವಾದವನ್ನು ನಿರಾಕರಿಸುವ ಪ್ರಯತ್ನಗಳೂ ನಡೆದಿವೆ. ಅದೇನೇ ಇರಲಿ ಅದು ಇಲ್ಲಿ ಅಪ್ರಸ್ತುತ.

೨. ಬಹುಶಃ ಮೇಲಿನ ವಾದಕ್ಕೆ ಪೂರಕವಾಗಿ ಮತ್ತೊಂದು ಅಂಶವನ್ನು ಇಲ್ಲಿ ಪರಿಶೀಲಿಸಬಹುದು. ಕುಂಚಿಟಿಗರ ೪ಲ (ಕುಲ)ಗಳಲ್ಲಿ 'ಕಂಬಳಿಯವರು' ಎಂಬ ಒಂದು ಗೋತ್ರವಿದ (ಬೆಡಗು ಇದೆ). ಇವರು ಯಾರು? ಬಹುಶಃ ಕಂಬಳಿಗೆ ಸರಿ ಹಚ್ಚುವ ಕಾಯಕದಲ್ಲಿ ನೆರವಾದವರನ್ನೇ 'ಕಂಬಳಿಯವರು' ಎಂದು ಗುರುತಿಸಿರಬಹುದೇ? ಅಥವಾ ಕುಂಚಿಟಿಗರ ನಡಾವಳಿಗಳಲ್ಲಿ ಕಂಬಳಿ ಹಾಸುವ ಕೈವಾಡದ ಬಾಬು ಇವರದಾಗಿದ್ದರಿಂದ ಈ ಹೆಸರು ಬಂತೇ? ಕುಂಚಿಟಿಗರ ಎಲ್ಲ ಶುಭಕಾರ್ಯಗಳಲ್ಲಿ ಕಂಬಳಿಗೆ ತುಂಬಾ ಮಹತ್ವವಿದೆ. ಕರಿ ಕಂಬಳಿ ಗದ್ದಿಗೆಗೆ ಎಲ್ಲಿಲ್ಲದ ಪಾವಿತ್ರ್ಯವಿದೆ. ಪೂಜಾರಿ ಕೂರುವುದು ಕರಿ ಕಂಬಳಿ ಗದ್ದಿಗೆಯ ಮೇಲೆ. ಕಳಶ ಹೂಡುವುದೂ ಕೂಡಾ ಕರಿ ಕಂಬಳಿ ಗದ್ದಿಗೆಯ ಮೇಲೆಯೇ.

ಮದುವೆ ಸಂದರ್ಭದಲ್ಲಿ ವರನ ಹೆಗಲ ಮೇಲೆ ಕರಿಯ ಕಂಬಳಿ ಇರುವುದು ಕಡ್ಡಾಯ. ಕುರುಬ ಕುಂಚಿಟಿಗರ ಮೈತ್ರಿಯ ಸಂಕೇತವಾಗಿ ವರನ ಕೈಗೆ 'ಕುರುಬ ಕಂಕಣ' (ಉಣ್ಣೆ ಕಂಕಣ) ಕಟ್ಟುವ ಸಂಪ್ರದಾಯ ಜಾರಿಗೆ ಬಂತೇ? ಅಥವಾ 'ಕಂಬಳಿಯವರು' ಎಂಬ ಈ ಗುಂಪಿನವರೇ ಜನಾಂಗಕ್ಕೆ ಬೇಕಾದ ಕಂಬಳಿ ನೇಯ್ದು ಕೊಡುವ ಕಾಯಕದಲ್ಲಿ ತೊಡಗಿದ್ದರೇ? ಅಥವಾ ಜನಾಂಗದ ಕಾರ್ಯಗಳಲ್ಲಿ ಕಂಬಳಿ ಹಾಸುವ ಕೈವಾಡದ ಬಾಬು ಈ ಬಳಿಯವರಿಗೆ ಜನಾಂಗ ಬಿಟ್ಟು ಕೊಟ್ಟಿದೆಯೇ?

೩. ಕುರುಬರಲ್ಲಿ 'ಅಂಡೆ ಕುರುಬ' ಎಂಬ ಒಳಪ್ರಭೇದ ಇದೆ. ಕುಂಚಿಟಿಗರಲ್ಲೂ ಇದನ್ನೇ ಹೋಲುವ 'ಅಂಡೇನವರು' ಎಂಬ ಒಂದ ಬೆಡಗಿದೆ. ಕುರುಬರ ಒಂದು ಗುಂಪೇ ಕುಂಚಿಟಿಗರಲ್ಲಿ ಸೇರಿದುದರಿಂದ ಈ ಹೆಸರು ಬಂತೇ? ಹಾಗಾದರೆ 'ಅಂಡೆ' ಎಂದರೆ ಏನು? ಬಹುಶಃ ಅದು 'ಹಂಡೆ' ಎಂಬ ಪಾತ್ರೆಯನ್ನು ಸೂಚಿಸುತ್ತದೆಯೇ? ಕಿಟ್ಟೆಲ್ ಕೋಶದ ಪ್ರಕಾರ ಬೊಂಬಿನಿಂದ ಮಾಡಿದ ಪಾತ್ರಯನ್ನು ಬಳಸುವವರು ಎಂಬ ಅರ್ಥವಿದೆ. ಲೋಹದ ಪಾತ್ರೆಗಳು ಬರುವ ಮುನ್ನ ಬಿದಿರಿನ ಬೊಂಬಿನಿಂದ ತಯಾರಿಸಿದುದನ್ನೇ ಪಾತ್ರೆಯಂತೆ ಬಳಸುತ್ತಿರಬೇಕು. ನಂತರವೂ ಬೊಂಬಿನ ಪಾತ್ರೆಯನ್ನೇ ಬಳಸುತ್ತಿದ್ದುದರಿಂದ ಈ ಹೆಸರು ಬಂತೇ? ಹುಲ್ಲು-ನೀರು ಹುಡುಕುತ್ತಾ ಸದಾ ಕಾವಲುಗಳನ್ನು ಸುತ್ತುವ ಪಶುಪಾಲಕರಾದ ಕುಂಚಿಟಿಗರು ಹಗುರಾಗಿರುವ ಕಾರಣಕ್ಕೆ ಬೊಂಬಿನ ಪಾತ್ರೆಯನ್ನು ಬಳಸುತ್ತಿದ್ದರೇ? ಅಥವಾ ಲೋಹದ ಆಗಮನದ ನಂತರ ಇವರೇನಾದರೂ ಪಾತ್ರೆ ತಯಾರಿಸುವ ಕಾಯಕದಲ್ಲಿ ತೊಡಗಿಸಿಕೊಂಡಿದ್ದರಿಂದ ಈ ಹೆಸರು ಬಂದಿರಬಹುದೇ? ಇವರನ್ನು 'ಉಂಡೇನವರು' ಎಂಬ ಇನ್ನೊಂದು ಹೆಸರಿನಿಂದಲೂ ಕರೆಯುತ್ತಾರೆ. 'ಅಂಡೆ'ನವರೇ 'ಉಂಡೇ'ನವರಾಗಿದ್ದಾರೆಯೇ? ಇವರ ಕುಲದ ಮೂಲ ಪುರುಷ 'ಉಂಡೇತ್ತರಾಯ' ಈತನ ವಂಶದವರೇ 'ಉಂಡೇ'ನವರಾದರೇ? ಕುಂಚಿಟಿಗರ ಮದುವೆಯಲ್ಲಿ ಈತನಿಗೆ 'ವೀಳ್ಯದ ಗೌರವ' ಇದೆ. 'ಕಂಬಳಿಯವರು' ಈ ಉಂಡೇನವರೊಂದಿಗೆ ಅಣ್ಣ-ತಮ್ಮಂದಿರಾಗಿ ನಡೆದುಕೊಳ್ಳುತ್ತಾರೆ. ಅಥವಾ ಈ 'ಅಂಡೆ'ಯು ಕುಂಡೆ ಪಿರ್ರೆ ಯನ್ನು ಸೂಚಿಸುತ್ತಿದೆಯೇ? ಇದಕ್ಕೆ ಪೂರಕವಾಗಿ 'ಅಂಡು ತೊಳೆದರೆ ಹಿಂಡು ಹೆಚ್ಚಲ್ಲ' ಎಂಬ ಮಾತು ಕಾಡುಗೊಲ್ಲರಲ್ಲಿ ಪ್ರಚಾರದಲ್ಲಿದೆ. ಆದರೆ ಮಲ ವಿಸರ್ಜನೆ ಮಾಡಿದಾಗ ಕುಂಡೆ ತೊಳೆದರೆ ಕುರಿಗಳ ಹಿಂಡು ಹೆಚ್ಚುವುದಿಲ್ಲ ಎಂಬ ನಂಬಿಕೆ ಇದೆ. ಹಾಗೇ ಕುರಿಗಾಹಿಗಳಾದ ಇವರು ತಮ್ಮ ಹಿಂದು ಹೆಚ್ಚಲು ಕುಂಡೆ ತೊಳೆಯದ ಈ ಗುಂಪನ್ನು 'ಅಂಡೇನವರು' ಎಂದು ಕರೆದಿರಬಹುದೇ? ಕುರುಬರಲ್ಲಿ ಇದ್ದ ಈ ಗುಂಪಿನ ಕೆಲವರು ಕುಂಚಿಟಿಗರಲ್ಲಿ ಸೇರಿ ಹೋದರೇ? ಇವೆಲ್ಲ ಊಹೆಯ ಸಾಧ್ಯತೆಗಳು ಅಷ್ಟೇ. ಆಯಾ ಕಾಲಘಟ್ಟದಲ್ಲಿ ನಡೆದಿರಬಹುದಾದ ಪ್ರಕ್ರಿಯೆಯನ್ನು ಇವು ಗರ್ಭೀಕರಿಸಿಕೊಂಡಿವೆಯೇ? ಈ ಒಗಟುಗಳನ್ನು ಒಡೆಯುವುದು ಕಷ್ಟ. ಕೇವಲ ಊಹಾಸಾಧ್ಯತೆಯ ಮೊರೆ ಹೋಗಬೇಕಷ್ಟೇ.

೪. 'ಕುರುಬ ಕೆಟ್ಟು ಕುಂಚಿಗನಾದ' ಎಂಬ ಒಂದು ಗಾದೆ ಕುಂಚಿಟಿಗರಲ್ಲಿ ಪ್ರಚಾರದಲ್ಲಿದೆ. ಇದು ಏನನ್ನು ಸಂಕೇತಿಸುತ್ತದೆ? ಹಿಂದೆ ಜನಾಂಗ ಯವನರ (ಮುಸಲ್ಮಾನರ) ಉಪಟಳದಿಂದ ಉತ್ತರ ಭಾರತದಿಂದ ದಕ್ಷಿಣಕ್ಕೆ ವಲಸೆ ಬಂದಾಗ ಅಡ್ಡ ಬಂದ ನದಿ ದಾಟಲು, ನದಿ ದೇವತೆ ನರಬಲಿ ಕೇಳುತ್ತದೆ. ಯಾರೂ ಮುಂದೆ ಬಾರದಿದ್ದಾಗ ಅಲ್ಲಿಯೇ ಕುರಿ ಕಾದುಕೊಂಡಿದ್ದ ಬಪ್ಪರಾಯ ಎಂಬ ಕುರುಬರವನು 'ನನ್ನ ಮುಂಡಕ್ಕೆ ನಿಮ್ಮ ಹೆಣ್ಣು ಧಾರೆ ಎರೆದರೆ, ನಾನು ಗಂಗೆಗೆ ಶಿರ ಅರ್ಪಿಸಿ, ನಿಮ್ಮನ್ನು ತೊರೆ ದಾಟಿಸುತ್ತೇನೆ' ಎನ್ನುತ್ತಾನೆ. ಅವನು ತೊರೆ ದಾಟಿಸುತ್ತಾನೆ. ಇವರು ಕೊಟ್ಟ ಮಾತಿನಂತೆ ಉಂಡೆತ್ತರಯನ ಮಗಳನ್ನು ಬಪ್ಪರಾಯನ ಮುಂಡಕ್ಕೆ ಕೊಟ್ಟು ಧಾರೆ ಎರೆಯುತ್ತಾರೆ. ಬಪ್ಪರಾಯ ಪವಾಡಸದೃಶವಾಗಿ ಬದುಕಿ ಬರುತ್ತಾನೆ. ಜನಾಂಗಕ್ಕೆ ಬಂದ ಆಪತ್ತಿನಿಂದ ಕಾಪಾಡಿ 'ಜಲಧಿ'ಯಲ್ಲಿ ದಾರಿಕೊಡಿಸಿದ ಈತನ ವಂಶದವರು ಮುಂದೆ 'ಜಲಧೇವನರು' ಎಂಬ ಬೆಡಗಿನಿಂದ ಹೆಸರಾಗುತ್ತದೆ. ಇಂಥ ಅಪೂರ್ವ ತ್ಯಾಗ ಮಾಡಿದ

ಬಪ್ಪರಾಯನಿಗೆ ಮೊದಲ ವೀಳ್ಯದ ಗೌರವ ಇಂದಿಗೂ ಸಲ್ಲುತ್ತಿದೆ. ಅವನಿಗೆ ಕೆಣ್ಣು ಕೊಟ್ಟ ಉಂಡೇತ್ತರಾಯನಿಗೆ ನಂತರದ ವೀಳ್ಯದ ಗೌರವ ಸಲ್ಲುತ್ತದೆ.

ಹಲವಾರು ಜನಾಂಗಗಳು ಒಟ್ಟಾಗಿ ಬಾಳುವಾಗ ಇಂಥ ತ್ಯಾಗ, ಬಲಿದಾನಗಳು, ವರ್ಣ ಸಂಕರಗಳು ಆಗುವುದು ಸಹಜ ಎಂಬುದನ್ನು ಈ ಘಟನೆಗಳು ಸಾದರಪಡಿಸುತ್ತವೆ.*

*ಹೆಚ್ಚಿನ ವಿವರಗಳಿಗೆ ಮ್ಯಾಸ ಮಂಡಲದಲ್ಲಿರುವ 'ಕುರುಬ ಮೂಲದ ಕುಂಚಿಟಿಗರ ಸಾಂಸ್ಕೃತಿಕ ವೀರ' ಎಂಬ ನನ್ನ ಲೇಖನ ಗಮನಿಸಿ.

## ೧೪. ಗೊಲ್ಲರು

ಭಾರತ ತನ್ನ ಸಂಸ್ಕೃತಿ ಶ್ರೀಮಂತಿಕೆಯಿಂದ ವಿಶ್ವವಿಖ್ಯಾತ ದೇಶವಾಗಿದೆ. ಭಾರತೀಯ ಸಂಸ್ಕೃತಿಯು ವೈಶಿಷ್ಟತೆ ಹಾಗೂ ವೈವಿಧ್ಯತೆಯ ಅಂತಃಸತ್ವದಿಂದ ಸಾರ್ವಕಾಲಿಕ ನಿಷ್ಪನ್ನವಾಗಿದೆ. ಜೀವದಯೆ ಮತ್ತು ನಿರ್ದಯ ಅಂಶಗಳನ್ನು ಪ್ರಸ್ತುತವಾಗಿ ಸಂಸ್ಕೃತಿ ಒಳಗೊಂಡಿರುವುದು ವಾಸ್ತವ. ಆದರೆ ಆದಿಮ ಸಂಸ್ಕೃತಿಯಲ್ಲಿ ಮಾನವ ಹಿತ ಸಂಪನ್ನತೆಯಿದೆ. ಎಲ್ಲ ಧರ್ಮಗಳ ಉದಯದಲ್ಲೂ ತಿರುಚಿ, ಶ್ರೇಷ್ಠತೆ, ಸ್ವಾರ್ಥ, ಲಂಪಟತನ ಮುಂತಾದ ಕಾರಣಗಳಿಂದ ಮೂಲಭೂತವಾದಿತನದ ಆವಾಹನ ಕ್ರಿಯೆ ನಡೆಯುತ್ತಾ ಮುಂದುವರಿದಿದೆ.

ಪ್ರಾಚೀನ ಕಾಲದಿಂದ ಭಾರತದೊಳಗೆ ಪ್ರಧಾನವಾಗಿ ಆರ್ಯ ಮತ್ತು ದ್ರಾವಿಡ ಸಂಸ್ಕೃತಿಯ ನಿರಂತರ ಸಂಘರ್ಷವಿದೆ. ಹೊರಗಿನವರ ಆಕ್ರಮಣ, ಆಳ್ವಿಕೆ ಮತ್ತು ಧರ್ಮಗಳ ಪ್ರಭಾವಗಳಿಂದ ಹಾಗೂ ಸ್ಥಳೀಯರ ಆಳ್ವಿಕೆಯಿಂದಾಗಿ ಉಪಸಂಸ್ಕೃತಿಗಳಲ್ಲಾದ ಪರಿವರ್ತನೆಗಳು, ಸ್ಥಿತ್ಯಂತರಗಳು ಮುಂತಾದ ಒಲವು-ನಿಲುವುಗಳ ಬಗ್ಗೆ ವಿಸ್ತೃತ ಅಧ್ಯಯನಗಳು ನಡೆಯುತ್ತವೆ.

ಬುಡಕಟ್ಟು ಮೂಲಕ ಪಶುಪಾಲನಾ ಸಂಸ್ಕೃತಿಯಿಂದ ಕುರಿಸಾಕಾಣಿಕೆ, ಕೃಷ್ಣನೇಯ್ಗೆ ಮುಂತಾದ ವೃತ್ತಿ ಅವಲಂಬಿತವಾದ ಸಮುದಾಯಗಳ ಸಂಸ್ಕೃತಿ ಅಧ್ಯಯನ ವಿಭಿನ್ನವಾದುದು ಹಾಗೂ ವಿಶಿಷ್ಟವಾದುದಾಗಿರುತ್ತದೆ. ಆಯಾ ಜನ ಸಮುದಾಯದ ವಿಶಿಷ್ಟ ಗುಣವಾದ ಸಂಸ್ಕೃತಿಯು ಭೌತಿಕ ಮತ್ತು ಅಭೌತಿಕ ವಿಷಯಗಳನ್ನು ಒಳಗೊಂಡಿದೆ. ಹಾಗಾಗಿ ಸಂಸ್ಕೃತಿಯಲ್ಲಿ ಆಯಾ ಜನಸಮೂಹದ ತನ್ನತನವಿರುತ್ತದೆ. ಕುರುಬರು, ಗೊಲ್ಲರು, ಕುಂಚಿಟಿಗರು, ಬೇಡರು, ಬುಡಕಟ್ಟು ಮೂಲದವರು ಎನ್ನುವುದಕ್ಕೆ ದ್ಯೋತಕವಾಗಿ ಅವರ ಕುಲನಾಮಗಳನ್ನು, ಕುಲಾಚರಣೆಗಳನ್ನು ಗಮನಿಸಬಹುದು. ಪಶು, ಪಕ್ಷಿ, ಧಾನ್ಯ, ಪ್ರಕೃತಿ, ಚೇತನ, ಅಚೇತನ, ಮುಂತಾದ ವಸ್ತುಗಳನ್ನು ಆಧರಿಸಿದ ಕುಲನಾಮಗಳಿವೆ. ಕುಲದ ಆದರ್ಶ ನಾಯಕನನ್ನು ಕುಲದೇವರುಗಳಾಗಿ ಆರಾಧನೆ ಮಾಡುವ ಪದ್ಧತಿ, ಧಾರ್ಮಿಕ ಕಟ್ಟುಪಾಡುಗಳ ಪರಿಪಾಲನೆಗಳಿವೆ.

ಹಲವು ಬುಡಕಟ್ಟು ಮೂಲ ಸಮುದಾಯಗಳು ಜಾತಿಗಳಾಗಿ ಪರಿವರ್ತನೆಗೊಂಡಿವೆ. ಕುರುಬರು-ಕಂಬಳಿ ನೇಯ್ಗೆ, ಕೃಷಿ, ಕುರಿ ಸಾಕಾಣಿಕೆ, ಗೊಲ್ಲರು-ಕುರಿಸಾಕಾಣಿಕೆ, ಕೃಷಿ ಕುಂಚಿಟಿಗರು- ಕೃಷಿ ಕುರಿ ಸಾಕಾಣಿಕೆ (ವಿರಳವಾಗಿ) ಹೀಗೆ ಕಸಬು-ಉಪಕಸುಬುಗಳಾಗಿ ಜೀವನ ನಿರ್ವಹಣೆಯ ಪ್ರಧಾನ ಆಧಾರಗಳಾಗಿವೆ. ಇವರ ಜೀವನ ವಿಧಾನ ಮತ್ತು ಮನೋಧರ್ಮವನ್ನು ರೂಪಿಸುವಲ್ಲಿ ಕಸುಬು ವೃತ್ತಿಗಳ ಪಾತ್ರಮಹತ್ವದ್ದು.

ಯಾವ ಬುಡಕಟ್ಟು ಸಮುದಾಯವಾಗಲಿ, ತಮ್ಮ ಮೂಲಕ ಕಸುಬುಗಳು ಜೀವನ ನಿರ್ವಹಣೆಗೆ ಶಕ್ತವಾಗದೆ ಹೋದಾಗ ಸಾಧ್ಯವಾಗುವ ಕಸುಬಿನ ಕಡೆ ಹೊರಳುತ್ತವೆ. ಆದರೆ ಇಡೀ ಸಮುದಾಯ ಹೊಸ ಕಸುಬಿಗೆ ಹೊರಳಲಾಗದೆ, ಮೂಲ ಕಸುಬಿನಲ್ಲಿಯೇ ಉಳಿದು ಬಿಕ್ಕಟ್ಟಿನಲ್ಲಿ ಸಿಲುಕಿ, ಹಿನ್ನಡೆಯು ಉಸುಕಿನಲ್ಲಿ ಉಳಿಯುತ್ತವೆ. ಉದಾಹರಣೆಗೆ ಬೇಡ ಸಮುದಾಯದವರ ಮೂಲ ಕಸುಬು ಬೇಟೆ, ಪಶುಪಾಲನೆ, ಸಾಹಸ ಪ್ರವೃತ್ತಿಯಿಂದ ಜೀವನ ನಿರ್ವಹಣೆ ಸಾಧ್ಯವಾಗದೆ ಕೃಷಿ, ಕುರಿ ಸಾಕಾಣಿಕೆ ಹಾಗೂ ಹಲವು ಕಸುಬುಗಳಿಗೆ ಹೊರಳಿ ಆರ್ಥಿಕ ಬಿಕ್ಕಟ್ಟುಗಳಿಗೆ ಸಿಲುಕಿ ಪ್ರಸ್ತುತವಾಗಿ ಶಿಕ್ಷಣ ಏಕ ಗವಾಕ್ಷಿ ಮೂಲಕ ಹೊರಬರುವ ಪ್ರಯತ್ನ ನಡೆದರೂ ಇಡೀ ಸಮುದಾಯಕ್ಕೆ ಸಾಧ್ಯವಾಗದಿರುವುದು ವಾಸ್ತವ ಅಂದರೆ ಮೂಲ ಕಸಬುಗಳು ಪ್ರಸ್ತುತ ಜಾಗತೀಕರಣದ ದಾಳಿಯಿಂದ ದಿವಾಳಿತನಕ್ಕೆ ತಲುಪುತ್ತಿರುವುದು ಕಟುವಾಸ್ತವ. ಕುರುಬರು ಕಂಬಳಿ ನೇಯ್ಗೆಯಲ್ಲಿ ನವೀಕರಣ ಆಧುನೀಕತೆಯನ್ನು ಅನುಸರಿಸಿದ್ದರೆ ಮುಂದಿನ ಬದುಕಿನ ನೆಲೆಬೆಲೆ ಏನು ಇಂತಹ ಬೆಳವಣಿಗೆಯಿಂದ ಜೀವನ ವಿಧಾನದಲ್ಲಿ ಬದಲಾವಣೆಗಳಾಗಿ ನೂತನ ಬಿಕ್ಕಟ್ಟುಗಳಿಗೆ ಒಳಗಾಗುತ್ತವೆ.

ಸಮಾಜದ ಮೇಲುಸ್ತರದ ಸಮುದಾಯಗಳು ಸಾಂಸ್ಕೃತಿಕ ಅನಾಥಪ್ರಜ್ಞೆಗೆ ಸಿಲುಕುತ್ತಾ, ತಮ್ಮ ಮೂಲ ಚೈತನ್ಯಕ್ಕೆ ತಾವೇ ಧಕ್ಕೆ ತಂದುಕೊಳ್ಳುತ್ತಾ ಒಗ್ಗಟ್ಟು ಹಾಗೂ ಸಂಖ್ಯಾಬಾಹುಳ್ಯದಿಂದ ದುರ್ಬಲರಾಗುತ್ತಾ, ಮತ್ತೊಂದು ಸಮಸ್ಯೆಯನ್ನು ತಂದುಕೊಳ್ಳುತ್ತಿದ್ದಾರೆ. ಕುರುಬ ಸಮುದಾಯದಲ್ಲಿ ಒಡೆಯ ಹಿರಿತನದ ಹಿನ್ನೆಲೆಯಲ್ಲಿ ಈ ರೀತಿಯ ಆಕರ್ಷಣೆಗೆ ಅಧಿಕವಾಗಿ ಒಳಗಾಗದಿರುವುದನ್ನು ಕಾಣುತ್ತೇವೆ. ಕುಂಚಿಟಿಗ ಸಮುದಾಯದಂಲ್ಲಂತೂ ಮತಾಂತರದ ಹಾವಳಿ ಜಾಸ್ತಿಯಾಗಿರುವುದನ್ನು ಗಮನಿಸಬಹುದು.

ಬುಡಕಟ್ಟು ಜನಾಂಗಗಳಿಗೆ ಪ್ರಕೃತಿ ಸರ್ವಶಕ್ತಿ ರೂಪಿಯಾಗಿತ್ತು. ಪಂಚಭೂತಗಳು ದೈವ ಸ್ವರೂಪಿಗಳಾಗಿದ್ದವು. ಹುಟ್ಟು, ಸಾವು-ಎಲ್ಲ ಬಗೆಯ ಪ್ರತಿಕ್ರಿಯೆ-ಕ್ರಿಯಾದಿಗಳೆಲ್ಲವೂ ಅತೀತವಾದ ಶಕ್ತಿಯ ಕೃಪೆಯೆನ್ನುವ ಅಚಲ ನಂಬಿಕೆ. ಕಾಡು ಮಡಿಲಿನೊಂದಿಗೆ ಒಂದಾಗಿ ಬದುಕುವ ಇವರು ಪಶುಪಾಲನೆಗಾಗಿ ಅಲೆಮಾರಿಗಳಾಗಿ ಕೆಲವೊಮ್ಮೆ ನಿರ್ದಿಷ್ಟ ಭಾಗದಲ್ಲಿ ಜೀವನ ನಡೆಸುತ್ತಿದ್ದರು. ಹತ್ತು-ಹಲವಾರು ನೇಮ-ನೀತಿ ಕಟ್ಟುಪಾಡುಗಳನ್ನು ಹಿರಿಯರ ಮುಂದಾಳತ್ವದಲ್ಲಿ ರಚಿಸಿಕೊಂಡು ಅಭೇದವಾದ ರೀತಿಯಲ್ಲಿ ಬದುಕುತ್ತಿದ್ದರು. ತದನಂತರದಲ್ಲಿ ಎಲ್ಲವು ಪ್ರಕೃತಿ ಕೃಪೆಯೆಂದು ನಂಬಿದ್ದ ಬುಡಕಟ್ಟು ಸಮುದಾಯಗಳು ಪ್ರಾಕೃತಿಕ ಸಂಪತ್ತು ಇರುವ ಕಡೆ ನೆಲೆಯೂರಬೇಕೆನ್ನುವ ತಿಳುವಳಿಕೆಯಿಂದ ವಿಶೇಷವಾಗಿ ಜಲಮೂಲವಿರುವ ಆಯಕಟ್ಟಿನ ಪ್ರದೇಶಗಳಲ್ಲಿ ನಿಂತರು. ಬದಲಾವಣೆಯ ಪ್ರಕ್ರಿಯೆಗಳ ನಡುವೆ ಸಂಕ್ರಮಣ ಅವಸ್ಥೆಗೆ ಬುಡಕಟ್ಟು ಸಮೂಹಗಳು ಒಳಗಾಗಿ ಜಾತಿಗಳಾಗಿ ರೂಪಾಂತರಗೊಳ್ಳಲು ತೊಡಗಿದವು. ಭೌಗೋಳಿಕ, ಸ್ಥಳೀಯ ಹಾಗೂ ಹೊರಗಿನವರಿಂದಾದ ತೊಂದರೆಗಳಿಂದ ಬುಡಕಟ್ಟು ಜನಾಂಗಗಳು ಛಿದ್ರೀಕರಣಗೊಂಡು ಗುಂಪು, ಗುಂಪಾಗಿ ಚದುರಿ ನಿರ್ಧಿಷ್ಟ ಪ್ರದೇಶದಲ್ಲಿ ನೆಲೆಯೂರಿದ ಪರಿಣಾಮವಾಗಿ ಹಳ್ಳಿಗಳು ರಚನೆಯಾಗಲು ತೊಡಗಿರಬಹುದು. ಹಳ್ಳಿಗಳು ರೂಪುಗೊಂಡು ಹಲವು ಜನಾಂಗಗಳು ಒಟ್ಟಿಗೆ ವಾಸಿಸುವ ಹಿನ್ನೆಲೆಯಲ್ಲಿ ವೃತ್ತಿಯಾಧಾರಿತ ಅಥವಾ ಕುಲಾಧಾರಿತ ಅಥವಾ ವಿಶಿಷ್ಟಗುಣಾಧಾರಿತವಾಗಿ ಜಾತಿಗಳು ಬೇರೂರಲು ತೊಡಗಿರಬೇಕು.

ಸಮಾಜಶಾಸ್ತ್ರಜ್ಞರಾದ ಎಸ್.ವಿ. ಕೇತಕರ್ ಅವರು ಹೇಳುವಂತೆ ಜಾತಿಯು ಒಂದು ಸಮೂಹವಾಗಿದ್ದು ಎರಡು ಗುಣಲಕ್ಷಣಗಳನ್ನು ಹೊಂದಿವೆ.

೧. ಸದಸ್ಯನಾಗಿ ಹುಟ್ಟಿದವನಿಗೆ ಮಾತ್ರ ಸದಸ್ಯತನವಿರುವುದು ಮತ್ತು ಹಾಗೆ ಹುಟ್ಟಿದವರೆಲ್ಲರೂ ಅದರಲ್ಲಿ ಸೇರ್ಪಡೆಯಾಗುವವರು.

೨. ಸಮಾಜದ ಹೊರಗಡೆಯಿಂದ ವಿವಾಹವಾಗದಂತೆ ಸದಸ್ಯರು ಕಠೋರವಾದ ಸಾಮಾಜಿಕ ನಿಯಮಗಳಿಂದ ನಿರ್ಬಂಧಿತರಾಗಿರುವರು.

ಈ ವ್ಯಾಖ್ಯಾನ ಜಾತಿ ಮತ್ತು ಅನ್ಯ ಜಾತಿಗಳ ನಡುವೆ ವಿವಾಹ ಸಂಬಂಧ ಅಥವಾ ರಕ್ತ ಸಂಬಂಧವನ್ನು ಏರ್ಪಡಿಸಲು ಸಾಧ್ಯವಾಗುವುದಿಲ್ಲ ಮತ್ತು ಸಂಬಂಧಗಳು ಏರ್ಪಟ್ಟಲ್ಲಿ ಯಾವುದೇ ಪುರಸ್ಕಾರವಿರುವುದಿಲ್ಲ ಎಂಬ ಸ್ಪಷ್ಟಪಡಿಸುತ್ತದೆ.

ಬುಡಕಟ್ಟು ಸಮುದಾಯಗಳು ಸಾಮಾನ್ಯವಾಗಿ ಜಗತ್ತಿನ ಸೃಷ್ಟಿ ಮತ್ತು ತಮ್ಮ ಸಮುದಾಯದ ಸೃಷ್ಟಿಗೆ ಗಾಢವಾದ ಸಂಬಂಧಗಳನ್ನು ಹೊಂದಿರುವ ಪುರಾಣಗಳನ್ನು ಸೃಷ್ಟಿ ಮಾಡಿರುತ್ತಾರೆ. ಕನ್ನಡ ಜನಪದ ಸಾಹಿತ್ಯದಲ್ಲಿ ಈ ಬಗೆಯ ಹೇರಳ ಸೃಷ್ಟಿ ಪುರಾಣಗಳಿವೆ. ಒಕ್ಕಲಿಗರು, ಕುಂಚಿಟಿಗರು, ಕುರುಬರು, ಗೊಲ್ಲರು, ಬೇಡರು ಮುಂತಾದ ಹಲವು ಸಮಾಜಗಳಲ್ಲಿ ಈ ಬಗೆಯ ಸೃಷ್ಟಿ ಪುರಾಣಗಳಿವೆ. ಹಿ.ಚಿ. ಬೋರಲಿಂಗಯ್ಯನವರ ವಿಶ್ಲೇಷಣೆಯಂತೆ ಭಾರತದಂತಹ ಒಂದು ದೇಶದಲ್ಲಿ ಒಂದೊಂದು ವರ್ಗ, ಜಾತಿ ಮತ್ತು ಸಮುದಾಯಗಳು ಅವರವರದೇ ಆದ ಲೋಕ ಸೃಷ್ಟಿಯನ್ನು ತಮ್ಮ ಪುರಾಣಗಳ ಮೂಲಕ ಅಭಿವ್ಯಕ್ತಿಸಿವೆ.[1] ಇಲ್ಲಿ ಲೋಕಸೃಷ್ಟಿ ಎಂದರೆ ಜನಪದರ ಸಾಮಾಜಿಕ ಮತ್ತು ಸಾಂಸ್ಕೃತಿಕ ಮನೋಭಾವವಾಗಿದೆ.

ಕುರುಬರು, ಗೊಲ್ಲರು ಕುಂಚಿಟಿಗರು ಮುಂತಾದ ಬುಡಕಟ್ಟು ಸಮುದಾಯಗಳು ಪಶುಪಾಲನೆ, ಹೈನುಗಾರಿಕೆ, ಕುರಿ ಸಾಕಾಣಿಕೆ, ಬೇಟೆ ಹಿನ್ನೆಲೆಯಲ್ಲಿ ಬದುಕುತ್ತಿದ್ದವರು. ಕುರಿಸಾಕಾಣಿಕೆ, ಕಂಬಳಿ ನೇಯ್ಗೆ, ಕೃಷಿ ಪ್ರಧಾನ ವೃತ್ತಿಯಾದ ಹಿನ್ನೆಲೆಯಲ್ಲಿ ಆಯಾ ಸಮುದಾಯಗಳು ಗುಂಪುಗಳಾಗಿ ಬೇರ್ಪಡುವ ಬೆಳವಣಿಗೆಯನ್ನು ಕಂಡಿರಬಹುದು. ಜೊತೆಗೆ ಜಾತಿಗಳಾಗಿ ಪರಿವರ್ತನೆಯಾಗುವ ಪೂರ್ವದಲ್ಲಿನ ಜೀವನಶೈಲಿ, ಸಮಾನ ಆಚರಣೆಗಳು ಹಾಗೂ ನಂಬಿಕೆಗಳಲ್ಲಿ ಸಾಮ್ಯತೆ ಇರುವುದರಿಂದ ಏಕತೆ ಮತ್ತು ಐಕ್ಯತೆ ಸಾಧ್ಯವಾಗಿರಬಹುದು. ಏಕೆಂದರೆ ಆಯಾಯ ಬುಡಕಟ್ಟು ಸಮುದಾಯಗಳು ತಮ್ಮದೇ ಆದ ಕಟ್ಟು, ಕಟ್ಟಳೆಗಳನ್ನು ರೂಪಿಸಿಕೊಂಡು, ಅದರಂತೆ, ಕಟ್ಟುನಿಟ್ಟಾಗಿ ಪರಿಪಾಲಿಸಿಕೊಂಡು, ಪ್ರಕೃತಿಯೊಂದಿಗಿನ ಜೀವಸಂಬಂಧದಿಂದ ರೂಪುಗೊಂಡ ಮಾನವೀಯ ಭೂಮಿಕೆಯ ಗುಣಧರ್ಮಗಳಿಂದ ಈ ಸಮುದಾಯಗಳಲ್ಲಿ ಅನನ್ಯವಾದ ಮಾನವ ಸಂಬಂಧ ಏರ್ಪಟ್ಟಿರಬಹುದೇ ಹೊರತು, ಕಟ್ಟುಕಟ್ಟಳೆಗಳನ್ನು ಸಡಿಲಿಸಿಕೊಂಡು, ಅನಿರೀಕ್ಷಿತ ಸಾಂದರ್ಭಿಕ ಬಿಕ್ಕಟ್ಟುಗಳಿಗೆ ಸಿಲುಕಿ ಅಸಹಾಯಕರಾಗಿ ಸುಲಭ ಪರಿವರ್ತನೆಗೆ ಆಸ್ಪದ ಮಾಡಿಕೊಟ್ಟಿರಲು ಸಾಧ್ಯವಾಗಿಲ್ಲದಿರಬಹುದೆಂದು ಆಯಾ ಬುಡಕಟ್ಟು ಸಮುದಾಯಗಳು ಸಾಂಸ್ಕೃತಿಕ ಅಧ್ಯಯನ ಮೂಲಕ ಕಾಣಬಹುದಾಗಿದೆ.

ಜಾತಿ ಪೂರ್ವ ಬುಡಕಟ್ಟು ಸಮುದಾಯಗಳ ಮನೋಧರ್ಮ ಹಾಗೂ ಆರ್ಯ ಸಂಸ್ಕೃತಿ ಪ್ರಭಾವಗಳ ನೆಲೆಯಲ್ಲಿ ಜಾತಿಗಳಾಗಿ ರಚನೆಗೊಂಡ ತದನಂತರದಲ್ಲಿ, ಜಾತಿ ಮತ್ತು ಹೊರತಾತಿಗಳ ನಡುವೆ ಕಠೋರ ನಿರ್ಬಂಧಗಳು ಬೆಳೆದಿರಬೇಕು. ಲೋಕಸೃಷ್ಟಿಯ ಜೊತೆಗೆ ತಮ್ಮ ಸಮುದಾಯಗಳ ಉದಯ ಸಂಬಂಧ ಪುರಾಣ ಸೃಷ್ಟಿಗಳು ಪ್ರಚಲಿತವಾಗಿರುವುದು. ವೃತ್ತಿ ಸಂಬಂಧ ಹಿನ್ನೆಲೆಯಲ್ಲಿ ಸಮುದಾಯಗಳ ನಡುವೆ ಸಂಬಂಧಗಳನ್ನು ಏರ್ಪಟ್ಟಿರಬಹುದೆನ್ನುವ ನಿಲುವುಗಳು ಈ ಬಗೆಗಿನ ವಿಚಾರಗಳಿಂದ ಒಂದು ಬುಡಕಟ್ಟು ಸಮುದಾಯದಿಂದ ಮತ್ತೊಂದು ಬುಡಕಟ್ಟು ರೂಪಗೊಂಡಿದೆನ್ನುವ ಕೆಲವು ಐತಿಹ್ಯಗಳು ನೆಲೆಯಲ್ಲಿ ತೀರ್ಮಾನಕ್ಕೆ ಬರುವುದು ಸರಿಯಲ್ಲ. ಸಮರ್ಪಕವಲ್ಲ ಎಂದೆನಿಸುತ್ತದೆ. ಏಕೆಂದರೆ ಕುರುಬರು, ಗೊಲ್ಲರು, ಕುಂಚಿಟಿಗರು ಈ ಸಮುದಾಯಗಳು ಕುರುಬರ ಒಳಪಂಗಡಗಳು ಎಂದು ಹೇಳುತ್ತಿರುವುದು ಮತ್ತು ಕೆಲವೊಮ್ಮೆ ಒಳಪಂಗಡಗಳೆಂದು ಹೇಳಲು ಸಾಧ್ಯವಾಗುವುದಿಲ್ಲ ಎಂದು ಹೇಳುತ್ತಿರುವುದು ಕೇಳಿಬರುತ್ತಿದೆ. ಇದಕ್ಕೆ ಸಂಬಂಧಿಸಿದ ಕೆಲವು ಪ್ರಸಂಗಗಳನ್ನು ನೋಡಬಹುದು.

ತೀ.ನಂ. ಶಂಕರನಾರಾಯಣ ಅವರು ಗೊಲ್ಲರಿಗೆ ಕುರಿಗಳು ದೊರಕಿದ ಐತಿಹ್ಯವನ್ನು ವಿಶ್ಲೇಷಿಸಿದ್ದಾರೆ.[2] ಹುತ್ತದ ಕೊವೆಯಿಂದ ದಷ್ಟಪುಷ್ಟವಾದ ಕುರಿಗಳು ಹಿಂಡು ಹುಂಡು ಹೊರನುಗ್ಗಿ ಬರುವುದನ್ನು ಕಂಡು ಹೆದರಿದ ಕುರುಬರ ಹುಡುಗ ಸಾಕಿ ಸಲಹಲು ದಾರಿ ಕಾಣದಿದ್ದಾಗ ಕಾಡು ಗೊಲ್ಲರವನು ಕುರಿಗಳ ಉಸ್ತುವಾರಿ ನೋಡಿಕೊಳ್ಳುವುದಾಗಿ ತಿಳಿಸುತ್ತಾನೆ. ಈ ಪ್ರಸಂಗದಿಂದ ವ್ಯಕ್ತವಾಗುವ ಸಂಗತಿಗಳೆಂದರೆ ಕುರುಬರು, ಕಾಡುಗೊಲ್ಲರು ಈಗಾಗಲೇ ತಮ್ಮ ಸಮುದಾಯಕ್ಕೊಂದು ಅಸ್ಲಿತೆಯ ರೂಪಕವಾಗಿ ಹೆಸರನ್ನಿಟ್ಟುಕೊಂಡಿದ್ದರು ಮತ್ತು ಕುರುಬರಿಂದ ಕುರಿಗಳ ಹಿಂಡು ಸೃಷ್ಟಿಯಾಯಿತಾದರೂ ಕುರಿ ಸಾಕಾಣಿಕೆ ಕಾಡುಗೊಲ್ಲರ ಹೊಣೆಯಾಯಿತು ಎಂದು ತಿಳಿದುಬರುತ್ತದೆ. ಕುರಿ ಹಿಂಡುಗಳ ಉದಯ ಮತ್ತು ಕುರಿ ಸಾಕಾಣಿಕೆಯ ಹೊಣೆ ಕುರುಬರು ಮತ್ತು ಕಾಡುಗೊಲ್ಲರ ಸಮುದಾಯದ್ದಾದ ಮೇಲೆ ಕುರುಬರ ಒಳಪಂಗಡ ಗೊಲ್ಲರು ಎಂದು ಹೇಳಲು ಸಾಧ್ಯವಾಗುವುದಿಲ್ಲ.

ಕಾಳೇಗೌಡ ನಾಗವಾರರು ಬೇವಿನಹಳ್ಳಿ ಗೊಲ್ಲರಹಟ್ಟಿಯಲ್ಲಿ ನಡೆಯುವ ಯಜಮಾನ ಹಬ್ಬ ಕುರಿತಾದ ವಿವರಣೆ ನೀಡಿದ್ದಾರೆ. ಯಜಮಾನರ ಹಬ್ಬದ ದಿನ ಗೊತ್ತಾದ ಮನೆಗಳ ಕುರುಬರು ಕಾಡುಗೊಲ್ಲರ ಮನೆಗಳಿಗೆ ಬಂದು ಪೂಜೆಯನ್ನು ನಡೆಸಿಕೊಂಟ್ಟು ಕುರಿಗಳ ಏಳಿಗೆಗಾಗಿ ಶುಭ ಹಾರೈಸುತ್ತಾರೆ. ಗಾಢವಾದ ಆತ್ಮೀಯತೆಯನ್ನು ಸಂಕೇತಿಸುವ ಕೆಲವು ಆಚರಣೆ ಮತ್ತು ನಡವಳಿಕೆಗಳನ್ನು ಈ

ಸಂದರ್ಭದಲ್ಲಿ ನಾವು ಕಾಣಬಹುದು. ಈ ಕೃತಜ್ಞತಾ ಶ್ರೇಯಸ್ಸು ಕುರುಬರು ಗೊಲ್ಲರಿಗೆ ಕೋರುವುದರ ಹಿನ್ನೆಲೆಯಲ್ಲಿ ವರ್ಷಕ್ಕೆ ಎರಡು ಸಲ ಕುರಿಗಳ ತುಪ್ಪಟ ಕತ್ತರಿಸಿಕೊಂಡು, ಕುರಿಸಾಕಾಣಿಕೆ ಮಾಡಿದವರಿಗೆ ಏಳ್ಗೆಯನ್ನು ಹಾರೈಸುವುದೇ ಆಗಿದೆ. ಅಂದರೆ ಗಢವಾದ ಆತ್ಮೀಯತೆಯ ಬಾಂಧವ್ಯ ಮತ್ತು ಪೂರಕ ವೃತ್ತಿ ಬಾಂಧವ್ಯ ಹಾಗೂ ಜೀವನ ನಿರ್ವಹಣೆಯ ವೃತ್ತಿ ಸಂಬಂಧಗಳ ಹಿನ್ನೆಲೆಯಲ್ಲಿ ಅಥವಾ ನೆಲೆಯಿಂದ ಸುಲಭವಾಗಿ, ಸರಳವಾಗಿ, ಕುರುಬರ ಒಳಪಂಗಡ ಗೊಲ್ಲರು ಎಂದು ಹೇಳಲು ಸಾಧ್ಯವಾಗುವುದಿಲ್ಲ. ಏಕೆಂದರೆ ಕಾಳೇಗೌಡ ನಾಗವಾರರು ಹೇಳುವಂತೆ ಕುರಿಗಳು ಕಾಡುಗೊಲ್ಲರ ಪಾಲಾಗಿ, ಅವುಗಳ ತುಪ್ಪಟ ತೆಗೆದು ಕಂಬಳಿ ನೇಯುವ ಕೆಲಸ ಕುರುಬನಿಗೆ ಉಳಿಯುತ್ತದೆ.[3] ಈ ವಿಚಾರದಿಂದ ಕುರುಬರು ಮತ್ತು ಗೊಲ್ಲರು ಸ್ವತಂತ್ರ ಸಮುದಾಯದವರೆಂದು ಹೇಳಬಹುದು.

ಕುಂಚಿಟಿಗರು ಕುರುಬರ ಒಳಪಂಗಡದವರೆಂದು ಹೇಳುವುದರ ಮೂಲಕ ಹಲವು ವಿದ್ವಾಂಸರು ಅದರಲ್ಲೂ ಕುಂಚಿಟಿಗ ಸಮುದಾಯದವರೇ ಈ ಮಂಡನೆ ಮಾಡುವ ಹಿನ್ನೆಲೆಯಲ್ಲಿ ನನಗೆ ಕಾಣುವುದು ಜಾತ್ಯಾತೀತ ಎನ್ನುವ ಸುಲಭ ಆದರ್ಶವಾದ ಮತ್ತು ಸರಳವಾದ ಮಾಹಿತಿಗಳು-

೧. ಉಂಡೆ ಎತ್ತರಾಯ ಮತ್ತು ಸಮೂಹದವರಿಗೆ ನದಿ ಅಡ್ಡಲಾಗಿ (ನದಿ ಯಾವುದೆಂಬುದರ ಬಗ್ಗೆಯೇ ಗೊಂದಲಗಳಿವೆ) ದಾರಿಬಿಡಲು ಮನುಷ್ಯನ ತಲೆಯೊಂದಿಗೆ ಪಾವುರಕ್ತ ಕೋರಿದಾಗ ಕುರಿಗಾಹಿ ವ್ಯಕ್ತಿ ಬಂದು, ಹೊಳೆದಾರಿ ಬಿಡಿಸಿದರೆ ನಿಮ್ಮ ಮಗಳನ್ನು ಕೊಟ್ಟು ನನಗೆ ಮದುವೆ ಮಾಡುವುದಾದರೆ ತಾನು ಬಲಿಯಾಗುತ್ತೇನೆಂದು, ಇವರು ಅದಕ್ಕೊಪ್ಪಿದವರೆಂದೂ ಕುಂಚಿಟಿಗರ ಸಂಬಂಧಿಸಿದ ಎಲ್ಲ ಕಥೆಗಳು ಹೇಳುತ್ತವೆ. ಇಲ್ಲಿ ಕುರಿಗಾಹ ವ್ಯಕ್ತಿ ಕುರುಬರವನು ಎನ್ನುವ ಸರಳವಾದವನ್ನು ಮಂಡಿಸುತ್ತಾರೆ.

ತೀ.ನಂ.ಶಂಕರನಾರಾಯಣ ಅವರು ಮತ್ತು ಕಾಳೇಗೌಡ ನಾಗವಾರರ ನಿಲುವಿನ ಹಿನ್ನೆಲೆಯಲ್ಲಿ ಕುರಿಸಾಕಾಣಿಕೆ ಕಾಡುಗೊಲ್ಲರ ನಿರ್ವಹಣೆಯಾಗಿದೆ. ಅಂದರೆ ಕುರಿಗಾಹಿ ವ್ಯಕ್ತಿ ಯಾರು ಪಶುಪಾಲಕ ಸಂಸ್ಕೃತಿಯ ಕುಂಚಿಟಿಗರು, ಕುರುಬರು, ಗೊಲ್ಲರು ಕುರಿಸಾಕಾಣಿಕೆ ಮಾಡುವವರಾಗಿರಬಹುದೇ! ಈ ಹಿನ್ನೆಲೆಯಲ್ಲಿ ಕುರಿ ಕಾಯುವವರು ಕುರುಬರೆಂದು ಗುರುತಿಸುವುದು ಅವಸರದ ಅಭಿಪ್ರಾಯವಾಗುತ್ತದೆ.

೨. ಕುಂಚಿಟಿಗ ಪದ ಮೂಲದ ಹಿನ್ನೆಲೆಯಲ್ಲಿ ಕಂಬಳಿ ನೇಯ್ಗೆಯಲ್ಲಿ ಬಳಸುವ ಕುಂಷಚ - ಕುಂಚ + ವಡಿಗ = ಕುಂಚವಡಿಗ (ಕುಂಚಿಟಿಗ) ಎಂದು ವಿವರಣೆಗಳಿವೆ. ಆದರೆ ಗುಂಪು ಅರ್ಥದ ನೆಲೆಯಲ್ಲಿ ಕುಂಚಿಟಿಗ ಪದ ಮೂಲ ವಿವರಣೆಗಳಿವೆ.

೩. ವಿವಾಹದ ಶಾಸ್ತ್ರಗಳಲ್ಲಿ ಬಳಸುವ ಕರಿಕಂಬಳಿ, ವಧೂವರರ ಕೈಗೆ ಕುರಿಉಣ್ಣೆ ದಾರದ ಕಂಕಣ, ಕುರಿಹಿಕ್ಕಿಯ ರಾಶಿಪೂಜೆ.

೪. ಕುರುಬ ಕೆಟ್ಟು ಕುಂಚಿಟಿಗನಾದ (ಗಾದೆ)

ಈ ಮೇಲಿನ ವಿಚಾರಗಳಿಂದ ಸ್ಪಷ್ಟವಾಗುವುದೆಂದರೆ ಕುರುಬರು, ಕುಂಚಿಟಿಗರು, ಗೊಲ್ಲರು ಮೂಲತಃ ಬಡಕಟ್ಟು ಮೂಲಕ ಪಶುಪಾಲನ ಸಂಸ್ಕೃತಿಯವರು. ಆದ್ದರಿಂದ ಹಲವು ವಿಷಯಗಳಲ್ಲಿ ಸಾಮ್ಯತೆಯಿದೆ. ಈ ಸಾಮ್ಯತೆಗಳಿರುವ ಹಿನ್ನೆಲೆಯಲ್ಲಿ ಒಂದು ಸಮುದಾಯದ ಮೂಲ ಮತ್ತೊಂದು ಸಮುದಾಯ ಎನ್ನುವುದೇ ವಾಸ್ತವಕ್ಕೆ ದೂರವಾದ ಸಂಗತಿ.

[1]ಹಿ.ಚಿ. ಬೋರಲಿಂಗಯ್ಯ, ವಿಸ್ಮತಿ ಮತ್ತು ಸಂಸ್ಕೃತಿ, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೧, ಪುಟ ೪೩.
[2]ತೀ,ನಂ.ಶಂಕರನಾರಾಯಣ, ಕಾಡುಗೊಲ್ಲರು ಸಂಪ್ರದಾಯಗಳು ಮತ್ತು ನಂಬಿಕೆಗಳು, ಪುಟ ೧೨೬.
[3]ಅದೇ.

—-

**(ಸಂಖ್ಯಾಗೊಂದಲ / ಚುಕ್ಕಿಚಿಹ್ನೆಯ ಗೊಂದಲ ಇರುವುದರಿಂದ ಈ ಅಧ್ಯಾಯದ ಕೆಲವು ಅಡಿಟಿಪ್ಪಣಿಗಳನ್ನು ನಮೂದಿಸಿಲ್ಲ)**

# ೧೫. ನೊಣಬರು

ಕುಡಿಯರು ಎಂದರೆ ಒಕ್ಕಲಿಗ, ಶೂದ್ರ, ಗುಡ್ಡಗಾಡು ಮನುಷ್ಯರು. ತುರುಗಾಹಿಗಳು ಎಂದರೆ ಗೊಲ್ಲರು, ಗೋವಳರು, ಪಶುಪಾಲಕರು ಎಂದು ಕರೆದಿರುವರು. 'ಕಳ್' ಎಂದರೆ ಹಾಲು, ಹಾಲು ಕೊಡುವ ಪ್ರಾಣಿಗಳು ಗೋವು ಮತ್ತು ಕುರಿ-ಮೇಕೆಗಳು. ಇವುಗಳನ್ನು ಸಾಕಿ, ಹಾಲು ಪಡೆಯುವವರಿಗೆ ಹಾಲುಮತದವರು ಕುರುಬರೆಂದೂ, ಗೋವಳರೆಂದೂ ಕರೆಯಲಾಗಿದೆ. 'ಕುರುಂಬ' ಎಂಬುದರಿಂದ ಕುರುಬ ಪದ ಉಂಟಾಗಿದೆ. ಇವರಿಗೆ ಹಾಲುಮತದವರೆಂದೂ ಕರೆಯುವರು. ಪ್ರಾಚೀನ ಕಾಲದಲ್ಲಿ ಹಾಲು ಹೆಚ್ಚಾಗಿ ದೊರೆಯುವ ಸ್ಥಳಗಳಿಗೆ ಹಾಲ್ವೊಳಲು ಎಂದು ಗುರುತಿಸಿರುವರು. ಬಳ್ಳಾರಿ ಜಿಲ್ಲೆಯ ಒಂದು ಶಾಸನದಲ್ಲಿ "ಹಾಲ್ವೊಳಲು ಹನ್ನೆರಡಕ್ಕೆ ಸೇರಿದ ಕೊಟಿಗನೂರು" ಎಂದಿದೆ. ಅದಕ್ಕೆ ಈಗ ಹರವಿ ಗ್ರಾಮ ಎಂದು ಕರೆಯುವರು. 'ಲ' ಕಾರಕ್ಕೆ ಬದಲಾಗಿ 'ರ' ಕಾರ ಉಂಟಾಗಿದೆ. ಕೊಟ್ಟೂರ ಬಳಿಯ ಒಂದು ಗ್ರಾಮ. ಅದಕ್ಕೂ ಹಾಲ್ವೊಳಲು ಎಂದು ಹೆಸರು. ಅದು ಈಗ ಹರಾಳು ಗ್ರಾಮವೆಂದು ಕರೆಯಿಸಿಕೊಳ್ಳುವುದು. ಈ ಗ್ರಾಮಗಳಲ್ಲಿ ಹೆಚ್ಚಾಗಿ ಕುರುಬ ಜನರು ಈಗಲೂ ಕಾಣುವರು.

ಬಳ್ಳಾರಿ ಜಿಲ್ಲೆಯ ಕುರುಗೋಡು ಬಸವೇಶ್ವರನ ೬.೬.೧೧೭೭ರ ಶಾಸನದಲ್ಲಿ "ಕುಡಿಯೊಕ್ಕಲ ಮಕ್ಕಳಿನೊರ್ಗ್ಗಳೊಪ್ಪುಗು" ಎಂಬುವ ಉಲ್ಲೇಖವಿದೆ. ಪ್ರಾಚೀನ ಕಾಲದಿಂದ ಈಚಿನ ಕಾಲದಲ್ಲಿಯೂ ಗ್ರಾಮೀಣರು ಹೊಸ ಕಾರ್ಯ ಆರಂಭಿಸುವಾಗ ಕುರುಬರಿಂದಲೇ ಪೂಜೆ ನಡೆಸುವ ಒಂದು ಸಂಪ್ರದಾಯವಿದ್ದಿತು. ತಮಿಳುನಾಡಿನಲ್ಲಿ ಕುರುಬಗೌಡರು ದೊರಕುವರು. 'ಕುರಿ ಒಕ್ಕಲು' ಬರಬರುತ್ತ 'ಕುಡಿ ಒಕ್ಕಲು' ಎಂದಾಗಿದೆ. ಈ ಕುಡಿ ಒಕ್ಕಲು ಕುರುಬರು ಈಗ ಲಿಂಗ ಧರ್ಮ ಸ್ವೀಕರಿಸಿದ್ದರೂ, ಅವರನ್ನು ಕುಡಿ ಒಕ್ಕಲಿಗರೆಂದೇ ಕರೆಯುವರು. ನಮ್ಮ ಭಾಗದಲ್ಲಿ ಅವರನ್ನು ಕಾಣಬಹುದು.

**ಕುರುಬರಲ್ಲಿ ವಿಧಗಳು**

೧. ಹಾಲು ಕುರುಬರು

೨. ಹಂಡೆ ಕುರುಬರು

೩. ಜೇನು ಕುರುಬರು

೪. ಗೊಂಡ ಕುರುಬರು

೫. ಅಲೆಮಾರಿ ಕುರುಬರು

೬. ಒಡೆಯರು

೭. ಜೆಂಡೆ ಕುರುಬರು

೮. ದಾಸ ಕುರುಬರು

೯. ಸಾದ ಕುರುಬರು

೧೦. ಕ್ರೈಸ್ತ ಕುರುಬರು

೧೧. ಹತ್ತಿ ಕಂಕಣ

೧೨. ಉಣ್ಣೆ ಕಂಕಣ

೧೩. ದನಗಾರರು

೧೪. ನೊಣಬರು (ಕುರುಬರು)

೧೫. ಕಾಡು ಕುರುಬರು

೧೬. ಲಾಳಗೊಂಡರು

೧೭. ಹೆಳವ ಕುರುಬರು

ಕುರುಬರಲ್ಲಿ ಕೆಲ ವೀರರು, ಸಾಹಸ ಮಾಡಿ, ರಾಜ್ಯ ಕಟ್ಟಿ ಆಳಿದರು. ಅಂಥವರಲ್ಲಿ ವಿಜಯನಗರದ ಹಕ್ಕ ಬುಕ್ಕ ಸೋದರರು, ಕನಕದಾಸರು, ಬಳ್ಳಾರಿ ಕೋಟೆಯನ್ನು ಕಟ್ಟಿ ಆಳಿದ ಹಂಡೆಯ ಪಾಳೆಯಗಾರ ಬಾಲದ ಹನುಮಪ್ಪ ನಾಯಕ. ಇವರಿಗಿಂತ ಮೊದಲು ಕರ್ನಾಟಕ ಪ್ರದೇಶವನ್ನು ಸು. ಕ್ರಿ. ಶ. ೭೫ ರಿಂದ ೧೦೫೪ರವರೆಗೂ ಆಳಿದ ಒಂದು ಜನಾಂಗ ಕುರುಬರೇ ಆಗಿದ್ದರು. ಅವರೇ ನೊಳಂಬರು-ನೊಣಬರು. ರೆವರೆಂಡ್ ಎಫ್. ಕಿಟೆಲ್ ಅವರು ನೊಣಬ ಎಂದರೆ 'A man of a caste division of the Kurubas' ಎಂದಿದ್ದಾರೆ.

ತಜ್ಞರ ಪ್ರಕಾರ ನೊಳಂಬ ಎಂದರೆ ಸುಂದರ, ಮುಂದುವರಿದವನು, ಮುಂದಾಳತ್ವವಹಿಸುವ, ಮುಂದಾಗು, ಮುನ್ನುಗ್ಗು, ಮೊದಲೇ ಹೋಗು, ಒಬ್ಬ ನಾಯಕನ ಮುಂದಾಳತ್ವದಲ್ಲಿಯ ಜನರ ಗುಂಪು. ನೊಳಂಬ ಎಂದರೆ ವೀರ ಜನರು, ಇತರರನ್ನು ಮುನ್ನಡೆಸುವವರು ಎಂದು. ತಮಿಳು ಮೂಲದ ಪ್ರಕಾರ ನೂಲೈ-ತೆವಳು ಎಂದು ಮತ್ತೊಂದು ಅರ್ಥದಲ್ಲಿ ಬೇರೆಯವರ ಮನಸ್ಸಿನ ಮೇಲೆ ತಮ್ಮ ಪ್ರಭಾವ ಬೀರುವವರು. 'ಕುಳೈ-ಕುಲುಂಬು', 'ವರೈ', 'ವರಾಂಬು' ಪ್ರವೇಶ ಮಾಡುವವರು, ಒಳನುಗ್ಗುವವರು ಎಂದಾಗುವುದು.

ಮೂಲ ರೂಪ ನುಟಂಬ, ನೊಟಂಬ ಆಗಿ ನೊಣಬ ಆಗಿದೆ. ಸಂಸ್ಕೃತದ ಪಲ್ಲವ ಕನ್ನಡದಲ್ಲಿ ಚಿಗುರು. ತಮಿಳಿನಲ್ಲಿ ನೊಳಂಬು, ಕನ್ನಡದಲ್ಲಿ 'ಕುಡಿ'. ಅವರನ್ನೇ ಪಲ್ಲವರು, ನೊಳಂಬರು, ಕುಡಿಯರು ಎಂದು ಕರೆದಿರುವರು. ಶ್ರೀಗುರು ಸಿದ್ಧರಾಮೇಶ್ವರರು ಕುಡಿಯರ ಕುಲಶಿರೋಮಣಿ ಮುದ್ದು ಗೌಂಡರ ಮಗ. ಹಿಂದಿನ ಪಲ್ಲವರು ನಂತರದ ನೊಳಂಬರು (ನೊಣಬರು) ಕುಡಿಯ ರಾಜರಿಗೆ ಕುಡಿಯೊಕ್ಕಲಿಗ ಕುಡಿಯರ ಕೂಸು ಎಂದಿದೆ.

ಪ್ರಾಚೀನ ಕಾಲದಲ್ಲಿ ಬಾದಾಮಿ ಚಾಲುಕ್ಯರಿಗೂ ಕಂಚಿಯ ಪಲ್ಲವರಿಗೂ ಸತತವಾಗಿ ಕದನಗಳು ನಡೆಯುತ್ತಿದ್ದವು. ಈ ಸಮಯದಲ್ಲಿ ಸೋಲು-ಗೆಲುವುಗಳು ರಾಜ್ಯದ ಗಡಿಗಳಲ್ಲಿ ಹೆಚ್ಚು ಕಡಿಮೆಯಾಗುತ್ತಿದ್ದರು. ಇದರ ಸದುಪಯೋಗಪಡಿಸಿಕೊಂಡು ಪಲ್ಲವರ ಕೆಲ ಸೇನಾಧಿಕಾರಿಗಳು ಕರ್ನಾಟಕ ಪ್ರದೇಶಕ್ಕೆ ಪ್ರವೇಶ ಮಾಡಿ, ಚಾಲುಕ್ಯರ ರಾಜ್ಯದ ಗಡಿಗಳಲ್ಲಿ ಒಂದು ಚಿಕ್ಕ ರಾಜ್ಯವನ್ನು ಸ್ಥಾಪಿಸಿದರು. ಅದಕ್ಕೆ ನೊಂಬಳಿಗೆ ೧೦೦೦ ಎಂದು ಕರೆದರು. ನೊಳಂಬವಾಡಿ ಮೊದಲು ನೊಳಂಬಳಿಗೆ ಸಾಸಿರವಾಗಿ, ಚಿತ್ರದುರ್ಗ ಜಿಲ್ಲೆ ಮತ್ತು ಅದರ ಸುತ್ತಮುತ್ತಲು ಪ್ರದೇಶವಾಗಿದ್ದು, ಕಾಲ ಕಳೆದಂತೆ ೯-೧೦ನೆಯ ಶತಮಾನಕ್ಕೆ ವರ್ಧಿಸಿ ನೊಳಂಬವಾಡಿ ೩೨,೦೦೦ ಸಾವಿರಕ್ಕೆ ವಿಸ್ತಾರಗೊಂಡಿದ್ದಿತು. ಇದು ಈಗಿನ ಕನ್ನಡ ನಾಡಿನ ಕೋಲಾರ, ತುಮಕೂರು, ಚಿತ್ರದುರ್ಗ ಮತ್ತು ಬೆಂಗಳೂರು, ಬಳ್ಳಾರಿ ಮತ್ತು ಆಗ್ನೇಯ ದಿಕ್ಕಿನ ತಮಿಳುನಾಡಿನ ಧರ್ಮಪುರಿ, ನೈಋತ್ಯದಲ್ಲಿ ಮಂಡ್ಯ ಜಿಲ್ಲೆಯ ತಾಯೂರವರೆಗೆ ವಿಸ್ತರಿಸಿದ್ದಿತು. ರಾಷ್ಟ್ರಕೂಟ, ಗಂಗ, ಪಲ್ಲವ ಪೂರ್ವ ಚಾಲುಕ್ಯ ಮುಂತಾದ ಪ್ರಮುಖ ಅರಸರು ಒಬ್ಬರಿಗೊಬ್ಬರು ತಮ್ಮ ಮೇಲ್ಮೈಯನ್ನು ಸ್ಥಿರಗೊಳಿಸಲು, ಸೆಣಸಾಡುತ್ತಿರುವಾಗ, ಅವರ ಮಧ್ಯದಲ್ಲೂ ಒಂದು ಚಿಕ್ಕರಾಜ್ಯವನ್ನು ಕಾಲಾಂತರದಲ್ಲಿ ಸ್ಥಾಪಿಸಿ, ವಿಸ್ತರಿಸುವುದರಲ್ಲಿ ನೊಳಂಬರು

ಯಶಸ್ವಿಯಾದರು. ಆದರೆ ಮಹಾರಾಜರಾಗಿ ಚಕ್ರವರ್ತಿಗಳಾಗುವ ಸಾಧ್ಯತೆಗಳು ಕಡಿಮೆಯಾದವು. ರಾಷ್ಟ್ರಕೂಟರು ಮತ್ತು ಗಂಗರ ಹೋರಾಟಗಳಲ್ಲಿ ನೊಳಂಬರ ಶಕ್ತಿ ಸಾಮರ್ಥ್ಯಗಳು, ಪ್ರಯತ್ನಗಳು ಫಲಕಾರಿಯಾಗಲಿಲ್ಲ. ೯ನೆಯ ಶತಮಾನದಲ್ಲಿ ಬಾಣರನ್ನು ಹಿಂದಕ್ಕಟ್ಟಿದರು. 'ಮಹಬಲಿ ಕುಲವಿಧ್ವಂಶಕ' ಎಂಬುವ ಹೊಗಳಿಕೆಗೂ ಪಾತ್ರರಾದರು. ತಲಕಾಡಿನ ಗಂಗರ ಕೈಕೆಳಗೆ ತಮ್ಮ ಆಡಳಿತವನ್ನು ಆರಂಭಿಸಿ, ಕಾಲಕ್ರಮೇಣ ಗಂಗರು, ರಾಷ್ಟ್ರಕೂಟರು, ಚಾಲುಕ್ಯರ ವಂಶಗಳೊಂದಿಗೆ ವೈವಾಹಿಕ ಸಂಬಂಧಗಳನ್ನು ಬೆಳೆಸಿ, ಸುಮಾರು ಮೂರು ಶತಮಾನಗಳ ಕಾಲ ಕರ್ನಾಟಕವನ್ನು ಆಳಿದ ನೊಳಂಬರು ನಾಡಿನ ರಮ್ಯೇತಿಹಾಸ ಪರಂಪರೆಗೆ ಭದ್ರ ಬುನಾದಿಯನ್ನು ಹಾಕಿದವರಲ್ಲಿ ಒಬ್ಬರು.

ಬಿ. ಎಲ್. ರೈಸ್ ಅವರು ಸಿಂಹದಂತೆ ಗರ್ಜಿಸುವ ಜನಾಂಗವೆಂದು ಕರೆದಿರುವರು. ಮಂಗಳನೇ ಪ್ರಸಿದ್ಧ ಅರಸ. ಇವನು ಗಂಗರ ಸಾಮಂತನೂ ಸಂಬಂಧಿಯೂ ಆಗಿದ್ದನು. ಅವನ ಮಗ ಸೈಗೊಟ್ಟ ಶಿವಮಾರನಿಗೆ ಅಧೀನನಾಗಿದ್ದನು. ತನ್ನ ಆಶ್ರಯದಾತನಿಗಾಗಿ ಅನೇಕ ಅರಸರನ್ನು ಯುದ್ಧರಂಗದಲ್ಲಿ ಸೋಲಿಸಿ, ಗಂಗ ಸಾಮ್ರಾಜ್ಯವನ್ನು ಬಲಪಡಿಸಿದನು. ಇವರ ಮೊದಲ ರಾಜಧಾನಿ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಮಡಕಸಿರಾ ತಾಲೂಕಿನ ಹೆಂಜೇರು ಹೇಮಾವತಿ. ಅಲ್ಲಿ ಸಿದ್ದೇಶ್ವರ ದೇವಾಲಯವಿದೆ. ಅಲ್ಲಿಯ ಜನರು ಹಂಜೇರಪ್ಪ ಎಂದೂ ಕರೆಯುವರು. ಅದರ ಒಂದು ಕಂಬದ ಕ್ರಿ. ಶ. ೯೪೨ ಶಾಸನದಲ್ಲಿ ಇವರ ವಂಶವೃಕ್ಷವಿರುತ್ತದೆ. ಅದರ ಪ್ರಕಾರ ತ್ರಿಣಯ ಪಲ್ಲವ-ಮಂಗಳನಿಂದ ಸು. ೭೪೦- ಆಳ್ವಿಕೆ ಆರಂಭಗೊಂಡು ತ್ರೈಲೋಕ್ಯಮಲ್ಲ ನನ್ನಿನೊಳಂಬ ಪಲ್ಲವ ಪೆರ್ಮಾನಡಿ ಕ್ರಿ. ಶ. ೧೦೫೪ರ ವರೆಗೂ ಆಳಿದ್ದು ಗೊತ್ತಾಗುವುದು. ನೊಳಂಬರು ಬಳ್ಳಾರಿ ಜಿಲ್ಲೆಯ ಕಂಪಲಿಗೆ ಬಂದ ಬಳಿಕ ಅವರ ನೊಳಂಬವಾಡಿ ರಾಜ್ಯ ಮೊದಲಿನಂತೆ ವಿಸ್ತಾರವಾಗಿರಲಿಲ್ಲ. ಆಗ ಕೋಗಳಿ-೫೦೦ ಕದಂಬಳಿಗೆ ೧೦೦೦ ಬಲ್ಲಕುಂದೆ-೩೦೦, ಕಣಿಯಕಲ್ಲು-೩೦೦, ಕುಡಿ ಹರವಿ-೭೦, ಕರಿವಿಡಿ-೩೦, ಪ್ರಾಂತಗಳಿಗೆ ಒಡೆಯರಾಗಿದ್ದರು. ಕೊನೆ ಅರಸನು ತ್ರೈಲೋಕ್ಯಮಲ್ಲ ಮೊದಲ ಸೋಮೇಶ್ವರನ ಸಾಮಂತನಾಗಿದ್ದನು. ಕೃಷ್ಣಾನದಿಯ ದಂಡೆಯ ಕೊಪ್ಪದಲ್ಲಿ ಚಾಲುಕ್ಯರಿಗೂ ಚೋಳರಿಗೂ ನಡೆದ ಕ್ರಿ. ಶ. ೧೦೫೪ ರ ಯುದ್ಧದಲ್ಲಿ ನನ್ನಿ ನೊಳಂಬ, ದಶಪಣ್ಣ ಜಯಸಿಂಹರು ಮಡಿದರು.

**ಆಡಳಿತ**

ನೊಳಂಬ ಪಲ್ಲವ ರಾಜ್ಯದಲ್ಲಿ ಅರಸರನ್ನು ಬಿಟ್ಟರೆ, ಎರಡನೆಯ ಸ್ಥಾನದಲ್ಲಿ ರಾಣಿಯರು ಕಾಣಿಸಿಕೊಳ್ಳುವರು. ನೊಳಂಬ ಅರಸರಲ್ಲಿ ಪತಿ ಮಡಿದರೆ ಕೆಲಕಾಲ ಅವರ ರಾಣಿಯರೇ ರಾಜ್ಯವಾಳುವ ಪದ್ಧತಿಯಿದ್ದಿತು. ಮಗು ದೊಡ್ಡವನಾದ ಬಳಿಕ ಅವನಿಗೆ ಪಟ್ಟಾಭಿಷೇಕ ಮಾಡಿಕೊಳ್ಳುತ್ತಿದ್ದರು. ಎರಡನೆಯ ಪೊಳಲ್ಚೋರನ ಮಡದಿ ಅಗ್ರ ಮಹಿಷಿ ರಾಣಿಯಾಗಿ ರಾಜ್ಯಭಾರ ಮಾಡಿದಳು. ಗವಗನಬ್ಬೆ ಗಂಡ ಪರಮೇಶ್ವರ ಪಲ್ಲವಾಧಿರಾಜನ ನೇತೃತ್ವದಲ್ಲಿ ಮದರಿಕಲ್‌ನ್ನು ಆಳಿದಳು. ಒಂದನೇ ಮಹೇಂದ್ರನಿಗೆ ನಾಲ್ಕು ಜನ ರಾಣಿಯರು ೧. ಬಿಜ್ಜಮಹಾದೇವಿ ೨. ಪರಮ ಮಹಾದೇವಿ ೩. ಅಕ್ಕಬ್ಬೆ ೪. ದೊಂಬಾಬ್ಬೆ. ಅವನ ಪರವಾಗಿ ಇವರು ಬೇರೆ ಬೇರೆ ಪ್ರಾಂತಗಳನ್ನು ಆಳುತ್ತಿದ್ದರು. ಅಲ್ತೇಕರ್ ಪ್ರಕಾರ ಮಂತ್ರಿಮಂಡಳ ೪-೮ ಜನರನ್ನು ಒಳಗೊಂಡಿದ್ದಿತು. ಟಿ. ವಿ. ಮಹಾಲಿಂಗಂ ಪ್ರಕಾರ ಅರಸರಿಗೆ ಐದು ಜನ ಸಲಹೆಗಾರರು ಇದ್ದರು. ದಂಡನಾಯಕನಿಗೆ ಪ್ರಚಂಡ ದಂಡನಾಯಕನೆಂದೂ (ಕಮ್ಯಾಂಡರ್ ಇನ್ ಚೀಫ್) ಕೆಲವು ಶಾಸನಗಳಲ್ಲಿ ಅಮಾತ್ಯ ಮತ್ತು ಪೆರ್ಗಡೆ ಎಂದೂ ತಿಳಿಸಿದೆ.

**ನೀರಾವರಿ ಯೋಜನೆಗೆ ಆಧ್ಯತೆ**

ಮಾನವರಿಗೆ, ಕಾಡು ಪ್ರಾಣಿಗಳಿಗೆ, ದನಕರು, ಪ್ರಾಣಿ-ಪಕ್ಷಿಗಳಿಗೆ ದಾಹ ತಣಿಸಲು ಹಾಗೂ ರೈತರ ಬೆಳೆಗಳಿಗೆ ನೀರನ್ನು ಒದಗಿಸುವ ಉದ್ದೇಶಗಳಿಂದ ಕೆರೆಗಳನ್ನು ನಿರ್ಮಿಸುತ್ತಿದ್ದರು. ಚಿಕ್ಕ ಅರಸರು ಸಮಾಜದಲ್ಲಿಯ ಶ್ರೀಮಂತರು ಅವುಗಳ ನಿರ್ಮಾಣ ಕಾರ್ಯ ಮತ್ತು ದುರಸ್ತಿ ಕಾರ್ಯಕ್ಕೈಗೊಂಡರೆ ಅಂಥವರನ್ನು ವಿಶೇಷ ಸಂದರ್ಭಗಳಲ್ಲಿ ಪುರಸ್ಕರಿಸುತ್ತಿದ್ದರು.

**ದೇವಾಲಯಗಳ ರಚನೆ**

ಪಲ್ಲವರಂತೆ ನೊಳಂಬರು ದೇವಾಲಯಗಳ ನಿರ್ಮಾಣದಲ್ಲಿ ಹೆಚ್ಚು ಆಸಕ್ತರಾಗಿದ್ದರು.

೧. ಹೇಮಾವತಿಯ ಸಿದ್ದೇಶ್ವರ ೨. ನಂದಿಯ ಭೋಗ ನಂದೀಶ್ವರ ೩. ಧರ್ಮಪುರಿಯ ರಾಮಕೃಷ್ಣ ದೇವಾಲಯ ೫. ಬರಗೂರು ಮಹೇಂದ್ರೇಶ್ವರ ದೇವಾಲಯ ೬. ಪೆನುಕೊಂಡದ ಉಮಾಮಹೇಶ್ವರ.

**ಇವರ ಶಾಸನಗಳಲ್ಲಿ**

ಸ್ವಸ್ತಿ ಸಮಧಿನತ ಮಹಾಶಬ್ದ ಪಲ್ಲವಾನ್ವಯ ಎಂದು ಹೇಳಿದೆ. ಆ ಪಂಚ ಶಬ್ಧಗಳು ೧. ಕೊಂಬು ೨. ಹಲಗೆ ೩. ಶಂಕ ೪. ಭೇರಿ ೫. ಜಾಗಟೆಗಳು.

"ಮೆರುವಿನಿ ಉಮಾಪತಿಯೆ ದಕ್ಷಿಣ ಭಾಗದ ಭೂಮಿಯಲ್ಲಾ
ಸಾರಮ್ ಇದೆಂದಿವಿಯಸಗೋಡೆನೋಳ್ ಇಂತು ಸ್ವಯಂಭೂ ಆಗಿಹರ್
ಹರಾಜಿತೇಂದ್ರಿಯವರಿಗೆ ಕನಸಿಂದ ಮೆತೋ ವಿಶೇಷದಿಂದೆ ವಿ
ಸ್ಥಾರದೆ ಈಶ್ವರಾಲ ಯಮನ್ ಎತ್ತಿಸಿದರ್ಧರೇಗೇನ್ ಅಪೂರ್ವವೋ"
(ಚಳ್ಳಕೆರೆ ಶಾಸನ)

ಕುಮಾರ ಚೋರಯದೇವ ಅಸಗೋಡನ ಸ್ವಯಂಭೂ ದೇವರಿಗೆ ದತ್ತಿ ಬಿಟ್ಟಿದ್ದನ್ನು ತಿಳಿಸುತ್ತದೆ.

ಹೀಗೆ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯ ಶಾಸನದಲ್ಲಿ ಮೇಲಿನಂತೆ ತಿಳಿಸಿದೆ. ಇದರಲ್ಲಿ ಗದ್ಯಪದ್ಯ ಮಿಶ್ರವಾದ ಚಂಪೂ ಕಾವ್ಯ ಗುಣ ಕಾಣಬಹುದು. ಭಾಷೆ ಮಾತ್ರ ಕನ್ನಡವಾಗಿದೆ.

**ಶಿಕ್ಷಣ**

ನೊಳಂಬರು ವಿದ್ಯಾ ಪ್ರೇಮಿಗಳು. ಇವರ ಕಾಲದಲ್ಲಿ ಹೆಂಜೇರು ಒಂದು ದೊಡ್ಡ ವಿದ್ಯಾಕೇಂದ್ರವಾಗಿದ್ದಿತ್ತು. ೧. ಮೋರಿಗೇರಿ-೧೦೪೫ ೨. ನಾಗಾಯಿ-೧೦೫೮ ೩. ಸೂಡಿ-೧೦೬೦ ೪. ಹೊಟ್ಟೂರು-೧೦೬೪ ೫. ಕುಂಬಳ -೧೦೬೮ ೬. ರಾಯಬಾಗ್-೧೧೩೭ ೭. ಪುಲಿಗೆರೆ-೧೧೨೬ ೮. ಹೆಂಜೇರು-೧೧೬೭ ೯. ಕಡಲೆನಾಡು-೧೧೮೬ ಇವೆಲ್ಲ ಘಟಿಕಾ ಸ್ಥಾನಗಳು. ಹೆಂಜೇರು ಮತ್ತು ರಾಯಭಾಗಗಳು ಮಹಾಘಟಿಕಾ ಸ್ಥಾನಗಳು (ಈಗಿನಂತೆ ವಿಶ್ವ ವಿದ್ಯಾಲಯಗಳು).

ನೊಳಂಬ ಅರಸರ ಲಾಂಛನ ನಂದಿ ವಿಗ್ರಹ.

**ನಾಣ್ಯಗಳು**

ಚಿನ್ನದಿಂದ ಮಾಡಿದ ಗದ್ಯಾಣ ಪೋನ್, ವೃತ್ತಾಕಾರ, ತೂಕ ೨.೬೮ ಗ್ರಾಂ. ವ್ಯಾಸ ೧೪ ಮಿ. ಮೀ.

ಮುಂಭಾಗದ ಆಕಾರ-ಎಡಕ್ಕೆ ಮುಖ ಮಾಡಿದ ನಂದಿ ಮೇಲೆ ಸೂರ್ಯ ಮತ್ತು ಚಂದ್ರ. ಕೆಳಗಡೆ ಬಳ್ಳಿ ಆಕಾರದ ವಿನ್ಯಾಸ.

ಹಿಂಭಾಗದ ಆಕಾರ- ಶ್ರೀವೀರನೊಳಂಬ ಎಂಬುವ ಎರಡು ಸಾಲಿನ ಕನ್ನಡ ಲಿಪಿ. ಶಾಸನ ನಡುವೆ ಚುಕ್ಕೆಗೆರೆ, ಕೆಲವು ನಾಣ್ಯಗಳಲ್ಲಿ ನೊಳಂಬವಾಡಿಗೊಂಡ ಎಂದಿದೆ.

ತಮ್ಮ ಇಷ್ಟ ದೇವರಾದ ಸಿದ್ದೇಶ್ವರನನ್ನು ನೊಳಂಬೇಶ್ವರನೆಂದು ಕರೆದು ಶಾಸನದಲ್ಲಿ ದಾಖಲಿಸಿದರು. ಕಲ್ಯಾಣ ಚಾಲುಕ್ಯರು ಹಿರೇಕುರುವತ್ತಿಯ ಮಲ್ಲಿಕಾರ್ಜುನ ದೇವರಿಗೆ ಆಹವಮಲ್ಲನೆಂದು ಕರೆದು ಶಾಸನದಲ್ಲಿ ಬರೆಸಿದರು. ಅವರ ಸಾಮಂತರಾದ ಇವರು ಅದನ್ನೇ ಅನುಸರಿಸಿದ್ದಿರಬೇಕು.

ಕೆಲಕಾಲದ ಬಳಿಕ ನೊಳಂಬರು ಲಿಂಗ ಧರ್ಮೀಯರಾದರು. ಅದಕ್ಕೆ ಆಧಾರಗಳು ದೊರೆತಿಲ್ಲ. ಇವರು ಸಿದ್ದೇಶ್ವರನನ್ನು ದೈವವನ್ನಾಗಿ, ಸಿದ್ಧರಾಮೇಶ್ವರರನ್ನು ಸ್ವಾಮಿಗಳೆಂದು ಆರಾಧಿಸುವರು.

ಕುರುಬರೂ ಇದೇ ದೇವರನ್ನು ಹಾಗೂ ಸ್ವಾಮಿಗಳನ್ನು ಆರಾಧಿಸುವರು. ನೊಳಂಬರಿಗೆ ನೊಣಬರೆಂದು ಕರೆಯುವರು. ನೊಣಬ ಎಂಬುದು ಜಾತಿಯಲ್ಲ. ಅದು ವಂಶದ ಹೆಸರು. ನೊಣಬರ ಸಂಸ್ಕೃತಿಯು ಕುರುಬರ ಸಂಸ್ಕೃತಿಯು ಒಂದೇ ಆಗಿರುತ್ತದೆ. ಈ ನೊಣಬ ಜನಾಂಗ ಕರ್ನಾಟಕದಲ್ಲಿ ೧. ತುಮಕೂರು ಜಿಲ್ಲೆ ೨. ಬೆಂಗಳೂರು ಜಿಲ್ಲೆ ೩. ಚಿಕ್ಕಮಂಗಳೂರು ಜಿಲ್ಲೆ ೪. ಶಿವಮೊಗ್ಗ ಜಿಲ್ಲೆ ೫. ದಾವಣಗೆರೆ ಜಿಲ್ಲೆಯ ಹೊನ್ನಾಳಿ ೬. ಹಾವೇರಿ ಜಿಲ್ಲೆಯ ಹಾನಗಲ್ಲು-ಹಾಸನ ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡುಬರುವರು. ಕರ್ನಾಟಕ ರಾಜ್ಯದ ಬಹುಭಾಗಗಳನ್ನು ಆಳಿದ ರಾಜ-ಮಹಾರಾಜರುಗಳ ವಂಶಗಳ ಕಣ್ಮರೆಯಾಗಿ, ಇತಿಹಾಸ ಸಂಪುಟವನ್ನು ಸೇರಿದರೆ, ಆ ವಂಶಕ್ಕೆ ಸಂಬಂಧಿಸಿದವರು ಈಗ ದೊರೆಯುವುದಿಲ್ಲ. ಆದರೆ ನೊಳಂಬ ಅರಸರ ವಂಶಸ್ಥರನ್ನು ಈಗಲೂ ನಾವು ಕಾಣುತ್ತೇವೆ.

ಒಂದು ಕಾಲದಲ್ಲಿ ಕರ್ನಾಟಕದ ತುಂಬಾ ಕುರುಬರೇ ಹೆಚ್ಚಾಗಿದ್ದರೆಂದು ಹೇಳುವ ಸಂಶೋಧಕ ಸಾಹಿತಿ, ಶಂ. ಭಾ. ಜೋಷಿ ಅವರ ಮಾತನ್ನು ಅಲ್ಲಗಳೆಯುವಂತಿಲ್ಲ.

**ಕರ್ನಾಟಕ ಪರಂಪರೆ ಸಂಪುಟ-೧ರ ಪ್ರಕಾರ**

**ನೊಳಂಬ ಪಲ್ಲವರ ವಂಶವೃಕ್ಷ**

ತ್ರಿನಯನ ಪಲ್ಲವ

|

ಮಂಗಳ ನೊಳಂಬಾಧಿರಾಜ

|

ಸಿಂಹಪೋತ (ಸು.ಕ್ರಿ.ಶ. ೭೫೦-೭೭೫)

|

ಚಾರು ಪೊನ್ನೇರ (ಪಲ್ಲವಾಧಿರಾಜ) (ಸು.ಕ್ರಿ.ಶ. ೭೭೫-೮೦೦)

|

ಪಲ್ಲವಮಲ್ಲ

|

ಮಹೇಂದ್ರ-೧
(ಸು.ಕ್ರಿ.ಶ. ೮೬೦-೮೯೫)

|

ಅಯ್ಯಪ್ಪದೇವ
(ಸು.ಕ್ರಿ.ಶ. ೯೧೯-೯೩೫)

|

ಅಣ್ಣಿಗ
(ಸು.ಕ್ರಿ.ಶ. ೯೩೫-೯೪೦)
ಇರುಳ ಚೋರ
(ಕ್ರಿ.ಶ. ೯೩೯ ತಂದೆಯ ಜೊತೆ ಸಂಯುಕ್ತ ಆಳಿಕೆ)

ಪೊಳಾಳ ಚೋರ ನೊಳಂಬ
(ಸು.ಕ್ರಿ.ಶ. ೮೦೦-೮೬೦)

|

ಇರಿವ ನೊಳಂಬ (ನೊಳಂಬಾಧಿರಾಜ ನೊಳಿಪಯ್ಯ)
(ಸು.ಕ್ರಿ.ಶ. ೮೯೫-೯೧೯)

|

ಅಂಕಯ್ಯ

|

ಏಕವಾಕ್ಯ ಇರವ ನೊಳಂಬ ದಿಲೀಪ
(ಇರವ ಜೊಳಂಬ ನೊಳಿಪಯ್ಯ)
(ಸು.ಕ್ರಿ.ಶ. ೯೪೦-೯೬೭)

|

ನನ್ನಿ ನೊಳಂಬ
(ಸು.ಕ್ರಿ.ಶ. ೯೬೭-೯೭೦)

ಅಯ್ಯಪ್ಪ

|

ಪೋಳಾಳ ಚೋರ ೨

|

ವೀರ ಮಹೇಂದ್ರ ೨
(ಸು.ಕ್ರಿ.ಶ. ೯೭೬-೯೮೦)

|

ವಲ್ಯದೇವ (ಏಕವಾಕ್ಯ)
(ಸು.ಕ್ರಿ.ಶ. ೯೮೦-೧೦೦೫)

|

ಜಗದೇಕಮಲ್ಲ ಇರಮಡಿ ನೊಳಂಬ
(೧೦೪೭, ತಂದೆಯ ಜೊತೆ ಸಂಯುಕ್ತ ಆಳಿಕೆ)

ಇರಿವ ನೊಳಂಬ (ಘಂಟೆಯಂಕಕಾರ)
(ಸು.ಕ್ರಿ.ಶ. ೧೦೦೫-೧೦೩೫)

|

ಉದಯಾದಿತ್ಯ (ಜಗದೇಕಮಲ್ಲ ನೊಳಂಬ)
(ಸು.ಕ್ರಿ.ಶ. ೧೦೩೫-೧೦೪೯)

|

ತ್ರೈಲೋಕ್ಯಮಲ್ಲ ನನ್ನಿನೊಳಂಬ
(ಸು. ೧೦೪೯-೧೦೫೯)

ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೧ ಬಳ್ಳಾರಿ ಜಿಲ್ಲೆ

ಅಯ್ಯಪ್ಪ

|

ಅಣ್ಣಿಗ (ಕ್ರಿ.ಶ. ೯೨೨)

|

ನನ್ನಿನೊಳಂಬ (ಕ್ರಿ.ಶ. ೯೬೨)

|

ವೀರ ನೊಳಂಬ ಹೆಂ.ದೇವಲ ದೇವಿಯಕ್ಕ (ಕ್ರಿ.ಶ. ೯೮೭)

|

ತ್ರೈಲೋಕ್ಯಮಲ್ಲ ಇ ವ ನೊಳಂಬ ನರಸಿಂಘ ದೇವ

(ಘಟಿಯಂಕಾರ) (ಕ್ರಿ.ಶ. ೯೯೮-೧೦೧೮)

| |

ಜಗದೇಕ ಮಲ್ಲ ನೊಳಂಬನಡಿ ರೇವಲದೇವಿ

ಉದಯಾದಿತ್ಯ (ಕ್ರಿ.ಶ. ೧೦೧೭-೧೦೪೪) (ಪತಿ ಎರಡನೆಯ ಜಯಸಿಂಹ)

|

ತ್ರೈಲೋಕ್ಯಮಲ್ಲ ನನ್ನಿ ನೊಳಂಬಾಧಿ ರಾಜ

(ಕ್ರಿ.ಶ. ೧೦೪೪)

ಜಗದೇಕ ಮಲ್ಲ ನೊಳಂಬ ಪೆರ್ಮಾನಡಿ

(ಕ್ರಿ.ಶ. ೧೦೫೪)

ಹಗರಿಬೊಮ್ಮನಹಳ್ಳಿ ತಾಲ್ಲೂಕು ಮೋರಿಗೇರಿ ಉದ್ದಿ ಬಸವಣ್ಣನ ಗುಡಿ ಶಾಸನ ೨೮.೯.೧೦೪೫ರ ಪ್ರಕಾರ

ತ್ರೈಲೋಕ್ಯಮಲ್ಲ ಇರಿವನೊಳಂಬ ಘಟೆಯಂಕರನ

(ಇರಿವ ನೊಳಂಬ ನರಸಿಂಘದೇವ ಕಾಲ ೧೦೩೩)

| ಪುತ್ರ

ಉದಯಾದಿತ್ಯದೇವ

| ಪುತ್ರ

ಜಗದೇಕ ಮಲ್ಲ ನೊಳಂಬ ಇರ್ಮಡಿ ನೊಳಂಬ

| ಸೋದರ

ತ್ರೈಲೋಕ್ಯಮಲ್ಲ ನನ್ನಿ ನೊಳಂಬ ಪಲ್ಲವ ಪೆರ್ಮಾಡಿ

**ಪಲ್ಲವನೊಳಂಬ ಕುಡಿಯ ವಂಶ**

ಪಲ್ಲವನೊಳಂಬ ವಂಶದ ಕುಡಿಯರ ಕುಲ ಶಿರೋಮಣಿ ಮುದ್ದುಗೌಡರ ಮಗನಾಗಿ ಜನಿಸಿದ ಶ್ರೀಗುರು ಸಿದ್ಧರಾಮೇಶ್ವರರು ಶಿವಯೋಗಿ ಆದ ಮೇಲೆ ಅವರ ಸೋದರರಾದ ೧. ಮಾರೇಗೌಡ (ಕಾವ್ಯದಲ್ಲಿ ಬೊಮ್ಮಣ್ಣ), ಕಾಳಣ್ಣಗೌಡ, ಚೆನ್ನಪ್ಪಗೌಡ, ಕಾಳಚಿಕ್ಕಪ್ಪಗೌಡ, ರಾಮಪ್ಪಗೌಡ, ಸಂಗಪ್ಪ ಗೌಡ ಮತ್ತು ಚಿಕ್ಕಪ್ಪಗೌಡರು 'ನಾಗಮರಿ' ಆಯುಧವನ್ನು ಆಶೀರ್ವಾದದಿಂದ ಪಡೆದು ದಕ್ಷಿಣಕ್ಕೆ ಬಂದು ಕಂಪಲಿಯಲ್ಲಿ ಕೆಲದಿನಗಳಿದ್ದು, ನಂತರ ಗಂಡು ಮೆಟ್ಟಿನ ನೆಲವಾದ ಏಳುನಾಡಿನಲ್ಲಿ ರಾಜ್ಯಕಟ್ಟಿ, ಗೃಹ ಕಲಹದಿಂದ ಮೂರು ಮನೆಯವರು ಒಂದು, ನಾಲ್ಕು ಮನೆಯವರು ಮತ್ತೊಂದು ಭಾಗವಾಗಿಯೂ ಮತ್ತೆ ಕಲಹದಿಂದ ಮಾರೇಗೌಡರು ಮುಮ್ಮಡಿ ಪಟ್ಟಣ,

ಚೆನ್ನಪ್ಪಗೌಡ-ತೆರಿಯೂರು, ಸಂಗಪ್ಪಗೌಡ-ಚೇಳೂರು, ಕಾಳಚಿಕ್ಕಪ್ಪಗೌಡ-ಗುಬ್ಬಿ ಹೊಸಹಳ್ಳಿ, ರಾಮಪ್ಪಗೌಡ-ಎಣ್ಣೆಗೆರೆ, ಚಿಕ್ಕಪ್ಪಗೌಡ-ಬಿದರೆ, ಚಿಕ್ಕರಾಮಪ್ಪಗೌಡ-ಕೋರಾದಲ್ಲಿ ನಿಂತು ರಾಜ್ಯ ಕಟ್ಟಿದರು. (ಮಧುಗಿರಿಯ ಚರಿತ್ರೆ ಮತ್ತು ಶಾಸನಗಳು).

**ನೊಳಂಬ ಮಹಾನಾಡ ವಂಶ**

ತುರುಬಿನ ಮಾರೇ (ಚಿಕ್ಕ) ಗೌಡರು-೧೨೪೫

|

ವೀರೇಗೌಡರು-೧೩೧೪ ಆನೆಬಿದ್ದಸರಿ (ದೇವರಾಯದುರ್ಗ)

|

ದೊಡ್ಡಗೌಡರು-೧೩೩೮

|

ಹಿರೇಚಿಕ್ಕಪ್ಪಗೌಡರು(ತುಂಗವಟಿ ಬಿಜ್ಜಾವರ) ೧೫೭೪

|

ಇಮ್ಮಡಿ ಚಿಕ್ಕಭೂಪಾಲ-೧೫೯೪

|

ಯುವರಾಜ ತೋಟೇಂದ್ರ-೧೬೪೬

|

ಚನ್ನಪ್ಪಗೌಡರು

|

ಮುಮ್ಮಡಿ ಚಿಕ್ಕಪ್ಪಗೌಡರು-೧೬೯೦ (ಮಧುಗಿರಿ)

| | |
|---|---|---|
| ಸಂಗಪ್ಪಗೌಡರು | ಹಿರೇತೋಂಟಪ್ಪ ಗೌಡರು | ಕಾಳಚಿಕ್ಕಗೌಡರು |
| ಮಧುಗಿರಿ | (ಚನ್ನರಾಯದುರ್ಗ) | ಮಿಡಿಗೇಶಿ |
| | | ರಾಮಪ್ಪಗೌಡರು |
| | | ತಿಮ್ಮಪ್ಪಗೌಡರು ೧೮೧೨ |

ಇಮ್ಮಡಿ ಚಿಕ್ಕಭೂಪಾಲ ಸಾಂಗತ್ಯ, ರಾಯರಾಯ ಕೈಪಿಡಿ ಶಾಸನಗಳು.

**ಆಕರಗಳು**


೧. History of the pallavas of Kannchi Madras – B. R. Gopal.

೨. The Nolambas Dr. M. S. Krishna Murthy.

೩. The Maha Mandaleswara under the Chalukyas of Kalyani Bombay-Desai Dinakar.

೪. The Nolambas and the Tamil Country – C. R. Srinivasan.

೫. South Indian Inscription – IX

೬. Some Feudatory Families of Medical Karnataka-A Study Dr. Z. K. Ansari.

೭. ನೊಳಂಬರ ಆರ್ವಾಚೀನ ಇತಿಹಾಸ- ಗಂಗಪ್ಪ

೮. ನೊಳಂಬ ವಂಶವೃಕ್ಷ - ಕಂಬದ ಶಾಸನ, ಹೇಮಾವತಿ

೯. ನೊಳಂಬರ ವಂಶಾವಿ ಶಾಸನ - ಮೋರಿಗೇರಿ, ಹಗರಿಬೊಮ್ಮನಹರ್ಳಳಿ ತಾಲೂಕು.

೧೦. ನೊಳಂಬರ ಲಾಂಛನ-ಎಂ. ಎಸ್. ರಾಮಲಿಂಗಪ್ಪ.

೧೧. ಹಾಲುಮತ ದರ್ಶನ- ಶಂ. ಬಾ. ಜೋಷಿ.

೧೨. ನೊಳಂಬ ಇತಿಹಾಸ ದರ್ಶನ-ನೊಳಂಬ ವೀರಶೈವ ಸಂಘ.

೧೩. ಕರ್ನಾಟಕ ಪರಂಪರೆ ಸಂಪುಟ-೧ ಕನ್ನಡ ಸಂಸ್ಕೃತಿ ಇಲಾಖೆ.

೧೪. ಎಪಿಗ್ರಾಫಿಯಾ ಕರ್ನಾಟಕ ಸಂಪುಟ-IX, X, XI, XII.

೧೫. ಕರ್ನಾಟಕ ಸಂಸ್ಕೃತಿ ಸಮೀಕ್ಷೆ - ಡಾ. ಹೆಚ್. ತಿಪ್ಪೆರುದ್ರಸ್ವಾಮಿ.

೧೬. ಇಮ್ಮಡಿ ಚಿಕ್ಕ ಭೂಪಾಲ ಸಾಂಗತ್ಯ, ರಾಮರಾಯ ಕೈಪಿಡಿ ಶಾಸನಗಳು.

## ೧೬. ಕ್ರೈಸ್ತ ಕುರುಬರು

ಒಂದು ಜನಾಂಗದ ಇತಿಹಾಸವು ಪುರಾತನವಾದುದು ಮತ್ತು ಸಾರ್ವತ್ರಿಕವಾದುದು. ಜಾಗತಿಕ ಇತಿಹಾಸದಲ್ಲಿ ಪ್ರತಿಯೊಂದು ಜನಾಂಗವೂ ಒಂದೊಂದು ಧರ್ಮವನ್ನು ಆಚರಿಸಿಕೊಂಡು ಬರುವ ವಿಚಾರ ಸರ್ವೆ ಸಾಮಾನ್ಯವಾದುದು. ಧರ್ಮದ ಮೂಲಕವಾಗಿ ಪ್ರತಿಯೊಂದು ಜನಾಂಗ ತನ್ನನ್ನು ಗುರುತಿಸಿಕೊಳ್ಳುವ ಕಾರ್ಯವನ್ನು ಮಾಡಿದೆ. ಪ್ರಪಂಚದಲ್ಲಿ ಪ್ರಬಲವಾದ ಧರ್ಮಗಳು ತಮ್ಮ ಸಾಮ್ರಾಜ್ಯವನ್ನು ಕಟ್ಟಿಕೊಂಡು ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳುವ ಕೆಲಸ ಮಾಡಿವೆ. ಹಿಂದೂ, ಮುಸ್ಲಿಂ, ಕ್ರೈಸ್ತ ಮತ್ತು ಬೌದ್ಧ ಧರ್ಮಗಳು ವಿಶ್ವದಾದ್ಯಂತ ವ್ಯಾಪಿಸಿಕೊಂಡು ವಿಶಾಲತೆಯನ್ನು ಮೆರೆದಿವೆ. ಅದರಲ್ಲಿ ಕ್ರಿಶ್ಚಿಯನ್ ಧರ್ಮವೂ ಅತಿ ವ್ಯಾಪಕತೆಯನ್ನು ಪಡೆದುಕೊಂಡ ಧರ್ಮವಾಗಿದೆ.

ಪ್ರತಿಯೊಂದು ಧರ್ಮಕ್ಕೂ ಒಂದೊಂದು ಸಂಸ್ಕೃತಿ, ಆಚಾರ-ವಿಚಾರ, ರೀತಿ-ನೀತಿಗಳಿವೆ. ಅವುಗಳನ್ನು ಆಚರಿಸಿಕೊಂಡು ಸಂರಕ್ಷಿಸಿಕೊಂಡು ಅದು ಮುಂದುವರೆಯುತ್ತಿರುತ್ತದೆ. ಕಾಲಚಕ್ರದಲ್ಲಿ ಸಿಲುಕಿಕೊಂಡ ಹಲವಾರು ಧರ್ಮಗಳು ಸಂಘರ್ಷ ಮತ್ತು ಸಂಗ್ರಾಮವನ್ನು ಮಾಡಿಕೊಂಡೇ ಬಂದಿವೆ. ಎಲ್ಲ ಧರ್ಮಗಳ ತಿರುಳು ಒಂದೇ ಆದರೂ ಅವುಗಳನ್ನು ಆಚರಿಸಿಕೊಂಡು ಬರುವ ಜನಾಂಗ ಮಾತ್ರ ವಿಭಿನ್ನ. ಕೆಲವು ಧರ್ಮಗಳು ಜಾಗತಿಕ ಮಟ್ಟದಲ್ಲಿ ತಮ್ಮ ಪ್ರಭಾವ ಬೀರಲೋ, ಧರ್ಮ ಪ್ರಚಾರ ಮಾಡುವ ಉದ್ದೇಶದಿಂದಲೋ, ಜನಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವ ಕಾರಣದಿಂದಲೋ, ಮಾನವೀಯತೆಯನ್ನು ಸಾರುವ ಕಾರಣದಿಂದಲೋ, ತಮ್ಮ ಧರ್ಮವೇ ಶ್ರೇಷ್ಠ ಎಂದು ಹೇಳುವ ಉದ್ದೇಶದಿಂದಲೋ ಹೀಗೆ ನೂರಾರು ಕಾರಣಗಳಿಂದ ಜನರನ್ನು ತಮ್ಮ ಧರ್ಮಕ್ಕೆ ಸೆಳೆಯಲು ನಿರಂತರ ಪ್ರಯತ್ನ

ಮಾಡುತ್ತಲೇ ಬಂದಿದ್ದಾರೆ. ಇಂದು ಸಹ ಅದು ಮುಂದುವರೆದಿದೆ. ಒಂದು ಜನಾಂಗ ಮತ್ತೊಂದು ಜನಾಂಗವನ್ನು ತಮ್ಮ ಧರ್ಮಕ್ಕೆ ಮತಾಂತರ ಮಾಡಿಕೊಳ್ಳುವ ಪ್ರಕ್ರಿಯೆ ಆದಿಕಾಲದಿಂದಲೂ ನಡೆದು ಬಂದಿದೆ.

ಮತಾಂತರ ಎನ್ನುವುದು ಒಂದು ಸಾಮಾಜಿಕ ಪಿಡುಗು. ಇದಕ್ಕೆ ಬಲಿಯಾಗುವವರು ಹೆಚ್ಚಾಗಿ ದೀನದಲಿತರು, ಬಡವರು, ಅನಾಥರು, ಅಸ್ಪೃಶ್ಯರು, ಶೋಷಣೆಗೊಳಗಾದವರು ಹಾಗೂ ಯಾವುದೇ ಜಾತಿಯ ಅಥವಾ ಧರ್ಮದ ಆರ್ಥಿಕವಾಗಿ ಹಿಂದುಳಿದ ಬಡವರು. ಈ ಪ್ರಕ್ರಿಯೆ ಯಾಕೆ ಜರಗುತ್ತದೆ ಎಂಬುದಕ್ಕೆ ನಿರ್ದಿಷ್ಟ ಕಾರಣಗಳಿಲ್ಲ. ಅದರ ಇನ್ನೊಂದು ಮುಖವನ್ನು ನೋಡುವುದಾದರೆ ಅನಕ್ಷರತೆ, ಅಜ್ಞಾನ, ವ್ಯಾಪಾರ, ಮೂಢನಂಬಿಕೆ ರಾಜಕೀಯ, ಯುದ್ಧ ಔದ್ಯೋಗಿಕ ಕ್ರಾಂತಿ, ಧರ್ಮದಲ್ಲಿರುವ ಅನಿಷ್ಟ ಪದ್ಧತಿಗಳು, ಆಮಿಷಗಳು, ಮೊದಲಾದವುಗಳು. ಈ ದೃಷ್ಟಿಯನ್ನಿಟ್ಟುಕೊಂಡು ಆಲೋಚಿಸುವುದಾದರೆ ಜಗತ್ತಿನಲ್ಲಿ ಕ್ರೈಸ್ತ ಧರ್ಮವು ಅನ್ಯಧರ್ಮೀಯರನ್ನು ಸ್ವಧರ್ಮಕ್ಕೆ ಸೆಳೆಯುವ ಪ್ರಯತ್ನವನ್ನು ನಿರಂತರವಾಗಿ ಮುಂದುವರಿಸಿಕೊಂಡು ಬಂದಿದೆ.

ಮತಾಂತರವೆಂಬ ಮಾಯಾಜಾಲವನ್ನು ಹೆಣೆದು ಅದರಲ್ಲಿ ಹಲವಾರು ಜಾತಿ ಧರ್ಮದವರನ್ನು ತನ್ನ ಬಲೆಯಲ್ಲಿ ಬೀಳಿಸಿಕೊಳ್ಳುವಲ್ಲಿ ಕ್ರೈಸ್ತ ಧರ್ಮವು ಇತರ ಧರ್ಮಗಳಿಗಿಂತ ಮುಂದಿದೆ. ಈ ಜಾಲದಲ್ಲಿ ಅತೀ ಸುಲಭವಾಗಿ ಭಾರತ ಬಿದ್ದಿರುವುದನ್ನು ಕಾಣುತ್ತೇವೆ. ಏಕೆಂದರೆ ಅನೇಕ ಜಾತಿ, ಧರ್ಮ, ಸಂಸ್ಕೃತಿ, ಸಂಪ್ರದಾಯ, ಆಚಾರ-ವಿಚಾರ, ನಂಬಿಕೆಗಳಿಂದ ಕೂಡಿದ ಭಾರತದಲ್ಲಿ ಅನಂತ ವೈವಿಧ್ಯತೆಯಿದೆ. ಈ ಸಂಗತಿಗಳನ್ನರಿತ ಕ್ರಿಶ್ಚಿಯನ್ ಧರ್ಮವು ಉದಾರತೆಯನ್ನು ತೋರಿ ತನ್ನ ತೆಕ್ಕೆಗೆ ಬಂದ ಹಲವಾರು ಜಾತಿ -ಧರ್ಮದ ಜನರನ್ನು ತನ್ನೆಡೆಗೆ ಸೆಳೆಯಲು ಅನೇಕ ಆಸೆ-ಆಮಿಷಗಳನ್ನು ತೋರಿ ತನ್ನ ಜಾಲದಲ್ಲಿ ಸಿಲುಕಿಕೊಳ್ಳಲು ಪ್ರಯತ್ನ ಮಾಡುತ್ತಲೇ ಇದೆ. ಇದಕ್ಕೆ ಪೂರಕವೆನ್ನುವಂತೆ ಇಲ್ಲಿಯ ಜನರು ಧಾರ್ಮಿಕ ಕಟ್ಟುಪಾಡುಗಳಿಂದ ಬೇಸತ್ತು ಅನಿವಾರ್ಯವಾಗಿ ತನ್ನನ್ನು ಸಮಾನವಾಗಿ ಕಾಣುವ ಧರ್ಮವನ್ನು ಅರಸುತ್ತಿರುವಾಗ ಕ್ರೈಸ್ತಧರ್ಮ ಅಂಥವರಿಗೆ ಒಂದು ವರದಾನವಾಗಿದೆ. ಇದರ ಪ್ರತಿಫಲವೆನ್ನುವಂತೆ ಒಡಮೂಡಿ ಬಂದುದು ಮತಾಂತರ.

ಕಾಲದ ಸೆಳೆವಿನ ಸುಳಿಯಲ್ಲಿ ಸಿಕ್ಕು ಸಮಾಜ ನಿರ್ಮಿತ ಸಂಕೋಲೆಗಳಿಂದ ಬಿಡುಗಡೆ ಹೊಂದಲು ಅನಿವಾರ್ಯವೋ ಅವಶ್ಯಕತೆಯೋ ಎಂಬ ಭ್ರಮೆಯಲ್ಲಿ ಸಿಲುಕಿಕೊಂಡ ಜನತೆ ಬದಲಾವಣೆಯಾಗುತ್ತಿದ್ದಾರೆ. ಸಮಾಜದಲ್ಲಿನ ಅನೇಕ ಸಣ್ಣ-ಪುಟ್ಟ ಜಾತಿ ಸಮುದಾಯಗಳು ತಮ್ಮ ಅಸ್ತಿತ್ವವನ್ನು ಸ್ವಧರ್ಮದಿಂದ ಕಳಚಿಕೊಂಡು ಇನ್ನೊಂದು ಧರ್ಮದಲ್ಲಿ ಕಂಡುಕೊಳ್ಳುವ ಹವಣಿಕೆಯಲ್ಲಿದ್ದಾಗ ಅವರಿಗೆ ಮುಕ್ತವಾದ ಆಹ್ವಾನವನ್ನು ನೀಡಿದ ಧರ್ಮವೆಂದರೆ ಕ್ರೈಸ್ತ ಧರ್ಮ. ಹೀಗಾಗಿ ಅನೇಕ ಜಾತಿ-ಧರ್ಮದ ಜನರು ಕ್ರೈಸ್ತ ಧರ್ಮವನ್ನು ಸೇರಲು ಅಣಿಯಾದವು. ಅವುಗಳಲ್ಲಿ ಕುರುಬ ಜನಾಂಗವೂ ಒಂದು.

ಕುರುಬ ಜನಾಂಗದ ಮೂಲ ಉದ್ಯೋಗ ಕುರಿ ಸಾಕಾಣಿಕೆ, ನಂತರದಲ್ಲಿ ಕೃಷಿ. "ಯಾರು ತಮ್ಮ ಮೂಲದಿಂದ ಪರಿವರ್ತನೆ ಹೊಂದಿ ಕ್ರಿಶ್ಚಿಯನ್ ಧರ್ಮಕ್ಕೆ ಸೇರಿರುತ್ತಾರೋ ಅವರಿಗೆ ಕ್ರೈಸ್ತ ಕುರುಬರೆಂದು ಕರೆಯಲಾಗುತ್ತದೆ." ಒಂದು ಜಾತಿಯನ್ನು ಬಿಟ್ಟು ಮತ್ತೊಂದು ಜಾತಿಗೆ ಸೇರುವುದು ಸುಮ್ಮನೆ ಅಲ್ಲ. ಕಾರಣಗಳು ಇರಲೇಬೇಕು. ವಿನಾಕಾರಣ ಯಾರೊಬ್ಬರೂ ಮತ್ತೊಂದು ಧರ್ಮಕ್ಕೆ ಸೇರಲು ಸಾಧ್ಯವೆ ಇಲ್ಲ ಎಂಬುದು ನನ್ನ ಬಲವಾದ ನಂಬಿಕೆ.

**ಪರಿವರ್ತನೆ ಹೊಂದಲು ಕಾರಣಗಳು-ನಂಬಿಕೆಗಳು**

೧. ಏಸುವು ಮೂಲತಃ ಒಬ್ಬ ಪರಿಶುದ್ಧ ಕುರುಬ. ಧರ್ಮಬೋಧಕರಾದ ಪಾದ್ರಿಗಳು ಮುಗ್ಧ ಜನತೆಗೆ ಏಸುವು ಸಹ ನಿಮ್ಮ ಕುರಿ ದೊಡ್ಡಿಯಲ್ಲಿ ಜನಿಸಿದವನು. ನೀವು ಅವನ ಆರಾಧಕರಾಗುವುದರಿಂದ ನಿಮ್ಮ ಕಷ್ಟಗಳು ದೂರವಾಗುತ್ತದೆ ಎಂದು ಬೋಧಿಸಿದಾಗ ಈ ಜನಾಂಗ ಆ ಧರ್ಮವನ್ನು ಸ್ವೀಕರಿಸಲು ಮನಸ್ಸು ಮಾಡಿರಬೇಕು.

೧. ಕುರುಬರಿಗೆ ಏಸುವೇ ಶ್ರೇಷ್ಠ, ಅವನನ್ನು ಬಿಟ್ಟು ಅನ್ಯ ದೇವರಿಲ್ಲ. ಏಕೆಂದರೆ ಪೂಜಾ ಸ್ಥಳವಾದ ಕುರಿದೊಡ್ಡಿ ಕುರುಬರಿಗೆ ಪವಿತ್ರವಾದುದು. ಕುರುಬನಾಗದಿದ್ದರೆ ದೊಡ್ಡಿಯಲ್ಲಿ ಜನಿಸಲು ಸಾಧ್ಯವಿಲ್ಲ. ನೀವು ದೇವರೆಂದು ಪೂಜಿಸುವ ಕುರಿಗಳು ಸಹ ದೊಡ್ಡಿಯಲ್ಲಿ ಹುಟ್ಟಿದವುಗಳಾದುದರಿಂದ ಕುರಿ ದೊಡ್ಡಿಯಲ್ಲಿ ಹುಟ್ಟಿದ ಕ್ರೈಸ್ತನನ್ನೇ ನೀವು ಆರಾಧಿಸಬೇಕು ಎಂದು ಬೋಧಿಸಿದರು.

೨. ಮುಗ್ಧ ಭಾವನೆಯಿಂದ ಕೂಡಿದ ಈ ಜನಾಂಗದ ಮನದಲ್ಲಿ ಭಕ್ತಿ-ಭಾವನೆ ಅಂಕುರವಾಗುವ ಹಾಗೆ ಅವರ ಮನಃ ಪರಿವರ್ತಿಸಲು ಪ್ರಯತ್ನಿಸಿದ ಫಲವಾಗಿ ಕುರುಬರು ಕ್ರೈಸ್ತ ಧರ್ಮ ಸೇರಲು ಮನಸ್ಸು ಮಾಡಿರಬೇಕು.

**ಬಡತನ**

ಮತಾಂತರ ಪ್ರಕ್ರಿಯೆಗೆ ಬಡತನವು ಒಂದು ಕಾರಣವಾಗಿದೆ. ಬಡತನವು ಎಂತಹ ಸ್ವಾಭಿಮಾನವಿದ್ದರೂ ಕೀಳುಮಟ್ಟಕ್ಕೆ ಇಳಿಸಲು ಕಾರಣವಾಗಿದೆ. ಬಡತನದ ಬೆಂಕಿಯಲ್ಲಿ ಬೆಂದ ಬದುಕಿಗೆ ಆಶ್ರಯ ನೀಡಿದ ವ್ಯಕ್ತಿಯಾಗಲಿ, ಧರ್ಮವಾಗಲಿ ಶ್ರೇಷ್ಠವಾಗುತ್ತದೆ. ಮೊದಲೇ ಬಡತನದಿಂದ ಬಳಲುತ್ತಿರುವ ಭಾರತದ ಬಡಜನತೆ ಸಹಜವಾಗಿ ಅನ್ಯ ಧರ್ಮೀಯರು ಒಡ್ಡಿದ ಆಸೆ ಆಕಾಂಕ್ಷೆಗಳಿಗೆ ಬಲಿಯಾಗಿ ಮತಾಂತರ ಹೊಂದಲು ಕಾರಣವಾಗಿರಬಹುದು. ಹೀಗಾಗಿ ಕ್ರೈಸ್ತಧರ್ಮ ಒಡ್ಡಿದ ಆಮಿಷಗಳಿಗೆ ಕುರುಬ ಜನಾಂಗವೂ ಮತಾಂತರ ಹೊಂದಿರಬಹುದು.

**ಶಿಕ್ಷಣ (ಅನಕ್ಷರತೆ)**

ಅನಕ್ಷರತೆ, ಅಜ್ಞಾನ, ಮೂಢನಂಬಿಕೆ, ಸಂಪ್ರದಾಯ ಮುಂತಾದ ಅಂಧಶ್ರದ್ಧೆಯಿಂದ ಈ ಜನಾಂಗ ಶಿಕ್ಷಣದಿಂದ ವಂಚಿತರಾಗಿದ್ದರು. ಇವರು ತಮ್ಮ ಕುಲಕಸುಬಾದ ಕುರಿ ಸಾಕಾಣಿಕೆ ಮಾಡುತ್ತ ನಾಡನ್ನು ಮರೆತು ಕಾಡಿನಲ್ಲಿಯೇ ವಾಸ್ತವ್ಯ. ಸರಿಯಾದ ತಿಳುವಳಿಕೆಯಿಲ್ಲದ ಈ ಸಮುದಾಯ ಕ್ರೈಸ್ತ ಧರ್ಮ ಒದಗಿಸಿದ ಸೌಲಭ್ಯಗಳನ್ನು ಪಡೆದುಕೊಳ್ಳುವ ಕಾರಣಕ್ಕಾಗಿ ಬಹುಶಃ ಮತಾಂತರ ಹೊಂದಿರಲು ಸಾಧ್ಯವಿದೆ.

**ನಿಸರ್ಗಸಾಮ್ಯತೆ**

ಕುರುಬರು ಸಾಮಾನ್ಯವಾಗಿ ಬೆಟ್ಟ, ಗುಡ್ಡ ಕಾಡು-ಮೇಡುಗಳಲ್ಲಿ ವಾಸಿಸುವ ಜನಾಂಗವಾಗಿತ್ತು. ನಾಡಿಗಿಂತ ಕಾಡನ್ನೇ ಹೆಚ್ಚು ಪ್ರೀತಿಸುತ್ತಿದ್ದರು. ಕುರುಬರು ತಮ್ಮ ಕುರಿಗಳನ್ನು ದೊಡ್ಡಿಯಲ್ಲಿ ಹಾಕಲು ಬಿದಿರಿನ ಕಟಕಟೆ ಮಾಡಿ ಕುರಿಗಳನ್ನು ಸಂರಕ್ಷಿಸಿಕೊಳ್ಳುತ್ತಿದ್ದರು. ಇದೇ ಮಾದರಿಯಲ್ಲಿಯೇ ಕ್ರೈಸ್ತರು ಕೂಡ ಮನೆಯನ್ನು ಕಟ್ಟಿ ಸುತ್ತಲು ಆವರಣವನ್ನು ಇದೇ ರೀತಿ ನಿರ್ಮಿಸಿಕೊಳ್ಳುತ್ತಿದ್ದರು. ಈ ಸಾಮ್ಯತೆಯಿಂದಲೂ ಕೂಡ ಮುಗ್ಧರಾದ ಇವರು ಆ ಧರ್ಮಕ್ಕೆ ಸೇರಿರಬಹುದು.

ನಿಸರ್ಗಪ್ರಿಯರಾದ ಕುರುಬರು ಹೆಚ್ಚಾಗಿ ಆಕಾಶ-ನಕ್ಷತ್ರ, ಬೆಟ್ಟ-ಗುಡ್ಡ, ಕೆರೆ-ನದಿಗಳ ಪರಿಸರದಲ್ಲಿ ವಾಸಿಸುತ್ತಿದ್ದ ಇವರು ಕ್ರೈಸ್ತನು ಸಹ ನಿಸರ್ಗದ ಮಡಿಲಲ್ಲಿ ಜನಿಸಿದ್ದರಿಂದ ಅವನು ಸಹ ಕುರುಬನೇ ಎಂಬ ಮುಗ್ಧ ಭಾವನೆಯಿಂದ ಪರಿವರ್ತನೆ ಹೊಂದಿರಲಿಕ್ಕೆ ಸಾಕು.

**ಧರ್ಮ ಬೋಧನೆ**

ಕ್ರೈಸ್ತ ಧರ್ಮ ಬೋಧಕರು ಭಾರತಕ್ಕೆ ಆಗಮಿಸಿದಾಗ ಅವರಿಗೆ ಇಲ್ಲಿಯ ಮೂಢನಂಬಿಕೆ, ಸಂಪ್ರದಾಯಬದ್ಧ ಆಚರಣೆ, ಕಂದಾಚಾರಗಳು, ಬಡತನ, ನಿರಕ್ಷರತೆ, ನಿರ್ಗತಿಕರು, ಅನಾಥರು, ಕೊಳಚೆ ಪ್ರದೇಶ ವಾಸಿಗಳು ಹೀಗೆ ಹಲವು-ಹತ್ತಾರು ಕಾರಣಗಳಿಗಾಗಿ ಸಮಾಜದಲ್ಲಿ ಶೋಷಣೆಗೊಳಪಟ್ಟ ಜನತೆ ಎಲ್ಲೆಲ್ಲಿ ಗೋಚರಿಸಿತೋ ಅಲ್ಲಲ್ಲಿ ತಮ್ಮ ಶಿಬಿರಗಳನ್ನು ಹೂಡಿ ಜನರಿಗೆ ತಮ್ಮ ಧರ್ಮಕ್ಕೆ ಸೇರುವಂತೆ ಧರ್ಮ ಬೋಧನೆಯನ್ನು ಮಾಡಲು ಪ್ರಾರಂಭಿಸಿದರು. ಅವರವರ ಧರ್ಮ ಆಚರಣೆಗಳಿಗೆ ಹೊಂದಾಣಿಕೆಯಾಗುವಂತಹ ಏಸುವಿನ ಸಂದೇಶಗಳನ್ನು ಪರಿವರ್ತನೆ ಮಾಡಿ ಬಿತ್ತಿ ತಮ್ಮ ಧರ್ಮಕ್ಕೆ ಸೆಳೆಯಲು ಪ್ರಯತ್ನಿಸಿದರು.

ಈ ಹಂತದಲ್ಲಿ ಕುರುಬ ಜನಾಂಗದವರಿಗೆ ಏಸುವಿನ ಜನನ ಕುರುಬರ ದೊಡ್ಡಿಯಲ್ಲಿ ಆಯಿತು. ಏಸುವಿನ ಮೊದಲ ದರ್ಶನವನ್ನು ಪಡೆದವರು ಕುರುಬರು. ಅಷ್ಟೇ ಅಲ್ಲ, ಸ್ವಾಮಿಯು ತನ್ನ ಮೊದಲ ಸಂದೇಶವನ್ನು ನೀಡಿದ್ದ ಸಹ ಮೊದಲು ಕುರುಬರಿಗೆ. ಅವನೇ ಜಗತ್ತನ್ನು ಸಂರಕ್ಷಿಸುವ ದೇವ ಎಂಬ ತ್ಯಾಗಿ ಸಂದೇಶಗಳ ಮೂಲಕ ಕುರುಬರನ್ನು ಕ್ರೈಸ್ತ ಧರ್ಮಕ್ಕೆ ಸೆಳೆಯಲು ಪ್ರಯತ್ನಿಸಿದಗ, ಮುಗ್ಧರಾದ ಜನ ಬಹುಶಃ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡಿರುವ ಸಾಧ್ಯತೆಯಿದೆ. ಮತಾಂತರ ಹೊಂದಿದ ಬಹುತೇಕ ಕುರುಬರು ಉಣ್ಣಿ ಕಂಕಣದವರು ಎಂಬುದಾಗಿ ಗಮನಿಸಬೇಕಾದ ಸಂಗತಿ.

**ಮದುವೆ ವಿಚಾರ**

ಕ್ರೈಸ್ತ ಕುರುಬರು ಮೂರು ತಲೆಮಾರುಗಳಿಂದ ಬದಲಾವಣೆಯಾಗುತ್ತಾ ಬಂದಿರುವುದನ್ನು ಕಾಣುತ್ತೇವೆ. ಅಜ್ಜನ ಕಾಲದಲ್ಲಿ ತೀವ್ರತರವಾಗಿದ್ದ ಬದಲಾವಣೆ ಮೊಮ್ಮಗನ ಕಾಲಕ್ಕೆ ಬರುವ ಸಂದರ್ಭದಲ್ಲಿ ಮತಾಂತರ ಪ್ರಕ್ರಿಯೆ ಬಹಳಷ್ಟು ಕಡಿಮೆಯಾಗಿದೆ. ಮೊದಲ ತಲೆಮಾರಿನಲ್ಲಿ ಹಿಂದೂ ಸಂಪ್ರದಾಯದಂತೆ ಮದುವೆಯಾಗುತ್ತ ಬಂದು ಮಗನ ಹಾಗೂ ಮೊಮ್ಮಗನ ಕಾಲದಲ್ಲಿ ಸಂಪೂರ್ಣ ಪರಿವರ್ತನೆಯಾಗುತ್ತಾ ಬಂದುದನ್ನು ಕಾಣುತ್ತೇವೆ. ಈಗ ಕ್ರೈಸ್ತ ಧರ್ಮ ಪದ್ಧತಿಯಂತೆ ಮುಂದುವರೆಸಿಕೊಂಡು ಬರುತ್ತಿದ್ದಾರೆ.

ಮದುವೆ ಪ್ರಕ್ರಿಯೆ ಹಿಂದೂ ಸಂಪ್ರದಾಯದಲ್ಲಿರುವಂತೆ ಸೋದರ ಮಾನವ ಮಗಳನ್ನಾಗಲಿ ಇಲ್ಲವೆ ಬೇರೆ ಕ್ರೈಸ್ತ ಕುಟುಂಬದವರೊಂದಿಗೆ ಅಂದರೆ ಕ್ರೈಸ್ತ ಧರ್ಮಕ್ಕೆ ವಿಭಿನ್ನ ಜಾತಿಯ ಜನರು ಮತಾಂತರಗೊಂಡಿದ್ದಾರೆ. ಹೀಗೆ ಬದಲಾವಣೆಗೊಂಡ ಎಲ್ಲ ಜಾತಿಯ ಕ್ರೈಸ್ತರೊಂದಿಗೆ ಸಂಬಂಧ ಬೆಳೆಸುವುದಿಲ್ಲ. ತಮ್ಮ ಜಾತಿಯ ಮತಾಂತರಗೊಂಡ ವ್ಯಕ್ತಿಗಳೊಂದಿಗೆ ಸಂಬಂಧ ಬೆಳೆಸಲು ಇಚ್ಚಿಸುತ್ತಾರೆ. ಈ ಮದುವೆಗೆ ಗಂಡು-ಹೆಣ್ಣಿನ ಕಡೆಯವರಿಂದ ಒಪ್ಪಿಗೆ ಪಡೆದು ನಿಶ್ಚಿತಾರ್ಥ ಕಾರ್ಯವನ್ನು ಮುಗಿಸುತ್ತಾರೆ. ಕೆಲವರು ವರದಕ್ಷಿಣೆ ಪಡೆದು ಇನ್ನು ಕೆಲವರು ವರದಕ್ಷಿಣೆಯಿಲ್ಲದೆಯೂ ಮದುವೆಯಾಗುವ ಪದ್ಧತಿಯಿದೆ. ಹೆಚ್ಚಾಗಿ ಕೆಥೊಲಿಕ್ ಪಂಥದ ಹುಡುಗಿಯನ್ನು ಮದುವೆಯಾಗುತ್ತಾರೆ. ವಧುವರರು ಗೊತ್ತಾದ ದಿನ ತನ್ನ ಬಂಧುಬಾಂಧವರೊಂದಿಗೆ ಚರ್ಚಿಗೆ ಹೋಗಿ ಪಾತ್ರಿಯ ಸಮ್ಮುಖದಲ್ಲಿ ಕೆಲವು ಸ್ತೋತ್ರಗಳನ್ನು ಪಠಿಸಿ ಮದುಮಕ್ಕಳಿಗೆ ತಿಳಿಹೇಳಿ ಅತ್ಯಂತ ಸರಳವಾಗಿ ಅಂದರೆ ಉಂಗುರ ಬದಲಾಯಿಸುವುದರೊಂದಿಗೆ ಮದು ಪ್ರಕ್ರಿಯೆ ಅಂತ್ಯಗೊಳಿಸುತ್ತಾರೆ. ಹಿಂದೂಗಳ ತಾಳಿಯ ಹಾಗೆ ವಧುವಿನ ಕೈಗೆ ಉಂಗುರ ತೊಡಿಸುವ ಸಾಂಕೇತಿಕ ಕಾರ್ಯಕ್ರಮದೊಂದಿಗೆ ಮದುವೆ ಮುಗಿಯುತ್ತದೆ. ವಿವಾಹ ವಿಚ್ಛೇದನ ಬಹಳ ಕಡಿಮೆ. ಒಂದು ವಿವಾಹ, ವಿಚ್ಛೇದನವಾದರೂ ವಿಧವೆ ವಿಧರರು ಪುನರ್ ವಿವಾಹವಾಗುವುದಕ್ಕೆ ಅವಕಾಶವಿದೆ. ಇದಕ್ಕೆ ಕೆಲವು ನಿಯಮಗಳನ್ನು ವಿಧಿಸಿ ಪಾದ್ರಿಯು ಪುನರ್ ವಿವಾಹ ಕಾರ್ಯವನ್ನು ನೆರವೇರಿಸಿಕೊಡುತ್ತಾರೆ. ಬಹುಪತ್ನಿತ್ವಕ್ಕೆ ಧರ್ಮದಲ್ಲಿ ಅವಕಾಶ ಇಲ್ಲ. ಕುಟುಂಬದ ಯಜಮಾನಿಕೆಯನ್ನು ಹಿಂದೂ ಧರ್ಮದಂತೆ ಪುರುಷರೇ ಒಡೆಯನ ಪಾತ್ರವನ್ನು ನಿರ್ವಹಿಸುತ್ತಾನೆ. ಹಿಂದೂ ಸಂಪ್ರದಾಯದಂತೆ ತಂದೆಯ ಆಸ್ತಿಯ ಒಡೆತನವು ಕುಟುಂಬದ ಹಿರಿಯ ವ್ಯಕ್ತಿಗೆ ಬರುತ್ತದೆ. ಒಟ್ಟಾರೆಯಾಗಿ ಮದುವೆಗೆ ಸಂಬಂಧಪಟ್ಟಂತೆ ಹೆಚ್ಚಿನ ಖರ್ಚುವೆಚ್ಚಗಳಿಲ್ಲದೆ ಸರಳವಾಗಿ ಚರ್ಚಿನಲ್ಲಿ ಮದುವೆಗಳು ಜರುಗುತ್ತವೆ.

ಮತಾಂತರಗೊಳ್ಳದ ಇವರ ಸಂಬಂಧಿಕರ ಮದುವೆ, ಮುಂಜುವೆ, ಶುಭಕಾರ್ಯ, ಉತ್ಸವ ಇತ್ಯಾದಿಗಳಿಗೆ ಅವರ ಮನೆಗೆ ಹೋದಾಗ ಮೊದಲಿನ ಹಾಗೆ ನಡೆಸುವ ಪೂಜಾ-ಪುನಸ್ಕಾರಗಳ ಕಾರ್ಯದಲ್ಲಿ ನೇರವಾಗಿ ತೊಡಗಿಸಿಕೊಳ್ಳದೆ ಆಪ್ತರು, ಸ್ನೇಹಿತರು ಬಂದು ಅತಿಥ್ಯ ಸ್ವೀಕರಿಸಿ ಹೋಗುವ ರೀತಿಯಲ್ಲಿ ಮಾತ್ರ ಇವರನ್ನು ತೊಡಗಿಸಿಕೊಳ್ಳುತ್ತಾರೆ. ಇವರೊಂದಿಗೆ ವೈವಾಹಿಕ ಸಂಬಂಧವನ್ನಾಗಲಿ, ಇನ್ನಿತರ ಯಾವುದೇ ಸಂಬಂಧವನ್ನು ಹೊಂದಲು ಬಯಸುವುದಿಲ್ಲ. ಇವರನ್ನು ಅನ್ಯಧರ್ಮಿಯರಂತೆ ಪರಿಗಣಿಸುವ ಪರಂಪರೆ ಇದೆ.

**ಆಹಾರ ಪದ್ಧತಿ**

ಕ್ರೈಸ್ತ ಕುರುಬರು ಸಾಮಾನ್ಯವಾಗಿ ಉತ್ತರ ಕರ್ನಾಟಕದ ಆಹಾರ ಪದ್ಧತಿಯನ್ನು ರೂಢಿಸಿಕೊಂಡು ಬಂದಿದ್ದಾರೆ. ಸಸ್ಯಹಾರ ಮತ್ತು ಮಾಂಸಾಹಾರ ಎರಡನ್ನು ಅಳವಡಿಸಿಕೊಂಡಿದ್ದಾರೆ. ಸಸ್ಯಹಾರದಲ್ಲಿ ರೊಟ್ಟಿ, ಚಪಾತಿ, ಅನ್ನ ಕಾಯಿಪಲ್ಲೆ, ಕಾಳುಗಳು

ಸಾಮಾನ್ಯವಾಗಿದ್ದರೆ ಮಾಂಸಾಹಾರದಲ್ಲಿ ಹೆಚ್ಚಾಗಿ ಕುರಿ, ಕೋಳಿ ಮೊಟ್ಟೆ ಮೀನವನ್ನು ಉಪಯೋಗಿಸುತ್ತಾರೆ. ಕಾಫಿ, ಚಹಾ, ಸರ್ವರ ಪೇಯಗಳಾಗಿದ್ದರೆ, ಅಲ್ಕೋಹಾಲ್‌ನ್ನು ವಿಶೇಷವಾಗಿ ಪುರುಷರು ಮಾತ್ರ ಸೇವಿಸುತ್ತಾರೆ. ಸ್ತ್ರೀಯರು ಕ್ವಚಿತ್ತಾಗಿ ಸೇವಿಸಬಹುದು.

**ಕೌಟುಂಬಿಕ ವ್ಯವಸ್ಥೆ**

ಇವರ ಕೌಟುಂಬಿಕ ವ್ಯವಸ್ಥೆ ಹೆಚ್ಚಾಗಿ ವಿಭಕ್ತವಾಗಿದೆ. ಅವಿಭಕ್ತ ಹಾಗೂ ಸಂಪ್ರದಾಯ ಕುಟುಂಬದಿಂದ ಆಗಮಿಸಿದ ಇವರು ಹೆಚ್ಚಾಗಿ ವಿಭಕ್ತ ಕುಟುಂಬಗಳಲ್ಲಿ ಆಸಕ್ತಿ ಹೊಂದಿದ್ದಾರೆ. ಕುಟುಂಬದ ಜವಾಬ್ದಾರಿಯನ್ನು ಪುರುಷರು ವಹಿಸಿಕೊಂಡರೆ ಸ್ತ್ರೀಯರು ಮನೆಯ ಆಗುಹೋಗುಗಳನ್ನು ನಿಭಾಯಿಸುತ್ತಾರೆ. ಮೊದಲಿದ್ದ ಹೆಸರು ಕೂಡ ಮಾರ್ಪಾಡಾಗುತ್ತ ಬಂದು ಈಗ ಕ್ರೈಸ್ತಧರ್ಮದ ಹೆಸರುಗಳನ್ನು ಇಟ್ಟುಕೊಳ್ಳುವ ಪರಂಪರೆ ರೂಢಿಸಿಕೊಂಡಿದ್ದಾರೆ. ಮೊದಲು ತಮ್ಮ ಹೆಸರು ನಂತರ ತಂದೆ/ಗಂಡನ ಹೆಸರು ಕೊನೆಯಲ್ಲಿ ಅಡ್ಡ ಹೆಸರುಗಳನ್ನು ಇಟ್ಟುಕೊಳ್ಳುತ್ತಾರೆ. ವಿಶೇಷವೆಂದರೆ ಮತಾಂತರ ಕುರುಬರು ತಮ್ಮ ಅಡ್ಡ ಹೆಸರುಗಳನ್ನು ಹಾಗೆಯೇ ಉಳಿಸಿಕೊಂಡು ಬಂದಿದ್ದಾರೆ. ಈಗಲೂ ಸಹ ಅವರ ಅಡ್ಡ ಹೆಸರುಗಳ ಮೇಲಿಂದ ಇವರು ಕ್ರೈಸ್ತ ಕುರುಬರೆಂದು ಗುರುತಿಸಬಹುದು. ಉದಾ ಕುರಿ, ಕಂಬಳಿ, ಕರಿಗಾರ, ಕರಿ, ಮುಷ್ಟಿಗೇರಿ, ಹೊನ್ನನಾಯ್ಕರ, ದಂಡಿನ, ಝಳಕಿ, ಹಳ್ಳಿ, ಹಾಲಣ್ಣವರ ಇತ್ಯಾದಿ.

**ವೃತ್ತಿ ಜೀವನ**

ಮತಾಂತರ ಕುರುಬರು ತಮ್ಮ ಉಪಜೀವನಕ್ಕಾಗಿ ಬೇರೆ ಬೇರೆ ವೃತ್ತಿಗಳನ್ನು ಅವಲಂಬಿಸಿದ್ದಾರೆ. ಬಹುತೇಕ ಜನ ಕ್ರೈಸ್ತರು ಇವರನ್ನು ತಮ್ಮ ಧರ್ಮಕ್ಕೆ ಸೆಳೆಯುವ ಸಂದರ್ಭದಲ್ಲಿ ಮೊದಲು ಆಶ್ವಾಸನೆ ನೀಡಿದಂತೆ ತಮ್ಮ ಸಂಸ್ಥೆಗಳಾದ ಶಿಕ್ಷಣ, ಆಸ್ಪತ್ರೆ, ಕ್ರೈಸ್ತ ಮಿಶನರಿ ಮುಂತಾದವುಗಳಲ್ಲಿ ನೌಕರಿಯನ್ನು ಕೊಟ್ಟು ಸಲುಹಿದ್ದಾರೆ. ಇನ್ನೊಂದು ವಿಶೇಷವೇನೆಂದರೆ ಬ್ರಿಟಿಷರು ಉತ್ತರ ಕರ್ನಾಟಕದಲ್ಲಿ ರೈಲ್ವೆಯನ್ನು ಪ್ರಾರಂಭಿಸುವ ಸಮಯದಲ್ಲಿ ಇಂತಹ ವ್ಯಕ್ತಿಗಳಿಗೆ ನೌಕರಿಯನ್ನು ಕೊಟ್ಟು ಪ್ರೋತ್ಸಾಹಿಸಿದರು. ಈ ಕಾರಣದಿಂದಲೋ ಏನೋ ರೈಲ್ವೆ ಹಳಿಗುಂಟ ಇರುವ ಬಹಳಷ್ಟು ಕುರುಬರು ಮತಾಂತರಗೊಂಡಿದ್ದಾರೆ. ಉದಾ: ಶ್ಯಾಗೋಟಿ, ಧಾರವಾಡ, ಗದಗ, ಸುಮಡ್ಡಿ, ಗುಳೇದಗುಡ್ಡ, ಮುದಗಲ್, ತೋರಣಗಟ್ಟಿ, ಆಸಂಗಿ, ಪಾದನಕಟ್ಟಿ, ಹಲಕುರ್ಕಿ, ಆಡಗಲ್ ಕಟ್ನಳ್ಳಿ, ಝಳಕಿ ಮುಂತಾದ ಸ್ಥಳಗಳನ್ನು ಗುರುತಿಸಬಹುದು.

ಕ್ರೈಸ್ತ ಕುರುಬರು ಬಹುತೇಕ ಭೂರಹಿತರಾಗಿದ್ದಾರೆ. ಕೃಷಿಯನ್ನು ಅವಲಂಬಿಸಿಲ್ಲ. ಸಣ್ಣ ಸಣ್ಣ ಗುಡಿ ಕೈಗಾರಿಕೆ, ಖಾಸಗಿ ನೌಕರಿ, ಸರ್ಕಾರಿ ನೌಕರಿ ಸಣ್ಣ ಪುಟ್ಟ ವ್ಯಾಪಾರ ಮಾಡುತ್ತಾ ಜೀವನ ಸಾಗಿಸುತ್ತಿದ್ದಾರೆ. ಒಟ್ಟಾರೆಯಾಗಿ ಇದ್ದುದರಲ್ಲಿಯೇ ಸಂತೋಷ ಹಾಗೂ ಸುಖಕರ ಜೀವನವನ್ನು ಸಾಗಿಸುತ್ತಿದ್ದಾರೆ. ಆರ್ಥಿಕ ಪರಿಸ್ಥಿತಿ ಸಾಮಾನ್ಯವಾಗಿ ಸಾಧಾರಣವಾಗಿರುವುದಾಗಿ ಕಂಡುಬರುತ್ತದೆ.

**ಹಬ್ಬ ಹರಿದಿನಗಳು**

ಕ್ರೈಸ್ತ ಕುರುಬರು ಸಹ ಕ್ರೈಸ್ತರು ಆಚರಿಸುವ ಪ್ರಮುಖ ಹಬ್ಬಗಳಾದ ಕ್ರಿಸ್‌ಮಸ್, ಗುಡ್ ಫ್ರೈಡೆ, ಈಸ್ಟರ್ ಸಂಡೆ, ಹೊಸವರ್ಷ ಮುಂತಾದ ಮಹತ್ವದ ಹಬ್ಬಗಳನ್ನು ಆಚರಿಸುತ್ತಾರೆ. ಪೂರ್ತಿಯಾಗಿ ಕ್ರೈಸ್ತ ಸಂಪ್ರದಾಯದಂತೆ ಈ ಹಬ್ಬಗಳನ್ನು ಆಚರಿಸುತ್ತಾರೆ. ಹಿಂದೂ ಹಬ್ಬಗಳ ಆಚರಣೆಯನ್ನು ನಿಲ್ಲಿಸಿದ್ದಾರೆ. ಇವಲ್ಲದೆ ಕ್ರೈಸ್ತ ಸಮುದಾಯದಲ್ಲಿ ಬರುವ ಎಲ್ಲ ಹಬ್ಬ-ಹರಿದಿನ, ಉತ್ಸವ, ಸಭೆ-ಸಮಾರಂಭ, ಚಳವಳಿ, ಜಾತ್ರೆ ಮೊದಲಾದವುಗಳಲ್ಲಿ ಸ್ವಪ್ರೇರಣೆಯಿಂದ ಭಾಗವಹಿಸುತ್ತಾರೆ. ಕ್ರೈಸ್ತ ಪಾದ್ರಿಯಾಗಿಯೂ ಕೆಲಸ ನಿರ್ವಹಿಸುತ್ತಾರೆ. ವೇಷಭೂಷಣಗಳನ್ನು ಸಾಮಾನ್ಯವಾಗಿ ಹಿಂದೂ ಸಂಪ್ರದಾಯದಂತೆ, ಧರಿಸುವ ಪದ್ಧತಿ ಇದೆ. ಪಾದ್ರಿಗಳಾದವರು ಕ್ರೈಸ್ತ ಪಾದ್ರಿಯ ನಿಲುವಂತಿಯನ್ನು ಧರಿಸುತ್ತಾರೆ.

**ಶವಸಂಸ್ಕಾರ ಪದ್ಧತಿ**

ಕ್ರೈಸ್ತ ಕುರುಬರಲ್ಲಿ ಹಿಂದೂಗಳಿಗಿಂತ ಭಿನ್ನವಾಗಿದೆ. ವ್ಯಕ್ತಿಯು ಸತ್ತ ನಂತರ ಶವವನ್ನು ಮನೆಯಲ್ಲಿ ಇರಿಸಿಕೊಂಡು ಎಲ್ಲ ವಿಧಿ-ವಿಧಾನಗಳನ್ನು ಪೂರೈಸಿ ಸ್ಮಶಾನಕ್ಕೆ ತೆಗೆದುಕೊಂಡು ಹೋಗಲಾರದೆ ಆ ಶವವನ್ನು ಚರ್ಚಿಗೆ ತೆಗೆದುಕೊಂಡು ಹೋಗಿ ಅಲ್ಲಿ ವಿಧಿವಿಧಾನಗಳಲ್ಲೆವನ್ನು ಪಾದ್ರಿಯು ಮುಗಿಸುತ್ತಾನೆ. ನಂತರ ಶವವನ್ನು ಕಾಫಿನ್ ಬಾಕ್ಸ್ (ಮರದ ಶವ ಪೆಟ್ಟಿಗೆ)ನಲ್ಲಿ ಹಾಕಿ ಹೊತ್ತುಕೊಂಡು ಸ್ಮಶಾನಕ್ಕೆ ಹೋಗಿ ಪಾದ್ರಿಯು ಪ್ರಾರ್ಥನೆಯ ವಿಧಿ-ವಿಧಾನಗಳನ್ನು ಮುಗಿಸಿದ ನಂತರ ಮೊದಲು ಮಣ್ಣನ್ನು ಹಾಕಿ ನಂತರ ಉಳಿದವರು ಮಣ್ಣು ಹಾಕಿ ಆ ಪ್ರಕ್ರಿಯೆಯನ್ನು ಮುಗಿಸುತ್ತಾರೆ.

ಹಿಂದೂ ಸಂಪ್ರದಾಯದಂತೆ ಸತ್ತ ಮೂರನೆಯ ದಿನಕ್ಕೆ ಸಮಾಧಿಗೆ ಹೋಗಿ ಹಾಲು ಹಾಕಿ ಬರುವ ಪದ್ಧತಿ ಇದೆ. ನಂತರ ೪೦ ದಿನಗಳು ಗತಿಸಿದ ಮೇಲೆ ಅವರ ಸಂಬಂಧಿಕರನ್ನು ಕರೆದು ತಿಥಿ ಮಾಡುವ ಕಾರ್ಯಕ್ರಮ ಇರುತ್ತದೆ. ರೋಮನ್ ಕೆಥೊಲಿಕ್ ಪಂಥದಲ್ಲಿ ಸತ್ತವರ ಇಷ್ಟಾರ್ಥ ಪದಾರ್ಥಗಳನ್ನಿಟ್ಟು ಬಟ್ಟೆ ಏರಿಸಿ ತಿಥಿ ಮಾಡುವ ಪದ್ಧತಿ ಇದೆ. ಪ್ರತಿವರ್ಷ ನವ್ಹೆಂಬರ್ ೩ನೇ ತಾರೀಖಿನಂದು ಧರ್ಮದವರೆಲ್ಲ ಕೂಡಿಕೊಂಡು ಸಾಮೂಹಿಕವಾಗಿ ಮುಕ್ತಿಧಾಮಕ್ಕೆ ತೆರಳಿ ಸಮಾಧಿಯನ್ನು ಸ್ವಚ್ಚಗೊಳಿಸಿ ಸುಣ್ಣಬಣ್ಣಗಳಿಂದ ಅಲಂಕರಿಸಿ ಪ್ರಾರ್ಥನೆ ಸಲ್ಲಿಸಿ ಮೃತರ ಆತ್ಮಕ್ಕೆ ಶಾಂತಿ ಕೋರುವ ಸಂಪ್ರದಾಯವಿದೆ.

ಮೃತರ ಸಮಾಧಿಯ ಮೇಲೆ ಸಿಲುಬೆ ನಡೆಸಿ, ಅವರ ಸ್ಮರಣಾರ್ಥವಾಗಿ ಶಿಲೆಯಲ್ಲಿ ಹೆಸರು ಬರೆಯಿಸಿ ಸಮಾಧಿಯನ್ನು ಕಟ್ಟಿಸುತ್ತಾರೆ. ಇದು ಅವರವರ ಆರ್ಥಿಕ ಸ್ಥಿತಿಗತಿಯ ಮೇಲೆ ಅವಲಂಬಿಸಿರುತ್ತದೆ.

**ಆರ್ಥಿಕ ಸ್ಥಿತಿಗತಿ**

ಕ್ರೈಸ್ತ ಕುರುಬರ ಆರ್ಥಿಕ ಪರಿಸ್ಥಿತಿ ಮಾತ್ರ ಅಷ್ಟೊಂದು ಅಭಿವೃದ್ಧಿದಾಯಕವಾಗಿರುವುದಿಲ್ಲ, ಅನೇಕರು ಹೈಸ್ಕೂಲ್ ಮತ್ತು ಕಾಲೇಜು ಮಟ್ಟದವರೆಗೆ ವಿದ್ಯಾಭ್ಯಾಸವನ್ನು ಪಡೆದು, ಪ್ರಾಥಮಿಕ, ಮಾಧ್ಯಮಿಕ ಶಾಲೆಗಳಲ್ಲಿ ಸರಕಾರಿ ಕಚೇರಿ, ರೈಲ್ವೆ ಇಲಾಖೆಯಲ್ಲಿ ಉದ್ಯೋಗವನ್ನು ಪಡೆದುಕೊಂಡು ಜೀವನ ಸಾಗಿಸುತ್ತಿದ್ದರೆ, ಮತ್ತೆ ಕೆಲವರು ಸಣ್ಣಪುಟ್ಟ ವ್ಯಾಪಾರವನ್ನು ಮಾಡುತ್ತಾ ನೆಮ್ಮದಿಯ ಜೀವನವನ್ನು ಸಾಗಿಸುತ್ತಿದ್ದಾರೆ. ಅಲ್ಪಸ್ವಲ್ಪ ಉಳಿತಾಯ ಮಾಡಿ ಮಕ್ಕಳ ವಿದ್ಯಾಭ್ಯಾಸ, ಮನೆ-ಮದುವೆ ಇತ್ಯಾದಿಗಳಿಗೆ ಬಳಸುತ್ತಾರೆ. ಒಟ್ಟಾರೆಯಾಗಿ ಇದ್ದುದರಲ್ಲಿಯೇ ನೆಮ್ಮದಿ ಜೀವನವನ್ನು ಸಾಗಿಸುತ್ತಿದ್ದಾರೆ.

ಇಂದು ಕ್ರೈಸ್ತ ಧರ್ಮಕ್ಕೆ ಈ ಜನಾಂಗ ಸೇರುವುದು ಕಡಿಮೆಯಾಗಿದೆ. ಇದಕ್ಕೆ ಹಲವಾರು ಕಾರಣಗಳಿರಬಹುದು. ಪ್ರಸ್ತುತ ಲೇಖನವು ಗದಗ-ಬೆಟಗೇರಿಗಳನ್ನೊಳಗೊಂಡಂತೆ ಗದಗ ಜಿಲ್ಲೆಯ ಕ್ಷೇತ್ರ ಕಾರ್ಯಗಳ ವ್ಯಾಪ್ತಿಯನ್ನು ಅನುಲಕ್ಷಿಸಿ ಸಿದ್ಧಪಡಿಸಲಾಗಿದೆ. ಇನ್ನು ಕೆಲವು ಮಾಹಿತಿಗಳು ಇದರಿಂದ ಹೊರಗುಳಿದಿರಬಹುದು. ಸಾಧ್ಯವಾದ ಮಟ್ಟಿಗೆ ಸಂದರ್ಶನಗಳ ಆಧಾರದಿಂದ ರಚಿಸಲ್ಪಟ್ಟಿದೆ. ಇದೇ ರೀತಿ ಕುರುಬ ಜನಾಂಗವು ಬೇರೆ ಬೇರೆ ಜಾತಿ, ಉಪಪಂಗಡ ಧರ್ಮಗಳೊಂದಿಗೆ ಹರಿದುಹಂಚಿ ಹೋಗಿರಬಹುದು. ಒಂದು ಗಮನಿಸಬೇಕಾದ ಮುಖ್ಯ ಅಂಶವೆಂದರೆ ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿದಷ್ಟು ಬೇರೆ ಧರ್ಮಕ್ಕೆ ಮತಾಂತರ ಹೊಂದಿರುವುದಿಲ್ಲ.

**ಸಹಾಯಕ ಗ್ರಂಥಗಳು / ಲೇಖನಗಳು**

೧. ಎಂ. ಎಚ್. ಆರ್. ಖಾಸ್ಮಿ ಇಂಗ್ಲಿಷ್ ಲೇಖನ.

೨. Nanjundayya. H. V. & I year L.K.A. 1935. The Mysore Tribes & Castes, IV University of Mysore. Mysore

೩. Thurston E. ()1909 1975. The Castes and Tribes of `Southern India, IV, 133, 155, Government Press, Madrass

೪. ಸಂದರ್ಶನಗಳು.

೫. ಕರಾವಳಿ ಕರ್ನಾಟಕದ ಕ್ರೈಸ್ತ ಇತಿಹಾಸ.

# ೧೭. ಸಾದ ಕುರುಬರು

ಬಸವಣ್ಣನು ಜಾತಿಯಿಂದ ಬ್ರಾಹ್ಮಣನಾಗಿದ್ದು, ವೀರಶೈವನಾಗಿರುವಂತೆ ಹರಳಯ್ಯನು ಜಾತಿಯಿಂದ ಮಾದಿಗನಾಗಿ ವೀರಶೈವನಾಗಿದ್ದಾನೆ.

[1] ಲಿಂಗಾಯಿತರಲ್ಲಿ ಹದಿನೆಂಟು ಜಾತಿಗಳೆಂದು ರೂಢಿಯಲ್ಲಿ ಹೇಳಲಾಗುತ್ತದೆ. ಶೈವ/ವೀರಶೈವ ಮೂಲದ ಕುರುಬರಲ್ಲಿಯೇ ಬಹುಸಂಖ್ಯಾತರು ಲಿಂಗಾಯಿತರಾದರೂ ಅದೇಕೋ ತಮ್ಮ ಕುರುಬ ಮೂಲವನ್ನು ಅವರು ಹೇಳಿಕೊಳ್ಳದಿರುವುದು ಆಶ್ಚರ್ಯವನ್ನುಂಟು ಮಾಡುತ್ತದೆ.
ಪ್ರಾಚೀನ ಕಾಲದಲ್ಲಿ ಹಾಲು, ಹೈನು, ಜೇನುತುಪ್ಪ ಮುಂತಾದವುಗಳನ್ನು ಹಾಕಲು ಬಿದಿರು ಬಂಬಿನಿಂದ ಮಾಡಿದ ಪಾತ್ರೆಯನ್ನು ಕುರುಬರು 'ಅಂಡೆ' ಅಂದರು. ಅಂಡೆಗಳನ್ನು ವ್ಯಾಪಕವಾಗಿ ಬಳಸುತ್ತಿದ್ದ ಕುರುಬರು 'ಅಂಡೆ ಕುರುಬರು' ಅನ್ನಿಸಿಕೊಂಡರು. ಅವರು ಲಿಂಗಧರಿಸತೊಡಗಿದಾಗ 'ಅಂಡೆ (ಹಂಡೆ) ಲಿಂಗಾಯಿತರು' ಆದರು. ಅದರಂತೆ ಜೇನು ಕುರುಬರು 'ನೊಣಬ (ನೊಳಂಬ) ಆದರು. ಕಿಟೆಲ್ ಅವರು 'ನೊಣಬ' ಎಂಬುದಕ್ಕೆ 'A caste division of Kurubas'(ಕುರುಬರ ಒಂದು ಜಾತಿ ಪ್ರಭೇದ) ಎಂದು ಅರ್ಥ ಕೊಟ್ಟಿದ್ದಾರೆ. ನೊಣಬರಲ್ಲಿ ಲಿಂಗಧಾರಿಗಳಾದವರು 'ನೊಣಬ ಲಿಂಗಾಯಿತ' ಆದರು. ನೊಳಂಬ ರಾಜ್ಯ ಸ್ಥಾಪಿಸಿದ ಇವರು ಕುರುಬರಾದ ಪಲ್ಲವರ ಸಂಬಂಧಿಗಳು. ಅದರಂತೆ 'ಸಾದ' ಎಂಬುದಕ್ಕೆ ಕಿಟೆಲ್ ಅವರು A class of Kurubas (ಕುರುಬರ ಒಂದು ವರ್ಗ) ಎಂದು ಅರ್ಥ ಕೊಟ್ಟಿದ್ದಾರೆ. ಇವರಲ್ಲಿ ಲಿಂಗಧಾರಿಗಳಾದವರು 'ಸಾಲ ಲಿಂಗಾಯಿತ' ಆದರು.

ಕುರುಬರು ಸೀದ-ಸಾದ (ಸೀದಾ ಸಾದಾ) ಜನ. ಈ ಗುಣವಾಚಕದ ಹಿನ್ನೆಲೆಯಲ್ಲಿಯೇ ಸಿದ್ಧ (ಸಿದ್ಧ) ಸಾದು (ಸಾಧು) ಎಂಬ ಪದಗಳು ನಿಷ್ಪತ್ತಿ ಆಗಿರುವ ಲಕ್ಷಣಗಳು ಕಂಡುಬರುತ್ತಿವೆ. ಕುರುಬರಲ್ಲಿಯೇ ಕೆಲವರು ಗಾಣಿಗರಾದರು. ಸಾದ ಗಾಣಿಗರು ಇತರ ಸಾದರಿಗಿಂತ ಮುಂಚೆ ಲಿಂಗಧಾರಿಗಳಾಗಿ, ಸಾದರಿಗೆ ಸೇರದ ಮಠಗಳೊಂದಿಗೆ ಸೇರಿ 'ಸಜ್ಜನ' (ಸಾದ ಜನ) ಆದರು. ಲಿಂಗಾಯಿತರಲ್ಲದ ಗಾಣಿಗರಿಗೆ ಈಗಲೂ ಮಾಂಸಾಹಾರ ವರ್ಜ್ಯವಲ್ಲ.

ಈಗ ಬೆಳಕಿಗೆ ಬಂದಿರುವಂತೆ, ಕುರುಬರಲ್ಲಿ ಸಾವಿರಕ್ಕೂ ಹೆಚ್ಚು ಬೆಡಗುಗಳಿವೆ (ಬೆಡಗು ಅಂದರೆ ಕುಲ, ಕೊಲ, ಬಳಿ, ಗೋತ್ರ). ಶೋಧ ಮಾಡಿದರೆ ಅವುಗಳ ಸಂಖ್ಯೆ ಇನ್ನೂ ಹೆಚ್ಚಾಗುವ ಸಾಧ್ಯತೆಯಿದೆ. ಕೆಲ ಮುಖ್ಯ ಬೆಡಗುಗಳು ಪ್ರತ್ಯೇಕ ಜಾತಿಗಳಾಗಿದ್ದು ಕಂಡುಬರುತ್ತದೆ. ಮೇಲೆ ಹೇಳಿದ ಅಂಡೆ, ನೊಣಬ, ಸಾದ, ಕುರುಬರಲ್ಲಿನ ಮುಖ್ಯ ಬೆಡಗುಗಳು. ಅವು ಪ್ರತ್ಯೇಕ ಜಾತಿಗಳಾಗಿ ಮಾರ್ಪಟ್ಟು, ನಂತರ ಇತರ ಕೆಲ ಬೆಡಗುಗಳ ಜನ ಸೇರಿಕೊಂಡು ಮತ್ತು ಕೆಲ ಬೆಡಗುಗಳಲ್ಲಿ ಶಾಖೆಗಳಾಗಿ ಬೆಳೆದದ್ದು ಕಂಡುಬರುತ್ತದೆ. ನಾನು ಸಂಗ್ರಹಿಸಿದ ಸದ್ಯದ ಸಾದಲಿಂಗಾಯಿತರಲ್ಲಿನ ಬೆಡಗುಗಳು ಇಂತಿವೆ.

**ಬೆಡಗು / ಬಳಿ-ಕುಲ/ಕೊಲ**

| | | | | | |
|---|---|---|---|---|---|
| ೧. | ಅಂಗಲೋರು | ೨. | ಅಜ್ಜಲೋರು | ೩. | ಅಚ್ಚೇರು |
| ೪. | ಅಂಜನೋರು | ೫. | ಅಡಿಕೆಲೇರು | ೬. | ಅಟ್ಟೆಲ್ಲೋರು |
| ೭. | ಅಡ್ಡೆಲ್ಲೋರು | ೮. | ಅಂಡೆಲ್ಲೋರು | ೯. | ಅತ್ತೆಲ್ಲೋರು |

| | | | | | |
|---|---|---|---|---|---|
| ೧೦. | ಅಧಿಕಾರದೋರು | ೧೧. | ಅನ್ನಲೋರು | ೧೨. | ಅನ್ನೆಲ್ಲೋರು |
| ೧೩. | ಅಂದಲ್ಲೋರು | ೧೪. | ಅಪ್ಪದೋರು | ೧೫. | ಅಬ್ಬಿಗೆಲ್ಲೋರು |
| ೧೬. | ಅರಗಳಬಾನಿನೋರು | ೧೭. | ಆನವೆಲ್ಲೋರು | ೧೮. | ಆನೆಲ್ಲೋರು |
| ೧೯. | ಆಲೆಲ್ಲೋರು | ೨೦. | ಇಟ್ಟಿಗೆ ಮಲ್ಲಿನೋರು | ೨೧. | ಉಗ್ರದೋರು |
| ೨೨. | ಉಗ್ರಾಣದೋರು | ೨೩. | ಉತ್ತಮದೋರು | ೨೪. | ಉಪ್ಪಿನೋರು |
| ೨೫. | ಉಳ್ಳಲ್ಲೇರು* | ೨೬. | ಉಕ್ಕಿನೋರು | ೨೭. | ಎಣ್ಣೇರು |
| ೨೮. | ಎತ್ತಿನೋರು | ೨೯. | ಎರಡುಕೇರೇರು | ೩೦. | ಎಳ್ಳಿನೋರು |
| ೩೧. | ಒನಕೆಲ್ಲೋರು* | ೩೨. | ಓಲೇರು | ೩೩. | ಕಗ್ಗಲ್ಲೋರು* |
| ೩೪. | ಕಂಗಳೋರು | ೩೫. | ಕಣ್ಣೆಲ್ಲೋರು | ೩೬. | ಕಡ್ಲೆಲ್ಲೋರು |
| ೩೭. | ಕಣಿದೋರು | ೩೮. | ಕಣ್ಣೇರು | ೩೯. | ಕನ್ನೇರು |
| ೪೦. | ಕಬ್ಬಾಲೋರು | ೪೧. | ಕಪಿನೇರು | ೪೨. | ಕಬ್ಬಿನ ಸತ್ತಿಗೆಯವರು |
| ೪೩. | ಕರವೆಲ್ಲೋರು | ೪೪. | ಕರಕೆಲ್ಲೋರು | ೪೫. | ಕರಿಕೇರು |
| ೪೬. | ಕರಿಯೋರು | ೪೭. | ಕರೆಯೋರು | ೪೮. | ಕರೇಲ್ಲೋರು |
| ೪೯. | ಕಲ್ಲೆಲ್ಲೋರು | ೫೦. | ಕಾಡಲ್ಲೋರು | ೫೧. | ಕಾರೆಲ್ಲೋರು |
| ೫೨. | ಕಾರೇರು | ೫೩. | ಕಿಟ್ಟದೋರು | ೫೪. | ಕಿತ್ತಲೇರು |
| ೫೫. | ಕಿರಿಗಣ್ಣೇರು | ೫೬. | ಕಿರಿಗಲ್ಲೋರು | ೫೭. | ಕುಡ್ಲೋರು |
| ೫೮. | ಕುಂಬಳದೋರು* | ೫೯. | ಕೆಂಚನೋರು* | ೬೦. | ಕೆಂದಾವರೇರು |
| ೬೧. | ಕೆನ್ಯಾಳಿನೋರು | ೬೨. | ಕೊಟ್ಟೂರೋರು | ೬೫. | ಕೊಟ್ಟೂರು* |
| ೬೬. | ಕೊಡಲೋರು | ೬೭. | ಕೊಡ್ಲೇರು* | ೬೮. | ಕೊಂಡೆಲ್ಲೋರು |
| ೬೯. | ಕೊಪ್ಪಿನೋರು* | ೭೦. | ಕೋಡಗಲ್ಲೋರು | ೭೧. | ಕೋನೆಲ್ಲೋರು |
| ೭೨. | ಕೋಲೆಲ್ಲೇರು | ೭೩. | ಗಂಟೆಲ್ಲೋರು* | ೭೪. | ಗದುಗಿನೋರು |
| ೭೫. | ಗರುಗಡ್ಲೇರು | ೭೬. | ಗಳ್ಳೇರು | ೭೭. | ಗಾಳೆಲ್ಲೋರು |
| ೭೮. | ಗಿಲಿಕೆಲ್ಲೋರು | ೭೯. | ಗುಂಚಲ್ಲೋರು | ೮೦. | ಗೆಜ್ಜೆಲ್ಲೋರು |
| ೮೧. | ಗುಡ್ಡಲೋರು | ೮೨. | ಗೋಣಿಲ್ಲೋರು | ೮೩. | ಗೊಂಡೆಲ್ಲೇರು |
| ೮೪. | ಗೊಬ್ಬರದೋರು | ೮೫. | ಗೊಲ್ಲಾಳೋರು | ೮೬. | ಗೋದ್ನೂರು |
| ೮೭. | ಗೋವಿನೋರು | ೮೮. | ಗೌಡ್ಲೋರು* | ೮೯. | ಚಕ್ರಕೋಣದೋರು* |
| ೯೦. | ಚನ್ನಗೊಂಡನೋರು | ೯೧. | ಚನ್ನಲ್ಲೋರು | ೯೨. | ಚಂದದ್ದೋರು |
| ೯೩. | ಚಂದಾಳದೋರು | ೯೪. | ಚಂದ್ರನೋರು* | ೯೫. | ಚನ್ನಿಗದೋರು |
| ೯೬. | ಚಲ್ಲಲ್ಲೋರು* | ೯೭. | ಚಳ್ಳನೋರು | ೯೮. | ಚಿತ್ತಾರದೋರು |
| ೯೯. | ಚಿನ್ನದಕತ್ತೇರು | ೧೦೦. | ಚಿನ್ನಮನೇರು | ೧೦೧. | ಚಿನ್ನಹಬ್ಬಿಗೇರು |
| ೧೦೨. | ಚಿಬ್ರೇರು | ೧೦೩. | ಚಿಮ್ಮಲೋರು | ೧೦೪. | ಚಿಮ್ಮೇರು |
| ೧೦೫. | ಚುಂಚಲ್ಲೋರು | ೧೦೬. | ಚುಮ್ಮರಿಯೋರು | ೧೦೭. | ಚೆಳ್ಳೇರು* |
| ೧೦೮. | ಚೊಕ್ಕನೋರು | ೧೦೯. | ಜಕ್ಕೆಲ್ಲೋರು | ೧೧೦. | ಜಂಜಲೋರು |

| | | | | | |
|---|---|---|---|---|---|
| ೧೧೧. | ಜಂದೆದ್ದೇರು | ೧೧೨. | ಜರಮಲ್ಲೇರು | ೧೧೩. | ಜಲದಿ |
| ೧೧೪. | ಜಾನುಕಲ್ಲೋರು | ೧೧೫. | ಜಾನೆಲ್ಲೋರು | ೧೧೬. | ಜಾನ್ಕದೋರು |
| ೧೧೭. | ಜೈನ್ಲೋರು | ೧೧೮. | ಡಬ್ಬದೋರು | ೧೧೯. | ಡಂಬಳದೋರು |
| ೧೨೦. | ತಂಡಸ್ಲೋರು | ೧೨೧. | ತಪ್ಪಲೋರು | ೧೨೨. | ತರಲ್ಲೋರು |
| ೧೨೩. | ತರಳಬಾಳೋರು | ೧೨೪. | ತಾವರೇರು | ೧೨೫. | ತುಪ್ಪದೋರು* |
| ೧೨೬. | ತೆಪ್ಪಲೋರು | ೧೨೭. | ತುಗ್ಗಲ್ಲೋರು | ೧೨೮. | ತುಂಬೆಲ್ಲೋರು |
| ೧೨೯. | ತೆನೆಯೋರು | ೧೩೦. | ತೊಲಗದೋರು | ೧೩೧. | ಥುತ್ತಾಳೋರು |
| ೧೩೨. | ದಂಡೆಲ್ಲೋರು* | ೧೩೩. | ದಮ್ಮದೋರು | ೧೩೪. | ದಾಳೇರು |
| ೧೩೫. | ದೇವನೂರು | ೧೩೬. | ದೇವಲ್ಲೋರು | ೧೩೭. | ದೇವೇಂದ್ರಲೋರು |
| ೧೩೮. | ದೊತೇರು | ೧೩೯. | ದೋಸೇರು | ೧೪೦. | ದ್ಯಾವಲೋರು |
| ೧೪೧. | ನಗನೋರು | ೧೪೨. | ನದ್ಲೇರು | ೧೪೩. | ನಂದನೋರು |
| ೧೪೪. | ನಂದ್ಯಲ್ಲೋರು | ೧೪೫. | ನರಿಗಲ್ಲೋರು | ೧೪೬. | ನಲ್ಲೆಲ್ಲೋರು |
| ೧೪೭. | ನಸ್ಲೇರು* | ೧೪೮. | ನವಣೆಲ್ಲೋರು | ೧೪೯. | ನಳಿಲ್ಲೋರು |
| ೧೫೦. | ನಾಗಮನೋರು | ೧೫೧. | ನಾಗಲೋರು | ೧೫೨. | ನಾಗೆಲ್ಲೋರು |
| ೧೫೩. | ನಾರೆಲ್ಲೋರು | ೧೫೪. | ನಾರೇರು | ೧೫೫. | ನಿಜದಂಲೋರು |
| ೧೫೬. | ನಿಡಗಲ್ಲೋರು | ೧೫೭. | ನುರಿಗಲ್ಲೇರು | ೧೫೮. | ನೆಟ್ಟಿಲ್ಲೋರು |
| ೧೫೯. | ನೆಲ್ಲೇರು* | ೧೬೦. | ನೈನೋರು | ೧೬೧. | ನೊರೆಹಾಲೋರು |
| ೧೬೨. | ಪಕ್ಕೆಲ್ಲೋರು | ೧೬೩. | ಪಂಗಾಳಿ ಬೈರಿ | ೧೬೪. | ಪ್ರಭೆಲೋರು |
| ೧೬೫. | ಪಾಂಡದೋರು* | ೧೬೬. | ಪಾಳಶೆಟ್ರು | ೧೬೭. | ಪಿಳ್ಳೆಲ್ಲೇರು |
| ೧೬೮. | ಬಂಡೆಲ್ಲೋರು | ೧೬೯. | ಬಡ್ಡಲ್ಲೇರು | ೧೭೦. | ಬಂಡೇರು |
| ೧೭೧. | ಬನ್ನೆಲ್ಲೋರು | ೧೭೨. | ಬಂದೆಲ್ಲೋರು | ೧೭೩. | ಬರಿಗೇರೇರು |
| ೧೭೪. | ಬಸಿಯಲ್ಲೋರು* | ೧೭೫. | ಬಳಗದೋರು | ೧೭೬. | ಬಳಿಆಲದಲೋರು |
| ೧೭೭. | ಬಳ್ದೇರು | ೧೭೮. | ಬಾಳತಲೇರು | ೧೭೯. | ಬಾಳಪ್ಪನೋರು* |
| ೧೮೦. | ಬಾಳೇರು* | ೧೮೧. | ಬಾಳೆಲ್ಲೋರು | ೧೮೨. | ಬಿಲ್ಲಾಳೋರು |
| ೧೮೩. | ಬಿಲ್ಲೋರು* | ೧೮೪. | ಬಿಳಿಯಾಲದೋರು | ೧೮೫. | ಬಿಳಿಎಲಡಶ್ಯಾವಂತಲೋರು |
| ೧೮೬. | ಬುಗುಡೇರು | ೧೮೭. | ಬುಡ್ಡೆಲ್ಲೋರು | ೧೮೮. | ಬುಳ್ಳದೋರು |
| ೧೮೯. | ಬೂದಲೋರು | ೧೯೦. | ಬೆಟ್ಟದೋರು | ೧೯೧. | ಬೆಣ್ಣೆಲ್ಲೋರು* |
| ೧೯೨. | ಬೆನಕಲ್ಲೋರು* | ೧೯೩. | ಬೆನಕದೋರು* | ೧೯೪. | ಬೆಲ್ಲದೋರು* |
| ೧೯೫. | ಬೆಳ್ಳೆಲ್ಲೋರು* | ೧೯೬. | ಬೇಲಿಮೇಲ್ಲೋರು | ೧೯೭. | ಬೈಚೆಲ್ಲೋರು |
| ೧೯೮. | ಬೈಲುಗದ್ದೇರು | ೧೯೯. | ಬೋಚೇರು* | ೨೦೦. | ಭಕ್ತರು |
| ೨೦೧. | ಭಗತರೋರು | ೨೦೨. | ಭಂಡಾರದೋರು | ೨೦೩. | ಭೋಮೆಲ್ಲೋರು |
| ೨೦೪. | ಭೋಚೇರು | ೨೦೫. | ಮಗಿನೋರು | ೨೦೬. | ಮಣೆಲೇರು / ಮನ್ನೇಲೇರು |
| ೨೦೭. | ಮಣ್ಣಲ್ಲೇರು ಅಂಗಲೋರು | ೨೦೮. | ಮತ್ತೆಲ್ಲೇರು | ೨೦೯. | ಮದೆಲ್ಲೋರು |

| | | | | | |
|---|---|---|---|---|---|
| ೨೧೦. | ಮರಗದೋರು | ೨೧೧. | ಮರಿಯಾನೇರು | ೨೧೨. | ಮರಿಲೋರು |
| ೨೧೩. | ಮರುಹುಲ್ಲೋರು | ೨೧೪. | ಮರೆಲ್ಲೋರು | ೨೧೫. | ಮಲ್ಲಿಗೇರು |
| ೨೧೬. | ಮಲ್ಲನೋರು* | ೨೧೭. | ಮಲ್ಲೇಲ್ಲೋರು* | ೨೧೮. | ಮಹಂತನೋರು |
| ೨೧೯. | ಮಾಕಲೋರು | ೨೨೦. | ಮಾಗಳೋರು | ೨೨೧. | ಮಾಡದೋರು |
| ೨೨೨. | ಮಾಣಿಕದೋರು* | ೨೨೩. | ಮಾನ್ಯದೋರು* | ೨೨೪. | ಮಾಮಲೇರು |
| ೨೨೫. | ಮಾಲೇರು* | ೨೨೬. | ಮಾಳಿಗೇರು | ೨೨೭. | ಮಾಮಲೋರು* |
| ೨೨೮. | ಮ್ಯಾಕಲೋರು | ೨೨೯. | ಮ್ಯಾಳಶೆಟ್ರು | ೨೩೦. | ಮಿಳ್ಳೆಲ್ಲೋರು |
| ೨೩೧. | ಮುಂಡಿಗೇರು | ೨೩೨. | ಮುತ್ತಿನಪೆಂಡೇರು | ೨೩೩. | ಮುತ್ತಿನಶ್ಯಾವಂತಲೋರು |
| ೨೩೪. | ಮುತ್ತಿನ ಸುತ್ತಿಗೆ ಶಾವಂತಲೋರು | ೨೩೫. | ಮುತ್ತಿನೋರು* | ೨೩೬. | ಮುದೇಲೋರು |
| ೨೩೭. | ಮುಪ್ಪನೋರು | ೨೩೮. | ಮುರಿಯುಲ್ಲೋರು | ೨೩೯. | ಮುಳುನೋರು |
| ೨೪೦. | ಮೇನೆಲ್ಲೋರು | ೨೪೧. | ಮೈಲೆಲ್ಲೋರು | ೨೪೨. | ಮೊನ್ನೆಲ್ಲೋರು |
| ೨೪೩. | ಯಗಟಲೋರು | ೨೪೪. | ಯನುಮುಲೋರು | ೨೪೫. | ಯಳ್ಳೇಲ್ಲೋರು* |
| ೨೪೬. | ಯಳೇನೋರು | ೨೪೭. | ರತ್ನದೋರು | ೨೪೮. | ರಾಜಂದೋರು ರಾಜನಿ ದೋರು |
| ೨೪೯. | ರಾಸೇರು | ೨೫೦. | ರೊಟ್ಲೋರು | ೨೫೧. | ಲಲ್ಲೆಲ್ಲೋರು |
| ೨೫೨. | ಲೆತ್ತದೋರು | ೨೫೩. | ಲೈಲೋರು | ೨೫೪. | ವಜ್ರೇರು |
| ೨೫೫. | ಶಲ್ಲೆಲ್ಲೋರು | ೨೫೬. | ಶಾವಂತಿಗೇರು | ೨೫೭. | ಶ್ಯಾವಂಲ್ಲೋರು |
| ೨೫೮. | ಶ್ಯಾವಲೋರು | ೨೫೯. | ಶಿಲಿವೆಲ್ಲೋರು | ೨೬೦. | ಶೀಲವಂತರು |
| ೨೬೧. | ಶೃಂಗಾರದೋರು | ೨೬೨. | ಶೆಟ್ಟೆಲ್ಲೋರು* | ೨೬೩ | ಸಕ್ಕರೇರು* |
| ೨೬೪. | ಸಣ್ಣಕ್ಕಿ ಅವಳಗೊಂಡರು | ೨೬೫. | ಸಣ್ಣಕ್ಕೇರು* | ೨೬೬. | ಸಂತೆಲ್ಲೋರು |
| ೨೬೭. | ಸಪ್ಪಲೋರು | ೨೬೮. | ಸಂಪಿಗೇರು | ೨೬೯. | ಸಾಲೆಲ್ಲೋರು ಸಾಲೇರು* |
| ೨೭೦. | ಸಾಸ್ವೆಲ್ಲೋರು | ೨೭೧. | ಸಿದ್ದಲ್ಲೇರು ಸಿದ್ದನೋರು | ೨೭೨. | ಸಿರಿವಂತರು |
| ೨೭೩. | ಸಿಲ್ಲೆದೋರು | ೨೭೪. | ಸುಂಚಲೋರು | ೨೭೫. | ಸುತ್ತದೋರು |
| ೨೭೬. | ಸುರಿಗೇರು* | ೨೭೭. | ಸುಲವೆಲ್ಲೋರು | ೨೭೮. | ಸೂಜಿಗಲ್ಲೋರು |
| ೨೭೯. | ಸೋಗೆಲ್ಲೋರು | ೨೮೦. | ಸೋವಿನೋರು | ೨೮೧. | ಹಗಡಲೋರು |
| ೨೮೨. | ಹಂಜಿಲ್ಲೋರು | ೨೮೩. | ಹಟ್ಟೆಲ್ಲೇರು ಹಟ್ಟೇರು* | ೨೮೪. | ಹನಲ್ಲೋರು |
| ೨೮೫. | ಹನಿನೋರು | ೨೮೯. | ಹರಿಕಲ್ಲೋರು | ೨೯೦. | ಹರಿಳೇರು |
| ೨೯೧. | ಹಲ್ಲೆಲ್ಲೋರು | ೨೯೨. | ಹೊಂಡದೋರು ಹೊಂಡಲೋರು | ೨೯೩. | ಹವಳದೋರು |
| ೨೯೪. | ಹವ್ವಿನೋರು | ೨೯೫. | ಹಸಿಮಲ್ಲೋರು | ೨೯೬. | ಹಸಿವೆಲ್ಲೋರು |
| ೨೯೭. | ಹಳದೋರು | ೨೯೮. | ಹಳ್ಳೆಲ್ಲೋರು | ೨೯೯. | ಹಾದೆಲ್ಲೋರು |
| ೩೦೦. | ಹಾಲುಕೊಡದೋರು* | ೩೦೧. | ಹಾವಿನೋರು* | ೩೦೨. | ಹಾಸ್ತೇರು |
| ೩೦೩. | ಹುಕ್ಕಲ್ಲೋರು | ೩೦೪. | ಹುಂಡೆಲ್ಲೋರು | ೩೦೫. | ಹುಲಿಕಂತೇರು |

೨೦೬. ಹುಲಿಯೋರು
೨೦೭. ಹುಳ್ಳಲ್ಲೇರು
೨೦೮. ಹುಳ್ಳೇರು
೨೦೯. ಹೆಗ್ಗಳದೋರು
೨೧೦. ಹೆಚ್ಚಳದೋರು
೨೧೧. ಹೆಬ್ಬಂಡೇರು
೨೧೨. ಹೈಮನ್ನೇರು
೨೧೩. ಹತ್ತೊಂಟ್ಲೋರು
೨೧೪. ಹೊನ್ನ ಅರಿವಾಣದೋರು
೨೧೫. ಹೊನ್ನಗ್ಗಳದೋರು
೨೧೬. ಹೊನ್ನಕಣ್ಣನೋರು
೨೧೭. ಹೊನ್ನಕೊಂತದೋರು
೨೧೮. ಹೊನ್ನ ಕೊಳಗದೋರು
೨೧೯. ಹೊನ್ನಜಾನಕೇರು
೨೨೦. ಹೊನ್ಗುಂಡೋರು
೨೨೧. ಹೊನ್ನ ಬಟ್ಲೋರು
೨೨೨. ಹೊನ್ನ ತೆನೆಯೋರು
೨೨೩. ಹೊನ್ನಲಗದೋರು
೨೨೪. ಹೊನ್ನಬಂಡೇರು
೨೨೫. ಹೊನ್ನ ಬಾಗಳೇರು
೨೨೬. ಹೊನ್ನಮುಂಡೇರು
೨೨೭. ಹೊನ್ನಮಣಿಯೋರು
೨೨೮. ಹೊನ್ನಮುತ್ತಿನೋರು
೨೨೯. ಹೊನ್ನಲ್ಲೇರು
೨೩೦. ಹೊನ್ನಸಾಲಿನೋರು
೨೩೧. ಹೊನ್ನ ಹಬ್ಬಿಗೆಲ್ಲೋರು*
೨೩೨. ಹೊನ್ನ ಶಿಲೆಕೆಂಚನೋರು
೨೩೩. ಹೊನ್ನು ಉಂಡೆಲ್ಲೋರು
೨೩೪. ಹೊನ್ನು ಬಲ್ಲೋರು*
೨೩೫. ಹೊನ್ನುಂಬಳದೋರು
೨೩೬. ಹೊನ್ನೆಕೇರೇರು
೨೩೭. ಹೊಯ್ಲೋರು
೨೩೮. ಹೊನ್ನೆಮಣಿಯೋರು
೨೩೯. ಹೊಳೆಲ್ಲೋರು
೨೪೦. ಹೋದೆಲ್ಲೋರು.

ಇವುಗಳಲ್ಲಿ ನಕ್ಷತ್ರ (*) ಗುರುತಿನ ಬೆಡಗುಗಳು ಕುರುಬರಲ್ಲಿಯೂ ಇವೆ. ಅವುಗಳಲ್ಲಿ 'ಕಗ್ಗಲ್ಲೋರು' ಬೆಡಗು ವಿಶೇಷವಾದುದು. ಅದರ ಬಗ್ಗೆ ಮುಂದೆ ಪ್ರಸ್ತಾಪಿಸಲಾಗುವುದು. ಇತರ ಬೆಡಗುಗಳು ಮತ್ತು ಅವುಗಳ ಒಳಸಂಬಂಧದ ಬಗ್ಗೆ ಅಧ್ಯಯನ ನಡೆಯಬೇಕು. ಜಾತಿಗಳು ಉದ್ಯೋಗ ಮೂಲವನ್ನು ಸೂಚಿಸಿದರೆ, ಬೆಡಗುಗಳು ರಕ್ತಸಂಬಂಧವನ್ನು ಸೂಚಿಸುತ್ತವೆ. ಉದಾಹರಣೆಗೆ ಒಂದು ಬೆಡಗು ಕುರುಬರು, ಪಂಚಮಶಾಲಿಗಳು, ಸಾದರು, ಮಾದಿಗರು, ಡಕ್ಕಲರು ಮುಂತಾದ ಜಾತಿಗಳಲ್ಲಿದ್ದರೆ ಆ ಎಲ್ಲ ಜಾತಿಗಳಲ್ಲಿನ ಆ ಒಂದು ಬೆಡಗಿನವರು ಪರಸ್ಪರ ರಕ್ತ ಸಂಬಂಧಿಗಳೆಂದೇ ಅರ್ಥ. (ಈ ಕಾರಣಕ್ಕಾಗಿಯೇ ಒಂದೇ ಬೆಡಗಿನವರಲ್ಲಿ ಮದುವೆಗಳು ಏರ್ಪಡುವುದಿಲ್ಲ) ಆದ್ದರಿಂದ ಎಲ್ಲಾ ಜಾತಿಗಳ ಒಳಸಂಬಂಧವನ್ನು ತಿಳಿಯಬೇಕಾದರೆ, ಪ್ರತಿಯೊಂದು ಜಾತಿಯ ಬೆಡಗುಗಳನ್ನು ಹುಡುಕಿ ತೆಗೆಯಬೇಕು. ಸಮಾಜ ಶಾಸ್ತ್ರಜ್ಞರು, ಜಾನಪದ ವಿದ್ವಾಂಸರು, ವಂಶವಾಹಿ ತಜ್ಞರು ಈ ಬಗ್ಗೆ ಸೂಕ್ತ ಮತ್ತು ವಿಸ್ತೃತ ಅಂತರ್ ಶಿಸ್ತೀಯ ಅಧ್ಯಯನ ನಡೆಸಬೇಕು.

ಕುರುಬರಲ್ಲಿ ಬಹುಸಂಖ್ಯಾತರು ವೀರಶೈವರಾದರೂ ಕೆಲವರು ವೈಷ್ಣವ ಪಂಥೀಯರು ಆಗಿದ್ದಾರೆ. ಅವರು ದಾಸಕುರುಬರು. ಕನಕದಾಸರು ವೈಷ್ಣವ ಪಂಥೀಯರಾದ ಹರಿದಾಸರು. ಗೌರಿಬಿದನೂರು ಮತ್ತು ಸುತ್ತಲಿನ ಪ್ರದೇಶದ ಸಾದರು ಸಹ ವೈಷ್ಣವ ಪಂಥೀಯರಾಗಿದ್ದಾರೆ.

ಸಾದರಲ್ಲಿ ಬಹುಸಂಖ್ಯಾತರು ಲಿಂಗಧಾರಿಗಳಾಗಿ ಕುರುಬರಿಂದ ಪ್ರತ್ಯೇಕಗೊಂಡ ಹಿನ್ನೆಲೆಯಲ್ಲಿ ಸಾದಲಿಂಗಾಯಿತರ ಬಗೆಗಿನ ಚರ್ಚೆ ಈ ಪ್ರಬಂಧದ ಅನಿವಾರ್ಯ ವಿಷಯವಾಗುತ್ತದೆ. ಅದಕ್ಕೆ ಪೂರ್ವಭಾವಿಯಾಗಿ ಶಿವ-ಶಿವಾಲಯ, ಮಠ-ಪೀಠಗಳ ಬಗ್ಗೆ ಒಂದಿಷ್ಟು ತಿಳಿಯಬೇಕು.

ಶಿವನ ಚರಿತ್ರೆ, ಶಿವಾಲಯಗಳ ಚರಿತ್ರೆ ತಿಳಿಯಬೇಕಾದರೆ 'ಶಿವಾರ'ಗಳಿಗೆ ಮರಳಬೇಕು. 'ಅರ' ಎಂದರೆ ಕಿಟೆಲ್ ಅವರು 'Dwelling place' (ವಾಸಸ್ಥಾನ) ಎಂದು ಅರ್ಥ ಕೊಟ್ಟಿದ್ದಾರೆ. 'ಶಿವ', 'ಆರ' ಸೇರಿ 'ಶಿವಾರ'. ಅದು ಆಡುನುಡಿಯಲ್ಲಿ 'ಶಿಬಾರ' ಆಗಿದೆ. ಅಂದರೆ ಶಿಬಾರಗಳು ಶಿವಸ್ಥಾನಗಳು. ಅವು ಬ್ರಹ್ಮನಿಂದ ಶಿವನವರೆಗಿನ ಕತೆ ಹೇಳುತ್ತವೆ. ಕುರುಬರ ಮೂಲ ದೈವ ನಿರಾಕಾರ 'ಪರಮ'. ಅವನೆ ಬ್ರಹ್ಮ (ಪರಮ > ಬರಮ > ಭರಮ > ಬ್ರಹ್ಮ). ಮೊದಲ ಆಕಾರದಲ್ಲಿ ಅವನೊಂದು ಗುಂಡುಕಲ್ಲು. ಆದ್ದರಿಂದ ಅವನು 'ಗುಂಡಬ್ರಹ್ಮ'. ಸೃಷ್ಟಿ ಕ್ರಿಯೆಗೆ ಅವನಿಗೊಬ್ಬಳು ಹೆಂಡತಿ ಬೇಕು. ಆದ್ದರಿಂದ ಪಕ್ಕದಲ್ಲಿ ಇನ್ನೊಂದು ಗುಂಡು. ಶಿವಾರಗಳಲ್ಲಿ ಸಾಮಾನ್ಯವಾಗಿ ಜೋಡುಗುಂಡು ಇದ್ದೇ ಇರುತ್ತವೆ. ಆರಾಧನೆಯಲ್ಲಿ ಸಂತೋಷ ಕಂಡ ಕುರುಬರು ಅದನ್ನು ತಮ್ಮ "ಲಿಂಗಾನಂದ"ಕ್ಕೆ ಸಮವೆಂದು ಪರಿಭಾವಿಸಿದರು. ಆದ್ದರಿಂದ ಗುಂಡುಕಲ್ಲು ಲಿಂಗವಾಯಿತು. ಲಿಂಗಕ್ಕೆ ಯೋನಿಯ ಸಂಗ ಅನಿವಾರ್ಯ, ಆದ್ದರಿಂದ

ಪಾಣಿಪೀಠಸಹಿತ ಲಿಂತ ಮೂಡಿ ಬಂತು. ಇಂಥ ಲಿಂಗು ಕೂಡ ಶಿಬಾರಗಳಲ್ಲಿ ಉಂಟು. ಇವುಗಳ ಆರಾಧನೆಯ ಸಂತೋಷದಲ್ಲಿ 'ಶಿವಾ' ಅಂದರು. ಅದು 'ಶಿವಲಿಂಗ'ವಾಯಿತು.

ಶಿವ ಬೀರ (ವೀರ). ತನ್ನ ವೀರತನ (ವೀರಭದ್ರ) ಬಳಸಿ (ದಕ್ಷ) ಬ್ರಹ್ಮನ ಯಜ್ಞ ಧ್ವಂಸಗೊಳಿಸಿದ. ಅವನ ವೀರತೆಯ ಸಂಕೇತವಾಗಿ ಶಿಬಾರಗಳ ಶಿಲ್ಪದಲ್ಲಿ ತ್ರಿಶೂಲ ಕಾಣುತ್ತೇವೆ. ಹಳೆಯ ಬೀರದೇವರ ಗುಡಿಗಳ ಆವರಣದಲ್ಲಿ ಇಲ್ಲವೆ ಮೂಲೆಯಲ್ಲಿ ಅನಾಥವಾದ ಭರಮ (ಬ್ರಹ್ಮ)ನ ಗೂಡುಗಳನ್ನು ಈಗಲು ಕಾಣಬಹುದು. ಬೀರಪ್ಪನ ಪರಿಷ್ಕೃತ ರೂಪ ವೀರಭದ್ರ.

ಹೀಗೆ 'ನಿರಾಕಾರ' ಪರಮ 'ಆಕಾರ' ಶಿವನಾದ. ಶಿಬಾರದ 'ಬಯಲ' ಶಿವ ಶಿವಾಲಯದಲ್ಲಿ ಬಂಧಿಯಾಗಿ 'ನಿರ್ಬಯಲ' ಶಿವನಾದ. ಈ ಹಿನ್ನೆಲೆಯಲ್ಲಿ ಭೌತ ಪಾರಮಾತ್ಮಿಕ ಕೊಂಡಿಗಳ ನಡುವೆ ಆಕಾರ-ನಿರಾಕಾರ, ಬಯಲ-ನಿರ್ಬಯಲ ಇತ್ಯಾದಿ ತತ್ತ್ವ ಚಿಂತನೆ ಹುಟ್ಟಿಕೊಂಡಿತು. ಶಿಬಾರಗಳು ಕುರುಬರ ಧಾರ್ಮಿಕ ಕ್ಷೇತ್ರಗಳೆಂಬುದು ಎಲ್ಲರಿಗೂ ತಿಳಿದ ವಿಷಯ. ಹಾಗಾದರೆ ಮೊದಲು 'ಶಿವ' ಅಂದವರು ಯಾರು? ಮೂಲದಲ್ಲಿ ಶೈವರು ಯಾರು? ಬೀರ (ವೀರ) ಯಾರು? ವೀರಶೈವ ಯಾರಿಗೆ ಸಂಬಂಧಿಸಿದ್ದು? ಇಂತಹ ಮೂಲ ಅಂಶಗಳನ್ನು ಪರಿಗಣಿಸದೆ ಹೋದರೆ, ನಮ್ಮ ಸಂಶೋಧನೆ ಹೋಗಿ ದಿಕ್ಕುತಪ್ಪಿ ಎಲ್ಲಿಯೋ ನಿಂತುಬಿಡುತ್ತದೆ. ಕುರುಬ ಮೂಲದ ಸಾದರು ಶಿವ ಸಂಕೇತವನ್ನು ಸಾರ್ಥಕವಾಗಿಯೇ ಬಳಸಿಕೊಳ್ಳುತ್ತಿದ್ದಾರೆ. ಆದರೆ ಅವರು ಶಿಬಾರಗಳ ಕಡೆಗೆ ಒಂದಿಷ್ಟು ಮುಖ ಮಾಡಬೇಕು. ಅದು ಪೂರ್ವಾಪರ ತಿಳಿಯಲು ಸಹಕಾರಿ ಆಗುತ್ತದೆ.

ಕುರುಬರು ಮೊದಮೊದಲು ಎತ್ತರದ ಮಲ್ಲೈ (ಬೆಟ್ಟ, ದಿನ್ನೆ) ಪ್ರದೇಶದಲ್ಲಿ ಶಿಬಾರಗಳನ್ನು ಸ್ಥಾಪಿಸುತ್ತಿದ್ದರು. ಅಲ್ಲಿನ ಶಿಬಾರದ ಲಿಂಗ 'ಮೈಲಾರಲಿಂಗ'.

ವೀರಶೈವ ಪೀಠಗಳಿಗೆ ಮೂಲ ಕಾರಣಕರ್ತ ರೇವಣಸಿದ್ಧ. ಇವನು ಹಾಲುಮತದ ಮುದ್ದುಗೊಂಡ ಮತ್ತು ಮುದ್ದವ್ವೆ ಎಂಬ ದಂಪತಿಗಳ ಏಳನೆಯ ಮಗ 'ಉಂಡಾಡು ಪದ್ಮಗೊಂಡ' / ಪದ್ಮಗೊಂಡನ ಮೊದಲನೆ ಹೆಂಡತಿ ಜಿಂಕಾದೇವಿಯಲ್ಲಿ ಹುಟ್ಟಿದ ನಾಲ್ಕನೆಯ ಮಗ ಶಾಂತಿಮಯ ಮುತ್ತಯ್ಯನ ಮಗ. ತಾಯಿ ಮಹಾದೇವಿ. ಕ್ರಿ.ಶ. ೧೧೮೭ ರ ಶಿರವಾಳ ಶಾಸನದಲ್ಲಿ ಇವನನ್ನು ಶಾಂತಿಮಯ್ಯಂಗಳ ಪುತ್ರ ಎಂದು ತಿಳಿಸಲಾಗಿದೆ. ಕಕ್ಕೇರಿ ಶಾಸನ (ಕ್ರಿ.ಶ. ೧೧೨೭)ದಲ್ಲಿ ರೇವಣಸಿದ್ದನ ಶಿಷ್ಯ ಬ್ರಹ್ಮರಾಶಿ ಪಂಡಿತನಿಗೆ ದನ ನೀಡಿದ ವಿವರವಿದೆ. ಅಂದರೆ ಈ ಶಾಸನದ ಕಾಲಕ್ಕೆ ಶಿಷ್ಯನನ್ನು ಪಡೆಯುವ ಹಂತ ತಲುಪಿದ್ದನು.[2] ಕ್ರಿ.ಶ. ೧೧೭೮ರ ಶಿರವಾಳ ಶಾಸನದಲ್ಲಿ ಶಾಂತೀಶ್ವರ (ಸಿದ್ಧ ಸಾತೇಶ್ವರ) ದೇಗುಲಕ್ಕೆ ರೇವಣಸಿದ್ದನ ಪಾದ ತೊಳೆದು ದಾನ ನೀಡಿರುವುದನ್ನು ಹೇಳಲಾಗಿದೆ. ಕ್ರಿ.ಶ. ೧೨೦೮ರ ಹೋತಗಲ್ಲಿನ ಶಾಸನ ರೇವಣೇಶ್ವರ ದೇವರಿಗಾಗಿ ಆಚಾರ್ಯ ನಾಗರಾಸಿ ಪಂಡಿತನ ಕಾಲನ್ನು ತೊಳೆದು ದಾನ ನೀಡಿರುವುದನ್ನು ಹೇಳುತ್ತದೆ.[3] ಅಂದರೆ ಆ ಹೊತ್ತಿಗಾಗಲೇ ರೇವಣಸಿದ್ಧ ತೀರಿಕೊಂಡು ದೇವರಾಗಿದ್ದ. ರೇವಣಸಿದ್ಧ ೧೦೭ ವರ್ಷ ಬದುಕಿದ್ದನೆಂದು ಕುರುಬ ಜನಾಂಗದಲ್ಲಿ ಪ್ರತೀತಿ ಇದೆ. ಇದರಿಂದ ರೇವಣಸಿದ್ಧ ೧೧ನೇ ಶತಕದ ಕೊನೆಯ ಭಾಗದಿಂದ ೧೨ನೇ ಶತಮಾನದ ಕೊನೆಯವರೆಗೆ ಜೀವಿಸಿದ್ದ ಎಂಬುದು  ವೇದ್ಯವಾಗುತ್ತದೆ.

ರೇವಣಸಿದ್ದನ ಕಾರ್ಯಕ್ಷೇತ್ರ, ವಿಸ್ತೃತವಾದುದು. ಗುಜರಾತದ ಗಿರಿನಾರ, ಮಧ್ಯಪ್ರದೇಶದ ಉಜ್ಜಯಿನಿ, ಜಬಲ್ಪೂರ, ಅಂದಿನ ಕುಂತಲ (ಕರ್ನಾಟಕ) ಓರಿಸಾ, ಮಹಾರಾಷ್ಟ್ರದ ಬಹುಭಾಗಗಳಲ್ಲಿ ಅವನು ಕ್ರಿಯಾಶೀಲನಾಗಿದ್ದ. ಇಂಥ ವ್ಯಾಪಕ ಸಂಚಾರಕ್ಕೆ ಒಂದು ಕಾರಣ ಇರಬೇಕು.

ನನಗೆ ಹೊಳೆದಂತೆ ಅದು 'ಆರ್ಯವರ್ತ' ವಿಸ್ತಾರಗೊಳ್ಳುತ್ತಿದ್ದ ಕಾಲ. ದಾಳಿಕೋರರ ಹಾವಳಿ ಆ ಪ್ರದೇಶದಲ್ಲಿ ಹೆಚ್ಚಾಗಿತ್ತು. ಕುರುಬರು ನಿಂತ ನೆಲೆಯಲ್ಲಿ ಸುರಕ್ಷಿತ, ನೆಮ್ಮದಿಯ ಜೀವನ ನಡೆಸುವುದು ಕಷ್ಟವೆನಿಸಿತು. ದಕ್ಷಿಣದ ಕಡೆಗೆ ವಲಸೆ ಅನಿವಾರ್ಯವಾಯಿತು. ವಲಸೆ ಹೊರಟಾಗಲೂ ಕೆಲವು ಸ್ಥಳೀಯ ಅಡ್ಡಿ-ಆತಂಕಗಳನ್ನು ಎದುರಿಸಬೇಕಾಯಿತು. ವಲಸಿಗರ ನೆಲೆಗಳಿಗೆ ಹೋಗಿ ಅವರಿಗೆ ಮಾನಸಿಕ ಸ್ಥೈರ್ಯ ತುಂಬುವ, ಸಾಧ್ಯವಾದ ಪರಿಹಾರ ಕಂಡುಕೊಳ್ಳುವ ಕಾರ್ಯವನ್ನು ನಾಥ ಸಂಪ್ರದಾಯ ಮೂಲದ ಸಿದ್ಧರು ಕೈಗೊಂಡಿರಬೇಕು. ಇಂಥ ಒಂದು ಕಾರ್ಯದ ಸುಳಿವು ಸಿದ್ಧಮಂಕ ಚರಿತೆ ಕಾವ್ಯದ ವಸ್ತುವಿನಲ್ಲಿ ಸಿಗುತ್ತದೆ.[4] ಅದರಲ್ಲಿ ಶಿವನು

ಹೆಗ್ಗಗೌಡನೆಂಬವನಿಗೆ ತುಪ್ಪಳ ಕತ್ತರಿಸುವ, ನೂಲುವ ನೇಯುವ ವಿಧಾನ ತಿಳಿಸಿಕೊಡುವ ಪ್ರಸ್ತಾಪ ಬರುತ್ತದೆ. ಸಿದ್ಧರಾಮ ಕೆರೆಕಟ್ಟಿಸುವ ಕಾರ್ಯವನ್ನೂ ಗಮನದಲ್ಲಿಟ್ಟು ನೋಡಿದಾಗ ವಲಸಿಗರಿಗಾಗಿ, ಉದ್ಯೋಗ ಸೃಷ್ಟಿಯ ತಂತ್ರ ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿಯೆ ಶರಣರ ಕಾಯಕವೇ ಕೈಲಾಸ ತತ್ವದ ಅಂತರಂಗ ವ್ಯಕ್ತವಾಗುತ್ತದೆ. ಮತ್ತು ಅದಕ್ಕೆ ಹೊಸ ಆಯಾಮ ಸಿಗುತ್ತದೆ. ಯಾವ ಕಾಯಕ ಅನ್ನುವುದಕ್ಕಿಂತ ಕಾಯಕ ನಿಷ್ಠೆ ಮುಖ್ಯ. ಈ ಹಿನ್ನೆಲೆಯಲ್ಲಿಯೇ ಚರ್ಮದ ಕಾಯಕದ ಕುರುಬರು, ಸಾದರು ಮಾದಿಗರೆನಿಸಿರಬೇಕು. ಯಾಕೆಂದರೆ ಈ ಮೂರು ಜಾತಿಗಳಲ್ಲಿ ಕೆಲವು ಸಮಾನ ಬೆಡಗುಗಳಿವೆ. ಈ ಹಿನ್ನೆಲೆಯಲ್ಲಿ, ಪ್ರೊ. ಎಸ್. ಎಸ್. ಹಿರೇಮಠ ಅವರು ಕುರುಬ ರೇವಣಸಿದ್ಧನ ಶಿಷ್ಯ ಮಾದಿಗ ಮರುಳಸಿದ್ದ ಎಂದು ಹೇಳಿದ್ದು ಅರ್ಥಪೂರ್ಣವೆನಿಸುತ್ತದೆ.[5] ಜ್ಞಾನಿಗಳಾದ ಸಿದ್ಧರು ಚಾತುವರ್ಣದ ಕಟ್ಟುಗಳನ್ನು ಪಾಲಿಸುತ್ತಿರಲಿಲ್ಲ.[6] ಶರಣ ಚಳವಳಿ ಸಿದ್ಧ ಸಂಪ್ರದಾಯದ ಚಟುವಟಿಕೆಗಳ ಮುಂದುವರಿದ ಭಾಗ. ಅವರ ಮಾತು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಉಜ್ಜನಿಯ ಮರುಳಸಿದ್ಧನಿಗೆ ಅನ್ವಯಿಸುತ್ತದೆ. ಈ ಮರುಳಸಿದ್ಧನಿಗೆ ಮುಂಚೆ ಮಧ್ಯಪ್ರದೇಶದ ಉಜ್ಜಯಿನಿ ಪೀಠದ ಮರುಳಸಿದ್ಧ ಬೇರೆ ಇರಬೇಕು. ಅವನು ರೇವಣಸಿದ್ಧನ ಶಿಷ್ಯ-ಮಗ. ಈ ರೇವಣಸಿದ್ಧರು ಸಹ ಬೇರೆಯವರಿರಬಹುದೆ? ಸಂಶೋಧಿಸಬೇಕು. ರೇವಣಸಿದ್ಧ ಗುರುಮಠಗಳಿಗೆ ಚಾಲನೆ ನೀಡುತ್ತಾನೆ. ಪ್ರತಿ ಊರು ಇಲ್ಲವೆ ಊರುಗಳ ಸಮುಚ್ಚಯಕ್ಕೆ ಒಬ್ಬ ಗುರುವನ್ನು ನೇಮಕ ಮಾಡುತ್ತಾನೆ. ಅವು ರೇವಣಸಿದ್ಧರ ಮಠಗಳಾಗಿ ಶತಮಾನಗಳಿಂದ ಮುಂದುವರಿದುಕೊಂಡು ಬಂದಂಥವು. ಇವುಗಳಿಗೆ ಕುರುಬ ಗುರುಗಳು 'ಒಡೆಯರು' ಆಗಿರುತ್ತಾರೆ. ರೇವಣರಿಂದ ಗುರುಪೀಠವೊಂದು ಪ್ರಾರಂಭವಾಗುತ್ತದೆ. ನಮ್ಮ ಈ ಪ್ರಬಂಧದ ಉದ್ದೇಶಕ್ಕೆ ಸೀಮಿತವಾಗಿ ಮರುಳಾರಾಧ್ಯರು ಮುಖ್ಯ. ಯಾಕೆಂದರೆ ಲಿಂಗಾಯಿತರಾದ ಸಾದ ಕುರುಬರ ಸಂಬಂಧ ಮರುಳಸಿದ್ಧರೊಂದಿಗೆ ಹೆಣೆದುಕೊಂಡಿದೆ. ಅವರನ್ನು ಆರಾಧ್ಯ ಎಂದು ಪಂಚಾಚಾರ್ಯರ ಪರಿಭಾಷೆಯಲ್ಲಿ ಕರೆಯುತ್ತಿದ್ದರೂ, ಅವರು ಸಿದ್ಧ ಸಂಪ್ರದಾಯದ 'ಮರುಳಸಿದ್ಧ'ರು.[7]

'ಮರುಳ ಸಿದ್ಧ' ಎಂಬುದಕ್ಕೆ ಒಂದು ಪರಂಪರೆ ಇದೆ. 'ಮರುಳ' ಶಬ್ದಕ್ಕು ಕುರುಬರಿಗೂ ಅನೂಚಾನ ಸಂಬಂಧವಿದೆ. ಈಗಲೂ 'ಮಳ್ಳ' (ಮರುಳ) ಕುರುಬ 'ಮಳ್ಳ ಗೊಗ್ಗಯ್ಯ' ಎಂದು ಕುರುಬರಿಗೆ ಸಂಬಂಧಿಸಿಯೇ ಜನರು ಪದಪ್ರಯೋಗ ಮಾಡುತ್ತಾರೆ. ಹೌದು, ಲೌಕಿಕ ವ್ಯವಹಾರ ದೃಷ್ಟಿಯಲ್ಲಿ ಅವರು ಮರುಳರು. ಅವರದು ಲೌಕಿಕದಾಚೆಗಿನ ಭಕ್ತಿ. ಅವರು ಭಕ್ತಿಯ ಮರುಳರು. ಮೈಲಾರನ ಸೇವೆ ಮಾಡುವವರು ಗೆಜ್ಜೆಕಟ್ಟಿ ಕುಣಿಯುವುದು. ಚಬುಕದಿಂದ ತಮ್ಮನ್ನು ತಾವೆ ಹೊಡೆದುಕೊಳ್ಳುವುದು, ದೋಣಿಯಲ್ಲಿ ಉಣ್ಣುವ ರೀತಿ, ನಾಯಿಯಂತೆ ಬೊಗಳುವುದು ಇತ್ಯಾದಿ ಮರುಳ ಭಕ್ತಿಯ ಪ್ರತೀಕ. ಈ ಬಗೆಯ ಮರುಳ ಭಕ್ತಿ ವಚನಕಾರರಲ್ಲಿ ಪರ್ಯಾಯವಾಗಿ ಕಾಣಿಸಿಕೊಂಡಿದೆ. ಅಕ್ಕಮಹಾದೇವಿ ಚನ್ನಮಲ್ಲಿಕಾರ್ಜುನನ್ನು ಗಂಡನೆಂದು ಭಾವಿಸಿ ಸೂಸುವ ಭಕ್ತಿಯಲ್ಲಿ ಇಂಥ ಮರುಳತನವಿದೆ. ಬಸವಣ್ಣನವರ ವಚನಗಳಲ್ಲಿ ಕೂಡ ಇಂಥ ಮರುಳ ಆರಾಧನೆಯನ್ನು ಕಾಣಬಹುದು. ಉದಾಹರಣೆಗೆ.

ಭವಭವದಲ್ಲಿ ನಿಮ್ಮ ಜಂಗಮವೆ ಶರಣಯ್ಯ
ಅವರುಂಡು ಮಿಕ್ಕುವ ಉಡುಗಿ,
ಒಕ್ಕ ಪ್ರಸಾದವನಾಯ್ದುಕೊಂಬ ಮರುಳನಾನಯ್ಯ
ನಮ್ಮ ಕೂಡಲ ಸಂಗನ ಶರಣರ ರಿಣವ ನಾ ಹಿಂಗಲಾರೆ

ಇಂಥ ಮರುಳಭಕ್ತಿಯು ಮೇಲ್ವರ್ಗದವರ ಕುಮ್ಮಕ್ಕಿನಿಂದ ಮೂಢಭಕ್ತಿಯ ಮಾರ್ಪಾಡು ಆಗಿದ್ದು ಕೆಲವೊಮ್ಮೆ ಕಂಡುಬರುತ್ತದೆ

ಆರ್ಯಾವರ್ತವು ವಿಸ್ತಾರವಾಗುತ್ತ ಹೋದಂತೆ ಕುರುಬರ ಸಹಜ ಬದುಕಿಗೆ ಆತಂಕಗಳು ಎದುರಾದವು. ಆಕ್ರಮಣಕಾರರ ಉಪಟಳ ತಾಳಲಾರದೆ ಉತ್ತರ ಮತ್ತು ಮಧ್ಯಭಾರತದಿಂದ ತಂಡೋಪತಂಡವಾಗಿ ಕುರುಬ ಕುಟುಂಬಗಳು ದಕ್ಷಿಣದ ಕಡೆಗೆ ವಸಲೆ ಬಂದವು (ವಲಸೆಯ ಇತಿಹಾಸ ತಿಳಿಯದೆ ಭಾರತದ ಸಾಮಾಜಿಕ ಇತಿಹಾಸವನ್ನು ಸಮರ್ಪಕವಾಗಿ ಅರ್ಥೈಸಿಕೊಳ್ಳಲು ಸಾಧ್ಯವಿಲ್ಲ). ಯಾವುದೇ ಜನಾಂಗವು ಗುಳೆಕಟ್ಟಿಕೊಂಡು ಎದ್ದಾಗ ಮೊದಲು ನೆಲೆಯಾಗಿದ್ದ ದೇವ ದೇವತೆಗಳ ನೆನಹುಗಳನ್ನೂ ಸ್ಥಳ ಪುರಾಣಗಳನ್ನು ಕಟ್ಟಿಕೊಂಡೆ ಹೊರಡುವುದುಂಟು.[8] ಉಜ್ಜಯಿನಿ, ಮಧ್ಯಪ್ರದೇಶ ಕಡೆಯಿಂದ ಹೊರಟ ಕುರುಬರಲ್ಲಿ ಕೆಲವರು ಅಲ್ಲಲ್ಲಿ ನೆಲೆನಿಂತರು. ಹಲವರು ತಾವು ನೆಲೆನಿಂತ ಸ್ಥಳಗಳಿಗೆ ಉಜ್ಜಯಿನಿ ಹೆಸರನ್ನೇ ಇಟ್ಟುಕೊಂಡರು. ಅವು ವಲಸೆ ಬಂದ ಕುರುಬರ ಹೆಜ್ಜೆ

ಗುರುತುಗಳನ್ನು ತೋರಿಸುತ್ತವೆ. ಹೆಸರಿನಲ್ಲಿ ಪ್ರಾದೇಶಿಕವಾಗಿ ಕೆಲ ವ್ಯತ್ಯಾಸಗಳೊಂದಿಗೆ ಕರ್ನಾಟಕದಲ್ಲಿ ಕಂಡುಬರುವ ಊರುಗಳು ಕೆಳಗಿನಂತಿವೆ.

| **ಜಿಲ್ಲೆ** | **ತಾಲೂಕು** | **ಊರು** |
|---|---|---|
| ಬೀದರ್ | ಔರಾದ್ | ಉಜ್ಜೈನ / ಉಜನಿ |
| ಬೆಳಗಾಂವ | ಬೈಲಹೊಂಗಲ | ಉಜ್ಜನಹಟ್ಟಿ / ಉಜ್ಜನಟ್ಟಿ |
| | ರಾಮದುರ್ಗ | ಉಜ್ಜಿನಕೊಪ್ಪ |
| ಬಳ್ಳಾರಿ | ಕೂಡ್ಲಿಗಿ | ಉಜ್ಜನಿ |
| ಹಾವೇರಿ | ಹಿರೇಕೆರೂರ | ಉಜನಿಪುರ |
| ದಾವಣಗೆರೆ | ಜಗಳೂರು | ಉಜ್ಜಪ್ಪ ಒಡೇರಹಳ್ಳಿ |
| | ಹೊನ್ನಾಳಿ | ಉಜ್ಜನೀಪುರ |
| ಶಿವಮೊಗ್ಗ | ಭದ್ರಾವತಿ | ಉಜ್ಜನಪುರ |
| | ಸೊರಬ | ಉಜ್ಜೈನಿಪುರ / ಉಜನೀಪುರ |
| | ಶಿಕಾರಿಪುರ | ಉಜ್ಜನೀಪುರ |
| ತುಮಕೂರು | ಕುಣಿಗಲ್ | ಉಜ್ಜನಿ |
| | ಸಿರಾ | ಉಜ್ಜನ ಕುಂಟೆ |
| ಬೆಂಗಳೂರು | ಚನ್ನಪಟ್ಟಣ | ಉಜ್ಜನಹಳ್ಳಿ |
| | ದೊಡ್ಡಬಳ್ಳಾಪುರ | ಉಜ್ಜಾನಿ |

ಮಧ್ಯಪ್ರದೇಶದ ಉಜ್ಜಯಿನಿ, ಜಬಲ್ಪೂರ ಪ್ರದೇಶಗಳು ಕುರುಬರು ದಟ್ಟವಾಗಿ ನೆಲೆಸಿದ ಬೀಡುಗಳಾಗಿದ್ದವು. ರೇವಣರು ನಾಥ ಸಂಪ್ರದಾಯದ ಮತ್ಸೇಂದ್ರನಾಥ, ಗೋರಖನಾಥರ ಸಂಪರ್ಕ ಹೊಂದಿದ್ದು ಜಬಲ್ಪುರದ ಬಂಧುಲ-ಶಿವನಿಯಲ್ಲಿ ಹತ್ತಿರದಲ್ಲಿಯೆ ಬೇಡಾ ಘಾಟ್ (ಕುರಿಘಟ್ಟ) ಇದೆ. ಈ ಪ್ರದೇಶದಿಂದ ವಲಸೆ ಬಂದ ಕುರುಬರು ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲೂಕಿನಲ್ಲಿ ನೆಲೆ ನಿಂತರು. ಆ ಊರು 'ಶಿವನಿ', ವಿಜಯನಗರ ಸಾಮ್ರಾಜ್ಯ ಪತನದ ನಂತರ ತಾಳಿಕೋಟೆಯಿಂದ ವಲಸೆ ಬಂದ ಕುರುಬರು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಿನಲ್ಲಿ ನೆಲೆ ನಿಂತರು. ಆ ಊರು 'ತಾಳಿಕಟ್ಟೆ' ಅದರಂತೆ ಉಜ್ಜಯಿನಿ ಕಡೆಯಿಂದ ಬಂದ ಅಥವಾ ಆ ಸಂಪ್ರದಾಯ ಹೊತ್ತು ತಂದ ಕುರುಬರು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನಲ್ಲಿ ನೆಲೆಸಿದರು. ಅದು ಉಜ್ಜನಿ ಮೊದಲು ಆ ಪ್ರದೇಶವನ್ನು 'ಕಗ್ಗಲ್ಲು' ಎಂದು ಕರೆಯುತ್ತಿದ್ದರು. ಕಗ್ಗಲ್ಲುಗೌಡ (ಕುರುಬ) ಮೈಲಾರನ ಭಕ್ತ.[9] ಸಮೀಪದಲ್ಲಿಯೆಮೈಲಾರನ ಬಂಡೆ ಇದೆ. ಕಗ್ಗಲ್ಲು ಗೌಡ ವಲಸಿಗರು ನೆಲೆಸಲು ಸಹಕರಿಸಿದಂತೆ ತೋರುತ್ತದೆ. ಉಜ್ಜನಿಯಲ್ಲಿ ಈಗಲೂ ಕುರುಬರೆ ಹೆಚ್ಚು. ಅವರಲ್ಲಿ ಲಿಂಗಾಯತರಾದವರಲ್ಲಿಯೆ ನಂತರದ ದಿನಗಳಲ್ಲಿ ಎರಡು ಪಂಗಡಗಳಾದಂತೆ ತೋರುತ್ತದೆ. ಮರುಳಸಿದ್ಧ ಕಗ್ಗಲ್ಲುಗೌಡನ ಸಾಕುಮಗನೆಂದು ಹೇಳಲಾಗುತ್ತಿದೆ. ಲೌಕಿಕದ ದೃಷ್ಟಿಯಲ್ಲಿ ಮರುಳ (ಬಹುಶಃ ಮೂಗ)ನಂತಿದ್ದ ಸಿದ್ಧ ತನ್ನ ಭಕ್ತಿಯ ಪಾರಮ್ಯದಿಂದ ಎಲ್ಲರ ಗಮನ ಸೆಳೆದ. ಕಾವ್ಯಗಳ ಆಧಾರದಿಂದ ಅವನೊಬ್ಬ ಮಚ್ಚೆ ಕಾಯಕದ ಮಾದಿಗನೆಂದು ಹೇಳಲಾಗುತ್ತಿದೆಯಾದರೂ ಐತಿಹಾಸಿಕ ಆಧಾರಗಳು ಲಭ್ಯವಾಗಿಲ್ಲ. ಇವನ ಭಕ್ತಿಯನ್ನು ಮೆಚ್ಚಿದ ಒಬ್ಬ ಕುರುಬ ಒಡೆಯ ರೇವಣರು ತಮ್ಮ ಶಿಷ್ಯನೆಂದು ಸ್ವೀಕರಿಸಿ ಧಾರ್ಮಿಕ ಗುರುವನ್ನಾಗಿ ಮಾಡಿದಂತೆ ತೋರುತ್ತದೆ. ಕಗ್ಗಲ್ಲುಗೌಡನ ಹಿನ್ನೆಲೆಯಲ್ಲಿ 'ಕಗ್ಗಲ್ಲೋರು' ಎಂಬ ಬೆಡಗು ರೂಢಿಗೆ ಬಂದಿದೆ. ಈ ಬೆಡಗು ಕುರುಬರಲ್ಲಿಯೂ ಇದೆ; ಸಾದ ಲಿಂಗಾಯತರಲ್ಲೂ ಇದೆ. ಸಾದರ ಕುರುಬ ಮೂಲ ಇದರಿಂದಲೂ ವ್ಯಕ್ತವಾಗುತ್ತದೆ.

ಮಹಾದೇವ ಬಣಕಾರರು ಕಗ್ಗಲ್ಲು ಪ್ರದೇಶದಲ್ಲಿ ಉಜ್ಜಯಿನಿ ಊರು ಇರಲಿಲ್ಲ. ಮರುಳಸಿದ್ದರು ನೆಲೆಸಲು ನಿರ್ಧರಿಸಿದ ಸ್ಥಳವೇ ಈಗಿನ ಉಜ್ಜಯಿನಿ (ಉಜ್ಜನಿ) ಗ್ರಾಮವಾಗಿದೆಯೆಂದು ಹೇಳಿದ್ದಾರೆ.[10] ಆದರೆ ಅವರೆ ಹಾನಗಲ್ ತಾಲೂಕಿನ ಮೂಡೂರಿನಲ್ಲಿ ಮರುಳಸಿದ್ಧ

ಮಠವಿದೆ. ಇಲ್ಲಿಯೂ ಕಗ್ಗಲ್ಲುಗೌಡರ ವಂಶದ ಮನೆತನಗಳಿವೆ. ಇಲ್ಲಿನವರ ವಾಡಿಕೆಯ ಪ್ರಕಾರ ಮರುಳಸಿದ್ಧಯ್ಯನು ಹುಟ್ಟಿ, ಬೆಳೆದದ್ದು ಇಲ್ಲಿಯೆ. ಐಕ್ಯವಾದದ್ದು ಇಲ್ಲಿಯೆ ಎಂದು ಹೇಳಿದ್ದಾರೆ.[11] ಇದರಿಂದ ಮರುಳಸಿದ್ಧರ ಹುಟ್ಟು-ಬೆಳವಣಿಗೆಗಳ ಬಗ್ಗೆ ಭಿನ್ನಾಭಿಪ್ರಾಯ ಇರುವುದು ಸ್ಪಷ್ಟ. ಅಥವಾ ಮರುಳಸಿದ್ದರು ಒಬ್ಬರಲ್ಲ, ಹಲವರು ಎಂಬುದು ವ್ಯಕ್ತವಾಗುತ್ತದೆ.

ಕಾವ್ಯ ಮತ್ತು ಶಾಸನಗಳಲ್ಲಿ ಮರುಳಸಿದ್ಧ ಮಂಕುಸಿದ್ದ, ಮರುಳ, ಮಂಕಯ್ಯ ಎಂದು ಉಕ್ತವಾದ ಸಿದ್ಧನೊಬ್ಬ ವಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಸರೂರಿನ ಪರಿಸರದಲ್ಲಿ ಆಗಿಹೋಗಿದ್ದಾನೆ. ಅಲ್ಲಿ ರೇವಣಸಿದ್ಧರ ಮಗ ಶಾಂತಮುತ್ತಯ್ಯನ ಮಠ ಇದೆ. ಮಲ್ಲಿಕಾರ್ಜುನ (ಈಗ ರೇವಣಸಿದ್ಧ) ದೇವಸ್ಥಾನವಿದೆ. ಮರುಳಸಿದ್ಧ ಇಲ್ಲಿಯ ಬಂಡೆಯ ಮೇಲೆ ಘೋರ ತಪಸ್ಸು ಮಾಡಿದನೆಂದೂ, ಕಲ್ಯಾಣ ಪ್ರದೇಶದ ನಿರಾಕರಣೆಗೆ ಒಳಗಾದ ಕುರುಬರಿಗೆ ತನ್ನ ತಪೋಬಲದ ಪವಾಡದಿಂದ ಪ್ರವೇಶವಕಾಶ ಕಲ್ಪಿಸಿಕೊಟ್ಟನೆಂದು 'ತಗರ ಪವಾಡ'[12] ಮತ್ತು 'ಸಿದ್ಧಮಂಕ ಚರಿತೆ'ಗಳಲ್ಲಿ ಕಂಡುಬರುತ್ತದೆ. ಹಾಲುಮತ ಪುರಾಣ ಹೀಗೆ ಹೇಳುತ್ತದೆ.

ಮರುಳಸಿದ್ಧನವನ ವರಚರಿತವ ಕೇಳೆ
ಹರನೊಲಿವನು ಕರುಣದಿ
ಕುರುಬರ ಕಥೆಯೆಂದು ಜರಿಯಲು ಬೇಡ
ಮರುಳಸಿದ್ಧಯ್ಯ ತಾ ಕುರುಬ (ಸಂಧಿ ೫ ೧೦೭)

ಇದರಿಂದ ಕುರುಬ ಮಂಕುಸಿದ್ಧ. ರೇವಣಸಿದ್ಧಪ್ಪ, ಸಿದ್ಧರಾಮರೊಂದಿಗೆ ಇವನು ಕಲ್ಯಾಣಕ್ಕೆ ಹೋದ ಬಗ್ಗೆ, ಬಸವಣ್ಣನವರನ್ನು ಕಂಡ ಬಗ್ಗೆ ಪ್ರಸ್ತಾಪಗಳಿವೆ. ಆದರೆ ಉಜ್ಜಯಿನಿ ಮರುಳಸಿದ್ಧ ಬಸವಣ್ಣನವರನ್ನು ಕಂಡ ಬಗ್ಗೆ ಆಧಾರಗಳಿಲ್ಲ. ಆದ್ದರಿಂದ ಇವನು ಬೇರೊಬ್ಬ ಮರುಳಸಿದ್ಧನಿರಬೇಕು. ಕಾಲೈಕ್ಯ, ಸ್ಥಳೈಕ್ಯದ ಕೊರತೆಯ ಕಾರಣ ಇವನು ಯಾವ ಕಾಲ, ದೇಶದವನೆಂದು ನಿರ್ಣಯಿಸುವುದು ಕಷ್ಟ ಸಾಧ್ಯ.

ಉಜ್ಜಯಿನಿಯಲ್ಲಿ ಸದ್ಧರ್ಮ ಪೀಠ ಸ್ಥಾಪಿಸಿ ತೆಲುಗು ಬಾಳು ಸಿದ್ಧನಿಗೆ ಮರುಳಸಿದ್ಧರು ಪಟ್ಟಗಟ್ಟಿ 'ತರಳಾ ಬಾಳು' ಎಂದು ಆಶೀರ್ವದಿಸಿದವರು ಎಂಬ ಮಾತು ಪ್ರಚಲಿತದಲ್ಲಿದೆ. ಇವು ಕಾವ್ಯ ಕಲ್ಪನೆಯಲ್ಲಿ ಮೂಡಿಬಂದ ಮಾತುಗಳೆನಿಸುತ್ತದೆ. 'ತರಳು' ಎಂದರೆ ಕಿಟೆಲ್ ಅವರು ಅರ್ಥ ಕೊಟ್ಟಂತೆ a ripe fruit that has become dry, especially a cocoanut ಮೂಲದಲ್ಲಿ 'ತರಳು ಬೋಳು ಸಿದ್ಧ' ಇದ್ದಂತೆ ತೋರುತ್ತದೆ. ಇದು ಆಶೀರ್ವಾದದ ಹಿನ್ನೆಲೆಯಲ್ಲಿ ಬಂದುದಲ್ಲ. ಅನ್ವರ್ಥನಾಮವಾಗಿ ಬಂದುದು. ಅಂದರೆ ಒಣಗಿದ ತೆಂಗಿನಕಾಯಿಯಂತೆ ಬೋಳನಾದ ಸಿದ್ಧ ಎಂದು ಅರ್ಥ. ಈ ತರ್ಕಕ್ಕೆ ಒಂದು ಮುಖ್ಯ ಕಾರಣವಿದೆ. ಸಿದ್ಧರಲ್ಲಿ 'ಜಡೆಸಿದ್ಧ' ಸಂಪ್ರದಾಯದಂತೆ 'ಬೋಡುಸಿದ್ಧ' ಸಂಪ್ರದಾಯವೂ ಇದೆ. ಬೋಳು ಎಂಬುದು ಲೌಕಿಕ ವ್ಯವಹಾರಕ್ಕೆ (ಸಂಸಾರಕ್ಕೆ)ವಿಮುಕ್ತ ಅಂದರೆ ಆಧ್ಯಾತ್ಮಿ, ತಪಸ್ವಿ ಎಂಬುದನ್ನಲ್ಲದೆ ಬೋಳೆ ಸ್ವಭಾವದವ ಎಂಬುದನ್ನು ಸೂಚಿಸುತ್ತದೆ. ತರಳಬಾಳು ಪೀಠ ವಿರಕ್ತ ಸಂಪ್ರದಾಯದ ಪೀಠವಾಗಿರುವುದರಿಂದ ಈ ತರ್ಕ ಅರ್ಥಪೂರ್ಣ ಅನಿಸುತ್ತದೆ.

ಈಗಾಗಲೇ ನಿರಾಕಾರ ಪರಮ ಸಾಕಾರ ಶಿವನಾದ ಹಂತಗಳನ್ನು ಪ್ರಸ್ತಾಪಿಸಿದ್ದೇನೆ. ಈ ಎಲ್ಲ ಹಂತಗಳ ಸ್ಮಾರಕಗಳು ಉಜ್ಜನಿಯಲ್ಲಿ ಸಿಗುತ್ತವೆ. ಅಲ್ಲಿರುವ ಜಗುಲಿಗೆ ಸೀಮಿತವಾದ ಬ್ರಹ್ಮದೇವನ ಗುಡಿ, (ಉದ್ದಾನ) ವೀರಭದ್ರ, ದಕ್ಷಬ್ರಹ್ಮನ ತಲೆ ಚಿತ್ರ, ಬೈರದೇವರ ಗುಡಿ, ಮೈಲಾರನ ಬಂಡೆ ಇವೆಲ್ಲ ನನ್ನ ಅಭಿಪ್ರಾಯಕ್ಕೆ ಸಾಕ್ಷಿಯನ್ನು ಒದಗಿಸುತ್ತವೆ. ಶಿವಲಿಂಗವಿರುವ ಮುಖ್ಯ ಗುಡಿಯನ್ನು ಜನ 'ಸಿದ್ಧಪ್ಪನ ಗುಡಿ' ಎಂದೇ ಕರೆಯುತ್ತಾರೆ. ಕಾಲಕ್ರಮದಲ್ಲಿ ಸ್ಥಳೀಯರು-ವಲಸಿಗರ ನಡುವೆ ಲಿಂಗಾಯತರಾದವರಲ್ಲಿ ಮೊದಲಿಗರು. ನಂತರದವರ ನಡುವೆ ಭಿನ್ನಾಭಿಪ್ರಾಯ ತಲೆದೋರಿದಂತೆ ತೋರುತ್ತದೆ. ಈ ಹಿನ್ನೆಲೆಯಲ್ಲಿ ಲಿಂಗಾಯತರಾದ ಸಾದ ಕುರುಬರು ಪ್ರತ್ಯೇಕ ಮಠ ಕಟ್ಟಿಸಿಕೊಂಡಂತೆ ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ 'ತರಳ ಬಾಳು' ಗುರು ಪರಂಪರೆ ಪ್ರಾರಂಭವಾಗುತ್ತದೆ. ಅದು ಕೆಳಗಿನಂತಿದೆ.

| | | | |
|---|---|---|---|
| ೧. | ವಿಶ್ವಬಂಧು ಮರುಳಸಿದ್ಧ | ೨. | ಶ್ರೀ ಸಿದ್ದೇಶ್ವರ ಸ್ವಾಮೀಜಿ (ತೆಲುಗುಬಾಳು ಸಿದ್ಧ) |

| | | | |
|---|---|---|---|
| ೩. | ಶ್ರೀ ಗಡ್ಡದ ಲಿಂಗದೇವರು | ೪. | ಶ್ರೀ ಕೆಂಚಪ್ಪ ದೇವರು |
| ೫. | ಶ್ರೀ ಚನ್ನಬಸವ ದೇವರು | ೬. | ಶ್ರೀ ಗುರುಸಿದ್ಧ ದೇವರು |
| ೭. | ಶ್ರೀ ಶಿವಲಿಂಗ ದೇವರು | ೮. | ಶ್ರೀ ಗುರುಬಸವ ದೇವರು |
| ೯. | ಶ್ರೀ ಕರಿಸಿದ್ಧ ದೇವರು | ೧೦. | ಶ್ರೀ ಶಾಂತವೀರ ದೇವರು |
| ೧೧. | ಶ್ರೀ ಕರಿಸಿದ್ಧ ದೇವರು | ೧೨. | ಶ್ರೀ ಜಂಬಪ್ಪ ದೇವರು |

ಶ್ರೀ ಜಂಬಪ್ಪ ದೇವರ ಕಾಲದಲ್ಲಿ ಲಿಂಗಾಯತ ಒಳಪಂಗಡಗಳ ನಡುವೆ ತೀವ್ರ ಭಿನ್ನಾಭಿಪ್ರಾಯ ತಲೆದೋರಿದಂತೆ ಕಾಣುತ್ತದೆ. ಆದ್ದರಿಂದ ಅವರು ಉಜ್ಜನಿ ತೊರೆದು ಚಿತ್ರದುರ್ಗ ಜಿಲ್ಲೆಯ ಸಿರಿಗೆರೆಯನ್ನು ಸೇರಿ ಗುರು ಪರಂಪರೆಯನ್ನು ಮುಂದುವರಿಸಿಕೊಂಡು ಬಂದರು. ಸಿರಿಗೆರೆಯಲ್ಲಿ ಮುಂದುವರಿದ ಗುರುಪರಂಪರೆ ಈ ಕೆಳಗಿನಂತಿದೆ.

| | | | |
|---|---|---|---|
| ೧೩. | ಜಂಬಪ್ಪ ದೇವರು | ೧೪. | ಶ್ರೀಗುರುಸಿದ್ಧ ದೇವರು |
| ೧೫. | ಶ್ರೀ ಸಿದ್ಧಲಿಂಗ ದೇವರು | ೧೬. | ಶ್ರೀ ಗುರುಸಿದ್ಧ ದೇವರು |
| ೧೭. | ಶ್ರೀ ಶಿವಲಿಂಗರಾಜ ದೇಶಿಕೇಂದ್ರ ಸ್ವಾಮಿಜಿ | ೧೮. | ಶ್ರೀಗುರುಸಿದ್ಧ ದೇಶೀಕೇಂದ್ರ ಸ್ವಾಮೀಜಿ |
| ೧೯. | ಶ್ರೀ ಶಿವಲಿಂಗ ದೇಶೀಕೇಂದ್ರ ಸ್ವಾಮೀಜಿ | ೨೦. | ಶ್ರೀ ಗುರುಶಾಂತರಾಜ ದೇಶೀಕೇಂದ್ರ ಸ್ವಾಮೀಜಿ |
| ೨೧. | ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ | | |

ಗುರುಪರಂಪರೆಯ ಪಟ್ಟಿಯಿದ್ದರೂ ಅವರ ಕಾಲಾವಧಿ ಲಭ್ಯವಿಲ್ಲ. ಮೊದಲ ಹದಿನೆಂಟು ಜನ ಗುರುಗಳು ಆಧ್ಯಾತ್ಮ, ತತ್ವ ಬೋಧನೆ, ಭಕ್ತರಿಗೆ ಮಾರ್ಗದರ್ಶನ ಮತ್ತು ಸ್ಥಳೀಯ ನ್ಯಾಯ ತೀರ್ಮಾನ ಮುಂತಾದ ವಿಷಯಗಳಿಗೆ ಸೀಮಿತವಾಗಿದ್ದರೆ, ಹತ್ತೊಂಭತ್ತನೆಯವರಾದ ಶ್ರೀ ಗುರು 'ಶಾಂತರಾಜ ದೇಶೀಕೇಂದ್ರ ಸ್ವಾಮೀಜಿ ದಾವಣಗೆರೆಯಲ್ಲಿ ಇಪ್ಪತ್ತನೇ ಶತಮಾನದ ಇಪ್ಪತ್ತರ ದಶಕದಲ್ಲಿ ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸಿದರು. ಇದು ಆಧುನಿಕ ಶಿಕ್ಷಣದ ಮೊದಲ ಬೀಜ. ಅವರ ನಂತರ ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ಬಹಳಷ್ಟು ವಿದ್ಯಾ ಕೇಂದ್ರಗಳನ್ನು ಪ್ರಾರಂಭಿಸಿದರು. ಆರ್ಥಿಕವಾಗಿ ಸದೃಢರಾದ ಶಿಷ್ಯವರ್ಗ ಸಾಕಷ್ಟು ಸಹಾಯಧನ ನೀಡಿತು. ಶ್ರೀ ಡಿ. ದೇವರಾಜ ಅರಸು ಮುಖ್ಯಮಂತ್ರಿಗಳಾಗಿದ್ದಾಗ ಸಿರಿಗೆರೆ ಮಠ ವಿಶೇಷ ಮಹತ್ವ ಪಡೆಯಿತು. ಇದರಿಂದ ವಿದ್ಯಾಕೇಂದ್ರಗಳನ್ನು ಪ್ರಾರಂಭಿಸಿ ಬೆಳೆಸಲು ಅನುಕೂಲವಾಯಿತು. ಸದ್ಯದ ಡಾ. ಶಿವಮೂರ್ತಿ ಶಿವಾಚಾರ್ಯಸ್ವಾಮೀಜಿ ಅವಶ್ಯವಿದ್ದಲ್ಲಿ ಹೊಸ ಸಂಸ್ಥೆಗಳನ್ನು ಪ್ರಾರಂಭಿಸುತ್ತ, ಈಗಾಗಲೇ ತೆರೆದಿರುವ ವಿದ್ಯಾಸಂಸ್ಥೆಗಳ ಗುಣಮಟ್ಟ ಹೆಚ್ಚಿಸುತ್ತಾ ನಡೆದಿದ್ದರೆ. ಐವತ್ತು ವರ್ಷಗಳ ಇತಿಹಾಸದಲ್ಲಿ ಸಿರಿಗೆರೆ ಮಠ ವಿದ್ಯಾಕ್ಷೇತ್ರದಲ್ಲಿ ಮಹಾಕ್ರಾಂತಿಯನ್ನೇ ಮಾಡಿದೆ.

ಈ ಮಠಕ್ಕೆ ಸಂಬಂಧಿಸಿ ಇನ್ನೆರಡು ಮುಖ್ಯ ವಿಷಯಗಳನ್ನು ಪ್ರಸ್ತಾಪಿಸಲೇಬೇಕು. ಮೊದಲನೆಯದಾಗಿ ಅದು ಪ್ರತಿವರ್ಷ ಭಾರತ ಹುಣ್ಣಿಮೆಯಿಂದು ಆಚರಿಸಿಕೊಂಡು ಬರುತ್ತಿರುವ 'ತರಳಬಾಳು ಹುಣ್ಣಿಮೆ'. ಮೊದಮೊದಲು ಸಿರಿಗೆರೆ ಮಠಕ್ಕೆ ಸೀಮಿತವಾಗಿದ್ದ ಈ ಆಚರಣೆಯನ್ನು ೧೯೫೦ ರಿಂದ ಪ್ರತಿವರ್ಷ ಬೇರೆ ಬೇರೆ ಊರುಗಳಲ್ಲಿ ಆಚರಿಸಿಕೊಂಡು ಬರಲಾಗಿದೆ. ಇದುವರೆಗೆ ಸುಮಾರು ನಲವತ್ತೈದು ಆಚರಣೆಗಳು ನಡೆದಿವೆ. ಭಕ್ತರಲ್ಲಿ ಜಾಗೃತಿ ಮೂಡಿಸುವುದು, ವಿವಿಧ ವಿಷಯಗಳ ಮೇಲೆ ವಿಚಾರ ಸಂಕೀರಣ, ಸಾಂಸ್ಕೃತಿಕ ಕಾರ್ಯಕ್ರಮಗಳು ಈ ಹುಣ್ಣಿಮೆಯ ವಿಶೇಷಗಳು. ಈ ಹುಣ್ಣಿಮೆಗೆ ನಾಡಿನ ಎಲ್ಲ ಭಾಗದ ಜನ, ರಾಜಕೀಯ, ಸಾಮಾಜಿಕ ಪ್ರತಿಷ್ಠಿತ ವ್ಯಕ್ತಿಗಳು ಅಷ್ಟೇ ಅಲ್ಲ, ಹೊರದೇಶದಿಂದ ಸಹ ಭಕ್ತರು ಬಂದು ಸೇರುವುದು ವಿಶೇಷ.

ಈ ಮಠದ ಇನ್ನೊಂದು ವಿಶೇಷವೆಂದರೆ, 'ಸದ್ಧರ್ಮ ನ್ಯಾಯಪೀಠ'. ಬುಡಕಟ್ಟು ಜನಾಂಗದಲ್ಲಿ ತಮ್ಮದ ರೀತಿಯಲ್ಲಿ ವ್ಯಾಜ್ಯಗಳಿಗೆ ನ್ಯಾಯ ತೀರ್ಮಾನ ಕಂಡುಕೊಳ್ಳುವ ಪದ್ಧತಿ ಹಿಂದಿನ ಕಾಲದಲ್ಲಿ ಇತ್ತು. ಈಗಲೂ ಕೆಲ ಬುಡಕಟ್ಟುಗಳಲ್ಲಿ ಅದು ಕಂಡುಬರುತ್ತಿದೆ. ಉದಾಹರಣೆಗೆ ಚಳ್ಳಕೆರೆ ತಾಲೂಕಿನ ಎನ್ ದೇವರಹಳ್ಳಿ ಗ್ರಾಮದಲ್ಲಿ ಬೇವಿನ ಮರದ ಕೆಳಗಿರುವ 'ಜೋಗಿ ಜಂಗಮರ ಕಟ್ಟೆ' ಮೇಲೆ ವಾದ ಪ್ರತಿವಾದಗಳು ನಡೆದು ಜೋಗಿ ಜಂಗಮರ ವ್ಯಾಜ್ಯಗಳು ಇತ್ಯರ್ಥವಾಗುತ್ತವೆ. ಶ್ರೀ ಸಚ್ಚಿದಾನಂದ ಕುರುಗುಂದ ಅವರು ವರದಿ ಮಾಡಿರುವಂತೆ[13] ಶ್ರಾವಣ ಮಾಸದ ನಂತರ ಪ್ರಾರಂಭವಾದ ನ್ಯಾಯ ಪಂಚಾಯ್ತಿ ಎಂಟರಿಂದ ಹದಿನೈದು ದಿನಗಳವರೆಗೆ

ನಡೆಯುತ್ತದೆ. ಈ ಸಂದರ್ಭದಲ್ಲಿ ನ್ಯಾಯ ಅರಸಿ, ರಾಜ್ಯ ಹೊರ ರಾಜ್ಯಗಳಲ್ಲಿ ವಾಸವಾಗಿರುವ ಜೋಗಿ ಜನಾಂಗದವರು ಇಲ್ಲಿಗೆ ಬರುತ್ತಾರೆ. ಜೋಗಿ ಜನಾಂಗದ ಯಜಮಾನನೆ ನ್ಯಾಯಾಧೀಶ. ಅವನಿಗೆ ಪರಮಾಧಿಕಾರ ಇರುತ್ತದೆ. ಸಹಾಯಕರಾಗಿ ಧನಗರು ಭಂಡಾರಿ, ದಳವಾಯಿ ಭಂಡಾರಿ, ಪಾವಲಿ ಭಂಡಾರಿಗಳು ಇರುತಾರೆ ಅವರಿಗೆ ತಪ್ಪಿತರಾದವರನ್ನು ಜಾತಿಯಿಂದ ಹೊರ ಹಾಕುವ ಹಕ್ಕು ಸಹ ಇರುತ್ತದ. ಸಪ್ರದಾಯದ 'ಅರಿಪಿರಿ' (ಬುದವಂತ!) ಕುಟುಂಬದ ಹಿರಿಯನಿಂದ ನ್ಯಾಯದಾನ ನಡೆಯತ್ತದೆ. ಈಗ ಕುಟುಂಬದ ದೊಡ್ಡಯಲ್ಲಪ್ಪ ನ್ಯಾಯ ಪಂಚಾಯ್ತಿಯ ಮುಖ್ಯಸ್ಥರಾಗಿದ್ದಾರೆ.

ಈ ಬಗೆಯ ಬುಡಕಟ್ಟು ನ್ಯಾಯ ವ್ಯವಸ್ಥೆಯನ್ನು ಮುಂದುವರೆಸಿ ಆಧುನಿಕರಣಗೊಳಿಸಿ ನ್ಯಾಯ ನೀಡುವ ಪದ್ದತಿ ಸಿರಿಗೆರೆ ಮಠದಲ್ಲಿ ನಡೆದುಕೊಂಡು ಬಂದಿದೆ. ಸದ್ಯದ ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಶ್ರೀಗಳು ೨೦೦೦ನೇ ಇಸ್ವಿಯಲ್ಲಿ ಮಠದ ಪಂಚಾಯ್ತಿಗೆ ನ್ಯಾಯಪೀಠದ ಸ್ವರೂಪ ನೀಡಿದರು. ಅಲ್ಲಿಂದ ಸುಮಾರು ಒಂದು ಸಾವಿರಕ್ಕೂ ಹೆಚ್ಚು ಪ್ರಕರಣಗಳು ಇತ್ಯರ್ಥವಾಗಿವೆಯೆಂದು ಹೇಳಲಾಗುತ್ತದೆ. ಕಾನೂನಿನ ಶುಷ್ಕ ಸಿಕ್ಕುಗಳಿಗೆ ಸಿಕ್ಕದಂತೆ, ವಿಳಂಬ ತಪ್ಪಿಸಿ, ಸಮಯ ಮತ್ತು ದುಡ್ಡಿನ ಉಳಿತಾಯ ಮಾಡಿಕೊಂಡು ಮಾನವೀಯ ನೆಲೆಯಲ್ಲಿ ನ್ಯಾಯವನ್ನು ದೊರಕಿಸಿಕೊಳ್ಳಲು ಸಾದ್ಯವಾಗುವಂತೆ, ಮಾಡಿದ ಈ ವ್ಯವಸ್ಥೆ ಅತ್ಯಂತ ಪ್ರಶಂಸನೀಯ.

ಸಿರಿಗೆರೆ, ಸಾಣೆಹಳ್ಳಿ ಮುಂತಾದ ಸಾದಲಿಂಗಾಯತ ಮಠಗಳು ಪ್ರಸಿದ್ಧಿ ಪಡೆದಿವೆ. (ಸಾಣೆಹಳ್ಳಿ ಮಠ ನಾಟಕೋತ್ಸವ ನಡೆಸುವಲ್ಲಿ ಹೆಸರುವಾಸಿ.) ಇವು ಸ್ವರೂಪದಲ್ಲಿ ವಿರಕ್ತ ಮಠಗಳು. ಇವುಗಳಿಗೆ ಹೊರತಾಗಿ ಅಲ್ಲಲ್ಲಿ 'ಮನೆ-ಮಠ'ಗಳಿರುವುದನ್ನು ಕಾಣುತ್ತೇವೆ. ಇಂಥ ಮಠಗಳು ಪ್ರತ್ಯೇಕವಾಗಿರುವುದಕ್ಕಿಂತ ಮನೆಯ ಭಾಗವಾಗಿ ಇಲ್ಲವೆ ಮನೆಗೆ ಹೊಂದಿಕೊಂಡು ಇರುತ್ತವೆ. ಇಂಥ ಮಠಗಳ ಗುರು/ಸ್ವಾಮಿಗಳು ಸಂಸಾರಿಕರು. ಮಠ, ಮಠದ, ಮಠಪತಿ ಎಂದು ಮನೆತನದ ಹೆಸರುಗಳಿರುತ್ತವೆ. ಇವು ಸ್ವರೂಪದಲ್ಲಿ ಕುರುಬರ ಒಡೆಯರ ಮಠಗಳನ್ನು ಹೋಲುತ್ತವೆ. ಇಲ್ಲಿನ ಸ್ವಾಮಿಗಳು ಸ್ಥಳೀಯ ಸಾದ ಜನಾಂಗದ ಧಾರ್ಮಿಕ ಕ್ರಿಯೆಗಳನ್ನು ನಡೆಸಿಕೊಡುತ್ತಾರೆ.

—-

**(ಸಂಖ್ಯಾಗೊಂದಲ / ಚುಕ್ಕಿಚಿಹ್ನೆಯ ಗೊಂದಲಇರುವುದರಿಂದಈಅಧ್ಯಾಯದಕೆಲವುಅಡಿಟಿಪ್ಪಣಿಗಳನ್ನುನಮೂದಿಸಿಲ್ಲ)**

[1]ಮಹದೇವ ಬಣಕಾರ ವಿಶ್ವಬಂಧು ಮರುಳಶಿದ ಕಾವ್ಯ, ಪ್ರಸ್ತಾವನೆ ಪು. ೧೪, ತರಳಬಾಳು ಪ್ರಕಾಶನ, ಸಿರಿಗೆರೆ ೫೭೭೫೪೧ (೧೯೮೯).

[2]ಡಾ. ಬಿ. ಜಿ. ಬಿರಾದಾರ 'ರೇವಣಸಿದ್ದೇಶ್ವರ' ಪ್ರಬಂಧ, 'ಹಾಲುಮತ ವ್ಯಾಸಂಗ-೧' ಪು ೧೮೯, ಕನ್ನಡ ವಿಶ್ವವಿದ್ಯಾಲಯ, ಹಂಪಿ (೨೦೦೯)

[3]ಅದೇ ಪುಟ ೧೮೩.

[4]ನೋಡಿ 'ಸಿದ್ದಮಂಕ ಚರಿತೆ' ಸಂ. ಡಾ. ಎಂ. ಎಂ. ಕಲಬುರ್ಗಿ, ಡಾ. ವೈ. ಸಿ. ಭಾನುಮತಿ, ಲಿಂಗಾಯತ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ (೨೦೦೪).

[5]ಪ್ರೊ. ಎಸ್. ಎಸ್. ಹಿರೇಮಠ, 'ಜನಪದ ಸಮಾಜ ಸಂಸ್ಕೃತಿ' ಪು. ४೫, ಸೂರ್ಯಪ್ರಕಾಶನ ಮಲ್ಲಾಡಿಹಳ್ಳಿ ೫೭೭೫೩೨ (೨೦೦೫).

[6]ಶಂಬಾ (ಜೋಶಿ) ಕೃತಿ ಸಂಪುಟ ೧ ಪು. ೨೦೧, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು ೧೮ (೧೯೯೯).

[7]ವಿವರಗಳಿಗೆ ನೋಡಿ : ಡಾ. ಎಂ. ಎಂ. ಕಲಬುರ್ಗಿ 'ಸಂಸ್ಕೃತಿ ವಿಕೃತಿ' ಪು. ೧೪೦-೪೨ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು-೨ (೨೦೦೬).

[8]ಅದೇ ಪುಟ ೫೩.

[9]ಟಿಪ್ಪಣಿ ೧ರಲ್ಲಿ ಉಲ್ಲೇಖಿತ ಗ್ರಂಥ, ಪು ೨೭೯.

[10]ಅದೇ ಪುಟ ೩೦.

[11]ಅದೇ ಪುಟ ೨೫೪

[12]ಡಾ. ಎಂ. ಎಂ. ಕಲಬುರ್ಗಿ (ಸಂ) 'ತಗರ ಪವಾಡ' ವಿದ್ಯಾನಿಧಿ ಪ್ರಕಾಶನ ಗದಗ (೨೦೦೪)

[13]ದಿನಾಂಕ ೧೦-೯-೨೦೦೯ರ ಪ್ರಜಾವಾಣಿ.

# ೧೮. ದಾಸಕುರುಬರು

'ದಾಸ' ಮತ್ತು 'ಹರಿದಾಸ' 'ದಾಸ' ಎನ್ನುವ ಪರಿಕಲ್ಪನೆ ಮೂಲತಃ ಉಳಿಗಮಾನ್ಯ ಸಂಸ್ಕೃತಿಯಲ್ಲಿ ನಿಷ್ಪನ್ನವಾದುದು. ಊಳಿಗಮಾನ್ಯ ಸಂಸ್ಕೃತಿಯಲ್ಲಿ 'ದಾಸ'ನೆಂದರೆ ತನ್ನ ಯಜಮಾನನಿಗೆ ತನ್ನನ್ನು ಪೂರ್ತಿಯಾಗಿ ಅರ್ಪಿಸಿಕೊಂಡವನು ಎಂದರ್ಥ. ಅಲ್ಲಿ ಅವನು ಮಾಡುವ ಶ್ರಮ ದೊರೆಗೆ ಸಲ್ಲಿಸಿದ ಸೇವೆ. ಆತ ತನ್ನ ಶ್ರಮಕ್ಕೆ ಪ್ರತಿಯಾಗಿ ಏನನ್ನೂ ನಿರೀಕ್ಷಿಸುವುದಿಲ್ಲ. ತನಗೆ ಬಂದೊದಗಿದ ಈ ಸೇವೆಯನ್ನು ತನ್ನ ಪೂರ್ವಜನ್ಮದ ಫಲವೆಂದು ಭಾವಿಸುತ್ತಾನೆ. ಅವನು ತನಗೆ ಒಂದು ಐಡೆಂಟಿಟಿ ಇದೆ ಎಂದೂ ಭಾವಿಸುವುದಿಲ್ಲ. ಯಜಮಾನನನ್ನು ತೃಪ್ತಿಪಡಿಸುವುದೇ ತನ್ನ ಬದುಕಿನ ಪರಮಗುರಿ ಎಂದು ಭಾವಿಸುತ್ತಾನೆ. ಭಕ್ತಿಪಂಥದ ಸಂದರ್ಭದಲ್ಲಿ 'ದಾಸ' ಎನ್ನುವ ಪದಕ್ಕೆ ಅಲೌಕಿಕ ಆಯಾಮವನ್ನು ಆರೋಪಿಸಲಾಗಿದೆ. ಭಕ್ತಿಪಂಥದಲ್ಲಿ ಹರಿಗೆ ಸಂಬಂಧಪಟ್ಟಂತೆ ಈ ಪದವನ್ನು ವಿಶೇಷವಾಗಿ ಬಳಸಲಾಗುತ್ತದೆ. 'ಶಿವದಾಸ' ಎನ್ನುವ ಪದ ಅಲ್ಲಲ್ಲಿ ಬಳಕೆಯಾಗಿದೆಯಾದರೂ 'ಹರಿದಾಸ' ಎನ್ನುವ ಪದದ ಹಾಗೆ ಚಲಾವಣೆಯಲ್ಲಿ ಉಳಿದುಕೊಂಡಿಲ್ಲ. 'ಹರಿದಾಸರು' ಎಂದರೆ ಹರಿಸರ್ವೋತ್ತಮನಿಗೆ ತನ್ನನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡವರು ಎಂದರ್ಥ.

**ಹರಿದಾಸ ಮತ್ತು ಧರ್ಮರಾಜಕಾರಣ**

ವಾಸ್ತವವಾಗಿ 'ಹರಿದಾಸ' ಎಂಬ ಉದಾರವಾದಿ ವೈದಿಕ ನಿಲುವು ಧಾರ್ಮಿಕ ರಾಜಕಾರಣದ ನಿಷ್ಪನ್ನವಾಗಿದೆ. ವೈದಿಕವು ಆ ಪೂರ್ವದಲ್ಲಿ ವರ್ಣವ್ಯವಸ್ಥೆಯನ್ನು ತುಂಬ ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬಂದುದಾಗಿತ್ತು. ಜನನದೊಂದಿಗೆ ಜಾತಿಗಳು ಚರ್ಮದ ಹಾಗೆ ಅಂಟಿಕೊಂಡು ಬರುತ್ತವೆ ಎಂದು ಅಚಲವಾಗಿ ನಂಬಿತ್ತು. ತನ್ಮೂಲಕ ಸಾಮಾಜಿಕ ಸಂರಚನೆಯಲ್ಲಿ ಚಲನಶೀಲತೆ ಇಲ್ಲದ ಹಾಗೆ ಕಾಪಾಡಿಕೊಂಡು ಬಂದಿತ್ತು. ಜಡವನ್ನು ಪ್ರತಿಪಾದಿಸುವ ವೈದಿಕದ ನಿಲುವಿನಲ್ಲಿರುವ ದೋಷದ ಲಾಭ ಪಡೆಯಲು ಜೈನ ಧರ್ಮ ಹಾಗೂ ಲಿಂಗಾಯತ ಧರ್ಮಗಳು ಹವಣಿಸಿದವು ಎನ್ನುವುದು ಚರಿತ್ರೆಯಲ್ಲಿ ಗೋಚರಿಸುವ ಸತ್ಯವಾಗಿದೆ. ಜೈನರ್ಧಮವು 'ವೃತ' ಎನ್ನುವ ಹೊಸ ಪರಿಕಲ್ಪನೆಯ ಮೂಲಕ ವರ್ಣವ್ಯವಸ್ಥೆಯ ಕೆಳಸ್ಥರದ ಜನಸಮುದಾಯದಲ್ಲಿ ನೂತನ ಸಂಚಲನ ಉಂಟು ಮಾಡಿತು. 'ವೃತದ' ಪರಿಪಾಲನೆಯಿಂದ ವರ್ಣವ್ಯವಸ್ಥೆಯ ಯಾವುದೇ ಸ್ಥರದ ಜನರು 'ಕೇವಲ' ಜ್ಞಾನ ಸಂಪಾದಿಸಿ ಬ್ರಾಹ್ಮಣತ್ವ ಸಾಧಿಸಬಹುದು ಎಂದು ಜೈನಧರ್ಮ ಸಾರಿದ್ದೇ ಈ ಸಂಚಲನಕ್ಕೆ ಕಾರಣವಾಗಿತ್ತು. ಇದೇ ತರನಾಗಿ ಜಡವರ್ಣ ವ್ಯವಸ್ಥೆಯಲ್ಲಿ ಬಹುದೊಡ್ಡ ಕೋಲಾಹಲವನ್ನೆಬ್ಬಿಸಿದವರು ಲಿಂಗಾಯತ ಧರ್ಮದ ಪ್ರತಿಪಾದಕರು. 'ಇಷ್ಟಲಿಂಗ'ವೆಂಬ ನೂತನ ಪರಿಕಲ್ಪನೆ ವರ್ಣವ್ಯವಸ್ಥೆಯ ಕೆಳಸ್ಥರದ ಜನರಲ್ಲಿ ಹಿಂದೆಂದೂ ಕಂಡುಬಂದಿರದ ಸಂಚಲನವನ್ನು ಸೃಷ್ಟಿಸಿತು. ಹೀಗೆ 'ವೃತ' ಹಾಗೂ 'ಇಷ್ಟಲಿಂಗ' ಪರಿಕಲ್ಪನೆಗಳು ವೈದಿಕವು ಪ್ರತಿಪಾದಿಸಿದ ವರ್ಣವ್ಯವಸ್ಥೆಯ ಭದ್ರಕೋಟೆಯಿಂದ ಕೆಳವರ್ಗದ ಜನರಿಗೆ ಬಿಡುಗಡೆಯ ದರಿಯನ್ನು ತೋರಿಸಿದವು. ತತ್ಪರಿಣಾಮವಾಗಿ ಕೆಳವರ್ಗದ ಬಹುಪಾಲು ಜನರು ಜೈನ ಹಾಗೂ ಲಿಂಗಾಯತಕ್ಕೆ ವಲಸೆ ಬಂದರು. ಇಂಥದೊಂದು ವಲಸೆಯನ್ನು ತಡೆದು ನಿಲ್ಲಿಸುವ ಹೊಸ ಕಾರ್ಯಯೋಜನೆಯನ್ನು ರೂಪಿಸುವುದು ವೈದಿಕ ಧರ್ಮಕ್ಕೆ ಅನಿವಾರ್ಯವಾಯಿತು. ಈ ತೆರನಾದ ಬಿಕ್ಕಟ್ಟಿನಲ್ಲಿಯೇ ವೈದಿಕ ಧರ್ಮವು 'ಹರಿದಾಸ' ಎಂಬ ಪರಿಕಲ್ಪನೆಯನ್ನು ಹುಟ್ಟುಹಾಕಿಕೊಂಡಿತು. ಕೆಳವರ್ಗದ ಸಮುದಾಯಗಳನ್ನು ತನ್ನ fold ನಲ್ಲಿಯೇ ಉಳಿಸಿಕೊಳ್ಳುವ ಧಾರ್ಮಿಕ-ರಾಜಕಾರಣದ ಪಗಡೆಯಾಟದಲ್ಲಿ ವೈದಿಕ ಧರ್ಮವು ಇಟ್ಟ ಚಾಣಾಕ್ಷ ನಡೆ ಇದಾಗಿತ್ತು. ಹಿಂದೂ fold ನ ಕೆಳಸಮುದಾಯಗಳು ಅನ್ಯಧರ್ಮಕ್ಕೆ ವಲಸೆ ಹೋಗದ ಹಾಎ ಹಿಂದುಧರ್ಮ ರಚಿಸಿಕೊಂಡ safety volve ಇದಾಗಿತ್ತು. 'ಹರಿಗೆ' ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡು ಹರಿಯ ನಾಮಸ್ಮರಣೆ ಮಾತ್ರದಿಂದಲೇ ಮುಕ್ತಿಯನ್ನು ಸಾಧಿಸಬಹುದು ಎಂದು ಪರಿಕಲ್ಪನೆ ಸಾರಿತು. ಹಾಗೂ ಆ ಮೂಲಕ 'ವಲಸೆ' ಪ್ರಮಾಣವನ್ನು ಗಣನೀಯವಾಗಿ ತಗ್ಗಿಸುವಲ್ಲಿ

ಸಫಲವಾಯಿತು. ಒಂದರ್ಥದಲ್ಲಿ ವೈದಿಕವು ಕೆಳವರ್ಗದ ಜನರ ಬಗೆಗೆ ಇರುವ ತನ್ನ ನಿಲುವನ್ನು ಮರುವ್ಯಾಖ್ಯಾನಿಸಿಕೊಂಡ ಪ್ರಸಂಗ ಇದಾಗಿತ್ತು. ಹೀಗೆ ಉಗಮವಾದ ಈ ಪಂಥಕ್ಕೆ ಒಲಿದ ಕೆಳವರ್ಗದವರಲ್ಲಿ ಕುರುಬರು, ಗೊಲ್ಲರು ಹಾಗೂ ಹೊಲೆಯರು ಪ್ರಮುಖರು. ಹರಿದಾಸಕ್ಕೆ ಒಲಿದ ಇವರನ್ನು ಕುರುಬದಾಸರು, ಗೊಲ್ಲದಾಸರು ಹಾಗೂ ಹೊಲೆಯರು ಎಂದು ಗುರುತಿಸಲಾಗುತ್ತದೆ.

**ವಿಷ್ಣು ಹಾಗೂ ಕುರುಬರು**

ಕುರುಬರು 'ದಾಸ' ಪಂಥಕ್ಕೆ ಒಲಿದುದಕ್ಕೆ ಮೂಲದಲ್ಲಿಯೇ ವಿಷ್ಣುವಿನ ಬಗೆಗೆ ಅವರಲ್ಲಿದ್ದ ಅಲ್ಪಸ್ವಲ್ಪ ಪ್ರಮಾಣದ ಅನುರಕ್ತಿಯೂ ಕಾರಣ. ಕುರುಬ ಸಂಬಂಧಿ ಪುರಾಣಕಥನಗಳಲ್ಲಿ, ಕುರುಬರ ನಂಬಿಕೆ ಆಚರಣೆಗಳಲ್ಲಿ ಶಿವನಿಗೆ ಪ್ರಮುಖವದ ಸ್ಥಾನವಿದೆ. ಆದಾಗ್ಯೂ ಅವರು ಹರಿಯನ್ನು ಸ್ಮರಿಸದೇ ಬಿಟ್ಟಿಲ್ಲ. ಕುರುಬರ ಆರಾಧ್ಯ ದೈವಗಳಾದ ಪದ್ಮಗೊಂಡ, ಬೀರಪ್ಪ, ಮಾಳಿಂಗರಾಯ, ಮೈಲಾರಲಿಂಗ, ಅಮೋಘಸಿದ್ಧ ಮುಂತಾದವರು ಶೈವದೊಂದಿಗೆ ಸಮೀಕರಣಗೊಂಡವರು. ಪದ್ಮಗೊಂಡನನ್ನು ಶಿವಪದ್ಮಗೊಂಡನೆಂತಲೂ, ಬೀರಪ್ಪನನ್ನು ಶಿವಸಿದ್ಧ ಬೀರಪ್ಪನೆಂತಲೂ, ಅಮೋಘಸಿದ್ಧನನ್ನು ಶಿವನ ಮನೆಯ ಸಿದ್ಧನೆಂತಲೂ ಕರೆದುಕೊಂಡಿದ್ದಾರೆ. ಹೀಗಿದ್ದರೂ ಹರಿಯನ್ನು ಅಲ್ಲಲ್ಲಿ ಉಲ್ಲೇಖಿಸುವುದನ್ನು ಬಿಟ್ಟಿಲ್ಲ. ಕಾಳಿನಾರಾಯಣ (ವಿಷ್ಣು)ನು ಬೀರಪ್ಪ ತಾಯಿ ಸುರಾವತಿ (ಸರಸ್ವತಿ)ಯ ಅಣ್ಣ ಎಂದು 'ಜಾನಪದ ಹಾಲುಮತ ಕಾವ್ಯ' (ಸಂ. ಡಾ. ವೀರಣ್ಣ ಡೆ) ಹೇಳಿದರೆ, ಶಿವನಿಗೆ ಕೈಲಾಸದಲ್ಲಿ ಪಟ್ಟಗಟ್ಟುವ ಸಂದರ್ಭದಲ್ಲಿ ಸ್ವತಃ ಹರಿಯೇ ಕಂಬಳಿ ನೇಯ್ದು ತಂದು ಆಹೇರಿ ಮಾಡಿದ ಎಂದು ಇನ್ನೊಂದು ಮೌಖಿಕ ಪರಂಪರೆಯ ಪುರಣಕಥನ ಹೇಳುತ್ತದೆ. ತಿರುಪತಿ, ತುಳಜಮ್ಮ ಜಟ್ಟಿಗ ಇವರೆಲ್ಲ ಭಟ್ಕಳದ ಗೊಂಡ ಕುರುಬರ ಆರಾಧ್ಯ ದೈವಗಳು, 'ಜಟ್ಟಿಗ' ಎಂದು ಪೂಜೆಗೊಳ್ಳುತ್ತಿರುವ ಗೊಂಡ ದೇವನ ಮೂಲಪುರುಷ ದೇವಮಲ್ಲ. ಈ ದೇವಮಲ್ಲನು ಕೃಷ್ಣನ ಪರಮಭಕ್ತನಾಗಿದ್ದನೆಂದೂ, ಅವನ ಭಕ್ತಿಗೆ ಪ್ರತಿಯಾಗಿ ಕೃಷ್ಣನಿಂದ ದೇವಮಣಿಯನ್ನು ಪಡೆದಿದ್ದನೆಂದೂ ಅವರು ಕಥನಕಟ್ಟಿಕೊಂಡಿದ್ದಾರೆ. ಅಮೋಘಸಿದ್ಧ ಶಿವನ ಪರಮ ಭಕ್ತ ನಿಜ. ಆದರೆ ಅವನ ಮೂವರು ಪುಣ್ಯದ ಮಕ್ಕಳಲ್ಲಿ ಒಬ್ಬನಾದ ತೆರೆವಾಡದ ಮಂಗರಾಯನನ್ನು ವಿಷ್ಣುವಿನ ಅವತಾರವೆಂದು ಅಮೋಘಸಿದ್ಧನ ಕುರಿತ ಪುರಾಣ ಕಥನಗಳು ಹೇಳುತ್ತವೆ. ಮಹಾರಾಷ್ಟ್ರದ ಧನಗರರಲ್ಲಿ 'ಹಟ್ಕಾರ' ಎಂಬ ಪಂಗಡವೊಂದಿದೆ. ಇವರ ಕುಲದೇವತೆ ಕೃಷ್ಣನಾಗಿದ್ದಾನೆ. ಪ್ರತಿ ಶನಿವಾರ ಅವರು ಕೃಷ್ಣನ ಪೂಜೆ ಮಾಡುತ್ತಾರೆ. ಗೋಪಾಲಕರಾದ ಅವರು ಶನಿವಾರದಂದು ತಮ್ಮ ಗೋವುಗಳ ಹಾಲನ್ನು ಕರೆಯುವುದಿಲ್ಲ. ಸಂಕ್ರಾಂತಿ ಹಬ್ಬದ ಸಂದರ್ಭದಲ್ಲಿ ಗೋವರ್ಧನಗಿರಿಯ ಪ್ರತಿಕೃತಿಯನ್ನು ಬಯಲಿನಲ್ಲಿ ನಿರ್ಮಿಸಿ ಅದನ್ನು ಭಕ್ತಿಭಾವದಿಂದ ಪೂಜಿಸುತ್ತಾರೆ. ಕನಕದಾಸರ ಪೂರ್ವಜರ ಮನೆದೇವರು ತಿರುಪತಿ ತಿಮ್ಮಪ್ಪನಾಗಿದ್ದನೆನ್ನುವುದು ಸರ್ವವಿಧಿತ. ಕುರುಬರಿಗೂ ಹರಿಗೂ ಇಂಥ ಸಂಬಂಧಗಳು ಇದ್ದುದರಿಂದ 'ಹರಿದಾಸ' ಪಂಥಕ್ಕೆ ಅವರು ಒಲವು ತೋರಿದ್ದು ಅವರ ಕಿರು ನಂಬಿಕೆಯ ವಿಸ್ತರಣೆಯಾಗಿದೆ ಅನ್ನಿಸುತ್ತದೆ.

**ತಿರುಪತಿ ಶೃದ್ಧಾಕೇಂದ್ರ**

ಕರ್ನಾಟಕದ ದಾಸಕುರುಬರ ಶ್ರದ್ಧಾಕೇಂದ್ರ ತಿಮ್ಮಪ್ಪನ ನೆಲೆಯಾದ ತಿರುಪತಿಯಾಗಿದೆ. ಕರ್ನಾಟಕದಲ್ಲಿ ಅಲ್ಲಲ್ಲಿ ಚದುರಿದಂತೆ ಇರುವ ಇವರು ಚಿತ್ರದುರ್ಗ ಜಿಲ್ಲೆಯಲ್ಲಿ ವಿಪುಲ ಸಂಖ್ಯೆಯಲ್ಲಿದ್ದಾರೆ. ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆಯ ಭಾಗದಲ್ಲಿ ಕ್ಷೇತ್ರಕಾರ್ಯ ನಡೆಯಿಸಿದಾಗ ದಾಸಕುರುಬರ ನಂಬಿಕೆ ಆಚರಣೆಗಳ ಕುರಿತು ತುಂಬಾ ಕುತೂಹಲಕರವಾದ ಅಂಶಗಳು ತಿಳಿದು ಬಂದವು. ಅವರು ದಾಸ ದೀಕ್ಷೆ ಪಡೆಯುವ ರೀತಿ, ಆನಂತರ ಅವರು ಧರಿಸುವ ವೇಷ-ಭೂಷಣ, ಉಡುಗೆ-ತೊಡುಗೆಗಳು, ಅವರ ಆಚರಣೆ, ನಂಬಿಕೆಗಳು, ವಿಧಿ ನಿಷೇಧಗಳು ಸಂಸ್ಕೃತಿ ಅಧ್ಯಯನ ಮಾಡುವವರಿಗೆ ವಿಪುಲವಾದ ಸಾಮಗ್ರಿ ಇಲ್ಲಿರುವುದು ತಿಳಿದುಬರುತ್ತದೆ.

**ದಾಸಪ್ಪ ದೀಕ್ಷೆ**

ದಾಸಕುರುಬರಾದವರು ಕಡ್ಡಾಯವಾಗಿ ತಮ್ಮ ಮನೆಯ ಗಂಡಸು ಮಕ್ಕಳಿಗೆ 'ದಾಪ್ಪದೀಕ್ಷೆ' ಯನ್ನು ಕೊಡಿಸುತ್ತಾರೆ. ಈ ದೀಕ್ಷೆ ಮನೆಯ ಗಂಡಸುಮಕ್ಕಳಿಗೆ ಮಾತ್ರ ಎನ್ನುವುದನ್ನು 'ದಾಸಪ್ಪ'ದಲ್ಲಿರುವ ಪುರುಷವಾಚಕವೇ ಸಾರುತ್ತದೆ. ದಾಸಕುರುಬ ಮನೆಯ ಹೆಣ್ಣುಮಗುವು ಈ ದೀಕ್ಷೆಯಿಂದ ವಂಚಿತವಾಗಿದೆ. ಹೆಣ್ಣುಮಗುವಿಗೆ 'ದಾಸಪ್ಪ ದೀಕ್ಷೆ' ವರ್ಜ್ಯವೆಂದು ದಾಸಕುರುಬ ಅಚಲವಾದ ನಂಬಿಕೆ. ಇಂಥ ಅಚಲ

ನಂಬಿಕೆಯ ಹಿಂದೆ ಮಾಧ್ವ ಪ್ರಣೀತ ಹರಿದಾಸ ಸಿದ್ಧಾಂತ ಕೆಲಸ ಮಾಡಿರುವುದನ್ನು ಅಲ್ಲಗಳೆಯಲಾಗುವುದಿಲ್ಲ. ಮಧ್ವಾಚಾರ್ಯರ ಹರಿದಾಸ ಸಿದ್ಧಾಂತವನ್ನು ಶ್ರೀಪಾದರಾಯರು ಹೀಗೆ ಸಂಗ್ರಹಿಸಿದ್ದಾರೆ.

“ಶ್ರೀ ಮನ್ಮಧ್ವಮತೇ ಹರಿಃ ಪರತರಃ ಸತ್ಯಂ ಜಗತ್ವತ್ತ್ವತೋ
ಭೇದೋ ಜೀವಗಣರನುಚರಾಃ ನಿಚೋಚ್ಚವಂಗತಾಃ
ಮುಕ್ತಿರ್ನೈಜ ಸುಖಾನುಭೂತಿರಮಲಾ ಭಕ್ತಿಷ್ವ ತತ್ಸಾಧನಂ
ಹ್ಯಷಾದಿತ್ರಿಯಂ ಪ್ರಮಾಣ ಮುಖೀಲಾಮ್ನಾಯ್ಯರ ವೇದ್ಯೋಹರಿಃ

ಈ ಶ್ಲೋಕವನ್ನು ಆಧರಿಸಿ ನವರತ್ನ ಮಾಲೆ ಸೂತ್ರವನ್ನು ರೂಪಿಸಲಾಗಿದೆ. ಆ ಒಂಭತ್ತು ಸೂತ್ರಗಳು ಹೀಗಿವೆ. ೧. ಹರಿಯೇ ಸರ್ವೋತ್ತಮ ೨. ಜಗತ್ತು ಪಾರಮಾರ್ಥಿಕ ಸತ್ಯ ೩. ಜೀವಗಳಲ್ಲಿ ಭೇದವೂ ಸಹಪಾರಮಾರ್ಥಿಕ ಸತ್ಯ ೪. ಎಲ್ಲ ಜೀವಿಗಳು ಹರಿಯ ಅನುಚರರು ೫. ಉಚ್ಚನೀಚರೆಂಬ ತಾರತಮ್ಯನಿರಂತರ ೬. ನಿರ್ಮಲ ಭಕ್ತಿಯೇ ಮುಕ್ತಿಗೆ ಸಾಧನ ೭. ಸ್ವಸ್ವರೂಪ ಸುಖಾನುಭವವೇ ಮುಕ್ತಿ ೮. ಪ್ರತ್ಯಕ್ಷ ಅನುಮಾನ ಆಗಮಗಳೇ ಸಾಧಕನ ಪ್ರಮಾಣಗಳು ೯. ಹರಿಯನ್ನು ವೇದಗಳಿಂದ ಮಾತ್ರ ಅರಿಯಲು ಸಾಧ್ಯ. ಈ ನವರತ್ನ ಸೂತ್ರದಲ್ಲಿ ಬರುವ ಮೂರನೆಯ ಹಾಗೂ ಐದನೆಯ ಸೂತ್ರಗಳು ಹರಿದಾಸಪಂಥದ ಅನುಯಾಯಿಗಳನ್ನು ತುಂಬಾ ಪ್ರಭಾವಿಸಿವೆ. ಅಂತೆಯೇ ದಾಸಕುರುಬರನ್ನೂ ಸಹ. ಈ ಹಿನ್ನೆಲೆಯಲ್ಲಿ ಲಿಂಗಬೇಧವನ್ನು ಆ ಮೂಲಕ ಪುರುಷ ಪಾರಮ್ಯವನ್ನು ದಾಸಕುರುಬರು ಸ್ವೀಕರಿಸುವುದನ್ನು ಅವರ ‘ದಾಸಪ್ಪ ದೀಕ್ಷೆ’ ಎಂಬ ಪುರುಷ ಕೇಂದ್ರಿತ ಆಚರಣೆಯಲ್ಲಿ ಕಾಣಬಹುದು.

ದಾಸಪ್ಪ ದೀಕ್ಷೆಯನ್ನು ಅವರು ತಿರುಪತಿಯ ತಿಮ್ಮಪ್ಪನ ಅರ್ಚಕರ ಹೊರತು ಬೇರೆ ಯಾರ ಕಡೆಯಿಂದಲೂ ಕೊಡಿಸುವುದಿಲ್ಲ. ಗಂಡು ಮಗುವು ಹದಿನೈದು ವರ್ಷದವನಾಗುವುದರೊಳಗೇ ದಾಸಪ್ಪ ದೀಕ್ಷೆಯನ್ನು ಪಡೆಯಲೇಬೇಕು. ತಿರುಪತಿಗೆ ಗಂಡುಮಗುವನ್ನು ಕರೆದುಕೊಂಡು ಹೋಗುವ ಪೂರ್ವದಲ್ಲಿ ದಾಸಕುರುಬರು ತಮ್ಮ ಮನೆಯಲ್ಲಿಯೇ ಒಂದು ಸಣ್ಣ ಆಚರಣೆಯನ್ನು ಮಾಡಿಸುತ್ತಾರೆ. ದಾಸಪ್ಪನಾಗಲಿರುವ ಹುಡುಗನಿಗೆ ಒಂದು ಶುಭದಿನದಂದು ಶುಭ್ರಸ್ನಾಮಾಡಿಸಿ ಹೊಸ ಬಟ್ಟೆ ತೊಡಿಸುತ್ತಾರೆ. ಕಂಬಳಿ ಹಾಸಿ ಸಾಸಕ್ಕಿ ಹೊಯ್ದು ಅದರ ಮೇಲೆ ಆ ಹುಡುಗನನ್ನು ಕೂಡ್ರಿಸುತ್ತಾರೆ. ಅವನ ಕೈಗೆ ಕಂಕಣ ಕಟ್ಟುತ್ತಾರೆ. ಮನೆಯ ಮಹಿಳೆಯರು ಅವನಿಗೆ ಆರತಿ ಬಳಸುತ್ತಾರೆ. ಇಡೀ ಆಚರಣೆ ಮದುವೆಯ ಸಂದರ್ಭದಲ್ಲಿ ನೆನಪಿಸುವಂತೆ ಇರುತ್ತದೆ. ತಿರುಪತಿ ತಿಮ್ಮಪ್ಪನೊಂದಿಗೆ ಈ ಹುಡುಗನ ವಿವಾಹವಾಯಿತು ಎನ್ನುವುದನ್ನು ನೆನಪಿಸುವಂತೆ ಇಡೀ ಆಚರಣೆ ಇರುತ್ತದೆ.

ಬಲಕ್ಕೆ ಚಕ್ರ ಎಡಕ್ಕೆ ಶಂಖ ಮನೆಯಲ್ಲಿ ಈ ಆಚರಣೆ ಮುಗಿದ ನಂತರ ಹುಡುಗನನ್ನು ಕರೆದುಕೊಂಡು ತಿರುಪತಿಗೆ ಪ್ರಯಾಣ ಬೆಳೆಯಿಸುತ್ತಾರೆ. ತಿರುಪತಿ ತಲುಪಿದ ನಂತರ ತಿಮ್ಮಪ್ಪನ ಅರ್ಚಕರನ್ನು ಭೆಟ್ಟಿಯಾಗಿ ದೀಕ್ಷೆ ನೀಡುವ ದಿನಾಂಕವನ್ನು ನಿಗದಿ ಮಾಡಿಕೊಳ್ಳುತ್ತಾರೆ. ನಿಗದಿಯಾದ ದಿನದಂದು ನಸುಕಿನಲ್ಲಿಯೇ ಸ್ನಾನ ಮಾಡಿಸಿ ಅವನ ಭುಜಕ್ಕೆ ಬಿಳಿನಾಮ ಲೇಪಿಸಿ ಸ್ವಾಮಿಯ ಸನ್ನಿಧಾನಕ್ಕೆ ಕರೆತರುತ್ತಾರೆ. ಅಲ್ಲಿ ಅರ್ಚಕನಾದವನು ಬಿಳಿನಾಮ ಲೆಪಿತ ಭುಜಗಳಿಗೆ ವಿಶಿಷ್ಟವಾದ ಮುದ್ರೆಗಳನ್ನು ಒತ್ತುತ್ತಾನೆ. ಮುದ್ರೆ ಒತ್ತಲು ಅರ್ಚಕರು ತಾಮ್ರ ಲೋಹದ ಅಚ್ಚುಗಳನ್ನು ಬಳಸುತ್ತಾರೆ. ಮುದ್ರೆ ಸ್ಥಿರವಾಗಿ ಅವನ ಭುಜದ ಮೇಲೆ ಉಳಿಯಲಿ ಎನ್ನುವ ಉದ್ದೇಶದಿಂದ ತಾಮ್ರದ ಅಚ್ಚುಗಳನ್ನು ಕರ್ಪೂರದ ಉರಿಯಲ್ಲಿ ಕಾಯಿಸಿ ಭುಜಗಳಿಗೆ ಹಚ್ಚುತ್ತಾರೆ. ‘ಚಕ್ರ’ದ ಅಚ್ಚು ಇರುವ ಮುದ್ರೆಯನ್ನು ಬಲಭುಜದ ಮೇಲೆ ಹಾಗೂ ‘ಶಂಖ’ದ ಅಚ್ಚು ಇರುವ ಮುದ್ರೆಯನ್ನು ಎಡಭುಜದ ಮೇಲೆ ಒತ್ತಲಾಗುತ್ತದೆ. ಹೀಗೆ ಸುಟ್ಟ ಗಾಯದ ಹಕ್ಕಳೆ ಕಿತ್ತು ಕೆಲವು ದಿವಸಗಳಲ್ಲಿ ಶಂಖ ಹಾಗೂ ಚಕ್ರದ ಮುದ್ರೆಗಳು ಅವನ ಭುಜಗಳ ಮೇಲೆ ಶಾಶ್ವತವಾಗಿ ಉಳಿಯುತ್ತವೆ. ಹೀಗೆ ಕುರುಬನಾದ ಈ ಹುಡುಗ ಕುರುಬದಾಸಪ್ಪನಾಗಿ ಹರಿಯ ಒಕ್ಕಲಾಗಿ ಪರಿವರ್ತನೆಗೊಳ್ಳುತ್ತಾನೆ.

**ಹಣೆಗೆ ನಾಮ ಕೊರಳಿಗೆ ತುಳಸಿಮಾಲೆ**

ಶಂಖಚಕ್ರ ಲಾಂಛನಗಳು ಅವನ ಭುಜದ ಮೇಲೆ ಬಿದ್ದ ನಂತರ, ದಾಸಪ್ಪನು ವಿಶೇಷವದ ವೇಷಭೂಷಣ ಧರಿಸಲು ಪ್ರಾರಂಭಿಸುತ್ತಾನೆ. ದಾಸಪ್ಪನಾದವನು ನಿತ್ಯಸ್ನಾನ ಮಾಡಲೇಬೇಕು. ಸ್ನಾನವಾದ ನಂತರ ಹಣೆಯ ಮೇಲೆ ಲಂಬವಾಗಿ ಎರಡು ಬಿಳಿನಾಮ ಹಾಗೂ

ಅವುಗಳ ಮಧ್ಯ ಒಂದು ಕೆಂಪು ನಾಮವನ್ನು ಧಾರಣೆ ಮಾಡಿಕೊಳ್ಳುತ್ತಾನೆ. ಈ ರೀತಿ ಹಳದಿ ಭಂಡಾದ ಜಾಗೆಯಲ್ಲಿ ಗಂಧದ ಬಿಳಿಕೆಂಪು ಬಳಿದುಕೊಂಡು ಹೊಸ ಲಾಂಛನಕ್ಕೆ ಪಲ್ಲಟಗೊಳ್ಳುತ್ತಾನೆ. ಹೀಗೆ ಲಾಂಛನ ಪಲ್ಲಟ ಮಾಡಿಕೊಂಡ ದಾಸಪ್ಪ ತನ್ನದೇ ಕುರುಬ ಜಾತಿಯವರಿಗಿಂತ ತಾನು ತುಸು ಮೇಲಂತಸ್ತಿನವನು ಎಂದು ಭಾವಿಸುತ್ತಾನೆ. ಭಂಡಾರಕ್ಕಿಂತ ಗಂಧ ಶ್ರೇಷ್ಠವೆಂಬ ಮೇಲರಿಮೆ ದಾಸಪ್ಪನಲ್ಲಿರುತ್ತದೆ.

**ಪೈಜಾಮ-ಮಡಿ**

ದಾಸಪ್ಪನಾದವನು ತನ್ನ ವೇಷದ ಮೂಲಕವೂ ತನ್ನನ್ನು ಅನ್ಯ ಕುರುಬರಿಗಿಂತ ಭಿನ್ನ ಎಂದು ಬಿಂಬಿಸಲು ಪ್ರಯತ್ನಿಸುತ್ತಾನೆ. ದಾಸಪ್ಪನಾದ ಈತ ಈಗ ಸಡಿಲವಾದ ಪೈಜಾಮವನ್ನು ಧರಿಸಿ ಮೇಲೆ ಅಂಗಿಯನ್ನು ತೊಡುತ್ತಾನೆ. ಸೊಂಟಕ್ಕೆ 'ಮಡಿ' ಯನ್ನು ಕಟ್ಟಿಕೊಳ್ಳುತ್ತಾನೆ. ಈ 'ಮಡಿ' ರೇಷ್ಮೆ ಬಟ್ಟೆಯದಾಗಿದ್ದು ಕೆಂಪು, ಹಳದಿ, ಹಸಿರು ಯಾವುದಾದರೂ ಬಣ್ಣದ್ದಾಗಿರಬಹುದು 'ಮಡಿ' ಎನ್ನುವ ಶಬ್ಧವೇ ತಾನು ಅನ್ಯ ಕುರುಬರಿಗಿಂತ ಶ್ರೇಷ್ಠವೆನ್ನುವ ಭಾವವನ್ನು ಮೂಡಿಸುತ್ತದೆ. ಮಾಂಸಾಹಾರಿಗಳಾದ ಕುರುಬರು ಮೈಲಿಗೆಯವರು, ತಾನು ಅದನ್ನು ತ್ಯಜಿಸಿ ಹೊಟ್ಟೆಯ ಸುತ್ತಲೂ 'ಮಡಿ' ಸುತ್ತಿಕೊಂಡು 'ಮಡಿವಂತ' ನಾಗಿರುವೆ ಎಂದು ಸಾರುತ್ತದೆ. ಈ 'ಮಡಿ'ಧಾರಣೆ ಇದು ಕೂಡಾ ಹರಿದಾಸಪಂಥ ಬೋಧಿಸುವ ಭೇದ ಸಂಸ್ಕೃತಿಯ ದ್ಯೋತಕವೇ ಆಗಿದೆ.

**ಗಂಟೆ-ಜಾಗಟೆ-ಶಂಖ**

ದಾಸಪ್ಪನಾದವನು ಗಂಟೆ ಜಾಗಟೆ ಶಂಖಗಳಿಗೆ ಪೂಜ್ಯ ಸ್ಥಾನವನ್ನು ಕೊಟ್ಟಿದ್ದಾನೆ. ಹರಿಯ ಸಂಕೇತವಾದ ಈ ಲಾಂಛನಗಳನ್ನು ಪೂಜಾ ಸಂದರ್ಭದಲ್ಲಿ ದಾಸಪ್ಪನು ಬಳಸಿಕೊಳ್ಳುತ್ತಾನೆ. ಭಕ್ತರ ಮನೆಗೆ ಕಟ್ಟಳೆ ತೀರಿಸಲು ಹೋಗುವಾಗಲೂ ಈ ಲಾಂಛನಗಳ ಸಮೇತವಾಗಿಯೇ ಹೋಗುತ್ತಾನೆ. ಭಕ್ತರ ಮನೆಯಲ್ಲಿ ಗಂಟೆ, ಜಾಗಟೆ ಬಾರಿಸುತ್ತಾ ಶಂಖನಾದ ಮಾಡುತ್ತ ದೈವಿಕ ವಾತಾವರಣ ಸೃಷ್ಟಿಸುತ್ತಾರೆ.

**ಗರುಡಗಂಬ-ಭನವಾಸಿ**

ಗರುಡಬಂಗವು ವಿಷ್ಣುವಿನ ವಾಹನವಾದ ಗರುಡನ ಸಂಕೇತವಾಗಿ ವಿಷ್ಣು ಭಕ್ತರಾದ ದಾಸಪ್ಪಗಳ ಆಚರಣಾಲೋಕದ ಅವಿಭಾಜ್ಯ ಅಂಗವಾಗಿ ಬಳಕೆಯಾಗುತ್ತದೆ. ಲಿಂಗಾಯಿತರಲ್ಲಿ ಶಿವನ ವಾಹನ ನಂದಿಯ ಸಂಕೇತವಾಗಿ ನಂದಿಕೋಲ ಇದ್ದಂತೆ ದಾಸಪ್ಪಗಳಿಗೆ ಗರುಡಗಂಬವಿರುತ್ತದೆ. ಅದೇ ತೆರನಾಗಿ ಲಿಂಗಾಯಿತದ ಅಯ್ಯನೋರಗಳಿಗೆ 'ಜೋಳಿಗೆ' ಇದ್ದಂತೆ ದಾಸಪ್ಪಗಳಿಗೆ 'ಭನವಾಸಿ' ಇರುತ್ತದೆ. ಇದನ್ನು ಅವರು 'ಬೊವನಾಸಿ' ಎಂದು ಕರೆಯುತ್ತಾರೆ. ಇನ್ನೂ ಕೆಲವೊಂದು ಕಡೆ ಇದಕ್ಕೆ 'ಗೋಪಾಳ ಬುಟ್ಟಿ' ಎಂದು ಕರೆಯುತ್ತಾರೆ. ಈ 'ಭನವಾಸಿ'ಯನ್ನು ಬಗಲಲ್ಲಿ ಹಾಕಿಕೊಂಡು ತಿಮ್ಮಪ್ಪನ ಸೇವೆ ಮಾಡುವುದರಿಂದ 'ಭವ' 'ನಾಶ' ವಾಗಿ ಮುಕ್ತಿಯ ಮಾರ್ಗ ತೆರೆದುಕೊಳ್ಳುತ್ತದೆ ಎಂದು ದಾಸಪ್ಪಗಳು ಅಚಲವಾಗಿ ನಂಬುತ್ತಾರೆ.

**ಕಟ್ಟಳೆ ತೀರಿಸುವುದು**

ವಿಷ್ಣು ಭಕ್ತರ ಮನೆಯಲ್ಲಿ ನಡೆಯುವ ಕಾರ್ಯಗಳನ್ನು ತೀರಿಸಲು ದಾಸಕುರುಬರನ್ನು ಕರೆಯಿಸುವ ಪದ್ಧತಿಯಿದೆ. ಕುರುಬರಲ್ಲದ ವಿಷ್ಣು ಭಕ್ತರೂ ದಾಸ ಕುರುಬರನ್ನು ಇಂಥ ಕಟ್ಟಳೆ ತೀರಿಸಲು ಕರೆಯಿಸಿಕೊಳ್ಳುತ್ತಾರೆ ಎಂದು ಹೊಳಲ್ಕೆರೆಯ ದಾಸ ತಿಮ್ಮಪ್ಪ ಎನ್ನುವವರು ಕ್ಷೇತ್ರಕಾರ್ಯಕ್ಕೆ ಹೋದ ಸಂದರ್ಭದಲ್ಲಿ ನನಗೆ ಹೇಳಿದರು. ಭಕ್ತರ ಮನೆಗೆ ಹರಕೆ ತೀರಿಸಲು ದಾಸಪ್ಪ ಹೊರಟಾದ ಶಂಖ ಜಾಗಟೆ ಭವನಾಸಿ ಗರುಡಗಂಬಗಳೊಂದಿಗೆ ಹೋಗುತ್ತಾನೆ. ಆ ಮನೆಗೆ ಹೋದ ದಾಸಪ್ಪ ವಿಷ್ಣುವಿನ ಗುಣಗಾನ ಮಾಡುವ ಹಾಡುಗಳೊಂದಿಗೆ ಪೂಜೆ ನೆರವೇರಿಸುತ್ತಾನೆ. ಪೂಜೆ ಮುಗಿದ ನಂತರ ದಾಸಪ್ಪನಿಗೆ ಪ್ರಸಾದ ಮಾಡಿಸುತ್ತಾರೆ. ಹಾಗೆ ಪ್ರಸಾದ ಮಾಡಿಸುವಾಗ ಎರಡು ಎಡೆಗಳನ್ನು ಮಾಡಿರುತ್ತಾರೆ. ಅವುಗಳಲ್ಲಿ ಒಂದು ಎಡೆಯನ್ನು ಭಕ್ತರು ಭವನಾಸಿಗೆ ತುಂಬಿಸುತ್ತಾರೆ. ಈ ವಿಧಿಯನ್ನು 'ಗೋಪಾಳ

ತುಂಬಿಸುವುದು' ಎಂದೂ ಕರೆಯುತ್ತಾರೆ. ಉಳಿದ ಇನ್ನೊಂದು ಎಡೆಯನ್ನು ದಾಸಪ್ಪ ಭಕ್ತರ ಮನೆಯಲ್ಲಿಯೇ ಕುಳಿತು ಸ್ವೀಕರಿಸುತ್ತಾರೆ. ಪ್ರಸಾದ ಸ್ವೀಕರಿಸಿದ ನಂತರ ದಾಸಪ್ಪನಿಗೆ ಕಾಣಿಕೆಯನ್ನು ಅರ್ಪಿಸುತ್ತಾರೆ.

ಹರಿಜನರಲ್ಲಿಯೂ ತಿರುಪತಿ ತಿಮ್ಮಪ್ಪನ ಭಕ್ತರಿದ್ದಾರೆ. ಅವರೂ ದಾಸಪ್ಪಗಳನ್ನು ಕಟ್ಟಳೆ ತೀರಿಸಲು ತಮ್ಮ ಮನೆಗೆ ಕರೆಯಿಸಿಕೊಳ್ಳುತ್ತಾರೆ. ಆದರೆ ಅಲ್ಲಿ ಅವರು ಪ್ರಸಾದ ಸ್ವೀಕರಿಸುವುದಿಲ್ಲ. ಹರಿಜನ ಭಕ್ತರಿಂದ ಕಾಣಿಕೆ ಹಾಗೂ ಅಕ್ಕಿ, ಬೇಳೆ, ಬೆಲ್ಲವನ್ನು ತರುತ್ತಾರೆ. ಜಾತಿವ್ಯವಸ್ಥೆಯಲ್ಲಿ ತಮಗಿಂತ ಮೇಲಿನವನಾದ ಲಿಂಗಾಯಿತರ ಮನೆಗಳಿಗೆ ಹೋಗಿ ಅವರ ಮನೆಯಲ್ಲಿ ಪ್ರಸಾದ ಸ್ವೀಕರಿಸಿದ್ದನ್ನು ಹೇಳಿಕೊಂಡಷ್ಟೇ ಅಭಿಮಾನದಿಂದ ಹರಿಜನರ ಮನೆಗಳಿಗೆ ಹೋಗಿ ಅಲ್ಲಿ ಪ್ರಸಾದ ಸ್ವೀಕರಿಸದೇ ಬಂದುದನ್ನು ಅಷ್ಟೆ ಅಭಿಮಾನದಿಂದ ದಾಸಕುರುಬರು ಹೇಳಿಕೊಳ್ಳುತ್ತಾರೆ.

**ತಿರುಪತಿ ಯಾತ್ರೆ**

'ವಾರಕರಿ' ಪಂಥದ ಸಂತರಿಗೆ ಪಂಢರಾಪುರ ಶ್ರದ್ಧಾಕೇಂದ್ರವಾಗಿರುವಂತೆ ತಿರುಪತಿ ದಾಸಪ್ಪಗಳ ಶ್ರದ್ಧಾಕೇಂದ್ರ. ವಾರಕರಿ ಪಂಥದ ಸಂತರು ಪಂಢರಪುರಕ್ಕೆ 'ದಿಂಡಿ' ಹೋಗುವಂತೆ ದಾಸಪ್ಪಗಳು ತಿರುಪತಿಗೆ ಯಾತ್ರೆ ಹೋಗುತ್ತಾರೆ. ದಾಸಪ್ಪಗಳು ತಿರುಪತಿಗೆ ಹೋಗಿ 'ಸ್ವಾಮಿ ದರ್ಶನ' ಮಾಡಿಕೊಂಡು ಬರುವುದನ್ನು ತಮ್ಮ ಬದುಕಿನ ಬಹುದೊಡ್ಡ ಪುಣ್ಯವಿಶೇಷವೆಂದು ಭಾವಿಸುತ್ತಾರೆ. ದಾಸಪ್ಪಗಳು. ತಾವು ಅನ್ಯರಿಗಿಂತ ಹೆಚ್ಚುವರಿ ತಿರುಪತಿಗೆ ಹೋಗಿ ಸ್ವಾಮಿ ದರ್ಶನ ಮಾಡಿಕೊಂಡು ಬಂದಿದ್ದೇನೆ ಎಂದು ಅಭಿಮಾನದಿಂದ ಹೇಳಿಕೊಂಡರು. ವಕ್ತೃವಿನ ಮುತ್ತಜ್ಜನಾದ ವರದಜ್ಜ ಎನ್ನುವವರು ವಾಹನ ಸೌಕರ್ಯಗಳಿಲ್ಲದ ಹಿಂದಿನ ದಿನಮಾನಗಳಲ್ಲಿ ಕಾಲ್ನಡಿಗೆಯಲ್ಲಿಯೇ ಅರವತ್ತು ಸಲ ಸ್ವಾಮಿದರ್ಶನ ಮಾಡಿ ಬಂದಿದ್ದರು ಎಂದು ಭಾವುಕರಾಗಿ ಹೇಳಿದರು. ಕಾಲ್ನಡಿಗೆಯಲ್ಲಿ ಹೊಳಲ್ಕೆರೆಯಿಂದ ತಿರುಪತಿಗೆ ಹೋಗಿ ಬರಲು ಅಂದಿನ ಕಾಲದಲ್ಲಿ ಕನಿಷ್ಟ ಪಕ್ಷ ಐದಾರು ತಿಂಗಳು ಬೇಕಾಗುತ್ತಿತ್ತಂತೆ. ವರದಜ್ಜನಂಥವರು ಬದುಕಿನ ಬಹುಪಾಲನ್ನು ಸ್ವಾಮಿ ದರ್ಶನಕ್ಕಾಗಿಯೇ ಮೀಸಲಿಟ್ಟಿದ್ದನ್ನು ಗಮನಿಸಿದರೆ ತಿರುಪತಿ ತಿಮ್ಮಪ್ಪ ದಾಸಪ್ಪಗಳ ಮನಸ್ಸನ್ನು ಆವರಿಸಿಕೊಂಡ ಪರಿಯ ದರ್ಶನವಾಗುತ್ತದೆ.

**ತಿರುಮಂತ್ರ**

ದಾಸಪ್ಪಗಳು ತಮ್ಮ ಮನೆಯಲ್ಲಿ ಪೂಜೆ ಮಾಡುವಾಗಲಾಗಲೀ ಭಕ್ತರ ಮನೆಗೆ ಕಟ್ಟಳೆ ತೀರಿಸಲು ಹೋದಾಗಲಾಗಲೀ ವಿಷ್ಣುವಿನ ಅಪಾರ ಮಹಿಮೆಯನ್ನು ಸಾರುವ ಹಾಡುಗಳನ್ನು ಹಾಡುತ್ತಾರೆ. ಅವುಗಳ್ಲಲಿ ಹರಕೆಯ ಹಾಡಿನ ಸ್ವರೂಪದ ಹಾಡೊಂದಿದೆ. ಅದನ್ನು ಅವರು ತಿರುಮಂತ್ರ ಎಂದು ಕರೆಯುತ್ತಾರೆ. ಈ ತಿರುಮಂತ್ರ ಹೀಗಿದೆ.

ಸಿರಿವೆಂಕಟಗಿರಿವಾಸ ನಾಮಂದಾಚಾರಿ
ಹರೇ ಹರಿ ವಾರಿಗಳು
ಪುಂಡರೀಕಾಕ್ಷ ಮೂಡಲಗಿರಿವಾಸ
ಮೂವತ್ತು ಗಾವುದಯ್ಯ
ಶ್ರೀನಿವಾಸಾ ಶ್ರೀಮನ್ನಾರಾಯಣ
ನಿನ್ನಕ್ಕಲು ಹೊನ್ನಕ್ಕಲು ಮಾಡುವುದು
ಮುತ್ತೈದಿತನ ವಾರಿ ವಾರಿ ರಕ್ಷಣ ಮಾಡುವುದು
ಭತ್ತ ವತ್ಸಲಾ ಬಂಗಾರಗಿರಿವಾಸ
ಮನೆದೇವರು ಮನೆಗೆ ಬರುವ ಕಾಲದಲ್ಲಿ
ಕಾಂಚಾಣ ಬಂಗಾರ ಕೊಟ್ಟು
ಗುರುವೇ ಶ್ರೀಮನ್ನಾರಾಯಣ

ಭವರೋಗ ವೈದ್ಯ ಅಖಿಲಾಂಡ ಕೋಟಿ
ಬ್ರಹ್ಮಾಂಡ ನಾಯಕಾ ಭಕ್ತರುದ್ಧಾರ ಮಾಡೋ ಗೋವಿಂದಾ ಗೋವಿಂದಾ

ಎಂದು ರಾಗಬದ್ಧವಾಗಿ ಗಂಟೆ, ಜಾಗಟೆ ಬಾರಿಸುತ್ತಾ ಶಂಖನಾದ ಮೊಳಗಿಸಲ್ಪಟ್ಟ ಮಂತ್ರವನ್ನು ಹೇಳುತ್ತಾರೆ.

ಈ ಮಂತ್ರದಲ್ಲಿ ಬರುವ 'ಗಂಡು ಮಕ್ಕಳ ರಕ್ಷಣೆ ಮಾಡುವುದು' ಹಾಗೂ 'ಮುತ್ತೈದಿತನ ವಾರಿವಾರಿ ರಕ್ಷಣ ಮಾಡುವುದು' ಎನ್ನುವಂತಹ ಹರಕೆಗಳು ಲಿಂಗ ತಾರತಮ್ಯವನ್ನು ಒಪ್ಪಿಕೊಂಡ ಪುರುಷ ಕೇಂದ್ರಿತ ನೆಲೆಯಲ್ಲಿ ರೂಪಿತವಾದವುಗಳು. ಪುರುಷ ಪಾರಮ್ಯವನ್ನು ಒಪ್ಪಿಕೊಂಡ ತಾತ್ವಿಕತೆಯಲ್ಲಿ ಮಾತ್ರ 'ಗಂಡುಮಕ್ಕಳ ರಕ್ಷಣೆ ಮಾಡುವುದು' ಎಂದು ಹಾರೈಸಲು ಸಾಧ್ಯ. ಮನೆಯಲ್ಲಿನ ಹೆಣ್ಣು ಮಕ್ಕಳ ಬಗೆಗಿನ ಅಪಾರವಾದ ಉಪೇಕ್ಷೆ ಈ ತೆರನಾದ ತಾತ್ವಿಕತೆಯಲ್ಲಿರುವುದು ಸುಸ್ಪಷ್ಟ. ಅದೂ ಅಲ್ಲದೆ ಮುತ್ತೈದಿತನ ವಾರಿವಾರಿ ರಕ್ಷಣ ಮಾಡುವುದು ಎನ್ನುವ ಹರಕೆ ಮೇಲ್ನೋಟಕ್ಕೆ ಮಹಿಳಾ ಪರವಾಗಿ ಇದ್ದಂತೆ ತೋರಿದರೂ ಅದರ ದೂರಾನ್ವಯದಲ್ಲಿ ಪುರುಷನ/ಪತಿಯ ಆಯುಷ್ಯ ವರ್ಧನೆಯ ಹಾರೈಕೆಯಾಗಿಯೇ ನಿಲ್ಲುತ್ತದೆ.

**ಭಟ್ಕಳದ ಗೊಂಡರು**

ಈಗಾಗಲೇ ಚರ್ಚಿಸಿರುವಂತೆ ಭಟ್ಕಳದ ಸುತ್ತಮುತ್ತಲಿನ ಪರಿಸರದಲ್ಲಿ ವಾಸಿಸುವ ಗೊಂಡ ಕುರುಬರಿಗೂ ತಿರುಪತಿ ತಿಮ್ಮಪ್ಪನೇ ಮನೆದೇವರು. ಇವರು ತಿಮ್ಮಪ್ಪನ ಹೆಂಡತಿಯಾದ ತುಳಜಮ್ಮನ ಪರಮ ಭಕ್ತರು. ತುಳಸೀ ಕಟ್ಟೆಗಳಿಲ್ಲದ ಗೊಂಡರ ಮನೆಯಂಗಳವನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ, ಮದುವೆ, ಬಾಣಂತನ, ಶಿಶುನಾಮಕರಣ ಮುಂತಾದ ಸಂದರ್ಭದಲ್ಲಿ ತುಳಜಮ್ಮನಿಗೆ ತಪ್ಪದೇ ಪೂಜೆ ಸಲ್ಲಿಸುತ್ತಾರೆ. ತುಳಜಮ್ಮ ತಿಮ್ಮಪ್ಪನಿಗೆ ಸಂಬಂಧಿಸಿದಂತೆ ಗೊಂಡರು ಎರಡು ಪ್ರಮುಖ ಹಬ್ಬಗಳನ್ನು ಆಚರಿಸುತ್ತಾರೆ. ಹರ್ದಿನ ಮಾಡಿಸುವುದು ಹಾಗೂ ಚಕ್ರಕಟ್ಟಿಸುವುದು ಎಂದು ಅವುಗಳಿಗೆ ಹೆಸರು.

**ಹರ್ದಿನ ಮಾಡಿಸುವುದು**

ಗೊಂಡರು ಆಚರಿಸುವ ದೊಡ್ಡ ಹಬ್ಬವಿದು. ಹರಿ (ವಿಷ್ಣು> ತಿಮ್ಮಪ್ಪ)ಯನ್ನು ಪೂಜಿಸುವ ದಿನಕ್ಕೆ ಗೊಂಡರು ಹರಿದಿನ ಎಂದು ಕರೆಯುತ್ತಾರೆ. ಈ ಹಬ್ಬವನ್ನು ಸ್ಥಿತಿವಂತ ಗೊಂಡರು ಮಾತ್ರ ಮಾಡಲು ಸಾಧ್ಯ. ಯಾಕೆಂದರೆ ಈ ಹಬ್ಬ ಮಾಡಲು ಇಂದಿನ ದಿನಮಾನದಲ್ಲಿ ಏನಿಲ್ಲೆಂದರೂ ಒಂದು ಲಕ್ಷದಷ್ಟಾದರೂ ಖರ್ಚಾಗುತ್ತದೆ. ಇದು ಒಟ್ಟು ಐದು ದಿವಸಗಳ ಹಬ್ಬ. ಸಾಮಾನ್ಯವಾಗಿ ಈ ಹಬ್ಬ ಮಂಗಳವಾರದಂದು ಪ್ರಾರಂಭವಾಗುತ್ತದೆ. ಮೊದಲನೆಯ ದಿವಸ ಅಂತರ ಚಕ್ರ ಕಟ್ಟಿಸುತ್ತಾರೆ. ಅಂತರ ಚಕ್ರವೆಂದರೆ ತುಳುಜಮ್ಮನ ಕಟ್ಟೆಯಲ್ಲಿ ತಿಮ್ಮಪ್ಪ, ಕಾಳಭೈರವ ಹಾಗೂ ಧರ್ಮಸ್ಥಳದ ಮಂಜುನಾಥ ದೇವರ ಹೆಸರಿನಲ್ಲಿ ಪಾತ್ರೆಗಳನ್ನು ಇಡುವ ಮೂಲಕ ಸ್ಥಾಪಿಸುತ್ತಾರೆ. ಅದೇ ದಿವಸ ಕಟ್ಟೆಯ ಮೇಲೆ ಕಳಸಕನ್ನಡಿಯನ್ನೂ ಇಡುತ್ತಾರೆ. ಇಲ್ಲಿ ಇಡುವ ಕಳಸಕನ್ನಡಿ ಶ್ರೀಕೃಷ್ಣನ ಚಕ್ರವನ್ನು ಹೋಲುತ್ತದೆ. ಬುಧವಾರದಂದು ಹಬ್ಬಕ್ಕೆ ಬೇಕಾಗುವ ವಸ್ತುಗಳ ಯಾದಿ ತಯಾರಿಸಿಕೊಳ್ಳುತ್ತಾರೆ. ಗುರುವಾರದಂದು ಪಟ್ಟಣಕ್ಕೆ ಹೋಗಿ ಹೊಸ ಅಡಿಕೆ ಮತ್ತು ಇತರ ಸಾಮಾನುಗಳನ್ನು ಖರಿದಿಸಿ ತರುತ್ತಾರೆ. ಶುಕ್ರವಾರದಂದು ಸುತ್ತಮುತ್ತಲಿನ ಗೊಂಡರಿಗೆ ವೀಳ್ಯ ಕೊಟ್ಟು ಬರುತ್ತಾರೆ. ಶನಿವಾರದಂದು ಪ್ರಮುಖ ಆಚರಣೆ ನಡೆಯುತ್ತದೆ. ಅಂದು ತುಳಸೀಕಟ್ಟೆಯ ಮುಂದೆ ಬಾಳೆಕಂಬಗಳನ್ನು ಬಳಸಿ ಗೋಪುರ ನಿರ್ಮಿಸುತ್ತಾರೆ. ಅಲ್ಲಿ ಇಟ್ಟಿರುವ ಕಳಸಕನ್ನಡಿಯನ್ನು ಶೃಂಗಾರ ಮಾಡುತ್ತಾರೆ. ಅಂದು ರಾತ್ರಿ ನೂರಾರು ಜನ ಗೊಂಡರು ಸೇರಿಕೊಂಡು ತಿರುಪತಿ ತಿಮ್ಮಪ್ಪನ ನಾಮಸ್ಮರಣೆ ಮಾಡುತ್ತ ತಾಳಬದ್ಧವಾಗಿ ನರ್ತನ ಮಾಡುತ್ತಾರೆ. ಎಲ್ಲರೂ ಸೇರಿ ಪ್ರಸಾದ ಸೇವಿಸುವ ಮೂಲಕ ಕಾರ್ಯಕ್ರಮ ಮುಕ್ತಾಯವಾಗುತ್ತದೆ.

**ಚಕ್ರ ಕಟ್ಟಿಸುವುದು**

ಇದಾದರೂ ತುಳಜಮ್ಮ-ತಿಮ್ಮಪ್ಪರ ಕುರಿತಾದ ಒಂದು ದಿವಸದ ಹಬ್ಬ. ಇಲ್ಲಿಯೂ ಅಂತರ ಚಕ್ರ ಕಟ್ಟಿಸುವುದು, ಕಳಸ-ಕನ್ನಡಿ ಶೃಂಗರಿಸುವುದು ನಡೆಯುತ್ತದೆ. ಅಂದು ಪೂಜೆಗೆಂದು ಬಂದ ಗೊಂಡರು ತಿಮ್ಮಪ್ಪ ಕಾಳಭೈರವ ಹಾಗೂ ಮಂಜುನಾಥ ದೇವರ ಪಾತ್ರೆಗಳಲ್ಲಿ ಹಣದ ರೂಪದ ಕಾಣಿಕೆ ಹಾಕುತ್ತಾರೆ. ಹೀಗೆ ಸಂಗ್ರಹವಾದ ಹಣವನ್ನು ಆಯಾ ದೇವರ ಜಾತ್ರೆಗಳಿಗೆ ಹೋದಾಗ ಮುಡಿಪು ಕಟ್ಟಿಸಿಬರುತ್ತಾರೆ.

**ದಾಸಗೊಂಡರು**

ತಿರುಪತಿ ಯಾತ್ರೆಗೆ ಹೋಗಿ ಬಂದ ಗೊಂಡರನ್ನು ದಾಸಪ್ಪಗಳು ಎಂದು ಕರೆಯುತ್ತಾರೆ. ಇವರನ್ನು ದಾಸಗೊಂಡರು ಎಂದು ಭಾವಿಸಬಹುದು. ಆದರೆ ದಾಸಕುರುಬರಂತೆ ಇವರು ದಾಸಪ್ಪ ದೀಕ್ಷೆಯನ್ನು ಮುದ್ರೆ ಒತ್ತಿಸಿಕೊಳ್ಳುವ ಮೂಲಕ ತೆಗೆದುಕೊಳ್ಳುವುದಿಲ್ಲ. ವಿಷ್ಣು ಭಕ್ತರಾಗಿರುವುದರಿಂದ ಹಣೆಗೆ ನಾಮವಿರುತ್ತದೆ. ಆದರೆ ಇವರು ದಾಸಕುರುಬರ ಹಾಗೆ ತುಳಸಿ ಮಾಲೆಯನ್ನು ಧರಿಸುವುದಿಲ್ಲ. ತುಳಸಿಮಾಲೆಗೆ ಬದಲಾಗಿ ದೃಷ್ಟಿರಸವನ್ನು ಧರಿಸುತ್ತಾರೆ. ಈ ದೃಷ್ಟಿಸರಕ್ಕೂ ತಿಮ್ಮಪ್ಪನಿಗೂ ಯಾವುದೇ ಸಂಬಂಧವಿಲ್ಲ. ಆದರೆ ಒಂದು ಮಾತಂತೂ ನಿಜ. ಸಾಮಾನ್ಯ ಗೊಂಡರು ದಾಸಗೊಂಡನನ್ನು ಅತ್ಯಂತ ಗೌರವದಿಂದ ಕಾಣುತ್ತಾರೆ. ದಾಸಕುರುಬರಿಗಿರುವಂತೆ ದಾಸಗೊಂಡರಿಗೂ ಶನಿವಾರ ಪವಿತ್ರ ದಿವಸವಾಗಿದೆ.

**ಜನಿವಾರ ಪಟ್ಟಿ**

ವಿಷ್ಣುವಿನ ಪರಮಭಕ್ತರಾಗಿದ್ದರೂ ದಾಸಕುರುಬರು ಹಾಗೂ ದಾಸಗೊಂಡರಿಗೆ ಜನಿವಾರ ಧರಿಸುವ ಹಕ್ಕಿಲ್ಲ. ಆದರೆ ದಾಸಗೊಂಡರಲ್ಲಿ 'ಜನಿವಾರ ಪಟ್ಟಿ' ಧರಿಸುವ ಪದ್ಧತಿಯಿದೆ. ಹೆಸರು 'ಜನಿವಾರ ಪಟ್ಟಿ' ಎಂದಿದ್ದರೂ ಅದು ವಿಪ್ರರು ಧರಿಸುವ ಜನಿವಾರವಲ್ಲ. ಹೆಸರು ಜನಿವಾರಪಟ್ಟಿ ಎಂದಿದ್ದರೂ ಇದನ್ನು ಕೊರಳಿಗೆ ಧರಿಸುವುದಿಲ್ಲ. ದಾಸಗೊಂಡರು ಬೆಳ್ಳಿಯಿಂದ ತಯಾರಿಸಿದ ಈ ಆಭರಣವನ್ನು ತಮ್ಮ ಸೊಂಟಕ್ಕೆ ಕಟ್ಟಿಕೊಳ್ಳುತ್ತಾರೆ. ವಿಷ್ಣುಭಕ್ತರೇನೋ ಅನ್ನಿಸಿಕೊಂಡೆವು. ಆದರೆ ಜನಿವಾರ ಧರಿಸುವ ಹಕ್ಕು ಇಲ್ಲದಂತಾಯಿತಲ್ಲ ಎಂಬ ಹಳಹಳಿಕೆಯಲ್ಲಿ ಇಂಥ ಜನಿವಾರ ಪಟ್ಟಿ ಆವಿಷ್ಕಾರವಾಗಿರಬಹುದು.

**ದಾಸಕುರುಬರ ಕಂಕಣಬೆಡಗುಗಳು**

ದಾಸಕುರುಬರು ಹತ್ತಿಕಂಕಣದವರು. ಅವರು ತಮ್ಮನ್ನು ದೊಡ್ಡ ಕಂಬಳಿಯವರು ಎಂದು ಕರೆದುಕೊಳ್ಳುತ್ತಾರೆ. ಉಣ್ಣೆ ಕಂಕಣದವರನ್ನು ಅವರು ಸಣ್ಣ ಕಂಬಳಿಯವರು ಎಂದು ಕರೆಯುತ್ತಾರೆ. ಹೀಗಾಗಿ ಅವರು ಉಣ್ಣೆಕಂಕಣದವರೊಂದಿಗೆ ವೈವಾಹಿಕ ಸಂಬಂಧ ಬೆಳೆಯಿಸುವುದಿಲ್ಲ. ದಾಸಕುರುಬರಲ್ಲಿ ಸಾವಂತ್ಲರ, ಬನ್ನೇನವರ ಮತ್ತು ಮನ್ನೇನವರ ಎಂಬ ಬೆಡಗಿನವರಿರುತ್ತಾರೆ. ಉಳಿದ ಕುರುಬರಂತೆ ಇದರಲ್ಲಿಯೂ ಸಮಬೆಡಗಿನವರಲ್ಲಿ ವೈವಾಹಿಕ ಸಂಬಂಧ ನಿಷೇಧವಾಗಿದೆ. ಕುರುಬರ ಕುಲಗುರುಗಳಾದ ರೇವಣಸಿದ್ದ ಸಂಪ್ರದಾಯದ ಒಡೆಯರದೂ ಸಾವಂತ್ಲರ ಎಂಬ ಬೆಡಗು. ಸಾವಂತ್ಲರ ಬೆಡಗಿನ ದಾಸಕುರುಬರು ರೇವಣಸಿದ್ದ ಸಂಪ್ರದಾಯದ ಒಡೆಯರೊಂದಿಗೆ ವಿವಾಹ ಸಂಬಂಧ ಬೆಳೆಯಿಸುವುದಿಲ್ಲ. ಇದಕ್ಕೆ ಸಮ ಬೆಡಗು ಕಾರಣವಿರಬಹುದು ಎಂದು ಊಹಿಸಬಹುದು. ಆದರೆ ಬನ್ನೇನವರ ಹಾಗೂ ಮುನ್ನೇನವರ ಬೆಡಗಿನ ದಾಸಕುರುಬರೂ ರೇವಣಸಿದ್ದ ಸಂಪ್ರದಾಯದ ಒಡೆಯರೊಂದಿಗೆ ವಿವಾಹ ಸಂಬಂಧ ಮಾಡುವುದಿಲ್ಲ. ಯಾಕೆ ಎಂದು ಕೇಳಿದರೆ ಸಾವಂತ್ಲರ ಬೆಡಗಿನ ಒಡೆಯರೂ ತಾವು ಸಹೋದರ ಸಂಬಂಧಿಗಳಾಗುತ್ತೇವೆ ಎಂದು ಉತ್ತರಿಸುತ್ತಾರೆ. ಅವರ ಉತ್ತರ ಸಮರ್ಪಕವೆನ್ನಿಸುವುದಿಲ್ಲ. ಇವರ ವಿವಾಹ ಸಂಬಂಧ ನಿಷೇಧದ ಹಿನ್ನೆಲೆಗೆ ತಾರತಮ್ಯದ ಕಾರಣವಿರುವ ಸಾಧ್ಯತೆಯಿದೆ. ದಾಸಕುರುಬರ ವಿವಾಹವನ್ನು ಒಡೆಯರು, ಲಿಂಗಾಯಿತ ಐನೋರು ಇಲ್ಲವೆ ಸ್ಥಳೀಯ ಬ್ರಾಹ್ಮಣರು ನೆರವೇರಿಸುತ್ತಾರೆ.

**ದಾಸಕುರುಬರ ಸುತ್ತ ವಿಧಿನಿಷೇಧಗಳು**

ದಾಸಪ್ಪನಾದವನ ಸುತ್ತಲೂ ಅನೇಕ ಬಗೆಯಲ್ಲಿ ವಿಧಿ ನಿಷೇಧಗಳನ್ನು ಹೇರಲಾಗಿದೆ. ದಾಸಪ್ಪನಾದವನಿಗೆ ಶನಿವಾರ ಅತ್ಯಂತ ಪವಿತ್ರವಾದ ದಿವಸವಾದ್ದರಿಂದ ಅಂದಿನ ದಿವಸ ಆತ ಸ್ನಾನ, ಪೂಜೆ ತೀರಿಸದ ಹೊರತು, ಅನ್ನಪ್ರಸಾದ ಸ್ವೀಕರಿಸುವುದಿಲ್ಲ. ದಾಸಪ್ಪನ ಮನೆಯಲ್ಲಿ ಯಾರಾದರೂ ಮೃತನಾದರೆ, ಮನೆಯಲ್ಲಿ ಬಾಣಂತಿಯರಿದ್ದರೆ, ಆ ಮನೆಯನ್ನು, ಸೂತಕದ ಮನೆಯೆಂದು ಭಾವಿಸುತ್ತಾರೆ. ಸೂತಕದ ದಿನಗಳಲ್ಲಿ ದಾಸಪ್ಪಗಳು ಭಕ್ತರ ಮನೆಗೆ ಕಟ್ಟಳೆ ತೀರಿಸಲು ಹೋಗುವುದಿಲ್ಲ. ಮನೆಯನ್ನು ಸೂತಕದಿಂದ ಮುಕ್ತಗೊಳಿಸಲು ಶುದ್ಧೀಕರಣ ಕಾರ್ಯವನ್ನು ಮಾಡುತ್ತಾರೆ. ಹೆರಿಗೆ ಕಾರಣದಿಂದಾಗಲೀ ಮರಣದ ಕಾರಣದಿಂದಾಗಲೀ ಮನೆಗೆ ಸೂತಕ ಅಂಟಿಕೊಂಡಾಗ ದಾಸಪ್ಪಗಳು ವೈಷ್ಣವರ ಮನೆಯಿಂದ ಬಿಳಿನಾಮ ಹಾಗೂ ತುಳಸಿ ತೀರ್ಥ ತಂದು ಸೂತಕದ ಮನೆತುಂಬ ಸಿಂಪಡಿಸಿ ಮನೆಯನ್ನು ಶುದ್ಧೀಕರಿಸುತ್ತಾರೆ. ದಾಸಪ್ಪ ದೀಕ್ಷೆ ಪಡೆದವನು ಅಪ್ಪಿತಪ್ಪಿಯೂ ಮಾಂಸಾಹಾರವನ್ನು ಸೇವಿಸುವಂತಿಲ್ಲ. ಅದೂ ಅಲ್ಲದೆ ಚಪ್ಪಲಿ ಧರಿಸುವುದಿಲ್ಲ.

ಗರುಡಗಂಭ ಭವನಾಸಿ ಇತ್ಯಾದಿ ಲಾಂಛನಗಳು ದಾಸಪ್ಪಗಳಿಗೆ ಪವಿತ್ರವಾದವುಗಳು ಎಂಬ ಮಾತು ನಿಜವಾಗಿದ್ದರೂ ದಾಸಕುರುಬರ ಮದುವೆಯ ಸಂದರ್ಭದಲ್ಲಿ ಈ ಲಾಂಛನಗಳನ್ನು ನಿಷೇಧಿಸಲಾಗಿದೆ. ಇದೊಂದು ಕುತೂಹಲಕರ ಸಂಗತಿಯಾಗಿದೆ. ಮೂಲತಃ ಶೈವರಾದ ಈ ದಾಸಪ್ಪಗಳು ವಿಷ್ಣುವನ್ನು ಸಧ್ಯಕ್ಕೆ ಆಯ್ಕೆ ಮಾಡಿಕೊಂಡಿದ್ದರೂ ಅವರ ಬದುಕಿನ ಅತ್ಯಂತ ಮಹತ್ವದ ಘಟ್ಟವಾದ ವಿವಾಹದಂಥ ಸಂದರ್ಭದಲ್ಲಿ ಮೂಲದ ಶೈವ ಸ್ಮರಣೆಯ ಕಡೆಗೆ ವಾಲುತ್ತಿರಬಹುದು ಎನ್ನಿಸುತ್ತದೆ. ಆ ಕಾರಣವಾಗಿಯೇ ವಿಷ್ಣುವಿನ ಲಾಂಛನಗಳಾದ ಗರುಡಗಂಭ ಭವನಾಸಿಗಳನ್ನು ಈ ಸಂದರ್ಭದಲ್ಲಿ ನಿಷೇಧಿಸಿಕೊಂಡಿರಬಹುದು ಎನ್ನಿಸುತ್ತದೆ.

**ದಾಸತ್ವವೆಂಬ ಮಾಯದ ಬಾಗಿಲು**

ಒಂದರ್ಥದಲ್ಲಿ ಹರಿದಾಸವೆನ್ನುವುದು ವೈದಿಕ ಧರ್ಮದ ಉದಾರವಾದಿ ನಿಲುವಿನ ಫಲವಾಗಿದೆ. ಲಿಂಗಾಯತರ ಹಾಗೆ ಇದು ಪ್ರತಿ ಸಂಸ್ಕೃತಿಯ ಹಂಬಲದಲ್ಲಿ ಹುಟ್ಟಿ ಬಂದುದಲ್ಲ. ಲಿಂಗಾಯತವು ಗುಡಿ ಸಂಸ್ಕೃತಿಯನ್ನು ನಿರಾಕರಣೆ ಮಾಡಲು ಹವಣಿಸಿದರೆ ಹರಿದಾಸ ಪಂಥ ಗುಡಿಸಂಸ್ಕೃತಿಯನ್ನು ಪೋಷಿಸಿಕೊಂಡು ಬಂದಿತು. ಲಿಂಗಾಯತದಲ್ಲಿ ಸ್ಥಾವರದ ಜಾಗೆಯಲ್ಲಿ ಇಷ್ಟಲಿಂಗ ಬಂದರೆ ಹರಿದಾಸಪಂಥದಲ್ಲಿ ಗುಡಿಯ ಮೂಲ ಆಕೃತಿ ಹಾಗೆಯೇ ಉಳಿದು ಒಳಗಿನ ದೇವರು ಸ್ವಲ್ಪ ಮಿಸುಕಾಡಿದಂತೆ ತೋರುತ್ತಾನೆ. ಕನಕಕಿಂಡಿಯ ದಂತಕತೆಯಲ್ಲಿ ಇದನ್ನು ರೂಪಕಗೊಳಿಸಿರುವುದನ್ನು ನಾವು ನೋಡಬಹುದು. ಈ ಹಿನ್ನೆಲೆಯಲ್ಲಿ 'ದಾಸ'ವೆನ್ನುವ ಪದ ಏನೆಲ್ಲ ಹೊಸ ಪ್ರಭಾವಳಿಯನ್ನು ಲೇಪಿಸಿಕೊಂಡು ಬಂದರೂ ಅದರ ಮೂಲದಲ್ಲಿನ ಅರ್ಥವಿನ್ಯಾಸ ಹಾಗೆಯೇ ಉಳಿದುಕೊಂಡು ಬಂದಿತು. ಲೌಕಿಕ ಜಗತ್ತಿನ ರಾಜ/ಸಾವಂತ/ಮಾಂಡಲೀಕ/ಜಹಾಗೀರದಾರ/ಗೌಡ ಮುಂತಾದ ಯಜಮಾನರ ಜಾಗೆಯಲ್ಲಿ ಅಲೌಕಿಕ ಜಗತ್ತಿನ ಕೃಷ್ಣ/ವಿಷ್ಣು/ತಿಮ್ಮಪ್ಪ/ವರದಪ್ಪ ಮುಂತಾದ ದೇವತೆಗಳು ಸ್ಥಾಪಿತವಾದವು. ಹೀಗೆ ಲೌಕಿಕದ ದಾಸ್ಯ ಅಲೌಕಿಕದ ದಾಸ್ಯವಾಗಿ ರೂಪಾಂತರಗೊಂಡು 'ದಾಸ್ಯ'ವೆನ್ನುವುದು ನಿತ್ಯವಾಗಿಯೇ ಉಳಿಯಿತು. ತರತಮ ನಿರಂತರವಾಯಿತು. ಅದರ ದ್ಯೋತಕವೆನ್ನುವಂತೆ ವಿಷ್ಣು ಭಕ್ತರಲ್ಲಿ ಆಚಾರ್ಯರು ಹಾಗೂ ದಾಸಪ್ಪಗಳು ಎಂಬ ಎರಡು ಗುಂಪುಗಳಿವೆ. ಮೇಲ್ವರ್ಗದ ವಿಷ್ಣು ಭಕ್ತರು ಆಚಾರ್ಯರೆನ್ನಿಸಿಕೊಂಡರೆ ಕೆಳವರ್ಗದ ವಿಷ್ಣು ಭಕ್ತರು 'ದಾಸಯ್ಯ'ಗಳಾದರು. ಆದ್ದರಿಂದ ಕೆಳವರ್ಗದ ಜನರಿಗೆ ವಿಷ್ಣು ಭಕ್ತಿಯ ಬಾಗಿಲು ಮಾಯದ ಬಾಗಿಲಾಗಿ ಉಳಿದು ಬಿಟ್ಟಿತು. ಈ ಮಾಯದ ಬಾಗಿಲಿಗೆ ಸ್ವಾಗತವೆಂಬ ಬೋರ್ಡಿದೆ. ಬಾಗಿಲು ದಾಟಿ ಒಳಗೆ ಪ್ರವೇಶಿಸಿದಂತೆ ತೋರಿದರೂ ಬಾಗಿಲು ದಾಟಿದವರು ಹೊರಗೆ ಬಂದಿರುತ್ತಾರೆ. ಆದರೆ ಒಳಗೆ ಪ್ರವೇಶಿಸಿದ ಭ್ರಮೆ ಸೃಷ್ಟಿಯಾಗಿರುತ್ತದೆ. ಆ ಕಾರಣವಾಗಿಯೇ ಕೆಳವರ್ಗದ ಹರಿಭಕ್ತ ಎಂಥದೇ ಭಕ್ತಿ ಪಾರಮ್ಯ ಮೆರೆದರೂ ಆತ ಹರಿಯ ಒಕ್ಕಲಾಗಬಹುದೇ ಹೊರತು ಅರ್ಚಕನಾಗಲಾರ.

**ಗ್ರಂಥಋಣ**


೧. ದಾಸಪ್ಪ ಜೋಗಪ್ಪ (ಎರಡು ಸಂಪ್ರದಾಯಗಳ ಅಭ್ಯಾಸ) ಸಂ: ಹಿ. ಚಿ. ಬೋರಲಿಂಗಯ್ಯ.

೨. ಕನ್ನಡ ವಿಶ್ವಕೋಶ ಸಂಪುಟ-೩

೩. ಕರ್ನಾಟಕ ಇತಿಹಾಸ ದರ್ಶನ : ಎಂ. ವ್ಹಿ. ಕೃಷ್ಣರಾವ

೪. ದಾಸಸಾಹಿತ್ಯ ದಿಗ್ಗಜರು : ಡಾ. ಜಿ. ವರದರಾಜರಾವ್

೫. ದಾಸ ಸಾಹಿತ್ಯ ದರ್ಶನ : ಸಂ. ಎಚ್. ಎಸ್‌ಕೆ.

೬. ಪುರಂದರದಾಸರು : ವೀ. ಸೀತಾರಾಮಯ್ಯ

೭. ಜನಪದ ಹಾಲುಮತ ಕಾವ್ಯ : ಸಂ. ಡಾ. ವೀರಣ್ಣ ದಂಡೆ.

೮. ಕುರುಬರ ಚರಿತ್ರೆ : ವಿ. ಆರ್. ಹನಮಂತಯ್ಯ

೯. ಸಿದ್ದಸಿರಿ : ಮುದಗೊಂಡ ಮಾರಾಯರು ಒಡೆಯರು, ವಕ್ತ್ರ : ದಾಸ ತಿಮ್ಮಪ್ಪ ಹೊಳಲ್ಕೆರೆ

## ೧೯. ಝುಂಡೆ ಕುರುಬರು

ಪ್ರಾಚೀನ ಕಾಲದಿಂದಲೂ ಒಟ್ಟಿಗೆ ಇದ್ದ ಜನಸಮುದಾಯಗಳು ಬೆಳವಣಿಗೆಗೊಂಡಂತೆ, ಕವಲೊಡೆದು ಬೇರೆ ಬೇರೆಯಾಗಿ, ನೈಸರ್ಗಿಕ ಬದಲಾವಣೆಗಳಿಂದಲೋ, ಗುಳೆಕಟ್ಟಿ ತಿರುಗುವುದರಿಂದಲೋ, ಸಾಸಹ ಪ್ರವೃತ್ತಿಯಿಂದಲೋ, ವ್ಯಾಪಾರ ಮನೋವೃತ್ತಿಯಿಂದಲೋ ಹಲವಾರು ಜನಸಮುದಾಯಗಳು ಒಂದರೊಡನೊಂದು ಬೆರೆತುಕೊಂಡುದರಿಂದಲೋ, ತಮ್ಮ ಮೂಲ ಸ್ವರೂಪವನ್ನು ಕಳೆದುಕೊಂಡು ಕಾಲಕ್ಕೆ ತಕ್ಕಂತೆ ಹೊಸ ಹೊಸ ಆಯಾಮಗಳನ್ನು ತಮ್ಮಲ್ಲಿ ಅಳವಡಿಸಿಕೊಂಡ ಭಾರತೀಯ ಈ ಕುರುಬ ಸಮುದಾಯವನ್ನು ವಿದ್ವಾಂಸರು ಎರಡು ಬಗೆಯಾಗಿ ವಿಂಗಡಿಸುತ್ತಾರೆ. ಮೊದಲನೆಯದು ಆಸ್ಟ್ರೋ ಎಸಿಯಾಟಿಕ್ ಸಮುದಾಯವಾದರೆ ಎರಡನೆಯದು ದ್ರಾವಿಡ ಸಮುದಾಯ. ಮೊದಲನೆಯವರು ಆಗ್ನೇಯ ಏಷಿಯಾದವರೆಂದು ಇವರು ಉತ್ತರ ಭಾರತದಲ್ಲಿ ವಾಸಿಸುತ್ತಿದ್ದರೆಂದು ಎರಡನೆಯವರು ದಕ್ಷಿಣ ಭಾರತದಲ್ಲಿ ವಾಸಿಸುತ್ತಿದ್ದರೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಇವರಿಬ್ಬರ ಮೂಲ ಉದ್ಯೋಗ ಕುರಿ ಹಾಗೂ ಪಶು ಸಂಗೋಪನೆಯಾಗಿತ್ತು.

ಭಾರತದುದ್ದಕ್ಕೂ ಹಬ್ಬಿಕೊಂಡಿರುವ ಈ ಜನಸಮುದಾಯದವರನ್ನು ಉತ್ತರದಲ್ಲಿ ಗಡಾರಿ, ಗಡ್ಡಿ ಎಂತಲೂ ಪಶ್ಚಿಮದಲ್ಲಿ ಗುಜ್ಜರ್ ಎಂತಲೂ, ಮಧ್ಯಭಾರತದಲ್ಲಿ ಧನಗರರೆಂದು ದಕ್ಷಿಣದಲ್ಲಿ ಕುರುಬರೆಂದು ಪೂರ್ವದಲ್ಲಿ ಪಾಲಕ್ಷತ್ರಿಯರೆಂದು ಕರೆಯುವುದುಂಟು. ಭಾರತದ ಮಧ್ಯಭಾಗ ಮತ್ತು ಪಶ್ಚಿಮ ಭಾಗದ ನದಿತೀರ ಪ್ರದೇಶಗಳಲ್ಲಿ ಹಾಗೂ ನೀರಿನ ಆಶ್ರಯ ಸ್ಥಾನಗಳಲ್ಲಿ ಬೀಡುಬಿಟ್ಟು, ಕ್ರೂರ ಪ್ರಾಣಿಗಳಿಂದ ಹಾಗೂ ಕಳ್ಳಕಾಕರಿಂದ ತಮ್ಮ ಕುರಿ-ದನಗಳನ್ನು ಸಂರಕ್ಷಿಸಲು ದೊಡ್ಡ ದೊಡ್ಡ ಹಟ್ಟಿ (ದಡ್ಡಿ)ಗಳನ್ನು ನಿರ್ಮಿಸಿಕೊಂಡು ವಾಸಿಸುತ್ತಿದುದರಿಂದ ಇವರನ್ನು ಹಟ್ಟಿಕಾರ/ಧನಗಾರರೆಂದು ಕರೆದಿರುವುದು ರೂಢಿಯಲ್ಲಿದೆ.

ಚರಿತ್ರೆಯ ಪೂರ್ವ ಕಾಲದಲ್ಲಿ ಈ ಹಟ್ಟಿಕಾರ/ಧನಗಾರರು ವಿಂಧ್ಯ ಮತ್ತು ದಂಡಕಾರಣ್ಯಗಳನ್ನು ಬಿಟ್ಟು ವರ್ಹಾಡ (ಮಹಾರಾಷ್ಟ್ರ) ಕ್ಕೆ ವಲಸಿ ಬಂದು ಇವರಲ್ಲಿಯೇ ಕೆಲವರು ಕುರಿ ಹಾಗೂ ಪಶುಸಂಗೋಪನೆಯ ಜೊತೆಗೆ ಕೃಷಿ ಕೆಲಸದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಇದೇ ವೇಳಗೆ ತಾವು ಊಳುತ್ತಿದ್ದ ಭೂಮಿಯನ್ನು ಭೂಮಿತಾಯಿ ಎಂದು ಪೂಜಿಸಲು ಪ್ರಾರಂಭಿಸಿದರು, ಇವರ ಈ ಭೂಮಿತಾಯಿಯ ಆರಾಧನೆಯಿಂದಲೇ, ಮಣ್ಣು ಇಲ್ಲವೆ ಭೂಮಿ ಪೂಜೆಯ ಹಬ್ಬಗಳು ಪ್ರಾರಂಭವಾದವು. ಅದಕ್ಕೆ ಮಣ್ಣೆತ್ತಿನ, ಗುಳ್ಳವ್ವನ, ನಾಗಪ್ಪನ ಪೂಜೆಯನ್ನು ಹೆಸರಿಸಬಹುದು. ಹಟ್ಟಿಕಾರ/ಧನಗಾರರ ಕೆಲವು ಸಮೂಹಗಳು ನರ್ಮದಾ ಹಾಗೂ ಗೋಧಾವರಿ ನದಿ ತೀರಗಳಲ್ಲಿ ಬಂದು ನೆಲೆಸಿದರು. ಇನ್ನೂ ಕೆಲವು ಸಮೂಹಗಳು ವಿದರ್ಭ, ಇಂದೋರ, ನಾಸಿಕ, ಖಾನ, ಕಣಹ ದೇಶ ಮುಂತಾದ

ಕಡೆಗಳಲ್ಲಿ ಬಂದು ನೆಲೆಸಿದರು. ಶಕ್ತಿಯುತರು, ನಂಬಿಗಸ್ತರು, ಸಾಹಸಿಗರು ಆದ ಇವರು ಜೀವನ ಹಂಗು ತೊರೆದು ಕುದುರೆಗಳನ್ನೇರಿ ಕೈಯಲ್ಲಿ ಝೆಂಡೇ ಧ್ವಜವನ್ನು ಹಿಡಿದುಕೊಂಡು ರಣಭೂಮಿಯನ್ನು ಪ್ರವೇಶಿಸಿ ಯುದ್ಧವನ್ನು ಮಾಡುವ ಇವರು ಝೆಂಡೇ ಧನಗರ, ಝೆಂಡೆ ರಾವುತ, ಝೆಂಡೆ ಕುರುಬ ಎಂಬ ಹೆಸರುಗಳಿಂದ ಗುರುತಿಸಿಕೊಂಡಿದ್ದಾರೆ. ಕ್ರಿಸಾಬದ ಆರಂಭದ ವೇಳೆಗೆ ಹೂಣರು, ಶಕರ, ಅರಬರ ಪಠಾಣರ ಹಾಗೂ ಮೊಗಲರ ದಾಳಿಗೆ ಸಿಕ್ಕು ನಲುಗಿದ ಇವರು  ತಾವು ವಾಸಿಸುತ್ತಿದ್ದ ನದಿಯ ಬಯಲು, ಹುಲ್ಲುಗಾವಲುಗಳನ್ನು ಹಾಗೂ ಕೃಷಿ ಭೂಮಿಗಳನ್ನು ಬಿಟ್ಟು ದಕ್ಷಿಣ ಭಾರತದ ಬಯಲು ಪ್ರದೇಶಕ್ಕೆ ಗುಡ್ಡ-ಬೆಟ್ಟಗಳ ನಡುವಿನ ಪ್ರದೇಶಕ್ಕೆ ಹಾಗೂ ದಕ್ಷಿಣ ಭಾರತದ ನದಿಗಳಾದ ಕೃಷ್ಣ, ಮಲಪ್ರಭಾ ಮುಂತಾದ ನದಿಗಳ ತೀರಪ್ರದೇಶಕ್ಕೆ ಮತ್ತು ಇನ್ನು ಕೆಲವರು ಪಶ್ಚಿಮ ಘಟ್ಟಗಳ ಪ್ರದೇಶಕ್ಕೆ ಬಂದು ತಮ್ಮ ತಮ್ಮ ನೆಲೆಗಳನ್ನು ಗುರುತಿಸಿಕೊಂಡು ವಾಸಿಸತೊಡಗಿದರು.

ಈ ಜನರು ಆರ್ಯ ಪೂರ್ವಕಾಲದಿಂದಲೂ ಪಂಜಾಬದವರೆಗೂ ವ್ಯಾಪಿಸಿಕೊಂಡಿದ್ದರು, ಕುರಿಗಾರರು, ಧನಗಾರರು, ವೀರರು, ವರ್ತಕರು ಹಾಗೂ ಪುರಪತಿಗಳು ಎಂಬ ಬಗೆಗಳು ವ್ಯವಸಾಯ ಭೇದದಿಂದ ಅವರಲ್ಲಿ ಒಳಪಂಗಡಗಳು ಆಗಿದ್ದು ಕಂಡುಬರುತ್ತದೆ.[1] ಇಲ್ಲಿ ಬರುವ ವೀರರು ಎಂಬ ಪಂಗಡ ಈ ಝೆಂಡೆ ರಾವುತರೆ ಆಗಿರಬಹುದೆಂಬುದು ಸ್ಪಷ್ಟವಾಗುತ್ತದೆ. ಮಹಾರಾಷ್ಟ್ರದ ಪ್ರಖ್ಯಾತ ಧನಗರ ವಿದ್ವಾಂಸರಲ್ಲಿ ಒಬ್ಬರಾದ ಶಂಕರ ಬಾಬುರಾವ್ ಲಾಂಡೆ ತಮ್ಮ ಅಧ್ಯಯನದಲ್ಲಿ ಒಟ್ಟು ಮೂವತ್ತೈದು ಉಪಜಾತಿಗಳನ್ನು ಹೆಸರಿಸುತ್ತ ಹತ್ಕರ್ > ಹಟ್ಕರ್ > ಝೆಂಡೆವಾಲಾ[2] ಎಂಬುದನ್ನು ಸಹ ಗುರುತಿಸುತ್ತಾರೆ. ಶಂ. ಭಾ. ಜೋಶಿಯವರು ಸಹ ಹಟ್ಕರ್ (ಧನಗರ) ಎಂದು ಉಲ್ಲೇಖಿಸುತ್ತಾರೆ. ಡಾ. ಶ್ಯಾಮ್‌ಸಿಂಗ್‌ಶಶಿಯವರು ತಮ್ಮ ಭಾರತದ ಕುರುಬರು ಎಂಬ ಕೃತಿಯಲ್ಲಿ ಅಸಲ್ ಧನಗರ್, ಹಟ್ಕರ್, ಅಹರ್ ಮತ್ತು ಖಿಲಕಾರಿ ಎಂಬ ನಾಲ್ಕು ರೀತಿಯ ಧನಗರರನ್ನು ಗುರುತಿಸುತ್ತಾ ಗೋತ್ರಗಳನ್ನು ತಿಳಿಸುವ ಪಟ್ಟಿಯಲ್ಲಿ ಝೇಂಡೆ (ಜಂಡೆ) ಗೋತ್ರವನ್ನು ಸಹ ಗುರುತಿಸುತ್ತಾರೆ.[3] ೧೯೯೭ ಬಾಂಬೆ ಗ್ಯಾಜೆಟಿಯರ್‌ನಲ್ಲಿ ಖೈಲಾರಿ (ಕಿಲಾರಿ) ಸನಗಾರ (ಸಲಗಾರ) ಹಟಗಾರ (ಹಟ್ಟಿಕಾರ್) ಹಂಡೆ (ಹಂಡೆ ರಾವುತ) ಎಂದು ಧನಗರರ ಪಂಗಡಗಳನ್ನು ಹೇಳುತ್ತ ಝೆಂಡೆ ಮತ್ತು ಉರಸಾಲಿಯವರು ಎಂಬ ಮತ್ತೆರಡು ಉಪಪಂಡಗಳನ್ನು ಸಹ  ಹೇಳಲಾಗಿದೆ. ಮಹಾರಾಷ್ಟ್ರದ ಗಣಪತರಾವ್ ಕುಳೆಕಾರ ಅವರು ಕುರುಬ (ಧನಗರ್) ಸಮಾಜದ ಗೋತ್ರಗಳ ಬಗೆಗೆ ನಿರಂತರ ಐವತ್ತು ವರ್ಷಗಳ ಅಧ್ಯಯನ ಮಾಡಿ ಝೆಂಡೆ, ಹಟ್ಕರ್, ಖಂಡೆ, ಹಂಡೆ ಮುಂತಾದ ಉಪಜಾತಿಗಳನ್ನು ಉಲ್ಲೇಖಿಸುತ್ತಾ, ಇವು ಮೂಲದಲ್ಲಿ ಆಗಿದ್ದು ಕಾಲಾಂತರದಲ್ಲಿ ಉಪಜಾತಿಗಳಾಗಿ ನಿರ್ಮಾಣಗೊಂಡಿವೆ.[4] ಈ ಮೇಲಿನ ಎಲ್ಲ ಉಲ್ಲೇಖಗಳನ್ನು ನೋಡಿದಾಗ ಝೆಂಡೆ ಎಂಬುದು ಧನಗರ ಸಮುದಾಯದ ಒಂದು ಪ್ರಮುಖ ಉಪ ಸಮುದಾಯವಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ.

ಮಹಾರಾಷ್ಟ್ರ, ಮಧ್ಯಪ್ರದೇಶ ಮತ್ತು ಕರ್ನಾಟಕಗಳಲ್ಲಿ ಅಪಾರ ಸಂಖ್ಯೆಯಲ್ಲಿರುವ ಈ ಸಮುದಾಯದವರು ವತನದಾರರಾಗಿ, ಪಟೇಲರಾಗಿ, ದೇಶಮುಖರಾಗಿ ಹಿಂದಿನಿಂದಲೂ ಕಾರ್ಯಭಾರವನ್ನು  ಮಾಡುತ್ತಾ ಬಂದಿದ್ದಾರೆ. ಮಧ್ಯಪ್ರದೇಶದ ಇಂದೋರ್ ಈ ಜನಾಂಗ ಹಳೆಯ ವಾಸಸ್ಥಾನ ಎಂದು ತಿಳಿಸಲಾಗಿದೆ. ಅಲ್ಲಿ ಧನಗರ್ ಝೆಂಡೆ ಎಂಬ ಆಡಳಿತಗಾರರಿದ್ದು ಅವರಲ್ಲಿ ಮಹಾರಾಣಿ ಅಹಲ್ಯಾಬಾಯಿ ತುಂಬಾ ಜನಪ್ರಿಯರಾದವರು.[5] ಇವರು ಇಂದೋರದಿಂದ ಹಿಡಿದು ಮಲಪ್ರಭಾ ನದಿಯವರೆಗೆ ತಮ್ಮ ರಾಜ್ಯವನ್ನು ವಿಸ್ತರಿಸಿಕೊಂಡಿದ್ದರು. ಮುನವಳ್ಳಿಯ ಮಲಪ್ರಭಾ ನದಿಯ ದಂಡೆಯ ಮೇಲೆ ಕಟ್ಟಿದ ವಿಶಾಲವಾದ ಕೋಟೆ ಹಾಗೂ ಸಿಂಧೆ ಹೋಲ್ಕರ್ ಅವರ ಹೆಸರಿನಲ್ಲಿ ಕಟ್ಟಿದ ಸಿಂಧೋಗಿ ಎಂಬ ಊರನ್ನು ಸಹ ಹೆಸರಿಸಬಹುದು. ಹೀಗೆ ಝೆಂಡೆ ಸಮುದಾಯದವರು ತಮ್ಮ ರಾಜರ ಆಶ್ರಯವನ್ನು ಪಡೆದು ಇಂದೋರ್, ಗ್ವಾಲಿಯರ್‌ನಿಂದ ಹಿಡಿದು ಕೃಷ್ಣ ಮಲಪ್ರಭಾ ನದಿಯ ತೀರಗಳವರೆಗೂ ವ್ಯಾಪಿಸಿಕೊಂಡಿರುವುದು ಕಂಡುಬರುತ್ತದೆ. ಕಾಲಕ್ರಮೇಣ ಮಲಪ್ರಭಾ, ಕೃಷ್ಣ ನದಿಗಳ ತೀರವನ್ನು ಬಿಟ್ಟು ಕಾವೇರಿ ತೀರದವರೆಗೂ ಹಾಗೂ ಪಶ್ಚಿಮ ಘಟ್ಟ ಪ್ರದೇಶಗಳವರೆಗೂ ವ್ಯಾಪಿಸಿಕೊಂಡಿರುವರು. ಹೀಗೆ ವ್ಯಾಪಿಸಿಕೊಂಡಿರುವ ಈ ಸಮುದಾಯದ ಸಂಪ್ರದಾಯ, ಆಚರಣೆ, ವಿಚಾರಗಳ ಇತರ ಕುರುಬ ಸಮುದಾಯಗಳಿಗಿಂತ ತುಸು ಭಿನ್ನವಾಗಿ ಕಾಣುತ್ತವೆ.

**ಆಹಾರ, ವಿಹಾರ, ಜೀವನ ವಿಧಾನ ಹಾಗೂ ನ್ಯಾಯ**

ಈ ಸಮುದಾಯದ ಜನರು ಮೂಲತಃ ಸಸ್ಯಾಹಾರಿಗಳೆ ಆಗಿದ್ದು, ಹಬ್ಬಹರಿದಿನ ಹಾಗೂ ಮದುವೆಯ ಸಮಾರಂಭಗಳಲ್ಲಿ ಮಾಂಸಾಹಾರವನ್ನು ಸೇವಿಸುತ್ತಾರೆ. ಆದರೆ ಉಳಿದ ದಿನಗಳಲ್ಲಿ ಹಾಲು, ಮೊಸರು, ತುಪ್ಪ ಮುಂತಾದವುಗಳನ್ನು ಸೇವಿಸುವುದು ರೂಢಿಯಲ್ಲಿದೆ. ಮನೆಯಲ್ಲಿ ಏನಾದರೂ ಕಾಡಾಟಗಳು ಪ್ರಾರಂಭವಾದರೆ, ಇಲ್ಲವೆ ತಮ್ಮ ಮನೆದೇವರು, ಕುಲದೇವರುಗಳಿಗೆ ಬೇಡಿಕೊಂಡ ಇಷ್ಟಾರ್ಥಗಳು ಈಡೇರಿದಾಗ ದೇವರಿಗೆ ಬ್ಯಾಟಿಯನ್ನು ಮಾಡಿ ಬಂಧು ಬಾಂಧವರೆಲ್ಲರೂ, ಕೂಡಿಕೊಂಡು ಭೋಜನ ಮಾಡುತ್ತಾರೆ. ಬಸವ ಜಯಂತಿ ಮತ್ತು ದೀಪಾವಳಿ ಪಾಡ್ಯದಂದು ಹಿರಿಯರ ಹೆಸರಿನಲ್ಲಿ ಪಕ್ಷಮಾಸಗಳನ್ನು ಆಚರಿಸುತ್ತಾರೆ. ಬೀಗರಿಗೆ ಹಿರಿಯರ ಹೆಸರಿನಲ್ಲಿ ಒಂದ್ಹೋತ್ತಿಟ್ಟು ಬಂಧು-ಬಾಂಧವರಿಗೆ ಬಿನ್ನಾಯ ಹೇಳಿ ಮನೆಗಳಲ್ಲಿ ಕಡ್ಡಾಯವಾಗಿ ಹೋಳಿಗೆ ಊಟವನ್ನು ಮಾಡಿಸುತ್ತಾರೆ.

ಸಾಮಾನ್ಯವಾಗಿ ಈ ಸಮುದಾಯದ ಹಿರಿಯರಲ್ಲಿ ಕಂಡುಬರುವ ಉಡುಗೆ-ತೊಡುಗೆಗಳೆಂದರೆ, ಪುರುಷರು ತಲೆಗೆ ಬಿಳಿಯ ಇಲ್ಲವೆ ಅರಿಸಿಣ ವರ್ಣದ ದಪ್ಪನೆಯ ಪೇಟಾ, ಬಗಲಕಸಿ ಅಂಗಿ, ಧೋತರ, ಕಾಲಲ್ಲಿ ದಪ್ಪ ಅಟ್ಟೆಯುಳ್ಳ ಕಾಲ್ಮರಿಗಳನ್ನು ಧರಿಸುವುದು ರೂಢಿ. ಕಿವಿಗೆ ಬಂಗಾರದ ಮುರುವು ಮತ್ತು ಬಲಗಡೆಯ ಕಿವಿಯು ಮೇಲ್ಭಾಗದಲ್ಲಿ ಬಾವಲಿ, ಕೊರಳ್ಳಿ ಬಂಗಾರದ ತಾಯತ ಅಥವಾ ಅಡಕಿ ಸರವನ್ನು ಧರಿಸುತ್ತಾರೆ. ಇನ್ನು ಹೆಂಗಸರು ದಪ್ಪದಡೆಯ ಒಂಬತ್ತು ವಾರಿ ಅಥವಾ ಏಳು ವಾರಿಯ ಸೀರೆ ಕುಪ್ಪಸವನ್ನು ತೊಡುತ್ತಾರೆ. ಅಲ್ಲದೆ ಕೊರಳೊಳಗೆ ಗೋರಮಳ, ತೀಕೆ, ಮಾಂಗಲ್ಯ, ಕಿವಿಗೆ ಬೆಂಡವಾಲಿ, ಬುಗುಡಿ, ತಾಲುಕು, ಮೂಗಿಗೆ ಮೂಗುತಿ ಅಥವಾ ನತ್ತು ಕಡ್ಡಾಯ. ತೋಳಿಗೆ ತೊಳಬಂಧಿ, ಮುಂಗೈಯಲ್ಲಿ ಪಾಟ್ಲಿ, ಬಿಲವಾರಾ, ನಡಕ್ಕೆ ನಡಪಟ್ಟಿ, ಡಾಬು ಧರಿಸುವುದರೊಂದಿಗೆ ಕೆಲವರು ಎಡಗಾಲಕ್ಕೆ ಬೆಳ್ಳಿಯ ದಪ್ಪನೆಯ ತೋಡೆಯನ್ನು ಸಹ ಹಾಕಿಕೊಳ್ಳುತ್ತಾರೆ. ಹಣೆಗೆ ಮತ್ತು ಮುಂಗೈಗೆ ಹಚ್ಚೆ ಹಾಕಿಸಿಕೊಳ್ಳುವುದು ಸಾಮಾನ್ಯ. ಹೀಗೆ ಈ ರೀತಿಯ ಉಡುಗೆ ತೊಡುಗೆಗಳು ಹಳೆಯ ತಲೆಮಾರಿನ ಜನರಲ್ಲಿ ಕಂಡುಬರುತ್ತಿದ್ದವು. ಈಗ ಅವೆಲ್ಲವೂ ಮಾಯವಾಗಿ ಸಾಮಾನ್ಯ ಉಡುಗೆ-ತೊಡುಗೆಗಳನ್ನು ಧರಿಸುವುದನ್ನು ನಾವು ಕಾಣುತ್ತೇವೆ.

ಈ ಸಮುದಾಯದ ಸ್ತ್ರೀಯರು ಇತರೆ ಸಮುದಾಯದ ಸ್ತ್ರೀಯರಂತೆ ದುಂಡನೆಯ ಕುಂಕುಮವನ್ನು ಹಚ್ಚುವುದರ ಜೊತೆಗೆ ವಿಶಿಷ್ಟ ಸಂದರ್ಭಗಳಲ್ಲಿ ಅಂದರೆ ದೇವತಾಕಾರ್ಯ ಹಾಗೂ ಮದುವೆಯ ಸಮಾರಂಭದಲ್ಲಿ ಅಡ್ಡ ಕುಂಕುಮವನ್ನು ಹೆಚ್ಚುತ್ತಾರೆ. ಮದುವೆಯಾಗಿ ಸಂಸಾರವನ್ನು ಸಾಗಿಸುವಾಗ ಸಂಸಾರದಲ್ಲಿ ಯಾವ ಅಡೆ-ತಡೆಗಳು ಬಾರದಿರಲೆಂದು ಬಲವಾದ ನಂಬಿಕೆಯಿಂದ ಹೀಗೆ ಹಚ್ಚಿಕೊಳ್ಳುತ್ತಾರೆ. ಎಂಬುದು ನಿಷ್ಠಾವಂತ ಸೇನಾಧಿಪತಿಯಾಗಿದ್ದ ತಾನಾಜಿಯು ಈ ಝುಂಡೆ ಕುರುಬರ ಸಮುದಾಯಕ್ಕೆ ಸೇರಿದ ವೀರ. ಒಮ್ಮೆ ತಾನಾಜಿಯ ಮನೆಯಲ್ಲಿ ಅವನ ಮತ್ತು ಅವನ ತಮ್ಮನ ಮದುವೆಯ ಕಾರ್ಯವನ್ನು ಹಮ್ಮಿಕೊಂಡಿದ್ದರು. ಶಿವಾಜಿ ಮಹಾರಾಜರ ಅಪ್ಪಣೆ ಪಡೆದು ಮನೆಗೆ ಬಂದ ತಾನಾಜಿ ರಾತ್ರಿ ಬೆಳತನಕ ನಡೆಯುವ ಮದುಮಗನಾದ ತಾನಾಜಿಯು ಸ್ವಲ್ಪವೂ ವಿಚಲಿತನಾಗದೆ, ಮದುವೆಯ ಕಾರ್ಯದಲ್ಲಿ ನಿರತನಾದ ಮನೆಯ ಹಿರಿಯರನ್ನು ಕರೆದು ರಾಜರ ಆದೇಶದಂತೆ ನಾನು ಸಿಂಹಗಡಕ್ಕೆ ದಂಡೆತ್ತಿ ಹೋಗುತ್ತೇನೆ. ನನ್ನಿಂದಾಗಿ ಮದುವೆಯ ಯಾವ ಕಾರ್ಯಗಳು ನಿಲ್ಲುವುದು ಬೇಡ, ನಾನು ನಾಳೆ ಬೆಳಗಿನ ಜಾವ ಮುಹೂರ್ತಕ್ಕೆ ಸರಿಯಾಗಿ ಬಂದು ಬಿಡುತ್ತೇನೆ ಎಂದು ಕರ್ತವ್ಯದ ಕರೆಗೆ ಓಗೊಟ್ಟು ಹೊರಟು ಹೋದ. ಇತ್ತ ಮನೆಯಲ್ಲಿ ರೂಢಿಯಂತೆ ಮದುಮಕ್ಕಳಿಗೆ ಅರಿಸಿಣ ಹಚ್ಚಿ ಏಳು ಸುರಗಿಯ ನೀರನ್ನು ಹಾಕಿ ಮುಗಿಸುತ್ತಿದ್ದಂತೆಯೇ, ಬೆಳಗಾಗುವಷ್ಟರಲ್ಲಿಯೇ ತಾನಾಜಿ ಸಿಂಹಗಡವನ್ನು ವಶಪಡಿಸಿಕೊಂಡು ಮರಳಿ ಮನೆಗೆ ಬರುವ ದಾರಿಯಲ್ಲಿ ಕೆಲವು ದುಷ್ಟರು ಅವನನ್ನು ಮೋಸದಿಂದ ಕೊಂದು ಅವನ ಕಳೆಬರವನ್ನು ಅವನ ಕುದುರೆಯ ಮೇಲೆ ಹೊರಿಸಿದರು. ಆ ಕುದುರೆಯು ಆ ಕಳೆಬರವನ್ನು ಹೊತ್ತು ಓಡುತ್ತಾ ಮನೆಯ ಮುಂದಿನ ಮದುವೆಯ ಮಂಟಪದ ಮುಂದೆ ಬಂದು ನಿಂತಿತು. ಕುದುರೆಯು ಹೊತ್ತು ತಂದ ತಾನಾಜಿಯ ಕಳೆಬರವನ್ನು ಕಂಡು ಮನೆಯ ಹಿರಿಯರು ದುಃಖಿತರಾದರೂ, ಧೈರ್ಯಗೆಡದೆ ಅವನನ್ನು ಅಡ್ಡ ಮಲಗಿಸಿ ಅವನಿಗೆ ಗೊತ್ತು ಮಾಡಿದ ಕನ್ನೆಯೊಂದಿಗೆ ಮದುವೆ ಮಾಡುತ್ತಾರೆ. ಹೀಗೆ ಅಡ್ಡ ಮಲಗಿದ ಶವದ ಸಂಕೇತವಾಗಿ ಕುಂಕುಮವನ್ನು ಅಡ್ಡ ಹಚ್ಚುತ್ತಾರೆ. ಇನ್ನು ಮುಂದೆ ಜೀವನದಲ್ಲಿ ಇಂತಹ ಪ್ರಸಂಗ ಬರದಿರಲಿ ಎಂಬ ಬಲವಾದ ನಂಬಿಕೆಯಿಂದ ಮುತ್ತೈದೆಯರು ಕುಂಕುಮವನ್ನು ದುಂಡಗೆ ಹಚ್ಚುವ ಬದಲು ಅಡ್ಡ ಕುಂಕುಮ ಹಚ್ಚಲು ಪ್ರಾರಂಭಿಸಿದರು. ಅಂದಿನಿಂದ ಇಂದಿನವರೆಗೂ ಈ ಸಂಪ್ರದಾಯ ರೂಢಿಯಲ್ಲಿದೆ.[6]

ಕುಟುಂಬ ವ್ಯವಸ್ಥೆಯಲ್ಲಿ ತಂದೆಯೇ ಯಜಮಾನ. ಮನೆಯ ಎಲ್ಲ ಕೆಲಸಗಳು ಅವನ ಒಪ್ಪಿಗೆಯಂತೆಯೇ ನಡೆಯಬೇಕು. ಒಂದು ವೇಳೆ ತಂದೆ ಮರಣ ಹೊಂದಿದರೆ ತಾಯಿ ಅವನ ಸ್ಥಾನವನ್ನು ಬರಿಸುವಳು. ಮನೆಯಲ್ಲಿ ತಂದೆ-ತಾಯಿ ಜೀವಿತ ಇರುವವರೆಗೂ ಅಣ್ಣ-ತಮ್ಮಂದಿರು ವಾಟ್ನಿ ಪಾಲು ಆಗುವ ಹಾಗಿಲ್ಲ. ಒಂದು ವೇಳೆ ಗಂಡುಮಕ್ಕಳಲ್ಲಿ ಯಾರಾದರು ಪಾಲು ಕೇಳಿದರೆ ಅವನ ಉಪಜೀವನಕ್ಕೆ ತುಸು ಹೊಲ ಮನೆಯನ್ನು ಕೊಟ್ಟು ಬೇರೆ ಇಡುತ್ತಾರೆ. ತಂದೆ-ತಾಯಿಯ ಮರಣದ ನಂತರ ಅವನಿಗೆ ಸಮಪಾಲು ಕೊಟ್ಟು ಸಹಕರಿಸುತ್ತಾರೆ. ಗಂಡು ಸಂತಾನ ಇಲ್ಲದವರು ಅಣ್ಣನ ಇಲ್ಲವೆ ತಮ್ಮನ ಗಂಡುಮಕ್ಕಳನ್ನು ದತ್ತಕ್ಕೆ ತೆಗೆದುಕೊಳ್ಳುವ ಪದ್ಧತಿ ಇದೆ.

ಮನೆಗಳಲ್ಲಿ ಏನಾದರೂ ತಂಟೆ-ತಕರಾರುಗಳು ಬಂದರೆ ಕಟ್ಟೆಕಾರ ಮನೆತನದ ಹಿರಿಯನು ನ್ಯಾಯಗಳನ್ನು ಬಗೆಹರಿಸುತ್ತಾನೆ. ಒಂದು ವೇಳೆ ಅವನ ಕೈ ಮೀರುವಂತಿದ್ದಲ್ಲಿ ಸಮುದಾಯದ ಗುರು-ಹಿರಿಯರ ದೈವವನ್ನು ತನ್ನ ಮನೆಯಲ್ಲಿಯೇ ಕೂಡಿಸಿ ತೀರ್ಮಾನವನ್ನು ಕೊಡಿಸುತ್ತಾನೆ. ಒಂದು ವೇಳೆ ಎರಡೂ ಪಕ್ಷದವರು ಒಪ್ಪದಿದ್ದರೆ ಅವರನ್ನು ಕುಲದಿಂದ ಹೊರಗೆ ಇಡುತ್ತಾರೆ. ಹೀಗೆ ಹೊರಗೆ ಹಾಕಿಸಿಕೊಂಡವರು ಸಮುದಾಯದ ಯಾವುದೇ ಮಂಗಲ ಕಾರ್ಯಗಳಲ್ಲಿ ಭಾಗವಹಿಸುವಂತಿಲ್ಲ. ಒಂದು ವೇಳೆ ತಮ್ಮ ತಪ್ಪಿನ ಅರಿವಾಗಿ ತಪ್ಪನ್ನು ಒಪ್ಪಿಕೊಂಡು ಕಟ್ಟೇಕಾರನ ತೀರ್ಪಿಗೆ ಬದ್ಧರಾಗಲು ಒಪ್ಪಿದರೆ ಅಂತಹವನ್ನು ಕುಲಕ್ಕೆ ಮತ್ತೆ ಸೇರಿಸಿಕೊಳ್ಳುತ್ತಾರೆ. ಸಾಂಪ್ರದಾಯಿಕವಾಗಿ ವಿವಾಹವು ಎರಡು ಮನೆತನದ ಗುರುಹಿರಿಯರಿಗೆ ಒಪ್ಪಿಗೆಯಾದ ಕನ್ಯೆ ಅಥವಾ ವರನೊಂದಿಗೆ ನಡೆಯುವ ಮಂಗಲಕಾರ್ಯ. ಒಂದು ವೇಳೆ ಯುವಕ ಬೇರೆ ಜಾತಿಯ ಯುವತಿಯನ್ನು ಪ್ರೀತಿಸಿ ಮದುವೆಯಾದರೆ ಅವನನ್ನು ಮತ್ತು ಅವನ ಹೆಂಡತಿಯನ್ನು ದೈವದ ಮುಂದೆ ನಿಲ್ಲಿಸಿ, ಸಂಸ್ಕಾರಗೊಳಿಸಿ ಅವರಿಬ್ಬರ ತುದಿನಾಲಿಗೆಯನ್ನು ಸುಟ್ಟು ಕುಲದೊಳಗೆ ತೆಗೆದುಕೊಳ್ಳುತ್ತಾರೆ. ಯುವತಿಯರು ಬೇರೆ ಜಾತಿಯ ಯುವಕನೊಡನೆ ಓಡಿ ಹೋದರೆ ಅವಳನ್ನು ಮತ್ತೆ ಮನೆಗೆ ಸೇರಿಸಿಕೊಳ್ಳುವುದಿಲ್ಲ ಅವಳು ಸತ್ತೇ ಹೋದಳು ಎಂದು ದೇವರ ಮುಂದೆ ದೀಪವನ್ನು ಹಚ್ಚಿ ಆಕೆಯನ್ನು ಮರೆತು ಬಿಡುತ್ತಾರೆ. ಆದರೆ ಈವತ್ತು ಈ ಯಾವ ಕಟ್ಟಳೆಗಳು ಅಷ್ಟೊಂದು ಕಡ್ಡಾಯವಾಗಿ ನಡೆಯುವುದಿಲ್ಲ.

**ಆರಾಧಿಸುವ ದೈವ ಹಾಗೂ ಹಬ್ಬ ಹರಿದಿನಗಳು**

ಪ್ರತಿಯೊಂದು ಜನ ಸಮುದಾಯಕ್ಕೆ ತಮ್ಮದೆ ಆದ ವಿಶಿಷ್ಟವಾದ ದೈವಗಳು ಹಾಗೂ ಅವುಗಳನ್ನು ಆರಾಧಿಸುವ ಕ್ರಮಗಳು ಭಿನ್ನವಾಗಿರುವಂತೆ ಝೆಂಡೇ ಕುರುಬರ ದೈವಗಳ ಹಾಗೂ ಆರಾಧಿಸುವ ಕ್ರಮಗಳು ಧನಗರ ಸಮುದಾಯಕ್ಕಿಂತ ತುಸು ಭಿನ್ನವಾಗಿಯೇ ಕಾಣುತ್ತವೆ. ಕುಲದೈವ ಹಾಗೂ ಮನೆ ದೈವಗಳನ್ನು ಆರಾಧಿಸುವ ಪದ್ಧತಿಯು ಪ್ರಾಚೀನ ಕಾಲದಿಂದಲೂ ಬಂದಿರುವಂತಹದು. ಧನಗಾರರು ಮತ್ತು ಝೆಂಡೇ ಕುರುಬರು ಒಂದೇ ಆಗಿದ್ದು. ಕಾಲಾನುಕ್ರಮದಲ್ಲಿ ಇವೆರಡು ಸಮುದಾಯಗಳು ಬೇರೆ ಬೇರೆಯಾದಂತೆ ಇವರು ಆರಾಧಿಸುವ ದೇವರುಗಳು ಸಹ ಬೇರೆಯಾದಂತೆ ತೋರುತ್ತದೆ. ಧನಗಾರರ ಮೂಲ ದೇವರುಗಳಾದ ವಿಠ್ಠಲ ಮತ್ತು ಬೀರಪ್ಪ ಈ ಎರಡು ದೇವರುಗಳನ್ನು ಝೆಂಡೇ ಕುರುಬರಲ್ಲಿ ಕುಳೆಕಾರ, ಕಟ್ಟೆಕಾರ, ಮುಡಸಿನಕಾರ ಮುಂತಾದ ಬೆಡಗಿನವರು ವಿಠ್ಠಲನನ್ನು, ತೌವಡೆ, ತಾಂದಳೆ ಮುಂತಾದ ಬೆಡಗಿನವರು ಬೀರಪ್ಪನನ್ನು ಆರಾಧಿಸುತ್ತಾರೆ. ಹಾಗೂ ಈ ಎರಡು ದೇವರುಗಳನ್ನು ಏಕರೂಪದಲ್ಲಿಯೇ ಆರಾಧಿಸುತ್ತಾ ಬಂದಿದ್ದಾರೆ. ಇನ್ನುಳಿದ ಕೆಲವು ಬೆಡಗಿನವರು ಖಂಡೋಬಾ, ಧರೋಬಾ, ಧೂಳೋಬಾ, ಮಾಳಿಂಗರಾಯನನ್ನು ಆರಾಧಿಸುವರು. ಅದರಂತೆ ಸ್ತ್ರೀ ದೇವತೆಗಳಾದ ಸವದತ್ತಿ ಯಲ್ಲಮ್ಮ, ಕಕ್ಕೇರಿಯ ಕರಿಯಮ್ಮ, ತುಳಜಾಪುರದ ತುಳಜಮ್ಮ, ಮುಚ್ಚಂಡಿ ಜಕ್ಕಮ್ಮ, ಚಿಂಚಲಿ ಮಾಯಮ್ಮ ಮುಂತಾದ ದೇವತೆಗಳನ್ನು ಆರಾಧಿಸುತ್ತಾರೆ.

ಯುಗಾದಿಯ ಪಾಡ್ಯೆಯ ದಿನವನ್ನು ಗುಡಿಪಾಡ್ಯ ಎಂದು ಕೂಡ ಕರೆಯುವರು. ಈ ದಿನದಂದು ಒಂದು ಉದ್ದನೆಯ ಗಳವನ್ನು ತೆಗೆದುಕೊಂಡು ಅದಕ್ಕೆ ಮಾವಿನ ಮತ್ತು ಬೇವಿನ ಸೊಪ್ಪನ್ನು ಒಂದರಂತೆ ಒಂದು ಮೇಲಿಂದ ಕೆಳಗಿನವರೆಗೆ ದಾರದಿಂದ ಕಟ್ಟಿ, ಗಳದ ಮೇಲೆ ತುದಿಗೆ ಮಳ ಉದ್ದದ ಕೇಸರಿ ಇಲ್ಲವೆ ಕೆಂಪು ಬಣ್ಣದ ಹೊಸ ಬಟ್ಟೆಯನ್ನು ತೆಗೆದುಕೊಂಡು ನೀರಿಗೆ ಮಾಡಿಕಟ್ಟಿ, ಅದರ ಮೇಲೆ ಒಂದು ಸಣ್ಣ ತಂಬಿಗೆ ಇಲ್ಲವೆ ಗಿಂಡಿಯನ್ನು ದಬ್ಬಮಾಡಿ ಗಳಗಕ್ಕೆ ಕಳಸದಂತೆ ಸಿಗಿಸಿ ಇಟ್ಟು, ಅರಿಸಿಣ ಕುಂಕುಮ ಹಚ್ಚಿ ಮುಂಬಾಗಿಲ ಮುಂದೆ ಗಳವನ್ನು ಹುಗಿದು ಪೂಜೆ ಮಾಡಿ ಮನೆಯಲ್ಲಿ ತಯಾರಿಸಿದ ಶಾವಿಗೆ ಪಾಯಸ ಇಲ್ಲವೆ ಹೋಳಿಗೆಯ ಎಡೆ ಹಿಡಿಯುವರು. ಇದಕ್ಕೆ ಇವರು ಗುಡಿ ಏರಿಸುವ ಸಂಪ್ರದಾಯ ಎನ್ನುವರು. ಹಿಂದೆ ತಮ್ಮ ಪೂರ್ವಜರು ಯುಗಾದಿಯ ಪಾಡ್ಯೆಯಂದು ತಮ್ಮ ಕುರಿ ಹಾಗೂ

ಗೋವುಗಳನ್ನು ಮೇಯಿಸುವ ಗೋಮಾಳಗಳ ಸೀಮೆಯೆಲ್ಲಿಯವರೆಗೆ ಇದೆ ಎಂಬುದನ್ನು ಗುರುತಿಸಲು ಸೀಮೆಯ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಗುಡಿ ಧ್ವಜ, ಝಂಡೆಗಳನ್ನು ನೆಡುತ್ತಿದ್ದರಂತೆ. ಒಂದು ವೇಳೆ ಬೇರೆಯವರು ಅದನ್ನು ಆಕ್ರಮಿಸಿಕೊಂಡರೆ ಅವರನ್ನು ಎದುರಿಸಿ ಸೀಮೆಯನ್ನು ಗುರುತಿಸಿಕೊಳ್ಳುವ ಸಂಪ್ರದಾಯದ ಹಿನ್ನೆಲೆಯೇ ಗುಡಿಯ ಸಂಪ್ರದಾಯ. ಪೌರಾಣಿಕ ಹಿನ್ನೆಲೆಯ ಪ್ರಕಾರ ಶ್ರೀ ರಾಮಚಂದ್ರನು ರಾವಣೇಶ್ವರನನ್ನು ಸೋಲಿಸಿ ಸೀತಾ ಮಾತೆಯನ್ನು ಕರೆದುಕೊಂಡು ಅಯೋಧ್ಯೆಯನ್ನು ಪ್ರವೇಶಿಸಿದ ಹಿನ್ನೆಲೆಯಾಗಿ ಪ್ರತಿ ಮನೆಮನೆಯ ಮುಂದೆಯೂ ಧ್ವಜ ಗುಡಿ ಹಾರಿಸಿ ಸ್ವಾಗತಿಸಲಾಯಿತು ಎಂಬುದು. ಅದು ಈಗಲೂ ಮುಂದುವರೆದುಕೊಂಡು ಬಂದಿದೆ ಎನ್ನಲಾಗಿದೆ.

ಪಂಚಮಿಯ ಹಬ್ಬದಂದು ಮನೆಯಲ್ಲಿ ಒಳಕಲ್ಲು ಮತ್ತು ಬೀಸುವ ಕಲ್ಲು ಇರುವ ಸ್ಥಳದ ಗೋಡೆಯ ಮೇಲೆ ಚೌಕಾಕಾರವಾಗಿ ಆಕಳ ಸಗಣಿಯಿಂದ ಸಾರಿಸಿ ಅದರ ಮೇಲೆ ಸುಣ್ಣದ ನೀರಿನಿಂದ ಗೋಪುರದ ಗುಡಿಯನ್ನು ಬರೆದು, ಅದರ ಮಧ್ಯದಲ್ಲಿ ಹೆಡೆ ಇರುವ ಐದು ಸುತ್ತಿನ ನಾಗರ ಹಾವಿನ ಚಿತ್ರ ಬರೆದು ಹುತ್ತಿನ ಮಣ್ಣಿನಿಂದ ಮಾಡಿದ ನಾಗಪ್ಪನನ್ನು ಅದರ ಮುಂದಿಟ್ಟು ಪೂಜೆ ಮಾಡಿ, ಮನೆ ಮಂದಿಯೆಲ್ಲ ನಾಗಪ್ಪನಿಗೆ ಹಾಲನ್ನೆರೆಯುವರು. ಅಲ್ಲದೆ ಗುಳ್ಳವ್ವನನ್ನು ಇಟ್ಟು ಪೂಜಿಸುವುದು. ಇದೇ ವೇಳೆಯಲ್ಲಿ ಹೊಸದಾಗಿ ಮದುವೆಯಾದ ಮಗಳು ಮತ್ತು ಅಳಿಯನನ್ನು ಅಳಿಯತನಕ್ಕೆ ಕರೆದು ತಮ್ಮ ಶಕ್ತ್ಯಾನುಸಾರ ಅಳಿಯನಿಗೆ ಬಂಗಾರ ಅಥವಾ ಬೆಳ್ಳಿಯ ಒಡವೆಗಳನ್ನು ಕೊಟ್ಟು ಮಗಳು ಮತ್ತು ಅಳಿಯನಿಗೆ ಹೊಸ ಬಟ್ಟೆಯನ್ನು ನೀಡಿ ಆರತಿ ಮಾಡಿ ಗೌರವಿಸುವರು. ಮಹಾನವಮಿಯ ಪಾಡ್ಯೆ ದಿನ ಮನೆಯ ಯಜಮಾನ ಮತ್ತು ಯಜಮಾನಿ ಕೂಡಿಕೊಂಡು ದೇವರ ಮನೆಯನ್ನು ಹಾಗೂ ದೇವರ ಜಗಲಿಯನ್ನು ಸ್ವಚ್ಛ ಮಾಡಿ ಅದಕ್ಕೆ ಸುಣ್ಣಬಣ್ಣ ಬಳಿದು ಶೃಂಗರಿಸಿ, ಅವತ್ತೆ ಜಗಲಿಯ ಮೇಲೆ ಲಕ್ಷ್ಮಿಯನ್ನು ಸ್ಥಾಪಿಸಿ, ಮಣ್ಣಿನ ಪಾತ್ರೆಯಲ್ಲಿ ಇರುವ ಹುತ್ತಿನ ಮಣ್ಣನ್ನು ಹಾಕಿ, ಅದರಲ್ಲಿ ಐದು ತೆರನಾದ ಧಾನ್ಯಗಳನ್ನು ಹಾಕಿ ಅದರ ಮೇಲೆ ನೀರು ಹಾಕಿ, ಅದನ್ನು ಲಕ್ಷ್ಮಿ ಕಳಸದ ಮುಂದೆ ಇಟ್ಟು ಅದರ ಪಕ್ಕದಲ್ಲಿಯೇ ನಂದಾ ದೀವಿಗೆಯನ್ನು ಇಟ್ಟು ನಿರಂತರ ಒಂಬತ್ತು ದಿನಗಳವರೆಗೆ ಪೂಜಿಸುತ್ತಾರೆ. ಇದನ್ನು ನವರಾತ್ರಿಯ ಘಟ್ಟಾ ಹಾಕುವುದು ಎನ್ನುವರು. ಈ ಘಟ್ಟ ಹಾಕುವ ಪದ್ಧತಿ ಝಂಡೆ ಕುರುಬರ ಕೆಲವೊಂದು ಬೆಡಗಿನವರು ಕಟ್ಟುನಿಟ್ಟಾಗಿ ಆಚರಿಸುತ್ತಾರೆ. ಮನೆಯ ಯಜಮಾನ ಮತ್ತು ಯಜಮಾನಿ ಒಂದ್ಹೊತ್ತು ಇದ್ದು ಲಕ್ಷ್ಮಿ ಮುಂದಿರುವ ನಂದಾದೀವಿಗೆ ಆರದಂತೆ ಹಗಲು ರಾತ್ರಿ ಕಾಯುತ್ತಾರೆ. ಕೆಲವು ಒಂಬತ್ತು ದಿನಗಳವರೆಗೆ ರಾತ್ರಿ ಬೆಳತನಕ ಡೊಳ್ಳಿನ ಹಾಡಿನ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾರೆ. ಮಣ್ಣಿನ ಪಾತ್ರೆಯಲ್ಲಿದ್ದ ಸಸಿಗಳು ಎತ್ತರೆತ್ತರ ಬೆಳೆಯಲೆಂದು ಆಶಿಸುತ್ತಾರೆ. ನಂದಾದೀವಿಗೆ ಕೆಡಕಾಗುತ್ತದೆ ಎಂಬ ಬಲವಾದ ನಂಬಿಕೆಯಿಂದ ಹಗಲು ರಾತ್ರಿ ಒಂಬತ್ತು ದಿನಗಳವರೆಗೆ ಅದನ್ನು ಕಾಯುತ್ತಾರೆ.

ದೀಪಾವಳಿ ಪಾಡ್ಯೆ ಬರುವುದಕ್ಕಿಂತ ಮೊದಲನೆಯ ಐದು ದಿನ ಸೆಗಣಿಯಲ್ಲಿ ಪಾಂಡವರನ್ನು ಮಾಡಿ ಪೂಜಿಸಿ, ನರಕ ಚತುರ್ದಶಿಯ ದಿನದಂದು ಮನೆಯವರೆಲ್ಲರೂ ಎರೆದುಕೊಂಡು ಮನೆಯ ಒಳಗಡೆ ಇರುವ ಈ ಪಾಂಡವರನ್ನು ಮನೆಯ ಮಾಳಿಗೆಯ ಮೇಲೆ ಒಯ್ದು ಉತ್ತರಾಣಿಯ ಕಡ್ಡಿಗಳನ್ನು ಅವುಗಳ ತಲೆಯ ಮೇಲೆ ಚುಚ್ಚಿ ಹೊನ್ನಾವರಿಯ ಹೂವುಗಳಿಂದ ಶೃಂಗರಿಸಿ ಮನೆಯ ಕುಂಬಿಯ ಮೇಲೆ ಸಾಲಾಗಿ ಇಟ್ಟು ಪೂಜಿಸಿ ಎಡಿಯನ್ನು ಹಿಡಿದು ಸಂಭ್ರಮಿಸುತ್ತಾರೆ. ದೀಪಾವಳಿಯ ಪಾಡ್ಯೆಯಂದು ಮನೆಯಲ್ಲಿ ಕುರಿ ಇದ್ದವರು ತಮ್ಮ ಹಟ್ಟಿ (ದಡ್ಡಿ)ಯಲ್ಲಿ ಐದು ಜೋಳದ ದಂಟಿನ ಗುಡಿಸಲು ಹಾಕಿ, ಅದರ ಕೆಳಗೆ ಕರಿಕಂಬಳಿಯ ಗದ್ದುಗೆಯನ್ನು ಹಾಕಿ ಅದರ ಮೇಲೆ ಪಂಚ ಪಾಂಡವರಿಗೆ ಸುಣ್ಣಕ್ಯಾಮಿ ಮತ್ತು ಕರಿಬುಕಿಟನ್ನು ಹಚ್ಚಿ, ದಂಡೆಯ ಚೆಂಡು ಹೂವುಗಳಿಂದ ಶೃಂಗರಿಸಿ, ಹಟ್ಟಿಯ ಹೊರಗಡೆ ಬಯಲಲ್ಲಿದ್ದ ಕುರಿಗಳಿಗೆ ಬಂಡಾರ ಕುಂಕುಮ ಬೊಟ್ಟುಗಳನ್ನಿಟ್ಟು ಪೂಜಿಸುತ್ತಾರೆ. ಈ ಪೂಜೆ ಮುಗಿದ ನಂತರ ಕುರಿಕಾಯುವ ತಮ್ಮ ಅಥವಾ ಅಣ್ಣ ಬಂದು ಗಂಗಾಳವನ್ನು ತೆಗೆದುಕೊಂಡು ಅದನ್ನು ಬಾರಿಸುತ್ತಾರೆ. ಆ ವೇಳೆಯಲ್ಲಿ ಹಬ್ಬಕ್ಕೆಂದು ಬಂದ ಅಕ್ಕ-ತಂಗಿಯರು ಬೆದರಿ ಓಡುವ ಕುರಿಗಳನ್ನು ಹಿಡಿಯುತ್ತಾರೆ. ಯಾರು ಎಷ್ಟು ಕುರಿಗಳನ್ನು ಹಿಡಿಯುತ್ತಾರೋ ಆ ಕುರಿಗಳು ಅವರಿಗೆ ಸೇರಿದ್ದು, ಆದರೆ ಆ ಕುರಿಗಳನ್ನು ಅವರು ತಮ್ಮ ಗಂಡನ ಮನೆಗೆ ಒಯ್ಯಲಾರದೆ ಅವುಗಳನ್ನು ಅವರ ಹಿಂಡಿನಲ್ಲಿಯೇ ಬಿಟ್ಟು ಹೋಗುತ್ತಾರೆ. ಮುಂದೆ ಆ ಕುರಿಗಳಿಂದ ಬಂದ ಹಣವಾಗಲಿ ಇಲ್ಲ ಮರಿಗಳಾಗಲಿ ಎಲ್ಲವನ್ನು ನ್ಯಾಯವಾಗಿ ಅವರಿಗೆ ಒಪ್ಪಿಸಬೇಕು. ಒಂದು ವೇಳೆ ನಿಮ್ಮ ಕುರಿಗಳು ಬ್ಯಾನಿ ರೋಗ ಬಂದು ಸತ್ತು ಹೋದವು ಎಂದು ಸುಳ್ಳು ಹೇಳಿದರೆ ಅವರು ಏಳಿಗೆ ಆಗಲಾರರು ಎಂಬ ಬಲವಾದ ನಂಬಿಕೆ ಇವರಲ್ಲಿದೆ. ಕುರಿಗಾರರ ದಡ್ಡಿಯೆಂದರೆ ಲಕ್ಷ್ಮಿಯ ವಾಸವೆಂದು ನಂಬಿರುವ ಇವರು ದೀಪಾವಳಿಯ ಹಬ್ಬ ಮುಗಿಯುವವರೆಗೂ ಮನೆಯಲ್ಲಿಯ

ಸೆಗಣಿಯನ್ನು ಹೊರಗೆ ಕೊಡುವುದಿಲ್ಲ. ಹಾಗೆ ಈ ಹಬ್ಬವನ್ನು ಹಟ್ಟಿ ಹಬ್ಬವೆಂತಲೂ ಕೂಡ ಕರೆಯುತ್ತಾರೆ. ಇನ್ನುಳಿದ ಹಬ್ಬಗಳನ್ನು ಇವರು ಇತರೆ ಸಮುದಾಯದವರಂತೆಯೇ ಆಚರಿಸುತ್ತಾರೆ.

**ಜನನ, ಮರಣ, ಮದುವೆ ವಿಧಿ ಸಂಸ್ಕಾರ**

ಮಗು ಹುಟ್ಟಿದ ಹನ್ನೆರಡರಿಂದ ಹದಿನೈದು ದಿನಗಳವರೆಗೆ ಸೂತಕವೆಂದು ಭಾವಿಸುವರು. ಮಗು ಹುಟ್ಟಿ ಐದನೆಯ ದಿವಸಕ್ಕೆ ಐದೇಸಿ ಎಂದು ಮಾಡುವರು. ಅಂದರೆ ಐದರಿಂದ ಎಂಟು ವರ್ಷ ತುಂಬಿದ ಐದು ಹುಡುಗರನ್ನು ಕರೆತಂದು ಮನೆಯ ಪಡಸಾಲೆಯಲ್ಲಿ ಕರಿಕಂಬಳಿ ಹಾಸಿ, ಅವರನ್ನು ಕುಳ್ಳಿರಿಸಿ ಅವರ ನೆತ್ತಿಗೆ ಕೊಬ್ಬರಿ ಎಣ್ಣೆಯನ್ನು ಹಾಕಿ, ಗಲ್ಲಕ್ಕೆ ನೀರಿನಲ್ಲಿ ಕೊಬ್ಬರಿ, ಅರಿಸಿಣ ಕೊಂಬು, ಬೆಲ್ಲದಚೂರು, ಉತ್ಪತ್ತಿ ಇವುಗಳಲ್ಲಿ ಯಾವುದಾದರೂ ಐದನ್ನು ಇಟ್ಟು ಉಡಿ ತುಂಬುವರು. ಹೀಗೆ ಉಡಿ ತುಂಬುವಾಗ ಮಗುವನ್ನು ಅವರ ಮುಂದೆ ಇಟ್ಟಿರುತ್ತಾರೆ. ನಂತರ ಅವರಿಗೆ ಊಟ ಮಾಡಿಸಿ ಕಳಿಸುವರು. ಇದನ್ನೇ ಶೆಟಿಗೆವ್ವನ ಪೂಜೆಯೆಂದು ಕೂಡ ಕರೆಯುವರು. ಈ ಪೂಜೆಯ ದಿನದಂದು ಶೆಟಿಗೆವ್ವ ಬಂದು ಆ ಮಗುವಿನ ಹಣೆ ಬರಹವನ್ನು ಬರೆಯುತ್ತಾಳೆ ಎಂಬ ಬಲವಾದ ನಂಬಿಕೆ ಇವರಲ್ಲಿದೆ. ಹನ್ನೆರಡು ಇಲ್ಲವೆ ಹದಿನೈದನೆಯ ದಿನಕ್ಕೆ ತಮ್ಮ ಕುಲಬಾಂಧವರೆಲ್ಲರನ್ನು ಕರೆದು ಮಗುವಿನ ನಾಮಕರಣ ಮಾಡುವರು. ನಾಮಕರಣವನ್ನು ಮಗುವಿನ ಸೋದರತ್ತೆಯೇ ಮಾಡಬೇಕು. ಒಂದು ಒಳ್ಳೆಯ ಶುಭದಿನದಂದು ತಮ್ಮ ಮನೆದೇವರ ಎದುರಿನಲ್ಲಿ ಮಗುವಿಗೆ ಒಂದು ವರ್ಷ ತುಂಬುವುದರೊಳಗೆ ಜವಳವನ್ನು ತೆಗೆಸುತ್ತಾರೆ. ಹೀಗೆ ಜವಳವನ್ನು ತೆಗೆಯುವಾಗ ನೆತ್ತಿಯ ಮೇಲಿನ ಜವಳವನ್ನು ಬಿಟ್ಟು ಉಳಿದ ಹುಟ್ಟು ಕೂದಲನ್ನು ತೆಗೆಯುತ್ತಾರೆ. ಅಲ್ಲದೆ ಬ್ರಾಹ್ಮಣರಂತೆ ಜುಟ್ಟವನ್ನು ಸಹ ಬಿಡುವುದುಂಟು. ಈ ಜುಟ್ಟನ್ನು ಬಿಡುವ ಸಂಪ್ರದಾಯ ಕುಳೆಕಾರ ಬೆಡಗದವರಲ್ಲಿ ಮಾತ್ರ ಕಂಡುಬರುತ್ತದೆ.

ಕುರುಬರ ಇತರ ಸಮುದಾಯದಂತೆ ಇವರಲ್ಲಿಯೂ ಶವಸಂಸ್ಕಾರ ವಿಧಿಗಳು ಒಂದೇ ತೆರನಾಗಿದ್ದರೂ, ಇವರಲ್ಲಿ ಶವವನ್ನು ಸಿದಿಗೆಯ ಮೇಲೆ ಕುಳ್ಳಿರಿಸದೇ ಮಲಗಿಸಿಕೊಂಡು ಹೋಗಿ ಸುಡುತ್ತಾರೆ. ಸತ್ತವನ ಹಿರಿಯ ಮಗ ಇಲ್ಲವೆ ಅವನಿಗೆ ಗಂಡುಮಕ್ಕಳು ಇಲ್ಲದ ವೇಳೆಯಲ್ಲಿ ತಮ್ಮನ ಅಥವಾ ಅಣ್ಣನ ಗಂಡು ಮಗ ಬೆಂಕಿ ಇಡಬೇಕು. ಬೆಂಕಿ ಇಡುವವನ ಹೆಗಲ ಮೆಲೆ ನೀರು ತುಂಬಿದ ಬಿಂದಿಗೆ ಮತ್ತು ಬಲಗೈಯಲ್ಲಿ ಕಿಚ್ಚವನ್ನು ಹಿಡಿದುಕೊಂಡು ಕಟ್ಟಿಗೆಯ ಮೇಲೆ ಅಂಗಾತ ಮಲಗಿಸಿದ ಶವವನ್ನು ಮೂರು ಸುತ್ತು ತಿರುಗಿ ಬೆಂಕಿ ಇಟ್ಟು ಮರಳಿ ನೋಡದೆ ಮುಂದೆ ಹೋಗಬೇಕು. ಮೂರು ಸುತ್ತು ಸುತ್ತುವಾಗ ಬಿಂದಿಗೆಗೆ ಒಂದೊಂದು ಸುತ್ತು ಸುತ್ತಿದಾಗಲು ಒಂದೊಂದು ಸಣ್ಣ ಕಲ್ಲಿನಿಂದ ತೂತನ್ನು ಮಾಡುತ್ತಾರೆ. ಕೊನೆಯ ಸುತ್ತಿಗೆ ಹೆಗಲ ಮೇಲಿನ ಬಿಂದಿಗೆಯನ್ನು ಹಿಂದಕ್ಕೆ ಬಿಟ್ಟು ಮುಂದೆ ಹೋಗಬೇಕು. ಅದರ ಮರುದಿನ ಬೂದಿಗೂಡಿಸುವ ಕಾರ್ಯ ಅಂದರೆ ಬಂಧು-ಬಾಂಧವರೆಲ್ಲರೂ ಕೂಡಿಕೊಂಡು ಬೆಳಗಿನ ಜಾವ ಶವ ಸಂಸ್ಕಾರ ಸ್ಥಳಕ್ಕೆ ಹೋಗಿ. ಮೃತನ ಅಸ್ಥಿಯನ್ನು ಸಂಗ್ರಹಿಸಿ ಮಡಿಕೆಯಲ್ಲಿ ಹಾಕಿ ಹೊಳೆಯಲ್ಲಿ ವಿಸರ್ಜಿಸುವುದಕ್ಕಿಂತ ಮುಂಚೆ, ಅದರಲ್ಲಿಯ ಕೆಲವು ಅಸ್ತಿಗಳನ್ನು ತೆಗೆದುಕೊಂಡು ಹೊಲದಲ್ಲಿರುವ ಆರಿ ಅಥವಾ ಬಣ್ಣಿಗಿಡದ ಬಡ್ಡಿಯ ಪಕ್ಕದಲ್ಲಿ ಹುಗಿದು, ಅದರ ಮೇಲೆ ಮೃತರ ಹೆಸರಿನಲ್ಲಿ ಒಂದು ಶ್ರಾದ್ಧದ ಕಲ್ಲನ್ನಿಟ್ಟು ಬರುತ್ತಾರೆ. ಮುಂದೆ ಆ ಶ್ರಾದ್ಧದ ಕಲ್ಲುಗಳನ್ನು ಅವರ ಹೆಸರಿನಲ್ಲಿ ಪಕ್ಷಮಾಳ ಮತ್ತು ಹಬ್ಬ-ಹರಿದಿನಗಳಲ್ಲಿ ಪೂಜಿಸುವರು. ನಂತರ ಪಿಂಡದಾನ ವಿಧಿ. ಇಲ್ಲಿ ಮೃತನು ಇಷ್ಟಪಡುತ್ತಿದ್ದ ಎಲ್ಲ ಆಹಾರ ಪದಾರ್ಥಗಳನ್ನು ಮಾಡಿಕೊಂಡು ಬಂದು ಎಡೆಯಲ್ಲಿ ಇಟ್ಟು ಶವಸಂಸ್ಕಾರದ ಸ್ಥಳದಲ್ಲಿಟ್ಟು ದೂಪ ಹಾಕಿ ಬಂದವರೆಲ್ಲ ದೂರ ಸರಿದು ನಿಂತು, ಮೃತನು ಕಾಗೆಯ ರೂಪದಲ್ಲಿ ಬಂದು ಭೋಜನವನ್ನು ಸ್ವೀಕರಿಸುವಂತೆ ವಿನಂತಿಸಿಕೊಳ್ಳುತ್ತಾರೆ. ಆ ವೇಳೆಯಲ್ಲಿ ಕಾಗೆಗಳು ಬಂದು ಎಡೆಯನ್ಉ ಸ್ವೀಕರಿಸಿದರೆ ಸತ್ತವನ ಆತ್ಮಕ್ಕೆ ಶಾಂತಿ ದೊರಕಿತು ಎಂದು ಭಾವಿಸುತ್ತಾರೆ. ಒಂದು ವೇಳೆ ಸ್ವೀಕರಿಸದಿದ್ದರೆ ಆತನ ಆತ್ಮಶಾಂತಿಗಾಗಿ ಅವನ ಇಷ್ಟಾರ್ಥಗಳಂತೆ ನಡೆದುಕೊಳ್ಳುವುದಾಗಿ ಬೇಡಿಕೊಂಡು ಧೂಪ ಹಾಕಲು ಕಾಗೆಗಳು ಬಂದು ಖಂಡಿತವಾಗಿಯೂ ಏಡೆಯನ್ನು ಸ್ವೀಕರಿಸಿ ಹೋಗುತ್ತವೆ. ಇದರಿಂದ ಮೃತನ ಆತ್ಮಕ್ಕೆ ಶಾಂತಿ ದೊರಕಿತು ಎಂದು ಭಾವಿಸುತ್ತಾರೆ. ನಂತರ ಐದು, ಒಂಬತ್ತು ಇಲ್ಲವೆ ಹನ್ನೊಂದನೆಯ ದಿನಕ್ಕೆ ದಿನಕರ್ಮವನ್ನು ಮಾಡುತ್ತಾರೆ. ಅಂದು ಸತ್ತ ವ್ಯಕ್ತಿಯ ಹೆಸರಿನಲ್ಲಿ ಬೆಳ್ಳಿಯ ಮುಖವನ್ನು ಮಾಡಿಸಿ, ಸತ್ತಾಗ ಶವವನ್ನು ಕುಳ್ಳಿರಿಸಿದ್ದ ಸ್ಥಳದಲ್ಲಿ ಇಟ್ಟು ಅದಕ್ಕೆ ಹೊಸ ಬಟ್ಟೆಗಳನ್ನು ಏರಿಸಿ ಅದರ ಮುಂದೆ ತುಂಬಿದ ಚರಿಗೆಯನ್ನಿಟ್ಟು ಪೂಜೆ ಮಾಡಿ ಎಡೆಯನ್ನಿಟ್ಟು ದೂಪವನ್ನು ಹಾಕಿ ಆರತಿಯನ್ನು ಮಾಡಿ ಮನೆಯವರೆಲ್ಲ ಮನೆಯಿಂದ ಹೊರಗೆ ಬರುತ್ತಾರೆ. ನಂತರ ಶವ ಹೊರಲು ಮೊದಲು ಹೆಗಲು ಕೊಟ್ಟವರು ಒಳಗೆ ಹೋಗಿ ಮುಖದ ಮುಂದಿಟ್ಟ ಒಂದೆ ಎಡೆಯನ್ನು ತೆಗೆದುಕೊಂಡು ನಾಲ್ವರು ಕೂಡಿಕೊಂಡು ಊಟಮಾಡಿ ಅದೇ ಎಡೆಯಲ್ಲಿ ಕೈ

ಕಾಲು ತೊಳೆದುಕೊಂಡು ಎಲೆ ಅಡಿಕೆ ತಿಂದು ಅದರಲ್ಲಿ ಉಗುಳಿ ಹೊರಗೆ ಬರುವವರೆಗೂ ಮನೆಯವರಾಗಲಿ ಬಂಧು-ಬಾಂಧವರಾಗಲಿ ಅವರೊಂದಿಗೆ ಮಾತನಾಡುವ ಹಾಗಿಲ್ಲ. ಇವರು ಉಂಡು ಹೋದ ನಂತರ ಉಳಿದ ಬಂದುಬಾಂಧವರು ದೂಪ ಹಾಕಿ ಊಟ ಮಾಡಿ ಹೋಗುತ್ತಾರೆ. ಕಿಚ್ಚ ಹಿಡಿದವನ ಮುಂಡನವನ್ನು ಅಂದೆ ಮಾಡಲಾಗುತ್ತದೆ. ಇದಕ್ಕೆ ತಲೆ ಕೊಡುವುದು ಎನ್ನುತ್ತಾರೆ. ಮರುದಿನ ಅವನ ಹೆಸರಿನಲ್ಲಿ ಮಾಡಿಸಿದ ಮುಖವನ್ನು ಜಗಲಿಯ ಮೇಲಿಟ್ಟು ಪೂಜಿಸಿ ದೇವರ ಸ್ಥಾನಮಾನವನ್ನು ನೀಡಿ ದೇವರಾದ್ನಪಾ ಎನ್ನುತ್ತಾರೆ. ಮುಂದೆ ಪ್ರತಿಮಾಳ ಪಕ್ಷಗಳಂದು ಅವರ ಹೆಸರಿನಲ್ಲಿ ಆ ಮುಖವನ್ನು ಪೂಜಿಸಿ ಪ್ರತ್ಯೇಕ ಎಡೆಯನ್ನು ನೈವೇದ್ಯ ಮಾಡುತ್ತಾರೆ. ಇವರ ಹೆಸರಿನಲ್ಲಿ ಒಂದ್ಹೊತ್ತಿಟ್ಟವರು ಈ ಎಡೆಯನ್ನು ಸ್ವೀಕರಿಸುತ್ತಾರೆ. ಹೀಗೆ ಈ ಎಲ್ಲ ಪ್ರಕ್ರಿಯೆಗಳು ವ್ಯಕ್ತಿಯ ಮರಣದ ನಂತರ ನಡೆಯುವ ವಿಧಿಗಳಾಗಿವೆ.

ಝೆಂಡೆ ಕುರುಬರು ತಮ್ಮನ್ನು ಉತ್ತಮ ವಂಶದವರು, ಉತ್ತಮ ಗೋತ್ರದವರು, ಉತ್ತಮ ವರ್ಣದವರು ಎಂದು ಹೇಳಿಕೊಳ್ಳುತ್ತಾರೆ. ಅಗ್ನಿ, ಸೂರ್ಯ, ಚಂದ್ರ, ಸೋಮ ಮತ್ತು ಯದು ವಂಶಗಳನ್ನು, ಪುಂಡಲೀಕ, ಭಾರದ್ವಾಜ, ಕಶ್ಯಪ, ಕೌಂಡಿಲ್ಯ, ಗೌತಮ ಮುಂತಾದ ಗೋತ್ರಗಳನ್ನು ತಮ್ಮ ವಂಶಗಳ ಜೊತೆಯಲ್ಲಿ ಹಚ್ಚಿಕೊಳ್ಳುತ್ತಾರೆ. ಅಲ್ಲದೆ ಲೌವಚರ, ಥೋರಾತ್, ಕೊಳೆಕರ, ಸೋಳಂಕರ, ದೇವಕತೆ, ಹಾಲಿನವರ, ಕೋಕರೆ, ಜಾನಕರ, ಕಾಳೆ, ಗಡದೆ, ಲೋಕರೆ, ದಾಯಗೋಡೆ ಮುಂತಾದ ಕುಳಿಗಳನ್ನು, ಈ ಕುಳಿಗಳಿಗೆ ಮತ್ತೆ ಉಪನಾಮಗಳನ್ನು ಸಹ ಹಚ್ಚಿಕೊಳ್ಳುತ್ತಾರೆ. ಈ ಉಪನಾಮಗಳನ್ನು ಇವರು ತಮ್ಮ ಬೆಡಗುಗಳೆಂದು ಹೇಳಿಕೊಳ್ಳುತ್ತಾರೆ.

ಮನೆ ದೇವರು ಹಾಗೂ ಬೆಡಗುಗಳು ಒಂದೇ ಆದರೆ ಮದುವೆ ಮಾಡಲು ಅಂದರೆ ಸಂಬಂಧ ಬೆಳೆಸಲು ಬರುವುದಿಲ್ಲ. ಹೆಚ್ಚಾಗಿ ರಕ್ತ ಸಂಬಂಧದಲ್ಲಿಯೇ ಮದುವೆಗಳು ನಡೆಯುವುದುಂಟು. ಸೋದರತ್ತೆಯ ಇಲ್ಲವೆ ಅಕ್ಕನ ಮಗಳನ್ನು ಮದುವೆ ಆಗುತ್ತಾರೆ. ಇಲ್ಲವೆ ಬೇರೆ ಬೆಡಗಿ ಹೆಣ್ಣು ಮಕ್ಕಳನ್ನು ಮದುವೆಯಾಗುತ್ತಾರೆ. ಮದುವೆಯ ಕಾರ್ಯವು ಮೊದಲು ಮೂರು ದಿನಗಳವರೆಗೆ ನಡೆಯುತ್ತಿದ್ದವು. ಮೊದಲನೆಯ ದಿನ ಬಷ್ತಗಿ ಕಾರ್ಯ ಅಂದರೆ ನಿಶ್ಚಿತಾರ್ಥ, ನಂತರ ಮನೆದೇವರ ಆಧಾರದ ಮೇಲೆ ದೇವತಾ ಕಾರ್ಯಗಳನ್ನು ಮಾಡುತ್ತಾರೆ. ಮನೆದೇವರು ಯಲ್ಲಮ್ಮ, ತುಳಜಮ್ಮ ಜಕ್ಕವ್ವ, ಎಕ್ಕವ್ವ, ಮಾಯವ್ವ ಆಗಿದ್ದರೆ ಗೊಂದಲ ಎನ್ನುವ ದೇವತಾ ಕಾರ್ಯವನ್ನು ಮಾಡುತ್ತಾರೆ. ಮದುವೆ ಮನೆಯ ಯಜಮಾನ ಗೊಂದಲಿಗರ ಮನೆಗೆ ಹೋಗಿ ಎಲೆಅಡಿಕೆ ವಿಳ್ಯೆ ಕೊಟ್ಟು ಅವರನ್ನು ಒಪ್ಪಿಸಿ ಅವರ ಮನೆಯಿಂದ ಒಂದು ಕವಡೆಯ ಸರವನ್ನು ಮನೆಗೆ ತರುತ್ತಾನೆ. ಅದರಂತೆ ಗೊಂದಲಿಗರು ಮದುವೆಯ ಮೊದಲ ದಿನ ಬಂದು ಸಂಜೆ ಸಾರಿಸಿದ ನೆಲದ ಮೇಲೆ ಚೌರಂಗ ಹಾಕಿ ಎಂಟು ದಿಕ್ಕುಗಳನ್ನು ಗೊತ್ತು ಮಾಡುತ್ತಾರೆ. ದಂಟು, ಕಬ್ಬು, ಬಾಳೆಗಿಡಗಳಿಂದ ಬನ ನಿರ್ಮಿಸಿ ಮಧ್ಯದಲ್ಲಿ ಚೌರಂಗದ ಮೇಲೆ ಮಣಿ ಹಾಕಿ ಕಲಶ ಇಡುತ್ತಾರೆ. ತಾಮ್ರದ ಚರಿಗೆಯಲ್ಲಿ ನೀರು ಹಾಕಿ, ನೀರಿನಲ್ಲಿ ಒಂದು ಗಟ್ಟಿ ನಾಣ್ಯವನ್ನು ಹಾಕಿ, ಚರಿಗೆಯ ಬಾಯಿಗೆ ಐದು ವೀಳ್ಯದೆಲೆಗಳನ್ನಿಟ್ಟು, ಟೆಂಗಿನಕಾಯಿಯನ್ನು ಇರುಸುವರು. ಈ ಕಾಯಿಗೆ ನತ್ತು ಇಡಿಸಿ, ಅರಿಸಿಣ ಕುಂಟುಮ ಹಚ್ಚಿ ಚರಿಗೆಯ ಕಂಠಕ್ಕೆ ಬಂಗಾರದ ಸರಗಳನ್ನು ಹಾಕುವರು, ಇದೇ ಕಲಶ. ಈ ಕಲಶವೆ ಶಕ್ತಿದೇವಿಯ ಪ್ರತೀಕ. ದೂರದಲ್ಲಿ ದೀವಟಿಗೆಯನ್ನು ಉರಿಸುತ್ತಾರೆ. ಅದೇ ವೇಳೆ ಆರತಿ ಉರಿಯುತ್ತಿರಬೇಕು.[7]ದೀವಟಿಗೆ ಮತ್ತು ಆರತಿಗೆ ಎಣ್ಣೆ ಹಾಕುವವನಿಗೆ ದೀವಟಿಗೆ ಮಾಮಾ ಎನ್ನುವರು. ಕಲಶಕ್ಕೆ ಹೂವು ಏರಿಸಿ ತಮ್ಮ ಸಂಬಾಳ, ತುಂತುಣಿ ವಾದ್ಯಗಳೊಂದಿಗೆ ದೇವಿಯ ಸ್ತುತಿಯ ಮಾಡಿ ರಾತ್ರಿ ಬೆಳತನಕ ದೇವಿ ಮಹಿಮೆಯ ಸುಂದರ ಕಥೆಗಳನ್ನು ಹೇಳುತ್ತಾರೆ. ಬೆಳಗಿನ ಜಾವದಲ್ಲಿ ಮಂಗರಾತಿಯ ಪದವನ್ನು ಹಾಡಿ ದೇವತ ಕಾರ್ಯವನ್ನು ಮುಗಿಸವರು.

ಮೈಲಾರ ಮನೆದೇವರು ಇರುವವರು ಬೆಳಕು ಹೊರಡಿಸುವ ಇಲ್ಲವೆ ಹಡ್ಡಲಗಿ ಹೊರಸು ತುಂಬುವ ದೇವತಾ ಕಾರ್ಯವನ್ನು ಮಾಡುತ್ತಾರೆ. ಮದುವೆಯ ಮೊದಲನೆಯ ದಿನ ಸಂಜೆ ಗೊರಪ್ಪಗಳು ಮದುವೆಯ ಮನೆಗೆ ಬಂದು ಮನೆಯ ದೇವರ ಕೋಣೆಯಲ್ಲಿರುವ ಜಗಲಿಯನ್ನು ಹೂವಿನಿಂದ ಶೃಂಗರಿಸಿ ಮೈಲಾರ ದೇವರ ಹಿತ್ತಾಳೆಯ ಪ್ರತಿಮೆಯನ್ನು ಪೂಜೆ ಮಾಡಿ ಅಲ್ಲಿಂದ ದೀವಟಿಗೆಯನ್ನು ಹಚ್ಚಿಕೊಂಡು ಏಳುಕೋಟಿ ಏಳುಕೋಟಿ ಅನ್ನುತ್ತ ಢಮರು ಮತ್ತು ಗಂಟೆಗಳನ್ನು ಬಾರಿಸುತ್ತಾ ಮನೆಯ ಮುಂದಿನ ಹಂದರದಲ್ಲಿಯ ಹೋಳಿಗೆ, ಕಡಬು ತುಂಬಿದ ಹೊರಸಿನ ಸಮೀಪಕ್ಕೆ ಬಂದು ಅದನ್ನು ಐದು ಸುತ್ತು ಹಾಕಿ ದೀವಟಿಗೆಯನ್ನು ಒಬ್ಬ ಗೊರಪ್ಪ ಹಿಡಿದುಕೊಂಡು ನಿಲ್ಲುತ್ತಾನೆ. ನಾಯಿಯಂತೆ ಬಾಗಿ ಹೊರಸಿನ ಮೆಲಿರುವ ಹೋಳಿಗೆ ಕಡಬುಗಳನ್ನು ತಿನ್ನುತ್ತಾರೆ. ತಿಂದ ನಂತರ ತೀವ್ರವಾಗಿ ಢಮರುಗಳನ್ನು ಬಾರಿಸುತ್ತಾ ಮೈಯಲ್ಲಿ ದೇವರು ತುಂಬಿದವರಂತೆ ಆವೇಶ ಭರಿತವಾಗಿ ಕುಣಿಯುತ್ತಾರೆ. ಆ ವೇಳೆಯಲ್ಲಿ ಅಕ್ಕ-ಪಕ್ಕದಲ್ಲಿ

ನಿಂತವರು ಗಟ್ಟಿಯಾಗಿ ರೂಪಾಯಿಯನ್ನು ಅವರಿಗೆ ತೋರಿಸಿ ನೆಲದಲ್ಲಿ ಅದನ್ನು ಮುಚ್ಚಿಡುತ್ತಾರೆ. ಗೊರಪ್ಪಗಳು ಕುಣಿಯುತ್ತ ನೆಲದಲ್ಲಿದ್ದ ರೂಪಾಯಿಯನ್ನು ನಾಯಿಯಂತೆ ಬಾಗಿ ಮೂಸಿ ನೋಡಿ ಬಾಯಿಂದ ಅದನ್ನು ತೆಗೆದುಕೊಳ್ಳಬೇಕು. ಹೀಗೆ ಹೊರಸಿನ ಕಾರ್ಯ ಮುಗಿದ ನಂತರ ಗೊರಪ್ಪಗಳು ಢಮರು ಮತ್ತು ಗಂಟೆಯ ಲಯದೊಂದಿಗೆ ರಾತ್ರಿ ಬೆಳತನಕ ಮೈಲಾರ ದೇವರ ಮಹಿಮೆಯನ್ನು ಬಿಂಬಿಸುವ ರಸವತ್ತಾದ ಹಾಡುಗಳನ್ನು ಹಾಡುತ್ತಾರೆ.

ಧರೆದೇವರು, ರೇವಣಸಿದ್ಧ, ಮಾಳಿಂಗರಾಯ ಮನೆದೇವರಾಗಿದ್ದರೆ. 'ಜಕನೇರಿ ಕೊಡ'ದ ದೇವತಾ ಕಾರ್ಯವನ್ನು ಮಾಡುವರು. ಈ ದೇವತ ಕಾರ್ಯಕ್ಕೆ ಏಳು ಮಂದಿ ಮುತ್ತೈದೆಯರು ಮತ್ತು ಒಬ್ಬ ಗಂಡ ಸತ್ತವಳಿಗೆ (ವಿಧವೆಗೆ) ಒಂದ್ಹೊತ್ತಿಟ್ಟು, ಕುಂಬಾರನಿಗೆ ಹಣ ಕೊಟ್ಟು ಏಳು ಕೊಡಗಳನ್ನು ತೈಯಾರಿಡಲು ಹೇಳಿ, ಈರಗಾರರಿಗೆ ಮತ್ತು ಡೊಳ್ಳಿನ ಮೇಳದವರಿಗೆ ವೀಳ್ಯವ ಕೊಟ್ಟ ಮದುವೆಯ ಮೊದಲನೆಯ ದಿನ ನಡೆಯುವ ದೇವತಾ ಕಾರ್ಯಕ್ಕೆ ಇವರೆಲ್ಲರನ್ನು ಮದುವೆಯ ಮನೆಯವರು ಆಹ್ವಾನಿಸುತ್ತಾರೆ. ಅದರಂತೆ ಇವರೆಲ್ಲರೂ ಮದುವೆಯ ಹಂದರಕ್ಕೆ ಬಂದು ಊದಿಸುತ್ತ ಬಾರಿಸುತ್ತ ಕುಂಬಾರನ ಮನೆಗೆ ಹೋಗಿ ಮಣ್ಣಿನ ಏಳು ಕೊಡಗಳನ್ನು ಪೂಜಿಸಿ ಮದುವೆಯ ಮಂಟಪಕ್ಕೆ ತರುತ್ತಾರೆ. ಅಲ್ಲಿ ಏಳು ಜನ ಮುತ್ತೈದೆಯರು ತಮ್ಮ ಕೊಡಗಳನ್ನು ಸುಣ್ಣ ಕ್ಯಾಮಿಗಳಿಂದ ಚಿತ್ತಾರ ಬರೆದು ಶೃಂಗರಿಸುತ್ತಾರೆ. ಇದಾದ ನಂತರ ಏಳು ಮುತ್ತೈದೆಯರು ತಮ್ಮ ತಮ್ಮ ಕೊಡಗಳನ್ನು ತಲೆಯ ಮೇಲೆ ಹೊತ್ತುಕೊಂಡು ಮತ್ತೆ ಉದುತ್ತಾ, ಬಾರಿಸುತ್ತ ಹೊಳೆಗೆ ಬಂದು ಹೊಳೆಗಂಗವ್ವನ ಉಡಿತುಂಬಿ ಕೊಡದಲ್ಲಿ ನೀರನ್ನು ತುಂಬಿಕೊಂಡು ಮದುವೆಯ ಮಂಟಪಕ್ಕೆ ಬರಲು ಸಿದ್ಧರಾಗುತ್ತಾರೆ. ಅದೇ ವೇಳೆಯಲ್ಲಿ ಈರಗಾರರು ಮುಂದೆ ಬಂದು ಡೊಳ್ಳಿನ ಗತ್ತಿಗೆ ಕುಣಿಯುತ್ತಾ ಹರಿತವಾದ ಅಲಗನ್ನು ಎರಡೂ ಕೈಯಿಂದ ಹಿಡಿದು ಈರಾಡಲು ಪ್ರಾರಂಭಿಸುತ್ತಾರೆ. ಈ ದೃಶ್ಯ ತುಂಬಾ ಭಯಾನಕವಾಗಿರುತ್ತದೆ. ಈರಗಾರನು ಹರಿತವಾದ ಅಲಗಿನಿಂದ ಜೋರಾಗಿ ವೀರಾವೇಶದಿಂದ ತನ್ನ ಹೊಟ್ಟೆಗೆ ಬಡೆದುಕೊಳ್ಳುತ್ತಾನೆ. ಈರಗಾರನ ವೀರಾವೇಶ ಎಲ್ಲೆ ಮುಟ್ಟುತ್ತಿದ್ದಂತೆ ಮತ್ತೊಬ್ಬ ಈರಗಾರ ಬಂದು ಅವನನ್ನು ಹಿಡಿಯುತ್ತಾನೆ. ಹೀಗೆ ಈರಾಡುತ್ತ ಮದುವೆಯ ಮಂಟಪವನ್ನು ಪ್ರವೇಶಿಸುವ ವೇಳೆಯಲ್ಲಿ ಕರಾಮಾತಿ ಕಳೆಯಲೆಂದು ಈರಗತ್ತಿಯಿಂದಲೇ ಹರಿಮರಿಯನ್ನು ಹರಿದು ನಂತರ ಕೊಡಗಳನ್ನು ಹೊತ್ತ ಮುತ್ತೈದೆಯರು ಮದುವೆಯ ಮಂಟಪವನ್ನು ಪ್ರವೇಶಿಸಿ ದೇವರ ಮನೆಯ ಜಗಲಿಯ ಮುಂದೆ ತಮ್ಮ ಕೊಡಗಳನ್ನಿಡುತ್ತಾರೆ. ಈ ಕೊಡದಲ್ಲಿರುವ ನೀರನ್ನೇ ಮದುಮಕ್ಕಳಿಗೆ ಸುರಗಿಯ ನೀರನ್ನಾಗಿ ಬಳಸುತ್ತಾರೆ. ಈ ಎಲ್ಲ ಕಾರ್ಯ ಮುಗಿದಿ ನಂತರ ಮುತ್ತೈದೆಯರಿಗೆ ಹೋಳಿಗೆ ಊಟವನ್ನು ಹಾಕಿಸುತ್ತಾರೆ.

ಜಿಜೂರಿ ಖಂಡೋಬಾ ಮನೆದೇವರಿರುವವರು ಈರಮುಖದ ದೇವತಾ ಕಾರ್ಯವನ್ನು ಆಚರಿಸುತ್ತಾರೆ. ಮದುವೆಯ ಮನೆಯವರು ಮೊದಲೆ ಈರಮುಖದ ಸಂಪ್ರದಾಯ ಇರುವವರ ಮನೆಗೆ ಹೋಗಿ ಬೊಟ್ಟು ಕೊಟ್ಟು ಬರುತ್ತಾರೆ. ಅದರಂತೆ ಮದುವೆಯ ಮೊದಲನೆಯ ದಿನ ಸಂಜೆಯ ಹೊತ್ತಿಗೆ ಮದುವೆಯ ಮನೆಗೆ ಎಲ್ಲರೂ ಬರುವಾಗ ಉದ್ದನೆಯ ಬೆತ್ತದ ಬಡಗಿಯನ್ನು ತಂದು ದೇವರ ಜಗಲಿಯ ವೇಳೆ ತಂದಿಟ್ಟು ಮದುವೆಯ ಮಂಟಪದಲ್ಲಿ ಕುಳಿತುಕೊಂಡಿರುತ್ತಾರೆ. ಅಷ್ಟರಲ್ಲಿಯೇ ಮದುಮಗನಿಗೆ ಸ್ನಾನ ಮಾಡಿಸಿ ಧೋತರವನ್ನು ಉಡಿಸಿ ದೇವರ ಮನೆಯ ಜಗಲಿಗೆ ಕರೆದುಕೊಂಡು ಹೋಗಿ ನಿಲ್ಲಿಸುತ್ತಾರೆ. ಅಷ್ಟರಲ್ಲಿ ಬೆತ್ತದ ಬಡಿಗೆಗಳನ್ನು ತಂದವರು ತಮ್ಮ ತಮ್ಮ ಬಡಿಗೆಗಳನ್ನು ತೆಗೆದುಕೊಂಡು ಮನೆಯ ಬಾಗಿಲ ಎದುರು ನಿಲ್ಲುತ್ತಾರೆ. ಇತ್ತ ಮದುಮಗ ಜಗಲಿಯ ಮೇಲೆ ಪೂಜೆಗೊಂಡ ಈರಮುಖವನ್ನು ಹೊಸ ಮೊರದಲ್ಲಿ ಹೊಸ ವಸ್ತ್ರದ ಮೇಲೆ ಇಟ್ಟು, ಎಡಗೈಯ ಮುಂಗೈಯ ಮೇಲೆ ಹಿಡಿದು ಮನೆಯ ಮುಂಬಾಗಿಲಿಗೆ ಬರುವಷ್ಟರಲ್ಲಿ ಅಲ್ಲಿರುವ ಬೆತ್ತ ಹಿಡಿದವರೆಲ್ಲ ಇವನನ್ನು ತಡೆಯುತ್ತಾರೆ. ಆಗ ಇವರನ್ನು ತನ್ನ ಬೆತ್ತದಿಂದ ಹಿಂದೆ ಸರಿಸುತ್ತ ಮದುಮಗ ಮುಂದೆ ಸಾಗಬೇಕು. ಹೀಗೆ ಸಾಗುವಾಗ ಎಡಗೈಯಲ್ಲಿ ಇರುವ ಮೊರದಲ್ಲಿಯ ಈರಮುಖ ಕೆಳಗೆ ಬೀಳದಂತೆ ಕಾಳಜಿವಹಿಸಿ ತನ್ನ ಬೆತ್ತದಿಂದ ವೈರಿಗಳನ್ನು ಒಂದೇ ಕೈಯಿಂದ ಹಿಮ್ಮೆಟ್ಟುವಂತೆ ಬೆತ್ತವನ್ನು ಅವರ ಮೇಲೆ ಬೀಸುತ್ತಾ ಸಾಗಿ, ಊರ ಹನುಮಂತದೇವರ ಗುಡಿಯವರೆಗೆ ತರಬೇಕು. ಅಲ್ಲಿ ದೇವರಿಗೆ ಪೂಜೆ ಸಲ್ಲಿಸಿ ಮತ್ತೆ ವೀರಾವೇಶದಿಂದ ಅವರನ್ನು ಹಿಮ್ಮೆಟ್ಟುತ್ತ ಮನೆಯವರೆಗೆ ತರಬೇಕು. ಹೀಗೆ ನಡೆಯುವ ಈ ಪ್ರಕ್ರಿಯೆ. ಮದುಮಗ ವೈರಿಗಳನ್ನು ಹಿಮ್ಮೆಟ್ಟಿ ತಾನು ಮೆಚ್ಚಿದ ಕನ್ಯೆಯನ್ನು ಗೆದ್ದು ತಂದು ಮದುವೆಯಾದ ಹಿನ್ನೆಲೆಯನ್ನು ಈರಮುಖ ಸಂಪ್ರದಾಯ ಸೂಚಿಸುತ್ತದೆ.

ಬೀರದೇವರು ಅಥವಾ ವೀರಭದ್ರ ಮನೆದೇವರು ಇರುವವರು ಗುಗ್ಗಳ ಕಾರ್ಯವನ್ನು ಮಾಡುತ್ತಾರೆ. ಮದುವೆಯ ಮೊದಲನೆಯ ದಿನ ಬೆಳಗಿನ ಜಾವದಲ್ಲಿ ಮಡಿಯಿಂದ ಗುಗ್ಗಳದ ಎಲ್ಲ ಕಾರ್ಯವನ್ನು ಸಿದ್ಧಗೊಳಿಸಿಕೊಂಡು ಡೊಳ್ಳು ಬಾರಿಸುತ್ತ ಈರ ಹಾಯುತ್ತ ಹೊಳೆಗೆ

ಹೋಗಿ ಗುಗ್ಗಳದ ಮಣ್ಣಿನ ಕೊಡಗಳನ್ನು ಪೂಜೆ ಮಾಡಿ ಅವುಗಳನ್ನು ಅಲ್ಲಿಯೆ ಬಿಟ್ಟು ಬಂದು ಹರಿಮರಿಗಳನ್ನು ಹರಿದು ಮತ್ತೆ ಊದಿಸುತ್ತ ಬಾರಿಸುತ್ತ ಮದುವೆಯ ಮಂಟಪಕ್ಕೆ ಬಂದು ಗುಗ್ಗಳ ಕಾರ್ಯವನ್ನು ಮುಗಿಸುತ್ತಾರೆ. ಆದರೆ ಆವತ್ತು ಬೀಗರುಬಿಜ್ಜರು ಬ್ಯಾಟಿಯನ್ನು ಮಾಡಿ ಊಟ ಮಾಡುತ್ತಾರೆ. ಹೀಗೆ ಝುಂಡೆ ಕುರುಬರಲ್ಲಿ ತಮ್ಮದೇ ಆದ ಮನೆದೇವರ ಮೇಲೆ ವಿಶಿಷ್ಟ ದೇವತಾ ಕಾರ್ಯಗಳು ಕಂಡುಬರುತ್ತವೆ. ದೇವತಾ ಕಾರ್ಯ ಮುಗಿದ ಮರುದಿನ ಸುರಗಿಯನ್ನು ಸುತ್ತಿ ಸುರಗಿ ನೀರನ್ನು ಹಾಕಿ ಮದುಮಕ್ಕಳಿಗೆ ಹೊಸ ಬಟ್ಟೆಗಳನ್ನು ತೊಡಿಸಿ ದೇವರ ಮನೆಯ ದೇವರ ಎದುರಿಗೆ ಇಬ್ಬರಿಗೂ ಮೂರು ಮೂಲಿಯ ಬಾಸಿಂಗಗಳನ್ನು ಕಟ್ಟಿ, ಮನೆದೇವರಿಗೆ ನಮಸ್ಕರಿಸಿ ಮದುವೆಯ ಮಂಟಪಕ್ಕೆ ಕರೆತಂದು ಶಾಸ್ತ್ರೋಕ್ತವಾಗಿ ಅಕ್ಕಿಕಾಳು ಹಾಕುವರು. ಮರುದಿನ ಮದುಮಕ್ಕಳಿಗೆ ಅರಿಷಿಣ ಹಚ್ಚುವ ಕಾರ್ಯ ನಡೆಯುವುದು. ನಂತರ ಮದುಮಕ್ಕಳಿಗೆ ಮೋಜಿನ ಆಟಗಳನ್ನು ಆಡಿಸುವರು. ಆಟಗಳು ಮುಗಿದ ನಂತರ ಬೀಗರು ಮದುವೆಯ ಹಂದರವನ್ನು ತಿರುವಿ ಹಾಕುವುದರೊಂದಿಗೆ ಮದುವೆಯ ಕಾರ್ಯಗಳು ಮುಗಿಯುತ್ತವೆ. ಇತ್ತೀಚಿನ ದಿನಗಳಲ್ಲಿ ಮೂರು ದಿನಗಳವರೆಗೆ ನಡೆಯುವ ಮದುವೆಯ ಕಾರ್ಯಗಳು ಒಂದೆ ದಿನದಲ್ಲಿ ಮುಗಿಯುತ್ತವೆ.

**ಉದ್ಯೋಗ ಮತ್ತು ಶಿಕ್ಷಣ**

ಕುರಿಸಾಕಾಣಿಕೆ, ಪಶುಸಂಗೋಪನೆ ಹಾಗೂ ವ್ಯವಸಾಯ ಇವರ ಮೂಲ ಉದ್ಯೋಗವಾಗಿವೆ. ತಮ್ಮ ಪೂರ್ವಜರಿಂದ ಬಂದ ನೂರಾರು ಎಕರೆ ಜಮೀನಿನಲ್ಲಿ ತಲೆತಲಾಂತರದಿಂದ ವ್ಯವಸಾಯವನ್ನು ಮಾಡುತ್ತ ಬಂದಂಥ ಇವರು ಆಕಳು ಮತ್ತು ಎಮ್ಮೆಗಳನ್ನು ಸಾಕಿ ಹೈನುಗಾರಿಕೆಯನ್ನು ಮಾಡುತ್ತಿರುವರು. ಇನ್ನೂ ಕೆಲವು ತಮ್ಮ ಮೂಲ ಕಸುಬಾದ ಕುರಿ ಸಾಕಾಣಿಕೆಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ವ್ಯವಸಾಯ, ಕುರಿಸಂಗೋಪನೆ ಹಾಗೂ ಹೈನುಗಾರಿಕೆಗಳನ್ನು ನಂಬಿಕೊಂಡು ಬದುಕು ಸಾಗಿಸುವಷ್ಟು ಇವರಲ್ಲಿ ಕಲಿತವರು ತೀರ ಕಡಿಮೆ. ಇತ್ತಿತ್ತಲಾಗಿ ಬೆರಳೆಣಿಕೆಯಷ್ಟು ಜನ ಮಾತ್ರ ಪದವಿಗಳನ್ನು ಪಡೆದವರು, ನೌಕರಿಯಲ್ಲಿ ಇರುವವರು ಸಿಕ್ಕುತ್ತಾರೆ. ಹೀಗಾಗಿ ಇವರು ಶೈಕ್ಷಣಿಕವಾಗಿ ರಾಜಕೀಯವಾಗಿ ತೀರಾ ಹಿಂದುಳಿದವರಾಗಿದ್ದಾರೆ.

[1]ಹಾಲುಮತ ದರ್ಶನ, ಶಂಬಾ ಜೋಶಿ, ಪುಟ ೨೭
[2]ಭಾರತದ ಕುರುಬರು, ಡಾ. ಶ್ಯಾಮಸಿಂಗ್ ಶಶಿ, ಪುಟ ೫೩
[3]ಭಾರತದ ಕುರುಬರು, ಡಾ. ಶ್ಯಾಮಶಿಂಗ್ ಶಶಿ, ಪುಟ ೧೧೩
[4]ಅಹಲ್ಯಾ ಸಂದೇಶ, ಮರಾಠಿ ಪತ್ರಿಕೆ.
[5]ಭಾರತದ ಕುರುಬರು, ಡಾ. ಶ್ಯಾಮಸಿಂಗ್ ಶಶಿ, ಪುಟ ೨೬
[6]ಸಂದರ್ಶನ, ಶ್ರೀ ಸಿದ್ದಪ್ಪ ಕಾಶಪ್ಪ ಜಕಬಾಳ ಬೆಣಕಟ್ಟಿ ೧೯೭೫ ರಲ್ಲಿ
[7]ಜಾನಪದ ಜಯಂತಿ, ಡಾ. ನಿಂಗಣ್ಣ ಸಣ್ಣಕ್ಕಿ ಪುಟ ೧೪-೧೫.

## ಭಾಗ ಮೂರು - ಚಿತ್ರದುರ್ಗ ಪರಿಸರದ ಕುರುಬರ ಸಂಸ್ಕೃತಿ

## ೧೦. ಚಿತ್ರದುರ್ಗ ಜಿಲ್ಲೆಯ ಕುರುಬರು : ಧಾರ್ಮಿಕ ಪರಿಸರ

ಚಿತ್ರದುರ್ಗ, ಹೊಸದುರ್ಗ, ಹೊಳಲ್ಕೆರೆ, ಚಳ್ಳಕೆರೆ, ಮೊಳಕಾಲ್ಮುರು, ಹಿರಿಯೂರು ತಾಲೂಕುಗಳನ್ನೊಳಗೊಂಡು ಚಿತ್ರದುರ್ಗವಾಗಿದೆ. ಜಿಲ್ಲೆಯು ತನ್ನ ಹೆಸರಿಗೆ ಪೂರಕವಾಗಿ ಕುರು-ಬೆಟ್ಟ, ದುರ್ಗ ಬೆಟ್ಟ ಗುಡ್ಡಗಳಿಂದ ಆವೃತವಾದ ಪ್ರದೇಶವು ನಿರ್ದಿಷ್ಟವಾಗಿ ಜನ ವಸತಿಗೆ ಯೋಗ್ಯವಾದ ಪ್ರದೇಶವಾಗಿದೆ. ಪ್ರಧಾನವಾಗಿ ವೇದಾವತಿ ನದಿ ದಡದುದ್ದಕ್ಕೂ ಹಾಲುಮತ ಸಮುದಾಯಗಳು ಬೆಟ್ಟ-ಗುಡ್ಡ ಬಯಲಿನ ಹಾಗೂ ಅದರ ಸುತ್ತಮುತ್ತಲಿನ ಬಯಲು ಪ್ರದೇಶಗಳಲ್ಲಿ ಪಶುಪಾಲನೆ ಅದರಲ್ಲೂ ಕುರಿ ಸಾಕಾಣಿಕೆ ಮೂಲಕ ತನ್ನ ಬದುಕನ್ನು

ಕಟ್ಟಿಕೊಂಡಿದೆ. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸುತ್ತಾ ಅತ್ಯಂತ ಸುರಕ್ಷಿತ ಹಾಗೂ ನದಿದಂಡೆಗಳ ಮತ್ತು ಫಲವತ್ತಾದ ಬಯಲು ಪ್ರದೇಶಗಳಲ್ಲಿ ನೆಲೆ ನಿಂತು ತಾನು ಇರುವಲ್ಲಿಯೇ ಕುಲಗುರುವಾದ ಶ್ರೀ ಗುರು ರೇವಣಸಿದ್ದರ ಸಾನಿಧ್ಯದಲ್ಲಿ ತನ್ನ ಕುಲದೈವನಾದ ಬೀರಪ್ಪನನ್ನು ಆರಾಧಿಸುತ್ತಾ ಶತಶತಮಾನಗಳಿಂದಲೂ ತನ್ನದೇ ಆದಂತಹ ಕುರುಹುಗಳನ್ನು ಜನಪದೀಯ ಹಾಗೂ ಮೌಖಿಕ ವಿಚಾರಗಳನ್ನು ಪ್ರಸ್ತುತ ಜಾಗತೀಕರಣ ಹಾಗೂ ವ್ಯಾಪಾರೀಕರಣದ ದಿನಗಳಲ್ಲಿಯೂ ತನ್ನ ಮೂಲ ಸಂಸ್ಕೃತಿಯನ್ನು ಅನುಸರಿಸುತ್ತಾ ಅದನ್ನು ಸಂರಕ್ಷಿಸಿಕೊಳ್ಳುತ್ತಾ ಮುಂದುವರಿಸಿಕೊಂಡು ಹೋಗುತ್ತಿರುವುದು ಸಮಗ್ರ ಹಾಗೂ ಬೃಹತ್ ಹಾಲುಮತ ಕುರುಬ ಸಮುದಾಯದ ಹೆಗ್ಗಳಿಕೆಯಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಈ ಹಾಲುಮತ ಸಂಸ್ಕೃತಿಯ ಸಮುದಾಯಗಳು ಜಿಲ್ಲೆಯಾದ್ಯಂತ ೩/೧ ಭಾಗದ ಜನಸಂಖ್ಯೆಯನ್ನು ಹೊಂದಿದ್ದು ಯಾವುದೆ ಪಕ್ಷದ ಒಬ್ಬ ರಾಜಕೀಯ ವ್ಯಕ್ತಿ ಯಾವುದೇ ಕ್ಷೇತ್ರಗಳಲ್ಲಿ ಆಯ್ಕೆಯಾಗಬೇಕಾದರೆ ಈ ಸಮುದಾಯದವರ ಮತದಾನದ ತೀರ್ಪಿನ ಆಧಾರದ ಮೇಲೆಯೇ ನಿಂತಿರುತ್ತದೆ ಎಂಬುದು ಎಲ್ಲರಿಗೂ ತಿಳಿದಿರುವ ಸತ್ಯ ಸಂಗತಿಯಾಗಿದೆ.

**ಧಾರ್ಮಿಕ ಪರಿಸರ**

ಜಿಲ್ಲೆಯು ಹಾಲುಮತ ಸಂಸ್ಕೃತಿಯುಳ್ಳ ಕುರುಬ ಜನಾಂಗದ ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ, ಜನಪದ, ಆಚಾರ-ವಿಚಾರ, ಸತ್-ಸಂಪ್ರದಾಯಗಳು ಹಬ್ಬ ಹರಿದಿನಗಳು ಉತ್ಸವ ಜಾತ್ರೆಗಳನ್ನು ಕಾಲಕಾಲಕ್ಕೆ ಆಚರಿಸಿಕೊಳ್ಳುತ್ತಾ ಮುನ್ನಡೆದಿದೆ. ಆ ಮೂಲಕ ಸಮುದಾಯದ ಮೂಲಸೊಗಡನ್ನು ಪರಂಪರಾಗತವಾಗಿ ಅನುಸರಿಸುತ್ತಾ ತನ್ನ ಸಂಸ್ಕೃತಿಯನ್ನು ಎತ್ತಿ ಹಿಡಿಯುವ ಮುಖೇನ ಸಮುದಾಯದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಉಜ್ವಲಗೊಳಿಸುವಲ್ಲಿ ಸಮುದಾಯದ ಕೊಡುಗೆ ಅಪಾರವಾಗಿದೆ. ಇದರೊಂದಿಗೆ ಕುರುಬ ಜನಾಂಗವು ತನ್ನ ಸಾಂಸ್ಕೃತಿಕ ವೀರರುಗಳಾದ ಮೈಲಾರಲಿಂಗ, ಯಲ್ಲಾಟಲಿಂಗ, ಮಾಳಿಂಗರಾಯ, ಕರಿಸಿದ್ದೇಶ್ವರ, ಭೈರವೇಶ್ವರ, ವೀರಭದ್ರೇಶ್ವರ (ಈರಣ್ಣ ದೇವರು) ದೊಡ್ಡಣ್ಣ, ಚಿಕ್ಕಣ್ಣ, ಬಾಳಪ್ಪ, ನಗರಗೇರಪ್ಪ, ಕರಿಯಣ್ಣ (ಕರಿಯಾಲದಯ್ಯ) ಬೀರಲಿಂಗೇಶ್ವರ, ಸೋಮಲಿಂಗ (ಸೋಮೇಶ್ವರ) ಹೆಣ್ಣು ದೇವತೆಗಳಾದ ಹೊಸೂರಮ್ಮ, ಹುಲಿಗೆಮ್ಮ, ಹೊಸುರಾಂಭ, ನಗರಗೇರಮ್ಮ, ಲಕ್ಷ್ಮಿದೇವಿ, ಲಕ್ಕಮ್ಮ, ಚೌಡಮ್ಮ, ಬನಶಂಕರಮ್ಮ, ಆದವಾನಿ ಕೆಂಚಮ್ಮ, ಚಿಕ್ಕಮಾಳಮ್ಮ ಗಂಗಮ್ಮಾಳಮ್ಮ ಮುಂತಾದ ದೇವತೆಗಳು ಹಾಗೂ ನಾಗದೇವತೆಗಳು (ನಾಗರಕಲ್ಲುಗಳು) ಮುಂತಾದ ದೇವ ದೇವತೆಗಳನ್ನು ಶತಶತಮಾನಗಳಿಂದ ಆರಾಧಿಸಿಕೊಳ್ಳುತ್ತಾ ಪೂಜಿಸಲ್ಪಡುತ್ತಾ ಧಾರ್ಮಿಕ ಸಾಮರಸ್ಯತೆಯನ್ನು ಮೂಡಿಸುತ್ತಾ ಹಾಲುಮತ ಸಂಸ್ಕೃತಿಯನ್ನು ಸಂರಕ್ಷಿಸಿಕೊಳ್ಳುತ್ತಾ ಬಂದಿರುವುದು ಈ ಸಮುದಾಯದ ವಿಶೇಷತೆ.

ನಿರ್ದಿಷ್ಟವಾಗಿ ಚಿತ್ರದುರ್ಗ ಜಿಲ್ಲಾ ಪರಿಸರದಲ್ಲಿ ಪ್ರಮುಖ ಜನಸಮೂದಾಯಗಳಲ್ಲಿ ಹಾಲುಮತ ಜನಾಂಗವು ಚಾರಿತ್ರಿಕವಾಗಿ, ಸಾಂಸ್ಕೃತಿಕವಾಗಿ ಬಹುದೊಡ್ಡ ಪರಂಪರೆಯನ್ನು ಹೊಂದಿದೆ. ಈ ಸಮುದಾಯದವರನ್ನು ಕುರುಬರೆಂದು ಕರೆಯಲಾಗುತ್ತದೆ. ಇವರಲ್ಲಿ "ಹತ್ತಿ ಕಂಕಣ ಕುರುಬರು", "ಉಣ್ಣೆ ಕಂಕಣ ಕುರುಬರು," "ಗುರು ಒಡೆಯರು" ಇತ್ಯಾದಿ ಉಪಪಂಗಡಗಳು ಇವೆ. ಪ್ರತಿಯೊಂದು ಉಪ ಪಂಡಗಳಿಗೆ ತನ್ನದೆ ಆದ ವಿಶಿಷ್ಟವಾದ ಆಚರಣೆಗಳು, ಸತ್ - ಸಂಪ್ರದಾಯಗಳು, ಹಬ್ಬ ಹರಿದಿನಗಳು ಉತ್ಸವ ಪಲ್ಲಕ್ಕಿಗಳು ಕೆಂಡೋತ್ಸವಗಳು (ಕೆಂಡಾರ್ಚನೆ) ಗೊರವರ ಕುಣಿತ (ಡೋಣಿಸೇವೆ) ಕಂತೆಸೇವೆ, ತೋಪುಜಾತ್ರೆ, ದೊಡ್ಡಜಾತ್ರೆ ಮತ್ತು ಹಲವಾರು ಪವಾಡಗಳನ್ನು ಶತ-ಶತಮಾನಗಳಿಂದ ಆಚರಿಸಿಕೊಳ್ಳುತ್ತಾ ತಾನು ವಾಸಿಸುವ ಪರಿಸರದಲ್ಲಿ ಪಶುಪಾಲನೆ, ಕುರಿ ಸಾಕಾಣಿಕೆ ಕಂಬಳಿ ನೇಕಾರಿಕೆ ಪ್ರಧಾನವಾಗಿ ಕೃಷಿಯನ್ನು ತನ್ನ ಉದ್ಯೋಗವನ್ನಾಗಿ ಮಾಡಿಕೊಂಡು ಬಂದಿರುವುದನ್ನು ಕಾಣಬಹುದಾಗಿದೆ. ಇದರ ಜೊತೆ ಜೊತೆಯಲ್ಲಿ ಹಾಲುಮತ ಸಂಸ್ಕೃತಿಯ ಮೂಲ ಸೊಗಡನ್ನು ಪರಂಪರಾಗತ ಜೀವನ ಪದ್ಧತಿಯನ್ನು ಯಥವತ್ತಾಗಿ ಉಳಿಸಿಕೊಂಡು ಬಂದಂತಹ ಜನಸಮುದಾಯಗಳಲ್ಲಿ ಹಾಲುಮತಸ್ಥರು (ಕುರುಬರು) ಪ್ರಮುಖರೆನಿಸಿಕೊಂಡಿರುತ್ತಾರೆ. ಇಂದಿಗೂ ಜನಪದೀಯರಲ್ಲಿ ಒಂದು ನೀತಿ ಮಾತಿದೆ "ಹಾಲು ಕೆಟ್ಟರೂ ಕೆಡಬಹುದು? ಹಾಲುಮತಸ್ಥರು ಕೆಡುವುದಿಲ್ಲಾ" ಎಂಬ ಮಾತು ಜನಪದೀಯರಲ್ಲಿದೆ.

ಚಿತ್ರದುರ್ಗ ಜಿಲ್ಲಾ ಪರಿಸರದಲ್ಲಿ ರೇವಣಸಿದ್ದೇಶ್ವರ ಮಠಗಳು ಅಧಿಕ ಪ್ರಮಾಣದಲ್ಲಿವೆ. ಈ ಮಠಗಳಿಗೆ ಆಯಾ ಸಂಪ್ರದಾಯದ ಗುರು ಒಡೆಯರು ಮಠಾಧಿಪತಿಗಳಾಗಿರುವರು. ಇವರು ಕುರುಬ (ಹಾಲುಮತಸ್ಥ) ಸಮುದಾಯಗಳ ನಾಮಕರಣ, ಮದುವೆ, ಹುಟ್ಟು ಮತ್ತು

ಸಾವಿನವರೆಗಿನ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ಮುಂತಾದ ಹತ್ತಾರು ಸಂದರ್ಭಗಳಲ್ಲಿ ಕಾರ್ಯಕ್ರಮಗಳನ್ನು ನೆರವೇರಿಸಿಕೊಡುತ್ತಾರೆ. ಇಂತಹ ವಿಶಿಷ್ಟ ಪರಂಪರೆಯನ್ನು ಹೊಂದಿದ ಈ ಸಮುದಾಯದ ಧಾರ್ಮಿಕ, ಸಾಮಾಜಿಕ, ಸಂಶೋಧನೆಗಳು ಅದರಲ್ಲೂ ಜನಪದ ಮೌಖಿಕ ವಿಚಾರಗಳನ್ನು ಸಂಗ್ರಹಿಸಿ ಪರಿಶೀಲಿಸಿ ಸತ್ಯಾಸತ್ಯತೆಯನ್ನು ದಾಖಲಿಸಿ ಹಾಲುಮತ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸುವುದೇ ಸಂಶೋಧನೆಯ ಏಕೈಕ ಉದ್ದೇಶವಾಗಿದೆ. ಪ್ರಧಾನವಾಗಿ ತನ್ನ ಪಿಹೆಚ್‌ಡಿ ವಿಷಯವಾದ ರೇವಣಸಿದ್ಧ ಪರಂಪರೆಯ ಹಾಲುಮತ ಮಠಗಳ ಚಾರಿತ್ರಿಕ ಅಧ್ಯಯನದಡಿಯಲ್ಲಿ ಚಿತ್ರದುರ್ಗ ಜಿಲ್ಲೆಯಾದ್ಯಂತ ಈ ಸಮುದಾಯಗಳ ಪ್ರಮುಖ ಊರುಗಳಿಗೆ ಸಂದರ್ಶನ ನೀಡಿದಾಗ ಪ್ರತಿ ತಾಲೂಕಿನಲ್ಲಿರುವ ರೇವಣಸಿದ್ದ ಮಠಗಳು, (ಮಠಾಧಿಪತಿಗಳು) ಗುರುಒಡೆಯರು, ಒಡೆಯರಮ್ಮಗಳು, ಪ್ರತಿಮಠದಡಿಯಲ್ಲಿ ಬರುವ ಸಮುದಾಯದ ಹಳ್ಳಿಗಳು, ಗುಡಿಕಟ್ಟೆಗಳು, ಬೆಡಗುಗಳು ಕುಲದೇವರು-ದೇವತೆಗಳು ಈ ದೇವರುಗಳ-ದೇವತೆಗಳ ಆಚಾರ-ವಿಚಾರ-ಸಂಪ್ರದಾಯ, ಹಬ್ಬಹರಿದಿನಗಳು, ಜಾತ್ರೆ ಉತ್ಸವ, ಕೆಂಡಾರ್ಚನೆಗಳು, ಹಲವು ಪವಾಡಗಳು ಅಮವಾಸ್ಯೆ, ಹುಣ್ಣಿಮೆ, ಪೂಜಾ ವಿಧಿ ವಿಧಾನಗಳಲ್ಲಿ ಒಂದನ್ನು ಪರಿಚಯಿಸಿಕೊಳ್ಳೋಣ.

ಪ್ರಥಮವಾಗಿ ಚಳ್ಳಕೆರೆ ತಾಲೂಕಿನಲ್ಲಿರುವ ಚಳ್ಳಕೆರೆ ತಾಲೂಕಿನಲ್ಲಿ ಪ್ರಸ್ತು ದೊಡ್ಡೇರಿ ರೇವಣಸಿದ್ದೇಶ್ವರ ಮಠವು ಅತ್ಯಂತ ಪ್ರಾಚೀನ ಮಠವಾಗಿದೆ. ಈ ಪ್ರದೇಶವು ಕಳೆದೆರಡು ಶತಮಾನಗಳಲ್ಲಿ ಎಲ್ಲಾ ರಂಗಗಳಲ್ಲಿಯೂ ಕೇಂದ್ರಸ್ಥಾನವಾಗಿತ್ತೆಂಬುದಕ್ಕೆ ಹಲವಾರು ದಾಖಲೆಗಳು ಪುಷ್ಟೀಕರಿಸುವುದರ ಹಿನ್ನೆಲೆಯಲ್ಲಿ ಈ ಮಠದಡಿಯಲ್ಲಿ ಹಾಲುಮತ ಸಂಸ್ಕೃತಿ ಪರಂಪರೆಯು ಇಂತಿದೆ. ರೇವಣಸಿದ್ದ ಪರಂಪರೆಯ ಹಾಲುಮತದವರಲ್ಲಿ (ಕುರುಬರ) ಸ್ಯಾವಂತಲ, ಬೆಡಗಿನವರನ್ನೇ ಕುಲಗುರುಗಳನ್ನಾಗಿಸಿಕೊಂಡು ಈ ಗುರುಗಳ ಒಡೆಯರುಗಳ, ಒಡೆಯರಮ್ಮಗಳ ಸಾನಿಧ್ಯದಲ್ಲಿ ಸ್ಯಾವಂತಲ ಬೆಡಗಿನ ಕುಟುಂಬದಲ್ಲಿ ಗಂಡು ಮಗು ಹುಟ್ಟಿದ ಮೂರು ದಿನಗಳೊಳಗಾಗಿ ಲಿಂಗವನ್ನು ಕಟ್ಟುತ್ತಾರೆ. ಇದನ್ನು ಹುಟ್ಟುಲಿಂಗವೆನ್ನುತ್ತಾರೆ. ಬಳಿಕ ವಿವಾಹದ ಸಮಯದಲ್ಲಿ ಲಿಂಗಪೂಜೆಯಾಗುತ್ತದೆ. ಮತ್ತು ಸ್ವಗೋತ್ ವಿವಾಹ ನಿಷೇಧಿತವಾಗಿರುತ್ತದೆ. ಈ ಗುರು ಒಡೆಯರ ಮನೆಯ ಹುಡುಗಿ (ವಧು)ಯನ್ನು ಹಾಲುಮತಸ್ಥರ ಕುರುಬರ ಮನೆಗಳಿಗೆ ಕೊಟ್ಟು ವೈವಾಹಿಕ ಸಂಬಂಧ ನಡೆಯುತ್ತದೆ. ಒಡೆಯರುಗಳ ಮನೆಗೆ ಕೊಡುವ ಹೆಣ್ಣಿಗೆ ಕಡ್ಡಾಯವಾಗಿ ಲಿಂಗದೀಕ್ಷೆ ನಡೆಯುತ್ತದೆ. ವಿವಾಹದ ಹಿಂದಿನ ದಿನ ಪ್ರಥಮ ಶಾಸ್ತ್ರದ (ಮದಲಿಂಗ ಶಾಸ್ತ್ರದ)ದಿನ ರೇವಣಸಿದ್ದೇಶ್ವರ ಮಠದ ಗುರು ಒಡೆಯರುಗಳ ಸಾನಿಧ್ಯದಲ್ಲಿ ಈ ಬಗೆಯ ಮರದ ಚುಕ್ಕೆಯನ್ನು ಸುಟ್ಟು (ಕೆಂಡವನ್ನು ಮಾಡಿ) ಕನ್ಯೆಯ (ವಧುವಿನ) ನಾಲಿಗೆಯ ತುದಿಯನ್ನು ಗಂಧದ ಕಡ್ಡಿಯಿಂದ ಸುಟ್ಟು ಶುದ್ಧಿ ಮಾಡುತ್ತಾರೆ. ಬಳಿಕ ಕರಿಕಂಬಳಿ ಗದ್ದಿಗೆ ಮಾಡಿ ಕಂಚಿನ ಕಳಸವನ್ನು ಹೂಡಿ ಅದರ ಮೇಲೆ ವಧು-ವರರನ್ನು ಕುಳ್ಳಿರಿಸಿ ವಧು-ವರರ ತಂದೆ-ತಾಯಿಗಳ ಸಂಬಂಧಿಕರ ಸಮಕ್ಷಮದಲ್ಲಿ ಸಂಪ್ರದಾಯ ಪೂಜಾ ವಿಧಿ-ವಿಧಾನಗಳನ್ನು ನೆರವೇರಿಸುತ್ತಾರೆ. ಮರುದಿನ ಧಾರೆ-ಮುಹೂರ್ತದಂದು ಇದೇ ಗುರುಗಳ ಸಾನಿಧ್ಯದಲ್ಲಿ ಗುಡೀಗೌಡ, ಕೋಲ್ಕಾರ, ಬಂಢಾರಿ ಹಾಗೂ ಕುಲಸ್ತರ ಹಿರಿಯರ ಸಮ್ಮುಖದಲ್ಲಿ ಮಂಗಳ ಸೂತ್ರವನ್ನು ಮಾಡುವ ಶ್ರೀ ಗುರು ರೇವಣಸಿದ್ದೇಶ್ವರನನ್ನು ನೆನೆಯುತ್ತಾ ಗಟ್ಟಿಯಾಗಿ ಕುಲದೇವರನ್ನು ಸ್ಮರಿಸುತ್ತಾ ಮತ್ತು ವಧು-ವರರ ಹೆಸರು ಅವರ ತಂದೆ ತಾಯಿಗಳ ಹೆಸರು ಗ್ರಾಮ ಅವರುಗಳ ಬೆಡಗು ಪೂರ್ಣ ವಿವರಗಳನ್ನು ಅಲ್ಲಿ ನೆರೆದಿದ್ದವರಿಗೆಲ್ಲರಿಗೂ ಪರಿಚಯಿಸಿ ನೆರೆದಿರುವ ಕುಲಸ್ಥರ ಅಪ್ಪಣೆಯನ್ನು ಪಡೆದು ಮಾಂಗಲ್ಯಧಾರಣೆ ನೆರವೇರಿಸಲಾಗುತ್ತದೆ.

ಗುರು ಒಡೆಯರ ಕುಟುಂಬದ ಸದಸ್ಯರಿಗೆ ಸಾವು ಸಂಭವಿಸಿದಾಗ ವಿಭಿನ್ನವಾಗಿ ಶವಸಂಸ್ಕಾರ ಮಾಡಲಾಗುತ್ತದೆ. ಕುಳ್ಳಿರಿಸಿದ ಶವದ ಮೇಲೆ ಕಟ್ಟಿದ ಹುಟ್ಟು ಲಿಂಗಧಾರವನ್ನು ತೆಗೆಯಲಾಗುತ್ತದೆ. ಚೌಕಕಾರದ ಸಮಾಧಿ ನಿರ್ಮಿಸಿ ಲಿಂಗ ಪೂಜೆ ಮಾಡುತ್ತಿರುವ ಭಂಗಿಯಲ್ಲಿ ಕುಳ್ಳಿರಿಸಿ ವಿಭೂತಿ, ಬಿಲ್ವಪತ್ರೆ ಹಾಕಿ ಶವ ಸಂಸ್ಕಾರ ಮಾಡುತ್ತಾರೆ. ಗುರು ಒಡೆಯರಿಗೆ ನೀಡಿದ ಸ್ಥಾನಮಾನಗಳನ್ನು ಅವರ ಒಡೆಯರಮ್ಮಗಳಿಗೂ ನೀಡುತ್ತಾರೆ. ಗುರು ಒಡೆಯರುಗಳ ಸಾನಿಧ್ಯದಲ್ಲಿ ಹಾಲುಮತಸ್ಥ ಸಮುದಾಯಗಳ ಜನನ, ಮರಣ, ಮೋಕ್ಷ-ದೀಕ್ಷೆ ಮುಂತಾದ ಧರ್ಮಿ ವಿಧಿ-ವಿಧಾನಗಳನ್ನು ನೆರವೇರಿಸುತ್ತಾ ಹಾಲುಮತ ಸಮುದಾಯಗಳಲ್ಲಿನ ಯಾವುದೇ ಬಗೆಯ ಸಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಸಂಘರ್ಷಗಳನ್ನು ಆಯಾ ಕಟ್ಟೇ ಮನೆಯ ರೇವಣಸಿದ್ದ ಮಠದಡಿಯಲ್ಲಿನ ಗುರು ಒಡೆಯರ ಸಾನಿಧ್ಯದಲ್ಲಿ ಬಗೆಹರಿಸಿ ತಪ್ಪು-ಒಪ್ಪುಗಳನ್ನು ತಿದ್ದಿಕೊಂಡು ತಪ್ಪಿತಸ್ಥರಿಗೆ ದಂಡವನ್ನು ವಿಧಿಸುತ್ತಾರೆ. ಅದರಲ್ಲೂ ವಿಶೇಷವಾಗಿ ಚಪ್ಪಲಿ ಸಂಘರ್ಷಗಳಾದಾಗ (ಹೊಡೆದಾಡಿದಾಗ) ಆ ವ್ಯಕ್ತಿಯನ್ನು ಗುರುಗಳ ಸಾನಿಧ್ಯದಲ್ಲಿ ಶುದ್ಧೀಕರಿಸಿ ಸಮಾಜಕ್ಕೆ ಸಮರ್ಪಿಸಲಾಗುತ್ತದೆ. ಆ ಮೂಲಕ ಸಮಾಜದ ಸಾಮಾಜಿಕ, ಧಾರ್ಮಿಕ, ಸತ್ವವನ್ನು ಕಾಪಾಡುವಲ್ಲಿ ಒಡೆಯರ ಪಾತ್ರ ದೊಡ್ಡದು. ಚಳ್ಳಕೆರೆ ತಾಲೂಕಿಗೆ

ಸಂಬಂಧಿಸಿದ ಗ್ರಾಮಗಳಾದ ಚಳ್ಳಕೆರೆ, ನೇರಲಗುಂಟೆ, ಮಲ್ಲೂರಹಳ್ಳಿ, ಕೆರೆಯಾಗಹಳ್ಳಿ, ಓಬಯ್ಯನಹಟ್ಟಿ, ಚಿಕ್ಕಹಳ್ಳಿ, ಸೂರನಹಳ್ಳಿ, ನಗರಂಗೆರೆ, ಸಿದ್ದಾಪುರ, ಮಹದೇವಪುರ, ನಾಯಕನಹಟ್ಟಿ, ಗೌಡಗೆರೆ, ಪಿಲ್ಲಹಳ್ಳಿ, ಭೀಮನಕೆರೆ, ಬುಡ್ನಹಟ್ಟಿ, ವಡೇರಹಳ್ಳಿ, ದೊಡ್ಡೇರಿ ಈ ಗ್ರಾಮಗಳಲ್ಲಿನ ಹಾಲುಮತಸ್ಥರು ದೊಡ್ಡೇರಿ ಮಠದಡಿಯ ವ್ಯಾಪ್ತಿಗೆ ಬರುತ್ತಾರೆ. ಇದರ ಜೊತೆಗೆ ಮೊಳಕಾಲ್ಮೂರು ತಾಲೂಕಿಗೆ ಸಂಬಂಧಪಟ್ಟ ಕೆಲವು ಗ್ರಾಮಗಳು ಈ ಮಠದಡಿಯ ವ್ಯಾಪ್ತಿಯಲ್ಲಿ ಒಳಗೊಂಡಿರುತ್ತವೆ. ಆ ಗ್ರಾಮಗಳೆಂದರೆ ಮೊಳಕಾಲ್ಮೂರು, ಕೋನಸಾಗರ, ಉಡೇವು, ಕೊಂಡ್ಲಹಳ್ಳಿ, ಮೊಗಲಹಳ್ಳಿ ಬಿ.ಜಿ.ಕೆರೆ (ಬೊಮ್ಮಗೊಂಡನಕೆರೆ) ನಾಗಸಮುದ್ರ, ಓಬಳಾಪುರ (ಸಿರವಾಳ) ಬಸಾಪುರ, ಕಡದರಹಳ್ಳಿ, ದೊಡ್ಡುಳ್ಳಾರ್ತಿ, ಘಟಘರ್ತಿ, ಹೊನ್ನೂರು, ಗೌರಸಮುದ್ರದ ದೇವರಹಳ್ಳಿ, ಮಲ್ಲಸಮುದ್ರ, ಗೌರಸಮುದ್ರ ಈ ಗ್ರಾಮಗಳಲ್ಲಿ ವಾಸಿಸುತ್ತಿರುವ ಕುರುಬರ ಶಿಷ್ಯಾರ್ಚನೆ ಶುಭ ಸೋಭಾನೆ ಕಾರ್ಯಕ್ರಮಗಳು ಈ ಮಠದಡಿಯಲ್ಲಿಯ ವ್ಯಾಪ್ತಿಗೆ ಒಳಪಟ್ಟಿವೆ.

ಚಿತ್ರದುರ್ಗದ ಪಶ್ಚಿಮ ಭಾಗಕ್ಕೆ ೫ ಕಿ. ಮೀ. ಸಮೀಪ ಇರುವ ಹುಲ್ಲೂರು ಗ್ರಾಮದಲ್ಲಿ ಅತ್ಯಂತ ಪ್ರಾಚೀನ ಹಾಗೂ ಸಾಂಸ್ಕೃತಿಕ ಶ್ರೀಮಂತಿಕೆಯುಳ್ಳ ರೇವಣಸಿದ್ದೇಶ್ವರಮಠ (ದೇವಾಲಯ)ವಿದೆ. ಇದು ವಿಜಯನಗರ ಕಾಲ-ವಿಜಯನಗರೋತ್ತರ ಕಾಲಗಳಲ್ಲಿ ಈ ದೇವಾಲಯ ನಿರ್ಮಾಣಗೊಂಡಿದ್ದು ಇಲ್ಲಿನ ವಿಶಾಲವಾದ ಒಂದು ಎಕರೆ ಆವರಣದಲ್ಲಿ ಅತ್ಯಂತ ಸವಿಸ್ತಾರವಾದ ಕಲ್ಲಿನ ತೊಲೆಗಳನ್ನು ಬಳಸಿ ಗರ್ಭಗೃಹ, ನವರಂಗ, ಸುಖನಾಸಿ, ಮುಖಮಂಟಪ ಮತ್ತು ಮುಂಭಾಗದಲ್ಲಿ ಎರಡು ಜಗಲಿಗಳನ್ನು ನಿರ್ಮಿಸಿದ್ದು ಈ ದೇವಾಲಯದ ಕಟ್ಟಡ ಸಂಪೂರ್ಣವಾಗಿ ಕಲ್ಲಿನ ಕಂಬಗಳನ್ನು ಮತ್ತು ಬೋದಿಗೆಗಳನ್ನು ಮತ್ತು ತೊಲೆಗಳಿಂದ ನಿರ್ಮಾಣಗೊಂಡಿದೆ. ಗರ್ಭಗುಡಿಯಲ್ಲಿ ೩ ೧/೨ ಅಡಿ ಎತ್ತರದ ಕಪ್ಪುದಾದ ಅಮಸ್ಥತಶಿಲಾ ಕಲ್ಲಿನಲ್ಲಿ ನಿಂತಿರುವ ಭಂಗಿಯಲ್ಲಿ ಗುರು ರೇವಣಸಿದ್ದೇಶ್ವರ ಏಕಶಿಲಾ ಮೂರ್ತಿಯು ವಿಶಿಷ್ಟವಾಗಿದೆ. ಈ ದೇವಾಲಯದ ಎದುರಿಗೆ ೩೦ ಅಡಿ ಎತ್ತರದ ೨ ಕಲ್ಲಿನ ಉಯ್ಯಾಲೆ ಕಂಬಗಳಿವೆ. ಈ ಉಯ್ಯಾಲೆ ಕಂಬಗಳನ್ನು ಅವಲೋಕಿಸಿದರೆ ಚಿತ್ರದುರ್ಗದ ಉಚ್ಚಂಗಿಯಲ್ಲಮ್ಮನ ದೇವಸ್ಥಾನದ ಮುಂಭಾಗದಲ್ಲಿನ ಉಯ್ಯಾಲೆ ಕಂಬಗಳ ಮಾದರಿಯಲ್ಲಿವೆ. ಈ ದೇವಾಲಯದ ನವರಂಗ, ಮುಖಮಂಟಪದಲ್ಲಿನ ಕಂಬಗಳಲ್ಲಿ ಟಗರು ಚಿತ್ರವಿರುವ ಉಬ್ಬು ಶಿಲ್ಪಗಳು ಮತ್ತು ಗೌರಮ್ಮದೇವಿ ಹಾಗೂ ನಾಗದೇವತಾ ಶಿಲ್ಪಗಳು ಕಂಡುಬರುತ್ತವೆ. ಒಟ್ಟಾರೆ ಈ ದೇವಾಲಯ ಪ್ರಾಚೀನ ಕಾಲದಲ್ಲಿ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕೇಂದ್ರವಾಗಿತ್ತೆಂಬುದರಲ್ಲಿ ಸಂಶಯವಿಲ್ಲ. ಶ್ರೀಹುಲ್ಲೂರು ಶ್ರೀನಿವಾಸ ಜೋಯಿಸರವರು ತಮ್ಮ ಬರಹಗಳಲ್ಲಿ ಹುಲ್ಲೂರಿನ ಶ್ರೀರೇವಣಸಿದ್ದೇಶ್ವರ ದೇವಾಲಯವು ಸುಮಾರು ೧೫-೧೬-೧೭೧೮ ನೇ ಶತಮಾನಗಳಲ್ಲಿ ಅತ್ಯಂತ ಉನ್ನತ ಧಾರ್ಮಿಕ ಶ್ರೀಮಂತಿಕೆ ಸುಸ್ಥಿತಿಯಲ್ಲಿತ್ತೆಂಬುದನ್ನು ತಮ್ಮ ಬರಹಗಳಲ್ಲಿ ತಿಳಿಸಿರುತ್ತಾರೆ. ಈ ಮಠದಡಿಯಲ್ಲಿ ೫ ಕಟ್ಟೆ ಮನೆಗಳಾದ ಚಿತ್ರದುರ್ಗ, ಸಂತೆಬೆನ್ನೂರು, ಅದಡಿ, ಜಗದಪುಳ್ಳಪುರ, ಸೊಲ್ಲಾಪುರ ಈ ಕಟ್ಟೆಮನೆಗಳ ಅಡಿಯಲ್ಲಿ ೧೩೦ ಹಳ್ಳಿಗಳ ಹಾಲುಮತಸ್ಥ ಸಮುದಾಯಗಳು ಪ್ರತಿ ೧೨ ವರ್ಷಕ್ಕೊಮ್ಮೆ ಇಲ್ಲಿಗೆ ಸೇರಿ ಕಂತೆ ಸೇವೆ ತೋಪು ಜಾತ್ರೆಯನ್ನು ಮಾಡುತ್ತಾರೆ. ಪ್ರತಿವರ್ಷ ಕಡೇ ಶ್ರಾವನ ಸೋಮವಾರ ಪ್ರಸ್ತುತ ಮಠದ ಗುರು ಒಡೆಯರಾದ ಶ್ರೀ ರವಿ ಒಡೆಯರ್ ಮತ್ತು ಶ್ರೀಶಿವಮೂರ್ತಿ ಒಡೆಯರ್‌ರವರ ನೇತೃತ್ವದಲ್ಲಿ ಧಾರ್ಮಿಕ ಕಾರ್ಯಗಳು ಜರುಗುತ್ತವೆ. ಒಡೆಯರುಗಳನ್ನು ಮೌಖಿಕವಾಗಿ ಸಂದರ್ಶಿಸಿದಾಗ ನಮ್ಮ ಪೂರ್ವಜರು ಧಾರವಾಡ ಜಿಲ್ಲೆಯ ಹುಲ್ಲೂರಿನಿಂದ ಹಂಪೆಗೆ ಹೋದರೆಂದು ಹಂಪೆಯಿಂದ ಚಿತ್ರದುರ್ಗಕ್ಕೆ ಬಂದೆವೆಂದು ಚಿತ್ರದುರ್ಗದಿಂದ ಸೊಲ್ಲಾಪುರ ಹುಲ್ಲೂರಿಗೆ ಬಂದು ಇಲ್ಲಿ ನೆಲೆಸಿರುತ್ತೇವೆ ಎಂದು ತಿಳಿಸುತ್ತಾರೆ. ಇದೇ ತಾಲೂಕಿನ ತುರುವನೂರು, ಚಿಕ್ಕೇನಹಳ್ಳಿ, ಬರುಜನಹಟ್ಟಿ, ಕುರುಬರಹಳ್ಳಿ ಮಠದ ದಂಡಿನ ಕುರುಬರ ಹಟ್ಟಿಗಳಲ್ಲಿ ಹಾಲುಮತಸ್ಥ ಸಮುದಾಯವು ಹೇರಳವಾಗಿದ್ದು, ಇಲ್ಲಿ ಮೈಲಾರಲಿಂಗ, ಬೀರಪ್ಪ ದೇವಸ್ಥಾನಗಳನ್ನು ಕಾಣಬಹುದಾಗಿದೆ. ಆದರೆ ಇಲ್ಲಿ ಮಠಗಳಿರುವುದಿಲ್ಲಾ.

ಹಿರಿಯೂರು ತಾಲೂಕಿನ ರೇವಣಸಿದ್ದ ಪರಂಪರೆಯ ಹಾಲುಮತಸ್ಥ ಸಮುದಾಯಗಳ ಧಾರ್ಮಿಕ ವಿಚಾರಗಳನ್ನು ಅವಲೋಕಿಸಿದಾಗ ಹಿರಿಯೂರಿನಲ್ಲಿ ಎರಡು ರೇವಣಸಿದ್ದೇಶ್ವರ ಮಠಗಳಿದ್ದು, ಈ ಮಠಗಳು ದೊಡ್ಡೇರಿ ಮಠದಡಿಯಲ್ಲಿ ಬರುತ್ತವೆ. ಇವುಗಳೇನು ಅಷ್ಟೇನೂ ವಿಶೇಷತೆಯುಳ್ಳ ಕಟ್ಟಡಗಳನ್ನು ಹೊಂದಿರದೇ ಸಾಧಾರಣ ಬಿಡುಗಲ್ಲು, ಗಾರೆ, ಇಟ್ಟಿಗೆ ಮತ್ತು ಮರದ ಕಂಬಗಳನ್ನು ಬಳಸಿ ಸಾಧಾರಣ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಹಿರಿಯೂರಿನ ಮೈಲಾರಲಿಂಗ ದೇವಾಲಯದ ಹಿಂಭಾಗದ ಕುರುಬರ ಕೇರಿಯಲ್ಲಿರುವ ಮಠಕ್ಕೆ ಪ್ರಸ್ತುವಾಗಿ ಹರ್ತಿಕೋಟೆಯ ಶ್ರೀ ಗುರುಸಿದ್ದಯ್ಯ ಒಡೆಯರವರೇ ಈ ಮಠದ ಗುರು ಒಡೆಯರಾಗಿದ್ದು, ಈ ಮಠದಡಿಯಲ್ಲಿನ ೧೮ ಹಳ್ಳಿಗಳ ಗುರುಪರಂಪರೆಯನ್ನು ನೆರವೇರಿಸಿಕೊಂಡು ಬರುತ್ತಿದ್ದಾರೆ. ಹಿರಿಯೂರಿನ ಇನ್ನೊಂದು ಮಠಕ್ಕೆ (ಬಂಬೂಬಜಾರ್)ನಲ್ಲಿನ ಈ ಮಠಕ್ಕೆ

ಆರಂಭಿಕವಾಗಿ ಚಳ್ಳಕೆರೆ ತಾಲೂಕು, ದೊಡ್ಡೇರಿಯಿಂದ ಒಂದು ಕುಟುಂಬವು ಇಲ್ಲಿಗೆ ಬಂದು ಶ್ರೀಗುರು ಶಾಂತಮುತ್ತಯ್ಯರವರಿಂದ ಈ ಮಠದ ಪರಂಪರೆಯನ್ನು ಶ್ರೀರೇವಯ್ಯ ಒಡೆಯರಿಂದ ಆರಂಭಿಸಿ ನಂತರ ಶ್ರೀ ಕರಿಯಪ್ಪ ಒಡೆಯರ್, ಶ್ರೀ ಸಿದ್ಧಯ್ಯ ಒಡೆಯರ್, ಶ್ರೀ ಶೇಖರ್ ಒಡೆಯರ್, ಶ್ರೀ ಮಂಜಪ್ಪ ಒಡೆಯರ್‌ಗಳು ಈ ಮಠದ ಒಡೆಯರುಗಳ ಸಾನಿಧ್ಯದಲ್ಲಿ ಧಾರ್ಮಿಕ ಕಾರ್ಯಕ್ರಮಗಳನ್ನು ನೆರವೇರಿಸುತ್ತಿದ್ದರು. ಈ ಮಠದಡಿಯಲ್ಲಿ ೮ ಗುಡಿ ಕಟ್ಟೆಗಳು ಇದ್ದು ಇದರ ಅಡಿಯಲ್ಲಿ ೧೮ ಹಳ್ಳಿಗಳಾದ ಹಿರಿಯೂರು, ಇಕ್ಕನೂರು, ಬೇವಿನಹಳ್ಳಿ, ನಂದಿಹಳ್ಳಿ, ಕೆರೆಹಳ್ಳಿ, ಹುಲಿತೊಟ್ಟಿಲು, ಪರಮೇನಹಳ್ಳಿ, ಮಸ್ಕಲ್, ಕಾಮಗಾನಹಳ್ಳಿ, ಈರಗಾನಹಳ್ಳಿ, ಕಂದಿಕೆರೆ, ಸೋಮೇರಹಳ್ಳಿ, ತಾಳವಟ್ಟಿ, ಆಲೂರು, ಸಮುದ್ರದಹಳ್ಳಿ, ದಿಂಡಾವರ, ಓಬಳಾಪುರ, ಸಕ್ಕರ ಈ ಹಳ್ಳಿಗಳ ಹಾಲುಮತಸ್ಥರು ಪ್ರತಿ ೧೨ ವರ್ಷಕ್ಕೊಮ್ಮೆ ಇಲ್ಲಿ ಒಂದೆಡೆ ಸೇರಿ ಕಂತೇ ಸೇವೆ ಮತ್ತು ದೊಡ್ಡ ಜಾತ್ರೆಯನ್ನು ವಿಶೇಷವಾಗಿ ಆಚರಿಸಿಕೊಂಡು ಬರುತ್ತಿರುವುದು ಇಂದಿಗೂ ರೂಢಿಯಲ್ಲಿದೆ.

ಹೊಸದುರ್ಗ ತಾಲೂಕಿನಾದ್ಯಂತ ಹಾಲುಮತಸ್ಥ ಸಮುದಾಯಗಳು ಅತ್ಯಂತ ಹೆಚ್ಚು ಇರುವುದನ್ನು ಗಮನಿಸಿದರೆ ಇದಕ್ಕೆ ಪೂರಕವಾಗಿ ತಾಲೂಕಿನಾದ್ಯಂತ ಶ್ರೀರೇವಣಸಿದ್ದೇಶ್ವರ ಮಠಗಳು ಬೀರಪ್ಪ ದೇವಾಲಯಗಳು (ಬೀರದೇವರುಗಳು) ಮೈಲಾರಲಿಂಗ ದೇವಾಲಯಗಳು, ದೊಡ್ಡಣ್ಣ, ಚಿಕ್ಕಣ್ಣ, ಕರಿಸಿದ್ದೇಶ್ವರ, ಮಾದಾಳಪ್ಪ, ನಗರಗೇರಪ್ಪ, ಮಲಿಯಮ್ಮ, ಲಕ್ಕಮ್ಮ, ಲಕ್ಷ್ಮಿದೇವಿ ಮುಂತಾದ ದೇವರು ದೇವತೆಗಳನ್ನು ಕಾಣಬಹುದಾಗಿದೆ. ಪ್ರಧಾನವಾಗಿ ತಾಲೂಕಿನ ಶ್ರೀರಾಂಪುರದ ರೇವಣಸಿದ್ದೇಶ್ವರ ಮಠ (ದೇವಸ್ಥಾನವು) ಅತ್ಯಂತ ಕಲಾತ್ಮಕ ಪ್ರಾಚೀನ ದೇವಾಲಯವಾಗಿದೆ. ಈ ದೇವಾಲಯವು ವಿಜಯನಗರ ಕಾಲದ ಅಥವಾ ನಂತರದ ವರ್ಷಗಳಲ್ಲಿ ನಿರ್ಮಿಸಿರಬಹುದು. ಕಲ್ಲಿನ ಕಂಬಗಳು ಹಾಗೂ ಸುಂದರವಾದ ನಾಟ್ಯರಂಗ, ನವರಂಗ ಮತ್ತು ಮುಖಮಂಟಪ, ಸುಖನಾಸಿ, ಗರ್ಭಗೃಹವನ್ನು ಈ ದೇವಾಲಯವು ಹೊಂದಿದೆ. ಇಲ್ಲಿನ ಕಲ್ಲಿನ ಕಂಬಗಳು ಅವುಗಳಲ್ಲಿರುವ ಶಿಲ್ಪಕಲೆ ಹಾಗೂ ಉಬ್ಬು ಶಿಲ್ಪಗಳು ವಿಜಯನಗರ ದೇವಾಲಯದ ಮಾದರಿಯನ್ನು ನೆನಪಿಸುತ್ತವೆ. ಆಶ್ಚರ್ಯದ ಸಂಗತಿ ಎಂದರೆ ಈ ದೇವಾಲಯದ ಗರ್ಭಗುಡಿಯಲ್ಲಿ ೪ ದೇವರುಗಳ ವಿಗ್ರಹಗಳಿವೆ. ಅವುಗಳೆಂದರೆ ರೇವಣಸಿದ್ದೇಶ್ವರ, ಬೀರಪ್ಪ, ಮಾದಳಪ್ಪ, ನಗರಗೇರಪ್ಪ ದೇವರುಗಳು ಆಗಿದ್ದು ಇವುಗಳನ್ನು ವಿಶೇಷ ಪೂಜೆಗಳಿಂದ ನಿತ್ಯ ನೆರವೇರಿಸುತ್ತಾರೆ. ಇಲ್ಲಿನ ಹಿರಿಯರ ಮೌಖಿಕ ಅಭಿಪ್ರಾಯದ ಪ್ರಕಾರ ಈ ಮಠಕ್ಕಿಂತಲೂ ದೊಡ್ಡ ತೇಕಲವಟ್ಟಿಯಲ್ಲಿರುವ ರೇವಣಸಿದ್ದೇಶ್ವರ ಮಠವೇ ಇದರ ಮೂಲ ಮಠವೆಂದು ತಿಳಿಸುತ್ತಾ ಈ ೪ ದೇವರುಗಳ ಅಡಿಯಲ್ಲಿ ೪೯ ಹರಿವಾಣದ ಹಳ್ಳಿಗಳು ಮತ್ತು ೧೨ ಬೆಡಗಿನವರು ಜೊತೆಗೂಡಿ ದೊಡ್ಡ ಜಾತ್ರೆಯನ್ನು ೧ ವಾರ ಕಾಲ ಆಚರಿಸುತ್ತಾರೆ. ತಾಲೂಕಿನ ಬಾಗೂರು, ಕಾರೆಹಳ್ಳಿ, ತಾಳಿಕಟ್ಟೆ ಈ ೭ ಗುಡಿಕಟ್ಟೆಗಳ ದೇವರುಗಳನ್ನು ಒಂದೆಡೆ ಸೇರಿಸಿ ತೋಪು ಜಾತ್ರೆಯನ್ನು ಇಂದಿಗೂ ಆಚರಿಸಿಕೊಂಡು ಬರುತ್ತಿದ್ದಾರೆ. ತಾಲೂಕಿನ ಕಾರೆಹಳ್ಳಿ ಗ್ರಾಮದಲ್ಲಿ ೫೦೦ ಮನೆ ಹಾಲುಮತಸ್ಥ ಮನೆಗಳಿವೆ. ಇಲ್ಲಿ ೨ ಮಠಗಳಿದ್ದು ಒಂದು ಹಿರೇಮಠ ಮತ್ತೊಂದು ಚಿಕ್ಕಮಠ ಹಾಗೆಯೇ ೨ ಬೀರಲಿಂಗೇವರ ದೇವಾಲಯಗಳೂ ಇವೆ. ಇಲ್ಲಿನ ಗುಡಿಗೌಡ ಕೋಲ್ಕಾರ ಭಂಡಾರಿಗಳಿದ್ದು ಇವರು ಸಮಾಜದ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಬ್ಬಹರಿದಿನ ಉತ್ಸವಗಳನ್ನು ನೆರವೇರಿಸಿಕೊಂಡು ಹೋಗುವುದರ ಮೂಲಕ ಸಮಾಜದ ಸಾಮಾಜಿಕ ಮತ್ತು ಧಾರ್ಮಿಕ ಸಾಮರಸ್ಯತೆಯನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ದೊಡ್ಡಮಠದಡಿಯಲ್ಲಿ ೧ ಗುಡಿಕಟ್ಟೆ ೩ ಹರಿವಾಣದವರಾದ ಮಾಚೇನಹಳ್ಳಿ, ಬೋಕಿಕೆರೆ, ಕಲ್ಲೋಡು ಇವರುಗಳು ಪ್ರತಿ ೧೨ ವರ್ಷಕ್ಕೊಮ್ಮೆ ಕಂತೇ ಸೇವೆ-ತೋಪುಜಾತ್ರೆ ಮಾಡುತ್ತಾರೆ. ಅದೇ ರೀತಿಯಲ್ಲಿ ಚಿಕ್ಕಮಠದಡಿಯಲ್ಲಿ ೭ ಗುಡಿ ಕಟ್ಟೆಗಳಾದ ಕಡೂರು, ತರೀಕೆರೆ, ಅಜ್ಜಂಪುರ, ಸೊಲ್ಲಾಪುರ, ಮುಗುಳಿ, ಶಿವನಿ, ತಡಗಿ, ಅನುವನಹಳ್ಳಿ ಹೊಸೂರು ಈ ಹಳ್ಳಿಗಳ ಹಾಲುಮತಸ್ಥ ಸಮುದಾಯಗಳು ಪ್ರತಿ ೧೨ ವರ್ಷಕ್ಕೊಮ್ಮೆ ಕಂತೇ ಸೇವೆ-ತೋಪು ಜಾತ್ರೆಯನ್ನು ಆಚರಿಸಿಕೊಂಡು ಬರುವುದರೊಂದಿಗೆ ರೇವಣಸಿದ್ದೇಶ್ವರ ಹಾಗೂ ಬೀರಪ್ಪನ ದೇವಾಲಯಗಳಲ್ಲಿ ಪ್ರತಿವರ್ಷ ಕಾರ್ತಿಕ ಮಾಸ ದೀಪಾವಳಿ, ಮಹಾನವಮಿ ಮುಂತಾದ ಹಬ್ಬಗಳಲ್ಲಿ ಪಲ್ಲಕ್ಕಿ ಉತ್ಸವ ವಿಶೇಷ ಪೂಜೆಗಳನ್ನು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಿಕೊಂಡು ಬರುತ್ತಿರುವುದು ಇಂದಿಗೂ ರೂಢಿಯಲ್ಲಿದೆ.

ಹೊಸದುರ್ಗ ಪಟ್ಟಣದ ಎ.ಪಿ.ಎಂ.ಸಿ ಯಾರ್ಡ್‌ನ ಆವರಣದಲ್ಲಿ ರೇವಣಸಿದ್ದೇಶ್ವರ ಮಠವಿದ್ದು ಇಲ್ಲಿಯೂ ಗರ್ಭಗೃಹ, ಸುಖನಾಸಿ, ನವರಂಗ, ಮುಖಮಂಟಪ ಹಾಗೂ ದೇವಸ್ಥಾನದ ಮುಂಭಾಗದಲ್ಲಿ ಕಲ್ಲಿನ ಉಯ್ಯಾಲೆ ಕಂಬಗಳನ್ನು ಹೊಂದಿದ್ದು ಈ ದೇವಾಲಯವು

ದಕ್ಷಿಣಾಭಿಮುಖವಾಗಿ ಇರುವುದು ಕಂಡುಬರುತ್ತದೆ. ಹೊಸದುರ್ಗದಿಂದ ೫ ಕಿ. ಮೀ. ದೂರದಲ್ಲಿನ ಕೆಲ್ಲೋಡು ಎಂಬ ಗ್ರಾಮವಿದ್ದು ಇಲ್ಲಿನ ವಿಶಾಲ ಆವರಣದಲ್ಲಿ ಹೊಸದುರ್ಗದ ಬೆಟ್ಟದ ಮೇಲಿನ ಭೈರವೇಶ್ವರ ದೇವರು ಬೆಟ್ಟದಿಂದ ಬಂದು ಇಲ್ಲಿ ನೆಲೆಸಿದ್ದು ದೊಡ್ಡಣ್ಣ, ಚಿಕ್ಕಣ್ಣ, ಭೈರಪ್ಪ, ಕರಿಸಿದ್ದೇಶ್ವರ ದೇವರುಗಳು ಈ ಹಿಂದೆ ಅತ್ಯಂತ ಉತ್ತಮ ಸ್ಥಿತಿಯಲ್ಲಿದ್ದು ಈ ದೇವಾಲಯಗಳು ಇಂದು ನಾಶವಾಗಿವೆ. ಇದೇ ಸ್ಥಳದಲ್ಲಿ ಸಮುದಾಯದ ರಾಜಕೀಯ ಧುರೀಣರಾದ ಮಾನ್ಯ ಶ್ರೀ ಬಿ. ಜಿ. ಗೋವಿಂದಪ್ಪನವರ ನೇತೃತ್ವದಲ್ಲಿ ನೂತನ ದೇವಾಯಗಳು ನಿರ್ಮಿಸಲಾಗುತ್ತಿದೆ. ವಿಶೇಷತೆ ಎಂದರೆ ಈ ಗ್ರಾಮದ ಉತ್ತರ ಭಾಗದ ತೆಂಗಿನ ತೋಟದ ಮಧ್ಯೆ ರೇವಣಸಿದ್ದೇಶ್ವರ ಮಠ/ದೇವಾಲಯವಿದೆ. ಇದು ಚಿತ್ರದುರ್ಗಕ್ಕೆ ಸಮೀಪವಿರುವ ಹುಲ್ಲೂರು ಶ್ರೀರೇವಣ ಸಿದ್ದೇಶ್ವರರ ದೇವಾಲಯದ ಮಾದರಿಯಲ್ಲಿದ್ದು ಈ ಎರಡು ದೇವಾಲಯಗಳು ಜೊತೆಜೊತೆಯಲ್ಲಿ ನಿರ್ಮಾಣಗೊಂಡಿರಬಹುದು ಎಂಬುದು ನನ್ನ ಅಭಿಪ್ರಾಯವಾಗಿದೆ. ಈ ದೇವಾಲಯವೂ ಅತ್ಯಂತ ಪ್ರಾಚೀನ ದೇವಾಲಯವಾಗಿದ್ದು ಗರ್ಭಗೃಹ ಸುಖನಾಸಿ ನವರಂಗ ಮುಖಮಂಟಪ ಎರಡು ಜಗಲಿಗಳನ್ನು ಒಳಗೊಂಡಿದ್ದು ಸಂಪೂರ್ಣವಾಗಿ ಕಲ್ಲಿನ ಕಂಬಗಳು ಮತ್ತು ಬೋದಿಗೆಗಳನ್ನು ಹೊಂದಿದ್ದು ಈ ದೇವಾಲಯದ ಎದುರು ಕಲ್ಲಿನ ತೂಗು ಉಯ್ಯಾಲೆ ಕಂಬಗಳಿದ್ದು ಈ ಕಂಬಗಳು ಸಿಡಿಲಿಗೆ ಆಹುತಿಯಾಗಿ ಭಗ್ನಗೊಂಡಿವೆ. ಅತ್ಯಂತ ವಿನಾಶದ ಅಂಚಿನಲ್ಲಿರುವ ಈ ದೇವಾಲಯವನ್ನು ಪುರಾತತ್ವ ಇಲಾಖೆ ವ್ಯಾಪ್ತಿಗೆ ಒಳಪಡಿಸಿದಲ್ಲಿ ಮೂಲ ಸ್ವರೂಪಕ್ಕೆ ದಕ್ಕೆಯಾಗದೇ ಸುರಕ್ಷಿತವಾಗಿ ಇಟ್ಟುಕೊಳ್ಳಲು ಸಾಧ್ಯವಾಗಬಹುದು. ಒಟ್ಟಾರೆ ಈ ದೇವಾಲಯವು ಪ್ರಾಚೀನ ಹಾಗೂ ಬೃಹತ್ ಐತಿಹಾಸಿಕ ದೇವಾಲಯವಾಗಿದ್ದು ಇಲ್ಲಿ ಪ್ರತಿ ೨೫ ವರ್ಷಕ್ಕೊಮ್ಮೆ ಕಂತೆ ಸೇವೆ ತೋಪುಜಾತ್ರೆ ನಡೆದುಕೊಂಡು ಬರುತ್ತಿದೆ. ಒಟ್ಟಾರೆ ಇಡೀ ಜಿಲ್ಲೆಯಾದ್ಯಂತ ಹಾಲುಮತಸ್ಥರ ರೇವಣಸಿದ್ದ ಪರಂಪರೆಯ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು ಈ ಮಠದಡಿಯಲ್ಲಿ ಕಾಲಕಾಲಕ್ಕೆ ಧಾರ್ಮಿಕ ವಿಧಿ-ವಿಧಾನಗಳನ್ನು ಹಾಗೂ ಸತ್ ಸಂಪ್ರದಾಯಗಳನ್ನು ಆಚಾರ-ವಿಚಾರಗಳನ್ನು ಆಚರಿಸಿಕೊಳ್ಳುತ್ತಾ ಸಂರಕ್ಷಿಸಿಕೊಳ್ಳುತ್ತಾ, ಅವುಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವುದು, ಆ ಮೂಲಕ ಹಾಲುಮತದವರ ಸಂಸ್ಕೃತಿಯನ್ನು ಎತ್ತಿ ಹಿಡಿಯುವಲ್ಲಿ ಈ ಸಮುದಾಯದ ಪಾತ್ರ ವಿಶೇಷವಾಗಿದೆ.

## ೨೧. ಚಿತ್ರದುರ್ಗ ಪರಿಸರದ ಕುರುಬರು : ಸಾಮಾಜಿಕ ಸಂಗತಿಗಳು

ಬುಡಕಟ್ಟು ಮೂಲದಿಂದ ಬಂದ ಗೊಲ್ಲ, ಬೇಡ, ಒಕ್ಕಲಿಗ, ಕುರುಬ ಮೊದಲಾದ ಸಮುದಾಯಗಳು ಸಾಂಸ್ಕೃತಿಕ ಅನನ್ಯತೆಯಿಂದ ಈ ನಾಡಿನ ಸಾಮಾಜಿಕ ಪರಿಸರ, ಹಲವು ವೈಶಿಷ್ಟ್ಯಗಳಿಂದ ಕೂಡಿದೆ. ಮಾತೃ ಪ್ರಧಾನ ಸಂಸ್ಕೃತಿಯ ಮೂಲದಿಂದ ಬಂದ ಈ ಸಮುದಾಯಗಳು, ಕ್ರಮೇಣ ಪಿತೃ ಪ್ರಧಾನ ಸಂಸ್ಕೃತಿಯನ್ನು ಅನುಸರಿಸಿವೆ. ಆಧುನಿಕತೆಯ ಪರಿಣಾಮ ಮೂಲ ಸಂಸ್ಕೃತಿಯ ಲಕ್ಷಣಗಳು ಕ್ರಮೇಣ ಮರೆಯಾಗಿ, ಕೃಷಿಕ ಸಮಾಜವಾಗಿ ಪರಿವರ್ತನೆಗೊಂಡಿವೆ. ಬುಡಕಟ್ಟು ಸಮುದಾಯಗಳಲ್ಲಿ ನೆಲಮೂಲ ಸಂಸ್ಕೃತಿಯ ಪ್ರಧಾನ ಕಸುಬುಗಳಾದ

೧. ಬೇಟೆ ಸಂಸ್ಕೃತಿ

೨. ಪಶುಪಾಲನಾ ಸಂಸ್ಕೃತಿ

೩. ಕೃಷಿ-ಶ್ರಮ ಸಂಸ್ಕೃತಿಗಳನ್ನು ಅನುಕ್ರಮವಾಗಿ ಕಾಣಬಹುದು. ಇವುಗಳನ್ನು ನಂಬಿ ಬದುಕನ್ನು ಕಟ್ಟಿಕೊಂಡಿದ್ದು ಈಗ ಇತಿಹಾಸ. ಈ ಎಲ್ಲಾ ಸಮುದಾಯಗಳಲ್ಲಿ ಹುಟ್ಟು, ಸಾವು ಮದುವೆ, ಹಬ್ಬ ಜಾತ್ರೆ, ಉತ್ಸವ, ಮೊದಲಾದ ಆಚರಣೆಗಳಲ್ಲಿ ಏಕಮಾದರಿ ಇದ್ದರೂ, ಕೆಲವೊಂದು ಹಬ್ಬ ಮದುವೆ ಮೊದಲಾದ ಆಚರಣೆಗಳಲ್ಲಿ ವೈವಿಧ್ಯತೆಯನ್ನು ಪ್ರಾದೇಶಿಕತೆಯ ಹಿನ್ನೆಲೆಯಲ್ಲಿ ಕಾಣಬಹುದು.

ಬುಡಕಟ್ಟು ಸಂಸ್ಕೃತಿಯಿಂದ ಬಂದ ಹಾಲುಮತ ಸಮುದಾಯದವರು ಅತ್ಯಂತ ಸ್ವಾಭಿಮಾನಿಗಳು. ಇತರೆ ಸಮುದಾಯಗಳೊಂದಿಗೆ ಬಿಗಿಯಾದ, ಅದರಲ್ಲೂ ಆತ್ಮೀಯ ಸಂಬಂಧ ಇಟ್ಟುಕೊಂಡವರು.

೧. ಕುರಿ ಸಾಕಣೆ,

೨. ಕಂಬಳಿ ನೇಕಾರಿಕೆ

೩. ಕೃಷಿ-ಈ ಪಾರಂಪರಿಕ ವೃತ್ತಿಗಳಲ್ಲಿ ಪರಿಣತಿಯನ್ನು ಪಡೆದವರಾಗಿದ್ದಾರೆ. ಕುರುಬರು ದೈಹಿಕ ಶಕ್ತಿಗೆ ಹೆಸರಾದವರು. ಕುಸ್ತಿ (ಪೈಲ್ವಾನ್) ಪ್ರವೀಣರು. ಮೊದಲು ಕುರುಬರಿರುವ ಈ ಕಲೆಯಲ್ಲಿ ಪ್ರಸಿದ್ಧಿ ಪಡೆದಿದ್ದರು. ಚಿತ್ರದುರ್ಗದ ಗರಡಿ ಮನೆಗಳು ಈಗಲೂ ಇದನ್ನೇ ಬಿಂಬಿಸುತ್ತವೆ. ಪೈಲ್ವಾನರ ಮನೆಗಳೆಂದೇ ಖ್ಯಾತಿ ಪಡೆದಿವೆ. (ಪೈಲ್ವಾನ್ ತಿಪ್ಪಾಸ್ವಾಮಿ, ಪೈಲ್ವಾನ್ ನಂಜಪ್ಪ) ದೊಡ್ಡಪೇಟೆ, ಬುರುಜನಹಟ್ಟಿ, ಪುರುವಿನಕಟ್ಟೆ ಪ್ರದೇಶಗಳಲ್ಲಿ ಪಾಳೆಗಾರರ ಕಾಲದಿಂದಲೂ ಗರಡಿಮನೆಗಳಿದ್ದು, ಇತ್ತೀಚೆಗೆ ವ್ಯಾಯಾಮಶಾಲೆಗಳೆಂದು ಬದಲಾಗಿವೆ. ದಾವಣಗೆರೆಯಲ್ಲಿ ಶ್ರೀಬೀರೇಶ್ವರ ವ್ಯಾಯಾಮ ಶಾಲೆ ತುಂಬಾ ಜನಪ್ರಿಯವಾದುದು. ಡೊಳ್ಳು ಕುಣಿತ, ದಟ್ಟಿ ಕುಣಿತ, ಗೊರವಯ್ಯನ ಕುಣಿತ, ಚೌಡಿಕೆ ಹಾಡು ಇವೆಲ್ಲವೂ ಈ ಸಮುದಾಯದವರ ಜನಪದ ನೃತ್ಯ ಮತ್ತು ಕಲೆಗಳಾಗಿವೆ.

'ಹಾಲುಮತ ಮೇಲುಮತ'ವೆಂಬ ಭಾವನೆ ಈ ಸಮುದಾಯಕ್ಕಿದ್ದು, ಶೈವ ಮತ್ತು ವೈಷ್ಣವ ಸಂಬಂಧಿ ಆಚರಣೆಗಳೆರಡನ್ನೂ ಇವರಲ್ಲಿ ಕಾಣಬಹುದು. ಸುಮಾರು ೯೦% ಶೈವ ಸಂಪ್ರದಾಯವಿದ್ದು ಅಂಗಾರ, ಭಂಡಾರ, ವಿಭೂತಿಯನ್ನು ಹಣೆಗೆ ಧರಿಸುತ್ತಾರೆ. ಬೀರಲಿಂಗೇಶ್ವರನೇ ಆರಾಧ್ಯ ದೈವವಾಗಿದ್ದರೂ, ಮೈಲಾರಲಿಂಗ ಮತ್ತು ರೇವಣಸಿದ್ಧರ ಸಂಪ್ರದಾಯವೂ ಇದೆ. ಇವುಗಳನ್ನು ಮಠ, ಸಿಂಹಾಸನವೆಂದು ಕರೆಯುತ್ತಾರೆ. ಉಳಿದ ೧೦% ವೈಷ್ಣವ ಸಂಪ್ರದಾಯವಿದ್ದು, ತಿಮ್ಮಪ್ಪನ ಒಕ್ಕಲುಗಳಾಗಿ ನಾಮ ಧರಿಸುತ್ತಾರೆ. ಉಳಿದ ೧೦% ವೈಷ್ಣವ ಸಂಪ್ರದಾಯವಿದ್ದು, ತಿಮ್ಮಪ್ಪನ ಒಕ್ಕಲುಗಳಾಗಿ ದೇವತಾರಾಧನೆಯೂ ಇದ್ದು, ಉಚ್ಚಂಗಿಯಲ್ಲಮ್ಮನ ಸಂಪ್ರದಾಯವಿದೆ. ಬೀರಪ್ಪದೇವರ ಜೊತೆಯಲ್ಲಿ ಹೆಣ್ಣುದೇವತೆ ಇದ್ದೇ ಇರುತ್ತದೆ. ಮನೆದೇವರು, ಕುಲದೇವರು, ಗ್ರಾಮದೇವರ ಭಕ್ತರಾಗಿ ಧಾರ್ಮಿಕ ಕಾರ್ಯಾಚರಣೆಗಳಲ್ಲಿ ಭಾಗಿಯಾಗುತ್ತಾರೆ.

ಸಾಮಾಜಿಕವಾಗಿ ಈ ಸಮುದಾಯದಲ್ಲಿ ಪ್ರಧಾನವಾಗಿ ಎರಡು ಒಳ ಪಂಗಡಗಳನ್ನು ಕಾಣಬಹುದು.

೧. ಹತ್ತಿ ಕಂಕಣದವರು

೨. ಉಣ್ಣೆ ಕಂಕಣದವರು

ಪೂರ್ವದಲ್ಲಿ ಇವರಲ್ಲೆ ಶ್ರೇಷ್ಠ ಮತ್ತು ಕನಿಷ್ಠವೆಂಬ ಭಾವನೆಯಿದ್ದರೂ, ಇತ್ತೀಚೆಗೆ ಶೈಕ್ಷಣಿಕವಾಗಿ ಸಮುದಾಯ ಒಳಗಾದಂತೆ ಈ ಭಾವನೆ ಕಡಿಮೆಯಾಗುತ್ತಿದೆ. ಇದು ಇಂದಿಗೆ ಅನಿವಾರ್ಯ ಕೂಡ. ಸಮಾಜ ಸಂಕೀರ್ಣ, ಸಂಕುಚಿತತೆ, ಸ್ವಾರ್ಥಕತೆಯಿಂದ ತುಂಬಿಕೊಳ್ಳುತ್ತಿರುವಾಗ, ಇಂಥ ಸಮುದಾಯಗಳು ಈ ತಾರತಮ್ಯ ಮರೆತು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ರಾಜಕೀಯವಾಗಿ ಒಗ್ಗೂಡುವಿಕೆ ಆಗುವುದು ಸಮಾಜದ ಅಭಿವೃದ್ಧಿಯಿಂದ ಅಗತ್ಯವಾಗಿದೆ. ಸಮುದಾಯದಲ್ಲಿ ಹಲವಾರು ಒಳ ಬೆಡಗುಗಳಿದ್ದು, ಒಂದೇ ಬೆಡಗಿನ ಒಳಗೆ ಅಂದರೆ ಒಳಬಾಂಧವ್ಯದಲ್ಲಿ ವಿವಾಹ ನಿಷೇಧ. ಅದು ಸೋದರ ಸಂಬಂಧ, ಬೇರೆ ಬೆಡಗು ಅಂದರೆ ಹೊರ ಬಾಂಧವ್ಯ ನೆಂಟರ ಸಂಬಂಧ. ಮದುವೆಯ ಸಂದರ್ಭಗಳಲ್ಲಿ ಸಮುದಾಯದ ಬಹುಪಾಲು ಜನರು ಭಾಗವಹಿಸಿ, ಬಾಂಧವ್ಯ ವೃದ್ಧಿಯಲ್ಲಿ ಭಾಗಿಯಾಗುತ್ತಾರೆ. ಮದುವೆಯ ಸಂದರ್ಭಗಳಲ್ಲಿ ಪ್ರಾಥಮಿಕ ಆಚರಣೆಗಳು ಪ್ರಧಾನ ಆಚರಣೆಗಳು ಮತ್ತು ನಂಬಿಕೆಯಲ್ಲಿವೆ. ಹಾಗೆಯೇ ನಾಮಕರಣದ ಸಂದರ್ಭದಲ್ಲೂ ಮಗುವಿಗೆ ಮೊದಲು ಮನೆದೇವರು ಇಲ್ಲವೆ, ಕುಟುಂಬದ ಹಿರಿಯರ ಹೆಸರಿಟ್ಟು, ಅನಂತರ ತಮಗಿಷ್ಟ ಬಂದ ಹೆಸರನ್ನು ಕರೆಯುತ್ತಾರೆ.

ಕುರುಬರು ಸಾಮಾನ್ಯವಾಗಿ ತಮ್ಮ ಯಾವುದೇ ಶುಭ ಕಾರ್ಯಗಳಲ್ಲಿ 'ಕಂಬಳಿಗೆ' ಹೆಚ್ಚಿಗೆ ಮಹತ್ವ ನೀಡುತ್ತಾರೆ. ಕಂಬಳಿ ಗದ್ದುಗೆ ಅತಿ ಪವಿತ್ರವೆಂಬ ಭಾವನೆಯಿದ್ದು, ಕಂಬಳಿ ಗದ್ದುಗೆ ಜೀವಂತ ಗದ್ದುಗೆಯೆಂದೂ, ಉಳಿದ ಗದ್ದುಗೆಗಳು ಸತ್ತ ಗದ್ದುಗೆಗಳೆಂಬ ಭಾವನೆಯೂ

ಪ್ರಚಲಿತದಲ್ಲಿದೆ. ಕಂಬಳಿಯನ್ನು ಜೀವಂತ ಕುರಿಗಳ ತುಪ್ಪಟದಿಂದ ತಯಾರಿಸಿದರೆ, ಬೇರೆ ಗದ್ದುಗೆಗೆ ಹಾಸುವ ಹೊದಿಕೆ ಸತ್ತ ಪ್ರಾಣಿಯ ಚರ್ಮದಿಂದ (ಜಿಂಕೆ, ಹುಲಿ) ತಯಾರಿಸುತ್ತಾರೆ. ಹಾಗಾಗಿಯೇ ಪ್ರತಿ ಮಂಗಳ ಕಾರ್ಯದಲ್ಲಿ ಕಂಬಳಿ ಪಾತ್ರ ವಹಿಸುತ್ತದೆ.

ಸಾಮರಸ್ಯ, ಸೌಹಾರ್ದತೆಗೆ ಹೆಸರಾದ ಕುರುಬ ಸಮುದಾಯ ತನ್ನ ನೆರೆಹೊರೆಯ ಸಮುದಾಯಗಳೊಂದಿಗೆ ಕೊಡು ಕೊಳುವಿಕೆಯಿಂದ ಉತ್ತಮ ಬಾಂಧವ್ಯ ಇಟ್ಟುಕೊಂಡಿದೆ. ಬಡಗಿಯವರಿಗೆ, ಕಮ್ಮಾರರಿಗೆ, ಗೊಲ್ಲರಿಗೆ, ಅಗಸರಿಗೆ, ಮಣೆಗಾರರಿಗೆ, ಉಚಿತವಾದ ಕಂಬಳಿ ಕೊಡುವುದು, ಅವರಿಂದ ವೃತ್ತಿಗೆ ಸಂಬಂಧಿಸಿದ ಸಹಾಯ ಪಡೆಯುವುದು ಸಾಮಾನ್ಯವಾಗಿ ಎಲ್ಲಾ ಕಡೆಯೂ ಇದೆ.

ಒಂದು ಸಮಾಜದ ಪ್ರಗತಿ ನಿಂತಿರುವುದು, ಆ ಸಮಾಜದ ಸಂಘ ಸಂಸ್ಥೆಗಳಿಂದ. ಸಮಾಜ ಸುಧಾರಕರಿಂದ, ರಾಜಕೀಯ ನಾಯಕರುಗಳಿಂದ. ಯಾವುದೇ ಸಮುದಾಯ ರಾಜಕೀಯವಾಗಿ ಪ್ರಬಲರಾಗದಿದ್ದಲ್ಲಿ ಅಥವಾ ರಾಜಕೀಯ ಸ್ಥಾನಮಾನವಿಲ್ಲದೆ ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಮುಂದೆ ಬರಲು ಸಾಧ್ಯವೇ ಇಲ್ಲವೆಂಬ ವಾತಾವರಣವನ್ನು ಇಂದು ಕಾಣುತ್ತಿದ್ದೇವೆ. ಬಲಿಷ್ಠ ಸಮುದಾಯಗಳು ರಾಜಕೀಯ ಅಧಿಕಾರವನ್ನು ಹಿಡಿಯುವ ಪೈಪೋಟಿಯಲ್ಲಿ ತೊಡಗಿ, ಶಿಕ್ಷಣ, ಉದ್ಯೋಗ, ರಾಜಕೀಯ ಅಧಿಕಾರವೆಂಬುದು ಉಳ್ಳವರ ಶಕ್ತಿಯಾಗುತ್ತದೆ. ಇದರಿಂದ ಅನ್ಯ ಸಮುದಾಯಗಳ ಸೌಲಭ್ಯಗಳು ಉಳ್ಳವರ ಪಾಲಾಗುತ್ತವೆ. ಹಾಗಾಗಿ ಹಿಂದುಳಿದ, ಶೋಷಿತ, ಸಮುದಾಯಗಳು ಶಿಕ್ಷಣ ಸಂಘಟನೆಗಳ ಮೂಲಕ ರಾಜಕೀಯ ಸ್ಥಾನ ಪಡೆದು ಆ ಮೂಲಕ ತಮ್ಮ ಪಾಲಿನ ಹಕ್ಕನ್ನು ಪಡೆದು, ಸಮುದಾಯದ ಶಕ್ತಿಯನ್ನು ದೃಢೀಕರಿಸಬೇಕಿದೆ. ಹಾಗಾಗಿ ಯಾವುದೇ ಸಮುದಾಯದ ಸ್ಥಿತಿ-ಗತಿ ಸುಧಾರಣೆಯಾಗಬೇಕಾದರೆ ಮುಖ್ಯವಾಗಿ

೧. ಶಿಕ್ಷಣ

೨. ಸಂಘಟನೆ

೩. ರಾಜಕೀಯ

ಇವುಗಳ ಪಾತ್ರ ಅತಿಮುಖ್ಯ. ದೈಹಿಕ ಶಕ್ತಿ ಎಷ್ಟು ಮುಖ್ಯವೋ ಈಗ ಬೌದ್ಧಿಕ ಶಕ್ತಿಯು ಅಷ್ಟೇ ಮುಖ್ಯ. ಬೌದ್ಧಿಕವಾಗಿ ಸಮುದಾಯ ಜಾಗೃತಗೊಳ್ಳಬೇಕಿದೆ. ತನ್ನ ಸ್ಥಾನಮಾನ ಸ್ವಾತಂತ್ರ್ಯವನ್ನು ಪಡೆದುಕೊಳ್ಳಬೇಕಿದೆ. ಆ ನಿಟ್ಟಿನಲ್ಲಿ ಸಮುದಾಯದ ಸಾಮಾಜಿಕ ಸ್ಥಾನಮಾನಕ್ಕೆ ಶಿಕ್ಷಣ ಅಗತ್ಯ. ಜ್ಞಾನ ವಿಕಾಸ ಒಂದು ಕಡೆಯಾದರೆ, ಉದ್ಯೋಗದ ಆಧಾರಕ್ಕೂ ಅಷ್ಟೇ ಮುಖ್ಯ. ಶೋಷಿತ ಅಥವಾ ಹಿಂದುಳಿದ ಸಮುದಾಯಗಳು ಇತ್ತೀಚೆಗೆ ಈ ಕ್ಷೇತ್ರವನ್ನು ಪ್ರವೇಶಿಸುತ್ತಿವೆ. ಇನ್ನೂ ಆಗ ಬೇಕಾದದ್ದು ಗ್ರಾಮೀಣ ಪ್ರದೇಶದಲ್ಲಿ. ಅದರಲ್ಲೂ ಈ ಸಮುದಾಯದ ಮಹಿಳೆಯರು ಶಿಕ್ಷಣ ಪಡೆಯುವಂತಾಗಬೇಕು. ಸಾಂಪ್ರದಾಯಿಕ ಶಿಕ್ಷಣಕ್ಕಿಂತ ಆಧುನಿಕ, ಅದರಲ್ಲೂ ಉದ್ಯೋಗ ಆಧಾರಿತ ಶಿಕ್ಷಣ ಸಿಗುವಂತಾದರೆ, ಸಮುದಾಯದ ಸಾಮಾಜಿಕ ಸ್ಥಾನಮಾನ ಉನ್ನತ ಸ್ಥಿತಿಗೇರುತ್ತದೆ.

ಸಂಘ ಸಂಸ್ಥೆಗಳ ಪಾತ್ರವಂತೂ ಸಮುದಾಯ, ಸಾಮಾಜಿಕವಾಗಿ ಮುಖ್ಯವಾಹಿನಿಗೆ ಬರಲು ಪ್ರಧಾನ ಪಾತ್ರವಹಿಸುತ್ತವೆ. ಸಮುದಯದ ವಿದ್ಯಾವಂತ ಯುವಕರು ಸಂಘಟಕರು, ಬುದ್ಧಿ ಜೀವಿಗಳು, ಅಧಿಕಾರಿಗಳು ಒಂದಾಗಿ ಸಾಂಸ್ಕೃತಿಕ ಸಂಘಟನೆಗಳನ್ನು ಸ್ಥಾಪಿಸಬೇಕು. ಸಮುದಾಯದ ನೌಕರರ ಸಂಘ, ಸ್ತ್ರೀಶಕ್ತಿ ಸಂಘ, ಯುವಕ ಸಂಘ ಮೊದಲಾದವುಗಳು ಹಳ್ಳಿ, ತಾಲೂಕು ಜಿಲ್ಲೆಗಳಲ್ಲಿ ಸ್ಥಾಪನೆಯಾಗಬೇಕಿದೆ. ಆ ಮೂಲಕ ಜನತೆಯಲ್ಲಿ ಜಾಗೃತಿಯನ್ನು ಮೂಡಿಸಬೇಕಿದೆ. ಸರ್ಕಾರಿ ಸೌಲಭ್ಯ ಮತ್ತು ಯೋಜನೆಗಳ ಬಗ್ಗೆ ಮಾಹಿತಿ ಮತ್ತು ಮಾರ್ಗದರ್ಶನ ನೀಡಬೇಕಿದೆ. ಕಾಳಿದಾಸ, ಕನಕದಾಸ, ಸಂಗೊಳ್ಳಿ ರಾಯಣ್ಣ, ರೇವಣಸಿದ್ಧೇಶ್ವರ, ಬೀರಲಿಂಗೇಶ್ವರ ಮೊದಲಾದ ಇತಿಹಾಸ ಮತ್ತು ಧಾರ್ಮಿಕ ಸುಧಾರಕರ ಹೆಸರಿನಲ್ಲಿ ಸಂಘ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದಿದ್ದು, ಈ ಮೂಲಕ ಶೈಕ್ಷಣಿಕ ಸುಧಾರಣೆ, ಸಮುದಾಯ ಸಂಘಟನೆ ಮತ್ತು ಆರ್ಥಿಕ ಸುಧಾರಣೆಯನ್ನು ಸಾಧಿಸುತ್ತಿರುವುದನ್ನು ಕಾಣಬಹುದು. ಸಮುದಾಯದ ಹಿತಕ್ಕೆ ಸಂಘಟಕರು ವೈಯಕ್ತಿಕ ಹಿತವನ್ನು ಮರೆತು ಸಾಂಸ್ಕೃತಿಕ ಶಕ್ತಿಯಾಗಿ ಹೊರಬರಬೇಕಿದೆ. ಸಮುದಾಯ ಬಲಗೊಳ್ಳಬೇಕಿದೆ.

ಈ ಎಲ್ಲವುಗಳ ಹಿಂದೆ ಸಮುದಾಯಕ್ಕೆ ರಾಜಕೀಯ ಶಕ್ತಿ ಬೇಕು. ರಾಜ್ಯದಲ್ಲಿ ೩ನೇ ಅತಿದೊಡ್ಡ ಜನಾಂಗವಾಗಿದ್ದರೂ, ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿಯಿದ್ದರೂ ರಾಜಕೀಯದಲ್ಲಿ ಸಮುದಾಯಕ್ಕೆ ತಕ್ಕ ಪ್ರಾತಿನಿಧ್ಯ ದೊರೆತಿಲ್ಲ. ಬೇರೆ ಬೇರೆ ಪಕ್ಷಗಳನ್ನು ಬೆಂಬಲಿಸಿ ಕವಲೊಡೆದಿರುವುದರಿಂದ ರಾಜಕೀಯ ಒಗ್ಗಟ್ಟು ಸಂಘರ್ಷದ ಸ್ಥಿತಿಯಲ್ಲದೆ ಬಲಶಾಲಿ ಸಮುದಾಯಗಳ ಮುಂದೆ ಹಿಂದುಳಿದ ಸಮುದಾಯದ ಶಕ್ತಿಯಾಗಿ ಹಲವಾರು ಸಮಸ್ಯೆಗಳನ್ನು ಪರಿಹರಿಸುವುದಲ್ಲದೆ ಈ ಕ್ಷೇತ್ರದಲ್ಲಿ ಶಾಶ್ವತ ನೆಲೆ ಕಂಡುಕೊಳ್ಳಬಹುದು.

ಚಿತ್ರದುರ್ಗ ಪರಿಸರ ಬಹುಮುಖಿ. ಸಂಸ್ಕೃತಿಯ ನೆಲೆ. ಇಲ್ಲಿನ ಬುಡಕಟ್ಟು, ಸಮುದಾಯಗಳು, ಜಾತಿ, ಜನಾಂಗ, ಭಾಷೆ, ಸಾಹಿತ್ಯ, ಸಂಸ್ಕೃತಿಗಳು ವಿಶಿಷ್ಟತೆಯಿಂದ ಕೂಡಿದ್ದು, ಈ ಹಿನ್ನಲೆಯೊಳಗೆ ಸಾಕಷ್ಟು ಅಧ್ಯಯನಗಳು ನಡೆದಿವೆ. ಆದರೂ ಸಮುದಾಯದ ಪರಂಪರೆಯನ್ನು ಕುರಿತ ಮೌಖಿಕ ಆಕರಗಳು, ಹಾಡು, ಕತೆ, ಕಾವ್ಯ ಸಂಗ್ರಹವಾಗಬೇಕಿದೆ. ಆ ಮೂಲಕ ಪರಂಪರೆಯ ಆಹಾರ, ಪದ್ಧತಿ, ಆರೋಗ್ಯ, ನ್ಯಾಯ, ಆಡಳಿತ, ಧಾರ್ಮಿಕ ಆಚರಣೆ, ಸಾಂಸ್ಕೃತಿಕ ಸ್ಥಿತಿಗತಿ, ನಿಸರ್ಗದ ಬಗೆಗಿನ ಪರಿಭಾವನೆ ಮೊದಲಾದ ಅವರ ಆರೋಗ್ಯಕರ ಮೌಲ್ಯಗಳನ್ನು ಗುರುತಿಸುವ, ಶೋಧಿಸುವ ಸಂಗ್ರಹಿಸುವ ಕೆಲಸ ಆಗಬೇಕಿದೆ.

ಈಗಾಗಲೇ ಚರ್ಚಿತವಾದಂತೆ ಯಾವುದೇ ಸಮುದಾಯದ ಸಾಮಾಜಿಕ ಸ್ಥಿತಿಗತಿಗಳು ನಿರ್ಧಾರವಾಗುವುದು ಶಿಕ್ಷಣ, ಸಂಘಟನೆ ಮತ್ತು ರಾಜಕೀಯ ಸ್ಥಾನಮಾನಗಳಿಂದ. ಈ ಹಿನ್ನೆಲೆಯೊಳಗೆ ಈವರೆಗೆ ಚರ್ಚಿಸಿದ್ದು, ಚಿತ್ರದುರ್ಗ ಜಿಲ್ಲೆಯನ್ನೆ ಗಮನಿಸಿ ಹೇಳುವುದಾದರೆ ಹೊಸದುಗ್ ಕ್ಷೇತ್ರದಲ್ಲಿ ರಾಜಕೀಯ ಪ್ರಾಬಲ್ಯ ಸ್ಥಾಪಿಸಿರುವುದನ್ನು ಬಿಟ್ಟರೆ, ಉಳಿದ ತಾಲೂಕುಗಳಲ್ಲಿ ಇಲ್ಲಿ ಹೊಸದುರ್ಗ ಕ್ಷೇತ್ರದಲ್ಲಿ ಸಮುದಾಯದ ರಾಜಕೀಯ ಪ್ರಜ್ಞೆ ೧೯೬೨ರಲ್ಲೇ ಜಾಗೃತಗೊಂಡಿತು. ರಾಜ್ಯದ ೩ನೇ ವಿಧಾನಸಭೆ ಚುನಾವಣೆಯಲ್ಲಿ ಆಗಿನ ಮುಖ್ಯಮಂತ್ರಿ ನಿಜಲಿಂಗಪ್ಪನವರನ್ನು ಸೋಲಿಸುವ ಮೂಲಕ ಶ್ರೀ. ಜಿ. ಟಿ. ರಂಗಪ್ಪನವರು ಸಮುದಾಯದ ಪ್ರತಿನಿಧಿಗಳಾಗಿ ಚುನಾಯಿತರಾದರು. ಮುಂದೆ ೧೯೬೭ರಲ್ಲಿ ಎಂ. ರಾಮಪ್ಪನವರು, ೧೯೭೨ರಲ್ಲಿ ಬಿ. ಜಿ. ಗೋವಿಂದಪ್ಪನವರು ಮತ್ತೆ ೨೦೦೪ರಲ್ಲಿ ಬಿ. ಜಿ. ಗೋವಿಂದಪ್ಪನವರು ತಮ್ಮ ಸಮುದಾಯದ ಶಕ್ತಿಯಿಂದ ರಾಜಕೀಯ ಪ್ರಾಬಲ್ಯ ಸ್ಥಾಪಿಸಿದ್ದಾರೆ. ಅವಿಭಜಿತ ಜಿಲ್ಲೆಯಾಗಿದ್ದಾಗ ೧೯೮೩-೮೫ ಕೆ. ಮಲ್ಲಪ್ಪಜ್ಜನವರು ಹರಿಹರ ಮತ್ತು ಮಾಯಗೊಂಡ ಕ್ಷೇತ್ರದಿಂದ, ಡಾ. ವೈ. ನಾಗಪ್ಪನವರು ೧೯೮೯-೯೯ರಲ್ಲಿ ಹರಿಹರ ಕ್ಷೇತ್ರದಲ್ಲಿ ಜನಪ್ರತಿನಿಧಿಗಳಾಗಿ ಆಯ್ಕೆಯಾಗಿದ್ದಾರೆ. ಚಿತ್ರದುರ್ಗದಲ್ಲಿ ಸಹೋದರರಾದ ಕಾಂ. ಜಿ. ಚಂದ್ರಪ್ಪ ಮತ್ತು ಮುರುಘರಾಜೇಂದ್ರ ಒಡೆಯರ್ ರಾಜಕೀಯ ಅನುಭವಿಗಳು. ಕೇವಲ ರಾಜಕೀಯಕ್ಕೆ ಮಾತ್ರ ಸೀಮಿತವಾಗದೆ, ಹಲವಾರು ಜನಪರ ಹೋರಾಟಗಳಲ್ಲಿ, ಚಳುವಳಿಗಳಲ್ಲಿ, ಗುರುತಿಸಿಕೊಂಡಿದ್ದಾರೆ. ಅರಣ್ಯ ಚಳವಳಿ, ರೈಲ್ವೆ ಚಳವಳಿ, ಕಾರ್ಮಿಕ ಸಂಘಟನೆ ಮೊದಲಾದ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಚಳವಳಿಯಲ್ಲಿ ಭಾಗವಹಿಸಿ, ಸೆರೆಮನೆವಾಸ ಅನುಭವಿಸಿದವರೂ ಇದ್ದಾರೆ. ಇದಲ್ಲದೆ ಅಹಿಂದ ಚಳವಳಿ, ಭದ್ರಾ ಮೇಲ್ದಂಡೆ ಯೋಜನೆ ಮೊದಲಾದ ಜನಪದ ಹೋರಾಟಗಳಲ್ಲಿ ಹಲವಾರು ಮುಖಂಡರು ಭಾಗವಹಿಸುತ್ತಿದ್ದಾರೆ. ಚಿತ್ರದುರ್ಗ ನಗರಸಭೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿಯೂ ಗುರುತಿಸಿಕೊಂಡಿರುವ ಸಮುದಾಯ ಜಿಲ್ಲಾ ಪಂಚಾಯತಿ, ತಾಲೂಕು ಪಂಚಾಯ್ತಿ, ನಗರಸಭೆ, ಪುರಸಭೆಗಳಲ್ಲಿ ಸಮುದಾಯದ ಮುಖಂಡರು ಪ್ರಾತಿನಿಧ್ಯ ಸ್ಥಾಪಿಸಿದ್ದಾರೆ.

ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿ, ರಾಷ್ಟ್ರಸೇವೆ ಮಾಡಿರುವವರು, ಸಮುದಾಯದ ಮುಖಂಡರು ಈ ಜಿಲ್ಲೆಯಲ್ಲಿದ್ದಾರೆ. ಎಂ. ರಾಮಪ್ಪನವರು, ಕೆ. ವೆಂಕಟರಾಮಯ್ಯ, ಕೌನ್ಸಿಲರ್ ಭೀಮಪ್ಪ ಸೊಪ್ಪಿನವರ, ವರದುಣಿಸೆಪ್ಪ, ಗಿರಿಯಪ್ಪ, ಸೊಪ್ಪಿನಮಠ ಗೋಪಾಲ ಕೃಷ್ಣ, ಮೇಣುಗೋಪಾಲ, ಚಳ್ಳಕೆರೆ ಕೆಂಚಪ್ಪ, ಮೊದಲಾದವರು ಚಳವಳಿಯಲ್ಲಿ ಭಾಗವಹಿಸಿ ಸೆರೆಮನೆವಾಸ ಅನುಭವಿಸಿದ್ದಾರೆ.

ಸಮುದಾಯದ ಸಾಮಾಜಿಕ ಸ್ಥಾನಮಾನ ಪಡೆಯಲು ಮುಖ್ಯವಾಗಿ ಶೈಕ್ಷಣಿಕ ಸುಧಾರಣೆ, ಸಾಮಾಜಿಕ ಸಂಘಟನೆ, ರಾಜಕೀಯ ಸ್ಥಾನಮಾನಬೇಕು. ಆ ಮೂಲಕ ಸಾಮಾಜಿಕ ಭದ್ರತೆ ಒದಗಿಸಬಹುದು. ಚುನಾಯಿತ ಪ್ರತಿನಿಧಿಗಳು, ಸಮಾಜದ ಮುಖಂಡರು, ಸರ್ಕಾರದ ಸೌಲಭ್ಯಗಳನ್ನು ವಿವಿಧ ಯೋಜನೆಗಳ ಲಾಭಗಳನ್ನು ಸಮುದಾಯಕ್ಕೆ ಸಕಾಲದಲ್ಲಿ ದೊರೆಯುವಂತೆ ನೋಡಿಕೊಳ್ಳಬೇಕು. ಸ್ಥಳೀಯ ಸಂಸ್ಥೆ ಮತ್ತು ಸಹಕಾರ ಸಂಘಗಳ ಸ್ಥಾಪನೆಯಾಗಬೇಕು. ಕೈಗಾರಿಕೆ, ವಿದ್ಯಾಸಂಸ್ಥೆಗಳ ಆರಂಭ, ಜೊತೆಗೆ ಇತರೆ ಉಪಕಸಬುಗಳಲ್ಲಿ ಜನತೆ ತೊಡಗಿಕೊಳ್ಳುವಂತೆ ಆ ಮೂಲಕ ಸಮಾಜವನ್ನು ಆರ್ಥಿಕವಾಗಿ ಸದೃಢವಾಗಿ ಕಟ್ಟಬೇಕಿದೆ. ಶಿಕ್ಷಣ ಸಂಘಟನೆ ಆರ್ಥಿಕ ಸುಧಾರಣೆ ಇವುಗಳಿಗಾಗಿಯೇ ಸಮುದಾಯದ ಯುವ ಜನತೆಯ ನಿರ್ಮಾಣ ಮಾಡಿಕೊಳ್ಳಬೇಕಿದೆ. ಗ್ರಾಮೀಣ ಪ್ರದೇಶದ

ಯುವಕ-ಯುವತಿಯರಿಗೆ ಶಿಕ್ಷಣ ಸ್ವ-ಉದ್ಯೋಗ ಮಾಹಿತಿಯ ಜೊತೆಗೆ ಆಧುನಿಕ ಶಿಕ್ಷಣ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸನ್ನದ್ಧಗೊಳ್ಳಬೇಕಿದೆ. ಈ ಹಿನ್ನೆಲೆಯೊಳಗೆ ಮುನ್ನಡೆದರೆ ಸಮುದಾಯ ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಸದೃಢವಾಗಲು ಸಾಧ್ಯ.

## ೨೨. ಚಿತ್ರದುರ್ಗದ ಪರಿಸರದ ಕುರುಬರು : ಜನಪದ ಸಂಸ್ಕೃತಿ

ಭಾರತದ ಕುರುಬ ಸಂಸ್ಕೃತಿಯಲ್ಲಿ ಕರ್ನಾಟಕದ ಕುರುಬರ ಸಂಸ್ಕೃತಿ ಭಿನ್ನವಾದಂತೆ ಚಿತ್ರದುರ್ಗ ಜಿಲ್ಲೆಯ ಕುರುಬರ ಸಂಸ್ಕೃತಿಯು ಕೂಡ ವಿಭಿನ್ನವಾಗಿದ್ದು ತನ್ನದೇ ಆದ ಆಚರಣೆ, ಸಂಪ್ರದಾಯಗಳನ್ನು ಹೊಂದಿದೆ. ವಿಭಿನ್ನ ನೆಲೆಗಟ್ಟಿನ ದೃಷ್ಟಿಯಿಂದ ನೋಡಿದರೆ ಈ ಸಂಸ್ಕೃತಿಯು ಭೌಗೋಳಿಕ ಹಿತದೃಷ್ಟಿಯ ಹಿನ್ನೆಲೆಯಲ್ಲಿ ತನ್ನದೇ ಆದ ಪಾತ್ರವನ್ನು ವಹಿಸಿದೆ. ಇದಕ್ಕೆ ಸಾಕ್ಷಿ ಎಂಬಂತೆ ಈ ಭಾಗದ ಬೀರದೇವ, ಮೈಲಾರಲಿಂಗ, ರೇವಣಸಿದ್ಧ ಹಾಗೂ ಇತರೆ ದೈವಗಳ ಆಚರಣೆ, ಸಂಪ್ರದಾಯ ಮತ್ತು ಬದುಕಿನ ನೆಲೆಗಟ್ಟುಗಳು ಈ ಭಾಗದ ದೇಶೀಯ ಸಂಸ್ಕೃತಿಯ ಪ್ರತಿಬಿಂಬವಾಗಿ ಕಾಣುತ್ತವೆ.

ಚಿತ್ರದುರ್ಗದ ಭಾಗವು ಭಾಗವು ಬಯಲು ಸೀಮೆಯಂತಹ ವಾತಾವರಣವನ್ನು ಹೊಂದಿರುವುದರಿಂದ ಇಲ್ಲಿಯ ಜನರು ಕುರಿಕಾಯುತ್ತಾ, ಕಂಬಳಿ ನೇಯುತ್ತ, ಹೊಲಗದ್ದೆಗಳಲ್ಲಿ ಕೆಲಸ ಮಾಡುತ್ತಾರೆ. ಕಂಬಳಿ ಮತ್ತಿತರ ವ್ಯಾಪಾರವನ್ನು ನಡೆಸಿಕೊಂಡು ಜೀವನ ಸಾಗಿಸುತ್ತಿರುವ ಜನರು ಪ್ರಧಾನವಾಗಿ ಬೀರಲಿಂಗ, ಮೈಲಾರಲಿಂಗ, ರೇವಣಸಿದ್ದರು ಪ್ರಮುಖ ಆರಾಧ್ಯ ಸಾಂಸ್ಕೃತಿಕ ನಾಯಕರಾಗಿ ಕಂಡುಬರುತ್ತಾರೆ. ಆದರೆ ಇಲ್ಲಿಯ ಕುರುಬರ ಉಪಪಂಗಡಗಳಿಗೆ ಸಂಬಂಧಿಸಿದಂತೆ ಇತರ ದೇವತೆಗಳನ್ನು ಆರಾಧಿಸುತ್ತಿರುವುದು ಇಲ್ಲಿಯ ವಿಶಿಷ್ಠತೆಗಳಲ್ಲಿ ಒಂದಾಗಿದೆ.

ಚಿತ್ರದುರ್ಗದ ಹಾಲುಮತ ಸಂಸ್ಕೃತಿಯು ವಿಭೂತಿ ಮತ್ತು ಭಂಡಾರ ಸಂಸ್ಕೃತಿಯ ಹಿನ್ನೆಲೆಯಲ್ಲಿ ನೋಡಿದಾಗ ಬೀರಲಿಂಗ, ಮೈಲಾರಲಿಂಗರು ಭಂಡಾರ ಸಂಸ್ಕೃತಿಯ ಆರಾಧನೆಯಲ್ಲಿ ಬಂದರೆ ರೇವಣಸಿದ್ದರು ವಿಭೂತಿ ಸಂಸ್ಕೃತಿಯಲ್ಲಿ ಬರುವರು. ೧೨ನೇ ಶತಮಾನದಲ್ಲಿ ಬಿಜ್ಜಳನ ಆಸ್ಥಾನದಲ್ಲಿ ನಡೆದ ವರ್ಗಸಂಘರ್ಷವು ಸಹ ಇಂದಿಗೂ ಈ ಜನತೆ ಅನುಭವಿಸುತ್ತದೆ. ಅಂದರೆ ಅತ್ತ ಭಂಡಾರ ಸಂಸ್ಕೃತಿಯನ್ನು ಬಿಡದೆ, ಇತ್ತ ವಿಭೂತಿ ಸಂಸ್ಕೃತಿಗೆ ಒಗ್ಗಿಕೊಳ್ಳದೆ ಬೀರದೇವರ ಗುಡಿಗಳಲ್ಲಿ ಭಂಡಾರ ಮತ್ತು ವಿಭೂತಿಯ ಆಚರಣೆಗಳು ಜೊತೆ ಜೊತೆಯಲ್ಲಿ ಬರುವುದು ಕಾಣಸಿಗುತ್ತವೆ.

**ಬೀರದೇವರ ಆಚರಣೆಗಳು**

ಬೀರಪ್ಪನು ಕುರುಬರ ಕುಲದೇವರಾದರೆ ಇಲ್ಲಿಯ ಹಾಲುಮತ ಬುಡಕಟ್ಟು ಸಂಸ್ಕೃತಿಯ ಉಪಕುಲಗಳು ಒಂದೊಂದು ದೇವರನ್ನು ಪೂಜಿಸುವುದನ್ನು ನೋಡುತ್ತೇವೆ. ಬೀರಪ್ಪನನ್ನು ಪ್ರಧಾನವಾಗಿ ಸಾಂಸ್ಕೃತಿಕ ನಾಯಕನಾಗಿ ಕಾಣುವ ಜೊತೆ ಜೊತೆ ಉಪಕುಲಗಳಾದ ಗೌಡನ ಕುರುಬರು ಲಕ್ಕಮ್ಮ ನನ್ನ, ಸಾವಂತಲ ಕಾಲದವರು ರೇವಣಸಿದ್ಧ ಮತ್ತು ಉಚ್ಚಂಗಿ ಯಲ್ಲಮ್ಮನನ್ನ, ಹೊನ್ನುಂಗುರದವರು ಈರಮಾಳಪ್ಪ ಮತ್ತು ಮಾಳಮ್ಮ ನನ್ನ, ಹುಲಿಯಾನ ಕುರುಬರು ಕೆಂಚಲಿಂಗೇಶ್ವರ ಮತ್ತು ಈರಮಾಳಮ್ಮನನ್ನ, ಹಾಲಿನ ಕುರುಬರು, ಬಾಗಾಡೆಪ್ಪನನ್ನು, ಸುಲಪನಕುರುಬರು ಆಂಜನೇಯ, ಕರೀದೇವರನ್ನು ಹಾಗೂ ದಾಸಯ್ಯನನ್ನು ಬಿಜ್ಜಳನ ಕುರುಬರು ಬನಶಂಕರಿ ಮತ್ತು ಬೀರಪ್ಪನನ್ನು, ಅರೆಕುರುಬರು ಓರಗಲ್ಲಮ್ಮನನ್ನ, ಭಾಗದ ಕುರುಬರು ಹೊಸರಮ್ಮನನ್ನು ಮತ್ತು ಎಂಗಲಾರದಮ್ಮನನ್ನ, ಮಲ್ಲಿಗೆ ಕುರುಬರು, ಕೊಲಲಾಪುರದಮ್ಮನನ್ನು ಬೆಳ್ಳನೆ ಕುರುಬರು, ತಿಮ್ಮಪ್ಪನನ್ನ ತೆಕ್ಕೆನ ಕುರುಬರು ಮೈಲಾರಲಿಂಗನನ್ನ ಹೀಗೆ ಒಂದೊಂದು ಉಪಕುಲದವರು ಒಂದೊಂದು ಮನೆದೇವರನ್ನು ಆರಾಧಿಸುವ (ಪೂಜಿಸುವ) ಸಂಪ್ರದಾಯವನ್ನು ಕಾಣುತ್ತೇವೆ. ಹೀಗೆ ಒಂದೊಂದು ಒಳಪಂಗಡಕ್ಕೆ ಒಂದೊಂದು ದೇವರನ್ನು ಆರಾಧಿಸುತ್ತಿದ್ದರೂ ಹಾಲುಮತದ ಮೂಲದೇವರು ಬೀರಪ್ಪ ಗುರು ರೇವಣಸಿದ್ದ.

ಈ ಭಾಗದಲ್ಲಿ ಹೆಚ್ಚಾಗಿ ತೋಪುಜಾತ್ರೆ, ಜಾತ್ರೆ, ದೊಡ್ಡದೇವರು, ಶಿವರಾತ್ರಿಯಲ್ಲಿ ದೇವರನ್ನು ಹೊಳೆಗೆ ಹೊರಡಿಸುವುದು ಮುಂತಾದ ಆಚರಣೆಗಳು ಕಾಣಸಿಗುತ್ತವೆ. ಇಲ್ಲಿ ಪ್ರಮುಖವಾಗಿ ಹೊಸದುರ್ಗ ಮತ್ತು ಹೊಳಲ್ಕೆರೆಯ ಭಾಗದಲ್ಲಿ ಬೀರದೇವರ ಉತ್ಸವಗಳಾದ ತೋಪು ಜಾತ್ರೆ ಮತ್ತು ಕಂತೆ ಸೇವೆಯಂತಹ ಆಚರಣೆಗಳು ಪ್ರಮುಖವಾದರೆ ಚೆಳ್ಳಕೆರೆ, ಹಿರಿಯೂರು, ಚಿತ್ರದುರ್ಗ ಮತ್ತು ಮೊಳಕಾಲ್ಮೂರುವಿನ ಭಾಗದಲ್ಲಿ ಹತ್ತು ಹದಿನೈದು ವರ್ಷಗಳಿಗೆ ಪ್ರತಿ ಗುಡಿಕಟ್ಟಿನ ಎಲ್ಲಾ ಪರಿವಾರದವರು ದೊಡ್ಡ ಜಾತ್ರೆಗಳನ್ನು ಸಾಗಿಸುವುದು ಕಾಣುತ್ತೇವೆ. ಇಂತಹ ಉತ್ಸವಗಳಲ್ಲಿ ಆಯಾ ಸರಹದ್ದಿನ ಬೀರಪ್ಪನು ಪ್ರಮುಖ ನಾಯಕನಾದರೆ ಉಪಪಂಗಡದ ಅಣ್ಣ ತಮ್ಮಂದಿರ ದೇವರುಗಳು ಅಲ್ಲಿಗೆ ಬಂದು ಸೇರುತ್ತವೆ. ಬೀರದೇವರ ಪರಿವಾರದವರಾದ ಗೌಡ, ಯಜಮಾನ, ಪೋತಲರಾಜ, ದಳವಾಯಿ, ಈರಗಾರ, ಕೋಲುಕಾರ, ಪೂಜಾರಿ ಎಲ್ಲರೂ ಒಂದೆಡೆ ಸೇರಿ ತೆಗೆದುಕೊಂಡ ತೀರ್ಮಾನದಂತೆ ಸಂಬಂಧಿಸಿದ ಜನತೆಯು ನಡೆದುಕೊಳ್ಳಬೇಕು. ಈ ಜಾತ್ರೆಗಳು ಸಾಮಾನ್ಯವಾಗಿ ಈ ಭಾಗದ ಮಳೆ ಬೆಳೆಯನ್ನು ಆಧರಿಸಿ ನಡೆಯುವಂತಹ ಆಚರಣೆಗಳಾಗಿರುತ್ತವೆ. ವರ್ಷದಲ್ಲಿ ಮಳೆ, ಬೆಳೆ ಸಮೃದ್ಧವಾಗಿದ್ದರೆ ಜಾತ್ರೆಗಳು ಜೋರಾಗಿ ನಡೆಯುತ್ತವೆ. ಮಳೆ, ಬೆಳೆ ಕಡಿಮೆಯಾದರೆ ಆಯಾ ಹಣಕಾಸಿಗೆ ಅನುಗುಣವಾಗಿ ಆಚರಣೆಗಳು ನಡೆಯುತ್ತವೆ.

ಬೀರದೇವರ ಆಚರಣೆಯಲ್ಲಿ ಕಂತೆಸೇವೆ ಮತ್ತು ಕಂತೆಧಾರಣೆ ಪ್ರಮುಖವಾದ ಆಚರಣೆ. ಇದರಲ್ಲಿ ಪೂಜಾರಿಯಿಂದ ಗುಡಿಗೌಡ ಮತ್ತು ಯಜಮಾನನಿಂದ ಎಲ್ಲಾ ಸಂಪ್ರದಾಯದವರು ನಡೆಮುಡಿ ಮತ್ತು ಒಂದು ಹೊತ್ತಿನೊಂದಿಗೆ ದೇವರುಗಳನ್ನು ಹೊಳೆಯ ಹತ್ತಿರ ಒಂದು ಹುಟ್ಟು ಕುರಿಮರಿಯನ್ನು (ಕೂದಲೂ ಬೆಳೆದ) ತಂದು ಅದಕ್ಕೆ ಮೈ ತೊಳೆದು ಅದರ ಎಣ್ಣೆಯನ್ನು ಕತ್ತರಿಯಿಂದ ಕತ್ತರಿಸಿ ಕೈಯಿಂದ ನೂಲನ್ನು ತೆಗೆದು ಮಗ್ಗದ ಸಾಮಾನುಗಳಿಂದ ಹಾಸುಹಾಕಿ ಗದ್ದುಗೆ ಕಂಬಳಿಯನ್ನು ನೇಯ್ದು ಈ ಕಂಬಳಿಯನ್ನು ಗದ್ದುಗೆಯಾಗಿ ಮಾಡಿ ದೇವರಿಗೆ ಸ್ನಾನ ಮಾಡಿಸಿ ಗದ್ದುಗೆ ಪೂಜೆಯು ಈ ನಾಯಕನಿಗೆ ತುಂಬಾ ಶ್ರೇಷ್ಠವಾದುದು. ಆದುದರಿಂದಲೇ ಬೀರದೇವರ ಯಾವುದೇ ಆಚರಣೆಯಲ್ಲಿ ಕರಿಯಕಂಬಳಿ ಗದ್ದುಗೆ ತುಂಬಾ ಮುಖ್ಯವಾದುದು. ಇದರಂತೆಯೇ ಡೊಳ್ಳು ತುಂಬಾ ಅರ್ಪಿತವಾಗುವಂತಹ ವಾದ್ಯ. ಮುಂದುವರಿದು ಛತ್ರಿ, ಚಾಮರ, ಎಲ್ಲಾ ಬಿರುದುಗಳು ಬೀರಪ್ಪನಿಗೆ ಸಲ್ಲುತ್ತವೆ. ಈ ಬೀರಪ್ಪನ ಸಮ್ಮುಖದಲ್ಲಿಯೇ ಎಲ್ಲ ಆಚರಣೆಗಳು ನಡೆಯುತ್ತವೆ. ಬೀರಪ್ಪನಿಗೆ ಸಲ್ಲುತ್ತವೆ. ಈ ಬೀರಪ್ಪನ ಸಮ್ಮುಖದಲ್ಲಿಯೇ ಎಲ್ಲ ಆಚರಣೆಗಳು ನಡೆಯುತ್ತವೆ. ಹೊಳಲ್ಕೆರೆ ತಾಲೂಕು ತಾಳಿಕಟ್ಟೆಯ ತೋಪುಜಾತ್ರೆ (ಏಳೂರು ದೇವತೆಗಳು) ಹೊಸದುರ್ಗದ ಶ್ರೀರಾಮಪುರದ ಬೀರದೇವರ ಕಂತೆ ಸೇವೆಯ ಜಾತ್ರೆ, ಚಳ್ಳಕೆರೆ, ಹಿರಿಯೂರು, ಚಿತ್ರದುರ್ಗ, ಮೊಳಕಾಲ್ಮೂರು ತಾಲೂಕಿನ ದೊಡ್ಡದೇವರ ಜಾತ್ರೆಗಳು ಇದಕ್ಕೆ ಸಾಕ್ಷಿಯಾಗಿ ನಿಲ್ಲುತ್ತವೆ.

**ಮೈಲಾರಲಿಂಗನ ಸಂಪ್ರದಾಯಗಳು**

ಹಾಲುಮತ ಸಾಂಸ್ಕೃತಿಕ ನಾಯಕರಲ್ಲಿ ಬೀರಪ್ಪನ ನಂತರದ ಸ್ಥಾನವೇ ಮೈಲಾರಲಿಂಗನ ಸ್ಥಾನ. ಮೈಲಾರಲಿಂಗನ ಸಂಪ್ರದಾಯದವರು ಒಂದು ವರ್ಷಕ್ಕೆ ಒಮ್ಮೆ ಮೈಲಾರ ಜಾತ್ರೆಗೆ ಹೋಗಿ ಕಾರಣಿಕವನ್ನು ಕೇಳಿಬಂದ ಜನರು ಅವರವರು ವಾಸಿಸುವ ಊರುಗಳಲ್ಲಿ, ಹಟ್ಟಿಗಳಲ್ಲಿ, ಮೈಲಾರದೇವರ ಗುಡಿಯನ್ನು ನಿರ್ಮಿಸುತ್ತಾರೆ. ಪ್ರತಿ ಭಾನುವಾರ ಈ ದೇವರಿಗೆ ಪೂಜೆ ಮಾಡುವುದರಿಂದ ಹಿಡಿದು ಗೊರವಯ್ಯ, ಗೊರಪ್ಪಗಳಾಗಿ ತಮ್ಮ ಜೀವನವನ್ನೇ ದೇವರಿಗೆ ಅರ್ಪಿಸಿಕೊಂಡು ಊರು, ಕೇರಿ ತಿರುಗುತ್ತಾ ಬುಡ ಬುಡಕಿಯನ್ನು ಆಡಿಸುತ್ತಾ ಕೈಯಲ್ಲಿ ತ್ರಿಶೂಲವನ್ನು ಹಿಡಿದು ತಲೆಗೆ ಕರಡಿಯ ಟೋಪಿಯನ್ನು ಮತ್ತು ಕಂಬಳಿ ನಿಲುವಂತಿಯನ್ನು ಧರಿಸಿ ದೋಣಿಯಲ್ಲಿ ಭಂಡಾರವನ್ನು ನೀಡುತ್ತ ಗೊರವನ ಆಟಗಳನ್ನು ಆಡುತ್ತಾರೆ. ಮನೆ ಮನೆ ಭಿಕ್ಷೆ ಮುಗಿಸಿಕೊಂಡು ಭಕ್ತರು ಕರೆಸಿದ ಕಡೆ ಗೊರವಯ್ಯನ ಸರಪಳಿ ಪವಾಡ, ದೋಣಿ ಸೇವೆಯನ್ನು ನೆರವೇರಿಸಿಕೊಂಡು ಮೈಲಾರ ಲಿಂಗನು ಮೈಯಲ್ಲಿ ಬಂದಾಗ ಸಾಕ್ಷಾತ್ ಶಿವನ ಪ್ರತಿರೂಪ ಮೈಲಾರ ಲಿಂಗನಂತೆ ನರ್ತಿಸುತ್ತಾ ಮೈಲಾರಪ್ಪನ ಸಂದೇಶವನ್ನು ಸಾರುತ್ತಾ ಊರೂರು ತಿರುಗುವರು.

ಪ್ರಸ್ತುತ ಜಿಲ್ಲೆಯಲ್ಲಿ ಹೊಸದುರ್ಗ ತಾಲ್ಲೂಕಿನ ಸೂಜಿಗಲ್ಲು ಗುಡ್ಡದಲ್ಲಿರುವ ದೇವಾಲಯವೇ ಅತ್ಯಂತ ದೊಡ್ಡದು. ಉಳಿದಂತೆ ಅಲ್ಲಲ್ಲಿನ ಊರುಗಳಲ್ಲಿ ಮೈಲಾರಲಿಂಗನ ದೇವಾಲಯಗಳನ್ನು ಕಾಣಬಹುದು. ಹಿರಿಯೂರು ಟೌನ್ ತೇರುಮಲ್ಲೇಶ್ವರ ಜಾತ್ರೆಯ ಪ್ರಾರಂಭದಲ್ಲಿ ಗೊರವಯ್ಯಗಳಿಂದ ಸರಪಳಿ ಪವಾಡ ನಡೆಯುವುದು. ಈ ಪವಾಡವನ್ನು ನಿರ್ವಹಿಸಿದ ನಂತರವೇ ಮರುದಿನ ಜಾತ್ರೆ ಪ್ರಾರಂಭವಾಗುವುದು. ಪ್ರತಿವರ್ಷ ಫೆಬ್ರವರಿ ತಿಂಗಳು ಮೈಲಾರಲಿಂಗನ ಜಾತ್ರೆ ನಡೆದ ತರುವಾಯ ಕಾರಣಿಕವನ್ನು ಕೇಳಿ ವಾಪಾಸ್

ಬರುವಾಗ ಹಳ್ಳಿ ಹಳ್ಳಿಯಲ್ಲಿ ಮೈಲಾರಲಿಂಗಯ್ಯನ ಕಾವ್ಯವನ್ನು ಹಾಡುತ್ತಾ ಭಿಕ್ಷೆಯನ್ನು ಮಾಡುತ್ತಾ ಅಲ್ಲಲ್ಲಿ ಭಕ್ತರು ಬಯಸಿದ ಕಡೆ ಭಕ್ತರ ಮನೆಯಲ್ಲಿ ಮೈಲಾರಲಿಂಗನ ಕಾವ್ಯವನ್ನು ಹಾಡಿ ದೋಣಿ ಸೇವೆಯನ್ನು ನಿರ್ವಹಿಸಿ ಮುಂದೆ ಸಾಗುವರು. ದೋಣಿ ಸೇವೆಯಲ್ಲಿ ಹಾಲು, ತುಪ್ಪ, ಬಾಳೆಹಣ್ಣು, ಉತ್ತತ್ತಿ ಹಣ್ಣುಗಳೆಂದರೆ ಈ ಭಕ್ತರಿಗೆ ಪಂಚಪ್ರಾಣ.

ಇತ್ತೀಚಿನ ದಿನಗಳಲ್ಲಿ ಕುರುಬ ಸಮುದಾಯವೇ ಅಲ್ಲದೆ ಲಿಂಗಾಯಿತರು, ವಾಲ್ಮೀಕಿ, ಒಕ್ಕಲಿಗ, ಮಡಿವಾಳ, ಆದಿಕರ್ನಾಟಕ ಮತ್ತು ಆದಿದ್ರಾವಿಡ ಜನಾಂಗದವರು ಈ ದೇವರ ಭಕ್ತರಾಗಿ ಹೆಚ್ಚಾಗಿ ಕಾಣಿಸಿಕೊಳ್ಳುವುದು ಹಾಗೂ ಇವರ ಮನೆದೇವರಾಗಿ ನಡೆದುಕೊಳ್ಳುವುದು ಹೆಚ್ಚಾಗಿ ಕಂಡುಬಂದಿದ್ದು, ಮೈಲಾರಲಿಂಗನು ಕೇವಲ ಕುರುಬರಿಗೆ ಸೀಮಿತವಾಗದೆ ಜಾತ್ಯಾತೀತ ನಾಯಕನಾಗಿ ಕಂಡುಬರುತ್ತಿರುವನು.

**ರೇವಣಸಿದ್ಧ ಪರಂಪರೆ**

ಹಾಲುಮತ ಸಂಸ್ಕೃತಿಯಲ್ಲಿ ಶ್ರೀಗುರು ರೇವಣರ ಪಾತ್ರವು ಪ್ರಮುಖವಾದುದು. ೧೨ನೇ ಶತಮಾನದ ಬಿಜ್ಜಳರಾಯನ ಆಸ್ಥಾನದಲ್ಲಿ ವರ್ಗ ಸಂಘರ್ಷವುಂಟಾಗಿ ಸಿದ್ಧಪರಂಪರೆಗೆ ಪರಿವರ್ತನೆಗೊಂಡ ರೇವಣಸಿದ್ಧರು ಸಲ್ಲಿಸಿದ ಸೇವೆಯು ಅಪಾರ ಎಂಬುದಕ್ಕೆ ಈ ಭಾಗದಲ್ಲಿ ಇರುವ ರೇವಣಸಿದ್ದೇಶ್ವರ ಮಠಗಳೇ ಸಾಕ್ಷಿ (ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಯಲ್ಲಿಯೇ ಹೆಚ್ಚು ರೇವಣಸಿದ್ಧ ಮಠಗಳು ಕರ್ನಾಟಕದಲ್ಲಿ ಕಂಡುಬರುವುದು).

ರೇವಣಸಿದ್ದನು ಕುರುಬರ ಕುಲಗುರು. ಇವರು ಸಾವಂತ ಕುಲದವರು. ಇವರು ಹುಟ್ಟು ಲಿಂಗದವರಾದುದರಿಂದ ಯಾವುದೇ ರೀತಿಯ ಮಾಂಸಹಾರವನ್ನು ಸೇವಿಸದೆ ಗುರುವಿನ ಸ್ಥಾನವನ್ನು ಉಳಿಸಿಕೊಂಡು ಬಂದಿರುವರು. ಈತನ ಶಿಷ್ಯ ಪರಂಪರೆಯಲ್ಲಿ ಒಡೆಯರು ಪ್ರಮುಖರು. ಹಾಲುಮತ ಸಮಾಜದಲ್ಲಿ ಯಾವುದೇ ಪುಣ್ಯ ಕಾರ್ಯಗಳಾದರೆ ಕಂಬಳಿಯ ಗದ್ದುಗೆ ತೀರಿಸುವುದು ಇವರ ಕರ್ತವ್ಯ. ಈ ರೀತಿ ಸೇವೆಯನ್ನು ನೀಡುತ್ತಾ ಹಾಲುಮತ ಸಮುದಾಯದವರು ನೀಡುವ ವರ್ಷದ ಕಾಣಿಕೆಯ ಹಣ ಮತ್ತು ಕುರಿ, ಕುರಿಯ ಉಣ್ಣೆಯನ್ನು ತೆಗೆದುಕೊಂಡು ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ. ಒಟ್ಟಿನಲ್ಲಿ ಸಿದ್ಧಪರಂಪರೆ ಈ ಸಮುದಾಯದಲ್ಲಿ ವಿಶಿಷ್ಠವಾಗಿ ಕಂಡುಬಂದರೂ ಇವರು ಸಮಾಜದ ಓರೆಕೋರೆಗಳನ್ನು ತಿದ್ದಿ ಇಂದಿಗೂ ಸೇವೆಯನ್ನು ಸಲ್ಲಿಸುತ್ತಾ ಬಂದು ಕುರುಬ ಸಂಸ್ಕೃತಿಯಲ್ಲಿ ವಿಶಿಷ್ಠವಾಗಿ ಕಂಡುಬರುವರು.

**ಮದುವೆಯ ಸಂಬಂಧ**

ಇವರನ್ನು ಈ ಭಾಗದಲ್ಲಿ ಒಡೆಯರು ಎಂದು ಕರೆಯುವರು. ಇವರು ಕುರುಬರ ಮನೆಯಿಂದ ಹೆಣ್ಣನ್ನು ತರುವರು. ಈ ಮನೆಗೆ ಬಂದ ಹೆಣ್ಣಿಗೆ ಬೇವಿನ ಕಡ್ಡಿಯಿಂದ ನಾಲಿಗೆಯನ್ನು ಸುಟ್ಟು ಅಪ್ಪ, ಅಮ್ಮನ ಮನೆಯಲ್ಲಿ ಮಾಂಸ ಮದ್ದು ತಿಂದಿದ್ದರೆ ಶುದ್ಧಗೊಳಿಸಿಕೊಂಡು ಮನೆಗೆ ಕರೆದುಕೊಳ್ಳುವರು. ಇನ್ನು ಹಾಲುಮತ ಸಮುದಾಯದಲ್ಲಿ ಒಡೆಯರು ಮನೆಗೆ ಬಂದರೆ ಇವರಿಗೆ ಊಟ ಮಾಡಲು ಬೇರೆಯ ತಟ್ಟೆಯನ್ನು ಕೊಡುವ ವ್ಯವಸ್ಥೆಯನ್ನು ಕಾಣುತ್ತೇವೆ. ಹಾಗೂ ಒಡೆಯರಮ್ಮ ನಿತ್ಯಮುತ್ತೈದೆ. ಇವರು ಒಂದು ವೇಲೆ ಗಂಡನು ಮೃತನಾದರೆ ತಾಳಿಯನ್ನು ತೆಗೆಯುವುದಿಲ್ಲ. ಈ ರೀತಿ ವಿಶಿಷ್ಟ ಸ್ಥಾನಮಾನವನ್ನು ಪಡೆದು ಕುರುಬರ ಮನೆಯಲ್ಲಿ ಕೆಲವು ಕಲಹಗಳಾದರೆ ಒಡೆಯರು ಹೇಳಿದ ರೀತಿಯಲ್ಲಿಯೇ ನಡೆದುಕೊಂಡು ಗುರುವಿನ ಸ್ಥಾನವನ್ನು ನೀಡಿರುವರು. ಇಂತಹ ಸಂಪ್ರದಾಯ ಇರುವುದರಿಂದ ಹಾಲುಮತದವರು ಒಡೆಯರ ಮನೆಗೆ ಹೆಣ್ಣು ಕೊಡಲು ಮತ್ತು ತೆಗೆದುಕೊಳ್ಳಲು ಇತ್ತೀಚಿನ ದಿನಗಳಲ್ಲಿ ಹೆಚ್ಚು ಒಪ್ಪುವುದಿಲ್ಲ.

**ಕಂಬಳಿ ಸಂಸ್ಕೃತಿ**

ಕಂಬಳಿ ಸಂಸ್ಕೃತಿಯು ಕುರುಬರ ಒಂದು ವಿಶಿಷ್ಟ ಸಂಸ್ಕೃತಿಯಾಗಿದೆ. ಇವರ ಕಸುಬು ಕುರಿ ಕಾಯುವುದು, ಕಂಬಳಿ ನೇಯುವುದು, ಕಂಬಳಿ ವ್ಯಾಪಾರ ಮಾಡುವುದು ಹೆಚ್ಚು ವಾಡಿಕೆಯಾದರೂ ಇನ್ನು ಕೆಲವರು ಬೇಸಾಯ ಮತ್ತಿತತರ ಉದ್ಯೋಗವನ್ನು ಆಶ್ರಯಿಸಿದವರು.

ಚಿತ್ರದುರ್ಗ ಸೀಮೆಯ ಚಳ್ಳಕೆರೆಯಲ್ಲಿ ಕಂಬಳಿ ಮಾರುಕಟ್ಟೆ ಇದೆ. ಭಾರತದಲ್ಲಿ ಪಂಜಾಬ್ ರಾಜ್ಯದ ಲೂದಿಯಾನವನ್ನು ಬಿಟ್ಟರೆ ದಕ್ಷಿಣ ಭಾರತದಲ್ಲಿಯೇ ಅತಿದೊಡ್ಡ ಕಂಬಳಿ ಮಾರುಕಟ್ಟೆ ಇರುವುದು ಚಳ್ಳಕೆರೆಯಲ್ಲಿ. ಲೂದಿಯಾನದಲ್ಲಿ ಆವಿಸ್ಕಲಿತ ಕಂಬಳಿ ತಯಾರಾದರೆ, ಚಳ್ಳಕೆರೆಯಲ್ಲಿ ಶುದ್ಧ ದೇಶೀ ಕಂಬಳಿಗಳು ಈ ಭಾಗದಲ್ಲಿ ಬಿಟ್ಟರೆ ಬೇರೆ ಎಲ್ಲೂ ತಯಾರಿಸುತ್ತಿಲ್ಲ. ಇವರು ಕಂಬಳಿ ನೇಯ್ಗೆಯನ್ನು ಜೀವಾಳವಾಗಿಟ್ಟುಕೊಂಡು ಕಂಬಳಿ, ಉಣ್ಣೆ, ಕುರಿಗೆ ದೇವರ ಸ್ಥಾನಮಾನವನ್ನು ನೀಡುವರು. ಇವರು ವರ್ಷಕ್ಕೆ ಒಮ್ಮೆ ದಸರಾ ಹಬ್ಬದಲ್ಲಿ ಆಯುಧ ಪೂಜೆ ಮಾಡುವ ಸಂದರ್ಭದಲ್ಲಿ ಕಂಬಳಿ ನೇಯಲು ಬಳಸುವ ಮಗ್ಗದ ಮಟ್ಟುಗಳಾದ ಬೇವು, ಲಾಳಿ, ಕುಂಟೆ, ಅಂಬತ್ತಿಗೆ, ರಾಟೆ, ಒಳಕೋಲು, ಹೂಡುಮಿಣಿ, ಕತ್ತರಿ, ಅಲುಬೆ ಮುಂತಾದ ಸಾಮಾನುಗಳಿಗೆ ಮಗ್ಗದ ಗುಣಿಯ ಮೇಲ್ ಭಾಗದಲ್ಲಿ ನೀರಿನಲ್ಲಿ ತೊಳೆದು ಹೂಗಳಿಂದ ಶೃಂಗರಿಸಿ ಪೂಜೆಯನ್ನು ನೆರವೇರಿಸುವರು.

ಕುರಿಕಾಯುವುದು ಮತ್ತು ಕುರಿಯ ಉಣ್ಣೆಯನ್ನು ಕತ್ತರಿಸುವ ಸಂಪ್ರದಾಯವೂ ಕೂಡ ವಿಶಿಷ್ಟವಾಗಿದೆ. ಈ ಭಾಗದಲ್ಲಿ ಕುರುಬರಿಗಿಂತ ಕುಂಚಿಟಿಗರು, ಗೊಲ್ಲರು, ಲಿಂಗಾಯತರು, ನಾಯಕರು ಹೆಚ್ಚು ಕರಿಮೇಕೆಯನ್ನು ಸಾಕುವರು. ಆದರೆ ಕುರಿಯ ಉಣ್ಣೆಯನ್ನು ಕತ್ತರಿಸುವವರು ಕುರುಬರು ಮಾತ್ರ. ಆದುದರಿಂದ ಕುರಿಗಳ ಉಣ್ಣೆಯನ್ನು ಕತ್ತರಿಸುವಾಗ ಒಂದು ವಿಶಿಷ್ಟ ಆಚರಣೆ ನಡೆಸುವರು. ಇದನ್ನು ಹಾಲುಚೆಲ್ಲುವ ಕಾರ್ಯಕ್ರಮ ಎಂದು ಕರೆಯುತ್ತಾರೆ. ಉಣ್ಣೆಯನ್ನು ಕತ್ತರಿಸುವ ಮೊದಲು ಕುರಿಯ ಉಣ್ಣೆಯನ್ನು ಶುದ್ಧಗೊಳಿಸುವ ನಿಟ್ಟಿನಲ್ಲಿ ಕುರಿಯನ್ನು ನೀರಿನಲ್ಲಿ ತೊಳೆಯುವರು. ಈ ಕ್ರಿಯೆಗೆ ಕುರಿಯನ್ನು ನೀರಿಗೆ ಹಾಕುವುದು ಎನ್ನುವರು. ನಂತರ ಹಾಲು ಚೆಲ್ಲುವರು ಹಾಲುಮತದವರು ಕುರಿಯನ್ನು ನೀರಿಗೆ ಹಾಕಿ ಹಾಲು ಚಲ್ಲಿದರೆ ಈ ಕುರಿಯ ಉಣ್ಣೆಯನ್ನು ಬೇರೆಯವರು ಕತ್ತರಿಸುವಂತಿಲ್ಲ. ಒಂದು ವೇಳೆ ಬೇರೆ ಕೆಲಸದ ಒತ್ತಡದಲ್ಲಿ ಅವರು ಕುರಿಯ ಉಣ್ಣೆಯನ್ನು ಕತ್ತರಿಸಲು ಬಾರದಿದ್ದ ಪಕ್ಕದಲ್ಲಿ ಒಂದು ವರ್ಷವಾದರೂ ಬೇರೆ ಕುರುಬರಿಗೆ ಈ ಉಣ್ಣೆಯನ್ನು ನೀಡುವುದಿಲ್ಲ. ಇಂತಹ ಸಂಪ್ರದಾಯವಿದ್ದು ಕುರಿಗೆ ಹಾಲುಚೆಲ್ಲಿದ ದಿನ ಕುರಿಯವರ ಮನೆಯಲ್ಲಿ ಹುಗ್ಗಿ ತುಪ್ಪದಿಂದ ಕುರುಬರಿಗೆ ಊಟವನ್ನು ಮಾಡಿಸಿದರೆ ಕುರಿಯ ಹಿಂಡು ಹೆಚ್ಚುತ್ತದೆ ಎಂಬ ವಾಡಿಕೆಯಿದೆ. ಅದಕ್ಕಾಗಿ ಕುರುಬರನ್ನು ತುಂಬಾ ಚೆನ್ನಾಗಿ ನೋಡಿಕೊಳ್ಳುವರು. ಇಂತಹ ಸಂಪ್ರದಾಯದಿಂದ ಕುರಿಯ ಉಣ್ಣೆ ಕತ್ತರಿಸಿಕೊಂಡು ಅವರಿಗೆ ಕರಿಕಂಬಳಿಯನ್ನು ನೀಡುವಂತಹ ವಸ್ತುವಿನಿಮಯ ಪದ್ಧತಿಯು ಜೀವಂತವಾಗಿವೆ. ಈ ರೀತಿಯ ಕೊಡುಕೊಳ್ಳುವಿಕೆಯಿಂದ ಇಂದಿಗೂ ಈ ಸಮುದಾಯದಲ್ಲಿ ಸಹೋದರ ಭಾವನೆಗಳು ಇದ್ದು ಇಂದಿಗೂ ಅನ್ಯೂನ್ಯವಾಗಿ ಹಳ್ಳಿಗಳಲ್ಲಿ ಜೀವನ ಸಾಗಿಸುವ ಸಂಪ್ರದಾಯವು ಜೀವಂತವಾಗಿ ಕಾಣಬಹುದು.

**ದಾಸ ಪರಂಪರೆ**

ಕನಕದಾಸರು ದಾಸಪರಂಪರೆಯ ಭಾಗವಾಗಿದ್ದು ಇತ್ತೀಚಿನ ದಿನಗಳಲ್ಲಿ ಕನಕದಾಸರ ಜಯಂತಿ, ಉತ್ಸವ ಮತ್ತು ಭಾಷಣಗಳನ್ನು ಏರ್ಪಡಿಸಿ ಸಮುದಾಯವನ್ನು ಸಾಮಾಜಿಕವಾಗಿ, ಧಾರ್ಮಿಕವಾಗಿ ಮುಂದೆ ತರುವ ಪ್ರಯತ್ನವು ನಡೆದಿದೆ. ಕಾಗಿನೆಲೆಯ ಕನಕಗುರುಪೀಠದ ಶಾಖಾಮಠವು ಚಿತ್ರದುರ್ಗದ ಹೊಸದುರ್ಗದಲ್ಲಿ ಪ್ರಾರಂಭಗೊಂಡು ಜನರಲ್ಲಿ ಜಾಗೃತಿಯತ್ತ ಕೊಂಡೊಯುತ್ತಿರುವುದು ಒಂದು ಜಾಗೃತಿಯ ಸಂಕೇತವಾಗಿದೆ. ಇಂದಿನ ದಿನಗಳಲ್ಲಿ ಸಮುದಾಯದ ಮುಖಂಡರು ಕನಕ ಗುರುಪೀಠಕ್ಕೆ ನೀಡುವ ಕಳಕಳಿ ಮತ್ತು ಕಾಳಜಿಯನ್ನು ರೇವಣಸಿದ್ಧ ಮಠಗಳಿಗೆ ನೀಡಿ ಕನಕ ಮಠದ ಜೊತೆ ರೇವಣಸಿದ್ಧ ಮಠವನ್ನು ಬೆಳೆಸುವ ಪ್ರಯತ್ನವನ್ನು ಮಾಡಿದರೆ ಸಮಾಜದ ಅಭಿವೃದ್ಧಿಯ ಜೊತೆ ಜೊತೆ ಸಿದ್ಧಪರಂಪರೆ ಮತ್ತು ಹಾಲುಮತ ಪರಂಪರೆಯನ್ನು ಬೆಳೆಸುವ ಪ್ರಯತ್ನ ನಡೆಸಿದಲ್ಲಿ ಸಮಾಜದ ಸರ್ವಾಂಗೀಣ ಅಭಿವೃದ್ಧಿಯನ್ನು ಕಾಣಲು ಸಾಧ್ಯ. ಈ ನಿಟ್ಟಿನಲ್ಲಿ ಸಮಾಜದ ಮುಖಂಡರು ಕನಕ ಮಠದ ಜೊತೆಗೆ ರೇವಣಸಿದ್ಧ ಮಠಕ್ಕೆ ಅನುದಾನವನ್ನು ನೀಡಿದಲ್ಲಿ ಸಿದ್ದಪರಂಪರೆ ಮತ್ತು ಹಾಲುಮತ ಸಂಸ್ಕೃತಿ ಜೀವಂತವಾಗಿರಲು ಸಹಕಾರಿಯಾಗುವುದು.

**ಈ ಭಾಗದಲ್ಲಿ ಇಲ್ಲಿಯವರೆಗೆ ನಡೆದ ಹಾಲುಮತ ಸಂಸ್ಕೃತಿಯ ಅಧ್ಯಯನಗಳು**

ಇಲ್ಲಿಯವರೆಗೆ ಈ ಭಾಗದಲ್ಲಿ ಅಷ್ಟಾಗಿ ಅಧ್ಯಯನಗಳು ನಡೆದಿರುವುದಿಲ್ಲ. ಆದರೂ ನಿರ್ಲಕ್ಷ್ಯಕ್ಕೆ ಒಳಗಾಗದೆ ಕೆಲವು ಅಧ್ಯಯನಗಳು ನಡೆದಿವೆ. ಯಕ್ಷಗಾನ ಅಕಾಡೆಮಿಯವರು ಹೊರತಂದಿರುವ ಡಾ. ರಾಜಪ್ಪ ದಳವಾಯಿ ಅವರು ಸಂಪಾದಿಸಿರುವ ಏಳೂರು ದೇವತೆಗಳು

ಈ ಕೃತಿಯು ಹೊಳಲ್ಕೆರೆ ತಾಲೂಕು ತಾಳಿಕಟ್ಟೆಯ ಕಿರಿಯಯ್ಯ ಮತ್ತು ಹಿರಿಯಯ್ಯ ಇವರ ಬಗ್ಗೆ ಕೆಲವೊಂದು ಸಂಗ್ರಹಗಳು ನಡೆದಿವೆ. ಮತ್ತು ಈ ಗ್ರಾಮದ ಬೀರದೇವ ದೇವಾಲಯದಲ್ಲಿ ಬೀರದೇವರ ಪಕ್ಕದಲ್ಲಿ ಒಂದು ಶಾಸನವನ್ನು ಹುಗಿದಿಟ್ಟಿದ್ದು ಕಂಡುಬಂದಿದ್ದು ಈ ಶಾಸನವನ್ನು ದೊಡ್ಡ ಜಾತ್ರೆಯ ಸಂದರ್ಭದಲ್ಲಿ ಮಾತ್ರ ಪೂಜಿಸಿ ನಂತರ ಜಾತ್ರೆಯ ಮುಕ್ತಾಯದ ದಿನ ಹೂತು ಪೂಜಿಸುವ ಸಂಪ್ರದಾಯವಿದೆ. ಹಾಲುಮತ ಅಧ್ಯಯನ ಪೀಠ ಮತ್ತು ಕನಕಗುರು ಪೀಠವು ಇದರಲ್ಲಿ ಇರುವ ಅಂಶವನ್ನು ಹೊರತರುವ ಕಾರ್ಯವನ್ನು ಮಾಡಬೇಕಾಗಿದೆ. ಹಾಗೂ ನಮ್ಮಂತಹ ಸಂಶೋಧಕರಿಗೂ ಕೂಡ ಇದು ಒಂದು ಸವಾಲಾಗಿಯೇ ಉಳಿಯುವುದು.

ಡಾ. ಮಲ್ಲಿಕಾರ್ಜುನ ಕಲಮರಹಳ್ಳಿ ಇವರು ಜಾನಪದ ಅಕಾಡೆಮಿಯಿಂದ ಹೊರತಂದಿರುವ 'ಕಲಮರಹಳ್ಳಿಯ ಕಥೆಗಳು' ಈ ಕಥಾ ಸಂಕಲನದಲ್ಲಿ 'ಕಥೆಗಾರ ಈರಬಡಪ್ಪ' ಇವರ ಕಥೆಗಳ ಬಗ್ಗೆ ಬೆಳಕು ಚೆಲ್ಲುತ್ತದೆ. ಡಾ. ಎಫ್. ಟಿ. ಹಳ್ಳಿಕೇರಿಯವರ ಮಾರ್ಗದರ್ಶನದಲ್ಲಿ ನಡೆದ ಕಂಬಳಿ ಸಂಸ್ಕೃತಿ ಒಂದು ಅಧ್ಯಯನ' ಎಂಬ ವಿಷಯವನ್ನು ಕುರಿತು ಅಧ್ಯಯನ ಮಾಡಿರುವ ಜಯಶ್ರೀ ಇಟ್ಟಣ್ಣನವರ ಕಿರುಪ್ರಬಂಧದಲ್ಲಿ ಚಳ್ಳಕೆರೆಯ ಕಂಬಳಿ ಸಂಸ್ಕೃತಿ ಬಗ್ಗೆ ಬೆಳಕು ಚೆಲ್ಲುತ್ತದೆ. 'ಹೊಸದುರ್ಗ ಸೀಮೆಯ ಜನಪದ' ಎಂಬ ಕೃತಿಯನ್ನು ಬಾಗೂರು ನಾಗರಾಜ ಇವರು ಹೊರತಂದಿದ್ದು ಇದರಲ್ಲಿ ಸೂಜಿಕಲ್ಲು ಗುಡ್ಡದ ಮೈಲಾರಲಿಂಗನ ಬಗ್ಗೆ ಮಾಹಿತಿಯನ್ನು ನೀಡುವುದು. ಡಾ. ಮೀರಾಸಾಬಿಹಳ್ಳಿ ಶಿವಣ್ಣ ಇವರು ಸಂಪಾದಿಸಿರುವ 'ಗಣಿಯದನಿ' ಕೃತಿಯು ಸಂಗೀತ ಮೋಡಿಕಾರ ಲಿಂಗರಾಜು ಇವರ ಬಗ್ಗೆ ಮಾಹಿತಿಯನ್ನು ನೀಡಿರುವರು. ಜನಪದ ಸಾಹಿತ್ಯದಲ್ಲಿ ಡಾ. ಪಿ. ಆರ್. ತಿಪ್ಪೆಸ್ವಾಮಿ ಇವರ ಕಲೆ ಮತ್ತು ಜೀವನದ ಸಾಧನೆಯ ಬಗ್ಗೆ ಮಾಹಿತಿಯನ್ನು ನೀಡುವುದು. ಕನಕ ಗುರುಪೀಠವು ಹೊರತಂದಿರುವ ಕನಕ ರಶ್ಮಿಯಲ್ಲಿ ಹಲವು ಹತ್ತು ಮಾಹಿತಿಯನ್ನು ನೀಡುವುದನ್ನು ಬಿಟ್ಟರೆ ಈ ಭಾಗದಲ್ಲಿ ಸಂಶೋಧಿಸಿ ಬೆಳಕಿಗೆ ತರುವಂತಹ ಕುರುಬರ ಬದುಕಿನ ಹತ್ತು ಹಲವು ಮಹತ್ತರ ಸಂಗತಿಗಳೂ ಹಾಗೆಯೇ ಉಳಿದಿವೆ.

**ಜನಪದ ಸಾಹಿತ್ಯಕ್ಕೆ ಈ ಸೀಮೆಯ ಕೊಡುಗೆ**

ಕುಂಚ ಕಲಾವಿದರಾದ ಹಾಗೂ ಜನಪದ ತಜ್ಞರಾದ ಡಾ. ಪಿ. ಆರ್. ತಿಪ್ಪೇಸ್ವಾಮಿಯವರು ಹಿರಿಯೂರಿನ ಹರತಿಕೋಟೆಯವರು. ಜನಪದ ಕಥಾ ಕಣಜ ಎಂದು ಹೆಸರಾಗಿರುವ ಕಥೆಗಾರ ಈರಬಡಪ್ಪ ಕಲಮರಹಳ್ಳಿ ಚಳ್ಳಕೆರೆ ತಾಲ್ಲೂಕಿನವರು. ಕನಕ ಗುರುಪೀಠದಲ್ಲಿ ಇರುವ ಸರ್ವಶ್ರೀಗಳಾದ ನಿರಂಜನಾನಂದ ಮಹಾಸ್ವಾಮಿಗಳೂ, ಈಶ್ವರಾನಂದ ಮಹಾಸ್ವಾಮಿಗಳು ಮತ್ತು ಸಿದ್ದರಾಮ ಮಹಾಸ್ವಾಮಿಗಳು ಚಿತ್ರದುರ್ಗದ ಸೀಮೆಯವರು. ಹೀಗೆ ಜನಪದ ಸಾಹಿತ್ಯ ಲೋಕಕ್ಕೆ ಈ ಭಾಗದ ಕೊಡುವೆ ಕಡಿಮೆಯೇನಲ್ಲ.

ಒಟ್ಟಾರೆ ಈ ಭಾಗದ ಜನಪದ ಸಂಸ್ಕೃತಿಯನ್ನು ಉಂಡ ಹಾಲುಮತ ಸಂಸ್ಕೃತಿಯು ತನ್ನ ಅಂತರಾಳದಲ್ಲಿ ತನ್ನದೇ ಆದ ಜನಪದ ಸಂಸ್ಕೃತಿಯನ್ನು ಬೆಳೆಸುವುದರ ಜೊತೆ ಜೊತೆ ತನ್ನ ಜೀವಂತಿಕೆಯನ್ನು ಕಾಪಾಡಿಕೊಂಡು ಬಂದಿದೆ.

## ೧೩. ಚಿತ್ರದುರ್ಗ ಪರಿಸರದ ಕುರುಬರು : ಆರ್ಥಿಕ ವಿಚಾರಗಳು

"ಜೀವನವನ್ನು ಒದಗಿಸುವುದು ಆರ್ಥಿಕಾಭಿವೃದ್ಧಿಯ ಗುರಿಯಾಗಬೇಕು". ಯಾವುದೇ ರಾಷ್ಟ್ರದ, ರಾಜ್ಯದ ಅಥವಾ ಪ್ರದೇಶದ ಅರ್ಥವ್ಯವಸ್ಥೆಯನ್ನು ಆ ರಾಷ್ಟ್ರದ ಅಥವಾ ಆ ಪ್ರದೇಶದ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ವ್ಯವಸ್ಥೆಗಳಿಂದ ಬೇರ್ಪಡಿಸಿ ನೋಡುವುದು ಸಾಧ್ಯವಿಲ್ಲ. ಪ್ರತಿ ರಾಜಕೀಯ ಅಥವಾ ಧಾರ್ಮಿಕ ಸಿದ್ಧಾಂತದೊಳಗೊಂದು ಸಂಸ್ಕೃತಿ, ಆ ಸಂಸ್ಕೃತಿಯಲ್ಲಿ ಅದರದೇ ಆದ ರಾಜಕೀಯ-ಆರ್ಥಿಕ-ಸಾಮಾಜಿಕ ರಚನೆಗಳಿರುತ್ತವೆ. ಆ ರಚನೆಗಳಾದರೂ ಸಂಘಟನಾತ್ಮಕ ರೂಪ ಪಡೆದು ವ್ಯವಸ್ಥೆ ಅಥವಾ ಸಮಾಜ ನಿರ್ಮಿತವಾಗಿರುತ್ತವೆ. ನಾಗರಿಕತೆಯ ಹಾದಿಯಲ್ಲಿ ಆದಿಮಾನವ ಆಧುನಿಕ ಮಾನವನಾಗಿ ರೂಪಾಂತರಗೊಳ್ಳುತ್ತಾ ಸಾಗುವಾಗ ವಿವಿಧ ಕಾಲಘಟಗಳಲ್ಲಿ ಅವನ ಬದುಕನ್ನು ಅಥವಾ ಒಟ್ಟು ಸಮೂಹದ ಬದುಕನ್ನು ಸಹನೀಯವಾಗಲು ಹಲವಾರು

ಚಿಂತಕರ ಸಿದ್ಧಾಂತಗಳು ತತ್ವಗಳು ನೆರವಾಗುತ್ತಾ ಬಂದಿರುವುದು ಸತ್ಯ. ಇಂಥ ಮಾರ್ಗದರ್ಶನಗಳಿಂದ ಪ್ರೇರಣೆ ಪಡೆದು ಜನ್ಮತಾಳಿದ ಆಚರಣೆಗಳು, ಸಂಸ್ಕೃತಿ ಸಂಘಟನೆಗಳು ಎಲ್ಲಾ ಕಾಲದಲ್ಲೂ ಎಲ್ಲಾ ಭೌಗೋಳಿಕ ಸಂದರ್ಭಗಳಲ್ಲೂ ಒಂದೇ ಆಗಿರದೆ, ತಮ್ಮೊಳಗಿನ ಕ್ರಿಯೆ ಮತ್ತು ಪ್ರಕ್ರಿಯೆಗಳ ಕಾರ್ಯಾಚರಣೆಯಿಂದಾಗಿ ಬದಲಾವಣೆಗೊಳಪಡುತ್ತಿರುತ್ತವೆ. ತತ್ಫಲವಾಗಿ ನವಸಂಸ್ಕೃತಿಯೊಂದು ಚಿಗುರೊಡೆದು ಬೆಳೆಯಬಹುದು ಅಥವಾ ಹೊಸ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಗೊಂದು ಅಸ್ತಿತ್ವಕ್ಕೆ ಬರಬಹುದು. ಈ ವ್ಯವಸ್ಥೆ ಮುಂದೆ ಜನ ಮನ್ನಣೆಯಿಂದಲೋ ಅಥವಾ ಅದು ತಳೆಯಬಹುದಾದ ಸಾಮ್ರಾಜ್ಯಶಾಹಿ ನಿಲುವಿನಿಂದಲೋ ಆಲದ ಮರದಂತೆ ಕೊಂಬೆಗಳನ್ನು ಚಾಚುತ್ತಾ, ಬಿಳಿಲುಗಳನ್ನು ಇಳಿಸುತ್ತಾ ನಿಸರ್ಗದೊಳಗಿನ ಸೃಷ್ಟಿ-ಪುನರ್ ಸೃಷ್ಟಿಯಂತೆ ಹುಟ್ಟು-ಮರುಹುಟ್ಟನ್ನು ಪಡೆಯುತ್ತಾ ಜಡತೆ ಮತ್ತು ಕ್ರಿಯಾಶೀಲತೆಗಳನ್ನು ಮೈಗೂಡಿಸಿಕೊಂಡು ಸಾಗುವುದನ್ನು ಚರಿತ್ರೆಯ ಘಟನಾವಳಿಗಳಿಂದ ಕಾಣಬಹುದು.

ನಮ್ಮ ಸಂಪನ್ಮೂಲಗಳ ಅಭಿವೃದ್ಧಿ ಪ್ರಯತ್ನದ ಪ್ರಾಥಮಿಕ ಗುರಿಯಾಗಿರಬೇಕು. ಅಭಿವೃದ್ಧಿ ಸ್ವದೇಶದ ಜನರಲ್ಲಿ ಕ್ಷೇಮ, ನೆಮ್ಮದಿಗಳನ್ನು ಉಂಟುಮಾಡುವುದಕ್ಕೇ ವಿನಾ ಆರ್ಥಿಕ ಬೆಳವಣಿಗೆಯ ಪ್ರಮಾಣಗಳನ್ನು ಏರಿಸುವ ಪೈಪೋಟಿಯ ಬಲಿಪೀಠಕ್ಕೆ ನಾಗರಿಕರನ್ನು ಬಲಿಕೊಡುವುದಕ್ಕಲ್ಲ ಎಂಬುದನ್ನು ನಾವು ಮರೆಯಬಾರದು. ಮನುಷ್ಯನನ್ನು ಕೇಂದ್ರವಾಗಿರಿಸಿಕೊಂಡ ಅಭಿವೃದ್ಧಿ ಸಮಕಾಲೀನ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವಿಚಾರಗಳ ಅಂಶವಾಗಿದೆ. ಜನರು ಆರ್ಥಿಕಾಭಿವೃದ್ಧಿಯ ಕೇಂದ್ರ ಬಿಂದು ಎಂಬುದು ಈಗ ಮನವರಿಕೆಯಾಗಿದೆ. ಅಭಿವೃದ್ಧಿಯ ಪ್ರಕ್ರಿಯೆಯೆಂದರೆ ಜನರ ಶಕ್ತಿ, ಸಾಮರ್ಥ್ಯಗಳನ್ನು ವಿಸ್ತರಿಸುವ ಪ್ರಕ್ರಿಯೆಯೇ ಆಗಿದೆ ಎಂಬುದನ್ನು ಈಗ ಹೆಚ್ಚು ವ್ಯಾಪಕವಾಗಿ ತಿಳಿಯಲಾಗುತ್ತಿದೆ. ಮಾನವ ಅಭಿವೃದ್ಧಿಯ ಗುರಿಗಳನ್ನು ಈಡೇರಿಸಲು ಅಗತ್ಯವಾದ ಉತ್ತಮ ಪರಿಸ್ಥಿತಿಗಳ ನಿರ್ಮಾಣಕ್ಕೆ ಸಮಾನತೆಯೊಂದಿಗೆ ಬೆಳವಣಿಗೆ ಸಾಧಿಸುವುದು ಅತ್ಯುತ್ತಮ ಮಾರ್ಗವಾಗಿದೆ.

ವಿಶ್ವದ ಪ್ರಸಿದ್ಧ ಅರ್ಥಶಾಸ್ತ್ರಜ್ಞರಾಗಿದ್ದ ಪ್ರೊ. ಕೇನ್ಸ್‌ರ್ ಅವರು 'ಪೂರ್ಣ ಪ್ರಮಾಣದ ಉದ್ಯೋಗ' (Full Employment) ಸಿದ್ಧಾಂತವನ್ನು ಪ್ರತಿಪಾದಿಸಿದ್ದರು. ಈ ಸಿದ್ಧಾಂತದ ಪ್ರಕಾರ ದೇಶದ ಸರ್ವಸಂಪತ್ತನ್ನೂ ಆಯಾ ದೇಶದ ಸರ್ಕಾರಗಳು ಸಮಾಜದ ಅಭಿವೃದ್ಧಿಗಾಗಿ ಸದುಪಯೋಗಪಡಿಸಿಕೊಂಡಾಗ ಮಾತ್ರ ಎಲ್ಲಾ ವರ್ಗಗಳ ಜನಾಂಗದವರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಟ್ಟಂತಾಗುವುದೆಂದು ಅಭಿಪ್ರಾಯಪಟ್ಟಿದ್ದರು. ಈ ಸಿದ್ಧಾಂತವು ಕುರುಬ ಜನಾಂಗದವರಿಗೆ ಎಷ್ಟರಮಟ್ಟಿಗೆ ಪ್ರಸ್ತುತವೆಂಬುದರ ಬಗ್ಗೆ ಈ ಲೇಖನದಲ್ಲಿ ಚಿಂತನೆ ನಡೆಸಲಾಗಿದೆ.

ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯ ಹೆಗ್ಗಳಿಕೆಗೆ ಪಾತ್ರರಾದ ಕುರುಬ ಜನಾಂಗದವರು ಆರ್ಥಿಕವಾಗಿ ಹಿಂದುಳಿದಿರುವುದು ಗಮನಾರ್ಹವಾದ ಸಂಗತಿ. ಪ್ರಪ್ರಥಮವಾಗಿ ಕ್ರಿ. ಪೂ. ೧೫೬೫ರಲ್ಲಿ ನಡೆದ ತಾಳಿಕೋಟೆ ಯುದ್ಧದ ನಂತರ ಅನೇಕರು ಮನೆ-ಮಠಗಳನ್ನು ಕಳೆದುಕೊಂಡು ಕರ್ನಾಟಕದ ಇತರ ಭಾಗಗಳಿಗೆ ವಲಸೆ ಹೋಗುವುದರ ಮೂಲಕ ಹೊಸ ಜೀವನ ಆರಂಭಿಸಿದರು. ಇವರ ಹೊಸಜೀವನವು ಆರ್ಥಿಕ ದೃಷ್ಟಿಯಿಂದ ಕುಂಠಿತಗೊಂಡಿತು. ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯ ಕಾಲದಲ್ಲಿ ಕುರುಬ ಜನಾಂಗದವರು ಕುರಿ ಸಾಕಣೆ, ಕಂಬಳಿ ನೇಯುವುದು, ಕೃಷಿ ಮುಂತಾದ ಕಸುಬುಗಳನ್ನು ಅವಲಂಬಿಸಿದ್ದರು. ಇತರೆ ಜನಾಂಗದವರೂ ಸಹ ಅವರವರ ಕುಲಕಸುಬುಗಳಲ್ಲಿ ನಿರತರಾಗಿ, ಅವರದೇ ಆದ ಆರ್ಥಿಕ ವ್ಯವಸ್ಥೆಯನ್ನು ರೂಪಿಸಿಕೊಂಡಿದ್ದರು. ಪ್ರಜಾಪ್ರಭುತ್ವ ಸರ್ಕಾರವು ಭಾರತದಲ್ಲಿ ಅಸ್ತಿತ್ವಕ್ಕೆ ಬಂದ ನಂತರ ವೃತ್ತಿಗಳಲ್ಲಿ ಅದಲು ಬದಲು ಉಂಟಾಯಿತು.

ಕರ್ನಾಟಕದ ಪ್ರಮುಖ ಜನಸಮುದಾಯಗಳಲ್ಲಿ ಕುರುಬ ಜನಾಂಗವೂ ಒಂದು. ಇವರನ್ನು ಹಾಲುಮತದವರೆಂದು, ಹೆಗ್ಗಡೆಗಳೆಂದು, ಕುರುಬರೆಂದು, ಪೂಜಾರಿಗಳು ಎಂದು ಕರೆಯುವುದು ರೂಢಿಯಲ್ಲಿದೆ. ಮೂಲತಃ ಶಿವಾರಾಧಕರಾಗಿರುವ ಇವರು ದ್ರಾವಿಡ ಪಂಗಡಕ್ಕೆ ಸೇರಿದವರಾಗಿದ್ದಾರೆ. ಪ್ರಾಚೀನ ಕಾಲದಿಂದಲೂ ಕುರಿ ಸಾಕಾಣಿಕೆ, ಕಂಬಳಿ ನೇಯ್ಗೆ, ಕೃಷಿಯನ್ನು ಮುಖ್ಯ ಕುಸುಬನ್ನಾಗಿ ಮಾಡಿಕೊಂಡು ಬಂದಿದ್ದಾರೆ. ಹೀಗೆ ಪರಂಪರಾನುಗತವಾಗಿ ಕುರಿ ಸಾಕಾಣಿಕೆಯನ್ನು ಮುಖ್ಯ ಉದ್ಯೋಗವನ್ನಾಗಿ ಮಾಡಿಕೊಂಡು ಬಂದಿರುವುದರಿಂದಲೇ ಇವರಿಗೆ 'ಕುರುಬರು' ಎಂಬ ಹೆಸರು ಬರಲು ಕಾರಣವಾಗಿದೆಯೆಂದು ಸಾಮಾನ್ಯವಾದ ತಿಳಿವಳಿಕೆಯಾಗಿದೆ.

'ಅಪ್ಪ ಹಾಕಿದ ಆಲದ ಮರ' ಎಂಬ ಗಾದೆಯಂತೆ ತಂದೆ-ತಾಯಿಂದಿರನ್ನು ಬಿಟ್ಟು ದೂರ ಪ್ರದೇಶಗಳಲ್ಲಿನ ಅವಕಾಶಗಳನ್ನು ತಪ್ಪಿಸಿಕೊಂಡಿದ್ದು ಹಾಗೂ 'ತಮ್ಮ ಕಣ್ಣೆದುರಲ್ಲೇ ನಮ್ಮ ಮಕ್ಕಳಿ ಇರಲಿ' ಎಂಬ ಪೋಷಕರ ಇಂಗಿತಗಳು ಕುರುಬ ಜನಾಂಗದ ಪೀಳಿಗೆಗಳು ಹೊರಜಗತ್ತನ್ನು ಕಾಣದಂತೆ ಮಾಡಿದ್ದುದು ಮತ್ತೊಂದು ವಿಪರ್ಯಾಸ. ಆರ್ಥಿಕ ಕ್ಷೇತ್ರದ ಅಭಿವೃದ್ಧಿ ಚಟುವಟಿಕೆಗಳ ಬಗ್ಗೆ ಕುರುಬ ಜನಾಂಗದವರಿಗೆ ಮಾಹಿತಿಯಾಗಲೀ ಅಥವಾ ಸಂಪೂರ್ಣ ಅರಿವಾಗಲಿ ಇರಲಿಲ್ಲ. ಆದರೆ ದಿನವಿಡೀ ಮೈಮುರಿದು ದುಡಿಯುವುದನ್ನು ಹೊರತುಪಡಿಸಿ ಬೇರೇನನ್ನೂ ಚಿಂತಿಸಿದಂತೆ ಕಾಣುವುದಿಲ್ಲ. ಮೇಲಾಗಿ ಕುರುಬ ಜನಾಂಗದವರು ಮರ್ಯಾದೆಗೆ ಅಳುಕುತ್ತಾ ಬದುಕನ್ನು ನಡೆಸುತ್ತಿದ್ದರಿಂದ ಲಜ್ಜೆಬಿಟ್ಟು ಸಂಪಾದನೆಗೆ ಕೈ ಹಾಕಲಿಲ್ಲ.

**ಚಿತ್ರದುರ್ಗ ಪರಿಸರದ ಕುರುಬರ ಆರ್ಥಿಕ ವಿಚಾರಗಳು**

ಕರ್ನಾಟಕದ ಬಯಲುಸೀಮೆ, ಗಂಡು ಮೆಟ್ಟಿನ ನಾಡು ಚಿತ್ರದುರ್ಗ ಜಿಲ್ಲೆಯಲ್ಲಿ ಸಾಕಷ್ಟು ಕುರುಬ ಜನಾಂಗದವರಿದ್ದಾರೆ. ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯ ಹಾಗೂ ಶೈಕ್ಷಣಿಕವಾಗಿ ಸಾಕಷ್ಟು ಹಿಂದುಳಿದಿದ್ದಾರೆ. ಕಾರಣ ಈ ಜಿಲ್ಲೆಯಲ್ಲಿ ಯಾವುದೇ ಕೈಗಾರಿಕೆಗಳು ಇಲ್ಲದೇ ಇರುವುದು, ಸದಾ ಬರಗಾಲದಲ್ಲಿಯೇ ಬಳಲುತ್ತಿದ್ದು ಯಾವುದೇ ನೀರಾವರಿ ಯೋಜನೆಗಳಿಲ್ಲದೇ ಈ ಭಾಗದ ಅಭಿವೃದ್ಧಿಯಲ್ಲಿ ಹಿಂದೆ ಸರಿದಿದ್ದಾರೆ. ಪ್ರಾಚೀನ ಕಾಲದಿಂದಲೂ ಕುರಿ ಸಾಕಾಣಿಕೆ, ಕಂಬಳಿ ನೇಯ್ಗೆ, ಕೃಷಿ, ವ್ಯಾಪಾರ ಮುಖ್ಯ ಕಸುಬನ್ನಾಗಿ ಮಾಡಿಕೊಂಡು ಬಂದಿದ್ದಾರೆ. ಈ ಜಿಲ್ಲೆಯಲ್ಲಿ ಇತ್ತೀಚೆಗೆ ಕುರಿ ಸಾಕಾಣಿಕೆಯನ್ನು ಗೊಲ್ಲ ಸಮುದಯದವರಲ್ಲಿಯೂ ಕಾಣಬಹುದು.

ಕೃಷಿ ಕ್ಷೇತ್ರದಲ್ಲಿ ಇಂದಿಗೂ ಸಹ ಅನೇಕರ ಜಮೀನುಗಳು ಆರ್ಥಿಕ ಮುಗ್ಗಟ್ಟಿನ ಕಾರಣ ಪ್ರಗತಿ ಕಾಣದೆ ಬಣಬಣವೆನ್ನುತ್ತಿವೆ. ಕೊಳವೆ ಬಾವಿಗಳನ್ನೂ ಕೊರೆಸಿದರೆ ಅಂತರ್ಜಲ ಕ್ಷೀಣಿಸಿರುವುದು, ಅನೇಕರು ಒಣಭೂಮಿಗಳಲ್ಲಿ ಮಳೆಯ ಕಣ್ಣುಮುಚ್ಚಾಲೆ ಆಟದೊಂದಿಗೆ ಸೆಣಸಾಡುವಂತಿದೆ. ರೈತರ ಕನಸಿನ ಯೋಜನೆಯಾದ ಭದ್ರಾ ಮೇಲ್ದಂಡೆ ಯೋಜನೆಯಿಂದ ಮುಂದೊಂದಿನ ಒಣ ಭೂಮಿಯಲ್ಲಿ ಹಸಿರನ್ನು ಕಾಣುವ ಭಾಗ್ಯ ಲಭಿಸಬಹುದೆ?

**ಜಾಗತೀಕರಣದ ಕರಿ ನೆರಳಿನಲ್ಲಿ ಕಂಬಳಿ ಉದ್ಯಮ**

೧೯೯೦ರ ದಶಕದ ಆರಂಭದಿಂದ ಜಗತ್ತಿನಾದ್ಯಂತ ಬೀಸತೊಡಗಿದ ಜಾಗತೀಕರಣದ ಗಾಳಿ ಹಲವು ಬದಲಾವಣೆಗಳನ್ನು ತಂದಿದೆ ಮತ್ತು ತರುತ್ತಿದೆ. ಉದಾರೀಕರಣ, ಖಾಸಗೀಕರಣ ಮತ್ತು ಇವೆರಡರ ಜಾಗತೀಕರಣವನ್ನು ಕೆಲವರು ಆಧುನೀಕರಣ ಎಂದಾಗಿ ಭ್ರಮಿಸಿರುವುದುಂಟು, ಶುಚಿಯಾದ ಗಾಳಿಯನ್ನು ಸ್ವಾಗತಿಸುವುದು ಎಷ್ಟು ಮುಖ್ಯವೋ ಹಾಗೆಯೇ ಆ ಗಾಳಿ ತರುವ ಕಸವನ್ನು ತಡೆಯುವುದೂ ಸಹ ಅಷ್ಟೆ ಮುಖ್ಯ. ಖಾಸಗೀಕರಣ ಮೂಲಕ ಕಾಲಿಡುತ್ತಿರುವ ವ್ಯಾಪಾರೀಕರಣವೇ ಆ ಕಸವಾಗಿದೆ. ಈ ವ್ಯಾಪಾರೀಕರಣದ ಜಾಗತೀಕರಣ ತನ್ನ ಕಸವನ್ನು ಇಂದು ಚಿಕಕ ಮತ್ತು ಗೃಹ ಕೈಗಾರಿಕೆಗಳ ಮೇಲೆ ಚೆಲ್ಲುತ್ತಿದೆ.

ಭಾರತದ ಅರ್ಥವ್ಯವಸ್ಥೆಯಲ್ಲಿ ಚಿಕ್ಕ ಮತ್ತು ಗೃಹ ಕೈಗಾರಿಕೆಗಳು ಬಹಳ ಮಹತ್ವದ ಸ್ಥಾನವನ್ನು ಪಡೆದಿವೆ. ಅವು ಭಾರತದ ಅರ್ಥವ್ಯವಸ್ಥೆಯ ತಳಹದಿಯೆಂದು ಪರಿಗಣಿಸಲ್ಪಟ್ಟಿದೆ.

ಭಾರತದ ಏಳ್ಗೆಯು ಗೃಹ ಕೈಗಾರಿಕೆಗಳಿಂದ ಮಾತ್ರ ಸಾಧ್ಯವೆಂದು ರಾಷ್ಟ್ರಪಿತ ಮಹಾತ್ಮ ಗಾಂಧಿಯವರು ಹೇಳಿದ್ದಾರೆ.

**ಕಂಬಳಿ ಉದ್ಯಮ**

ಬಡವರು, ಬಲ್ಲಿದರು ಎಂಬ ತಾರತಮ್ಯವಿಲ್ಲದೆ ಕಂಬಳಿಗಳನ್ನು ಪ್ರತಿಯೊಬ್ಬರೂ ಬಳಸುತ್ತಿದ್ದ ಕಾಲ ಒಂದಿತ್ತು ಎಂದರೆ ತಾವು ಆಶ್ಚರ್ಯಗೊಳ್ಳಬಹುದು. ಪ್ರತಿಯೊಂದು ಮನೆಯಲ್ಲಿ ಕಂಬಳಿ ಇಟ್ಟುಕೊಳ್ಳುವುದು ಹೆಮ್ಮೆಯ ಹಾಗೂ ಪ್ರತಿಷ್ಠೆಯ ಸಂಗತಿಯಾಗಿತ್ತು. ಇಂದು 'ಕಂಬಳಿ'ಯನ್ನು ವಿಶೇಷವಾಗಿ ಪೂಜೆ, ಮದುವೆ, ಸಮಾರಂಭಗಳಲ್ಲಿ ಮಾತ್ರ ಬಳಸುತ್ತೇವೆ. ಕುರುಬ ಜನಾಂಗದವರು

ಕಂಬಳಿಗಳನ್ನು ನೇಯುವುದು ಅವರಿಗೆ ಅವರ ಹಿರಿಯರಿಂದ ಬಂದ ಬಳುವಳಿ. ಕಂಬಳಿಯ ಕುರಿತು ಕನ್ನಡ ಸಾಹಿತ್ಯದಲ್ಲಿ ಅನೇಕ ಗ್ರಂಥಗಳಲ್ಲಿ ಉಲ್ಲೇಖಗಳು ದೊರೆಯುತ್ತವೆ. ಇದರಿಂದ ಕಂಬಳಿ ನೇಯ್ಗೆಯ ಇತಿಹಾಸ ಸಾವಿರಾರು ವರ್ಷಗಳ ಹಿಂದಕ್ಕೆ ಹೋಗುತ್ತದೆ. ಹಾಗೇ ನೋಡಿದರೆ ಕಂಬಳಿ ಉದ್ಯಮಕ್ಕೆ ಪ್ರಾಚೀನ ಇತಿಹಾಸವಿದೆ. ಕ್ರಿ. ಪೂ. ೧೦,೦೦೦ ವರ್ಷಗಳ ಹಿಂದೆ ಗ್ರಾಮಗಳು ಹುಟ್ಟಿರಬಹುದೆಂಬ ಅಂದಾಜಿದೆ. ಆದರೆ ಪುರಾಣ, ಸಾಹಿತ್ಯಕ ಪರಂಪರೆಯಲ್ಲಿನ ಉಲ್ಲೇಖಗಳ ಪ್ರಕಾರ ೨೦೦೦ ವರ್ಷಗಳಿಂದಲೂ ಗ್ರಾಮಗಳು ಅಸ್ತಿತ್ವದಲ್ಲಿವೆ. ಕಂಬಳಿ ಉದ್ಯಮ ಕೂಡ ಸಾಕಷ್ಟು ಪ್ರಾಚೀನವಾಗಿಯೇ ಇದೆ. ಅಷ್ಟೇ ದೊಡ್ಡ ಇತಿಹಾಸವೂ ಇದೆ.

ಆಧುನಿಕತೆಯ ಪರಿಣಾಮವಾಗಿ ಕಂಬಳಿ ಇದ್ದ ಜಾಗವನ್ನು ಇಂದು ಜರ್ಕಿನ್, ಶಾಲುಗಳು ಕಬಳಿಸಿವೆ. ಇದರಿಂದಾಗಿ ಕಂಬಳಿ ಉದ್ಯಮ ಲಾಭ-ನಷ್ಟಗಳ ಲೆಕ್ಕಾಚಾರಗಳ ನಡುವೆ ಕಳೆದುಹೋಗುತ್ತಿದೆ. ಕಂಬಳಿ ಉದ್ಯಮವನ್ನು ನಂಬಿಕೊಂಡಿದ್ದ ಜನರೆಲ್ಲಾ ಇಂದು ದುಡಿಯುವ ಕೈಗಳಿಗೆ ಕೆಲಸವಿಲ್ಲದಂತಾಗಿದ್ದಾರೆ. ಆರ್ಥಿಕವಾಗಿ ಸಾಕಷ್ಟು ಹೀನಾಯ ಸ್ಥಿತಿಗೆ ಬಂದಿದ್ದಾರೆ. ಒಂದು ಕಾಲದಲ್ಲಿ ಕಂಬಳಿ ಉದ್ಯಮ ಗ್ರಾಮೀಣ ಲಾಭದಾಯಕ ಉದ್ಯಮವೇ ಆಗಿತ್ತು. ಕುರುಬ ಜನಾಂಗದ ಆರ್ಥಿಕ ತತ್ವ ಇದೇ ಉದ್ಯಮದಲ್ಲಿ ಅಡಗಿತ್ತು. ಕುರುಬರು ಹೆಚ್ಚಾಗಿರುವ ಯಾವುದೇ ಹಳ್ಳಿಗೆ ಹೋದರೂ ಕೂಡ ಪೈಪೋಟಿಯ ಮೇಲೆ ಕಂಬಳಿ ನೇಯ್ಗೆ ನಡೆಯುತ್ತಿತ್ತು. ಕುರುಬರ ಬೀದಿಯಲ್ಲಿ ಒಮ್ಮೆ ಸಂಚರಿಸಿದರೆ ಸಾಕು ಮಗ್ಗದ ಲಾಳಿ ಕಿವಿಯಲ್ಲಿ ಸಂಗೀತ ನುಡಿಸುತ್ತಿತ್ತು. ಮಹಿಳೆಯರು ಜಾನಪದ ಹಾಡುಗಳನ್ನು ಗೂಣಗುತ್ತಾ ರಾಟಿ ನೂಲುತ್ತಿದ್ದರು. ಆದರೆ ಇಂದು ಮಗ್ಗಗಳೆಲ್ಲಾ ಮೂಲೆ ಸೇರಿದರೆ ರಾಟೆಯ ಚಕ್ರಗಳು ಕಳಚಿಬಿದ್ದಿವೆ.

ಇಂದು ಅನೇಕ ಉಣ್ಣೆಯ ವಸ್ತುಗಳು ಬಳಕೆಗೆ ಬಂದಿವೆಯಾದರೂ, ಕಂಬಳಿಯೇ ಉಣ್ಣೆಯ ಮೂಲವನ್ನು ಎಂಬುದನ್ನು ಯಾರೂ ಅಲ್ಲಗಳೆಯಲಾಗುವುದಿಲ್ಲ. ಉಣ್ಣೆಯಿಂದ ತಯಾರಿಸಿದ ಅತ್ಯಂತ ಬೆಚ್ಚನೆಯ ಹೊದಿಕೆ ಕಂಬಳಿ. ಎಷ್ಟೇ ಆಧುನಿಕತೆ ಬೆಳೆದಿದ್ದರೂ ಇಂದಿಗೂ ಕೂಡ ಗ್ರಾಮೀಣ ಭಾಗದಲ್ಲಿ ಯಾವುದೇ ಶುಭಕಾರ್ಯ ಕಂಬಳಿ ಇಲ್ಲದೇ ನಡೆಯುವುದೇ ಇಲ್ಲ. ಇಂದು ಮಾರುಕಟ್ಟೆಯಲ್ಲಿ ಏರಿರುವ ಉತ್ಪಾದನಾ ದರ ಕೂಡ ಕಂಬಳಿ ಉದ್ಯಮ ನಲುಗಲು ಸಾಕಷ್ಟು ಕೊಡುಗೆ ನೀಡಿದೆ. ಸರ್ಕಾರ ಕೂಡ ಅಷ್ಟೇ ಪ್ರಮಾಣದಲ್ಲಿ ಕಂಬಳಿ ಉದ್ಯಂವನ್ನು ನಿರ್ಲಕ್ಷಿಸಿದೆ ಎಂಬ ಆರೋಪ ಕೂಡ ಕೇಳಿಬರುತ್ತಿದೆ. ಕಂಬಳಿ ಉಪಯೋಗ ಕುರಿತಂತೆ ಪುರಾಣ ಮತ್ತು ಇತಿಹಾಸದಲ್ಲಿ ಪ್ರಸ್ತಾಪಗಳು ಕಂಡುಬರುತ್ತಿವೆ. ಕುರುಬರ ಆರಾಧ್ಯ ದೈವ ಶ್ರೀಮೈಲಾರಲಿಂಗೇಶ್ವರನ ಉಡುಪು ಕಂಬಳಿಯಿಂದ ತಯಾರಿಸಿದ್ದಾಗಿದೆ. ಅದನ್ನು ಇಂದಿಗೂ ಗೊರವರಲ್ಲಿ ಕಾಣಬಹುದಾಗಿದೆ. ಅದೇ ರೀತಿ ಇತಿಹಾಸದಲ್ಲೂ ಕಂಬಳಿ ಉಪಯೋಗದ ಬಗ್ಗೆ ಅಲ್ಲಲ್ಲಿ ಉಲ್ಲೇಖಗಳಿವೆ. ನಾಗರಿಕತೆ ಸುಪ್ತಾವಸ್ಥೆಯಲ್ಲಿದ್ದಾಗ ಚಳಿ ಮತ್ತು ಗಾಳಿಯಿಂದ ರಕ್ಷಿಸಿಕೊಳ್ಳಲು ಕಾಡುಕುರಿಗಳ ಮತ್ತು ಮೇಲೆಗಳ ಕೂದಲಿನ ಚರ್ಮವನ್ನು ಉಪಯೋಗಿಸಲಾಗುತ್ತಿತ್ತು. ಮುಂದೆ ಬೆಳೆದಂತೆ ಕಂಬಳಿ ಮತ್ತು ಇತರೆ ಉಣ್ಣೆಯ ವಸ್ತುಗಳು ಬೆಳಕು ಕಂಡವು.

**ಕಂಬಳಿಯ ನೇಯ್ಗೆ**

ಕಂಬಳಿ ತಯಾರಿಕೆಗೆ ಮೂಲವಾಗಿ ಕುರಿ ಸಾಕಾಣಿಕೆ ಅಗತ್ಯ. ಕುರಿಗಳಿಂದ ಉಣ್ಣೆಯನ್ನು ತೆಗೆದು ಶುದ್ಧೀಕರಿಸಿ ಪುರಾತನ ಪದ್ಧತಿಯಿಂದ ಅಥವಾ ಆಧುನಿಕ ಪದ್ಧತಿಯಿಂದ ದಾರದಿಂದ ಕಂಬಳಿ ತಯಾರಾಗುತ್ತಿದೆ. ಎರಡೂ ಮೂರು ವರ್ಷದ ಒಂದು ಕುರಿಯಿಂದ ಸುಮಾರು ಅರ್ಧ ಕೆ. ಜಿ.ಯಿಂದ ೧ ಕೆ.ಜಿ. ಉಣ್ಣೆ ದೊರೆಯುತ್ತದೆ. ಮೂರು ಕೆ.ಜಿ. ಶುದ್ಧೀಕರಿಸಿದ ಉಣ್ಣೆಗೆ ಒಂದು ಕಂಬಳಿ ತಯಾರಾಗುತ್ತದೆ. ಒಂದು ಕೆ.ಜಿ. ಉಣ್ಣೆ ರೂ. ೪೦ ರಿಂದ ೫೦ ರೂ.ಗಳವರೆಗೆ ಇರುತ್ತದೆ. ಈ ಉಣ್ಣೆಯನ್ನು ಶುದ್ಧೀಕರಿಸಿ ಕಂಬಳಿಯನ್ನು ನೇಯುವುದು ನಿಜಕ್ಕೂ ಬಹಳ ಕಷ್ಟದ ಕೆಲಸ. ಮನುಷ್ಯರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಸಾಕಷ್ಟು ಧೂಳಿನಿಂದ ಕೂಡಿರುವುದರಿಂದ ಕೆಮ್ಮು, ಅಸ್ತಮಾ, ಹೃದಯ ಖಾಯಿಲೆಗಳಂತಹ ಭಯಾನಕ ಖಾಯಿಲೆಗಳಿಂದ ನರಳಬೇಕಾಗುತ್ತದೆ. ಆದರೂ ಇಲ್ಲಿ ಒಳ್ಳೆಯ ನೈಪುಣ್ಯತೆ, ಅನುಭವ ಬಹಳ ಮುಖ್ಯ.

**ಕಂಬಳಿ ವಿಧಗಳು**

೧. ಕರಿ ಕಂಬಳಿ ೨. ಬಿಳಿ ಕಂಬಳಿ ೩. ಪಟ್ಟೆ ಕಂಬಳಿ ೪. ಮಟ್ಟೆ ಕಂಬಳಿ ೫. ಬಣ್ಣದ ಕಂಬಳಿ ೬. ಜಾಡಿ ಕಂಬಳಿ ೭. ತೊಳೆದ ಕಂಬಳಿ ಇತರೆ...

ಇದರಲ್ಲಿ ಕರಿಕಂಬಳಿ ಭಾರಿ ಬೇಡಿಕೆಯ ಕಂಬಳಿಯಾಗಿದ್ದು, ಈ ಕಂಬಳಿಗಳು ಸುಮಾರು ರೂ. ೨೦೦ ರಿಂದ ರೂ. ೧೦೦೦ ರೂ.ವರೆಗೂ ಬೆಲೆ ಬಾಳುತ್ತವೆ. ಹಿಂದಿನ ದಿನಗಳಲ್ಲಿ ಕಡ್ಡಾಯವಾಗಿ ಕಂಬಳಿಗಳನ್ನು ನಮ್ಮ ಹಿರಿಯರು, ಬಂಧು-ಬಳಗದವರು ಸೇರಿದ ಸಭೆಗಳಲ್ಲಿ ಕಂಬಳಿ ಬಳಸುವ ಕಾರ್ಯಕ್ರಮಗಳು ಬಹಳ ವಿಜೃಂಭಣೆಯಿಂದ ನಡೆಯುತ್ತಿದ್ದವು. ಆದರೆ ಇಂದು ಈ ಕಾರ್ಯಕ್ರಮಗಳು ಬಹಳ ವಿರಳವಾಗಿವೆ.

**ಕಂಬಳಿಯ ವೈಶಿಷ್ಟ್ಯ**

ಕಂಬಳಿಯ ವೈಶಿಷ್ಟ್ಯವೆಂದರೆ ಇದು ಎರಡು ಪದರಿನಿಂದ ಕೂಡಿದ್ದು, ಆರು ಅಡಿ ಉದ್ದ ಹಾಗೂ ನಾಲ್ಕು ಅಡಿ ಅಗಲವಾಗಿರುತ್ತದೆ. ಕೆಲವೊಮ್ಮೆ ೬-೪'. ೬-೨'. ೭-೪' ಉದ್ದ -ಅಗಲ ಇರುವ ಕಂಬಗಳಿವೆ. ಇದರಿಂದ ಟೊಪ್ಪಿಗೆ ಮಾಡಿ ಜಡಿ ಮಳೆಯಿಂದ ರಕ್ಷಣೆ ಪಡೆಯಬಹುದು. ಮೈ ನಡುಗಿಸುವ ಬಳಿಯಿಂದ ಮೈ ಬೆಚ್ಚಗಿಟ್ಟುಕೊಳ್ಳಬಹುದು. ಕೆಲವು ಕಂಬಳಿಗಳು ನಯವಾಗಿ ಮೃದುವಾಗಿರುತ್ತವೆ. ಕೆಲವು ಕಂಬಳಿಗಳು ಚುಚ್ಚುವಿಕೆಯಿಂದ ಇಂದಿನ ನಯಾನಾಜೂಕಿನ ಜನರಿಗೆ ಈ ಕಂಬಳಿಯ ಮೈ ಚುಚ್ಚುವಿಕೆಯನ್ನು ತಾಳಿಕೊಳ್ಳುವ ತಾಳ್ಮೆಯಿಲ್ಲ.

ಕುರುಬರ ಮುಖ್ಯವಾದ ಕಸುಬು ಕುರಿ ಸಾಕುವುದು, ಕಂಬಳಿ ನೇಯುವುದು ಶತಮಾನಗಳಿಂದ ಬಂದ ಪ್ರಕ್ರಿಯೆ. ಕರ್ನಾಟಕದಲ್ಲಿ ಚಿತ್ರದುರ್ಗ, ತುಮಕೂರು, ಕೋಲಾರ, ಬೀದರ್, ಹಾವೇರಿ, ಬೆಳಗಾವಿ ಜಿಲ್ಲೆಗಳಲ್ಲಿ ಕಂಬಳಿ ನೇಕಾರರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇದರಲ್ಲಿ ಮುಖ್ಯವಾಗಿ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ಅಂದರೆ ಪಿ. ಮಹದೇವಪುರ, ಗೌರೀಪುರ, ಪರಶುರಾಮಪುರ. ಚೌಳೂರು, ಟಿ. ಎನ್. ಕೋಟೆ, ಓಬನಹಳ್ಳಿ, ಕಡೇಹುಡೆ, ವೃಂದಾವನಹಳ್ಳಿ, ಪಗಡಲಬಂಡೆ, ಓಬಳ್ಳುರ, ನೇರ್ಲಗುಂಟೆ, ಚಿಕ್ಕಮಧುರೆ, ಚಿಕ್ಕಮ್ಮನಹಳ್ಳಿ, ಗೊರ್ಲಕಟ್ಟೆ, ಸಿದ್ದಾಪುರ, ಗೋಪನಹಳ್ಳಿ ಇತರೆ... ಮೊಳಕಾಲ್ಮೂರು ತಾಲ್ಲೂಕಿನಲ್ಲಿ ರೇಷ್ಮೆ ಸೀರೆ ನೇಯ್ಗೆ ಪ್ರಮುಖ ಉದ್ಯಮವಾಗಿದ್ದು ಸಹ ಕೆಲವು ಊರುಗಳಲ್ಲಿ ಕಂಬಳಿ ಉದ್ಯಮವನ್ನು ಕಾಣುತ್ತೇವೆ. ಮುಖ್ಯವಾಗಿ ಕೊಂಡ್ಲಹಳ್ಳಿ, ವುಡೇವು ಇತರೆಡೆ ನೇಯುತ್ತಾರೆ. ತುಮಕೂರು ಜಿಲ್ಲೆಯಲ್ಲಿ ಮುಖ್ಯವಾಗಿ ಶಿರಾ ತಾಲ್ಲೂಕಿನ ಕೆಲವು ಪ್ರದೇಶಗಳಲ್ಲಿ, ಪಾವಗಡ ತಾಲ್ಲೂಕಿನ ಕೆಲವು ಪ್ರದೇಶಗಳಲ್ಲಿ, ಬೀದರ್ ಜಿಲ್ಲೆಯ ಕೆಲವು ಭಾಗಗಳಲ್ಲಿ ಕರ್ನಾಟಕ, ಆಂಧ್ರಪ್ರದೇಶ ಗಡಿನಾಡು ಪ್ರದೇಶಗಳಲ್ಲಿ ಕಂಬಳಿ ಉದ್ಯಮವನ್ನು ಕಾಣುತ್ತೇವೆ.

**ಕಂಬಳಿ ಮಾರುಕಟ್ಟೆ**

ಚಿತ್ರದುರ್ಗ ಜಿಲ್ಲೆಯ ಅತಿದೊಡ್ಡ ತಾಲ್ಲೂಕು ಚಳ್ಳಕೆರೆ. ಇದು ತನ್ನದೇ ಆದ ವ್ಯವಹಾರಿಕ ಹಿನ್ನೆಲೆಯನ್ನು ಹೊಂದಿದೆ. ವಾಣಿಜ್ಯನಗರಿ ಎಂದೇ ಹೆಸರಾಗಿರುವ ಈ ನಗರ ಎಣ್ಣೆನಗರ ವಾಣಿಜ್ಯ ನಗರಿಯಾಗಿ ಹೊರಹೊಮ್ಮುತ್ತಿದೆ. ಸದಾ ಬರಗಾಲ ಬಿಸಿಲಿನ ತಾಪಮಾನ ಅಧಿಕವಿದ್ದರೂ ಎಲ್ಲಾ ತರಹದ ವ್ಯಾಪಾರಸ್ಥರನ್ನು ವಾಣಿಜ್ಯೋದ್ಯಮಿಗಳನ್ನು ಹೊರಹೊಮ್ಮಿರುವುದು ಒಂದು ಸಂತೋಷದ ಸಂಗತಿಯಾಗಿದೆ.

ಚಳ್ಳಕೆರೆಯಲ್ಲಿ ಪ್ರತಿ ಭಾನುವಾರ ಸಂತೆ ನಡೆಯುತ್ತದೆ. ಇದರಲ್ಲಿ ಪ್ರಮುಖವಾಗಿ ಕಂಬಳಿ ಮಾರುಕಟ್ಟೆಯನ್ನು ನಾವು ಕಾಣುತ್ತೇವೆ. ಕಂಬಳಿ ಮಾರುಕಟ್ಟೆಯ ಪ್ರದೇಶ ಚಿಕ್ಕದಾಗಿದ್ದು, ಮಾರಾಟದ ವ್ಯವಸ್ಥೆಯಲ್ಲಿ ಬಹಳ ದೊಡ್ಡ ಮಾರುಕಟ್ಟೆಯಾಗಿ ಕಾಣುತ್ತೇವೆ. ಕರ್ನಾಟಕದಲ್ಲಿಯೇ ದೊಡ್ಡ ಕಂಬಳಿ ಮಾರುಕಟ್ಟೆ ಇದಾಗಿದೆ. ಪ್ರತಿ ಭಾನುವಾರ ಬೆಳಿಗ್ಗೆ ೭ ಗಂಟೆಯಿಂದ ಮಧ್ಯಾಹ್ನ ೨ ಗಂಟೆಯ ಅವಧಿಯೊಳಗೆ ಸುಮಾರು ೪೦ ಲಕ್ಷದಿಂದ ೫೦ ಲಕ್ಷದವರೆಗೆ ವ್ಯವಹಾರ ವಹಿವಾಟು ನಡೆಯುತ್ತದೆ. ಚಿತ್ರದುರ್ಗ ಜಿಲ್ಲೆಯಲ್ಲಿ ೧೬೮೫ ಕೈ ಮಗ್ಗಗಳು ಕಾರ್ಯನಿರ್ವಹಿಸುತ್ತಿವೆ. ಸುಮಾರು ೧೦,೦೦೦ ದಿಂದ ೨೦,೦೦೦ ಕಂಬಳಿಗಳು ಮಾರಾಟವಾಗುತ್ತವೆ.

ಮಾರುಕಟ್ಟೆ ವ್ಯವಸ್ಥೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಮಾರಾಟಗಾರರು ಉತ್ಪಾದಿಸಿದ ಕಂಬಳಿಗಳನ್ನು ಹೊತ್ತು ಮಾರುಕಟ್ಟೆಗೆ ತರುತ್ತಾರೆ. ಆದರೆ ಕೊಂಡುಕೊಳ್ಳುವವರ ಸಂಖ್ಯೆ ಅತಿವಿರಳ. ಕಾರಣ ಕಂಬಳಿಯನ್ನು ಖರೀದಿಸುವವರು ಮಹಾರಾಷ್ಟ್ರದ ಕೆಲವು ಖರೀದಿದಾರರು

ಮತ್ತು ಕರ್ನಾಟಕದ ಮಲೆನಾಡಿನ ಕೆಲವೇ ಜನರು ಬಂದು ಬೇಕಾದ ಕಂಬಳಿಗಳನ್ನು ಅತೀ ಕಡಿಮೆ ಬೆಲೆಗೆ ಖರೀದಿಸುತ್ತಾರೆ. ಮಾರುಕಟ್ಟೆ ವ್ಯವಸ್ಥೆಯಲ್ಲಿ ಉತ್ಪಾದಕರು ತಾವು ಉತ್ಪಾದಿಸಿದ ಕಂಬಳಿಗಳಿಗೆ ಮಾರಾಟ ಬೆಲೆ (M.R.P)ಯನ್ನು ನಿಗಧಿಪಡಿಸಬೇಕು. ಆದರೆ ಈ ಮಾರುಕಟ್ಟೆಯಲ್ಲಿ ಖರೀದಿದಾರರು ಮಾರಾಟದ ಬೆಲೆಯನ್ನು ನಿಗದಿಪಡಿಸಿ, ಅತೀ ಕಡಿಮೆ ಬೆಲೆಗೆ ಕೊಂಡುಕೊಳ್ಳುವ ವ್ಯವಸ್ಥೆಯನ್ನು ಕಾಣುತ್ತೇವೆ. ಈ ಪ್ರಕ್ರಿಯೆಯಲ್ಲಿ ಮಧ್ಯವರ್ತಿ (Commission agent)ಗಳ ಹಾವಳಿಯಿಂದ ಮಾರಾಟಗಾರರ ನಿರಂತರ ಶೋಷಣೆ ನಡೆಯುತ್ತಿದೆ. ಖರೀದಿದಾರರು ಕೇಳಿದ ಬೆಲೆಗೆ ಕೊಡುವ ಅನಿವಾರ್ಯತೆ ಇರುತ್ತದೆ. ಕಾರಣ ಜೀವನ ಸಾಗಿಸುವುದು ತುಂಬಾ ತೊಂದರೆಯಾಗುತ್ತದೆ. ಮಕ್ಕಳಿಗೆ ಶಿಕ್ಷಣ, ಊಟ, ಬಟ್ಟೆ, ವಸತಿ ಸಮಸ್ಯೆಗಳಿಂದ ಮಾರಾಟ ಮಾಡುವಂತಹ ವ್ಯವಸ್ಥೆ ನಿರ್ಮಾಣವಾಗುತ್ತದೆ. ಇಂದು ನಾಜೂಕಿನ ಫ್ಯಾಷನ್ ಜಗತ್ತಿನಲ್ಲಿ ಗ್ರಾಹಕರು ಇಂತಹ ವಸ್ತುಗಳನ್ನು ಕೊಂಡುಕೊಳ್ಳಲು ಮುಂದೆ ಬರಲಾರರು. ಆದ್ದರಿಂದ ಇಂದಿನ ಮಾರುಕಟ್ಟೆ ವ್ಯವಸ್ಥೆ ಸಾಕಷ್ಟು ಬದಲಾಗುತ್ತಾ ಸಾಗಿದೆ. ಆಧುನಿಕ ತಾಂತ್ರಿಕತೆಯಿಂದ ನವೀನತೆಯಿಂದ ಕೂಡಿದ ವಸ್ತುಗಳನ್ನು ತಯಾರಿಸುವುದು ಉತ್ಪಾದಕರ ಜವಾಬ್ದಾರಿಯಾಗಿದೆ.

**ಜಾಗತೀಕರಣ ಮತ್ತು ಕಂಬಳಿ ಉದ್ಯಮ**

ಜಾಗತೀಕರಣದ ಪ್ರಭಾವದಿಂದಾಗಿ ಇಂದು ಬಹುರಾಷ್ಟ್ರೀಯ ಕಂಪನಿಗಳು ಸಾಕಷ್ಟು ನೆಲೆಯನ್ನು ಕಂಡುಕೊಳ್ಳುವುದರ ಮೂಲಕ ಗೃಹ ಮತ್ತು ಸಣ್ಣ ಕೈಗಾರಿಕೆಯನ್ನು ಮೂಲೆಗುಂಪಾಗಿ ಮಾಡುವುದರಲ್ಲಿ ಯಶಸ್ವಿಯಾಗಿವೆ. ಇದರಿಂದ ಇಂದು ಕಂಬಳಿ ಉದ್ಯಮ ಸಂಪೂರ್ಣ ಅವನತಿಯ ಅಂಚಿನಲ್ಲಿದೆ. ಆಧುನಿಕ ತಂತ್ರಜ್ಞಾನ ಅಳವಡಿಕೆಯ ಕಡೆಗೆ ಹೆಚ್ಚಿನ ಗಮನಹರಿಸಿ ಮಾರುಕಟ್ಟೆ ವ್ಯವಸ್ಥೆಯಲ್ಲಿ ಪೈಪೋಟಿ ನೀಡುವಂತಹ ನವಿರಾದ ಕಂಬಳಿಗಳನ್ನು ಕಾರ್ಪೆಟ್, ರತ್ನಗಂಬಳಿಗಳನ್ನು ಉತ್ಪಾದಿಸುವ ಅನಿವಾರ್ಯತೆ ಇದೆ.

ಉಪಜೀವನಕ್ಕಾಗಿ ಆಶ್ರಯಿಸಿದ ಉದ್ಯೋಗವೊಂದು ನಿರೀಕ್ಷಿತ ಫಲ ನೀಡದಿದ್ದರೆ ಅದನ್ನು ಅವಲಂಬಿಸಿ ಫಲವಿಲ್ಲ ಎನ್ನುವಂತೆ ಇಂದು ಬಹುಮಂದಿ ಈ ಉದ್ಯಮವನ್ನು ತ್ಯಜಿಸಿ ಬೇರೆ ವೃತ್ತಿಯನ್ನು ಕೈಗೊಳ್ಳುತ್ತಿದ್ದಾರೆ. ಉದ್ಯೋಗವನ್ನರಿಸಿ ಬೆಂಗಳೂರಿಗೆ ವಲಸೆ ಹೊರಟಿದ್ದಾರೆ. ಹೆಚ್ಚು ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಸಣ್ಣ ಮತ್ತು ಗೃಹ ಕೈಗಾರಿಕೆಗಳಿಗೆ ಮರುಜೀವ ನೀಡುವುದು ಬಹಳ ಅವಶ್ಯಕತೆಯಿದೆ.

**ಸರ್ಕಾರದ ಮಧ್ಯಪ್ರವೇಶ**

ಕಂಬಳಿ ಉದ್ಯಮ ಬಹಳ ಬಸಳಿವದು ಮೂಲೆ ಗುಂಪಾಗುತ್ತಿರುವ ಸರ್ಕಾರ ಯಾವ ರೀತಿ ಮಧ್ಯಪ್ರವೇಶ ಮಾಡೇಕಿತ್ತೋ ಹಾಗೆ ಮಾಡಿದೆಯೇ ಎಂಬುದು ಚರ್ಚಾಸ್ಪದ ಸಂಗತಿಯಾಗಿದೆ. ಸರ್ಕಾರ ಸಹಕಾರಿ ಸಂಸ್ಥೆಯನ್ನು ಬಲಪಡಿಸುವ ಮೂಲಕ ನೇಕಾರರಿಗೆ ಸಹಕಾರಿಯಾಗಬೇಕು. ಅಗತ್ಯವಾದ ಕಚ್ಚಾವಸ್ತುಗಳು ಸೇರಿದಂತೆ ಕಂಬಳಿಗಳನ್ನು ಖರೀದಿಸುವ (ಯೋಗ್ಯ ಬೆಲೆಗೆ) ವ್ಯವಸ್ಥೆಯವರೆಗೆ ಎಲ್ಲವನ್ನೂ ಸಹಕಾರಿ ಕ್ಷೇತ್ರದ ಮೂಲಕ ನಡೆಯುವಂತಾಗಬೇಕು. ಚಿತ್ರದುರ್ಗ ಜಿಲ್ಲೆಯಲ್ಲಿ ಒಟ್ಟು ೬೧ ಉಣ್ಣೆ ಕೈಮಗ್ಗ ಸಹಕಾರ ಸಂಘಗಳಿವೆ. ಇದರಲ್ಲಿ ೫೫ ಸಹಕಾರ ಸಂಘಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ. ೬ ಸಹಕಾರ ಸಂಘಗಳು ನಿಷ್ಕ್ರೀಯವಾಗಿವೆ. ಒಟ್ಟು ೧೬,೮೦೦ ಸದಸ್ಯರಿದ್ದು, ೨೬೮೫ ಕೈಮಗ್ಗಳಿವೆ. ೧೨ ಸಹಕಾರ ಸಂಘ-ಸಂಸ್ಥೆಗಳು ಲಾಭಗಳಿಸಿದ್ದು, ೪೧ ಸಹಕಾರ ಸಂಘ ಸಂಸ್ಥೆಗಳು ನಷ್ಟದಲ್ಲಿವೆ. ಸಹಕಾರಿ ಸಂಘಗಳು ಸರಿಯಾದ ದಿಕ್ಕಿನಲ್ಲಿ ಕಾರ್ಯನಿರ್ವಹಣೆಯಲ್ಲಿ ಎಡವುತ್ತಿವೆ. ಇದನ್ನು ಸರಿಪಡಿಸುವ ವ್ಯವಸ್ಥೆ ಸರ್ಕಾರ ಮತ್ತು ಜನರ ಮೇಲಿದೆ. ಜನರು ಹೆಚ್ಚು ಜಾಗೃತರಾಗಿ, ವಿದ್ಯಾವಂತರಾಗಿ ಸಂಘಟಿತರಾಗಿ ಉದ್ಯಮವನ್ನು ರಕ್ಷಿಸುವ ಹೊಣೆಗಾರಿಕೆಯನ್ನು ಹೊರಬೇಕಾಗಿದೆ.

**ಉಪಸಂಹಾರ**

ಒಟ್ಟಿನಲ್ಲಿ ಹೇಳವುದಾದರೆ ಇಂದು ಜಾಗತೀಕರಣ ಯಾವ ಮುಖಗಳನ್ನು ಹೊಂದಿರಬೇಕೆಂದರೆ ಅದು ಮನುಷ್ಯರನ್ನು ಮಾನವ ಸಂಪನ್ಮೂಲವನ್ನಾಗಿಸುವಂತಹ ಹುದ್ದೆಯಾಗಿರಬೇಕು. ಕೆಲಸವಿಲ್ಲದ ಕೈಗಳಿಗೆ ಕೆಲಸ ನೀಡುವಂತಹದ್ದಾಗಿರಬೇಕು. ಇಂದು ಕಂಬಳಿ

ಉದ್ಯಮವು ಬದಲಾದ ಪರಿಸ್ಥಿತಿಯಲ್ಲಿ ಆಧುನಿಕ ತಂತ್ರಜ್ಞಾನದ ಹಿನ್ನೆಲೆಯಲ್ಲಿ ಉತ್ಪಾದನ ಕೌಶಲ್ಯಗಳನ್ನು ಸೃಷ್ಟಿಸುವ ಶಿಕ್ಷಣ ತರಬೇತಿಯನ್ನು ನೀಡುವುದರ ಮೂಲಕ ಹೆಚ್ಚು ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಗೃಹ ಕೈಗಾರಿಕೆಗಳಿಗೆ ಮರುಜೀವ ನೀಡುವುದು ತುಂಬಾ ಅವಶ್ಯಕತೆಯಿದೆ. ಪೋಕೇನ್ಸರವರು ಹೇಳುವಂತೆ ದೇಶದ ಸಂಪತ್ತನ್ನು ಸಮಾಜದ ಅಭಿವೃದ್ಧಿಗೆ ಉಪಯೋಗಿಸಿದಾಗ ಮಾತ್ರ ಹೆಚ್ಚು ಹೆಚ್ಚು ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತಾ ಜನರ ಆರ್ಥಿಕ ಅಭಿವೃದ್ಧಿಪಡಿಸಬಹುದು. ಜೀವನವನ್ನು ಒದಗಿಸುವುದು ಆರ್ಥಿಕಾಭಿವೃದ್ಧಿಯ ಗುರಿಯಾಗಬೇಕು.

<u>ಆಕರ ಗ್ರಂಥಗಳು</u>

೧. ಬುಡಕಟ್ಟು ಕುಲಕಸುಬುಗಳು, ಡಾ. ಕೆ. ಎಂ. ಮೈತ್ರಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಅಭಿವೃದ್ಧಿ ಅಧ್ಯಯನ, ಸಹಕಾರ ಮತ್ತು ಸಮುದಾಯ ಪ್ರಯತ್ನ ಎಂ. ಚಂದ್ರಪೂಜಾರಿ.

೩. ಬುಡಕಟ್ಟು ಅಧ್ಯಯನ, ಸಂಪುಟ ೨, ಸಂಚಿಕೆ ೨, ಡಾ. ಕೆ. ಎಂ. ಮೈತ್ರಿ, ಡಾ. ಚಲುವರಾಜ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ಬೆಳಗಿನ ಬೆರಗು, ಜಿ. ಎನ್. ಮಲ್ಲಿಕಾರ್ಜುನಪ್ಪ.

೫. ಕುರುಬರಗುರು ಒಡೆಯರು, (ಸಂ) ಡಾ. ಎಫ್. ಟಿ. ಹಳ್ಳಿಕೇರಿ.

೬. ಕುರುಬ ಸಮಾಜದ ಆರ್ಥಿಕ ಚಿಂತನೆ, ಎಂ. ಕೆ. ನಾಗರಾಜ.

೭. ವೇದಾವತಿ, ಸಂಚಿಕೆ, ೨೦೦೭, ಸಿ. ಚನ್ನಕೇಶವ.

೮. Rural Enterprenceurship Dr. G. T. Govindappa.

## ಭಾಗ ನಾಲ್ಕು - ವಿಶೇಷ ಉಪನ್ಯಾಸ

## ೨೪. ಬ. ಪ. ನಾಯ್ಕರ ಅವರ ಸಾಹಿತ್ಯ ಸಾಧನೆ

ವೃತ್ತಿಯಿಂದ ಪ್ರಾಥಮಿಕ ಶಾಲೆಯ ಶಿಕ್ಷಕರಾಗಿ, ಗ್ರಾಮೀಣ ಪ್ರದೇಶಗಳಲ್ಲಿಯೇ ಸಾರ್ಥಕವಾದ ಸೇವೆಯನ್ನು ಸಲ್ಲಿಸುವುದರ ಜೊತೆಗೆ ಪ್ರವೃತ್ತಿಯಿಂದ ಸಾಹಿತಿಗಳಾಗಿ ಆಧುನಿಕ ಕನ್ನಡ ಸಾಹಿತ್ಯಕ್ಕೆ ಅನುಪಮವಾದ ಕೊಡುಗೆಯನ್ನು ನೀಡಿದವರಲ್ಲಿ ಸಿಂಪಿ ಲಿಂಗಣ್ಣ, ಮಿರ್ಜಿ ಅಣ್ಣರಾಯ ಮತ್ತು ಶಂಬಾ ಜೋಷಿ ಅವರು ಪ್ರಮುಖರಾಗಿದ್ದಾರೆ. ಇವರೆಲ್ಲ ಓದಿದ್ದು ತುಂಬಾ ಕಡಿಮೆ. ಆದರೆ ಸ್ವಪ್ರಯತ್ನದಿಂದ ಓದಿಕೊಂಡದ್ದು ಅಪಾರ. ಇವರ ಪರಂಪರೆಗೆ ಸೇರಬಹುದಾದ ಮತ್ತೊಂದು ಹೆಸರು ಬ. ಪ. ನಾಯ್ಕರ್ ಅವರು ನಮ್ಮ ನಡುವೆ ಇರುವ ಒಬ್ಬ ಅಪರೂಪದ ವ್ಯಕ್ತಿಯಾಗಿದ್ದಾರೆ. ವೃತ್ತಿಯಿಂದ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ನಿಷ್ಠೆ ಪ್ರಾಮಾಣಿಕತೆಯಿಂದ ಸೇವೆಯನ್ನು ಸಲ್ಲಿಸಿ ಈಗ ನಿವೃತ್ತ ಜೀವನವನ್ನು ಸಾಗಿಸುತ್ತಿರುವ ಇವರು ಪ್ರವೃತ್ತಿಯಿಂದ ಒಬ್ಬ ಉತ್ತಮ ಸಾಹಿತಿಗಳಾಗಿದ್ದಾರೆ. ಎಂಬತ್ತರ ಈ ಪ್ರಾಯದಲ್ಲಿಯೂ ಬರವಣಿಗೆಯಲ್ಲಿ ಕ್ರಿಯಾಶೀಲರಾಗಿ ತೊಡಗಿಕೊಂಡಿರುವ ಇವರು ಆಧುನಿಕ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಮೂವತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಒಂದೆರಡು ಕೃತಿಗಳನ್ನು ರಚಿಸಿದರೆ ಸಾಕು ಕೀರ್ತಿ ಸನ್ಮಾನಗಳಿಗೆ ಹಂಬಲಿಸುತ್ತಿರುವ ಇಂದಿನ ದಿನಮಾನಗಳಲ್ಲಿ ಇಷ್ಟೊಂದು ಕೃತಿಗಳನ್ನು ರಚಿಸಿದರೂ ಕೂಡ ಯಾವ ಕೀರ್ತಿ ಸನ್ಮಾನಗಳನ್ನು ಅಪೇಕ್ಷಿಸದೇ, ಪ್ರಚಾರವನ್ನು ಬಯಸದೇ ಒಂದು ರೀತಿಯ ನಿರ್ಲಿಪ್ತ. ಜೀವನವನ್ನು ಸಾಗಿಸುತ್ತಿದ್ದಾರೆ. ಮೂಲತಃ ಬಹು ಸಂಕೋಚ ಪ್ರವೃತ್ತಿಯವರಾದ ನಾಯ್ಕರ್

ಅವರು ಒಂದರ್ಥದಲ್ಲಿ "ತೊಲಗು ಕೀರ್ತಿಶನಿ" ಎಂಬ ಕುವೆಂಪು ಮನೋಧರ್ಮದವರು. ಆಧುನಿಕ ಸಾಹಿತ್ಯ ಸಂದರ್ಭದಲ್ಲಿ 'ಎಲೆಮರೆಯಕಾಯಿ'ಯಂತೆ ಬದುಕಿ ಬರೆದ ಬ. ಪ. ನಾಯ್ಕರ್ ಅವರ ಜೀವನ ಹಾಗೂ ಸಾಹಿತ್ಯ ಸಾಧನೆಯನ್ನು ಪರಿಚಯಿಸುವ ಕಿರು ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ.

**೧. ಜನನ-ಬಾಲ್ಯ-ಶಿಕ್ಷಣ-ಸೇವೆ**

ಬೆಳುವೊಲ ನಾಡಿನ ನವಲಗುಂದ ತಾಲೂಕಿನ ಸಾಸ್ವಿಹಳ್ಳಿ ಗ್ರಾಮವು ಬ. ಪ. ನಾಯ್ಕರ್ ಅವರು ಹುಟ್ಟಿದ ಊರು. ಅಲ್ಲಿಯ ಸಾಮಾನ್ಯ ಮಧ್ಯಮ ವರ್ಗದ ಕೃಷಿಕರಾದ ಶ್ರೀ ಪರಸಪ್ಪ ಶ್ರೀಮತಿ ರುಕ್ಮಿಣಿ ದಂಪತಿಗಳ ಚೊಚ್ಚಿಲ ಮಗನಾಗಿ ೧೯೩೦ ಮಾರ್ಚ್ ೫ ರಂದು ಜನಿಸಿದರು. ಜನಸಿದ ಮಗನಿಗೆ ದಂಪತಿಗಳು ಊರಿನ ಆರಾಧ್ಯದೈವವಾದ ಶ್ರೀ ಬಸವೇಶ್ವರನ ಹೆಸರನ್ನೇ ಇವರಿಗೆ (ಬಸಪ್ಪನೆಂದು) ಇಡುತ್ತಾರೆ. ಸ್ವಾತಂತ್ರ್ಯ ಪೂರ್ವದ ಆಂಗ್ಲರ ಆಡಳಿತ ಕಾಲದಲ್ಲಿ ನಮ್ಮ ದೇಶದಲ್ಲಿ ಶೈಕ್ಷಣಿಕ ಸೌಲಭ್ಯಗಳು ಅದರಲ್ಲಿಯೂ ಗ್ರಾಮೀಣ ಪ್ರದೇಶಗಳಲ್ಲಿ ತುಂಬಾ ಕಡಿಮೆ ಎಂದೇ ಹೇಳಬೇಕು. ಕೆಲವು ಹಳ್ಳಿಗಳಲ್ಲಿ ಕಿರಿಯ ಪ್ರಾಥಮಿಕ ಹಂತದವರೆಗೆ ಶಾಲೆಗಳಿದ್ದರೆ, ಇನ್ನು ಕೆಲವು ಹಳ್ಳಿಗಳಲ್ಲಿ ಶಾಲೆಗಳೇ ಇರುತ್ತಿರಲಿಲ್ಲ. ಆ ಕಾಲದಲ್ಲಿ ಗ್ರಾಮೀಣ ಜನರೂ ಈಗಿನಂತೆ ಸಿಕ್ಷಣಕ್ಕೆ ಅಷ್ಟೊಂದು ಪ್ರಾಮುಖ್ಯತೆಯನ್ನೂ ನೀಡುತ್ತಿರಲಿಲ್ಲ. ತಮ್ಮ ಮಕ್ಕಳು ಓದಿ ನೌಕರಿಯನ್ನು ಮಾಡುವುದಕ್ಕಿಂತಲೂ, ಅಕ್ಷರ ಜ್ಞಾನವನ್ನು ಪಡೆದುಕೊಂಡ ತಮ್ಮ ಮನೆತನದ ಉದ್ಯೋಗವನ್ನು ಮುಂದುವರಿಸಿಕೊಂಡು ಹೋದರೆ ಸಾಕು ಎಂದು ಭಾವಿಸುವವರೇ ಹೆಚ್ಚು, ಇದೇ ಆಶಯವನ್ನು ಶ್ರೀ. ಬ. ಪ. ನಾಯ್ಕರ್ ಅವರ ತಂದೆಯವರು ಹೊಂದಿದ್ದರು. ತಮ್ಮ ಮಗನು ತಮ್ಮ ಊರಿನಲ್ಲಿಯೇ ಇರುವ ಕೆಳಹಂತದ ಪ್ರಾಥಮಿಕ ಶಾಲೆಯಲ್ಲಿ (೫ನೇ ತರಗತಿವರೆಗೆ) ಓದಿ, ಮುಂದೆ ತಮ್ಮ ಮನೆತನದ ಉದ್ಯೋಗವಾದ ಒಕ್ಕಲುತನವನ್ನೇ ಮುಂದುವರಿಸಿಕೊಂಡು ಹೋದರೆ ಸಾಕು ಎಂದು ಭಾವಿಸಿದ್ದರು. ಆದರೆ ಬಾಲಕ ಬಸಪ್ಪನ ಜಾತನವನ್ನು ಗಮನಿಸಿದ ಪ್ರಥಮಿಕ ಶಾಲೆಯ ಗುರುಗಳು, ತಂದೆಯವರಾದ ಶ್ರೀ ಪರಸಪ್ಪನವರಿಗೆ "ನಿಮ್ಮ ಮಗನು ತುಂಬಾ ಜಾಣನಿದ್ದಾನೆ, ಅವನ ಓದನ್ನು ನಿಲ್ಲಿಸಬೇಡಿರೆಂದು" ಹೇಳಿದ್ದರಿಂದಲೂ, ಈ ಅವಧಿಯಲ್ಲಿಯೇ ಪರಸಪ್ಪನವರಿಗೆ ಮತ್ತೆ ಇಬ್ಬರು ಗಂಡು ಮಕ್ಕಳು ಹುಟ್ಟಿದ್ದರಿಂದಲೂ ಮಗನ ಮುಂದಿನ ಓದಿಗೆ ಏರ್ಪಾಟು ಮಾಡುತ್ತಾರೆ. ಸಾಸ್ವಿಹಳ್ಳಿಯ ನೆರೆಯ ಗ್ರಾಮವಾದ ಹಳ್ಳಿಕೇರಿ ಹಿರಿಯ ಪ್ರಾಥಮಿಕ ಶಾಲೆಗೆ ಮಗನ ಹೆಸರನ್ನು ಹಚ್ಚುತ್ತಾರೆ. ಮೂರು ಮೈಲು ದೂರದ ಗ್ರಾಮವಾದ ಹಳ್ಳಿಕೇರಿಗೆ ನಡೆದುಕೊಂಡು ಹೋಗಿ ಬರುತ್ತಿದ್ದರು. ಹೀಗೆ ಎರಡು ವರ್ಷ ಬುತ್ತಿಯನ್ನು ಕಟ್ಟಿಕೊಂಡು ಹೋಗಿ ಬಂದು, ನಿಷ್ಠೆಯಿಂದ ಅಭ್ಯಾಸ ಮಾಡಿ ಅಂದಿನ ಮುಲ್ಕಿ ಪರೀಕ್ಷೆಯಲ್ಲಿ ಶೇ. ೭೪% ರಷ್ಟು ಅಂಕಗಳನ್ನು ಪಡೆದುಕೊಂಡು ಉತ್ತೀರ್ಣರಾಗುತ್ತಾರೆ. ಆಗಿನ ಕಾಲದಲ್ಲಿ ಮುಲ್ಕಿ ಪರೀಕ್ಷೆಯಲ್ಲಿ ಪಾಸಾದವರಿಗೆ ತುಂಬ ಮರ್ಯಾದೆ ಇರುತ್ತಿತ್ತು. ಇನ್ನು ಈ ರೀತಿಯಲ್ಲಿ ಉನ್ನತದರ್ಜೆಯಲ್ಲಿ ಪಾಸಾದರೆ ಕೇಳಬೇಕೆ? ಬಾಲಕ ಬಸಪ್ಪನವರು ಹೀಗೆ ಉನ್ನತ ದರ್ಜೆಯಲ್ಲಿ ಉತ್ತೀರ್ಣನಾದರೂ ಕೂಡ ಅವರ ತಂದೆಯವರು ಮುಂದಿನ ಓದಿನ ಬಗ್ಗೆ ವಿಚಾರಿಸದೇ ಓದು ಸಾಕು ಒಕ್ಕಲುತನವನ್ನು ಮುಂದುವರಿಸಿಕೊಂಡು ಹೋಗಲಿ ಎಂದು ತೀರ್ಮಾನಿಸಿದ್ದರು. ಆದರೆ ಬಸಪ್ಪನವರ ಅದೃಷ್ಟವೋ ಏನೋ ಅದೇ ಸಮಯಕ್ಕೆ ಸಾಸ್ವಿಹಳ್ಳಿಯವರೇ ಆಗಿರುವ, ಗದುಗಿನಲ್ಲಿ ನೆಲೆಸಿದ್ದ ನಿವೃತ್ತ ಶಿಕ್ಷಕರೊಬ್ಬರು ಊರಿಗೆ ಬಂದಿದ್ದರು. ಯೋಗ ಕ್ಷೇಮವನ್ನು ವಿಚಾರಿಸುವುದಕ್ಕೆ ಪರಸಪ್ಪನವರ ಮನೆಗೂ ಬಂದರು. ಮಾತನಾಡುತ್ತಿರುವಾಗ ಅಲ್ಲಿಯೇ ಇದ್ದ ಬಾಲಕ ಬಸಪ್ಪನ ಬಗ್ಗೆ ಕೇಳಿದರು. ಅವನು ಉನ್ನತ ದರ್ಜೆಯಲ್ಲಿ ಮುಲ್ಕಿ ಪರೀಕ್ಷೆಯನ್ನು ಪಾಸು ಮಾಡಿರುವುದನ್ನು, ಅವನ ಓದನ್ನು ನಿಲ್ಲಿಸಿ ಕಮತಕ್ಕೆ ಹಚ್ಚಿರುವುದನ್ನು ಕೇಳಿ "ಛೇ! ಎಂಥ ಕೆಲಸ ಮಾಡಿದ್ದೀರಿ? ಇಂಥ ಬುದ್ಧಿವಂತ ಮಗನನ್ನು ಓದಿಸುವುದು ಬಿಟ್ಟು ಕಮತಕ್ಕೆ ಹಚ್ಚಿರುವುದು ಸರಿಯಲ್ಲವೆಂದು ತಂದೆಯವರಿಗೆ ಬುದ್ಧಿವಾದವನ್ನು ಹೇಳಿ, ಅಂದೇ ತಮ್ಮ ಜೊತೆಗೆ ಬಸಪ್ಪನವರನ್ನು ಗದುಗಿಗೆ ಕರೆದುಕೊಂಡು ಹೋಗುತ್ತಾರೆ. ಅದೇ ವರ್ಷ ಕೆ.ಎಲ್.ಇ. ಸಂಸ್ಥೆಯವರು ಗದುಗಿನಲ್ಲಿ ಪ್ರಾರಂಭಿಸಿದ ಶಿಕ್ಷಕರ ಕಾಲೇಜ್ (ಟಿ.ಸಿ.ಹೆಚ್)ನಲ್ಲಿ ಇವರನ್ನು ಸೇರಿಸಿ, ಮುಂದಿನ ಓದಿಗೆ ಅನುಕೂಲ ಮಾಡಿಕೊಟ್ಟರು. ಒಂದು ವರ್ಷ ಮಾತ್ರ ಗದುಗಿನಲ್ಲಿದ್ದ ಆ ಕಾಲೇಜು ಯಾವುದೋ ಕಾರಣಕ್ಕೆ ಹುಬ್ಬಳ್ಳಿಗೆ ಸ್ಥಳಾಂತರಗೊಂಡಿತು. ಆಗ ಬಸಪ್ಪನವರು ಕೂಡ ಅನಿವಾರ್ಯವಾಗಿ ಹುಬ್ಬಳ್ಳಿಗೆ ಬಂದು ಎರಡನೇ ವರ್ಷದ ಓದನ್ನು ಮುಂದುವರಿಸಿದರು. ಶಿಕ್ಷಕ ತರಬೇತಿ (ಟಿ.ಸಿ.ಹೆಚ್)ಯಲ್ಲಿಯೂ ಪ್ರತಿಶತ ೮೦% ಅಂಕ ಗಳಿಸಿ ಉತ್ತೀರ್ಣರಾಗಿ (೧೯೪೯)ರಲ್ಲಿ ಆ ಕಾಲೇಜಿನ ಪ್ರಾಚಾರ್ಯರಾದ ಎಸ್. ಬಿ. ಹಂಚಿನಾಳ ಅವರಿಂದ 'ಶಹಬ್ಬಾಸಿಗಿರಿ'ಯನ್ನು ಪಡೆದರು.

ಹೀಗೆ ಉನ್ನತ ಶೈಕ್ಷಣಿಕ ಅರ್ಹತೆಯನ್ನು ಹೊಂದಿದ ನಾಯ್ಕರ್ ಅವರು 'ಕಲಿತವನು ಖಾಲಿ ಕೂಡುವುದು ಏಕೆ? ಎಂದು ಮನೆಯವರಿಂದ ಅನುಮತಿಯನ್ನು ಪಡೆದು ಪ್ರಾಥಮಿಕ ಶಾಲಾ ಶಿಕ್ಷಕರಾಗಿ ನೇಮಕಹೊಂದಿ ೧೯೫೦ರಲ್ಲಿ ವೃತ್ತಿ ಜೀವನವನ್ನು ಆರಂಭಿಸಿದರು. ಶಿಕ್ಷಕರಾಗಿ ತಮ್ಮ ತಾಲೂಕಿನಲ್ಲಿ (ನವಲಗುಂದ)ಯೇ ವೃತ್ತಿ ಜೀವನವನ್ನು ಆರಂಭಿಸಿದ್ದ ಇವರಿಗೆ ಅಂದಿನ ಸ್ಕೂಲ್ ಬೋರ್ಡಿನ ಆಡಳಿತಾಧಿಕಾರಿಗಳು ಹಾವೇರಿ ತಾಲೂಕಿನ ಕಬ್ಬೂರು ಗ್ರಾಮಕ್ಕೆ ವರ್ಗ ಮಾಡಿದರು. (೧೯೫೨). ಮೇಲಾಧಿಕಾರಿಗಳು ನನ್ನನ್ನು ಹಾವೇರಿ ತಾಲೂಕಿನ ಕಬ್ಬೂರು ಗ್ರಾಮಕ್ಕೆ ವರ್ಗ ಮಾಡಿದರು (೧೯೫೨). ಮೇಲಾಧಿಕಾರಿಗಳು ನನ್ನನ್ನು ಹಾವೇರಿ ತಾಲೂಕಿನ ಕಬ್ಬೂರಿಗೆ ವರ್ಗಮಾಡಿರುವುದು ನನ್ನ ವೃತ್ತಿ ಜೀವನದ ಸಾಹಿತ್ಯಕ ಜೀವನದ ಬಹುದೊಡ್ಡ ತಿರುವುಗಳಲ್ಲಿ ಒಂದು ಎಂದು ನಾಯ್ಕರ್ ಅವರು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಬಯಲು ಸೀಮೆಯ ಪ್ರದೇಶದಲ್ಲಿ ಬೆಳೆದ ನಾಯ್ಕರ್ ಅವರ ಮೇಲೆ ಮಲೆನಾಡಿನ ಸೆರಗಿನಲ್ಲಿರುವ ಕಬ್ಬೂರಿನ ಪರಿಸರವು ಗಾಢವಾದ ಪ್ರಭಾವವನ್ನು ಬೀರುತ್ತದೆ. ಆ ಕಾಲದಲ್ಲಿ ಗ್ರಾಮೀಣ ಪ್ರದೇಶದ ಶಾಲೆಗಳಲ್ಲಿ ಸೌಲಭ್ಯಗಳ ಕೊರತೆ ತುಂಬಾ ಇದ್ದವು. ಎಷ್ಟೋ ಗ್ರಾಮೀಣ ಶಾಲೆಗಳಿಗೆ ಸ್ವಂತ ಕಟ್ಟಡಗಳೇ ಇರಲಿಲ್ಲ. ಹೀಗಾಗಿ ಶಾಲೆಗಳು ಸಾಮಾನ್ಯವಾಗಿ ನಡೆಯುತ್ತಿದ್ದುದು ಗುಡಿ ಗುಂಡಾರಗಳಲ್ಲಿ. ಅದೇ ರೀತಿ ಇವರ ವರ್ಗವು ನಡೆಯುತ್ತಿದ್ದುದು ಆ ಊರಿನ ಮಾರುತಿ ದೇವಸ್ಥಾನದಲ್ಲಿ. ಅಂದಿನ ಪ್ರಾಥಮಿಕ ಶಿಕ್ಷಣದಲ್ಲಿ ಕಡ್ಡಾಯವಾಗಿ ರಾಷ್ಟ್ರಗೀತೆ ಮತ್ತು ಪ್ರಾರ್ಥನೆಗಳನ್ನು ಹಾಡಿಬೇಕಾಗಿತ್ತು. ಅದಕ್ಕಾಗಿ ನಾಯ್ಕರ್ ಅವರೇ "ದೇವ ಮಾರುತಿ ಭಾಗ್ಯವಿಧಾತ ಭಾವ ಭಾಗ್ಯನಿಧಿ ಭಕ್ತರ ಪೂರಿತ" ಎಂಬ ಪ್ರಾರ್ಥನಾ ಗೀತೆಯನ್ನು ರಚಿಸಿ ಅದನ್ನು ರಾಗಬದ್ಧವಾಗಿ ಹಾಡುವುದನ್ನು ಮಕ್ಕಳಿಗೆ ಕಲಿಸುತ್ತಿರುತ್ತಾರೆ. ಅದೇ ಸಮಯಕ್ಕೆ ಶಾಲೆಯ ಮುಖ್ಯೋಪಾಧ್ಯಾರಾದ ಎಸ್. ಎಂ. ಲಕ್ಕಣ್ಣನವರ ಅವರು ಬಂದು, ಇದನ್ನು ಹೊರಗಡೆ ನಿಂತು ಕೇಳುತ್ತಾರೆ. ನಂತರ ಅವರು ಒಳಗಡೆಗೆ ಬಂದು ಯಾರು ರಚಿಸಿದ ಗೀತೆ? ಇದು ಎಷ್ಟು ಚೆನ್ನಾಗಿದೆ? ಎಂದು ಕೇಳುತ್ತಾರೆ. ಆಗ ನಾಯ್ಕರ್ ಅವರು ಸಂಕೋಚದಿಂದಲೇ ನಾನೇ ರಚಿಸಿದ್ದು ಎಂದು ಹೇಳುತ್ತಾರೆ. ಈ ಮಾತನ್ನು ಕೇಳಿದ ಮುಖ್ಯೋಪಾಧ್ಯಾಯರು ನಿಮ್ಮಲ್ಲಿ ಉತ್ತಮವಾದ ಕವಿತ್ವ ಶಕ್ತಿಯಿದೆ. ನೀವು ಒಂದು ನಾಟಕವನ್ನು ಬರೆಯಿರಿ. ಅದನ್ನು ಮಕ್ಕಳಿಗೆ ಆಡಿಸೋಣ ಎಂದು ಹೇಳುತ್ತಾರೆ. ಅವರ ಪ್ರೋತ್ಸಾಹದ ಮಾತುಗಳನ್ನೇ ಆಶೀರ್ವಾದವೆಂದು ಭಾವಿಸಿ 'ಪ್ರಾಣಾರ್ಪಣ'ವೆಂಬ ಐತಿಹಾಸಿಕ ನಾಟಕವನ್ನು ರಚಿಸುತ್ತಾರೆ. ಅದನ್ನು ಶಾಲೆಯ ವಾರ್ಷಿಕೋತ್ಸವದಲ್ಲಿ ಮಕ್ಕಳಿಗೆ ಆಡಿಸಿ, ಊರಿನ ಜನರಿಂದ ಮೆಚ್ಚುಗೆಯನ್ನು ಪಡೆಯುತ್ತಾರೆ. ಹೀಗೆ ಶಿಕ್ಷಕ ವೃತ್ತಿಯ ಜೊತೆಗೆ ಸಾಹಿತ್ಯಕ ಬದುಕನ್ನು ಆರಂಭಿಸುತ್ತಾರೆ.

ಇದೇ ಸಮಯದಲ್ಲಿ ಅವರಿಗೆ ನವಲಗುಂದ ತಾಲೂಕಿನ ಅಣ್ಣಿಗೇರಿಯಲ್ಲಿ ಗ್ರಾಮದ ಶಾಲೆಗೆ ವರ್ಗವಾಗುತ್ತದೆ (೧೯೫೭). ಕಲಾವಿದರ ಊರಾದ ಅಣ್ಣಿಗೇರಿಯಲ್ಲಿ ಇವರೊಬ್ಬ ಬರಹಗಾರರೆಂದು ತಿಳಿದು ಇವರಿಂದ ನಾಟಕಗಳನ್ನು ಬರೆಯಿಸಿ ಅಲ್ಲಿಯ ಕಲಾ ತಂಡದವರು ಅವುಗಳನ್ನು ಅಭಿನಯಿಸಿ ಇವರೊಬ್ಬ ಶ್ರೇಷ್ಠ ನಾಟಕಕಾರರೆಂದು ಹೆಸರು ಬರಲು ಕಾರಣರಾಗುತ್ತಾರೆ. ಮುಂದೆ ತಿರ್ಲಾಪುರ (೧೯೬೧-೬೫) ಭದ್ರಾಪುರ (೧೯೬೯-೭೦) ಅಣ್ಣಿಗೇರಿ (೧೯೭೧-೭೮) ಗ್ರಾಮಗಳಲ್ಲಿ ಸೇವೆಯನ್ನು ಸಲ್ಲಿಸಿ ತಮ್ಮ ಮಕ್ಕಳ ಶಿಕ್ಷಣದ ಸಲುವಾಗಿ ತಾವೇ ವರ್ಗವನ್ನು ಬಯಸಿ ಹುಬ್ಬಳ್ಳಿಯ ಶಾಲೆಯೊಂದಕ್ಕೆ ಪ್ರಧಾನ ಗುರುಗಳಾಗಿ ಬರುತ್ತಾರೆ. ಈ ಅವಧಿಯಲ್ಲಿ ಧಾರವಾಡದಲ್ಲಿ ಮನೆಯನ್ನು ಮಾಡಿದ ನಾಯ್ಕರ್ ಅವರು ಧಾರವಾಡದಿಂದ ಹುಬ್ಬಳ್ಳಿಗೆ ಹತ್ತು ವರ್ಷಗಳ ಕಾಲ ಅಡ್ಡಾಡಿಯೇ ಸೇವೆಯನ್ನು ಸಲ್ಲಿಸಿ ೧೯೮೮ನೆಯ ಏಪ್ರಿಲ್ ತಿಂಗಳಲ್ಲಿ ಶಿಕ್ಷಕ ವೃತ್ತಿಯಿಂದ ನಿವೃತ್ತಿಯನ್ನು ಹೊಂದಿದರು. ಹೀಗೆ ನಿರಂತರ ಮೂವತ್ತು ವರ್ಷಗಳ ಕಾಲ ಸಾರ್ಥಕ ಸೇವೆಯನ್ನು ಸಲ್ಲಿಸಿ, ಧಾರವಾಡದ ಶಕ್ತಿನಗರದ ತಮ್ಮ ಮನೆಯಲ್ಲಿ ಮಕ್ಕಳು ಮೊಮ್ಮಕ್ಕಳೊಂದಿಗೆ ನಿವೃತ್ತ ಜೀವನವನ್ನು ಸಾಗಿಸುತ್ತಲಿದ್ದಾರೆ.

**ಸಾಹಿತ್ಯ ಸಾಧನೆ**

ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಎರಡು ಮೂರು ದಶಕಗಳ ಕಾಲದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಶಿಸ್ತು, ಆದರ್ಶಗಳಿಗೆ ಪ್ರಾಮುಖ್ಯತೆ ಇತ್ತು. ಆ ಕಾಲದ ಪ್ರಾಥಮಿಕ ಶಾಲಾ ಶಿಕ್ಷಕರು ಕೇವಲ ಮುಲ್ಕಿ ಪರೀಕ್ಷೆಯವರಾಗಿದ್ದರು ಕೂಡ ಅವರ ಜ್ಞಾನ ತುಂಬ ಉನ್ನತ ಮಟ್ಟದ್ದಾಗಿರುತ್ತಿತ್ತು. ನಾಯ್ಕರ್ ಅವರು ಶಿಕ್ಷಕ ತರಬೇತಿಯನ್ನು ಮುಗಿಸಿ ಶಿಕ್ಷಕರಾಗಿ ನೇಮಕಗೊಂಡು ಹಾವೇರಿ ತಾಲೂಕಿನ ಕಬ್ಬೂರು ಗ್ರಾಮದ ಶಾಲೆಗೆ ಬರುತ್ತಾರೆ. ಬಯಲು ಸೀಮೆಯಿಂದ ಬಂದ ಇವರ ಮೇಲೆ ಮಲೆನಾಡಿನ ಸೆರಗಿನಲ್ಲಿರುವ ಈ ಊರಿನ ಪರಿಸರ ತುಂಬಾ ಪ್ರಭಾವ ಬೀರುತ್ತದೆ. ಇನ್ನೂ ಅವಿವಾಹಿತರಾಗಿದ್ದ ನಾಯ್ಕರ್ ಅವರು ಶಾಲಾ ಅವಧಿಯ ನಂತರ ಸಮಯವನ್ನು

ಕಳೆಯುವುದಕ್ಕೆ ಪ್ರಾಚೀನ ಕವಿಗಳಾದ ಪಂಪ, ರನ್ನ, ಕುಮಾರವ್ಯಾಸ, ಲಕ್ಷ್ಮೀಶ, ದುರ್ಗಸಿಂಹ ಮುಂತಾದವರ ಕೃತಿಗಳನ್ನು ನಿಷ್ಠೆಯಿಂದ ಓದುತ್ತಾರೆ. ಅಲ್ಲದೆ ಆ ಕಾಲದ ನವೋದಯದ ಪ್ರಸಿದ್ಧ ಕವಿಗಳಾದ ಕೆ. ವಿ. ಪುಟ್ಟಪ್ಪ, ಮಧುರಚೆನ್ನ, ದ. ರಾ. ಬೇಂದ್ರೆ, ಆನಂದಕಂದ, ಶಿವರಾಮ ಕಾರಂತ, ಅ.ನ.ಕೃ. ಮತ್ತು ತ. ರಾ. ಸು. ಮುಂತಾದವರ ಕಾಯ ಕಾದಂಬರಿಗಳನ್ನು ಆಸಕ್ತಿಯಿಂದ ಓದುತ್ತಾರೆ. ಹೀಗೆ ನಾಯ್ಕರ್ ಅವರು ಶೈಕ್ಷಣಿಕವಾಗಿ ಓದಿದ್ದು ಕಡಿಮೆಯಾದರೂ ಸ್ವಪ್ರಯತ್ನದಿಂದ ಓದಿಕೊಂಡದ್ದೇ ಹೆಚ್ಚು. ಹೀಗೆ ಹಳೆಯ ಹೊಸಕವಿಗಳ ಸಾಹಿತ್ಯವನ್ನು ಅದರಿಂದ ಓದಿ ಸ್ಫೂರ್ತಿಯನ್ನು ಪಡೆದು ಸಾಹಿತ್ಯ ರಚನೆಗೆ ತೊಡಗುತ್ತಾರೆ. ಆ ಸಮಯದಲ್ಲಿ ನಮ್ಮ ನಾಡಿನಲ್ಲಿ ಏಕೀಕರಣ ಚಳವಳಿಯು ಭರದಿಂದ ನಡೆಯುತ್ತಿರುವಾಗ ಅದರಿಂದ ಸ್ಫೂರ್ತಿಗೊಂಡು ಬರೆದ 'ನಾವೆರಡು ಕೋಟಿ' ಎಂಬ ಕವನವು ನವನಾಡು ಪತ್ರಿಕೆಯಲ್ಲಿ ಪ್ರಕಟವಾಗುತ್ತದೆ. ಆ ಕವನವನ್ನು ನೋಡಿ ಮಾನ್ಯ ಚೆ. ರು. ನೇಶ್ವಿ ಅವರು ಮೆಚ್ಚಿಕೊಂಡು ಬರೆದ ಪತ್ರವು ಇವರು ಉತ್ಸಾಹದಿಂದ ಬರೆಯುವುದಕ್ಕೆ ಕಾರಣವಾಯಿತು. ಈ ಅವಧಿಯಲ್ಲಿ ಇವರಿಗೆ ಅಣ್ಣಿಗೇರಿ ಶಾಲೆಗೆ ವರ್ಗವಾಗುತ್ತದೆ (೧೯೫೭). ಅಣ್ಣಿಗೇರಿ ಪರಿಸರವು ಸಾಹಿತಿಗಳ ಕಲಾವಿದರ ಊರಾಗಿರುವುದರಿಂದ ಇವರ ಸಾಹಿತ್ಯಕ ಚಟುವಟಿಕೆಗಳಿಗೆ ಇಲ್ಲಿ ಮತ್ತಷ್ಟು ಪ್ರೋತ್ಸಾಹ ಸಿಗುತ್ತದೆ. ಇವರು ಒಬ್ಬ ಸಾಹಿತಿಗಳು ಎಂದು ಗೊತ್ತಾದಾಗ ಅಲ್ಲಿಯ ನಾಟಕಾಸಕ್ತಿಯುಳ್ಳ ಜನರು ನಾಟಕವನ್ನು ಬರೆದುಕೊಡುವುದಕ್ಕೆ ಒತ್ತಾಯಿಸುತ್ತಿದ್ದರಂತೆ.

ಅವರ ಕೋರಿಕೆಯಂತೆ ಇವರು ಬರೆದ 'ಕುಟುಂಬ' ಸಾಮಾಜಿಕ ನಾಟಕವನ್ನು ಶ್ರೀ ಅಮೃತೇಶ್ವರ ನಾಟ್ಯ ಸಂಘದವರು, 'ಮಂಗಲಾಕ್ಷತೆ' ಎಂಬ ಸಾಮಾಜಿಕ ನಾಟಕವನ್ನು ಪತ್ರೇಶ್ವರ ಕೈಲಾಸ ಮಂದಿರದ ಕಲಾವಿದರು ಹಲವಾರು ಪ್ರಯೋಗಗಳನ್ನು ಮಾಡಿದಾಗ, ಇವರೊಬ್ಬ ಉತ್ತಮ ನಾಟಕಕಾರರು ಎಂದು ಹೆಸರು ಗಳಿಸಿಕೊಟ್ಟವು. ಇವರ ಜನಪ್ರಿಯತೆಯನ್ನು ಗಮನಿಸಿದ ಗೆಳೆಯ ಬಸಯ್ಯ ರಾಟೀಮನಿ ಅವರು ನಮಗೂ ಒಂದು ನಾಟಕವನ್ನು ಬರೆದುಕೊಡಿ. ಅದನ್ನು ನಮ್ಮೂರಿನಲ್ಲಿ (ಸಾಸ್ವಿಹಳ್ಳಿ) ಆಡುತ್ತೇವೆ ಎಂದು ಕೇಳಿಕೊಂಡರು. ಅವರ ಕೋರಿಕೆಯಂತೆ 'ಮಿತ್ರದ್ರೋಹ' ಎಂಬ ಸಾಮಾಜಿಕ ನಾಟಕವನ್ನು ಬರೆದುಕೊಟ್ಟರು. ಅದನ್ನು ಅವರ ಹುಟ್ಟೂರಾದ ಸಾಸ್ವಿಹಳ್ಳಿಯಲ್ಲಿ ಪ್ರಯೋಗಿಸಿದರು. ಈ ನಾಟಕಗಳ ಕಲಾವಿದರು ಅವುಗಳನ್ನು ಯಶಸ್ವಿಯಾಗಿ ಪ್ರಯೋಗಗೊಳಿಸಿರುವುದಲ್ಲದೆ, ನಾಟಕಗಳು ಮುದ್ರಣಗೊಳ್ಳುವುದಕ್ಕೂ ಕಾರಣ ಕರ್ತೃಗಳಾದರು. ಶಾಲಾ ಶಿಕ್ಷಕ ಬಳಗದವರು ನೀವು ಏಕಾಂಕ ನಾಟಕಗಳನ್ನು ಬರೆಯಿರಿ. ನಮ್ಮ ಶಾಲೆಯ ವಾರ್ಷಿಕೋತ್ಸವಗಳಲ್ಲಿ ಮಕ್ಕಳಿಂದ ಆಡಿಸುತ್ತೇವೆ ಎಂದು ಒತ್ತಾಯಿಸುತ್ತಿದ್ದರು. ಅವರ ಪ್ರೀತಿಯ ಒತ್ತಾಯಕ್ಕೆ ಮಣಿದು ರಚಿಸಿದ 'ವಿಜಯಲಕ್ಷ್ಮಿ' ಎಂಬ ನಾಟಕವನ್ನು ಕನ್ನಡ ಗಂಡುಮಕ್ಕಳ ಶಾಲೆಯವರು, 'ಝಾನ್ಸಿರಾಣಿ' ಎಂಬ ನಾಟಕವನ್ನು ಕನ್ನಡ ಹೆಣ್ಣುಮಕ್ಕಳ ಶಾಲೆಯ ಗುರುಮಾತೆಯರು ಮಕ್ಕಳಿಂದ ಪ್ರಯೋಗ ಮಾಡಿಸಿ, ಇವರ ಕೀರ್ತಿ ಹೆಚ್ಚಲು ಕಾರಣರಾದರು. ಈ ಏಕಾಂಕ ನಾಟಕಗಳು, ಪ್ರಕಟವಾಗುವುದಕ್ಕೆ ಮೊದಲೇ ನಾಯ್ಕರ್ ಅವರೇ 'ಗದ್ಯಗೀತೆ'ಯಲ್ಲಿ ಬರೆದ 'ಭಕ್ತಜ್ಯೋತಿ' ಎಂಬ ಏಕಾಂಕ ನಾಟಕವನ್ನು ಗೆಳೆಯರ ಒತ್ತಾಯಕ್ಕೆ ಮಣಿದು ಮುದ್ರಣಕ್ಕೆ ಕೊಡುತ್ತಾರೆ. ಆ ಸಂದರ್ಭದಲ್ಲಿಯೇ ಈ ಕೃತಿಯ ಸಾಹಿತ್ಯದ ಹೆಣಿಗೆಯನ್ನು ಕಂಡು ಮೆಚ್ಚಿಕೊಂಡ ಖ್ಯಾತ ಸಾಹಿತಿ ಎಂ. ಜೀವನ್ ಅವರ ಪರಿಚಯವಾಗುತ್ತದೆ. ಜೀವನ್ ಅವರೇ ಇವರು ಬರೆದ 'ಸತ್ವ ಪರೀಕ್ಷೆ' ಎಂಬ ನಾಟಕಕ್ಕೆ ಮುನ್ನುಡಿಯನ್ನು ಬರೆಯುತ್ತ ಅವರೇನು ಬರೆಯುತ್ತಾರೆ ಕನ್ನಡ ಶಾಲೆಯ ಮಾಸ್ತರರು ಎಂದು ಮೂಗು ಮುರಿಯುವವರು ಅವರು ಬರೆದ 'ಭಕ್ತ ಜ್ಯೋತಿ' ನಾಟಕವನ್ನು ಓದಲಿ ಅಂದರೆ ನಾಯ್ಕರ್ ಅವರ ಸಾಹಿತ್ಯದ ಆಳದ ತಿಳಿಯುತ್ತದೆ ಎಂದು ಇವರ ಸಾಹಿತ್ಯದ ಸತ್ವವನ್ನು ಗುರುತಿಸುತ್ತಾರೆ. ಈ ಮಧ್ಯ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರಾಗಿದ್ದ ಆರ್. ಸಿ. ಹಿರೇಮಠರ ಪರಿಚಯವಾಗುತ್ತದೆ. ನಾಯ್ಕರ್ ಅವರ ಪ್ರಥಮ ಕವನ ಸಂಕಲನ 'ಚಂದ್ರೋದಯ'ಕ್ಕೆ ಡಾ. ಆರ್. ಸಿ. ಹಿರೇಮಠ ಅವರೇ ಮುನ್ನುಡಿ ರೂಪದ ಮೆಚ್ಚುಗೆಯ ಮಾತುಗಳನ್ನು ಬರೆದು ಶುಭ ಹಾರೈಸಿರುವುದು ಇವರ ವಿಶೇಷವೆಂದೇ ಹೇಳಬೇಕು. ಇದೇ ಅವಧಿಯಲ್ಲಿ ಇವರಿಗೆ ನವಲಗುಂದ ತಾಲೂಕಿನ ತಿರ್ಲಾಪುರ ಗ್ರಾಮದ ಶಾಲೆಗೆ ವರ್ಗವಾಗುತ್ತದೆ. ಸರಳ ಸ್ವಭಾವದವರು ಸಾಹಿತಿಗಳು ಆದ ನಾಯ್ಕರ್ ಅವರು ಆ ಊರಿನಲ್ಲಿಯೂ ಎಲ್ಲರಿಗೂ ಬೇಕಾದ ವ್ಯಕ್ತಿಯಾಗುತ್ತಾರೆ. ತಿರ್ಲಾಪುರ ಗ್ರಾಮದವರೆ ಕಟ್ಟಿದ ಮಲ್ಲಿಕಾರ್ಜುನ ನಾಟಕ ಕಂಪನಿಗೆ 'ಜೀವನಗಂಗಾ' ಮತ್ತು 'ಅಕ್ಷತಾಯೋಗ' ಎಂಬ ಎರಡು ಸಾಮಾಜಿಕ ನಾಟಕಗಳನ್ನು ಬರೆದುಕೊಡುತ್ತಾರೆ. ಮಲ್ಲಿಕಾರ್ಜುನ ನಾಟಕ ಕಂಪನಿಯ ಮೂಲಕ ಆ ಭಾಗದ ವಿವಿಧ ಪಟ್ಟಣಗಳಲ್ಲಿ ಇವರ ನಾಟಕಗಳು ಪ್ರಯೋಗಗೊಂಡು ಇವರೊಬ್ಬ ಶ್ರೇಷ್ಠ ವೃತ್ತಿ ನಾಟಕ ರಚನಾಕಾರರು ಎಂಬ ಹೆಸರನ್ನು ಗಳಿಸಿಕೊಟ್ಟಿತು. ಅಲ್ಲದೇ ಉತ್ತರ ಕರ್ನಾಟಕದಲ್ಲಿ ಶ್ರೇಷ್ಠ ನಾಟಕಕಾರರೆಂದು ಪ್ರಸಿದ್ಧರಾಗಿದ್ದ ಹೆಚ್. ಎನ್. ಹೂಗಾರ, ಬಾಬುಮಾಂಡ್ರೆ, ಸಾಳುಂಕೆ, ದುತ್ತರಗಿ ಮತ್ತು ಪೂಜ್ಯ ನಲವಡಿ ಶ್ರೀಕಂಠಶಾಸ್ತ್ರಿಗಳ

ಪರಿಚಯವಾಗಲೂ ಕಾರಣವಾಯಿತು. ಮುಂದೆ ತಮ್ಮ ಮಕ್ಕಳ ಶಿಕ್ಷಣಕ್ಕೋಸ್ಕರವಾಗಿ ಹುಬ್ಬಳ್ಳಿಗೆ ವರ್ಗ ಮಾಡಿಸಿಕೊಂಡು ಧಾರವಾಡದಲ್ಲಿ ಮನೆಯನ್ನು ಮಾಡುತ್ತಾರೆ. ಧಾರವಾಡದ ಸಾಹಿತ್ಯಕ ಪರಿಸರದಲ್ಲಿ ಶಿಕ್ಷಕರ ಸಾಹಿತ್ಯ ವೇದಿಕೆಯನ್ನು ಹುಟ್ಟು ಹಾಕಿಕೊಂಡು ಅದರ ಅಧ್ಯಕ್ಷರಾಗಿ ಶಿಕ್ಷಕ ಸಾಹಿತಿಗಳಾದ ಎಂ. ಡಿ. ಗೋಗೇರಿ, ರಾಮಚಂದ್ರ ಪಾಟೀಲ, ನಿಂಗಣ್ಣ ಕುಂಟಿ, ಸುದರ್ಶನ ದೇಸಾಯಿ ಮುಂತಾದ ಗೆಳೆಯರ ಸಹಾಯದಿಂದ ವೇದಿಕೆಯಿಂದ ಹಲವಾರು ಕೃತಿಗಳನ್ನು ಪ್ರಕಟಿಸಿದ ಶ್ರೇಯಸ್ಸು ಇವರಿಗೆ ಸಲ್ಲುತ್ತದೆ. ಹೀಗೆ ಶಾಲಾ ಶಿಕ್ಷಕರಾಗಿ ರಚಿಸಿದ್ದಾರೆ. ಇವರ ಸಮಗ್ರ ಸಾಹಿತ್ಯವನ್ನು ೧. ಕಾವ್ಯ ೨. ಸಣ್ಣ ಕತೆ ೩. ನಾಟಕ ೪. ಕಾದಂಬರಿ ಮತ್ತು ೫. ಇತರ ಕೃತಿಗಳೆಂದು ವಿಂಗಡಿಸಿಕೊಂಡು ಅವುಗಳ ಸಂಕಿಪ್ತ ಪರಿಚಯವನ್ನು ಇಲ್ಲಿ ಮಾಡಲಾಗಿದೆ.

**ಕಾವ್ಯ**

ಸ್ವಾತಂತ್ರ್ಯ ಪೂರ್ವಕಾಲದ ಸ್ವಾತಂತ್ರ್ಯೋತ್ತರ ಒಂದೂವರೆ ದಶಕದ ಕಾಲವನ್ನು ನವೋದಯ ಸಾಹಿತ್ಯದ ಸತ್ವ ಪೂರ್ಣವಾದ ಘಟ್ಟವೆಂದು ಕರೆಯಬಹುದು. ನಿಸರ್ಗ-ರಮ್ಯತೆ, ಪ್ರೇಮ-ಪ್ರೀತಿ, ಸಾಮಾಜಿಕ ಚಿಂತನೆ, ಆಧ್ಯಾತ್ಮಿಕತೆ ಮತ್ತು ನಾಡುನುಡಿ, ದೇಶಪ್ರೇಮಗಳಂತಹ ಆದರ್ಶ ಮೌಲ್ಯಗಳಿಂದ ಕೂಡಿದ ಕನ್ನಡ ನವೋದಯ ಕಾವ್ಯ ಆ ಕಾಲದ ಕನ್ನಡಿಗರ ಮೇಲೆ ಬಹುವಾದ ಪ್ರಭಾವವನ್ನು ಬೀರಿತ್ತು ಎಂದು ಹೇಳಿದರೆ ತಪ್ಪಾಗಲಾರದು. ಈ ಸಂದರ್ಭದಲ್ಲಿಯೇ (೧೯೫೦) ಬರವಣಿಗೆಗೆ ತೊಡಗಿರುವ ಬ. ಪ. ನಾಯ್ಕರ್ ಅವರ ಮೇಲೆ ನವೋದಯ ಸಾಹಿತ್ಯದ ಪ್ರಭಾವ ಆಗಿರುವುದನ್ನು ಸಹಜವಾಗಿಯೇ ಗುರುತಿಸಬಹುದಾಗಿದೆ. ನವೋದಯದ ಶ್ರೇಷ್ಠ ಕವಿಗಳಾದ ಕೆ. ವಿ. ಪುಟ್ಟಪ್ಪ, ಅಂಬಿಕಾತನಯದತ್ತ, ಮಧುರಚೆನ್ನ, ಆನಂದಕಂದ, ಕೆ. ಎಸ್. ನರಸಿಂಹಸ್ವಾಮಿ ಮುಂತಾದವರ ಕವಿತೆಗಳನ್ನು ಪ್ರೀತಿಯಿಂದ ಓದಿಕೊಂಡು ಅದರಿಂದ ಸ್ಫೂರ್ತಿಯನ್ನು ಪಡೆದುಕೊಂಡು ಅದೇ ಮಾದರಿಗಳಲ್ಲಿ ತಾವು ಕವಿತೆಗಳನ್ನು ಬರೆದು ನಾಡಿನ ಬೇರೆ ಬೇರೆ ಪತ್ರಿಕೆಗಳಿಗೆ ಕಳುಹಿಸುತ್ತಿದ್ದರಂತೆ. ಅವು ಪತ್ರಿಕೆಗಳಲ್ಲಿ ಮುದ್ರಣಗೊಂಡಾಗ ಸಂತೋಷಗೊಂಡು ಬರೆಯುತ್ತ ಹೋದೆ ಎಂದು ನಾಯ್ಕರ್ ಅವರೇ ಹೇಳಿಕೊಳ್ಳುತ್ತಾರೆ. ಬ. ಪ. ನಾಯ್ಕರ್ ಅವರ 'ಚಂದ್ರೋದಯ' ಮತ್ತು 'ಶಾಂತಿದೀಪ' ಎಂಬ ಎರಡು ಕವನ ಸಂಕಲನಗಳನ್ನು ನಲವತ್ತು ವರ್ಷಗಳ ಹಿಂದೆಯೇ ಬರೆದು ಪ್ರಕಟಿಸಿದ್ದಾರೆ. 'ಮಡಿಪು', 'ಹುಚ್ಚು ಹಾಡು'(ಪ್ರಣಯ ಗೀತೆಗಳು) ಮತ್ತು 'ಕಿರಿಯರ ಕವನ' ಎಂಬ ಮಕ್ಕಳ ಕವನ ಸಂಕಲನ ಹೀಗೆ ಇನ್ನೂ ಮೂರು ಕವನ ಸಂಕಲನಗಳು ಪ್ರಕಟಗೊಳ್ಳಬೇಕಾಗಿವೆ. ಪ್ರಕಟಗೊಂಡಿರುವ ಎರಡು ಸಂಕಲನಗಳಲ್ಲಿ 'ಚಂದ್ರೋದಯ' ಎಂಬ ಸಂಕಲನ ಮಾತ್ರ ಈಗ ಲಭ್ಯವಿದೆ. 'ಶಾಂತಿದೀಪ' ಎಂಬ ಸಂಕಲನವು ಈಗ ಲಭ್ಯವಿಲ್ಲ. ಇದರ ಪ್ರತಿಗಳೂ ನಾಯ್ಕರ್ ಅವರ ಹತ್ತಿರವೂ ಇಲ್ಲದಿರುವುದು ತುಂಬಾ ನಿರಾಶೆಯನ್ನುಂಟು ಮಾಡಿದೆ. ಆದರೆ ದೊರಕಿರುವ ಒಂದು ಕವನ ಸಂಕಲನದ ಮೂಲಕವೇ ನಾಯ್ಕರ್ ಅವರ ಕಾವ್ಯದ ವಿಶೇಷತೆಯನ್ನು ನಾವು ಅರಿತುಕೊಳ್ಳಬಹುದಾಗಿದೆ.

'ಚಂದ್ರೋದಯ' ಇದು ಬ. ಪ. ನಾಯ್ಕರ್ ಅವರ ಪ್ರಥಮ ಕವನ ಸಂಕಲನ. ಇದು ಪ್ರಕಟಗೊಂಡದ್ದು ೧೯೬೯ರಲ್ಲಿ. ಈ ಸಂಕಲನದಲ್ಲಿ ಒಟ್ಟು ಮೂವತ್ತಂಟು ಕವಿತೆಗಳು ಇವೆ. ಈ ಕವಿತಾ ಸಂಕಲನದ ಮೇಲೆ ಕಣ್ಣಾಡಿಸಿದರೆ ನವೋದಯ ಸಾಹಿತ್ಯ ಪರಂಪರೆಯ ಲಕ್ಷಣಗಳನ್ನೊಳಗೊಂಡ ಹಲವಾರು ಉತ್ತಮ ಕವಿತೆಗಳು ಇಲ್ಲಿರುವುದು ಕಂಡುಬರುತ್ತದೆ. ಪ್ರಕೃತಿಯ ಸೌಂದರ್ಯವನ್ನು ಸುಂದರವಾಗಿ ಚಿತ್ರಿಸುವ ಕವಿತೆಗಳಿಗೆ ಇಲ್ಲಿಯ ದೀಪಾರಾಧನೆ, ಚಂದ್ರೋದಯ, ಮಧುಮಲ್ಲಿಗೆ, ಬಿಸಿಲ ದೇವನ ಮಗಳು, ಸಣ್ಣ ಚಿಟ್ಟೆಗೆ, ಮುಗ್ದೆ ಮುಂತಾದ ಕವನಗಳು ಉತ್ತಮ ಉದಾಹರಣೆಯಾಗಿವೆ. ಚಂದ್ರೋದಯ ಸಮಯದ ಚೆಲುವನ್ನು ಈ ಕವಿಯು ಎಷ್ಟೊಂದು ಉತ್ಸಾಹಪೂರ್ಣವಾದ ಪ್ರತೀಕಗಳೊಂದಿಗೆ ವರ್ಣಿಸುತ್ತಾನೆ ನೋಡಿ.

ನೀಲಿಯ ಗಗನದ ನವನಂದನದ
ಹೊಂಗನಸಿನ ಹೂವರಳುತಿದೆ
ಚೆಲ್ವಾಕಾರದ ಮುಕುಲದ ತೆರೆದಲಿ
ಕೆಂಗಿರಣಂಗಳ ತೂರುತಿದೆ!
ಬಾನಿನ ಬಯಕೆಯ ಹೆಣ್ಣದು ಮೆಲ್ಲಗೆ

ನೀಲಾಕಾಶಕೆ ಏರುತಿದೆ
ನನ್ನಿಯ ನಿರ್ಮಲ ಮನವನು ಬೆಳಗಿ
ಚಂದ್ರೋದಯವೀಗಾಗುತಿದೆ

ಎಂದು ಮುಂದುವರಿಯುತ್ತ ಈ ಕವಿತೆಯು ಚಂದ್ರೋದಯದ ಸಮಯದ ಚಿತ್ರಣವನ್ನು ಅತ್ಯಂತ ಸಮರ್ಥವಾಗಿ ಕಟ್ಟಿಕೊಡುತ್ತದೆ. ಹಸುರುಬಳ್ಳಿಯಲ್ಲಿ ಅರಳಿರುವ ಮಲ್ಲಿಗೆಯ ಹೂವು ಕವಿಯ ಮನಸ್ಸನ್ನು ಆಕರ್ಷಿಸಿದೆ. ಅದರ ಸೌಂದರ್ಯ -ಸೂಕ್ಷ್ಮತೆಗಳನ್ನು 'ಮಧುಮಲ್ಲಿಗೆ' ಎಂಬ ಕವಿತೆಯ ಕೆಳಗಿನ ಸಾಲುಗಳು ಎಷ್ಟು ಸುಂದರವಾಗಿ ಚಿತ್ರಿಸುತ್ತದೆ

ಹಸುರಿನಲಿ ಹಾಯಾಗಿ ಗಾಳಿಯಲಿ ತಲೆದೂಗಿ
ಸಂತಸದ ಸ್ಮಿತವದನೆ ಮದುರ ಹೂವೆ
ಹಸಿದಿರುವ ಚಿಟ್ಟೆಗಳ ಬಳಲಿರುವ ಭೃಂಗಗಳ
ಸಂತೈಸಿ ಕರೆಯುತಿಹ ಚಂದಿರನ ಕುರುಹೆ

ಹೀಗೆ ಹಸುರಿನ ಬಳ್ಳಿಯಲ್ಲಿ ಸ್ಮಿತವದನೆಯಾಗಿ ನಗುತ ನಿಂತಿರುವ ಹೂವಿಗೆ 'ನವುರಾದ ಪಕಳೆಯಲಿ ಇಜಿಜೇನಿನಾ ಗಿಂಡಿಯನ್ನು ತುಂಬಿಕೊಂಡು ಯಾರೆದೆಯ ತಣಿಸಲ್ಕೆ ನಿಂತಿರುವೆ' ಎಂದು ಕೇಳುತ್ತಾನೆ.

ಹೀಗೆ ಪ್ರಕೃತಿಯ ಸುಂದರ ಚಿತ್ರಣಗಳು, ಇಲ್ಲಿ ಇರುವಂತೆ ಉತ್ತಮವಾದ ಪ್ರೇಮಗೀತೆಗಳು ಈ ಸಂಕಲನದಲ್ಲಿ ಸೇರಿಕೊಂಡಿವೆ. ಅದರಲ್ಲಿಯೂ 'ನಾನು-ನೀನು' ಎಂಬ ಪ್ರೇಮಗೀತೆಯು ಶ್ರೇಷ್ಠವಾದ ಭಾವಗೀತೆಯಾಗಿದೆ.

ನಾನು-ನನ್ನ ಮನೆಯ ಮುಂದೆ
ನೀನು ನಿನ್ನ ತೋಟದಿ
ನನ್ನ ನಿನ್ನ ಎದೆಗಳೆರಡು
ಸಾನುರಾಗಬೇಟದಿ
ನಿನ್ನ ಪ್ರೇಮದೋಲೆಗಳನು
ತಂಪುಗಾಳಿತರುವುದು
ನಿನ್ನ ತೋಟದಿನಿಯ ಹೂವ
ಕಂಪು ತಂದು ಸುರಿವುದು

ಎಂದು ಮುಂದುವರಿಯುವ ಈ ಕವಿತೆಯ ಎರಡು ಒಲಿದ ಜೀವಗಳು ಒಂದುಗೂಡಿ ಸಾರ್ಥಕತೆಯನ್ನು ಪಡೆಯುವ ರೀತಿಯನ್ನು ಸಮರ್ಥವಾಗಿ ನಿರೂಪಿಸುತ್ತದೆ. ಈ ಕವಿತೆಯಲ್ಲಿಯ ಮೂರು ಮಾತ್ರಾಲಯ ಹಾಗೂ ಪ್ರಾಸಗಳು ಸಹಜವಾಗಿ ಬಂದು ಇದರ ಮೌಲ್ಯವನ್ನು ಹೆಚ್ಚಿಸಿವೆ.

ಈ ಕವಿಯ ನಾಡು ನುಡಿಯ ಪ್ರೇಮವಂತೂ ಮೆಚ್ಚುವಂಥದ್ದಾಗಿದೆ. ಹರಿದು ಹಂಚಿಹೋಗಿದ್ದ ಕನ್ನಡನಾಡು ಮತ್ತೆ ಒಂದು ಗೂಡಿದ ಸಂಭ್ರಮದಲ್ಲಿ "ಬನ್ನಿ ಬನ್ನಿ ಕನ್ನಡ ಯುವಕರೆ ಒಂದುಗೂಡಿ ಬಾಳುವಾ! ನನ್ನಿಯಿಂದ ಕನ್ನಡಾಂಬೆಯ ಶಾಂತಿಗೀತೆಯ ಹೇಳುವಾ!" ಎಂದು ಕನ್ನಡಾಂಬೆಯ ಸೇವೆಗಾಗಿ ನಾಡಿನ ಯುವಕರನ್ನು ಆಹ್ವಾನಿಸುತ್ತಾರೆ. ಸತ್ಯ-ಶಾಂತಿ-ತ್ಯಾಗ-ಅಹಿಂಸೆಗಳೆಂಬ ಮೌಲ್ಯಗಳನ್ನು ಭಾರತೀಯರ ಹೃದಯದಲ್ಲಿ ಬಿತ್ತಿ, ಈ ಮೌಲ್ಯಗಳನ್ನೇ ಬ್ರಿಟಿಷರ ವಿರುದ್ಧ ಹೋರಾಡುವ ಅಸ್ತ್ರಗಳನ್ನಾಗಿ ಮಾಡಿ ಭಾರತ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟವರು ಗಾಂಧೀಜಿ. ಆದರೆ ಅವರು ಮಡಿದ ಕೆಲವೇ ವರ್ಷಗಳಲ್ಲಿ ಅವರ ತತ್ವ ಆದರ್ಶಗಳು ಈ ದೇಶದಲ್ಲಿ ಕಣ್ಮರೆಯಾಗಿರುವುದನ್ನು ಕಂಡು ಕವಿಯ ಹೃದಯ ನೊಂದಿರುವುದನ್ನು 'ನಿನ್ನದೇ ನಿರೀಕ್ಷೆ' ಎಂಬ ಕವಿತೆಯು ನಿರೂಪಿಸುತ್ತದೆ. ಇವುಗಳ

ಜೊತೆಗೆ ಸಾಮಾಜಿಕ ಚಿಂತನೆಯನ್ನು, ಆಧ್ಯಾತ್ಮಿಕ ಅನುಭವವನ್ನು ಸುಂದರವಾಗಿ ನಿರೂಪಿಸುವ ಅನೇಕ ಉತ್ತಮವಾದ (ಬಡವರ್-ದೇವರ ಮಕ್ಕಳು, ನಿನ್ನನುಳಿದವರಾರವರು ಮುಂತಾದ) ಕವಿತೆಗಳು ಈ ಸಂಕಲನದಲ್ಲಿದೆ. ಇವುಗಳ ವಿಸ್ತೃತವಾದ ವಿವರಣೆಗೆ ಇಲ್ಲಿ ಅವಕಾಶವಿಲ್ಲದುದರಿಂದ ಇಲ್ಲಿಗೆ ನಿಲ್ಲಿಸುತ್ತೇವೆ. ಒಟ್ಟಿನಲ್ಲಿ ಬ. ಪ. ನಾಯ್ಕರ್ ಅವರು ಒಬ್ಬ ಉತ್ತಮ ಕವಿಯೆಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಉತ್ತಮ ಕವಿತೆಯ ಎಲ್ಲ ಲಕ್ಷಣಗಳು ಇವರ ಹಲವಾರು ಕವಿತೆಗಳಲ್ಲಿ ಗೋಚರಿಸುತ್ತವೆ. ಅವರ ಕಾವ್ಯ ಶಕ್ತಿ ಹೇಗೆ ಉತ್ಸಾಹದಿಂದ ಚಿಮ್ಮಿದೆ ಎಂಬುದನ್ನು ಈ ಸಂಕಲನಕ್ಕೆ ಮುನ್ನುಡಿಯನ್ನು ಬರೆದಿರುವ ನಮ್ಮ ನಾಡಿನ ಹಿರಿಯ ವಿದ್ವಾಂಸರಾದ ಡಾ. ಆರ್. ಸಿ. ಹಿರೇಮಠ ಅವರು ಚೆನ್ನಾಗಿಯೇ ಗುರುತಿಸಿರುವುದನ್ನು ಇಲ್ಲಿ ಗಮನಿಸಬಹುದು.

**ಸಣ್ಣ ಕಥೆ**

ಬ.ಪ. ನಾಯ್ಕರ್ ಅವರು ಕವಿತೆ, ನಾಟಕ, ಕಾದಂಬರಿಗಳಂತೆ ಸಣ್ಣ ಕಥೆಗಳನ್ನೂ ಬರೆದಿದ್ದಾರೆ. ಸಣ್ಣ ಕಥೆಗಳನ್ನು ಬರೆಯುವುದಕ್ಕೆ ಒದಗಿಬಂದ ಪ್ರೇರಣೆಯನ್ನು ಅವರೇ ಒಂದು ಕಡೆ ಹೀಗೆ ಹೇಳಿಕೊಂಡಿದ್ದಾರೆ. ಆಗಾಗ ಕವಿತೆಗಳನ್ನು ಬರೆದು ಪತ್ರಿಕೆಗಳಿಗೆ ಕಳಿಸುವಂತ ಒಂದು ಸಲ 'ಯಾರತಪ್ಪು' ಎಂಬ ಕಥೆಯನ್ನು ಬರೆದು ಬೆಟಗೇರಿ ಕೃಷ್ಣಶರ್ಮರವರು ಹೊರಡಿಸುತ್ತಿದ್ದ 'ಜಯಂತಿ' ಪತ್ರಿಕೆಗೆ ಕಳುಹಿಸಿದರಂತೆ. ಆ ಕಥೆಯು ಜಯಂತಿಯಲ್ಲಿ ಪ್ರಕಟವಾಗುವುದರ ಜೊತೆಗೆ ಮಾನ್ಯ ಬೆಟಗೇರಿ ಕೃಷ್ಣಶರ್ಮ ಅವರು "ಬರೆಯಿರಿ ನಿಮ್ಮಲ್ಲಿ ಸಾಹಿತ್ಯ ರಚನೆಯ ಕಳೆಯಿದೆ" ಎಂದು ಪ್ರೋತ್ಸಾಹಿಸುತ್ತಾರೆ. ಆ ಹಿರಿಯರ ಮಾತುಗಳಿಂದ ಸ್ಫೂರ್ತಿಗೊಂಡು ಆಗಾಗ ಕಥೆಗಳನ್ನು ಬರೆದು ನಾಡಿನ ಬೇರೆ ಬೇರೆ ಪತ್ರಿಕೆಗಳಿಗೆ ಕಳುಹಿಸುತ್ತಾರೆ. ಹೀಗೆ ಪ್ರಕಟಗೊಂಡಿರುವ ಕಥೆಗಳನ್ನು ಒಟ್ಟುಗೂಡಿಸಿ 'ಆ ರಾತ್ರಿ' ಎಂಬ ಹೆಸರಿನ ಕಥಾ ಸಂಕಲನವನ್ನು (೧೯೯೧) ಪ್ರಕಟಿಸಿದ್ದಾರೆ. ಇದು ನಾಯ್ಕರ್ ಅವರು ಬರೆದು ಪ್ರಕಟಿಸಿದ ಏಕಮಾತ್ರ ಕಥಾ ಸಂಕಲನವಾಗಿದೆ.

ಪ್ರಸ್ತುತ ಕಥಾ ಸಂಕಲನದಲ್ಲಿ ಒಟ್ಟು ಹದಿನೇಳು ಚಿಕ್ಕ ಚಿಕ್ಕ ಕಥೆಗಳು ಇವೆ. ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಕಂಡುಬರುವ ಬಡತನ, ನಿರುದ್ಯೋಗ, ಸಂಪ್ರದಾಯ, ಜಾತೀಯತೆ, ಅಮಾಯಕರ ಮೇಲೆ ನಡೆಯುತ್ತಿರುವ ದೌರ್ಜನ್ಯ-ಅತ್ಯಾಚಾರ, ವಿಶ್ವಾಸ ದ್ರೋಹಗಳಂಥ ವಿಷಯಗಳೇ ಇಲ್ಲಿಯ ಕಥೆಗಳಿಗೆ ವಸ್ತುವಾಗಿರುವುದು ಕಂಡುಬರುತ್ತದೆ. ಆದರೆ ಇಲ್ಲಿಯ ಕೆಲವು ಕಥೆಗಳಲ್ಲಿಯ ಪಾತ್ರಗಳು ಆಧುನಿಕ ವಿದ್ಯಾವಂತರಾಗಿದ್ದರೂ ಕೂಡ ಬಡತನ-ಜಾತೀಯತೆ ಸಂಪ್ರದಾಯಗಳಿಂದ ಉಂಟಾದ ಸಮಸ್ಯೆಗಳನ್ನು ಎದುರಿಸಿ ಗೆಲ್ಲಲಾರದೆ ಸಾವಿನ ಕಡೆಗೆ ಮುಖ ಮಾಡುತ್ತವೆ. ಇದು ಈ ಕಥೆಗಳಲ್ಲಿಯ ವೈಚಾರಿಕತೆಯ ಅಭಾವವೆಂದೇ ಹೇಳಬೇಕಾಗುತ್ತದೆ. ಈ ಮಾತಿಗೆ ಉತ್ತಮ ಉದಾಹರಣೆಗಳೆಂದರೆ 'ಅನಂತದಲ್ಲಿ ಲೀನವಾದಳು' ಕಥೆಯ ನಾಯಕ ವಿನಯ ಭೂಷಣ, 'ಮೂರೊಂಬತ್ತು ತಿಂಗಳ ಬಸಿರು' ಕಥೆಯ ನಾಯಕ ಅನಂತ ಮತ್ತು 'ಆಹುತಿ' ಕತೆಯ ನಾಯಕ ಸುರೇಶ.

'ಅನಂತದಲ್ಲಿ ಲೀನವಾದಳು' ಕಥೆಯ ನಾಯಕ ವಿನಯಭೂಷಣ ತುಂಬ ಪ್ರತಿಭಾವಂತ ವಿದ್ಯಾರ್ಥಿ. ಎಸ್.ಎಸ್.ಎಲ್.ಸಿ.ವರೆಗೆ ಈತನಿಗೆ ಮುಂದೆ ಓದಬೇಕೆಂಬ ಬಯಕೆ ಇದ್ದರೂ ಮನೆಯಲ್ಲಿ ಕಿತ್ತು ತಿನ್ನುವ ಬಡತನ, ಮುಪ್ಪಿನ ತಂದೆ-ತಾಯಿ ಕಾರಣವಾಗಿ ಓದನ್ನು ನಿಲ್ಲಿಸಿ ಕೆಲಸ ಹುಡುಕಲು ಪ್ರಯತ್ನಿಸುತ್ತಾನೆ. ಇಂಥ ಸಂದರ್ಭದಲ್ಲಿ ವಿನಯಭೂಷಣನ ಮುಂದಿನ ಓದಿಗೆ ಸಹಾಯವನ್ನು ಮಾಡಿದವರು ಅದೇ ಊರಿನ ಆಗರ್ಭ ಶ್ರೀಮಂತ ಭೀಮರಾಯರು. ಅವರ ಸಹಾಯವನ್ನು ಪಡೆದು ಪಟ್ಟಣದ ಕಾಲೇಜೊಂದರಲ್ಲಿ ಸೇರಿಸಿ, ಮಿತವ್ಯಯದಿಂದ ಅತ್ಯಂತ ಶ್ರದ್ಧೆಯಿಂದ ಓದಿ ಬಿ.ಎ. ಪರೀಕ್ಷೆಯನ್ನು ಮುಗಿಸಿ ಊರಿಗೆ ಹಿಂದಿರುತ್ತಾನೆ. ಆಗಲೇ ವಯಸ್ಸಾದ ತಂದೆ ಶಾಮರಾಯರು ಮಗನ ಮದುವೆಯ ವಿಚಾರವನ್ನು ಮಾಡುತ್ತಾರೆ. ಅವನ ಓದಿಗೆ ಸಹಾಯವನ್ನು ಮಾಡಿದ ಶ್ರೀಮಂತ ಭೀಮರಾಯರ ಏಕಮಾತ್ರ ಪುತ್ರಿಯನ್ನು ತಂದುಕೊಂಡು ಮಗನ ಕಲ್ಯಾಣ ಮಾಡುವುದರ ಜೊತೆಗೆ ಓದಿಗೆ ಸಹಾಯ ಮಾಡಿದ ಭೀಮರಾಯರ ಉಪಕಾರವನ್ನು ತೀರಿಸಲು ಬಯಸುತ್ತಾನೆ. ಈ ನಿರ್ಧಾರದ ವಿಚಾರವನ್ನು ಮಗ ವಿನಯಭೂಷಣಗೆ ಹೇಳುತ್ತಾರೆ. ಆದರೆ ಮದುವೆಯ ಈ ವಿಚಾರ ವಿಜಯಭೂಷಣಗೆ ಸಮ್ಮತವಿಲ್ಲ. ಇದಕ್ಕೆ ಕಾರಣ ಹುಡುಗಿಯ ನಡತೆ ಸರಿಯಿಲ್ಲದ್ದು. ಮಗನ ಅಸಮ್ಮತಿಯನ್ನು ಲೆಕ್ಕಿಸದೇ ಶಾಮರಾಯರು ತಮಗೆ ಸಹಾಯವನ್ನು ಮಾಡಿದ ಮತ್ತು ಆ ರೀತಿ ವಚನ ಕೊಟ್ಟಂತೆ ಭೀಮರಾಯರ ಮಗಳೊಂದಿಗೆ ಮಗನ ವಿವಾಹಕ್ಕೆ ಸಕಲ ಸಿದ್ಧತೆಯನ್ನು ಮಾಡುತ್ತಾರೆ. ಈ ಸಂದರ್ಭದಲ್ಲಿ ತಂದೆತಾಯಿಯವರ ಮುಖವನ್ನು ನೋಡಿದರೆ ಮತ್ತು ತನಗೆ ಸಹಾಯ

ಮಾಡಿದವರ ಋಣವನ್ನು ತೀರಿಸುವುದಕ್ಕೆ ಮದುವೆಯನ್ನು ಆಗಬೇಕು. ಆದರೆ ಹುಡುಗಿಯ ನಡತೆಯ ಹಿನ್ನೆಲೆಯನ್ನು ನೋಡಿದರೆ ಈ ಮದುವೆಯನ್ನು ತಿರಸ್ಕರಿಸಬೇಕು. ಈ ಎರಡು ದ್ವಂದ್ವಗಳಲ್ಲಿ ಸಿಕ್ಕಿಹಾಕಿಕೊಂಡ ವಿನಯಭೂಷಣ ಸಮಸ್ಯೆಗೆ ಉತ್ತರವನ್ನು ಕಂಡುಕೊಳ್ಳದೇ ಸಾವಿಗೆ ಶರಣಾಗುತ್ತಾನೆ. ಆದರೆ ನಾವು ಸಮಸ್ಯೆಗೆ ಉತ್ತರವಲ್ಲ. ಸಾಯುವುದರಿಂದ ಯಾರಿಗೆ ಉಪಯೋಗ? ಕಲಿಯಲು ಸಹಾಯ ಮಾಡಿದವರಿಗೆ ಏನಾದರೂ ಪ್ರಯೋಜನವಾಯಿತೆ? ಕೊನೆಗೆ ತಾನಾದರೂ ಏನು ಸಾಧಿಸಿದಂತೆ ಆಯಿತು? ಯಾರಿಗೂ ಪ್ರಯೋಜನವಿಲ್ಲ. ಹೀಗೆ ವಿಚಾರಿಸದೇ ಆತ್ಮಹತ್ಯೆಗೆ ಶರಣಾಗುವುದಕ್ಕಿಂತ ಕನ್ಯೆ ನಡತೆಗೆಟ್ಟವಳಾಗಿದ್ದರೂ ಪರವಾಗಿಲ್ಲ ಅವಳನ್ನು ಕೈಹಿಡಿದಿದ್ದರೆ ಚೆನ್ನಾಗಿರುತ್ತೇನೋ ಏನಿಸುತ್ತದೆ. ಇದರಿಂದ ಮುಪ್ಪಿನ ತಂದೆ-ತಾಯಿಯವರಿಗೂ ನೆಮ್ಮದಿ ಸಿಗುತ್ತಿತ್ತು. ಕಲಿಯಲೂ ಹಣದ ಸಹಾಯವನ್ನು ಒದಗಿಸಿದವರಿಗೂ ಪ್ರಯೋಜನವಾಗುತ್ತಿತ್ತು. ಸಾವಿನಿಂದ ಯಾರಿಗೆ ನೆಮ್ಮದಿ?.

‘ಆಹುತಿ’ ಕಥೆಯ ನಾಯಕ ಸುರೇಶನ ಪಾತ್ರ ಚಿತ್ರಣವು ಇದೇ ರೀತಿಯಲ್ಲಿ ನಿರೂಪಿತವಾಗಿದೆ. ಸುರೇಶ ಒಬ್ಬ ಆಗರ್ಭ ಶ್ರೀಮಂತ ವೈದ್ಯರ ಮಗ, ಕಾಲೇಜು ಕಲಿಯುತ್ತಿರುವ ಯುವಕ. ತನ್ನ ಮನೆಯಲ್ಲಿ ಕೆಲಸ ಮಾಡುತ್ತಿರುವ ಹದಿನಾರರ ಹರೆಯದ ಸುಂದರ ತರುಣಿಯನ್ನು ಪ್ರೀತಿಸುತ್ತಾನೆ. ಅವರ ಪ್ರೀತಿ ದಿನದಿಂದ ದಿನಕ್ಕೆ ಬೆಳೆದು ಗಾಢವಾಗಿ ಬೆಳೆದು ವಿವಾಹವಾಗಬೇಕು ಎನ್ನುತ್ತಿರುವಾಗಲೇ ಅವರ ಜಾತಿ ಅಂತಸ್ತುಗಳು ಕಾರಣವಾಗಿ ಸುರೇಶನ ತಂದೆ-ತಾಯಿಯರು ಈ ವಿವಾಹಕ್ಕೆ ಅಸಮ್ಮತಿಯನ್ನು ಸೂಚಿಸುತ್ತಾರೆ. ಆಗ ಅದನ್ನು ಎದುರಿಸಿ ಗೆಲ್ಲಲು ಆಗದ ಪ್ರೇಮಿಗಳು ಇಲ್ಲಿಯೂ ಸಾವಿಗೆ ಶರಣಾಗುತ್ತಾರೆ. ಬದುಕನ್ನು ರೂಪಿಸಿಕೊಳ್ಳುವುದಕ್ಕೆ ಸಮಸ್ಯೆಗಳನ್ನು ಬಿಡಿಸಿಕೊಳ್ಳುವುದಕ್ಕೆ ದಾರಿಗಳು ಮತ್ತು ಆಯ್ಕೆಗಳು ಹಲವಾರು ಇದ್ದರೂ ಕೂಡ ಸಾವಿಗೆ ಶರಣಾಗುವುದು ತುಂಬಾ ಚೋದ್ಯವಾಗಿ ಕಾಣುತ್ತದೆ. ಇದೇನೇ ಇದ್ದರೂ ಕೂಡ ಈ ಸಂಕಲನದಲ್ಲಿಯ ಒಂದೊಂದು ಕಥೆಯೂ ವೈವಿಧ್ಯಮಯವಾಗಿ ಮೂಡಿ ಸಮಾಜದ ವಿವಿಧ ಸಮಸ್ಯೆಗಳ ಮೇಲೆ ‘ಕ್ಷಕಿರಣ’ ಬೀರುತ್ತವೆ ಎಂಬುದನ್ನು ಮರೆಯಬಾರದು.

## ನಾಟಕ

ಒಂದು ಕಾಲವಿತ್ತು. ನಮ್ಮ ಹಳ್ಳಿಗಳ ಜನಜೀವನ (ಅಷ್ಟೇ ಏಕೆ ಪಟ್ಟಣಗಳ ಜೀವನ ಕೂಡ) ತುಂಬ ಪ್ರಶಾಂತವಾಗಿತ್ತು. ಇಂದಿನ ಆಧುನಿಕ ಮಾಧ್ಯಮಗಳಾದ ಸಿನೇಮಾ, ಟಿ.ವ್ಹಿ. ಇತ್ತೀಚೆಗೆ ವಿಷಾನಿಲದಂತೆ ವ್ಯಾಪಕವಾಗಿ ಹಬ್ಬುತ್ತಿರುವ ಮೊಬೈಲಗಳ ದಾಳಿ, ರಾಜಕೀಯದ ಹಾವಳಿ ಆಗಿರದೇ ಇದ್ದ ಕಾಲವದು. ನಮ್ಮ ಗ್ರಾಮೀಣ ಜನರು ತಮ್ಮ ಬದುಕಿನ ನಿರ್ವಹಣೆಗಾಗಿ ಎಲ್ಲರೂ ಒಟ್ಟಾಗಿ ಕಷ್ಟಪಟ್ಟು ದುಡಿಯುತ್ತಿದ್ದರು. ದುಡಿತದಿಂದ ಉಂಟಾದ ಆಯಾಸವನ್ನು ಪರಿಹರಿಸುವುದಕ್ಕೆ ಜಾನಪದ ಹಾಡುಗಳನ್ನು ಹಾಡುತ್ತಿದ್ದರು. ಹಬ್ಬ ಹರಿದಿನಗಳಲ್ಲಿ ಜಾತ್ರೆ ಉತ್ಸವಗಳಲ್ಲಿ ಬಯಲಾಟಗಳನ್ನು ನಾಟಕಗಳನ್ನು ಆಡುತ್ತಿದ್ದರು. ಬಯಲಾಟ ನಾಟಕಗಳು ಇಲ್ಲದೇ ಇರುವ ಜಾತ್ರೆಗಳನ್ನು ಕಲ್ಪಿಸಿಕೊಳ್ಳುವುದೂ ಕಷ್ಟ. ಆಗಿನ ಕಾಲದಲ್ಲಿ ಶಾಲೆ-ಕಾಲೇಜುಗಳ ವಾರ್ಷಿಕೋತ್ಸವಗಳಲ್ಲಿಯೂ ಕನಿಷ್ಟ ಎರಡೂ ಮೂರು ನಾಟಕಗಳು ಇರಲೇಬೇಕು. ಆ ನಾಟಕಗಳನ್ನು ನೋಡುವುದಕ್ಕೆ ಜನರು ಕಿಕ್ಕಿರಿದು ಸೇರುತ್ತಿದ್ದರು. ಅಂದರೆ ಆ ಕಾಲದ ಜನರನ್ನು ರಂಜಿಸುವ ಬಹುಮುಖ್ಯವಾದ ಮಾಧ್ಯಮವೆಂದರೆ ನಾಟಕವೇ ಆಗಿತ್ತು. ಇಂಥ ಪರಿಸರದಲ್ಲಿ ಹುಟ್ಟಿ ಬೆಳೆದ ಬ. ಪ. ನಾಯ್ಕರ್ ಅವರು ನಾಟಕದಿಂದ ಪ್ರಭಾವಿತರಾಗಿ, ನಾಟಕ ರಚನೆಗೆ ತೊಡಗಿರುವುದು ಸಹಜವೇ ಆಗಿದೆ. ಶಾಲಾ ಶಿಕ್ಷಕರಾಗಿ ಆಯ್ಕೆಗೊಂಡು ಹಾವೇರಿ ತಾಲೂಕಿನ ಕಬ್ಬೂರಿನ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂದರ್ಭದಲ್ಲಿ ತಾವೇ ರಚಿಸಿದ ಪ್ರಾರ್ಥನಾ ಗೀತೆಯಲ್ಲಿ ಮಕ್ಕಳಿಗೆ ಕಲಿಸುತ್ತಿದ್ದರು. ಇದನ್ನು ಹೊರಗೆ ನಿಂತು ಆಲಿಸಿದ ಶಾಲೆಯ ಮುಖ್ಯೋಪಾಧ್ಯಾಯರಾದ ಎಸ್. ಎಂ. ಲಕ್ಕಣ್ಣವರ ಅವರು ಈ ಗೀತೆಯ ರಚನಾಕಾರರು ನಾಯ್ಕರ ಅವರೇ ಎಂದು ತಿಳಿದು ನಿಮ್ಮಲ್ಲಿ ಸಾಹಿತ್ಯ ರಚನೆಯ ಶಕ್ತಿ ಇದೆ. ಒಂದು ನಾಟಕವನ್ನು ರಚಿಸಿರಿ, ಅದನ್ನು ಶಾಲೆಯ ವಾರ್ಷಿಕೋತ್ಸವದಲ್ಲಿ ಮಕ್ಕಳಿಂದ ಆಡಿಸೋಣ ಎಂದು ಹುರಿದುಂಬಿಸುತ್ತಾರೆ. ಅವರ ಮಾತಿನಿಂದ ಸ್ಫೂರ್ತಿಗೊಂಡು ನಾಯ್ಕರ್ ಅವರು ‘ಪ್ರಾಣಾರ್ಪಣ’ ಎಂಬ ಐತಿಹಾಸಿಕ ನಾಟಕವನ್ನು ರಚಿಸುತ್ತಾರೆ. ಅದನ್ನು ಶಾಲೆಯ ವಾರ್ಷಿಕೋತ್ಸವದಲ್ಲಿ ಶಾಲೆಯ ಮಕ್ಕಳಿಂದ ಪ್ರಯೋಗಿಸಿದಾಗ, ಜನರಿಂದ ಮೆಚ್ಚುಗೆಯ ಪ್ರತಿಕ್ರಿಯೆಯು ವ್ಯಕ್ತವಾಗುತ್ತದೆ. ಹೀಗೆ ಜನರಿಂದ ಮೆಚ್ಚುಗೆಯನ್ನು ಪಡೆದು ಸ್ಫೂರ್ತಿಗೊಂಡ ನಾಯ್ಕರ್ ಅವರು ಹಲವಾರು ಏಕಾಂಕ ನಾಟಕಗಳನ್ನು ಮತ್ತು ಮೂರಂಕಿನ ನಾಟಕಗಳನ್ನು ಬರೆಯುತ್ತಾರೆ. ಅವರ ಏಕಾಂಕ ನಾಟಕಗಳು ಶಾಲಾ ವಾರ್ಷಿಕೋತ್ಸವಗಳಲ್ಲಿ ಮಕ್ಕಳಿಂದ ಪ್ರಯೋಗಗೊಂಡರೆ, ಮೂರಂಕಿನ ನಾಟಕಗಳು ಜಾತ್ರೆ-

ಉತ್ಸವಗಳಂತಹ ಸಂದರ್ಭದಲ್ಲಿ ಬೇರೆ ಬೇರೆ ಕಲಾ ತಂಡಗಳಿಂದ ನಾಟಕ ಕಂಪನಿಗಳವರಿಂದ ಪ್ರಯೋಗಗೊಂಡು ಇವರಿಗೆ ಜನಪ್ರಿಯತೆಯನ್ನು ತಂದು ಕೊಡುತ್ತವೆ.

**ಏಕಾಂಕ ನಾಟಕಗಳು**

ನಾಯ್ಕರ್ ಅವರು 'ಭಕ್ತಜ್ಯೋತಿ', 'ಸತ್ವ ಪರೀಕ್ಷೆ', 'ಸಾವಿತ್ರಿ', 'ಗಿರಿಜಾ ಕಲ್ಯಾಣ' ಮತ್ತು 'ವಿಜಯಶ್ರೀ' ಎಂಬ ಐದು ಏಕಾಂಕ ನಾಟಕಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಮೊದಲಿನ ನಾಲ್ಕು ನಾಟಕಗಳು ನಮ್ಮ ಪುರಾಣಗಳಲ್ಲಿಯ ಕಥೆಗಳನ್ನು ಆಧರಿಸಿ ರಚನೆಗೊಂಡಿರುವ ಪೌರಾಣಿಕ ನಾಟಕಗಳಾದರೆ, ವಿಜಯಶ್ರೀ ಎಂಬುದು ಸಾಮಾಜಿಕ ವಸ್ತುವನ್ನು ಆಧರಿಸಿ ರಚನೆಗೊಂಡಿರುವಂಥದ್ದಾಗಿದೆ.

ನಮ್ಮ ಪುರಾಣದಲ್ಲಿ ಪ್ರಸಿದ್ಧನಾದ 'ಧ್ರುವನು' ಮಲತಾಯಿಯ ದ್ವೇಷ ಕಾರಣದಿಂದ ರಾಜ್ಯಭ್ರಷ್ಟನಾಗಿ, ಕಠಿಣವಾದ ತಪಸ್ಸಿನಿಂದ ಹರಿಯನ್ನು ಒಲಿಸಿಕೊಂಡು, ಆತನ ಕರುಣೆಯಿಂದ ಮರಳಿ ರಾಜ್ಯವನ್ನು ಪಡೆದುಕೊಂಡಿರುವುದನ್ನು 'ಭಕ್ತಜ್ಯೋತಿ' ನಾಟಕವು ಅತ್ಯಂತ ಸಮರ್ಥವಾಗಿ ನಿರೂಪಿಸುತ್ತದೆ. ಈ ನಾಟಕವನ್ನು ನಾಯ್ಕರ್ ಅವರು ಗದ್ಯಗೀತೆಯಲ್ಲಿ ರಚಿಸಿರುವುದು ವಿಶೇಷ. ಅರೆ ಆಯುಷ್ಯವನ್ನು ಪಡೆದಿರುವ ಸತ್ಯವಾಹನನನ್ನು ವಿವಾಹವಾದ ಸಾವಿತ್ರಿ ಅನನ್ಯ ದೈವ ಭಕ್ತಿ, ಪತಿನಿಷ್ಠೆಯಿಂದ ಯಮಧರ್ಮನನ್ನು ಸೋಲಿಸಿ ಮರಳಿ ಗಂಡನ ಪ್ರಾಣವನ್ನು ಪಡೆದಿರುವುದೇ ಸಾವಿತ್ರಿ ನಾಟಕದ ಕಥಾವಸ್ತು. ಹಿಮವಂತ ಮಹಾರಾಜನ ಮಗಳಾಗಿ ಜನಿಸಿದ ಗಿರಿಜೆಯು ಕೈಲಾಸ ಪರ್ವತದಲ್ಲಿ ತಪಸ್ಸಿಗೆ ಕುಳಿತ ಶಿವನನ್ನು ಭಕ್ತಿನಿಷ್ಠೆಯಿಂದ ಪೂಜಿಸಿ, ಛಲದಿಂದ ಕಠಿಣವಾದ ತಪಸ್ಸನ್ನು ಆಚರಿಸಿ, ಶಿವನನ್ನು ಒಲಿಸಿ ವರಿಸಿದ ಪ್ರಸಿದ್ಧ ವಿಷಯವೇ 'ಗಿರಿಜಾ ಕಲ್ಯಾಣ' ನಾಟಕದ ವಸ್ತುವಾಗಿದೆ. ಅದೇ ರೀತಿ ತನ್ನ ತವರು ಮನೆಯವರಿಂದ ಅನ್ಯಾಯಕ್ಕೆ ಒಳಗಾದರೂ ಕೂಡ ತವರು ಮನೆಯ ಕಲ್ಯಾಣವನ್ನು ಬಯಸಿದ ಆದರ್ಶ ಹೆಣ್ಣಿನ ಕಥೆಯನ್ನು ಆಧರಿಸಿ ರಚನೆಗೊಂಡಿರುವುದು 'ವಿಜಯಶ್ರೀ' ಎಂಬ ಸಾಮಾಜಿಕ ನಾಟಕ. ಇಂಥಹ ನಾಟಕ ರಚನೆಯ ಮೂಲಕ ಭಕ್ತಿ, ನಿಷ್ಠೆ, ತ್ಯಾಗ ತಪಸ್ಸುಗಳಂತಹ, ಆದರ್ಶ ಮೌಲ್ಯಗಳನ್ನು ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಬಿತ್ತುವ ಪ್ರಯತ್ನವನ್ನು ನಾಯ್ಕರ್ ಅವರು ಮಾಡಿದ್ದಾರೆ.

**ಮೂರಂಕಿನ ನಾಟಕಗಳು**

ಬ.ಪ.ನಾಯ್ಕರ್ ಅವರು 'ಮಿತ್ರದ್ರೋಹ', 'ಕುಟುಂಬ', 'ಮಂಗಲಾಕ್ಷತೆ', 'ಜೀವನ ಗಂಗಾ', 'ಅಕ್ಷತಾಯೋಗ', 'ಅಣ್ಣ ತಂದ ಹೆಣ್ಉ', 'ವಿಜಯಶ್ರೀ', 'ಸಕಲಗುಣ ಸಂಪನ್ನ', 'ಪ್ರಾಣಾರ್ಪಣ'ಗಳೆಂಬ ಒಟ್ಟು ಒಂಬತ್ತು ನಾಟಕಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಮೊದಲಿನ ಎಂಟು ನಾಟಕಗಳು, ವಿಶ್ವಾಸದ್ರೋಹ, ವಿವಾಹ, ಕೌಟುಂಬಿಕ ಕಲಹ, ವರದಕ್ಷಿಣೆಯಂತ ಸಾಮಾಜಿಕ ವಿಷಯವನ್ನು ಆಧರಿಸಿ ರಚನೆಗೊಂಡಿರುವ ಸಾಮಾಜಿಕ ನಾಟಕಗಳಾಗಿವೆ. ಕೊನೆಯ 'ಪ್ರಾಣಾರ್ಪಣ' ಎಂಬುದು ಅರುಣಗಡದ ಅರಸು ಮನೆತನದ ಕಥೆಯ ಹಿನ್ನೆಲೆಯಲ್ಲಿ ರಚನೆಗೊಂಡ ಐತಿಹಾಸಿಕ ನಾಟಕವಾಗಿದೆ. ಈ ನಾಟಕಗಳನ್ನು ಅಂದಿನ ನಾಟಕ ಆಸಕ್ತ ಕಲಾವಿದರ, ನಾಟಕ ಕಂಪನಿಗಳ ಒತ್ತಾಯಕ್ಕೆ ಮಣಿದು ರಚಿಸಿದ್ದಾರೆ. ಇವರು ರಚಿಸಿದ ನಾಟಕಗಳನ್ನು ಶ್ರೀ ಅಮೃತೇಶ್ವರ ನಾಟ್ಯ ಸಂಘದವರು (ಅಣ್ಣಿಗೇರಿ) ಶ್ರೀ ಪತ್ರೇಶ್ವರ ಕೈಲಾಸ ಮಂದಿರದ (ಅಣ್ಣಿಗೇರಿ)ಕಲಾವಿದರಿಂದ, ಮಲ್ಲಿಕಾರ್ಜುನ ನಾಟಕ ಕಂಪನಿ (ತಿರ್ಲಾಪುರ) ಗಳಿಂದ ಆ ಭಾಗದ ಅನೇಕ ಗ್ರಾಮ-ಪಟ್ಟಣಗಳಲ್ಲಿ ಪ್ರಯೋಗ ಮಾಡುತ್ತಾರೆ. ಹೀಗೆ ಆ ಕಾಲದ ಜನರ ಮೇಲೆ ದೊಡ್ಡ ಪ್ರಭಾವವನ್ನು ಬೀರಿದ ನಾಯ್ಕರ್ ಅವರ ನಾಟಕಗಳನ್ನು ಕುರಿತು ಗಂಭೀರವಾದ ವಿವೇಚನೆ ನಡೆಯದೇ ಇರುವುದು ಆಶ್ಚರ್ಯವನ್ನುಂಟು ಮಾಡುತ್ತದೆ.

**ಕಾದಂಬರಿ**

ನಾಟಕದಂತೆ ಕಾದಂಬರಿ ರಚನೆಯು ನಾಯ್ಕರ್ ಅವರ ಆಸಕ್ತಿಯ ಮುಖ್ಯಕ್ಷೇತ್ರ. ತಮ್ಮ ಮಕ್ಕಳ ಶಿಕ್ಷಣದ ಸಲುವಾಗಿ ಹುಬ್ಬಳ್ಳಿಯ ಶಾಲೆಯ ಮುಖ್ಯಗುರುಗಳಾಗಿ ಬಂದು ಧಾರವಾಡದಲ್ಲಿ ಮನೆಯನ್ನು ಮಾಡುತ್ತಾರೆ. ಧಾರವಾಡದ ಸಾಹಿತ್ಯಿಕ ವಾತಾವರಣದಲ್ಲಿ ಅವರ ಸಾಹಿತ್ಯ ರಚನೆಯ ಹರವು ವಿಸ್ತಾರವಾಗುತ್ತದೆ. ಧಾರವಾಡದ ಶ್ರೇಷ್ಠ ಶಿಕ್ಷಕ ಸಾಹಿತಿಗಳು ಆದ ಸುದರ್ಶನ ದೇಸಾಯಿ, ಎಂ. ಡಿ.

ಗೋಗೇರಿ, ನಿಂಗಣ್ಣ ಕುಂಟಿ ಮುಂತಾದವರ ಸಹಕಾರದೊಂದಿಗೆ ಧಾರವಾಡ ಜಿಲ್ಲಾ ಶಿಕ್ಷಕ ಸಾಹಿತ್ಯ ವೇದಿಕೆಯನ್ನು ಹುಟ್ಟುಹಾಕಿಕೊಂಡು ಅದರ ಅಧ್ಯಕ್ಷರೂ ಆದರು. ಅದರ ಮೂಲಕ ಅನೇಕ ಶಿಕ್ಷಕ ಸಾಹಿತಿಗಳ ಕೃತಿಯನ್ನು ಪ್ರಕಟಿಸಿದರು. ಅದರ ಜೊತೆಗೆ ತಾವು ಕೂಡ ಕಾದಂಬರಿಯಂತಹ ಸಾಹಿತ್ಯ ಪ್ರಕಾರದಲ್ಲಿ ಕೃತಿಯನ್ನು ರಚಿಸಿ ಅದರಲ್ಲಿ ಯಶಸ್ವಿಯೂ ಆದರು. ನಾಯ್ಕರ್ ಅವರು ಈವರೆಗೆ 'ಸೌಜನ್ಯ', 'ಸುಖ ಸಿಗದ ಸಾಧ್ವಿ', 'ತವರು ಮನೆ', 'ಹೊಸ ಹುಟ್ಟು', 'ವ್ಯವಸ್ಥೆ' ಮತ್ತು 'ಹೂವಿನ ಹುತ್ತ'ಗಳೆಂಬ ಆರು ಕಾದಂಬರಿಗಳ್ನನು ಬರೆದಿದ್ದಾರೆ. ಇವುಗಳಲ್ಲಿ ಮೊದಲಿನ ಐದು ಕಾದಂಬರಿಗಳು ಸಾಮಾಜಿಕ ಕಾದಂಬರಿಗಳ ಗುಂಪಿಗೆ ಸೇರಿದರೆ 'ಹೂವಿನ ಹುತ್ತ'ವೆಂಬುದು ಪತ್ತೇದಾರಿ ಕಾದಂಬರಿಯಾಗಿದೆ.

ಪವಿತ್ರ ಪ್ರೇಮಿಗಳಾದ ಗೌರಿ-ರಾಜೀವರ ಬಾಳು ಸಂಶಯದ ಉರುಳಿಗೆ ಸಿಕ್ಕು ಕೊಚ್ಚಿಕೊಂಡು ಹೋಗಿರುವ ಸಂಗತಿಯನ್ನು ಸಮರ್ಥವಾಗಿ ಕಟ್ಟಿಕೊಡುತ್ತದೆ. 'ಸೌಜನ್ಯ' ಕಾದಂಬರಿ. ತಾರುಣ್ಯದಲ್ಲಿಯೇ ಪತಿಯನ್ನು ಕಳೆದುಕೊಂಡು ತಮ್ಮ ಬಂಧು-ಬಾಂಧವರಿಂದ ತಿರಸ್ಕಾರಕ್ಕೆ ಒಳಗಾಗಿ ಪರಕೀಯರಿಂದ ಸಾಂತ್ವವನ್ನು ಪಡೆದರೂ ಕೂಡ ಈ ಬದುಕಿನಲ್ಲಿ ಸುಖವನ್ನೇ ಕಾಣದ ಸೇವಂತಿಯೆಂಬ ಹೆಣ್ಣು ಮಗಳು ಜೈನ ಸನ್ಯಾಸಿಗಳಂತೆ ಮರಣವನ್ನು ಬಯಸಿ ಜೀವನ ತ್ಯಾಗ ಮಾಡಿದ ಸಂಗತಿಯನ್ನು ಮನಮುಟ್ಟುವಂತೆ ತಿಳಿಸುವುದು 'ಸುಖಸಿಗದ ಸಾಧ್ವಿ' ಕಾದಂಬರಿ. ಅದೇ ರೀತಿ ತವರು ಮನೆಯವರಿಂದ ತಿರಸ್ಕಾರಕ್ಕೆ ಒಳಗಾಗಿಯು, ಅವರಿಂದ ಅನೇಕ ಅಪಮಾನಗಳು ಉಂಟಾದರೂ ಕೂಡ ತವರು ಮನೆಗೆ ಕೆಡುಕನ್ನು ಬಯಸದೆ ಒಳಿತನ್ನೇ ಬಯಸುವ ಆದರ್ಶ ಹೆಣ್ಣಿನ ಚಿತ್ರಣವನ್ನು ಕಟ್ಟಿಕೊಡುತ್ತದೆ. 'ತವರು ಮನೆ' ಕಾದಂಬರಿ. ಒಟ್ಟಿನಲ್ಲಿ ತ್ಯಾಗ, ಕರುಣೆ, ನಿಷ್ಕಲ್ಮಶವಾದ ಪ್ರೀತಿಯಂಥ ಮೌಲ್ಯಗಳು ನಮ್ಮ ಸಮಾಜದಲ್ಲಿ ಕಡಿಮೆಯಾಗುತ್ತಿದ್ದಾಗಲೂ ಆ ಆದರ್ಶ ಮೌಲ್ಯಗಳನ್ನು ಪುನರ್‌ಸ್ಥಾಪಿಸುವ ಪ್ರಯತ್ನವನ್ನು ನಾಯ್ಕರ್ ಅವರ ಕಾದಂಬರಿಗಳು ಮಾಡುತ್ತವೆ ಎಂದು ಹೇಳಿದರೆ ತಪ್ಪಾಗಲಾರದು.

**ಇತರ ಕೃತಿಗಳು**

ಆಧುನಿಕ ಸಾಹಿತ್ಯದ ವಿವಿಧ ಪ್ರಕಾರಗಳಾದ ಕಾವ್ಯ, ನಾಟಕ, ಸಣ್ಣಕಥೆ, ನಾಟಕ, ಕಾದಂಬರಿಗಳನ್ನು ಬರೆದಿರುವ ನಾಯ್ಕರ್ ಅವರು ಹಾಲುಮತ ಸಂಸ್ಕೃತಿಗೆ ಸಂಬಂಧಿಸಿದಂತೆ 'ಹಾಲುಮತಸ್ಥರು', 'ನಾವು ನಮ್ಮವರು' ಎಂಬ ಎರಡು ಕೃತಿಗಳನ್ನು ರಚಿಸಿದ್ದಾರೆ. ಈ ಕೃತಿಗಳಲ್ಲಿ ಕುರುಬರ ಇತಿಹಾಸ, ಭಾರತದಲ್ಲಿ ಕುರುಬರ ವಿವಿಧ ಹೆಸರುಗಳು, ಕುರುಬರ ಬೆಡಗುಗಳು ಮತ್ತು ಕುರುಬರ ದೇವರುಗಳು, ಕುರುಬರ ಮಹಾಪುರುಷಗಳ ಜೊತೆಗೆ ಆಧುನಿಕ ಸಾಧಕರ ಸಾಹಿತಿಗಳ ಪರಿಚಯವನ್ನು ಈ ಕೃತಿಗಳಲ್ಲಿ ಮಾಡಿದ್ದಾರೆ. ಇವಲ್ಲದೇ ಶ್ರೇಷ್ಠ ಸಹಕಾರಿ ಬಂಧು ಸಾಸ್ವಿಹಳ್ಳಿ ಶಿವನಗೌಡರು ಮತ್ತು ಸಾಸ್ವಿಹಳ್ಳಿಯ ಶ್ರೀಬಸವಾನಂದರು ಎಂಬ ಹೆಸರಿನ ಎರಡು ಜೀವನ ಚರಿತ್ರೆಗಳನ್ನು ರಚಿಸಿದ್ದಾರೆ.

ಹೀಗೆ ಆಧುನಿಕ ಸಾಹಿತ್ಯ ಸಂದರ್ಭದಲ್ಲಿ ನಿರಂತರ ಆರು ದಶಕಗಳ ಕಾಲ ಸಾಹಿತ್ಯ ರಚನೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಆಧುನಿಕ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಉತ್ತಮವಾದ ಕೃತಿಗಳನ್ನು ರಚಿಸಿದ್ದರೂ ಕೂಡ ಕನ್ನಡ ವಿದ್ವತ್‌ಲೋಕ ಅವರ ಕೃತಿಗಳತ್ತ ಗಮನ ಹರಿಸದೇ ಇರುವುದು ಆಶ್ಚರ್ಯವನ್ನುಂಟು ಮಾಡುತ್ತದೆ. ಸಾಹಿತ್ಯ ರಚನೆಯಂತೆ ಅನೇಕ ಸಂಘಟನೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ನಿಸ್ವಾರ್ಥ ಸೇವೆಯನ್ನು ಸಲ್ಲಿಸಿರುವುದು ಇವರ ಆದರ್ಶ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ. ಧಾರವಾಡ ಜಿಲ್ಲಾ ಶಿಕ್ಷಕ ಸಾಹಿತ್ಯ ವೇದಿಕೆಯ ಅಧ್ಯಕ್ಷರಾಗಿ, ಅನೇಕ ಶಿಕ್ಷಕ ಸಾಹಿತಿಗಳ ಸಹಕಾರದಿಂದ ಅನೇಕ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ವಿಜಾಪುರ ಶ್ರೇಷ್ಠ ಮಕ್ಕಳ ಸಾಹಿತಿ ಶಿಶು ಸಂಗಮೇಶ ಅವರ ಜೊತೆಗೂಡಿ 'ಎರಡನೆಯ ಮಕ್ಕಳ ಸಾಹಿತ್ಯ' ಸಮ್ಮೇಳನದ ಯಶಸ್ಸಿಗೆ ದುಡಿದಿರುವುದಲ್ಲದೇ ಈಶ್ವರ ಕಮ್ಮಾರ ಅವರ ಜೊತೆಗೂಡಿ 'ಬಟ್ಟಲ ತುಂಬ ಬಾರಿ ಕಾಯಿ' ಎಂಬ ಹೆಸರಿನ ಮಕ್ಕಳ ಕಾವ್ಯ ಗುಚ್ಚವನ್ನು ಪ್ರಕಟಿಸಿದ್ದಾರೆ. ಪತ್ತೇದಾರಿ ಕಾದಂಬರಿಕಾರ, ಸುದರ್ಶನ ದೇಸಾಯಿ ಅವರ ಸಂಕಲ್ಪದಂತೆ ಅಖಿಲ ಭಾರತ ಪ್ರಥಮ ಪತ್ತೇದಾರಿ ಸಾಹಿತ್ಯ ಸಮ್ಮೇಳನ ಸಂಘಟಿಸುವಲ್ಲಿ ಸುದರ್ಶನ ದೇಸಾಯಿಯವರಿಗೆ ಹೆಗಲಿಗೆ ಹೆಗಲು ಕೊಟ್ಟು ದುಡಿದು ಅದರ ಯಶಸ್ಸಿಗೆ ಕಾರಣರಾದವರಲ್ಲಿ ಬ. ಪ. ನಾಯ್ಕರ್ ಮತ್ತು ನಿಂಗಣ್ಣ ಕುಂಟಿ ಅವರು ಮುಖ್ಯರಾಗಿದ್ದಾರೆ. ಇವರಲ್ಲದೆ 'ಮಕ್ಕಳ ಮನೆಯ' ಅಧ್ಯಕ್ಷರಾಗಿ ದುಡಿದಿದ್ದಾರೆ. ಜಿಲ್ಲಾ ಶೈಕ್ಷಣಿಕ ವಿಚಾರ ಪುಸ್ತಕವನ್ನು ಹೊರತರುವಲ್ಲಿಯೂ ಇವರು ಸೇವೆಯನ್ನು ಸಲ್ಲಿಸಿದ್ದಾರೆ.

ಒಟ್ಟಿನಲ್ಲಿ ಬ.ಪ. ನಾಯ್ಕರ್ ಅವರು ಶಿಕ್ಷಕರಾಗಿ ನಿಷ್ಠೆ-ಪ್ರಾಮಾಣಿಕತೆಯಿಂದ ಸೇವೆಯನ್ನು ಸಲ್ಲಿಸಿದ್ದಾರೆ. ಸಾಹಿತಿಯಾಗಿ ಹಲವಾರು ಕೃತಿಗಳನ್ನು ಕನ್ನಡ ಸಾಹಿತ್ಯಕ್ಕೆ ಕಾಣಿಕೆಯಾಗಿ ನೀಡಿದ್ದಾರೆ. ಹಲವಾರು ಸಂಘಟನೆಗಳಲ್ಲಿಯೂ ದುಡಿದಿರುವ ನಾಯ್ಕರ್ ಅವರ ಸೇವೆಗೆ ಸಿಗಬೇಕಾದ ಗೌರವಗಳು ಸಿಕ್ಕಿಲ್ಲವೆಂದು ನೋವಿನಿಂದ ಹೇಳಬೇಕಾಗುತ್ತದೆ. ಆದರೂ ನವಲಗುಂದ ತಾಲೂಕಾ ಸಾಹಿತ್ಯ ಸಮ್ಮೇಳನವು ಸಾಸ್ವಿಹಳ್ಳಿ ಗ್ರಾಮದಲ್ಲಿ ಜರುಗಿತ್ತು. ಈ ಸಮ್ಮೇಳನದ ಅಧ್ಯಕ್ಷತೆಯನ್ನು ನಾಡಿನ ಹಿರಿಯ ಕವಿಗಳಾದ ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ಅವರು ವಹಿಸಿದ್ದರು. ಸಾನಿಧ್ಯವನ್ನು ಗದುಗಿನ ತೋಂಟದಾರ್ಯ ಮಠದ ಪೂಜ್ಯ ಸಿದ್ಧಲಿಂಗ ಮಹಾಸ್ವಾಮಿಗಳು ವಹಿಸಿದ್ದರು. ಆ ಸಮ್ಮೇಳನದ ಉದ್ಘಾಟನೆ ಗೌರವವು ನಾಯ್ಕರ್ ಅವರಿಗೆ ಲಭಿಸಿತ್ತು. ಅದೇ ರೀತಿ ನವಲಗುಂದ ತಾಲೂಕು ಮೂರನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕವಿಗೋಷ್ಠಿಯ ಉದ್ಘಾಟನೆಯ ಅವಕಾಶವು ಇವರಿಗೆ ದೊರಕಿತ್ತು. ಇದೇ ಸಮ್ಮೇಳನದಲ್ಲಿ ಗದುಗಿನ ತೋಂಟದಾರ್ಯ ಮಠದ ಪೂಜ್ಯ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ಶ್ರೇಷ್ಠ ನಾಟಕಕಾರರೆಂದು ಬಿರುದನ್ನು ನೀಡಿ ಗೌರವಿಸಿದ್ದು ಇವರ ಸಾಹಿತ್ಯ ಸೇವೆಗೆ ಸಂದ ಗೌರವವಾಗಿದೆ.

**ಬ. ಪ. ನಾಯ್ಕರ್ ಅವರ ಕೃತಿಗಳು**

***ಕಾವ್ಯ ಸಂಕಲನ***

೧. ಚಂದ್ರೋದಯ (೧೯೬೮)

೨. ಶಾಂತಿದೀಪ

***ಸಣ್ಣ ಕಥೆ***

೧. ಆ ರಾತ್ರಿ (೧೯೯೧)

***ನಾಟಕಗಳು***

**ಏಕಾಂಕ ನಾಟಕಗಳು**

೧. ಭಕ್ತ ಜ್ಯೋತಿ

೨. ಸತ್ವ ಪರೀಕ್ಷೆ

೩. ಸಾವಿತ್ರಿ

೪. ಗಿರಿಜಾ ಕಲ್ಯಾಣ

೫. ವಿಜಯಶ್ರೀ

**ಮೂರಂಕಿನ ನಾಟಕಗಳು**

೧. ಮಿತ್ರದ್ರೋಹ

೨. ಕುಟುಂಬ

೩. ಮಂಗಲಾಕ್ಷತೆ

೪. ಜೀವನಗಂಗಾ

೫. ಅಕ್ಷತಾಯೋಗ

೬. ಅಣ್ಣ ತಂದ ಹೆಣ್ಣು

೭. ವಿಜಯಶ್ರೀ

೮. ಪ್ರಾಣಾರ್ಪಣ

೯. ಸಕಲಗುಣ ಸಂಪನ್ನ

**ಕಾದಂಬರಿಗಳು**

೧. ಸೌಜನ್ಯ

೨. ಹೂವಿನ ಹುತ್ತ (ಪತ್ತೆದಾರಿ)

೩. ಸುಖಸಿಗದ ಸಾಧ್ವಿ

೪. ತವರು ಮನೆ

೫. ಹೊಸಹುಟ್ಟು

೬. ವ್ಯವಸ್ಥೆ

**ಇತರ ಕೃತಿಗಳು (ಧಾರ್ಮಿಕ)**

೧. ಹಾಲುಮತಸ್ಥರು

೨. ನಾವು ನಮ್ಮವರು

**ಜೀವನ ಚರಿತ್ರೆ**

೧. ಸಹಕಾರು ಬಂಧು ಶಿವನಗೌಡರು

೨. ಸಾಸ್ವಿಹಳ್ಳಿಯ ಶ್ರೀ ಬಸವಾನಂದರು

## ಭಾಗ ಐದು - ಸಮಾರೋಪ ಭಾಷಣ:

## ೨೫. ಕುರುಬರ ಉಪಪಂಗಡಗಳ ಅಧ್ಯಯನಕ್ಕೆ ನಾಂದಿ

ಕನ್ನಡ ವಿಶ್ವವಿದ್ಯಾನಿಲಯದ ಹಾಲುಮತ ಅಧ್ಯಯನ ಪೀಠವು ಚಳ್ಳಕೆರೆಯ ಕನಕ ನೌಕರರ ಸಂಘದ ಸಹಯೋಗದಲ್ಲಿ ಬ.ಪ. ನಾಯ್ಕರ್ ಅವರ ಅಧ್ಯಕ್ಷತೆಯಲ್ಲಿ ಎರಡನೆಯ ಹಾಲುಮತ ಸಮ್ಮೇಳನವನ್ನು ಏರ್ಪಡಿಸಿ ಸಮಾರೋಪ ಭಾಷಣ ಮಾಡಲು ನನ್ನನ್ನು ಆಹ್ವಾನಿಸಿದ್ದಕ್ಕಾಗಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಎ. ಮುರಿಗೆಪ್ಪ ಅವರಿಗೆ, ಕುಲಸಚಿವರಾದ ಎಸ್. ಎಸ್. ಪೂಜಾರ ಅವರಿಗೆ ಹಾಗೂ ಹಾಲುಮತ ಅಧ್ಯಯನ ಪೀಠದ ಸಂಚಾಲಕರಾದ ಡಾ. ಎಫ್. ಟಿ. ಹಳ್ಳಿಕೇರಿ ಅವರಿಗೆ ಧನ್ಯವಾದಗಳು. ಹಾಲುಮತದ ಬಗ್ಗೆ ನಾನು ಅಧ್ಯಯನ ಮಾಡಿದವನಲ್ಲ. ಆದರೆ ಕಳೆದ ನಲ್ಕು ದಶಕಗಳಿಂದಲೂ ಸಂಸ್ಕೃತಿ ಅಧ್ಯಯನದಲ್ಲಿ ತೊಡಗಿಸಿಕೊಂಡು, ಪಶುಪಾಲಕ ಸಮುದಾಯದವರಾದ ಕಾಡುಗೊಲ್ಲರ ಬಗ್ಗೆ ಅಧ್ಯಯನ ಮಾಡಿದ್ದೇನೆ. ಕಾಡುಗೊಲ್ಲರಿಗೆ ಮತ್ತು ಕುರುಬರಿಗೆ ನಿಕಟವಾದ ಸಂಬಂಧವಿರುವುದರಿಂದ, ನಾನು ಏನಾದರೂ ಈ ಬಗ್ಗೆ ಹೇಳಬಹುದೆಂದು ಭಾವಿಸಿ ನನ್ನನ್ನು ಆಹ್ವಾನಿಸಿರುವುದು ನನಗೆ ಸಂತೋಷ ಉಂಟುಮಾಡಿದೆ. ಹಾಲುಮತದ ವಿವಿಧ ಉಪಜಾತಿಗಳ ಬಗ್ಗೆ ವಿದ್ವಾಂಸರು ಈವರೆಗೆ ಮಂಡಿಸಿರುವ ಪ್ರಬಂಧಗಳು ಅನೇಕ ವಿಷಯಗಳನ್ನು ಒಳಗೊಂಡು ತುಂಬ ಉಪಯುಕ್ತವಾಗಿವೆ. ಕನ್ನಡ ವಿಶ್ವವಿದ್ಯಾಲಯದಲ್ಲಿ ೨೦೦೭ರಲ್ಲಿ ಆರಂಭವಾದ ಹಾಲುಮತ ಅಧ್ಯಯನ ಪೀಠ ಕಳೆದ ಮೂರು ವರ್ಷಗಳಲ್ಲಿ ಒಳ್ಳೆಯ ಕೆಲಸ ಮಾಡಿದೆ. ಇವುಗಳಲ್ಲಿ ವಿಚಾರ ಸಂಕಿರಣಗಳನ್ನು ಏರ್ಪಡಿಸಿ ಅಲ್ಲಿ ಮಂಡಿತವಾದ ಪ್ರಬಂಧಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವುದು ಒಂದು ಮುಖ್ಯವಾದ ಕಾರ್ಯಕ್ರಮ. ಮೊದಲನೆಯ ವಿಚಾರ ಸಂಕಿರಣದಲ್ಲಿ ಹಾಲುಮತ ಅಧ್ಯಯನದ ಆಕರಗಳು, ಸಾಂಸ್ಕೃತಿಕ ವೀರರು, ದೈವಗಳು, ಸಾಧಕರು ಮೊದಲಾದ ವಿಷಯಗಳ ಬಗ್ಗೆ ಮಂಡಿತವಾದ ಪ್ರಬಂಧಗಳು ಪುಸ್ತಕ ರೂಪದಲ್ಲಿ ಪ್ರಕಟವಾಗಿವೆ. ಈಗ ಹಾಲುಮತದ ಉಪಜಾತಿಗಳ ಬಗ್ಗೆ ನಡೆಯುತ್ತಿರುವ ವಿಚಾರ ಸಂಕಿರಣದ ಪ್ರಬಂಧಗಳು ಪುಸ್ತಕ ರೂಪದಲ್ಲಿ ಪ್ರಕಟವಾಗುತ್ತಿರುವುದು ಸಂತೋಷದ ಸಂಗತಿಯಾಗಿದೆ. ಇದಕ್ಕಾಗಿ ವಿಶೇಷವಾಗಿ

ಶ್ರಮಿಸುವ ಡಾ. ಎಫ್. ಟಿ. ಹಳ್ಳಿಕೇರಿ ಅವರಿಗೆ ನನ್ನ ಅಭಿನಂದನೆಗಳು. ಕಾಡುಗೊಲ್ಲರ ಬಗ್ಗೆ ಅಧ್ಯಯನ ಮಾಡಿರುವ ನನಗೆ ಈ ಬುಡಕಟ್ಟಿನೊಡನೆ ನಿಕಟಸಂಪರ್ಕ ಹೊಂದಿರುವ ಕುರುಬರ ಬಗ್ಗೆ ಹೆಚ್ಚು ವಿಷಯಗಳನ್ನು ತಿಳಿಯುವ ಸದಾವಕಾಶ ದೊರೆತಿದೆ.

೧

ಕರ್ನಾಟಕ ಜಾತಿ ಮತ್ತು ಬುಡಕಟ್ಟುಗಳ ಬಗ್ಗೆ ಸಂಬಂಧಿಸಿದಂತೆ, ಹೆಚ್. ಸಿ. ನಂಜುಂಡಯ್ಯ ಮತ್ತು ಎಲ್. ಕೆ. ಅನಂತಕೃಷ್ಣ ಅಯ್ಯರ್ ಅವರ ನಾಲ್ಕು ಸಂಪುಟಗಳ The Mysore Tribes and Castes ಎಂಬ ಗ್ರಂಥವೇ ಮೊದಲನೆಯದು. ನಾಲ್ವಡಿ ಕೃಷ್ಣರಾಜ ಒಡೆಯರು ನೇಮಿಸಿದ್ದ ಮಿಲ್ಲರ್ ಕಮಿಟಿ ವರದಿಯ ಆಧಾರದ ಮೇಲೆ ಹಿಂದುಳಿದ ವರ್ಗಗಲಿಗೆ ಮೀಸಲಾತಿ ಕಲ್ಪಿಸಲಾಯಿತು. ಆದರೆ ಹಿಂದುಳಿದ ಜಾತಿಗಳಿಗೆ ಮತ್ತು ಬುಡಕಟ್ಟುಗಳಿಗೆ ವಿದ್ಯಾಭ್ಯಾಸದಲ್ಲಿ ಹಾಗೂ ಉದ್ಯೋಗದಲ್ಲಿ ಹೆಚ್ಚಿನ ಮೀಸಲಾತಿ ಸೌಲಭ್ಯ ದೊರೆತದ್ದು ೧೯೭೭ರಲ್ಲಿ ಮುಖ್ಯಮಂತ್ರಿ ಶ್ರೀ ದೇವರಾಜ ಅರಸ್ ಅವರು ನೇಮಿಸಿ ಅನುಷ್ಠಾನಗೊಳಿಸಿದ ಹಾವನೂರು ವರದಿಯಿಂದ. ಹಿಂದುಳಿದ ವರ್ಗಗಳ ಅಭಿವೃದ್ಧಿಯ ದೃಷ್ಟಿಯಿಂದ ಇದು ಮಹತ್ವಪೂರ್ಣ ಘಟ್ಟ.

ಅಲ್ಲಿಂದೀಚೆಗೆ ಶಾಲಾ ಕಾಲೇಜುಗಳಲ್ಲಿ, ವಿಶ್ವವಿದ್ಯಾಲಯಗಳಲ್ಲಿ ಹಿಂದುಳಿದ ಜಾತಿ ಬುಡಕಟ್ಟುಗಳ ಅನೇಕ ವಿದ್ಯಾರ್ಥಿಗಳು ಶಿಕ್ಷಣ ಪಡೆದು ಸರಕಾರ ಹಾಗೂ ಇತರೆ ಕ್ಷೇತ್ರಗಳಲ್ಲಿ ಉದ್ಯೋಗದಲ್ಲಿದ್ದಾರೆ. ೧೯೬೬ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಎಂ. ಎ. ತರಗತಿಯಲ್ಲಿ ಜಾನಪದವನ್ನು ಐಚ್ಛಿಕ ವಿಷಯವಾಗಿ, ಅನಂತರ ಜಾನಪದ ಅಧ್ಯಯನಕ್ಕೆ ಪ್ರತ್ಯೇಕವಾದ ವಿ.ವಿ. ಕೋರ್ಸ್‌ನ್ನು ಆರಂಭಿಸಿದ್ದು ಇನ್ನೊಂದು ಮಹತ್ವದ ಘಟನೆ. ಪ್ರೊ. ದೇಜಗೌ, ಪ್ರೊ. ಹಾ. ಮಾ. ನಾಯಕ ಹಾಗೂ ಪ್ರೊ. ಜೀಶಂಪ ಅವರ ಸಂಘಟಿತ ಪ್ರಯತ್ನದಿಂದ ಆರಂಭವಾದ ಈ ಘಟನೆಯಿಂದ ಮುಂದಕ್ಕೆ ಕರ್ನಾಟಕದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿಯೂ ಕನ್ನಡ ಎಂ. ಎ. ಮತ್ತು ಜಾನಪದ ಎಂ. ಎ. ವಿದ್ಯಾರ್ಥಿಗಳು ಎಂ.ಫಿಲ್ ಮತ್ತು ಪಿ. ಹೆಚ್. ಡಿ. ಪದವಿಗಳಿಗೂ ಜಾತಿಗಳು ಮತ್ತು ಬುಡಕಟ್ಟುಗಳ ಬಗ್ಗೆ ನೂರಾರು ನಿಬಂಧಗಳನ್ನು ಮಹಾಪ್ರಬಂಧಗಳ್ನನೂ ರಚಿಸಿದ್ದಾರೆ. ಕೆಲವು ಪುಸ್ತಕ ರೂಪದಲ್ಲಿಯೇ ಪ್ರಕಟವಾಗಿವೆ. ಇವುಗಳಲ್ಲಿ ಬಹುಪಾಲು ವಿವರಣಾತ್ಮಕ ಅಧ್ಯಯನಗಳಾಗಿದ್ದು, ಕೆಲವು ಮಾತ್ರ ವಿಶ್ಲೇಷಣಾತ್ಮಕವಾಗಿವೆ. ನಾನು ಕಾಡುಗೊಲ್ಲರ ಬಗ್ಗೆ ಪಿ.ಹೆಚ್. ಡಿ. ಪದವಿಗಾಗಿ ಸಂಶೋಧನೆಯನ್ನು ೧೯೭೦ರಲ್ಲಿ ಆರಂಭಿಸಿದ್ದಾಗ ಕರ್ನಾಟಕದ ವಿಶ್ವವಿದ್ಯಾನಿಲಯಗಳ ಸಮಾಜ ವಿಜ್ಞಾನಿಗಳ ವಿಜ್ಞಾನ ವಿಭಾಗದಲ್ಲಿ ಇಂಗ್ಲಿಷ್‌ನಲ್ಲಿ ಜಾತಿ, ಬುಡಕಟ್ಟುಗಳ ಬಗ್ಗೆ ಎಲ್ಲೋ ಕೆಲವು ಅಧ್ಯಯನಗಳು ನಡೆಯುತ್ತಿದ್ದವು. ಜಾತಿಗಳ ಅಧ್ಯಯನ ಸಮಾಜ ವಿಜ್ಞಾನ, ವಿಭಾಗಗಳ್ಲಿಯೂ, ಬುಡಕಟ್ಟುಗಳ ಅಧ್ಯಯನ ಮಾನವ ವಿಜ್ಞಾನಗಳ ಭಾಗಗಳಲ್ಲಿಯೂ ನಡೆಯುವುದು ಅಲಿಖಿತ ನಿಯಮವಾಗಿತ್ತು. ಕನ್ನಡ ವಿಭಾಗಗಳಲ್ಲಿ ಬುಡಕಟ್ಟುಗಳ ಅಧ್ಯಯನ ಮಾಡಬಹುದೆಂಬ ಕಲ್ಪನೆ ಕೂಡ ಇರಲಿಲ್ಲ. ಆ ಸಂದರ್ಭದಲ್ಲಿ ಜಗತ್ತಿನಲ್ಲಿ ಹಾಗೂ ಭಾರತದಲ್ಲಿ ನಡೆದಿದ್ದ ಬುಡಕಟ್ಟು ಅಧ್ಯಯನಗಳನ್ನು ನಾನು ಅಧ್ಯಯನ ಮಾಡಿ ಬುಡಕಟ್ಟು ಅಧ್ಯಯನದ ಮಾದರಿಯನ್ನು ರೂಪಿಸಿಕೊಂಡೆ. ಕರ್ನಾಟಕದ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ವಿಭಾಗಗಳಲ್ಲಿ ಕನ್ನಡದಲ್ಲಿ ಬರೆದ ಮೊಟ್ಟಮೊದಲ ಪಿಹೆಚ್‌ಡಿ ಮಹಾಪ್ರಬಂಧ ನನ್ನದು. ಅನಂತರ ಈ ಬಗೆಯ ಅನೇಕ ಮಹಾಪ್ರಬಂಧಗಳು ಪ್ರಕಟವಾಗಿರುವುದು ನನಗೆ ಸಂತೋಷದ ಸಂಗತಿಯಾಗಿದೆ. ಇಂದು ಸಮಾಜ ವಿಜ್ಞಾನ ಮತ್ತು ಮಾನವ ವಿಜ್ಞಾನ ವಿಭಾಗಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡ, ಜಾನಪದ ಮತ್ತು ಬುಡಕಟ್ಟು ವಿಭಾಗಗಳಲ್ಲಿ ಜಾತಿ ಮತ್ತು ಬುಡಕಟ್ಟುಗಳ ಬಗ್ಗೆ ಸಂಬಂಧಗಳು ಹಾಗೂ ಮಹಾಪ್ರಬಂಧಗಳು ರಚನೆಯಾಗುತ್ತಿವೆ. Anthoropological survey of India ಸಂಸ್ಥೆಯಲ್ಲಿ ಕರ್ನಾಟಕದ ಕೆಲವು ಪರಿಶಿಷ್ಟ ಬುಡಕಟ್ಟುಗಳ ಬಗ್ಗೆ (Scheduled tribes)ಇಂಗ್ಲಿಷ್‌ನಲ್ಲಿ gfrMಗ್ರಂಥಗಳು ಪ್ರಕಟವಾಗಿವೆ.

ಕರ್ನಾಟಕದಲ್ಲಿ ಕಳೆದ ಮೂರು ದಶಕಗಳಿಂದ ಸಮುದಾಯಗಳ ಅಧ್ಯಯನಗಳು (Community studies)ಹೆಚ್ಚು ಮಹತ್ವ ಪಡೆದುಕೊಂಡಿವೆ. ಸಮುದಾಯಗಳಲ್ಲಿ ವಿವಿಧ ಬಗೆಗಳಿವೆ. ಧಾರ್ಮಿಕ ಸಮುದಾಯಗಳು, ಭೌತಿಕ ಸಮುದಾಯಗಳು, ವೃತ್ತಿ ಸಮುದಾಯಗಳು, ಜಾತಿಗಳು ಬುಡಕಟ್ಟುಗಳು, ಇವುಗಳಲ್ಲಿ ಜಾತಿಗಳು, ಬುಡಕಟ್ಟುಗಳು ರಕ್ತ ಸಂಬಂಧದಿಂದ ಕೂಡಿವೆ. ಇವುಗಳಲ್ಲಿ ಹುಟ್ಟಿನಿಂದ ನಿರ್ಧಾರವಾಗುವ ಅತ್ಯಂತ ಬಿಗಿ ಕಟ್ಟಾದ ಜಾತಿ ವ್ಯವಸ್ಥೆ ಭಾರತದಲ್ಲಿ ಹಿಂದೂ ಧರ್ಮಕ್ಕೆ ವಿಶಿಷ್ಟವಾದುದಾಗಿದೆ. ಇತರ ಧರ್ಮಗಳಲ್ಲಿ ಹಾಗೂ ದೇಶಗಳಲ್ಲಿ ಜಾತಿಯನ್ನು ಹೋಲುವ ಸಮುದಾಯಗಳಿದ್ದರೂ ಅವು ಹಿಂದೂ ಧರ್ಮದ ಜಾತಿ ವ್ಯವಸ್ಥೆಯಷ್ಟು

ಸಂಕೀರ್ಣ ಸ್ವರೂದಲ್ಲಿಲ್ಲ. ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ, ಆಧುನಿಕ ವಿದ್ಯಾಭ್ಯಾಸ, ಕೈಗಾರೀಕರಣ, ಜಾಗತೀಕರಣ ಪ್ರಕ್ರಿಯೆಗಳಿಂದ ಜಾತಿ ವ್ಯವಸ್ಥೆ ನಶಿಸಬಹುದೆಂಬ ನಿರೀಕ್ಷೆ ಸುಳ್ಳಾಗಿದೆ. ಜಾತಿ ವ್ಯವಸ್ಥೆ ಇನ್ನೂ ಪ್ರಬಲವಾಗುತ್ತಿದೆ. ಹೀಗಾಗಿ ಜಾತಿ ವ್ಯವಸ್ಥೆ ಒಂದು ವಾಸ್ತವ ಸ್ಥಿತಿ ಎಂಬುದನ್ನು ಒಪ್ಪಿಕೊಂಡು, ಜಾತಿಗಳ ನಡುವೆ ಸಾಮರಸ್ಯವನ್ನು ತರುವುದು ಹೇಗೆ ಎಂಬುದರ ವಿಚಾರ ಮಾಡಬೇಕಾದ, ಕಾರ್ಯಪ್ರವೃತ್ತರಾಗಬೇಕಾದ ಪರಿಸ್ಥಿತಿ ಉಂಟಾಗಿದೆ. ಜಗತ್ತಿನಾದ್ಯಂತ ಬುಡಕಟ್ಟುಗಳಿವೆ. ಭಾರತದಲ್ಲಿ ಬುಡಕಟ್ಟುಗಳು ಜಾತಿ ವ್ಯವಸ್ಥೆಯಿಂದ ಶತಮಾನಗಳ ಕಾಲ ದೂರ ಉಳಿದಿದ್ದು, ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಜಾತಿಗಳ ಸಂಪರ್ಕಕ್ಕೆ ಬಂದದ್ದರಿಂದ ಇವು ಬುಡಕಟ್ಟುಗಳ ಮೂಲ ರೂಪದಲ್ಲಿ ಉಳಿದಿಲ್ಲ. ಸಂಕೀರ್ಣ ಸ್ಥಿತಿಯಲ್ಲಿವೆ. ಆಧುನೀಕರಣ ಮತ್ತು ಜಾಗತೀಕರಣ ಪ್ರಕ್ರಿಯೆಗಳಿಂದ ಇವು ಪರಿವರ್ತನೆಯ ಹಂತದಲ್ಲಿವೆ. ಇವು ಉಳಿಯುವುದೇ ಕಷ್ಟಕರವಾಗಿದೆ.

ಜಾತಿ-ಉಪಜಾತಿಗಳ, ಬುಡಕಟ್ಟುಗಳ ಮತ್ತು ಅವುಗಳ ಬೆಡಗುಗಳ ಅಧ್ಯಯನದ ಉದ್ದೇಶಗಳು ಕೆಳಕಂಡಂತಿವೆ:

೧. ಬ್ರಿಟಿಷ್ ವಸಾಹತುಷಾಹಿ ಕಾಲಾವಧಿಯಲ್ಲಿ ನಡೆದ ಜಾತಿ/ಬುಡಕಟ್ಟುಗಳ ಅಧ್ಯಯನಕ್ಕೆ ಎರಡು ಉದ್ದೇಶಗಳಿದ್ದವು. ಈ ಅಧ್ಯಯನದ ಮೂಲಕ ಜನರ ಮನಸ್ಥಿತಿಯನ್ನು ತಿಳಿದು ಅವರನ್ನು ಆಡಳಿತದ ಮೂಲಕ ನಿಯಂತ್ರಿಸುವುದು ಮೊದಲನೆಯ ಉದ್ದೇಶ. ಅವರ ಧರ್ಮವನ್ನು ಚೆನ್ನಾಗಿ ಅರ್ಥಮಾಡಿಕೊಂಡು ಕ್ರೈಸ್ತ ಧರ್ಮಕ್ಕೆ ಮತಾಂತರ ಮಾಡುವುದು ಎರಡನೆಯ ಉದ್ದೇಶ.

೨. ಸ್ವಾತಂತ್ರಾ ನಂತರ ಭಾರತದಲ್ಲಿ ನಡೆಯುತ್ತಿರುವ ಅಧ್ಯಯನಗಳು ಜಾತಿ/ಬುಡಕಟ್ಟುಗಳ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಜೀವನವನ್ನು ಉತ್ತಮಗೊಳಿಸುವ ಉದ್ದೇಶ ಹೊಂದಿವೆ. ಈ ಬಗ್ಗೆ ಸರ್ಕಾರಗಳು ಆಸಕ್ತಿ ಹೊಂದಿವೆ. ಹಾಗೆಯೇ ಜಾತಿ/ಬುಡಕಟ್ಟು ಸಮುದಾಯಗಳೂ ಆಸಕ್ತಿ ಹೊಂದಿವೆ. ಬುಡಕಟ್ಟುಗಳ ಜಾತಿ ಜಾತಿಗಳ ಜೀವನಕ್ರಮಗಳು ಆಧುನಿಕ ಕಾಲಕ್ಕೆ ಮೊದಲಿಗೆ ೧೯ನೆಯ ಶತಮಾನದ ಕೊನೆಯವರೆಗೆ ಹೇಗಿದ್ದವು? ಆಧುನಿಕತೆಯಿಂದಾಗಿ ಇಪ್ಪತ್ತನೆಯ ಶತಮಾನದಲ್ಲಿ ಹೇಗೆ ಬದಲಾಗಿವೆ? ಜಾಗತೀಕರಣದ ಸಂದರ್ಭದಲ್ಲಿ ಹೇಗೆ ಬದಲಾಗುತ್ತವೆ? ಈ ಬಗ್ಗೆ ಅಧ್ಯಯನ ಮಾಡುವುದು ಅಗತ್ಯವಾಗಿದೆ. ಅನ್ವಯಿಕವಾದ ಈ ಅಧ್ಯಯನಗಳಿಂದ, ಇವು ಸರಿಯಾಗಿ ಅನುಷ್ಠಾನಗೊಂಡರೆ, ಸರಕಾರಗಳು, ಈ ಸಮುದಾಯಗಳಿಗೆ ನೆರವಾಗಲು ಸಾಧ್ಯವಾಗುತ್ತದೆ.

೩. ಪ್ರತಿಯೊಂದು ಸಮುದಾಯವೂ ತನ್ನ ಮೂಲದ ಪಾರಂಪರಿಕ ಜ್ಞಾನವನ್ನು ಸಮಕಾಲೀನ ಜೀವನಕ್ಕೆ ಅನ್ವಯಿಸಿ, ಉಪಯುಕ್ತವಾದುದನ್ನು ಉಳಿಸಿಕೊಂಡು ಮುಂದುವರೆಯಬೇಕಾಗುತ್ತದೆ. ಹಾಗೆಯೇ ನಿರುಪಯುಕ್ತವಾದುದನ್ನು, ಹಾನಿಕಾರಕವಾದುದನ್ನು, ಬೆಳವಣಿಗೆಗೆ ಅಡೆತಡೆಯಾಗಿರುವ ಮೂಢನಂಬಿಕೆಗಳನ್ನು ವೈಜ್ಞಾನಿಕ ವೈಚಾರಿಕ ದೃಷ್ಟಿಯಿಂದ, ವಿಮರ್ಶಾತ್ಮಕವಾಗಿ ಪರಿಶೀಲಿಸಿ, ಉಪಯುಕ್ತವಾದುದನ್ನು ಉಳಿಸಿಕೊಂಡು, ಉಳಿದುವನ್ನು ಕೈಬಿಟ್ಟು ಮುಂದುವರೆಯಬೇಕಾಗುತ್ತದೆ. ಇದು ಭಾರತದ ಎಲ್ಲಾ ಧಾರ್ಮಿಕ ಸಮುದಾಯಗಳಿಗೂ, ಬುಡಕಟ್ಟುಗಳಿಗೂ ಹಿಂದೂ ಧರ್ಮದ ಎಲ್ಲಾ ಜಾತಿಗಳಿಗೂ ಅನ್ವಯವಾಗಬೇಕು.

೪. ಹಿಂದೂ ಧರ್ಮದಲ್ಲಿ ವೈದಿಕ ಧರ್ಮವೇ ಶ್ರೇಷ್ಠ ಎಂಬ ಯಜಮಾನಿಕೆಯ ಧೋರಣೆಯನ್ನು ವಿರೋಧಿಸಿ, ತಮ್ಮ ಜಾತಿ ಬುಡಕಟ್ಟುಗಳಲ್ಲಿ ಹಾಗೂ ಉಪಜಾತಿ, ಬೆಡಗು ಬಳಿಗಳಲ್ಲಿಯೂ ಮೌಲಿಕವಾದ ಅಂಶಗಳಿವೆ ಎಂಬುದನ್ನು ಆಧಾರ ಸಮೇತ ಸಾಧಿಸಿ ತೋರಿಸುವುದು. ಆ ಮೂಲಕ ಜಾತಿಯ ಕೀಳರಿಮೆಯನ್ನು ಮೀರಿ, ಎಲ್ಲರಿಗೂ ತಾವು ಸಮಾನರಾದವರು ಎಂದು ಜಗತ್ತಿಗೆ ತೋರಿಸುವುದು ಹಾಗೂ ತಮ್ಮ ಸಾಂಸ್ಕೃತಿಕ ಅನನ್ಯತೆಯನ್ನು ತಮ್ಮ ಪುರಾಣಗಳ, ಐತಿಹ್ಯಗಳ ಹಾಗೂ ಇತಿಹಾಸದ ಮೂಲಕ ಎತ್ತಿ ತೋರಿಸುವುದು.

೫. ಜ್ಞಾನದಲ್ಲಿ ಎರಡು ಬಗೆಗಳಿವೆ. ಅಕ್ಷರವಿದ್ಯೆಯಿಲ್ಲದ ಸಮುದಾಯಗಳು ಪರಂಪರಾನುಗತವಾಗಿ ಅನುಭವದಿಂದ ಪಡೆದುಕೊಂಡ ಜ್ಞಾನ (Traditional Knowledge). ಇದು ಮೌಖಿಕವಾಗಿ ಹಾಗೂ ಅನುಕರಣೆಯ ಮೂಲಕ ವ್ಯಕ್ತಿಯಿಂದ ವ್ಯಕ್ತಿಗೆ, ತಲೆಮಾರಿನಿಂದ ತಲೆಮಾರಿಗೆ ವರ್ಗಾವಣೆಯಾಗುತ್ತದೆ. ಇದರ ಸ್ವರೂಪವನ್ನು ತಿಳಿಯುವುದಕ್ಕಾಗಿ ಅಧ್ಯಯನ ಮಾಡುವುದು ಮೊದಲನೆಯದು.

ಎರಡನೆಯದು, ಅಕ್ಷರ ವಿದ್ಯೆಯನ್ನು ಕಲಿತು ಪಾಶ್ಚಾತ್ಯ ಮೂಲದ ಆಧುನಿಕತೆಯಿಂದ ರೂಪುಗೊಂಡ ವಿದ್ಯೆಯಿಂದ ಪಡೆದುಕೊಂಡ ಜ್ಞಾನ (Scientific Knowledge). ಇದು ಪ್ರಯೋಗ ಮತ್ತು ಪರೀಕ್ಷೆಗೆ ಒಳಪಟ್ಟು ಪಡೆದುಕೊಂಡ ಜ್ಞಾನ. ಈ ಜ್ಞಾನಕ್ಕೆ ಪ್ರಕೃತಿಯನ್ನು ಹಾಗೂ ಸಮಾಜವನ್ನೂ, ತಂತ್ರಜ್ಞಾನದ ನೆರವಿನಿಂದ ಬದಲಾಯಿಸುವ ಶಕ್ತಿಯಿದೆ. ಈ ವಿಜ್ಞಾನವು ಪರಾಂಪರಾನುಗತ ಜ್ಞಾನವನ್ನು ತಾತ್ಸಾರದಿಂದ ಕೀಳಾಗಿ ಕಾಣುತ್ತದೆ. ಇದರ ಎದುರಿನಲ್ಲಿ ಪಾರಂಪರಿಕ ಜ್ಞಾನದಲ್ಲಿಯೂ ಮಹತ್ವಪೂರ್ಣ ಅಂಶಗಳಿವೆ ಎಂಬುದನ್ನು ಸಿದ್ಧಪಡಿಸಿ ತೋರಿಸುವುದಕ್ಕಾಗಿ ಜಾತಿ/ಬುಡಕಟ್ಟುಗಳ ಅಧ್ಯಯನ ನಡೆಯುತ್ತಿದೆ. ಇದು ಆಧುನಿಕೋತ್ತರ (Postmodern) ಬೆಳವಣಿಗೆಯಾಗಿದೆ.

೬. ಜಾಗತೀಕರಣದ ಈ ಸಂದರ್ಭದಲ್ಲಿ ಪಾಶ್ಚಾತ್ಯ ದೇಶಗಳು ಬಲವಂತವಾಗಿ ಹೇರುತ್ತಿರುವ ಏಕರೂಪ ಸಂಸ್ಕೃತಿಯನ್ನು ವಿರೋಧಿಸಿ ಬಹುರೂಪಿ ಸಂಸ್ಕೃತಿಗಳನ್ನು ಉಳಿಸಿಕೊಳ್ಳುವುದು. ಇದು ಜಗತ್ತಿನಾದ್ಯಂತ ನಡೆಯುತ್ತಿರುವ ಪ್ರಕ್ರಿಯೆಯಾಗಿದೆ. ಭಾರತದಲ್ಲಿಯೂ ಈ ಪ್ರಕ್ರಿಯೆ ಸಹಜವಾಗಿಯೇ ನಡೆಯುತ್ತಿದೆ. ಸಮುದಾಯಗಳು ತಮ್ಮ ಸಂಸ್ಕೃತಿಯನ್ನು ಅನುಸರಿಸುವುದು ಅವುಗಳ ಹಕ್ಕು ಎಂಬ ಮನೋಧರ್ಮ ಇಲ್ಲಿದೆ.

೭. ಇತಿಹಾಸವನ್ನು ಪುನಾರಚನೆ ಮಾಡುವಾಗ ಕೇವಲ ರಾಷ್ಟ್ರಗಳ, ರಾಜ್ಯಗಳ ರಾಜಕೀಯ ಇತಿಹಾಸವನ್ನು ಮಾತ್ರವಲ್ಲದೆ ಸಮುದಾಯಗಳ ಸಾಂಸ್ಕೃತಿಕ ಇತಿಹಾಸವನ್ನು ಸೇರಿಸುವುದು ಅತ್ಯಗತ್ಯ. ಯುನೆಸ್ಕೋ ಈ ತತ್ವವನ್ನು ಒಪ್ಪಿಕೊಂಡು ತನ್ನ ಸದಸ್ಯ ರಾಷ್ಟ್ರಗಳಿಗೆ, ವೈಚಾರಿಕ ತಾಂತ್ರಿಕ ನೆರವು ನೀಡುವ ಸಲುವಾಗಿ ೧೯೮೯ರಲ್ಲಿ ರೂಪಿಸಿದ ಶಿಫಾರಸುಗಳು ಈ ಸಂದರ್ಭದಲ್ಲಿ ಮುಖ್ಯವಾಗುತ್ತವೆ. ಹಾಗೆಯೇ ಸಂಸ್ಕೃತಿಯ ಉಳಿದ ಘಟಕಗಳಾದ ಭಾಷೆ, ತಂತ್ರಜ್ಞಾನ, ಕಲೆ, ಸಂಗೀತ, ನೃತ್ಯ ಇತ್ಯಾದಿ ಎಲ್ಲ ಅಂಶಗಳನ್ನು ಉಳಿಸಿಕೊಳ್ಳುವುದು ಅಗತ್ಯ. ಈ ದೃಷ್ಟಿಯಿಂದ ಸಮುದಾಯಗಳ ಅಧ್ಯಯನ ಅವಶ್ಯವಾಗಿ ನಡೆಯಬೇಕಾಗಿದೆ.

೮. ಸಾಂಸ್ಕೃತಿಕ ಅನನ್ಯತೆಯನ್ನು ಸ್ಥಾಪಿಸಿ ಸಮಾಜದಲ್ಲಿ ಸೂಕ್ತವಾದ ಸಾಂಸ್ಕೃತಿಕ ಪ್ರತಿನಿಧೀಕರಣವನ್ನು (Cultural Representation) pಪಡೆಯುವುದು ಎರಡನೆಯ ಹಂತ. ಸಮುದಾಯಗಳು ಈ ಕಾರಣಗಳಿಗಾಗಿ ಅಧ್ಯಯನಗಳನ್ನು ಪ್ರೋತ್ಸಾಹಿಸುತ್ತವೆ. ಇಂದು ಜಾತಿಗಳ ಬಗ್ಗೆ ಅಧ್ಯಯನ ಮಾಡುವವರು ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಕೇವಲ ಕುತೂಹಲಕ್ಕಾಗಿ ಮಾಡುವ ವಿವರಣಾತ್ಮಕ ಅಧ್ಯಯನಗಳ ಉಪಯುಕ್ತತೆ ಪರಿಮಿತವಾಗಿರುತ್ತದೆ.

ಕರ್ನಾಟಕದಲ್ಲಿ ಜಾತಿಗಳ ಬಗ್ಗೆ ಬುಡಕಟ್ಟುಗಳ ಬಗ್ಗೆ ಅಧ್ಯಯನಗಳು ನಡೆದಿವೆಯೇ ಹೊರತು ಉಪಜಾತಿಗಳ ಬಗ್ಗೆ, ಬುಡಕಟ್ಟುಗಳ ಬೆಡಗುಗಳ ಅಥವಾ ಬಳಿಗಳ (Clans) ಬಗ್ಗೆ ಅಧ್ಯಯನ ನಡೆದಿಲ್ಲ. ಈ ಬಗೆಯ ಅಧ್ಯಯನಗಳು ನಡೆಯಬೇಕಾದ ಅಗತ್ಯವಿದೆ. ಈ ದೃಷ್ಟಿಯಿಂದ ಈಗ ನಡೆಯುತ್ತಿರುವ ಕುರುಬರ ಉಪಜಾತಿಗಳಿಗೆ ಸಂಬಂಧಿಸಿದ ಪ್ರಬಂಧಗಳು ತುಂಬಾ ಉಪಯುಕ್ತವಾಗಿವೆ. ಈ ಉಪಜಾತಿಗಳ ಸ್ವರೂಪವೇನು? ಇವು ಏಕೆ ರೂಪುಗೊಂಡವು? ಒಂದು ಉಪಜಾತಿಗೂ ಇನ್ನೊಂದು ಉಪಜಾತಿಗೂ ಇರುವ ವ್ಯತ್ಯಾಸವೇನು? ಜಾತಿಗಳಲ್ಲಿ ಮಾತ್ರವಲ್ಲದೆ ಉಪಜಾತಿಗಳಲ್ಲಿಯೂ ಮೇಲು-ಕೀಳು ಭಾವನೆಗಳು ಏಕೆ ಬಂದಿವೆ? ಇವುಗಳಿಗೆ ಸಂಬಂಧಿಸಿದ ಪುರಾಣಗಳನ್ನು ಐತಿಹ್ಯಗಳನ್ನು ಹೇಗೆ ಅರ್ಥೈಸಬೇಕು? ಮೇಲುಕೀಳು ಭಾವನೆಗಳನ್ನು ಹೋಗಲಾಡಿಸಿ, ಸಮಾನತೆ ಅಥವಾ ಸಾಮರಸ್ಯವನ್ನು ಸಾಧಿಸುವುದು ಹೇಗೆ? ಈ ಎಲ್ಲಾ ವಿಷಯಗಳಲ್ಲಿಯೂ ವಿವರವಾಗಿ ಚರ್ಚೆ ನಡೆಯಬೇಕಾಗಿದೆ.

ಉದಾಹರಣೆಗೆ, ಉಪಜಾತಿಗಳು ಹೇಗಾದವು? ಎಂಬುದನ್ನು ತೆಗೆದುಕೊಳ್ಳಬಹುದು. ಪ್ರದೇಶ ಮತ್ತು ವಲಸೆ, ಮತಾಂತರ ಅಥವಾ ಜಾತ್ಯಂತರ, ವೃತ್ತಿ ಮತ್ತು ತಂತ್ರಜ್ಞಾನ, ಭಾಷೆ ಇವುಗಳು ಪ್ರಮುಖವಾದ ಕಾರಣಗಳಾಗಬಹುದು. ವಿಭಿನ್ನ ಪ್ರದೇಶಗಳಲ್ಲಿ ವಾಸ ಮಾಡುವ ಒಂದೇ ಜಾತಿಯ ಜನರು ಉಪಜಾತಿಗಳಾಗುವ ಸಾಧ್ಯತೆಗಳಿವೆ. ಆಧುನಿಕ ಕಾಲಕ್ಕೆ ಮೊದಲು ಸಾರಿಗೆ ಸಂಪರ್ಕಗಳು ಪರಿಮಿತವಾಗಿದ್ದ ಕಾಲದಲ್ಲಿ ಒಂದು ಪ್ರದೇಶದ ಜನ ಮತ್ತೊಂದು ಪ್ರದೇಶಕ್ಕೆ ಹೋಗಲು ಸುಲಭವಾಗಿರಲಿಲ್ಲ. ಅಂತಹ ಸಂದರ್ಭದಲ್ಲಿ ಉಪಜಾತಿಗಳೂ ಪ್ರತ್ಯೇಕವಾಗಿ ಉಳಿದು ಭಿನ್ನವಾದ ಸಂಪ್ರದಾಯಗಳನ್ನು ರೂಢಿಸಿಕೊಂಡಿರುವ ಸಾಧ್ಯತೆಗಳಿವೆ. ಉಪಜಾತಿಗಳಲ್ಲಿಯೇ ಮದುವೆಯಾಗುತ್ತಿದ್ದುದು ಸಹಜವಾಗಿತ್ತು. ಕೆಲವು ಸಂದರ್ಭದಲ್ಲಿ ಒಂದು ಜಾತಿಯ ಜನ ಒಂದು ಪ್ರದೇಶದಿಂದ

ಇನ್ನೊಂದು ಪ್ರದೇಶಕ್ಕೆ ವಲಸೆ ಬಂದಾಗ ಅಲ್ಲಿನ ಜನ ವಲಸೆ ಬಂದವರನ್ನು ತಮ್ಮವರೆಂದು ಪರಿಗಣಿಸದೇ ಇರಬಹುದು. ಅಥವಾ ವಲಸೆ ಬಂದವರೇ ಸ್ಥಳೀಯ ಜನರೊಡನೆ ಬೆರೆಯದೆ ಪ್ರತ್ಯೇಕವಾಗಿ ಉಳಿಯಬಹುದು. ಬಹಳ ದೀರ್ಘಕಾಲ ಹೀಗೆಯೇ ಮುಂದುವರೆದರೆ ಉಪಜಾತಿಗಳೂ ಪ್ರತ್ಯೇಕವಾಗಿಯೇ ಉಳಿಯುತ್ತವೆ. ಸಂಪರ್ಕಕ್ಕೆ ಬಂದಾಗ ಆಹಾರ ಪಾನೀಯಗಳ, ಆರ್ಥಿಕ ವಿಷಯಗಳ ವಿನಿಮಯ ನಡೆಯಬಹುದು. ಆದರೆ ರಕ್ತಸಂಬಂಧ ಉಂಟುಮಾಡುವ ಮದುವೆಗೆ ಒಪ್ಪದೇ ಇರಬಹುದು.

ಮತಾಂತರಗೊಂಡ ಗುಂಪುಗಳನ್ನು ಜಾತಿಯಲ್ಲಿರುವ ಮೂಲ ಗುಂಪುಗಳು ದೂರವಿಡುತ್ತವೆ. ತಾವು ಅವರಿಗಿಂತ ಹೆಚ್ಚು ಶುದ್ಧರಾದವರು ಎಂಬ ಭಾವನೆ ಇದಕ್ಕೆ ಕಾರಣ. ಹಾಗೆಯೇ ಒಂದು ಜಾತಿಯಿಂದ ಇನ್ನೊಂದು ಜಾತಿಗೆ ಪರಿವರ್ತನೆ ಹೊಂದಿದಾಗ ಉಪಜಾತಿಗಳಾಗುತ್ತವೆ. ಇಲ್ಲಿಯೂ ಒಂದು ಜಾತಿ ಮೇಲು, ಇನ್ನೊಂದು ಜಾತಿ ಕೀಳು ಎಂಬ ಭಾವನೆಗಳ ಜೊತೆಗೆ ಒಂದು ಉಪಜಾತಿ ಮೇಲು ಇನ್ನೊಂದು ಉಪಜಾತಿ ಕೀಳು ಎಂಬ ಭಾವನೆಯು ಕೆಲಸ ಮಾಡುತ್ತದೆ. ವೃತ್ತಿಗಳೂ ಉಪಜಾತಿಗಳಾಗಲು ಕಾರಣವಾಗುತ್ತವೆ. ಪ್ರತಿಯೊಂದು ಜಾತಿಯಲ್ಲಿಯೂ ಒಂದು ಪುರೋಹಿತವರ್ಗ ಹುಟ್ಟಿಕೊಳ್ಳುತ್ತದೆ. ಈ ಗುಂಪು ತನ್ನನ್ನು ಉಳಿದ ಗುಂಪುಗಳ ಮಾರ್ಗದರ್ಶಕವೆಂದು ಭಾವಿಸಿ ತನ್ನನ್ನು ಮೇಲುಮಟ್ಟದ್ದೆಂದು ಪರಿಗಣಿಸುವುದರಿಂದ ಪ್ರತ್ಯೇಕವಾದ ಉಪಜಾತಿಯಾಗಿ ಉಳಿಯುತ್ತದೆ. ಎಲ್ಲ ಧರ್ಮಗಳಲ್ಲಿಯೂ ಈ ಗುಂಪು ಪ್ರತ್ಯೇಕವಾಗಿರುವುದನ್ನು ಕಾಣಬಹುದು. ಹಿಂದೂ ಧರ್ಮದಲ್ಲಿ ಇಂತಹ ಗುಂಪುಗಳು ಉಪಜಾತಿಗಳಾಗೇ ಉಳಿದುಬಿಡುತ್ತವೆ. ಇವರು ಸಾಮಾನ್ಯವಾಗಿ ಸಸ್ಯಾಹಾರಿಗಳಾಗಿದ್ದು, ಮಾಂಸಾಹಾರಿಗಳಿಗಿಂತ ತಾವು ಮೇಲೆಂದು ಭಾವಿಸುತ್ತಾರೆ. ಆಹಾರದ ರಾಜಕಾರಣ ಇಲ್ಲಿ ಕೆಲಸ ಮಾಡುತ್ತದೆ. ಒಂದೊಂದು ಉಪಜಾತಿಯೂ ತನ್ನ ಅಸ್ತಿತ್ವವನ್ನು ಹಾಗೂ ಅನನ್ಯತೆಯನ್ನು ವ್ಯಕ್ತಪಡಿಸುವ ಸಲುವಾಗಿ ಕುಲಪುರಾಣಗಳನ್ನೂ, ಐತಿಹ್ಯಗಳನ್ನೂ ಸೃಷ್ಟಿಸಿಕೊಳ್ಳುತ್ತವೆ. ಇವು ಕೆಲವು ಸಲ ನೇರವಾಗಿರಬಹುದು ಅಥವಾ ಸಾಂಕೇತಿಕವಾಗಿರಬಹುದು. ಇವುಗಳನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡಿ ಸತ್ಯ ಏನೆಂದು ತಿಳಿಯಬೇಕಾಗುತ್ತದೆ. ಒಂದೇ ಜಾತಿಯಲ್ಲಿ ವಿಭಿನ್ನ ವೃತ್ತಿಗಳನ್ನು ಅವಲಂಬಿಸಿರುವ ಗುಂಪುಗಳು ಉಪಜಾತಿಗಳಾಗುತ್ತವೆ. ಆರ್ಥಿಕತೆ ಮತ್ತು ತಂತ್ರಜ್ಞಾನದ ಕಾರಣದಿಂದಾಗಿ ಕೆಲವು ಉಪಜಾತಿಗಳು ಇತರ ಉಪಜಾತಿಗಳಿಗಿಂತ ಹೆಚ್ಚು ಮುಂದುವರೆದು ಪ್ರತ್ಯೇಕ ಗುಂಪುಗಳಾಗುತ್ತವೆ. ಧಾರ್ಮಿಕ ಕಾರ್ಯಾಚರಣೆ, ಆಹಾರ ಸಂಗ್ರಹಣೆ, ಪಶುಪಾಲನೆ, ಕೃಷಿ, ವ್ಯಾಪಾರ, ಕುಶಲಕಲೆಗಳು ಹಾಗೂ ಯುದ್ಧ ವಿದ್ಯೆಯಲ್ಲಿ ಪರಿಣತಿ, ಬೇಟೆಗಾರಿಕೆ, ಆಡಳಿತ ಮೊದಲಾದ ಕ್ಷೇತ್ರಗಳಲ್ಲಿ ಪರಿಣತಿ ಪಡೆದ ಗುಂಪುಗಳು ಪ್ರತ್ಯೇಕವಾದ ಉಪಜಾತಿಗಳಾಗುತ್ತವೆ. ಒಂದೇ ಜಾತಿಯಲ್ಲಿ ಬೇರೆ ಬೇರೆ ಭಾಷೆಗಳನ್ನು ಅಥವಾ ಉಪಭಾಷೆಗಳನ್ನು ಆಡುವ ಗುಂಪುಗಳು ಪ್ರತ್ಯೇಕ ಉಪಜಾತಿಗಳಾಗಿ ರೂಪುಗೊಳ್ಳುತ್ತವೆ.

೩

ಈ ಹಿನ್ನೆಲೆಗಳಲ್ಲಿ ಕುರುಬರ ಸಮುದಾಯದ ಉಪಜಾತಿಗಳನ್ನು ಕುರಿತು ಈ ವಿಚಾರ ಸಂಕಿರಣದಲ್ಲಿ ಮಂಡಿತವಾಗಿರುವ ಪ್ರಬಂಧಗಳನ್ನು ಪರಿಶೀಲಿಸಬೇಕಾಗುತ್ತದೆ. ಕರ್ನಾಟಕದಲ್ಲಿ ಕುರುಬರು ತುಂಬಾ ಪ್ರಾಚೀನವಾದ ಜಾತಿಯಾಗಿರುವುದು ಮಾತ್ರವಲ್ಲದೇ ಜನಸಂಖ್ಯೆಯಲ್ಲಿ ಮೂರನೆಯ ಸ್ಥಾನದಲ್ಲಿರುವ ಪ್ರಮುಖವಾದ ಜಾತಿಯಾಗಿದ್ದಾರೆ. ವಿವಿಧ ಕ್ಷೇತ್ರಗಳಲ್ಲಿ ಉನ್ನತ ಸಾಧನೆ ಮಾಡಿದ ಜನರಿದ್ದಾರೆ. ಬುಡಕಟ್ಟು ಸ್ಥಿತಿಯಿಂದ ಹಿಡಿದು, ಪಶುಪಾಲನೆ, ಕಂಬಳಿ ನೇಕಾರಿಕೆ, ವ್ಯಾಪಾರ ಕೃಷಿ ಹಾಗೂ ರಾಜ್ಯಾಡಳಿತದಲ್ಲಿ ತೊಡಗಿರುವ ವಿವಿಧ ಉಪಜಾತಿಗಳಿಂದ ಕೂಡಿರುವ, ಸಂಕೀರ್ಣವಾದ ಜಾತಿಯಾಗಿದೆ. ಕಾಡುಕುರುಬರು ಹೆಗ್ಗಡದೇವನಕೋಟೆ ಮತ್ತು ಕಾಕನಕೋಟೆಗಳಲ್ಲಿ ವಾಸವಾಗಿದ್ದು ಆಹಾರ ಸಂಗ್ರಹಣೆಯ ಹಂತದಲ್ಲಿದ್ದಾರೆ. ಇವರಲ್ಲಿ ಜೇನು ಕುರುಬರು, ಜೇನು ಸಂಗ್ರಹ ಮಾಡಿ ಸುತ್ತ ಮುತ್ತ ಹಳ್ಳಿಗಳಲ್ಲಿ ಮಾರಾಟ ಮಾಡಿ ಜೀವನ ಮಾಡುತ್ತಾರೆ. ಇನ್ನೊಂದು ಗುಂಪಿನವರೂ ಖೆಡ್ಡಾದಲ್ಲಿ ಕಾಡಾನೆಗಳನ್ನು ಪಳಗಿಸುವ ಹಾಗೂ ಮೈಸೂರು ನಗರಕ್ಕೆ ಬಂದು ದಸರಾ ಮೆರವಣಿಗೆಯಲ್ಲಿ ಅಂಬಾರಿ ಆನೆಯನ್ನು ನಡೆಸುವ ಉದ್ಯೋಗದಲ್ಲಿದ್ದಾರೆ. ಇದು ವಿಶೇಷ ಪರಿಣತಿಯನ್ನು ನಿರೀಕ್ಷಿಸುವ ವೃತ್ತಿಯಾದುದರಿಂದ ಇವರು ಒಂದು ಪ್ರತ್ಯೇಕ ಗುಂಪಾಗಿ ಉಳಿದಿದ್ದಾರೆ. ಬೆಟ್ಟ ಕುರುಬರು ಎಂಬ ಇನ್ನೊಂದು ಗುಂಪು ಹೆಗ್ಗಡದೇವಕೋಟೆ ಕಾಡುಗಳಲ್ಲಿ ದೊರೆಯುವ ಬಿದುರಿನಿಂದ ಅನೇಕ ವಸ್ತುಗಳನ್ನು ಮಾಡಿ ಸುತ್ತಮುತ್ತಲ ಹಳ್ಳಿಗಳಲ್ಲಿ ಮಾರಾಟ ಮಾಡಿ ಜೀವನ ನಡೆಸುತ್ತಾರೆ. ಈ ಬಗ್ಗೆ ಡಾ. ಕೇಶವನ್ ಪ್ರಸಾದ್ ಒಳ್ಳೆಯ ಲೇಖನ ಬರೆದಿದ್ದಾರೆ.

ಬೆಳಗಾವಿ ಮತ್ತು ಕೊಲ್ಹಾಪುರದ ಕಡೆಯಿರುವ ಕುರುಬರು ಅಲೆಮಾರಿಗಳು. ಇವರು ಕುರಿ, ಮೇಕೆಗಳನ್ನು ಕರ್ನಾಟಕದ ವಿವಿಧ ಕಡೆಗಳಲ್ಲಿ ಮೇಯಿಸಿ ಹೊಲಗಳಲ್ಲಿ ಕುರಿಮಂದೆಯನ್ನು ನಿಲ್ಲಿಸಿ, ಕುರಿಗೊಬ್ಬರ ಹಾಗೂ ಗಂಜಲದ ಮಾರಾಟದಿಂದ ಹಣ ಸಂಪಾದನೆ ಮಾಡುತ್ತಾರೆ. ಇವರು ಅಲೆಮಾರಿಗಳಾಗಿಯೇ ಜೀವನ ಸಾಗಿಸುತ್ತಾರೆ. ಇವರ ವಲಸೆಯ ಕಾರಣಗಳು ಹಾಗೂ ಆರ್ಥಿಕ ವ್ಯವಸ್ಥೆಯ ಬಗ್ಗೆ ಡಾ. ಎರಿಯಪ್ಪ ಅವರು ಉಪಯುಕ್ತ ವಿವರಗಳನ್ನು ನೀಡಿದ್ದಾರೆ. ಇವರು ಕೊಡುವ ಅಲೆಮಾರಿ ಕುರುಬರ ಜೀವನಕ್ಕೂ ಕುರಿಗಳನ್ನು ಕಾಯುವ ಈಗಿನ ಕಾಡುಗೊಲ್ಲರ  ಜೀವನಕ್ಕೂ ಸಾಮ್ಯ ಕಂಡುಬರುತ್ತದೆ.

ಒಂದೇ ಜಾತಿಯಲ್ಲಿ ಮೊದಲಿಗೆ ಒಂದೇ ವೃತ್ತಿಯನ್ನು ಅನುಸರಿಸುತ್ತಿದ್ದು ಆನಂತರ ವೃತ್ತಿಗಳೂ ಭಿನ್ನವಾದರೆ ಏನಾಗುತ್ತದೆ ಎಂಬುದಕ್ಕೂ ಕುರುಬರಲ್ಲಿರುವ ಉಣ್ಣೆಕಂಕಣ ಕುರುಬರು ಮತ್ತು ಹತ್ತಿಕಂಕಣ ಕುರುಬರ ಜೀವನವನ್ನು ಗಮನಿಸಬಹುದು.

ಉಣ್ಣೆಕಂಕಣ ಕುರುಬರು ಮತ್ತು ಹತ್ತಿಕಂಕಣ ಕುರುಬರು ಇವರಲ್ಲಿ ಉಣ್ಣೆಕಂಕಣ ಕುರುಬರು ಮದುವೆಯ ಸಂದರ್ಭದಲ್ಲಿ ಉಣ್ಣೆಯ ದಾರದ ಕಂಕಣವನ್ನು, ಹತ್ತಿಕಂಕಣ ಕುರುಬರು ಹತ್ತಿಯ ದಾರದಿಂದ ಮಾಡಿದ ಕಂಕಣವನ್ನೂ ಕಟ್ಟಿಕೊಳ್ಳುತ್ತಾರೆ. ಈ ಕಾರಣದಿಂದಾಗಿ ಇವೆರಡೂ ಪ್ರತ್ಯೇಕ ಉಪಜಾತಿಗಳಾಗಿವೆ. ಈ ಎರಡೂ ಉಪಜಾತಿಗಳು ತಮ್ಮನ್ನು ಸಹೋದರರೆಂದು ಭಾವಿಸಿಕೊಳ್ಳುವುದರಿಂದ ವಿವಾಹ ಸಂಬಂಧವನ್ನು  ಮಾಡುವುದಿಲ್ಲ. ಉಣ್ಣೆ ಕಂಕಣ ಕುರುಬರ ಬಗ್ಗೆ ಚಂದ್ರಪ್ಪನವರು ಹಾಗೂ ಹತ್ತಿಕಂಕಣ ಕುರುಬರ ಬಗ್ಗೆ ಎ. ಬಿ. ಬಾಳಪ್ಪ ಅವರು ಅನೇಕ ವಿವರವನ್ನು ನೀಡಿ, ಈ ಎರಡು ಉಪಜಾತಿಗಳು ಏಕೆ ಪ್ರತ್ಯೇಕವಾಗಿರಬಹುದು ಎಂಬುದರ ಬಗ್ಗೆ ವಿಚಾರ ಮಾಡಿದ್ದಾರೆ. ಕಂಬಳಿಯ ನೇಕಾರಿಕೆ ಮತ್ತು ಕೃಷಿ ಈ ಎರಡು ಭಿನ್ನ ವೃತ್ತಿಗಳು ಈ ಉಪಜಾತಿಗಳೂ ರೂಪುಗೊಳ್ಳಲು ಕಾರಣವಾಗಿವೆ ಎಂಬ ವಾದವನ್ನು ಸಮರ್ಥವಾಗಿ ಮಂಡಿಸಿದ್ದಾರೆ. ಹತ್ತಿಯ ಗಿಡದ ಆವಿಷ್ಕಾರ ಕ್ರಿ. ಪೂ. ೧೨೦೦ ರಿಂದ ೧೦೦೦ ವರ್ಷಗಳ ಕಾಲಾವಧಿಯಲ್ಲಿ ಆಗಿರಬಹುದೆಂಬ ಜೇಮ್ಸ್ ಕ್ಯಾಂಪ್‌ಬೆಲ್ ಅವರ ಅಧ್ಯಯನವನ್ನು ಆಧಾರವಾಗಿಟ್ಟುಕೊಂಡು ಹತ್ತಿ ಬಟ್ಟೆಗಿಂತ ಕಂಬಳಿ ಪ್ರಾಚೀನವಾದುದು ಎಂದು ಎ. ಬಿ. ಬಾಳಪ್ಪನವರು ಹೇಳಿರುವುದು ಸರಿಯಾಗಿದೆ. ಕೃಷಿ ಅಥವಾ ಹತ್ತಿಕಂಕಣ ಕುರುಬರು ಫಲವತ್ತಾದ ಜಾಗಗಳಲ್ಲಿ ನೆಲೆನಿಂತರು. ಮುಂದುವರಿದ ಜಾತಿಗಳ ಸಂಪರ್ಕಕ್ಕೆ ಬಂದು ಸಸ್ಯಾಹಾರಿಗಳಾದರು. ವೀರಶೈವ ಜಂಗಮರು ಅಥವಾ ವೈಷ್ಣವ ಬ್ರಾಹ್ಮಣರು ಇವರಿಗೆ ಪೂಜಾರಿಗಳಾದರು. ಉಣ್ಣೆಕಂಕಣ ಕುರುಬರು ಕಂಬಳಿ ನೇಕಾರಿಕೆಯನ್ನು ತಮ್ಮ ವೃತ್ತಿಯಾಗಿ ಮಾಡಿಕೊಂಡು ಮಾಂಸಾಹಾರಿಗಳಾಗಿಯೇ ಮುಂದುವರಿದರು.  ಒಡೆಯರನ್ನೇ ತಮ್ಮ ಗುರುಗಳೆಂದು ಒಪ್ಪಿಕೊಂಡರು. ಆದರೆ ಹತ್ತಿಕಂಕಣ ಕುರುಬರು ಒಡೆಯರಿಗೆ ಹೆಚ್ಚು ಮಹತ್ವ ಕೊಡುವುದಿಲ್ಲ. ಉಣ್ಣೆಕಂಕಣ ಕುರುಬರ ಬಗ್ಗೆ ಪ್ರಬಂಧ ಬರೆದಿರುವ ಚಂದ್ರಪ್ಪನವರು ಉಣ್ಣೆಕಂಕಣ ಹಾಗೂ ಹತ್ತಿಕಂಕಣ ಕುರುಬರ ಆರ್ಥಿಕ ವ್ಯವಸ್ಥೆಯ ಬಗ್ಗೆ ಚೆನ್ನಾಗಿ ವಿಚಾರ ಮಾಡಿ ಕೃಷಿಗಿಂತಲೂ ಕುರಿಗಾರಿಕೆ ಹೆಚ್ಚು ಲಾಭದಾಯಕವಾಗಿದ್ದುದರಿಂದ ಉಣ್ಣೆಕಂಕಣ ಕುರುಬರು ಹತ್ತಿಕಂಕಣ ಕುರುಬರಿಗಿಂತ ಆರ್ಥಿಕವಾಗಿ ಪ್ರಬಲರಾದರು. ಆ ಕಾರಣದಿಂದಲೇ ರಾಜಕೀಯವಾಗಿಯೂ ಪ್ರಬಲರಾಗಿ ರಾಜರಾದರು ಎಂದು ಸಮರ್ಪಕವಾಗಿ ಗುರುತಿಸಿದ್ದಾರೆ. ಅರೇಬಿಯನ್ ರಾಷ್ಟ್ರಗಳಿಗೆ ಕಂಬಳಿ ರಫ್ತಾಗುತ್ತಿದ್ದುದು ಸೂಫಿಗಳು ಮತ್ತು ನಾಥರು ಕಂಬಳಿಯ ಸಲುವಾಗಿ ಉಣ್ಣೆಕಂಕಣ ಕುರುಬರಿಗೆ ನಿಕಟವರ್ತಿಗಳಾಗಿದ್ದರು ಎಂಬ ಮಹತ್ವದ ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ರೇವಣಸಿದ್ದರಿಗೆ ಅರ್ಪಿಸುವ ಕಂತೆಸೇವೆ ನೇಯ್ಗೆ ಸಂಸ್ಕೃತಿಗೆ ಸಂಬಂಧಿಸಿದ್ದು ಎಂಬುದನ್ನು ತಾಂತ್ರಿಕ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಮುದಾಯಗಳು ತಾಂತ್ರಿಕೇತರ ಸಮುದಾಯಗಳ ಮೇಲೆ ಹಿಡಿತ ಸಾಧಿಸಿವೆ ಎಂಬುದನ್ನು ಸಮರ್ಪಕವಾಗಿ ಗುರುತಿಸಿದ್ದಾರೆ. ಬಿಳಿಕಂಬಳಿ ಮತ್ತು ಕರಿಕಂಬಳಿಗಳಲ್ಲಿನ ತಾರತಮ್ಯ ಹಾಗೂ ಒಡೆಯರು ಉಪಯೋಗಿಸುವ ಬಿಳಿಕಂಬಳಿಗಳಿಗೆ ಹಾಕುವ ಪಟ್ಟಿಗಳ ವೈಶಿಷ್ಟ್ಯವನ್ನು ಗುರುತಿಸಿದ್ದಾರೆ. ಇದು ಒಳ್ಳೆಯ ಒಳನೋಟಗಳಿಂದ ಕೂಡಿದ ಲೇಖನವಾಗಿದೆ.

ಡಾ. ಬಿ.ರಾಜಶೇಖರಪ್ಪ ಅವರು ಇತಿಹಾಸದ ವಿಭಿನ್ನ ಆಕರಗಳ ಆಧಾರದ ಮೇಲೆ ಹಂಡೆ ಕುರುಬರ ಸಾಧನೆಗಳನ್ನು ವೈಶಿಷ್ಟ್ಯಗಳನ್ನು ಗುರುತಿಸಿದ್ದಾರೆ. ಕೇವಲ ಕುರಿಸಾಕಾಣಿಕೆ ಅಥವಾ ಕೃಷಿಗೆ ಬದಲಾಗಿ ಕಂಬಳಿ ನೇಯ್ಗೆಯನ್ನು ವೃತ್ತಿಯಾಗಿ ಮಾಡಿಕೊಂಡಿದ್ದರಿಂದ ಇವರು ಶ್ರೀಮಂತರಾದರು. ಧೈರ್ಯಶಾಲಿಗಳೂ ಸಾಹಸಿಗಳೂ ಆದ ಇವರು ಪಾಳೆಯಗಾರರೂ ಆಗಿದ್ದರು ಈ ಉಪಜಾತಿಗೆ ಸೇರಿದ ತಿಮ್ಮರಾವುತನ ಧೈರ್ಯ ಶೌರ್ಯ, ಸಾಹಸ, ಔದಾರ್ಯಗಳ ಬಗ್ಗೆ ಶಾಸನಗಳೂ, ಕೈಫಿಯತ್ತುಗಳು ಮೊದಲಾದ ದಾಖಲೆಗಳನ್ನಿಟ್ಟುಕೊಂಡು ಅಧ್ಯಯನ ಮಾಡಿದ್ದಾರೆ. ಇದು ಒಳ್ಳೆಯ ಸಂಶೋಧನ ಲೇಖನವಾಗಿದೆ.

ಡಾ. ಸಿದ್ಧಣ್ಣ ಎಫ್ ಜಕಬಾಳ ಅವರು ಮಹಾರಾಷ್ಟ್ರ, ಮಧ್ಯಪ್ರದೇಶ ಮತ್ತು ಕರ್ನಾಟಕದಲ್ಲಿರುವ ಝುಂಡೆ ಕುರುಬರ ಬಗ್ಗೆ ಶಂಕರಬಾಬು ರಾವ್ ಲಾಂಡೆ, ಶಂಭಾ ಜೋಷಿ ಹಾಗೂ ಅಮರಸಿಂಗ್ ಶಶಿ ಅವರ ಸಂಶೋಧನೆಗಳ ಆಧಾರದ ಮೇಲೆ ಝುಂಡೆ ಕುರುಬರು ಹೇಗೆ ವೀರರಾದ್ಧರು ಎಂಬುದನ್ನು ವಿವರಿಸಿದ್ದಾರೆ. ಧನಗರ್ ಝುಂಡೆ ಸಮುದಾಯದಲ್ಲಿ ಮಹಾರಾಣಿ ಅಹಲ್ಯಾಬಾಯಿ ಹೋಳ್ಕರ್ ಪ್ರತಿಷ್ಠಿತ ವ್ಯಕ್ತಿಯಾಗಿದ್ದುದನ್ನು ಉಲ್ಲೇಖಿಸಿದ್ದಾರೆ. ಝುಂಡೆ ಕುರುಬರು ತಮ್ಮ ಉತ್ತಮಕುಲದವರು ಉತ್ತಮ ವರ್ಣದವರು ಎಂದು ಹೇಳಿಕೊಳ್ಳುತ್ತಾರೆ. ಅಗ್ನಿ, ಸೂರ್ಯ, ಚಂದ್ರ, ಸೋಮ ಮತ್ತು ಯದುವಂಶಗಳನ್ನು ಪುಂಡರೀಕ, ಭಾರದ್ವಾಜ, ಕಶ್ಯಪ, ಕೌಂಡಿಲ್ಯ, ಗೌತಮ ಮುಂತಾದ ಗೋತ್ರಗಳನ್ನು ತಮ್ಮ ವಂಶಗಳ ಜೊತೆಯಲ್ಲಿ ಹಚ್ಚಿಕೊಳ್ಳುತ್ತಾರೆ ಎಂದು ಗುರುತಿಸಿದ್ದಾರೆ. ಇದನ್ನು ಗಮನಿಸಿದರೆ ಇವರು ಸಮಾಜದಲ್ಲಿ ತಮ್ಮ ಸ್ಥಾನಮಾನಗಳನ್ನು ಹೆಚ್ಚಿಸಿಕೊಳ್ಳಲು ಕ್ಷತ್ರಿಯರನ್ನೂ ಬ್ರಾಹ್ಮಣರನ್ನು ಅನುಕರಿಸಿರುವುದು ಕಂಡುಬರುತ್ತದೆ. ಉಣ್ಣೆ ಕುರುಬರು ಹತ್ತಿ ಕುರುಬರು, ಹಂಡೆಕುರುಬರು ಮತ್ತು ಝುಂಡೆಕುರುಬರು ಉಪಜಾತಿಗಳ ತೌಲನಿಕ ಅಧ್ಯಯನ ಎಂಬ ಉಪಯುಕ್ತವಾದುದು. ಆರ್ಥಿಕತೆ ಮತ್ತು ತಂತ್ರಜ್ಞಾನ ಹೇಗೆ ಉಪಜಾತಿಗಳನ್ನು ಪ್ರತ್ಯೇಕಗೊಳಿಸುತ್ತದೆ ಎಂಬುದನ್ನು ಇದರಿಂದ ತಿಳಿಯಬಹುದು.

ಮತಾಂತರ ಮತ್ತು ಜಾತ್ಯಂತರದ ದೃಷ್ಟಿಯಿಂದ ಕ್ರೈಸ್ತ ಕುರುಬರು, ದಾಸಕುರುಬರು, ಹೆಗಡೆಗಳು, ಒಡೆಯರು ಈ ಉಪಜಾತಿಗಳನ್ನು ಕುರಿತು ವಿಚಾರ ಮಾಡುವುದು ಉಪಯುಕ್ತ. ಡಾ. ಎನ್. ಎಂ. ಅಂಬಲಿ ಅವರು ಕ್ರೈಸ್ತ ಕುರುಬರ ಬಗ್ಗೆ ವಿವರಗಳನ್ನು ತಮ್ಮ ಪ್ರಬಂಧದಲ್ಲಿ ಕೊಟ್ಟಿದ್ದಾರೆ. ಮತಾಂತರವಾಗುವವರಲ್ಲಿ ಉಣ್ಣೆ ಕಂಕಣ ಕುರುಬರು, ಬಡವರು, ಅಸ್ಪೃಶ್ಯರು, ಅನಾಥರು ಹೆಚ್ಚು. ಕ್ರಿಶ್ಚಿಯನ್ನರು ತಮ್ಮ ಮಾಮೂಲು ತಂತ್ರಗಳನ್ನು ಬಳಸಿ ಕುರುಬರನ್ನು ಕ್ರೈಸ್ತ ಧರ್ಮಕ್ಕೆ ಮತಾಂತರ ಮಾಡಿದ್ದಾರೆ. ಏಸೂವೂ ಒಬ್ಬ ಕುರುಬನಾಗಿದ್ದ. ಆದ್ದರಿಂದ ನಾವೂ ನೀವು ಒಂದೇ ಎಂದು ಹೇಳಿ ಮುಗ್ದರಾದ ಕುರುಬರನ್ನು ಮತಾಂತರಿಸಿರುವ ಸಾಧ್ಯತೆ ಇದೆ. ಈ ಲೇಖನದಲ್ಲಿ ಮತಾಂತರಗೊಂಡವರ ಸಂಖ್ಯೆ ಎಷ್ಟು ಎಂದು ತಿಳಿಸಿಲ್ಲ. ಮತಾಂತರದ ಪ್ರಮಾಣವನ್ನು ತಿಳಿಯಬೇಕಾದರೆ ಕ್ರೈಸ್ತ ಕುರುಬರ ಸಂಖ್ಯೆ ಎಷ್ಟು ಎಂಬುದನ್ನು ತಿಳಿಯುವುದು ಅಗತ್ಯ.

ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ವಲಸೆ ಬಂದು ಕರಾವಳಿ ಜಿಲ್ಲೆಯ ಮುಂಡಗೋಡು, ಯಲ್ಲಾಪುರ, ಹಳಿಯಾಳ ಹಾಗೂ ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕುಗಳಲ್ಲಿ ಹೈನುಗಾರಿಕೆಯನ್ನು ಮೂಲ ಉದ್ಯೋಗವನ್ನಾಗಿ ಮಾಡಿಕೊಂಡು ಬಂದವರು ದನಗರ ಗವಳಿಗರು. ಮಹಾರಾಷ್ಟ್ರದಲ್ಲಿ ಕುರುಬರಿಗೆ ದನಗಾರರೆಂದು ಕರೆಯುತ್ತಾರೆ. ಈ ದನಗರ ಗವಳಿಗರ ಮೂಲ, ಭೌಗೋಳಿಕ ವ್ಯಾಪ್ತಿ, ಬೆಡಗುಗಳು, ವೇಷಭೂಷಣ, ಉಟೋಪಚಾರ, ಉದ್ಯೋಗ, ಆಚರಣೆ, ಸಂಪ್ರದಾಯ, ಆರ್ಥಿಕ ಪರಿಸ್ಥಿತಿ, ಶೈಕ್ಷಣಿಕ ಹಾಗೂ ಸಂಘಟನೆ ಸೌಲಭ್ಯಗಳ ಕುರಿತು ಡಾ. ಟಿ. ಹಳ್ಳಿಕೇರಿ ಅವರು ದನಗರ ಗವಳಿಗಳು ಎಂಬ ಲೇಖನದಲ್ಲಿ ವಿವರವಾಗಿ ಚರ್ಚಿಸಿದ್ದಾರೆ.

ಕುರುಬ ತಂದೆ ಮತ್ತು ಬ್ರಾಹ್ಮಣ ತಾಯಿಯ ಮಕ್ಕಳೇ ಹೆಗಡೆಗಳೆಂಬ ಉಪಜಾತಿಯಾಗಿದ್ದಾರೆಂಬ ಐತಿಹ್ಯವಿದೆ. ಇದರ ಪ್ರಕಾರ ಕುರುಬ ತಂದೆಯ ಮೊದಲ ಹೆಂಡತಿಯಾದ ಕುರುಬ ತಾಯಿಯ ಮಕ್ಕಳೇ ಸೋಮವಾರದ ಕುರುಬರು; ಎರಡನೆಯ ಹೆಂಡತಿಯಾದ ಬ್ರಾಹ್ಮಣ ತಾಯಿಯ ಮಕ್ಕಳೇ ಗುರುವಾರದ ಕುರುಬರು. ಇವರು ಅಣ್ಣತಮ್ಮಂದಿರು ಎಂಬ ನಂಬಿಕೆ ಇದೆ. ಇವರ ನಡುವೆ ವೈವಾಹಿಕ ಸಂಬಂಧ ನಿಷಿದ್ಧ. ಇವರು ಉಣ್ಣೆ ಕಂಕಣದವರು. ಇವರು ಶಾಖಾಹಾರಿಗಳಾಗಿದ್ದು ತಾವು ಪವಿತ್ರವಾದವರೆಂಬ ಮೇಲರಿಮೆ ಇದೆ. ಒಡೆಯರ್ ಡಿ. ಹೆಗಡೆ ಈ ಉಪಜಾತಿಯ ಸಾಮಾಜಿಕ, ಶೈಕ್ಷಣಿಕ ಸ್ಥಿತಿಗಳ ಬಗ್ಗೆ ವಿಚಾರ ಮಾಡಿದ್ದಾರೆ. ಬ್ರಾಹ್ಮಣದಲ್ಲಿ ಮದುವೆಯಾಗುವ ಮೊದಲೇ ಹೆಣ್ಣನ್ನು ಕಣ್ಣುಕಟ್ಟಿ ಕಾಡಿಗೆ ಬಿಡುವ ಪದ್ಧತಿ ಇದ್ದ ಕಾಲದಲ್ಲಿ ಕುರುಬ ಗಂಡು ಮತ್ತು ಬ್ರಾಹ್ಮಣ ಕನ್ಯೆಯ ಮದುವೆಯಾಗಿರಬಹುದು ಎಂದು ಊಹಿಸಲು ಸಾಧ್ಯವಿದೆ.

ಕುರುಬರಲ್ಲಿ ಅಲ್ಪಸಂಖ್ಯಾತರಾದ ದಾಸ ಕುರುಬರ ಮೇಲೆ ಬ್ರಾಹ್ಮಣರ ಉದಾರವಾದಿ ವೈಷ್ಣವ ಧರ್ಮದ ಪ್ರಭಾವವಿದೆ. ಮೂಲತಃ ಜೈನರಾಗಿದ್ದ ಕುರುಬರು ತಿರುಪತಿ ತಿಮ್ಮಪ್ಪನ ಭಕ್ತರಾಗಿದ್ದಾರೆ. ಇವರು ಹತ್ತಿ ಕಂಕಣದವರು. ದಾಸದೀಕ್ಷೆ ಪಡೆದು ಹಣೆಗೆ ನಾಮ ಕೊರಳಿಗೆ ತುಳಸಿ ಮಾಲೆ ಧರಿಸುತ್ತಾರೆ. ತಿರುಪತಿ ಯಾತ್ರೆ ಮಾಡುತ್ತಾರೆ. ಉಳಿದ ಕುರುಬರಿಗಿಂತ ತಾವು ಭಿನ್ನವೆಂದೂ

ಮೇಲ್ಮಟ್ಟದವರೆಂದೂ ಭಾವಿಸುತ್ತಾರೆ. ಇವರ ಬಗ್ಗೆ ಕ್ಷೇತ್ರಕಾರ್ಯದ ಆಧಾರದ ಮೇಲೆ ಪ್ರಬಂಧ ಮಂಡಿಸಿರುವ ಚನ್ನಪ್ಪ ಕಟ್ಟಿ, ಅವರು ದಾಸಗೊಂಡರ ವೈಶಿಷ್ಟ್ಯವಾದ ಜನಿವಾರ ಪಟ್ಟಿಯ ಬಗ್ಗೆ ಹೀಗೆ ಹೇಳಿದ್ದಾರೆ.

"ದಾಸ ಕುರುಬರಿಗೆ ಹಾಗೂ ದಾಸಗೊಂಡರಿಗೆ ಜನಿವಾರ ಧರಿಸುವ ಹಕ್ಕಿಲ್ಲ, ಆದರೆ ದಾಸಗೊಂಡರಲ್ಲಿ ಜನಿವಾರ ಪಟ್ಟಿ ಧರಿಸುವ ಪದ್ಧತಿ ಇದೆ. ಹೆಸರು ಜನಿವಾರ ಪಟ್ಟಿ ಎಂದಿದ್ದರೂ ಇದನ್ನು ಕೊರಳಿಗೆ ಧರಿಸುವುದಿಲ್ಲ. ಬೆಳ್ಳಿಯಿಂದ ತಯಾರಿಸಿದ ಈ ಆಭರಣವನ್ನು ತಮ್ಮ ಸೊಂಟಕ್ಕೆ ಕಟ್ಟಿಕೊಳ್ಳುತ್ತಾರೆ. ವಿಷ್ಣು ಭಕ್ತರೇನೋ ಅನಿಸಿಕೊಂಡೆವು, ಆದರೆ ಜನಿವಾರ ಧರಿಸುವ ಹಕ್ಕೂ ಇಲ್ಲದಂತಾಯಿತಲ್ಲ ಎಂಬ ಹಳಹಳಿಕೆಯಲ್ಲಿ ಈ ಜನಿವಾರ ಪಟ್ಟಿ ಆವಿಷ್ಕಾರವಾಗಿರಬಹುದು". ಈ ಊಹೆ ಸರಿಯಾಗಿದೆ. ಚನ್ನಪ್ಪ ಕಟ್ಟಿಯವರು ಬ್ರಾಹ್ಮಣರು ಮಾಡಿದ ಈ ಮತಾಂತರದ ರಾಜಕಾರಣವನ್ನೂ ಸಮರ್ಪಕವಾಗಿ ಹೀಗೆ ಗುರುತಿಸಿದ್ದಾರೆ.

"ಹಿಂದೂ fold ನ ಕೆಳಸಮುದಾಯಗಳು ಅನ್ಯಧರ್ಮಕ್ಕೆ ವಲಸೆ ಹೋಗದೆ ಹಾಗೆ ಹಿಂದೂ ಧರ್ಮ ರಚಿಸಿಕೊಂಡ safety volve ಇದಾಗಿತ್ತು. ಹರಿಗೆ ತಮ್ಮನ್ನು ಸಂಪೂರ್ಣ ಅರ್ಪಿಸಿಕೊಂಡು ಹರಿಯ ನಾಮಸ್ಮರಣೆ ಮಾತ್ರದಿಂದಲೇ ಮುಕ್ತಿಯನ್ನು ಸಾಧಿಸಬಹುದು ಎಂದು ಈ ಪರಿಕಲ್ಪನೆ ಸಾರಿತು. ಹಾಗೂ ಆ ಮೂಲಕ ವಲಸೆ ಪ್ರಮಾಣವನ್ನು ಗಣನೀಯವಾಗಿ ತಗ್ಗಿಸುವಲ್ಲಿ ಸಫಲವಾಯಿತು. ಒಂದರ್ಥದಲ್ಲಿ ವೈದಿಕವು ಕೆಳವರ್ಗದ ಜನರ ಬಗ್ಗೆ ತನ್ನ ನಿಲುವನ್ನು ಮರುವ್ಯಾಖ್ಯಾನಿಸಿಕೊಂಡ ಪ್ರಸಂಗ ಇದಾಗಿತ್ತು. ಹೀಗೆ ಉಗಮವಾದ ಈ ಪಂಥಕ್ಕೆ ಒಲಿದ ಇವರನ್ನು ಕುರುಬದಾಸರು, ಗೊಲ್ಲದಾಸರು ಹಾಗೂ ಹೊಲೆದಾಸರ ಎಂದು ಗುರುತಿಸಲಾಗುತ್ತದೆ."

ಜೈನ ಧರ್ಮ ಮತ್ತು ವೀರಶೈವ ಧರ್ಮಗಳು ಜಾತಿ ವ್ಯವಸ್ಥೆಯ ಬಗ್ಗೆ ಉದಾರವಾದಿ ನಿಲುವನ್ನು ತಳೆದಿದ್ದರಿಂದ ಅನಿವಾರ್ಯವಾಗಿ ದಾಸ ಪಂಥದಲ್ಲಿ ಕೆಳಜಾತಿಯ ಜನರಿಗೆ ಹರಿದಾಸರಾಗುವ ಅವಕಾಶವನ್ನು ನೀಡಬೇಕಾಯಿತೆಂಬುದನ್ನು ಲೇಖಕರು ಗುರುತಿಸಿದ್ದಾರೆ. ಹಾಗೆಯೇ ಇನ್ನೊಂದು ಮಹತ್ವದ ಅಂಶವನ್ನೂ ಗುರುತಿಸಿದ್ದಾರೆ. ದಾಸ ದೀಕ್ಷೆಯನ್ನು ಪ್ರತಿ ಗಂಡು ಮಗುವೂ ತಿರುಪತಿ ತಿಮ್ಮಪ್ಪನ ಅರ್ಚಕರಿಂದಲೇ ಕಡ್ಡಾಯವಾಗಿ ಪಡೆಯಬೇಕು. ಆದರೆ ಈ ಅವಕಾಶವನ್ನು ಹೆಂಗಸರಿಗೆ ನಿರಾಕರಿಸಲಾಗಿದೆ. ಇದು ಮಧ್ವ ಸಿದ್ಧಾಂತದ ತಾತ್ವಿಕತೆಗೆ ಅನುಗುಣವಾಗಿದೆ. ದಾಸ ಕುರುಬರೂ ಜಾತಿ ತಾರತಮ್ಯ ಮಾಡುವುದನ್ನು ಲೇಖಕರು ಹೀಗೆ ಗುರುತಿಸಿದ್ದಾರೆ.

"ತಮಗಿಂತ ಮೇಲಿನವರಾದ ಲಿಂಗಾಯಿತರ ಮನೆಗಳಿಗೆ ಹೋಗಿ ಅಲ್ಲಿ ಪ್ರಸಾದ ಸ್ವೀಕರಿಸಿದ್ದನ್ನು ಹೇಳಿಕೊಂಡಷ್ಟೇ ಅಭಿಮಾನದಿಂದ ಹರಿಜನರ ಮನೆಗಳಿಗೆ ಹೋಗಿ ಅಲ್ಲಿ ಪ್ರಸಾದ ಸ್ವೀಕರಿಸದೆ ಬಂದುದ್ದನ್ನು ಅಷ್ಟೇ ಅಭಿಮಾನದಿಂದ ದಾಸಕುರುಬರು ಹೇಳಿಕೊಳ್ಳುತ್ತಾರೆ. ಲೇಖಕರು ಈ ಲೇಖನದಲ್ಲಿ ಜಾತಿ ರಾಜಕಾರಣ ಮತ್ತು ಲಿಂಗಭೇದದ ರಾಜಕಾರಣವನ್ನು ಚೆನ್ನಾಗಿ ಗುರುತಿಸಿದ್ದಾರೆ."

ವೀರಶೈವ ಧರ್ಮದ ಪ್ರಭಾವಕ್ಕೆ ಒಳಗಾಗಿ ಕುರುಬರಲ್ಲಿ ಪುರೋಹಿತ ವರ್ಗಕ್ಕೆ ಸೇರಿದವರೇ ಒಡೆಯರು. ಒಡೆಯರಿಗೆ ಸಂಬಂಧಿಸಿದಂತೆ ಪುರಾಣಗಳಲ್ಲಿ, ಕಾವ್ಯಗಳಲ್ಲಿ, ಶಾಸನಗಳಲ್ಲಿ, ಆಧುನಿಕ ಕಾಗದ ಪತ್ರಗಳಲ್ಲಿ ಮಾಹಿತಿ ಲಭ್ಯವಾಗುತ್ತದೆ. ಈ ಆಕರಗಳ ಅಧ್ಯಯನದಿಂದ ಡಾ. ಕೆ. ರವೀಂದ್ರನಾಥ ಅವರು ಒಡೆಯರ ಬಗ್ಗೆ ಪ್ರಬಂಧ ಮಂಡಿಸಿದ್ದಾರೆ. ಒಡೆಯರಲ್ಲಿ ರೇವಣಸಿದ್ಧ ಸಂಪ್ರದಾಯದ ಶಾಂತೊಡೆಯರು, ಸಿದ್ಧರಾಮೇಶ್ವರ ಸಂಪ್ರದಾಯದ ಮಂಕೊಡೆಯರು. ಅಮೋಘಸಿದ್ಧ ಸಂಪ್ರದಾಯದ ಅಮೋಘ ಒಡೆಯರು ಎಂಬ ಮೂರು ಪರಂಪರೆಗಳನ್ನು ಗುರುತಿಸಿದ್ದಾರೆ. ಇವರು ಸಸ್ಯಾಹಾರಿಗಳು ಹಾಗೂ ಲಿಂಗಧಾರಿಗಳು. ಇವರು ಉಣ್ಣೆ ಕಂಕಣದವರಿಗೆ ಹಾಗೂ ಹತ್ತಿಕಂಕಣದವರಿಗೆ ಗುರುಗಳಾಗಿದ್ದರೂ ಇವರಿಗೆ ಹೆಚ್ಚು ಮಹತ್ವ ಕೊಡುವವರು ಉಣ್ಣೆ ಕಂಕಣದವರೇ; ಹತ್ತಿಕಂಕಣದವರು ಇವರಿಗೆ ಪರಿಮಿತ ಗೌರವ ನೀಡುತ್ತಾರೆ. ಹತ್ತಕಂಕಣದವರು ವೈಷ್ಣವರಾಗಿರುವುದು ಇದಕ್ಕೆ ಕಾರಣ. ಲೇಖಕರು ಈ ಸಂಬಂಧವಾದ ವಿವರಗಳನ್ನು ಕೊಟ್ಟಿದ್ದಾರೆ. ಒಡೆಯರ ಸ್ಥಾನಮಾನಗಳನ್ನು ನೀಡಿರುವುದು ಹಾಗೂ ಗಂಡ ಸತ್ತ ನಂತರವೂ ಆಕೆ ವಿಧವೆಯಾಗದೇ ಮುತ್ತೈದೆಯಾಗಿಯೇ ಉಳಿಯುವುದು ಪ್ರಗತಿಪರವಾದ ಸಂಪ್ರದಾಯವಾಗಿದೆ. ಈ ಬಗ್ಗೆ ಪ್ರೊ. ಚಿದಾನಂದಮೂರ್ತಿ ಅವರು ಬಹಳ ಹಿಂದೆಯೇ ಸಂಶೋಧನ ಪ್ರಬಂಧವನ್ನು ಬರೆದು ಇವರ ವೈಶಿಷ್ಟ್ಯವನ್ನು ಮಹತ್ವವನ್ನೂ ಸ್ಪಷ್ಟಪಡಿಸಿದ್ದರು.

ಸಾದರು, ನೊಣಬರು ಮತ್ತು ಕುಡುಒಕ್ಕಲಿಗರಲ್ಲಿ ಬಹುಪಾಲು ಜನ ಲಿಂಗಾಯತರಾಗಿದ್ದಾರೆ. ಆದರೆ ಇವರು ಮೂಲತಃ ಕುರುಬರಾಗಿದ್ದು, ಕೆಲವರು ಈಗಲೂ ಆ ಸ್ಥಿತಿಯಲ್ಲಿಯೇ ಇದ್ದಾರೆ. ಸಾದ ಕುರುಬರ ಬಗ್ಗೆ ಪ್ರಬಂಧ ಮಂಡಿಸಿರುವ ಪ್ರೊ. ಬಿ. ಬಿ. ಪಾಟೀಲ ಅವರು

“ಕುರುಬರಲ್ಲಿಯೇ ಬಹು ಸಂಖ್ಯಾತರು ಲಿಂಗಾಯಿತರಾದವರೂ ಅದೇಕೋ ತಮ್ಮ ಕುರುಬ ಮೂಲವನ್ನು ಅವರು ಹೇಳಿಕೊಳ್ಳದಿರುವುದು ಆಶ್ಚರ್ಯವನ್ನುಂಟು ಮಾಡುತ್ತದೆ” ಎಂದು ಹೇಳಿದ್ದಾರೆ. “ಅಂಎ, ನೊಣಬ, ಸಾದಕುರುಬರಲ್ಲಿನ ಮುಖ್ಯ ಬೆಡಗುಗಳು, ಅವು ಪ್ರತ್ಯೇಕ ಜಾತಿಗಳಾಗಿ ಮಾರ್ಪಟ್ಟು ನಂತರ ಇತರ ಕೆಲ ಬೆಡಗುಗಳು ಜನ ಸೇರಿಕೊಂಡು ಮತ್ತು ಕೆಲ ಬೆಡಗುಗಳಲ್ಲಿ ಶಾಖೆಗಳಾಗಿ ಬೆಳೆದದ್ದು ಕಂಡುಬರುತ್ತದೆ” ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. “ಚರ್ಮದ ಕಾಯಕದ ಕುರುಬರು, ಸಾದರು ಮಾದಿಗರೆನಿಸಿರಬೇಕು ಎಂದರೆ ಈ ಮೂರು ಜಾತಿಗಳಲ್ಲಿ ಸಮಾನ ಬೆಡಗುಗಳಿವೆ. ಈ ಹಿನ್ನೆಲೆಯಲ್ಲಿ ಪ್ರೊ. ಎಸ್. ಎಸ್. ಹಿರೇಮಠ ಅವರು ಕುರುಬ ರೇವಣಸಿದ್ಧನ ಶಿಷ್ಯ ಮಾದಿಗ ಮರುಳಸಿದ್ಧ ಎಂದು ಹೇಳಿದ್ದು ಅರ್ಥಪೂರ್ಣ ಎನಿಸುತ್ತದೆ” ಎಂದು ಅಭಿಪ್ರಾಯಪಡುತ್ತಾರೆ. ತಮ್ಮ ಮಾತು ಕೂಡ್ಲಿಗಿ ತಾಲೂಕಿನ ಉಜ್ಜನಿಯ ಮರುಳಸಿದ್ಧನಿಗೆ ಅನ್ವಯಿಸುತ್ತದೆ ಎಂದೂ ಹೇಳಿದ್ದಾರೆ. ಮಧ್ಯಪ್ರದೇಶದ ಉಜ್ಜಯನಿಯಿಂದ ಕರ್ನಾಟಕಕ್ಕೆ ವಲಸೆ ಬಂದ ಕುರುಬರು ಅಜ್ಜಂಪುರ ತಾಲ್ಲೂಕಿನ ಶಿವನಿಯಲ್ಲಿ ನೆಲೆಸಿದ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಲಿಂಗಾಯಿತರಾದ ಸಾದ ಕುರುಬರು ಪ್ರತ್ಯೇಕ ಮಠ ಕಟ್ಟಿಕೊಂಡು ತರಳಬಾಳು ಗುರುಪರಂಪರೆಯನ್ನು ಪ್ರಾರಂಭಿಸಿದ್ದನ್ನು ಪ್ರಸ್ತಾಪಿಸಿದ್ದಾರೆ.

ಕುಡುಒಕ್ಕಲಿಗರು ವೀರಶೈವ ಧರ್ಮಕ್ಕೆ ಸೇರಿದವರಾಗಿದ್ದು ಜಾತಿ ವ್ಯವಸ್ಥೆಯಲ್ಲಿ ಕುರುಬರಿಗಿಂತ ಮೇಲಿದ್ದಾರೆ. ಕುಡು ಒಕ್ಕಲಿಗ ಬಗ್ಗೆ ಪ್ರಬಂಧ ಬರೆದಿರುವ ಡಾ. ಶ್ರೀರಾಮ ಇಟ್ಟಣ್ಣನವರು “ಕುಡು ಒಕ್ಕಲಿಗರು ಕುರುಬ ಸಮಾಜದ ಒಂದು ಪಂಗಡ ಎನ್ನುವುದಕ್ಕಿಂತ ಅವರನ್ನು ಕುರುಬರು ಸೋದರ ಸಂಬಂಧ ಸಮುದಾಯ ಎನ್ನುವುದು ಹೆಚ್ಚು ಸೂಕ್ತವೆನಿಸುತ್ತದೆ” ಎಂದು ಅಭಿಪ್ರಾಯಪಡುತ್ತಾರೆ.

ನೊಣಬರ ಬಗ್ಗೆ ಪ್ರಬಂಧ ಮಂಡಿಸಿರುವ ಕುಂ. ಬಾ. ಸದಾಶಿವಪ್ಪನವರು “.....ಕರ್ನಾಟಕ ಪ್ರದೇಶವನ್ನು ಸುಮಾರು ಕ್ರಿ. ಶ. ೭೫೦ ರಿಂದ ೧೦೫೪ರವರೆಗೂ ಆಳಿದ ಒಂದು ಜನಾಂಗ ಕುರುಬರೇ ಆಗಿದ್ದರು. ಅವರೇ ನೊಳಂಬರು-ನೊಣಬರು (ಕುರುಬರು) ಒಂದು ವಿಧ ಎಂದು ಹೇಳಿದ್ದಾರೆ. ನೊಳಂಬರು ಕ್ರಮೇಣ ವೀರಶೈವರಾದರು. ನೊಣಬರ ಸಂಸ್ಕೃತಿಯು ಕುರುಬರ ಸಂಸ್ಕೃತಿಯೂ ಒಂದೇ ಆಗಿರುತ್ತದೆ” ಎಂದು ಲೇಖಕರು ಹೇಳಿದ್ದಾರೆ.

ಗೊಂಡರು ಕರ್ನಾಟಕದಲ್ಲಿ ಭಟ್ಕಳ ತಾಲೂಕಿನಲ್ಲಿರುವ ಬುಡಕಟ್ಟಿನ ಜನ. ಇವರ ಬಗ್ಗೆ ಪ್ರಬಂಧ ಮಂಡಿಸಿರುವ ಡಾ. ಕೆ. ಎಂ. ಮೈತ್ರಿ ಅವರು ಜಗತ್ತಿನ ವಿವಿಧ ದೇಶಗಳ ಪಶುಪಾಲಕರ ಜೀವನ ಕ್ರಮದ ಹಿನ್ನೆಲೆಯಲ್ಲಿ ಭಾರತದ ಹಾಗೂ ಕರ್ನಾಟಕದ ಗೊಂಡರ ಬಗ್ಗೆ ವಿಚಾರ ಮಾಡಿದ್ದಾರೆ. ಗೊಂಡ ಹೆಸರಿನ ಪಟ್ಟಿಯನ್ನು ಕೊಟ್ಟಿದ್ದಾರೆ. ಬೀದರ ಜಿಲ್ಲೆಯಲ್ಲಿ ಕುರಿಗಳನ್ನು ಸಾಕುತ್ತಾರೆ. ಇವರಲ್ಲಿ ಬಹುಪಾಲು ಜನ ಉಣ್ಣೆ ಕಂಕಣದವರು. ಲೇಖಕರು ರಾಜಗೊಂಡರ ಬಗ್ಗೆಯೂ ಬೇಟೆ ಮೂಲಕ ಕೊಡಗಿನ ಕುರುಬರ ಬಗ್ಗೆಯೂ ವಿಚಾರ ಮಾಡಿದ್ದಾರೆ. “ಕರ್ನಾಟಕದಲ್ಲಿ ಕುರುಬ, ಗೊಂಡ, ರಾಜಗೊಂಡ, ಕಾಡುಕುರುಬ, ಜೇನುಕುರುಬ ಎಂದೇ ಎಲ್ಲಾ ಪದಗಳೂ ಒಂದೇ ಬುಡಕಟ್ಟಿಗೆ ಬಳಸುವ ಸಮಾನಾಂತರ ಪದಗಳು” ಎಂದು ಹೇಳಿ ಇವು ಪ್ರಾದೇಶಿಕತೆ ಮತ್ತು ಕಸುಬಿನ ಕಾರಣದಿಂದಾಗಿ ಪ್ರತ್ಯೇಕ ಬುಡಕಟ್ಟುಗಳಾಗಿವೆ ಎಂದು ಅಭಿಪ್ರಾಯಪಡುತ್ತಾರೆ.

“ಕುಂಚಿಟಿಗರ ಬಗ್ಗೆ ಪ್ರಬಂಧ ಮಂಡಿಸಿರುವ ಡಾ. ಮೀರಾಸಾಬಿಹಳ್ಳಿ ಶಿವಣ್ಣ ಅವರು ಕುಂಚಿಟಿಗರು ಒಕ್ಕಲಿಗರ ಒಂದು ಪ್ರಭೇದ ಎಂದು ಹೇಳಿ ಕುಂಚಿಟಿಗರು ಮೂಲತಃ ಪಶುಪಾಲಕರಾಗಿದ್ದು ಹುಲ್ಲುಗಾವಲುಗಳು ಕಡಿಮೆಯಾದ ಮೇಲೆ ಕಾಡುಗೊಲ್ಲರು ಮತ್ತು ಮ್ಯಾಸಬೇಡರಂತೆ ಕುರಿ ಸಾಕಾಣಿಕೆಗೆ ತೊಡಗಿದ್ದಾರೆ” ಎಂದು ಅಭಿಪ್ರಾಯಪಟ್ಟಿದ್ದಾರೆ. ಕುಂಚಿಟಿಗರು ಮತ್ತು ಕುರುಬರ ಸಂಬಂಧಗಳೂ ನಿಕಟವಾಗಿವೆ ಎಂಬುದನ್ನು ಐತಿಹ್ಯ ಬೆಡಗು ಮತ್ತು ಗಾದೆಯ ಮೂಲಕ ವಿವರಿಸಿದ್ದಾರೆ. ಕಂಬಳಿ ನೇಯ್ಗೆಯಲ್ಲಿ ಕುಂಚವನ್ನು ಹಿಡಿದದ್ದರಿಂದ ಕುಂಚಿಟಿಗರು ಮತ್ತು ಕುರುಬರ ಸಂಬಂಧಗಳೂ ನಿಕಟವಾಗಿವೆ ಎಂಬುದನ್ನು ಉಲ್ಲೇಖಿಸುತ್ತಾರೆ. “....ಕುರುಬರು, ಕುಂಚಿಟಿಗರು, ಗೊಲ್ಲರು ಮೂಲತಃ ಬುಡಕಟ್ಟು ಮೂಲದ ಪಶುಪಾಲನ ಸಂಸ್ಕೃತಿಯವರು. ಆದ್ದರಿಂದ ಹಲವು ವಿಷಯಗಳಲ್ಲಿ ಸಾಮ್ಯತೆ ಇದೆ. ಈ ಸಾಮ್ಯತೆಗಳಿರುವ ಹಿನ್ನೆಲೆಯಲ್ಲಿ ಬಂದು ಸಮುದಾಯದ ಮೇಲೆ ಮತ್ತೊಂದು ಸಮುದಾಯ ಎನ್ನುವುದೇ ವಾಸ್ತವಕ್ಕೆ ದೂರವಾದ ಸಂಗತಿ” ಎಂದು ಲೇಖಕರು ಹೇಳಿರುವುದು ಸಮರ್ಪಕವಾಗಿದೆ.

ಕಾಡುಗೊಲ್ಲರು ಕುರುಬರ ಉಪಪಂಗಡವಲ್ಲ. ಡಾ. ಮೀರಾಸಾಬಿಹಳ್ಳಿ ಶಿವಣ್ಣ ಅವರಂತೆಯೇ ಕಾಡುಗೊಲ್ಲರ ಬಗ್ಗೆ ಪ್ರಬಂಧ ಮಂಡಿಸಿರುವ ಡಾ. ಸಿ. ಶಿವಲಿಂಗಪ್ಪ ಅವರು ಕಾಡುಗೊಲ್ಲರು ಪ್ರತ್ಯೇಕವಾದ ಬುಡಕಟ್ಟು. ಆಧರೆ ನಿಕಟವಾದ ಸಂಪರ್ಕ ಹೊಂದಿರುವ ಬುಡಕಟ್ಟು ಎಂದು ಸಮರ್ಪಕವಾಗಿ ಹೇಳಿದ್ದಾರೆ. ಮೊದಲಿಗೆ ದನಗಳನ್ನು ಕಾಯುತ್ತಿದ್ದ ಕಾಡುಗೊಲ್ಲರು ಹುಲ್ಲುಗಾವಲುಗಳು ಕಡಿಮೆಯಾದ ಮೇಲೆ ಕುರಿಸಾಕಾಣಿಕೆಗೆ ತೊಡಗಿದರು. ಇದಕ್ಕೆ ಸಮರ್ಥನೆಯಾಗಿ ಬರುವ ಐತಿಹ್ಯವನ್ನು ನಾನು ಉದಾಹರಿಸಿರುವುದನ್ನು ತಮ್ಮ ಪ್ರಬಂಧದಲ್ಲಿ ಶಿವಲಿಂಗಪ್ಪ ಅವರು ಉಲ್ಲೇಖಿಸಿದ್ದಾರೆ. ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು ಎಂಬ ನನ್ನ ಕೃತಿಯಲ್ಲಿ ಈ ಐತಿಹ್ಯವನ್ನು ಮತ್ತು ಕಾಡುಗೊಲ್ಲರು ಕುರಿಯ ತುಪ್ಪಟವನ್ನು ಕತ್ತರಿಸಿ ಕುರುಬರಿಗೆ ಮಾರಾಟ ಮಾಡುವ ಸಂದರ್ಭದಲ್ಲಿ ಮಾಡುವ ಆಚರಣೆಯ ವಿವರಗಳನ್ನು ಕೊಟ್ಟಿದ್ದೇನೆ. ಚಳ್ಳಕೆರೆಯಲ್ಲಿ ಈ ಸಮ್ಮೇಳನ ನಡೆಯುತ್ತಿರುವುದರಿಂದ ಚಿತ್ರದುರ್ಗ ಜಿಲ್ಲೆಯ ಕುರುಬ ಸಮುದಾಯದ ಆರ್ಥಿಕ, ಸಾಮಾಜಿಕ, ದಾರ್ಮಿಕ, ರಾಜಕೀಯ ಪರಿಸ್ಥಿತಿಯ ಬಗ್ಗೆ ಪ್ರಬಂಧಗಳನ್ನು ವಿದ್ವಾಂಸರು ಮಂಡಿಸಿರುವುದು ಸೂಕ್ತವಾಗಿವೆ. ಹಾಗೂ ಇವು ಉಪಯುಕ್ತವಾಗಿದೆ.

೪

ಕುರುಬರ ಉಪಜಾತಿಗಳ ಬಗ್ಗೆ ಮಂಡಿತವಾಗಿರುವ ಈ ಪ್ರಬಂಧಗಳಲ್ಲಿ ಕೆಲವು ವಿವರಣಾತ್ಮಕವಾಗಿವೆ, ಕೆಲವು ಸಂಶೋಧನಾತ್ಮಕವಾಗಿವೆ, ಕೆಲವು ವಿಶ್ಲೇಷಣಾತ್ಮಕವಾಗಿವೆ. ಇವುಗಳನ್ನು ಅಧ್ಯಯನ ಮಾಡಿದರೆ ಕುರುಬರ ಉಪಜಾತಿಗಳ ಒಂದು ಸ್ಥೂಲವಾದ ಚಿತ್ರ ದೊರಕುತ್ತದೆ. ಇವುಗಳು ಒಂದು ರೀತಿಯಲ್ಲಿ ಆರಂಭದ ಸಮೀಕ್ಷೆ (pilot survey)ರೂಪದಲ್ಲಿದ್ದು ಮುಂದಿನ ಅಧ್ಯಯನಗಳಿಗೆ ಒಳ್ಳೆಯ ತಳಹದಿ ಹಾಕಿತು ಎಂದು ಹೇಳಬಹುದು. ಈ ಪ್ರಬಂಧಗಳು ಕುರುಬರ ಸಾಂಪ್ರದಾಯಿಕ ಜೀವನ ಕ್ರಮಗಳನ್ನು ದಾಖಲು ಮಾಡಿವೆ.

ಇಂದು ಮುಂದುವರಿದ ಜಾತಿಗಳಲ್ಲಿನ ಉಪಜಾತಿಗಳು ಸಾಂಸ್ಕೃತಿಕವಾಗಿ ಮಾತ್ರವಲ್ಲದೆ ರಾಜಕೀಯವಾಗಿಯೂ ಮಹತ್ವ ಪಡೆಯುತ್ತವೆ. ಇವು ತಮ್ಮದೇ ಮಠಗಳನ್ನೂ ಮಠಾಧಿಪತಿಗಳನ್ನು ಹೊಂದಿವೆ. ಸಮುದಾಯ ಭವನಗಳು ಶಾಲಾ ಕಾಲೇಜುಗಳು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಸಹಕಾರಿ ಸಂಘಗಳು ಮದುವೆ ಸಲಹಾ ಕೇಂದ್ರಗಳು, ವಾರ್ತಾ ಪತ್ರ ಹಾಗೂ ಪುಸ್ತಕ ಪ್ರಕಟಣೆ ಮೊದಲಾದ ವಿಭಿನ್ನ ಕಾರ್ಯಚಟುವಟಿಕೆಗಲ್ಲಿ ತೊಡಗಿವೆ. ಮುಂದುವರಿದ ಜಾತಿಗಳಲ್ಲಿ ಉಪಜಾತಿಗಳ ಮೂಲಕ ವಿಕೇಂದ್ರೀಕರಣ ಪ್ರಕ್ರಿಯೆ ನಡೆದಿರುವಂತೆ ಜಾತಿಗಳು ಒಗ್ಗಟ್ಟಾಗಬೇಕು ಎಂಬ ಪ್ರಕ್ರಿಯೆಯೂ ನಡೆಯುತ್ತಿವೆ. ಜಾಗತೀಕರಣದ ಇಂದಿನ ದಿನಗಳಲ್ಲಿ ಕುರುಬರ ಸಮುದಾಯ, ಅದರಲ್ಲಿನ ಉಪಜಾತಿಗಳು ಮತ್ತು ಬೆಡಗುಗಳು (ಬಳಿಗಳು) ಯಾವ ರೀತಿ ಮುಂದುವರಿಯಬೇಕು ಎಂಬುದರ ಬಗ್ಗೆಯೂ ಅಧ್ಯಯನಗಳೂ ನಡೆಯಬೇಕಾಗಿದೆ. ಇದಕ್ಕೆ ಈ ವಿಚಾರ ಸಂಕಿರಣದ ಪ್ರಬಂಧಗಳು ನಾಂದಿಯಾಗಲೆಂದು ಆಶಿಸುತ್ತೇನೆ.

# ಅನುಬಂಧಗಳು

***<u>ಹಾಲುಮತ ಅಧ್ಯಯನ ಪೀಠದ ೨೦೦೯-೧೦ನೆಯ ಸಾಲಿನ ಕಾರ್ಯಚಟುವಟಿಕೆಗಳ ವರದಿ</u>***

**೧. ಹಾಲುಮತ ಸಂಸ್ಕೃತಿ ಸಮ್ಮೇಳನ-೨**

ಕನ್ನಡ ವಿಶ್ವವಿದ್ಯಾಲಯದ ಹಾಲುಮತ ಅಧ್ಯಯನ ಪೀಠವು ಚಳ್ಳಕೆರೆ ತಾಲೂಕು ಶ್ರೀ ಕನಕ ನೌಕರರ ಸಂಘದ ಸಹಯೋಗದಲ್ಲಿ ೨೫, ೨೬ ಜುಲೈ ೨೦೦೯ ರಂದು ಎರಡು ದಿನಗಳ ಕಾಲ ಎರಡನೆಯ ಹಾಲುಮತ ಸಂಸ್ಕೃತಿ ಸಮ್ಮೇಳನವನ್ನು ಚಳ್ಳಕೆರೆಯ ದಲ್ಲಾಲರ ಸಮುದಾಯ ಭವನದಲ್ಲಿ ಆಯೋಜಿಸಿತ್ತು. ದಿನಾಂಕ ೨೫.೭.೨೦೦೯ ರಂದು ಬೆಳಿಗ್ಗೆ ೧೦.೩೦ಕ್ಕೆ ಸಮ್ಮೇಳನದ ಉದ್ಘಾಟನ

ಸಮಾರಂಭ ಆರಂಭವಾಯಿತು. ಕನ್ನಡ ವಿಶ್ವವಿದ್ಯಾಲಯದ ಕುಲಸಚಿವರಾದ ಎಸ್. ಎಸ್. ಪೂಜಾರ ಅವರು ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತ ಕುರುಬ ಸಮುದಾಯದವರು ಹಾಲುಮತ ಸಂಸ್ಕೃತಿ ಬಗ್ಗೆ ಅಮಿತ ಪ್ರೇಮ, ಅನನ್ಯ ಅಭಿಮಾನ ಬೆಳೆಸಿಕೊಳ್ಳಬೇಕು. ಇದರಿಂದ ಸಂಸ್ಕೃತಿಯನ್ನು ಉಳಿಸಬಹುದು. ತಾಯಿ ತನ್ನ ಮಗುವನ್ನು ರಕ್ಷಿಸುವಂತೆ ಪಣ ತೊಡಬೇಕು. ಇಂಥದೊಂದು ಅಚಲ ವಿಶ್ವಾಸವನ್ನು ಎಲ್ಲರೂ ಬೆಳೆಸಿಕೊಳ್ಳಬೇಕು. ಕುರಿ ಮತ್ತು ಕಂಬಳಿ ಎರಡೂ ಕಪ್ಪು ಬಣ್ಣದ್ದಾಗಿದ್ದು, ಅವುಗಳು ಜ್ಞಾನದ ಸಂಕೇತಗಳಾಗಿವೆ. ಡೊಳ್ಳು ಮತ್ತು ಚರಕವನ್ನು ಸಹ ನಾವು ನಮ್ಮ ಜನಾಂಗದ ಸಂಕೇತವಾಗಿ ಇಟ್ಟುಕೊಂಡಿದ್ದೇವೆ. ಕುರಿಗಳನ್ನು ರೊಪ್ಪಗಳಲ್ಲಿ ಸಾಕಿ ಹಾಲು ಮೊಸರು ತುಪ್ಪವನ್ನು ಮಾರಾಟ ಮಾಡುತ್ತೇವೆ. ಈ ಸಮುದಾಯದಲ್ಲಿ ಸೇವಾ ಮನೋಭಾವನೆ ಹೆಚ್ಚಿದೆ. ಇವರು ಯಾರಿಗೂ ತೊಮದರೆ ಕೊಡುವವರಲ್ಲ. ಎಲ್ಲರನ್ನೂ ಪ್ರೀತಿ ವಿಶ್ವಾಸದಿಂದ ಕಾಣುವ ಕುರುಬ ಸಮುದಾಯವು ತನ್ನ ಒಳಪಂಗಡಗಳನ್ನು ಒಗ್ಗೂಡಿಸಿ ಸಂಘಟಿಸಬೇಕಾದ ಅಗತ್ಯವಿದೆ ಎಂದು ಕರೆ ನೀಡಿದರು.

ಸಮ್ಮೇಳನದ ಸರ್ವಾಧ್ಯಕ್ಷರಾದ ಹಿರಿಯ ಸಾಹಿತಿ ಬ. ಪ. ನಾಯ್ಕರ್ ಅವರು "ಹಾಲುಮತ ಸಂಸ್ಕೃತಿ ಪರಂಪರೆ ಅತ್ಯಂತ ಪ್ರಾಚೀನವಾದುದು. ಈ ನಿಟ್ಟಿನಲ್ಲಿ ಹಾಲುಮತ ಸಾಹಿತ್ಯ ಸಂಸ್ಕೃತಿ ಚರಿತ್ರೆ ಕುರಿತು ಸಮಗ್ರವಾದ ಅಧ್ಯಯನ ನಡೆಯಬೇಕು. ವಿ. ಆರ್. ಹನುಮಂತಯ್ಯವರ ಭಾರತದ ಕುರುಬರ ಚರಿತ್ರೆ, ಶಂಬಾ ಜೋಶಿ ಅವರ ಹಾಲುಮತ ದರ್ಶನ, ಕರ್ನಾಟಕ ಸಂಸ್ಕೃತಿಯ ಪೂರ್ವಪೀಠಿಕೆ, ಶಿವಾನಂದ ದುಗ್ಗಣ್ಣನವರ ಕರ್ನಾಟಕದ ಕುರುಬರು ಮೊದಲಾದ ಗ್ರಂಥಗಳು ಕುರುಬರ ಚರಿತ್ರೆಯನ್ನು ಪರಿಚಯಿಸಿಕೊಟ್ಟಿವೆ. ಆದರೂ ಈ ಕ್ಷೇತ್ರದಲ್ಲಿ ಮಾಡಬೇಕಾದ ಸಂಶೋಧನೆ ಸಾಕಷ್ಟಿದೆ. ಇಂಗ್ಲಿಷ್‌ನಲ್ಲಿ ಈ ಬಗ್ಗೆ ಸಾಕಷ್ಟು ಅಧ್ಯಯನಗಳು ನಡೆದಿದ್ದು, ಆ ಎಲ್ಲ ಗ್ರಂಥಗಳನ್ನು ಲೇಖನಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಬೇಕು. ಹಾಲುಮತ ಸಂಸ್ಕೃತಿ ಸಮ್ಮೇಳನದ ಸರ್ವಾಧ್ಯಕ್ಷತೆಯ ಗೌರವವನ್ನು ನೀಡಿರುವುದಕ್ಕಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ನಾನು ಋಣಿಯಾಗಿದ್ದೇನೆ. ಇಲ್ಲಿ ನಡೆಯುವ ಚರ್ಚೆ ಸಂವಾದಗಳು ಸಮಾಜದ ಸರ್ವ ಜನರಿಗೆ ತಲುಪುವ ಹಾಗೆ ಮಾಡಬೇಕಾದುದು ನಮ್ಮೆಲ್ಲರ ಕರ್ತವ್ಯವಾಗಿದೆ. ಆ ಮೂಲಕ ಸಮುದಾಯದ ಶೈಕ್ಷಣಿಕ ಸಾಮಾಜಿಕ ಸಾಂಸ್ಕೃತಿಕ ಜಾಗ್ರತೆಗೆ ಸಹಾಯಕಾರಿಯಾಗುತ್ತದೆ" ಎಂದು ಹೇಳಿದರು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎ. ಮುರಿಗೆಪ್ಪನವರು ಮಾತನಾಡುತ್ತ "ಕನ್ನಡ ವಿಶ್ವವಿದ್ಯಾಲಯ ತನ್ನ ಆವರಣಕ್ಕೆ ಸೀಮಿತವಾಗದೇ ಸಮುದಾಯದೊಂದಿಗೆ ಸಮ್ಮಿಳಿತವಾಗಿ ಜ್ಞಾನ ಪ್ರಸಾರದ ಕೈಂಕರ್ಯದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿದೆ. ಸರಕಾರ ಮತ್ತು ಸಂಘ ಸಂಸ್ಥೆಗಳ ಸಹಕಾರವನ್ನು ಪಡೆದುಕೊಂಡು ಮುಂದಿನ ದಿನಗಳಲ್ಲಿ ಇನ್ನೂ ವ್ಯಾಪಕವಾದ ಯೋಜನೆಗಳನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸಲಾಗುತ್ತದೆ. ಹಾಲುಮತ ಅಧ್ಯಯನ ಪೀಠವು ಇನ್ನೂ ಹೆಚ್ಚು ಹೆಚ್ಚು ರಚನಾತ್ಮಕ ಯೋಜನೆಗಳನ್ನು ರೂಪಿಸಿಕೊಂಡು ಮುನ್ನಡೆಯಲಿ" ಎಂಬ ಆಶಯವನ್ನು ವ್ಯಕ್ತಪಡಿಸಿದರು. ಹಾಲುಮತ ಅಧ್ಯಯನ ಪೀಠದ ಸಂಚಾಲಕರಾದ ಡಾ. ಎಫ್. ಟಿ. ಹಳ್ಳಿಕರಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಹಾಲುಮತ ಅಧ್ಯಯನ ಪೀಠವು ಕೈಕೊಳ್ಳಬಹುದಾದ ಯೋಜನೆಗಳ ರೂಪುರೇಷೆಗಳನ್ನು ಸಭೆಗೆ ತಿಳಿಸಿದರು. ಇದೇ ಸಂದರ್ಭದಲ್ಲಿ ಡಾ. ಎಫ್. ಟಿ. ಹಳ್ಳಿಕೇರಿ ಅವರು ಸಂಪಾದಿಸಿದ ಹಾಲುಮತ ವ್ಯಾಸಂಗ ಸಂಪುಟ-೧ ಕೃತಿಯನ್ನು ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯರಾದ ಡಾ. ಎಂ. ನಾಗರಾಜ ಅವರು ಬಿಡುಗಡೆ ಮಾಡಿದರು. ಮುಖ್ಯ ಅತಿಥಿಗಳಾಗಿ ನಿಶಾನಿ ಜಯಣ್ಣ, ಸಿ. ಚನ್ನಪ್ಪ, ಕೆ. ಎ. ಕೆಂಚಲಿಂಗಪ್ಪ, ಎಸ್. ಸಿದ್ಧಲಿಂಗಮೂರ್ತಿ, ಆರ್. ಮಲ್ಲೇಶಪ್ಪ, ಸಿ. ಇ. ಓದೀರಪ್ಪ, ವೀರಣ್ಣ, ಚೌಳೂರು, ಬಿ. ಎಸ್. ಬಸವರಾಜಪ್ಪ ಮುಂತಾದವರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಜಾನಪದ ಕಥೆಗಾರ ಈರಬಡಪ್ಪ, ಖ್ಯಾತ ವೈದ್ಯರಾದ ಡಾ. ಆರ್. ಕಾಂತರಾಜ್, ರಾಜ್ಯ ಪ್ರಶಸ್ತಿ ಪುರಸ್ಕೃತರಾದ ಪ್ರೊ. ಎಂ. ಶಿವಲಿಂಗಪ್ಪ, ಪಿ. ಕುಮಾರ್ ಅವರನ್ನು ಸನ್ಮಾನಿಸಲಾಯಿತು. ಅಲ್ಲದೇ ಕುರುಬ ಸಂಸ್ಕೃತಿಗೆ ಸಂಬಂಧಿಸಿದ ಸಾಮಗ್ರಿಗಳನ್ನು ಹಾಲುಮತ ಅಧ್ಯಯನ ಪೀಠದ ವಸ್ತು ಸಂಗ್ರಹಾಲಯಕ್ಕೆ ದಾನವಾಗಿ ನೀಡಿದ ಚಳ್ಳಕೆರೆ ತಾಲೂಕು ಟಿ. ಎನ್. ನಾಯಕನಕೋಟೆ ಗ್ರಾಮದ ಗೊರವಯ್ಯಗಳಾದ ಶಿವಲಿಂಗಪ್ಪ ತಂದೆ ಮೈಲಾರಪ್ಪ ಮತ್ತು ಗದಗ ಜಿಲ್ಲೆ ಮುಂಡರಗಿ ತಾಲ್ಲೂಕಿನ ಡೋಣಿ ಗ್ರಾಮದ ಶ್ರೀ ಬೀರಲಿಂಗೇಶ್ವರ ಸಂಘದ ಶ್ರೀ ನಿಂಗಪ್ಪ ಹಾಲಪ್ಪ ಗುಡ್ಡದ ಅವರನ್ನು ಇದೇ ವೇದಿಕೆಯಲ್ಲಿ ಗೌರವಿಸಲಾಯಿತು. ಸ್ಥಳೀಯ ಸಂಚಾಲಕರಾದ ಪ್ರೊ. ಎಂ. ಶಿವಲಿಂಗಪ್ಪ ಅವರು ಸ್ವಾಗತಿಸಿದರು. ಪಿ. ಕೃಷ್ಣನವರು ಕಾರ್ಯಕ್ರಮ ನಿರೂಪಿಸಿದರು. ಕನಕ ನೌಕರರ ಸಂಘದ ಅಧ್ಯಕ್ಷರಾದ ಪಿ. ಕೃಷ್ಣಮೂರ್ತಿ ಅವರು ವಂದನಾರ್ಪಣೆ ಸಲ್ಲಿಸಿದರು.

ಸಮ್ಮೇಳನದಲ್ಲಿ ಕುರುಬರ ಒಳಪಂಗಡಗಳ ಬಗೆಗೆ ನಾಲ್ಕು ಗೋಷ್ಠಿಗಳನ್ನು ಏರ್ಪಡಿಸಲಾಗಿತ್ತು. ಡಾ. ಎಸ್. ಸಿದ್ಧರಾಮಣ್ಣ ಗೊರ್ಲಕಟ್ಟೆ ಅವರ ಅಧ್ಯಕ್ಷತೆಯಲ್ಲಿ ನಡೆದ ಮೊದಲ ಗೋಷ್ಠಿಯಲ್ಲಿ ಕಾಡುಕುರುಬರು (ಕೆ. ಕೇಶವನ್‌ಪ್ರಸಾದ), ಗೊಂಡ ಕುರುಬರು (ಕೆ. ಎಂ. ಮೇತ್ರಿ), ಅಲೆಮಾರಿ ಕುರುಬರು (ಡಿ. ಯರಿಯಪ್ಪ), ದನಗರ ಗವಳಿಗಳು (ಎಫ್. ಟಿ. ಹಳ್ಳಿಕೇರಿ) ಎಂಬ ನಾಲ್ಕು ಸಂಪ್ರಬಂಧಗಳು ಮಂಡಿಸಲ್ಪಟ್ಟವು. ಪ್ರೊ. ಲೋಕೇಶ್ ಒಡೆಯರ ಅವರ ಅಧ್ಯಕ್ಷತೆಯಲ್ಲಿ ನಡೆದ ಎರಡನೆಯ ಗೋಷ್ಠಿಯಲ್ಲಿ ಹತ್ತಿಕಂಕಣ ಕುರುಬರು (ಎ. ಬಿ. ಬಾಳಪ್ಪ), ಉಣ್ಣೆಕಂಕಣ ಕುರುಬರು (ಚಂದ್ರಪ್ಪ ಸೊಬಟಿ), ಹಂಡೆ ಕುರುಬರು (ಬಿ. ರಾಜಶೇಖರಪ್ಪ) ಒಡೆಯರು (ಕೆ. ರವೀಂದ್ರನಾಥ) ಕುರಿತು ಸಂಪ್ರಬಂಧ ಮಂಡಿಸಲಾಯಿತು. ಮೂರನೆಯ ಗೋಷ್ಠಿ ಜಿ. ನಾಗೇಂದ್ರಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಜಂಡೆ ಕುರುಬರು, ದಾಸ ಕುರುಬರು, ಸಾದ ಕುರುಬರು, ಕ್ರೈಸ್ತ ಕುರುಬರು ಕುರಿತು ಕ್ರಮವಾಗಿ ಸಿದ್ಧಣ್ಣ ಜಕಬಾಳ, ಚನ್ನಪ್ಪ ಕಟ್ಟಿ, ಬಿ. ಬಿ. ಪಾಟೀಲ ಹಾಗೂ ಎನ್. ಎಂ. ಅಂಬಲಿಯವರು ಸಂಪ್ರಬಂಧಗಳನ್ನು ಸಾದರಪಡಿಸಿದರು. ಎಸ್. ಶ್ರೀನಿವಾಸ ಅವರ ಅಧ್ಯಕ್ಷತೆಯಲ್ಲಿ ನೊಣಬರು, ಕುಡಒಕ್ಕಲಿಗರು, ಹೆಗ್ಗಡೆಯವರು, ಗೊಲ್ಲರು, ಕುಂಚಟಿಗರು ಕುರಿತು ಕುಂಬಾ ಸದಾಶಿವಪ್ಪ, ಶ್ರೀರಾಮ ಇಟ್ಟಣ್ಣನವರ, ಒಡೆಯರ ಡಿ. ಹೆಗ್ಗಡೆ, ಸಿ. ಶಿವಲಿಂಗಪ್ಪ, ಮೀರಾಸಾಬಿಹಳ್ಳಿ ಶಿವಣ್ಣ ಅವರು ಸಂಪ್ರಬಂಧಗಳನ್ನು ಮಂಡಿಸಿದರು. ಎಂ. ಕರಿಯಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿದ ಐದನೆಯ ಗೋಷ್ಠಿಯಲ್ಲಿ ಚಿತ್ರದುರ್ಗ ಪರಿಸರದ ಕುರುಬರ ಸಂಸ್ಕೃತಿ ಕುರಿತು ಸಂಪ್ರಬಂಧಗಳು ಮಂಡಿಸಲ್ಪಟ್ಟವು. ಚಿತ್ರದುರ್ಗ ಪರಿಸರದ ಕುರುಬರ ಧಾರ್ಮಿಕ ವಿಚಾರಗಳು, ಸಾಮಾಜಿಕ ಸಂಗತಿಗಳು, ಜನಪದ ಸಂಸ್ಕೃತಿ ಹಾಗೂ ಆರ್ಥಿಕ ವಿವರಗಳನ್ನು ಎಂ. ಶಿವಲಿಂಗಪ್ಪ, ಕರಿಯಪ್ಪ ಮಾಳಗಿ, ಎಲ್. ರುದ್ರಮುಣಿ, ಸಿ. ಚನ್ನಕೇಶವ ಅವರು ತಿಳಿಸಿದರು. ಈರಪ್ಪ ಎಂ. ಕಂಬಳಿ ಅವರ ಅಧ್ಯಕ್ಷತೆಯಲ್ಲಿ ಡಾ. ಬಿ. ಜಿ. ಬಿರಾದಾರ ಅವರು ತಿಳಿಸಿದರು. ಬ. ಪ. ನಾಯ್ಕರ ಅವರ ಸಾಹಿತ್ಯ ಸಾಧನೆ ಕುರಿತು ವಿಶೇಷ ಉಪನ್ಯಾಸವನ್ನು ನೀಡಿದರು. ಬಿ. ಕೃಷ್ಣಪ್ಪ, ಸಿರಿವಾಳ ಶಿವಣ್ಣ, ಎಸ್. ಲಕ್ಷ್ಮಣ, ಸಿ. ಹೇಮರಾಜು, ಟಿ. ಗೀತಾಕುಮಾರಿ, ಬಿ. ಜಯಶೀಲ ಅವರು ಗೋಷ್ಠಿಗಳ ನಿರ್ವಹಣೆಯನ್ನು ಮಾಡಿದರು.

೧೫.೭.೨೦೦೯ರಂದು ಸಂಜೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಜಾನಪದ ಪ್ರಶಸ್ತಿ ಪುರಸ್ಕೃತರಾದ ಶ್ರೀಗಂಜಿಗಟ್ಟಿ ಆರ್. ಕೃಷ್ಣಮೂರ್ತಿ ಅವರಿಂದ ಬೀರಪ್ಪ ಮೈಲಾರಲಿಂಗೇಶ್ವರ ತತ್ವಪದಗಳ ಗಾಯನ, ಚೌಳೂರು ಶ್ರೀಮತಿ ಕನಕತಾರಾ, ಪದ್ಮ, ಮಮತ, ಗೀತಾಕುಮಾರಿ ಅವರಿಗೆ ಕನಕದಾಸರ ಕೀರ್ತನೆಗಳ ಗಾಯನ, ನಂತರ ಬೆಂಗಳೂರಿನ ನಂದನ ಕಲಾ ತಂಡದಿಂದ ಪ್ರೊ. ಕಿ. ರಂ. ನಾಗರಾಜ ರಚಿತ ಶ್ರೀ ದೇವ ನಾಗೇಶ ನಿರ್ದೇಶನದಲ್ಲಿ ಕಾಲಜ್ಞಾನಿ ಕನಕ ನಾಟಕದ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಕೆ. ಜಗದೀಶ ಮತ್ತು ಶ್ರೀಮತಿ ರಾಜೇಶ್ವರಿ ಅವರು ನಾಟಕದ ಪ್ರಾಯೋಜಕತ್ವವನ್ನು ವಹಿಸಿಕೊಂಡಿದ್ದರು.

೧೬.೭.೨೦೦೯ ರಂದು ಸಾಯಂಕಾಲ ನಡೆದ ಸಮಾರೋಪ ಸಮಾರಂಭದಲ್ಲಿ ಶಿವಮೊಗ್ಗ ವಿಶ್ವವಿದ್ಯಾಲಯದ ನಿವೃತ್ತ ಕನ್ನಡ ಪ್ರಾಧ್ಯಾಪಕರಾದ ಡಾ. ತೀ. ನಂ. ಶಂಕರನಾರಾಯಣ ಅವರು ಸಮಾರೋಪ ಭಾಷಣ ಮಾಡುತ್ತ "ನೆಲಮೂಲ ಸಂಸ್ಕೃತಿಯಿಂದ ಬಂದ ಸಮುದಾಯದ ಜನರ ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ಶಿಕ್ಷಣದಿಂದ ಆ ಸಮುದಾಯದಲ್ಲಿ ವಿದ್ಯಾವಂತರ ಸಂಖ್ಯೆ ಹೆಚ್ಚುವುದಲ್ಲದೇ ಸಾಮಾಜಿಕ ರಾಜಕೀಯ ಹಾಗೂ ಆರ್ಥಿಕವಾಗಿ ಸಬಲರಾಗಲು ಸಾಧ್ಯವಾಗುತ್ತದೆ" ಎಂದು ನುಡಿದರು. ಸಮಾಜ ಕಲ್ಯಾಣ ಸಚಿವರಾದ ಶ್ರೀ ಡಿ. ಸುಧಾಕರ ಅವರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಕುರುಬ ಸಮುದಾಯದ ಅಭಿವೃದ್ಧಿಗಾಗಿ ಸರಕಾರ ಬದ್ಧವಾಗಿದೆ. ಚಳ್ಳಕೆರೆ ಹಾಗೂ ಹಿರಿಯೂರಿನಲ್ಲಿ ಕನಕ ಭವನದ ನಿರ್ಮಾಣಕ್ಕಾಗಿ ತಲಾ ಐವತ್ತು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿಸಲಾಗುವುದು ಎಂದರು. ಮುಖ್ಯ ಅತಿಥಿಯಾಗಿ ಆಗಮಿಸಿದ ಮಾಜಿ ಶಾಸಕ ಬಿ. ಜಿ. ಗೋವಿಂದಪ್ಪನವರು ಮಾತನಾಡುತ್ತ ಐತಿಹಾಸಿಕ ಪರಂಪರೆ ಹೊಂದಿದ ಕುರುಬರ ರೇವಣಸಿದ್ದೇಶ್ವರ ಧಾರ್ಮಿಕ ಮಠಗಳಿಗೆ ತನ್ನದೇ ಆದ ಸಂವಿಧಾನವಿದೆ. ಕುರುಬ ಸಮುದಾಯದಲ್ಲಿ ಯಾವುದೇ ಸಮಸ್ಯೆಗಳು ಉದ್ಭವಿಸಿದರೂ ಅವುಗಳು ಮಠಗಳಲ್ಲೇ ಇತ್ಯರ್ಥವಾಗುತ್ತವೆ. ಈ ಪವಿತ್ರ ಮಠಗಳ ಜೀರ್ಣೋದ್ಧಾರಕ್ಕೆ ಸರಕಾರ ಎರಡುಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ಕೋರಿದರು. ಹೊಸದುರ್ಗದ ಕನಕ ಪೀಠದ ಶ್ರೀ ಈಶ್ವರಾನಂದ ಮಹಾಸ್ವಾಮಿಗಳು ಸಮಾರೋಪ ಸಮಾರಂಭದ ಸಾನಿಧ್ಯ ವಹಿಸಿದ್ದರು. ಚಳ್ಳಕೆರೆ ನಗರದ ಪುರಸಭೆ, ತಾಲೂಕು ಪಂಚಾಯತಿ ಜಿಲ್ಲಾ ಪಂಚಾಯತಿ ಸದಸ್ಯರು, ಸಮಾಜದ ಹಿರಿಯ ಮುಖಂಡರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

**೨. ಹಾಲುಮತ ಭವನದ ಉದ್ಘಾಟನ ಕಾರ್ಯಕ್ರಮ**

ದಿನಾಂಕ ೨೪.೦೮.೨೦೦೯ರಂದು ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಹಾಗೂ ಮೂಲಭೂತ ಸೌಲಭ್ಯ ಸಚಿವರಾದ ಶ್ರೀ ಜಿ. ಜನಾರ್ಧನರೆಡ್ಡಿ ಅವರು ಹಾಲುಮತ ಭವನವನ್ನು ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ **ಹಾಲುಮತ ಭಂಡಾರ** ಹೆಸರಿನ ವಸ್ತುಸಂಗ್ರಹಾಲಯವನ್ನು ಕೊಪ್ಪಳ ಕ್ಷೇತ್ರದ ಮಾಜಿ ಲೋಕಸಭಾ ಸದಸ್ಯರಾದ ಶ್ರೀ ಕೆ. ವಿರೂಪಾಕ್ಷಪ್ಪನವರು, **ಹಾಲುಮತ ಮೇಲುದೀಪ** ಹೆಸರಿನ ಗ್ರಂಥಾಲಯವನ್ನು ಬಳ್ಳಾರಿ ಲೋಕಸಭಾ ಸದಸ್ಯರಾದ ಶ್ರೀಮತಿ ಜೆ. ಶಾಂತಾ ಅವರು ಉದ್ಘಾಟಿಸಿದರು. **ಮಾಲಗಂಬ** ಹೆಸರಿನ ಹಾಲುಮತ ಅಧ್ಯಯನ ಪೀಠದ ಪರಿಚಯ ಪುಸ್ತಕವನ್ನು ವಿಜಯನಗರ ಕ್ಷೇತ್ರದ ಶಾಸನಕರಾದ ಶ್ರೀ ಆನಂದಸಿಂಗ್ ಅವರು ಬಿಡುಗಡೆ ಮಾಡಿದರು. ಕುಲಪತಿಗಳಾದ ಡಾ. ಎ. ಮುರಿಗೆಪ್ಪನವರು ಅಧ್ಯಕ್ಷತೆಯನ್ನು ವಹಿಸಿದ್ದರು.

೨೦೦೯-೧೦ನೆಯ ಸಾಲಿನಿಂದ ಪೀಠದ ಕಾರ್ಯಚಟುವಟಿಕೆಗಳು ಹಾಲುಮತ ಭವನದಲ್ಲಿ ನಡೆಯುತ್ತಿವೆ. ಹಾಲುಮತ ಸಂಸ್ಕೃತಿಗೆ ಸಂಬಂಧಿಸಿದ ವಸ್ತುಸಂಗ್ರಹಾಲಯ, ಗ್ರಂಥಾಲಯ, ಕಾರ್ಯಾಲಯ, ಗಣಕ ಕೇಂದ್ರ, ತರಬೇತಿ ಶಿಬಿರ, ವಿಶೇಷ ಉಪನ್ಯಾಸ, ಆಡಿಯೋ ವಿಡಿಯೋ ವೈಜ್ಞಾನಿಕ ಉಪಕರಣಗಳ ವ್ಯವಸ್ಥೆಯನ್ನು ಹಾಲುಮತ ಭವನದಲ್ಲಿ ಮಾಡಲಾಗುತ್ತಿದೆ.

**೩. ಹಾಲುಮತ ಭಂಡಾರ-ವಸ್ತುಸಂಗ್ರಹಾಲಯ ಸ್ಥಾಪನೆ**

ಜಾಗತೀಕರಣದ ಪ್ರಭಾವದಿಂದಾಗಿ ಕುರುಬರ ಕುರಿಸಾಕಣೆ, ಕಂಬಳಿ ನೇಕಾರಿಕೆ, ಡೊಳ್ಳು, ದಟ್ಟಿ ಕುಣಿತ ಮೊದಲಾದ ಮೂಲ ಉದ್ಯೋಗ, ಕಲೆಗಳು ವಿನಾಶದ ಅಂಚಿನಲ್ಲಿವೆ. ಅಂಥ ಎಲ್ಲ ಉದ್ಯೋಗ ಕಲೆಗಳ ಪರಿಕರಗಳನ್ನು ಒಂದೆಡೆ ಸಂಗ್ರಹಿಸಿ ಪ್ರದರ್ಶಿಸುವ ಮತ್ತು ಪರಿಚಯಿಸುವ ಯೋಜನೆಯನ್ನು ಪೀಠವು ಹಾಕಿಕೊಂಡಿದೆ. ಅದಕ್ಕಾಗಿ 'ಹಾಲುಮತ ಭಂಡಾರ' ಹೆಸರಿನ ವಸ್ತುಸಂಗ್ರಹಾಲಯವನ್ನು ವಿಶಾಲ ಭವನದಲ್ಲಿ ಸ್ಥಾಪಿಸಲಾಗಿದೆ. ಬೆನಕಟ್ಟಿಯ ಶ್ರೀ ಅಂಕಲಿಮಾನ್ಯ ದೇವರ ಪೂಜಾರಿಗಳಾದ ಸವದತ್ತಿ ತಾಲೂಕಿನ ಬೆನಕಟ್ಟಿ ಗ್ರಾಮದ ಶ್ರೀ ಸಿದ್ಧಪ್ಪ ತಂದೆ ಶಿಗೂರಪ್ಪ ಪೂಜಾರ ಅವರು ತಮ್ಮ ತಂದೆ-ಅಣ್ಣನ ಸ್ಮರಣಾರ್ಥ ಕಂಬಳಿ ತಯಾರಿಕೆಯ ಕೆಲ ಸಾಮಗ್ರಿಗಳನ್ನು, ಅರಕೇರಿ ಅಮೋಘಸಿದ್ಧ ಸಂಸ್ಥಾನ ಮಠದ ಒಡೆಯರಾದ ಶ್ರೀಸಂಜಯ್ ಶಿವಗೊಂಡ ಪಾಟೀಲ್ ಅವರು ಮೂರೇಣಿನ ಪವಿತ್ರ ಜಾಡಿಯನ್ನು, ಚಳ್ಳಕೆರೆ ತಾಲ್ಲೂಕು ಟಿ. ಎನ್. ನಾಯಕನಕೋಟೆ ಗ್ರಾಮದ ಗೊರವಯ್ಯಗಳಾದ ಶಿವಲಿಂಗಪ್ಪ ತಂದೆ ಮೈಲಾರಪ್ಪ ಅವರು ಕಂಬಳಿ ತಯಾರಿಕೆ, ನೂಲುವ ಸಾಮಗ್ರಿಗಳಾದ ಕುಂಟೆ, ದಾನಿ, ರಾಟಿ, ಕದರು ಇತ್ಯಾದಿ ಪರಿಕರಗಳನ್ನು, ಗದಗ ಜಿಲ್ಲೆ ಮುಂಡರಗಿ ತಾಲೂಕಿನ ಡೋಣಿ ಗ್ರಾಮದ ಶ್ರೀ ಬೀರಲಿಂಗೇಶ್ವರ ಸಂಘದ ನಿಂಗಪ್ಪ ಹಾಲಪ್ಪ ಗುಡ್ಡದ ಇವರು ದಿಮ್ಮಿನ ಡೊಳ್ಳು ಮತ್ತು ಕಂಚಿನ ತಾಳಗಳನ್ನು, ಡಂಬಳದ ಶ್ರೀ ಬೀರಲಿಂಗೇಶ್ವರ ಮತ್ತು ಮಾಯಮ್ಮ ದೇವರ ಡೊಳ್ಳಿನ ಸಂಘದವರು ಪಲ್ಲಕ್ಕಿಯನ್ನು, ಶಿರಹಟ್ಟಿಯ ಬೀರೇಶ್ವರ ಸೇವಾ ಸಮಿತಿಯವರು ಎಲೆಗತ್ತರಿಯನ್ನು, ಚಿಕ್ಕೋಡಿ ತಾಲೂಕಿನ ಖಡಕಲಾಟದ ಅಲೆಮಾರಿ ಕುರಿಗಾರರಾದ ಶ್ರೀ ವಾಸಪ್ಪ, ಶ್ರೀಮಾರುತಿ ಇವರು, ವಟಾಚೀಲ, ಕುರಿಕಾಯುವ ಬಡಿಗೆ, ಕುರಿಯ ಮೈಯಿಂದ ಉಣ್ಣೀ ಕತ್ತರಿಸುವ ಕತ್ತರಿ, ಬರೆಗಡ್ಡಿ ಮತ್ತು ಕೊಡಲಿಯನ್ನು, ಮೈಲಾರ ದೇವಸ್ಥಾನದ ಶ್ರೀ ಶ್ರೀ ಗುರು ವೆಂಕಪ್ಪಯ್ಯ ಒಡೆಯರ ಅವರು ಗೊರವಯ್ಯಗಳು ಉಪಯೋಗಿಸುವ ಗಂಟೆ ಡಮರು ಡೋಣಿ ತ್ರಿಶೂಲ ಮೊದಲಾದ ಸಾಮಗ್ರಿಗಳನ್ನು ಉದಾರ ಕೊಡುಗೆಯಾಗಿ ನೀಡುವುದರ ಮೂಲಕ ಹಾಲುಮತ ಭಂಡಾರ ಸ್ಥಾಪನೆಗೆ ಚಾಲನೆ ನೀಡಿದ್ದಾರೆ.

**೪. ಹಾಲುಮತ ಮೇಲುದೀಪ-ಗ್ರಂಥಾಲಯ ಉದ್ಘಾಟನೆ**

ಹಾಲುಮತ ಸಾಹಿತ್ಯ ಸಂಸ್ಕೃತಿಗೆ ಸಂಬಂಧಿಸಿದಂತೆ ವಿವಿಧ ಭಾಷೆಗಳಲ್ಲಿ ಈಗಾಗಲೇ ಪ್ರಕಟಗೊಂಡಿರುವ ಗ್ರಂಥಗಳು, ಸಂಪುಟಗಳು, ನಿಯತಕಾಲಿಕಗಳು, ವಿಡಿಯೋ ಆಡಿಯೋ ಸಿ.ಡಿ. ಗಳನ್ನು ಸಂಗ್ರಹಿಸಿಡಲು ಒಂದು ಸುಸಜ್ಜಿತವಾದ ಗ್ರಂಥಾಲಯವನ್ನು ಹಾಲುಮತ ಭವನದಲ್ಲಿ ತೆರೆಯಲಾಗಿದೆ. ತಾಳೆಗರಿ, ಕೋರಿಕಾಗದ ಕಡತಗಳಂಥ ಪ್ರಾಚೀನ ಹಸ್ತಪ್ರತಿಗಳು, ಶಿಲಾಶಾಸನ, ತಾಮ್ರಪತ್ರ, ಕೈಫಿಯತ್ತು, ನಿರೂಪ, ಸನದುಗಳಂಥ ದಾಖಲು ಆಕರ ಸಾಮಗ್ರಿಗಳು, ಅತ್ಯಂತ ಹಳೆಯ ಪುಸ್ತಕ ಹಾಗೂ ನಿಯತಕಾಲಿಕಗಳ ಝರಾಕ್ಷ ಪ್ರತಿಗಳನ್ನು ಸಂಗ್ರಹಿಸಲಾಗುತ್ತಿದೆ. ಶಂಬಾ ಜೋಶಿ ಸಂಪುಟಗಳು, ಹಾಲುಮತ ಕಾವ್ಯ ಪುರಾಣಗಳು, ವಿ. ಆರ್. ಹನುಮಂತಯ್ಯನವರ

ಸಮಗ್ರ ಕೃತಿಗಳು, ಹಾಲುಮತ ಸಂಶೋಧನ ಮತ್ತು ವಿಮರ್ಶಾತ್ಮಕ ಗ್ರಂಥಗಳು, ಜಗತ್ಪಾವನ ಪತ್ರಿಕೆಯ ಸಂಚಿಕೆಗಳು, ಗುಂಥರ್ ಸೊಂಥೈಮರ್, ಥರ್ಸ್ಟನ್, ಶ್ಯಾಮಸಿಂಗ್, ಮುನ್ನಾಲಾಲ್ ಚಂದೇಲ್ ಮೊದಲಾದ ಸ್ವದೇಶಿ ಮತ್ತು ವಿದೇಶಿ ವಿದ್ವಾಂಸರ ಕೃತಿಗಳನ್ನು ಈ ಗ್ರಂಥಾಲಯ ಒಳಗೊಳ್ಳಬೇಕಾಗಿದೆ. ಇದರನ್ವಯ ನಾಡಿನ ಲೇಖಕರಿಂದ ಪ್ರಕಾಶಕರಿಂದ ದಾನರೂಪದಲ್ಲಿ ಗ್ರಂಥಗಳನ್ನು ಸಂಗ್ರಹಿಸುವ ಕಾರ್ಯ ಮುನ್ನಡೆದಿದೆ. ಇದಕ್ಕೆ ಒಳ್ಳೆಯ ಪ್ರತಿಕ್ರಿಯೆ ಬಂದಿದ್ದು, ಗದುಗಿನ ಮೆಣಸಗಿ ಸಹೋದರರು ತಮ್ಮ ವಿದ್ಯಾನಿಧಿ ಪ್ರಕಾಶನದಿಂದ ಪ್ರಕಟಿಸಿದ ಹಾಲುಮತ ಸಂಸ್ಕೃತಿ ಸಾಹಿತ್ಯಕ್ಕೆ ಸಂಬಂಧಿಸಿದ ಎಲ್ಲ ಪುಸ್ತಕಗಳನ್ನು ಗ್ರಂಥಾಲಯಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಬಿಜಾಪುರದ ಲೇಖಕ ಚಂದ್ರಕಾಂತ ಬಿಜ್ಜಳಗಿ, ಬಾಗಲಕೋಟೆಯ ಶ್ರೀ ದೊಡ್ಡಣ್ಣ ಗದ್ದನಕೇರಿ, ಲೋಣಿ (ಬಿ. ಕೆ.)ಗ್ರಾಮದ ಶ್ರೀ ಸದಾಶಿವ ಜುಮ್ಮಣ್ಣವರ ಮಹಾರಾಯ, ಡಾ. ಸಿದ್ದಣ್ಣ ಜಕಬಾಳ, ಎಂ. ಕರಿಯಪ್ಪ, ಉಲುವತ್ತಿ ಗ್ರಾಮದ ಅಯ್ಯನಹಳ್ಳಿ ಭೀಮಪ್ಪ ಮೊದಲಾದ ಮಹನೀಯರು ತಾವು ರಚಿಸಿದ ಪ್ರಕಟಿಸಿದ ಹಾಗೂ ಸಂಗ್ರಹಿಸಿದ ಪುಸ್ತಕಗಳನ್ನು ಉದಾರವಾಗಿ ನೀಡುವುದರ ಮೂಲಕ ಆಕರಗ್ರಂಥಗಳ ಸಂಗ್ರಹಕ್ಕೆ ನೆರವಾಗಿದ್ದಾರೆ.

**೫. ಮಾಲಗಂಬ-ಪರಿಚಯ ಪುಸ್ತಕದ ಬಿಡುಗಡೆ ಕಾರ್ಯಕ್ರಮ**

ಹಾಲುಮತ ಅಧ್ಯಯನ ಪೀಠದ ಕಾರ್ಯಚಟುವಟಿಕೆಗಳನ್ನು ಪರಿಚಯಿಸುವ ಮಾಲಗಂಬ ಪುಸ್ತಕವನ್ನು ವಿಜಯನಗರ ಕ್ಷೇತ್ರದ ಶಾಸಕರಾದ ಬಿ. ಎಸ್. ಆನಂದಸಿಂಗ್ ಅವರು ಬಿಡುಗಡೆ ಮಾಡಿದರು. ಪೀಠದ ಸ್ಥಾಪನೆ, ಅನುದಾನ ಕ್ರೋಢೀಕರಣ, ಹಮ್ಮಿಕೊಂಡ ಸಮ್ಮೇಲನ, ವಿಚಾರ ಸಂಕಿರಣ, ತರಬೇತಿ ಶಿಬಿರ, ಪ್ರಕಟಿಸಿದ ಪುಸ್ತಕಗಳ ವಿವರಗಳನ್ನು ಈ ಪುಸ್ತಕದಲ್ಲಿ ದಾಖಲಿಸಲಾಗಿದೆ.

**೬. ಪುಸ್ತಕ ಪ್ರಕಟಣೆಗಳು**

**೧. ಹಾಲುಮತ ವ್ಯಾಸಂಗ-೧**

೨೦೦೮ರಲ್ಲಿ ಗದುಗಿನಲ್ಲಿ ನಡೆದ ಹಾಲುಮತ ಸಂಸ್ಕೃತಿ ಸಮ್ಮೇಳನದಲ್ಲಿ ಮಂಡಿಸಿದ ಸಂಪ್ರಬಂಧಗಳ ಸಂಪುಟ ಹಾಲುಮತ ವ್ಯಾಸಂಗ ಸಂಪುಟ-೧. ಹಾಲುಮತ ಅಧ್ಯಯನದ ಆಕರಗಳು, ಹಾಲುಮತದ ಸಾಂಸ್ಕೃತಿಕ ವೀರರು, ಹಾಲುಮತ ದೈವಗಳು, ಹಾಲುಮತ ಸಾಧಕರು ಹಾಗೂ ಸಮ್ಮೇಳನಾಧ್ಯಕ್ಷರ ಸಾಹಿತ್ಯ ಸಾಧನೆ ಎಂಬ ಐದು ಭಾಗಗಳಲ್ಲಿ ವಿವಿಧ ವಿದ್ವಾಂಸರ ಇಪ್ಪತ್ತು ಸಂಪ್ರಬಂಧಗಳಿವೆ. ತಗರ ಪವಾಡ, ಸಿದಧಮಂಕ ಚರಿತೆ, ಜನಪದ ಹಾಲುಮತ ಮಹಾಕಾವಯ, ಹಾಲುಮತೋತ್ತೇಜಕ ಪುರಾಣ ಮುಂತಾದ ಕಾವ್ಯ ಪುರಾಣಗಳಂಥ ಲಿಖಿತ ಆಕರಗಳು, ಶಾಸನ, ಸನದು, ಕೈಫಿಯತ್ತು, ನಿರೂಪ, ವರದಿಗಳಂಥ ದಾಖಲೆಗಳು, ಡೊಳ್ಳಿನ ಹಾಡುಗಳು, ನಂಬಿಕೆಗಳು, ಸಂಪ್ರದಾಯ, ಜಾನಪದ ಆಚರಣೆಗಳಂಥ ಮೌಖಿಕ ಆಕರಗಳು ಮತ್ತು ಸ್ಥಳನಾಮ, ಅಡ್ಡ ಹೆಸರುಗಳಂಥ ಭಾಷಿಕ ಆಕರಗಳ ಹಿನ್ನೆಲೆಯಲ್ಲಿ ಹಾಲುಮತ ಸಂಸ್ಕೃತಿಯ ಬಗೆಗೆ ಮೊದಲ ಭಾಗದಲ್ಲಿ ವಿವೇಚಿಸಲಾಗಿದೆ. ಹಾಲುಮತ ಸಾಂಸ್ಕೃತಿಕ ನಾಯಕರಲ್ಲಿ ಪ್ರಮುಖರಾದ ಬೀರಪ್ಪ ಮಾಳಿಂಗರಾಯ, ಮೈಲಾರಲಿಂಗ ಹಾಗೂ ಗೊಲ್ಲಾಳೇಶ್ವರರ ಇತಿವೃತ್ತ ವಿಚಾರ, ಸಾಧನೆಗಳನ್ನು ಲಭ್ಯ ಆಕರಗಳ ಸಹಾಯದಿಂದ ಎರಡನೆಯ ಭಾಗದಲ್ಲಿ ಅವಲೋಕಿಸಲಾಗಿದೆ. ಹಾಲುಮತ ಆರಾಧ್ಯ ದೈವಗಳಾದ ರೇವಣಸಿದ್ದೇಶ್ವರ ಸಿದ್ಧರಾಮೇಶ್ವರ ಅಮೋಘಸಿದ್ದೇಶ್ವರ ಮತ್ತು ಇಟಗಿ ಭೀಮಾಂಬಿಕೆಯರ ಕುರಿತು ಮೂರನೆಯ ಭಾಗದಲ್ಲಿ ಪರಿಚಯಿಸಲಾಗಿದೆ. ಹಾಲುಮತ ಸಾಧಕರಾದ ಸಿದ್ಧನಗೌಡ ಪಾಟೀಲ, ಗವಿಸಿದ್ಧಪ್ಪ ಬೆಳವಡಿ, ಸಿದ್ಧಪ್ಪಯ್ಯ ಒಡೆಯರ ಹಾಗೂ ಕೂಗನೂರು ನಿಂಗಪ್ಪರ ಜೀವನ ಸಾಧನೆಗಳನ್ನು ನಾಲ್ಕನೆಯ ಭಾಗದಲ್ಲಿ ಅಳವಡಿಸಲಾಗಿದೆ. ಐದನೆಯ ಭಾಗದಲ್ಲಿ ಹಾಲುಮತ ಸಮ್ಮೇಳನದ ಸರ್ವಾಧ್ಯಕ್ಷರಾದ ಜ್ಯೋತಿ ಹೊಸೂರ ಅವರ ಸಾಹಿತ್ಯ ಸಾಧನೆಯ ಅವಲೋಕನವಿದೆ.

**೨. ಮಾಲಗಂಬ-ಹಾಲುಮತ ಅಧ್ಯಯನ ಪೀಠದ ಪರಿಚಯ (Profile)ಪುಸ್ತಕ**

೨೦೦೯ರಲ್ಲಿ ಹಾಲುಮತ ಅಧ್ಯಯನ ಪೀಠದ ಕಾರ್ಯಚಟುವಟಿಕೆಗಳನ್ನು ಪರಿಚಯಿಸುವ ಕಿರುಪುಸ್ತವಿದು. ಪೀಠದ ಉದ್ದೇಶಗಳು, ಈವರೆಗೆ ಆಯೋಜಿಸಿದ ಕಾರ್ಯಕ್ರಮಗಳ ವರದಿಗಳು, ಪೀಠದ ಬಗೆಗಿನ ಗಣ್ಯಮಾನ್ಯರು ಹಾಗೂ ವಿದ್ವಾಂಸರ ಅನಿಸಿಕೆಗಳು, ಛಾಯಾಚಿತ್ರಗಳ್ನನೊಳಗೊಂಡು ಈ ಪುಸ್ತಕ ಸುಂದರವಾಗಿ ಮುದ್ರಿತವಾಗಿದೆ.

**೭. ಕನಕ ಜಯಂತಿ ಆಚರಣೆ**

ದಿನಾಂಕ ೫ ನವೆಂಬರ್ ೨೦೦೯ ರಂದು ಹಾಲುಮತ ಭವನದಲ್ಲಿ ಭಕ್ತ ಕನಕದಾಸರ ಜಯಂತಿಯನ್ನು ಹಮ್ಮಿಕೊಳ್ಳಲಾಗಿತ್ತು. ಮಾನ್ಯ ಕುಲಪತಿಗಳಾದ ಡಾ. ಎ. ಮುರಿಗೆಪ್ಪನವರು ಕನಕದಾಸರ ಭಾವಚಿತ್ರಕ್ಕೆ ಹೂಮಾಲೆಯನ್ನು ಅರ್ಪಿಸುವುದರ ಮೂಲಕ ಸಾಂಕೇತಿಕವಾಗಿ ಆಚರಿಸಲಾಯಿತು. ಕನಕದಾಸರ ತತ್ವ ಸಂದೇಶಗಳು ಮನೆಮನೆಗೂ ತಲುಪಬೇಕೆಂದು ಇದೇ ಸಂದರ್ಭದಲ್ಲಿ ಕುಲಪತಿಗಳು ನುಡಿದರು. ಕುಲಸಚಿವರಾದ ಎಸ್. ಎಸ್. ಪೂಜಾರ ಅವರು ಕನಕದಾಸ ಕೀರ್ತನೆಗಳ ವೈಶಿಷ್ಟ್ಯತೆಗಳನ್ನು ಮೆಲುಕು ಹಾಕಿದರು. ದೂರಶಿಕ್ಷಣ ಕೇಂದ್ರದ ನಿರ್ದೇಶಕರಾದ ಡಾ. ಕೆ. ಎಂ. ಮೇತ್ರಿ, ಉಪಕುಲಸಚಿವರಾದ ಡಾ. ಪ್ರೇಮಕುಮಾರ, ಡಾ. ಚೆನ್ನಸ್ವಾಮಿ ಸೋಸಲೆ, ಹಾಲುಮತ ಅಧ್ಯಯನ ಪೀಠದ ಸಂಚಾಲಕರಾದ ಡಾ. ಎಫ್. ಟಿ. ಹಳ್ಳಿಕೇರಿ ಉಪಸ್ಥಿತರಿದ್ದರು. ರಾಜ್ಯದಲ್ಲಿ ನೆರೆಹಾವಳಿಯಿಂದಾಗಿ ಕನಕ ಜಯಂತಿ ಕಾರ್ಯಕ್ರಮವನ್ನು ಸಾಂಕೇತಿಕವಾಗಿ ಸರಳವಾಗಿ ಆಚರಿಸಲಾಯಿತು.

**೮. ಹಾಲುಮತ ಸಾಹಿತ್ಯ ಸಂಸ್ಕೃತಿ-ವಿಶೇಷ ಉಪನ್ಯಾಸ ಕಾರ್ಯಕ್ರಮಗಳು**

ದಿನಾಂಕ ೧೦.೨.೨೦೧೦ರಿಂದ ೨.೩.೨೦೧೦ ರವರೆಎ ಬಳ್ಳಾರಿ ಜಿಲ್ಲೆಯ ಹೊಸಪೇಟೆ ಕೊಟ್ಟೂರು ಕೊಳಗಲ್ಲು ಸಂಡೂರು ಸಿರಗುಪ್ಪ ಹೂವಿನಹಡಗಲಿ ಮತ್ತು ಹಗರಿಬೊಮ್ಮನಹಳ್ಳಿಗಳಲ್ಲಿ ಕುರುಬರ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಹಾಲುಮತ ಸಾಹಿತ್ಯ ಸಂಸ್ಕೃತಿ ಕುರಿತು ಹದಿನಾಲ್ಕು ವಿಶೇಷ ಉಪನ್ಯಾಸ ಕಾರ್ಯಕ್ರಮಗಳನ್ನು ಪೀಠವು ಆಯೋಜಿಸಿತ್ತು.

೧೦.೨.೨೦೧೦ ರವಿವಾರ ೧೧ ಗಂಟೆಗೆ ಹಾಲುಮತ ಸಾಂಸ್ಕೃತಿಕ ವೇದಿಕೆಯ ಸಹಯೋಗದಲ್ಲಿ ಹೊಸಪೇಟೆ ರೋಟರಿ ಹಾಲ್‌ನಲ್ಲಿ ಉದ್ಘಾಟನ ಕಾರ್ಯಕ್ರಮ ನಡೆಯಿತು. ಕನ್ನಡ ವಿಶ್ವವಿದ್ಯಾಲಯದ ಕುಲಸಚಿವರಾದ ಡಾ. ಮಂಜುನಾಥ ಬೇವಿನಕಟ್ಟಿ ಅವರ ಅಧ್ಯಕ್ಷತೆಯಲ್ಲಿ ಮಾಜಿ ಸಂಸದರಾದ ಕೆ. ವಿರೂಪಾಕ್ಷಪ್ಪನವರು ಸಮಾರಂಭವನ್ನು ಉದ್ಘಾಟಿಸಿದರು. ವಾರ್ತಾ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕರಾದ ಸಿ. ಕೆ. ಪರಶುರಾಮಯ್ಯನವರು ತಗರ ಪವಾಡ ಮತ್ತು ತುಮಕೂರಿನ ಸಿದ್ಧಗಂಗಾ ಮಹಿಳಾ ಪದವಿ ಕಾಲೇಜಿನ ಪ್ರಾಧ್ಯಾಪಕರಾದ ಡಾ. ಡಿ. ಎನ್. ಯೋಗೀಶ್ವರ ಅವರು ಚರಿತ್ರೆಯ ಪುಟಗಳಲ್ಲಿ ಕುರುಬರು ಎಂಬ ವಿಶೇಷ ಉಪನ್ಯಾಸವನ್ನು ನೀಡಿದರು. ಹಾಲುಮತ ಅಧ್ಯಯನ ಪೀಠದ ಸಂಚಾಲಕರಾದ ಡಾ. ಎಫ್. ಟಿ. ಹಳ್ಳಿಕೇರಿ ಅವರು ಕಾರ್ಯಕ್ರಮದ ರೂಪುರೇಷೆಗಳನ್ನು ಪ್ರಾಸ್ತಾವಿಕವಾಗಿ ಹೇಳಿದರು. ಮುಖ್ಯ ಅತಿಥಿಗಳಾಗಿ ಮಲ್ಲಯ್ಯ ಒಡೆಯರ, ಎಚ್. ನಂಜುಂಡಪ್ಪ, ಎಲ್. ಸಿದ್ಧನಗೌಡ, ಅಯ್ಯಾಳಿ ತಿಮ್ಮಪ್ಪ, ಕೆ. ಎಂ. ಹಾಲಪ್ಪ, ಜಿ. ಭರಮನಗೌಡ, ಆರ್. ಕೊಟ್ರೇಶ್ ಹಾಗೂ ಚಿದಾನಂದಪ್ಪ ಮುಂತಾದ ಗಣ್ಯಮಾನ್ಯರು ಭಾಗವಹಿಸಿದ್ದರು.

೧೧.೨.೨೦೧೦ ಸೋಮವಾರ ಬೆಳಿಗ್ಗೆ ೧೦.೩೦ಕ್ಕೆ ಕೂಡ್ಲಗಿ ತಾಲೂಕು ಕುರುಬರ ಸಂಘದ ಸಹಯೋಗದಲ್ಲಿ ಕೊಟ್ಟೂರಿನ ಶ್ರೀಬನಶಂಕರಿ ಕಲ್ಯಾಣ ಮಂಟಪದಲ್ಲಿ ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗದ ಸಹಪ್ರಾಧ್ಯಾಪಕರಾದ ಡಾ. ಚಲುವರಾಜು ಅವರು ಜನಪದ ಹಾಲುಮತ ಮಹಾಕಾವ್ಯ ಹಾಗೂ ಹಸ್ತಪ್ರತಿಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ. ಎಫ್. ಟಿ. ಹಳ್ಳಿಕೇರಿ ಅವರು ಕುರುಬ ಸಮುದಾಯದ ಅಭಿವೃದ್ಧಿ ಸಮಸ್ಯೆಗಳು ಮತ್ತು ಸಲಹೆಗಳು ಕುರಿತು ಉಪನ್ಯಾಸ ನೀಡಿದರು. ಸಣ್ಣಲೋಪಕ್ಕ, ಎ. ನಂಜಪ್ಪ, ವೈ. ಎಚ್. ಹಳ್ಳಿಕೇರಿ, ಬಿ. ಭರಮಪ್ಪ, ಬಿ. ನೀಲಗಿರಿಯಪ್ಪ, ಕೆ. ಜಿ. ನಾಗರಾಜ, ನಿಂಗಪ್ಪ ಕೆ. ಎಂ. ಚಿದಾನಂದಪ್ಪ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

೨೬.೨.೨೦೧೦ ಶುಕ್ರವಾರ ಸಾಯಂಕಾಲ ೪ ಗಂಟೆಗೆ ಬಳ್ಳಾರಿ ಜಿಲ್ಲಾ ಕುರುಬರ ಸಂಘದ ಸಹಯೋಗದಲ್ಲಿ ಬಳ್ಳಾರಿ ತಾಲೂಕು ಕೊಳಗಲ್ಲು ಗ್ರಾಮದ ಶ್ರೀ ಯರ್ರಿತಾತಾ ದೇವಸ್ಥಾನದ ಆವರಣದಲ್ಲಿ ಕಲಘಟಗಿಯ ಗುಡ್‌ನ್ಯೂಜ್ ಪದವಿ ಕಾಲೇಜಿನ ಸಹ ಪ್ರಾಧ್ಯಾಪಕರಾದ ಡಾ. ಬಿ. ಜಿ. ಬಿರಾದಾರ ಅವರು ಕುರುಬರ ಗುರುಪರಂಪರೆ ಹಾಗೂ ಗದುಗಿನ ಪತ್ರಿಕಾ ವರದಿಗಾರರಾದ ಮಂಜುನಾಥ ಬೊಮ್ಮನಕಟ್ಟೆ ಅವರು ಸಹಕಾರಿ ಪಿತಾಮಹ ಸಿದ್ಧನಗೌಡ ಪಾಟೀಲ ಜೀವನ ಸಾಧನೆ ಕುರಿತು ಉಪನ್ಯಾಸ ಮಾಡಿದರು. ಬಳ್ಳಾರಿ ಮಹಾನಗರಸಭೆಯ ಮೇಯರ್ ಕೆ. ಬಸವರಾಜ, ಮುಖಂಡರಾದ ಗಡಗಿ ಗೋವಿಂದಪ್ಪ, ಮಲ್ಲೇಶಪ್ಪ, ಡಿ. ಹನುಮಂತಪ್ಪ, ಆಂಜನೇಯ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದರು.

೨೭.೨.೨೦೧೦ ಶನಿವಾರ ಬೆಳಿಗ್ಗೆ ೧೦.೩೦ಕ್ಕೆ ಸಂಡೂರು ತಾಲೂಕು ಕುರುಬರ ಸಂಘದ ಸಹಯೋಗದಲ್ಲಿ ತಾಲೂಕು ಕುರುಬರ ಸಂಘದ ಸಭಾಭವನದಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರದ ನಿರ್ದೇಶಕರಾದ ಡಾ. ಮಲ್ಲಿಕಾ ಘಂಟಿ ಅವರ ಅಧ್ಯಕ್ಷತೆಯಲ್ಲಿ ಸಿದ್ಧಮಂಕ ಚರಿತೆ ಕುರಿತು ಹಸ್ತಪ್ರತಿಶಾಸ್ತ್ರ ವಿಭಾಗದ ಸಹಪ್ರಾಧ್ಯಾಪಕರಾದ ಡಾ. ಕೆ. ರವೀಂದ್ರನಾಥ ಮತ್ತು ಕೊಡಗಿನ ಕುರುಬರು ಕುರಿತು ಜನಪದ ಅಧ್ಯಯನ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ. ಹೆಬ್ಬಾಲೆ ನಾಗೇಶ ಅವರು ಪ್ರಬಂಧ ಮಂಡಿಸಿದರು. ತಾಲೂಕು ಕುರುಬರ ಸಂಘದ ಅಧ್ಯಕ್ಷರಾದ ಶ್ರೀ. ಕೆ. ತಿಪ್ಪಣ್ಣ, ನಿವೃತ್ತ ಪ್ರಾಧ್ಯಾಪಕರಾದ ಬಸವರಾಜ ಮಸೂತಿ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

೨೮.೨.೨೦೧೦ ರವಿವಾರ ಬೆಳಿಗ್ಗೆ ೧೦.೩೦ಕ್ಕೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವಕ ಸಂಘದ ಸಹಯೋಗದಲ್ಲಿ ಸಿರಗುಪ್ಪದ ಅಭಯಾಂಜನೇಯ ಸ್ವಾಮಿ ಸಭಾಮಂಟಪದಲ್ಲಿ ಸಿರಗುಪ್ಪ ವಿಧಾನಸಭಾ ಸದಸ್ಯರಾದ ಶ್ರೀ ಎಂ. ಎಸ್. ಸೋಮಲಿಂಗಪ್ಪ ಅವರ ಅಧ್ಯಕ್ಷತೆಯಲ್ಲಿ ಹಸ್ತಪ್ರತಿಶಾಸ್ತ್ರ ವಿಭಾಗದ ಸಹಪ್ರಾಧ್ಯಾಪಕರಾದ ಡಾ. ಎಸ್. ಎಸ್. ಅಂಗಡಿ ಅವರು ಹಾಲುಮತ ಸಂಸ್ಕೃತಿ : ಶಂಬಾ ಜೋಶಿ ಚಿಂತನೆಗಳು ಮತ್ತು ಇರಕಲಗಡದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ. ಬಿ. ಹುಲಿಗೆಮ್ಮ ಅವರು ರಸ್ತಾಪುರ ಭೀಮಕವಿಯ ಹಾಲುಮತೋತ್ತೇಜಕ ಪುರಾಣ ಕುರಿತು ಉಪನ್ಯಾಸ ನೀಡಿದರು. ದಮ್ಮೂರು ಶಂಕರಪ್ಪ, ಬಂಗ್ಲೆ ನಾಗಪ್ಪ, ಡಿ. ಯರಿಯಪ್ಪ, ಕೆ. ಸುಂಕಪ್ಪ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

೧.೩.೨೦೧೦ ಸೋಮವಾರ ಬೆಳಿಗ್ಗೆ ೧೦.೩೦ಕ್ಕೆ ತಾಲೂಕು ಕುರುಬರ ಸಂಘದ ಸಹಯೋಗದಲ್ಲಿ ಹೂವಿನಹಡಗಲಿಯ ಶ್ರೀ ಮೈಲಾರಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಶ್ರೀ ಗುರುವಿನ ಕೊಟ್ರಯ್ಯನವರ ಅಧ್ಯಕ್ಷತೆಯಲ್ಲಿ ಗದುಗಿನ ಕೆ. ಎಸ್. ಎಸ್. ಪದವಿ ಕಾಲೇಜಿನ ಪ್ರಾಧ್ಯಾಪಕರಾದ ಡಾ. ಎಸ್. ಎಫ್. ಜಕಬಾಳ ಅವರು ಕುರಿಗಾರರ ಕಾಲಜ್ಞಾನ ಮತ್ತು ಕನ್ನಡ ವಿಶ್ವವಿದ್ಯಾಲಯದ ಪಿಹೆಚ್‌ಡಿ ವಿದ್ಯಾರ್ಥಿನಿ ಶ್ರೀಮತಿ ಅನ್ನಪೂರ್ಣ ಗೋಸ್ಬಾಳ ಅವರು ಚನ್ನಬಸವ ವಿರಚಿತ ಹಾಲುಮತ ಪುರಾಣ ಕುರಿತು ಉಪನ್ಯಾಸ ನೀಡಿದರು. ಮುಖ್ಯ ಅತಿಥಿಗಳಾಗಿ ಮಾಜಿ ಸಚಿವರಾದ ಶ್ರೀ ಈಟಿ ಶಂಭುನಾಥ, ಪರಮೇಶ್ವರಪ್ಪ, ಶ್ರೀಮತಿ ಪ್ರೇಮಕ್ಕ, ಷಣ್ಮುಖಪ್ಪ ಭಾಗವಹಿಸಿದ್ದರು.

೨.೩.೨೦೧೦ ರಂದು ಮಂಗಳವಾರ ಬೆಳಿಗ್ಗೆ ೧೦.೩೦ಕ್ಕೆ ಹಗರಿಬೊಮ್ಮನಹಳ್ಳಿಯಲ್ಲಿ ತಾಲೂಕು ಕುರುಬ ಸಂಘದ ಸಹಯೋಗದಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ದೂರಶಿಕ್ಷಣ ಕೇಂದ್ರದ ನಿರ್ದೇಶಕರಾದ ಡಾ. ಕೆ. ಎಂ. ಮೇತ್ರಿ ಅವರು ಮಾಳಿಂಗರಾಯನ ಕಾವ್ಯ ಹಾಗೂ ಶ್ರೀಮತಿ ಅನ್ನಪೂರ್ಣ ಗೋಸ್ಬಾಳ ಅವರು ತಗರ ಪವಾಡ ಮತ್ತು ಸಿದ್ಧಮಂಕ ಚರಿತೆ : ತೌಲನಿಕ ಅಧ್ಯಯನ ಕುರಿತು ಉಪನ್ಯಾಸ ನೀಡಿದರು. ಬಳ್ಳಾರಿ ಜಿಲ್ಲಾ ಕುರುಬರ ಸಂಘದ ಉಪಾಧ್ಯಕ್ಷರಾದ ಶ್ರೀ ಪ್ರಭಾಕರ ಅವರು ಅಧ್ಯಕ್ಷತೆ ವಹಿಸಿದ್ದ ಈ ಸಮಾರಂಭದಲ್ಲಿ ಟಿ. ರಾಮಲಿಂಗಪ್ಪ, ಶಿವಲಿಂಗಯ್ಯ ಹಾಗೂ ಹೆಚ್. ಸೋಮಲಿಂಗಪ್ಪನವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಹೀಗೆ ಏಳು ದಿನಗಳ ಕಾಲ ಆಯೋಜಿಸಿದ ಹದಿನಾಲ್ಕು ಉಪನ್ಯಾಸಗಳು ಬಳ್ಳಾರಿ ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಯಶಸ್ವಿಯಾಗಿ ಜರುಗಿದವು.